"ಮಹಾರಾಜ! ನಿನ್ನ ಮಗನಲ್ಲಿ ಅನೇಕ ಕಲ್ಯಾಣಗುಣಗಳಿವೆ. ದೇವಸದೃಶನಾದ, ಬುದ್ಧಿವಂತನಾದ, ಗುಣವಂತನಾದ ಶ್ರೀರಾಮನಲ್ಲಿರುವ ಸರ್ವರಿಗೂ ಪ್ರೀತಿಯನ್ನುಂಟುಮಾಡುವ, ಆನಂದವನ್ನುಂಟುಮಾಡುವ ಸದ್ಗುಣಗಳನ್ನು ಸಮಗ್ರವಾಗಿ ಹೇಳುವೆವು ; ಕೇಳು.

ಶ್ರೀರಾಮನು ತನ್ನ ದಿವ್ಯವಾದ ಗುಣಗಳಿಂದ ಇಂದ್ರನಿಗೆ ಸಮಾನನಾಗಿದ್ದಾನೆ. ಸತ್ಯಪರಾಕ್ರಮನಾದ ಶ್ರೀರಾಮನು ಇಕ್ಷ್ವಾಕುವಂಶದ ರಾಜರೆಲ್ಲರನ್ನೂ ತನ್ನ ದಿವ್ಯಗುಣಗಳಿಂದ ಅತಿಶಯಿಸಿದ್ದಾನೆ. ಶ್ರೀರಾಮನು ಸತ್ಪುರುಷನು. ಸತ್ಯನಿಷ್ಠನು. ಸತ್ಯವನ್ನೇ ಆಶ್ರಯಿಸಿರುವವನು ಅಥವಾ ಸತ್ಯಕ್ಕೆ ಆಶ್ರಯಸ್ಥಾನನಾಗಿರತಕ್ಕವನು. ಧರ್ಮವು ಸಂಪತ್ತಿನೊಡನೆ (ಅರ್ಥದೊಡನೆ) ಶ್ರೀರಾಮನಿಂದಲೇ ಸಾಕ್ಷಾತ್ತಾಗಿ ನಿಷ್ಪನ್ನವಾಗಿದೆ. ಶ್ರೀರಾಮನೇ ಧರ್ಮಾರ್ಥಗಳಿಗೆ ಉಗಮಸ್ಥಾನನಾಗಿದ್ದಾನೆ. ಪ್ರಜೆಗಳಿಗೆ ಸುಖವನ್ನುಂಟುಮಾಡುವುದರಲ್ಲಿ ಶ್ರೀರಾಮನು ಆಹ್ಲಾದಕರನಾದ ಚಂದ್ರ ನಿಗೆ ಸಮಾನನು. ಕ್ಷಮಾಗುಣದಲ್ಲಿ ಭೂದೇವಿಗೆ ಸಮಾನನು. ಬುದ್ಧಿಯಲ್ಲಿ ಬೃಹಸ್ಪತಿಗೆ ಸದೃಶನು. ವೀರ್ಯ-ಪರಾಕ್ರಮಗಳಲ್ಲಿ ಸಾಕ್ಷಾತ್ ಇಂದ್ರನಿಗೆ ಸಮಾನನು. ಶ್ರೀರಾಮನು ಸಮಗ್ರವಾದ ಧರ್ಮವನ್ನು ತಿಳಿದವನು.

ಸತ್ಯಸಂಧನು. ಶೀಲವಂತನು. ಇತರರ ಗುಣಗಳಲ್ಲಿ ದೋಷವೆಣಿಸತಕ್ಕವನಲ್ಲ. ಕ್ಷಮಾವಂತನು. ದುಃಖಿಗಳನ್ನು ಯಥೋಚಿತವಾದ ಸವಿಮಾತುಗಳಿಂದ ಸಂತೈಸುವವನು. ಪ್ರಿಯಭಾಷಿಯು. ಇತರರು ತನಗೆ ಮಾಡಿದ ಉಪಕಾರವು ಅಲ್ಪವಾಗಿದ್ದರೂ ಸದಾ ಸ್ಮರಿಸುವವನು. ಜಿತೇಂದ್ರಿಯನು. ಮೃದುಸ್ವಭಾವದವನು. ಸ್ಥಿರಬುದ್ಧಿಯವನು. ಚಂಚಲಚಿತ್ತನಲ್ಲ. ನಿತ್ಯ ಸಂತುಷ್ಟನು. ಅವನನ್ನು ನೋಡಿ ಎಲ್ಲರೂ ಸಂತೋಷಿಸುವರೇ ಹೊರತು ಯಾರೂ ಅಸೂಯೆಪಡುವುದಿಲ್ಲ. ಶ್ರೀರಾಮನು ಪ್ರಿಯವಾದಿಯೂ ಹೌದು; ಸತ್ಯವಾದಿಯೂ ಹೌದು. ಪ್ರಿಯವಾದುದನ್ನು ಹೇಳುವ ಅಭಿಲಾಷೆ ಯಿಂದ ಪ್ರಜೆಗಳೊಡನೆ ಸುಳ್ಳನ್ನಾಡತಕ್ಕವನಲ್ಲ. ಬಹುಶ್ರುತರಾದ (ಹೆಚ್ಚು ಪಾಂಡಿತ್ಯವುಳ್ಳ) ವೃದ್ಧರಾದ ಬ್ರಾಹ್ಮಣರನ್ನು ಸರ್ವದಾ ಸೇವಿಸುವವನು. ಈ ಕಾರಣದಿಂದಲೇ ಅವನಿಗೆ ಅಪಾರವಾದ ಕೀರ್ತಿಯು ಲಭಿಸಿದೆ. ಅವನ ಯಶಸ್ಸು ಮತ್ತು ತೇಜಸ್ಸುಗಳು ದಿನ-ದಿನಕ್ಕೂ ವೃದ್ಧಿಸುತ್ತಿವೆ. ದೇವಾಸುರ-ಮನುಷ್ಯರಲ್ಲಿರುವ ಸಕಲವಿಧವಾದ ಅಸ್ತ್ರಗಳಲ್ಲಿಯೂ ಶ್ರೀರಾಮನು ವಿಶಾರದನು. ಯಥಾಶಾಸ್ತ್ರವಾಗಿ ಸಾಂಗವೇದಾಧ್ಯಯನವನ್ನೂ ಮಾಡಿರುವನು. ಗುರುವಿನ ಬಳಿಯಲ್ಲಿ ವಿದ್ಯಾಭ್ಯಾಸಮಾಡಿ ಆಯಾ ಕಾಲಗಳಲ್ಲಿ ಮಾಡಬೇಕಾದ ವೇದವ್ರತಗಳನ್ನು ಮಾಡಿ ಸ್ನಾನವ್ರತವನ್ನೂ ಮುಗಿಸಿದ್ದಾನೆ.* ಗಂಧರ್ವ ವೇದವೆನಿಸಿದ ಸಂಗೀತಶಾಸ್ತ್ರದಲ್ಲಿಯೂ ಶ್ರೀರಾಮನು ಈ ಜಗತ್ತಿನಲ್ಲಿಯೇ ಮಹಾಪ್ರವೀಣನು. ಮಂಗಳಕಾರ್ಯಗಳಿಗೆ ಶ್ರೀರಾಮನು ಉಗಮಸ್ಥಾನನು. ಪರಿಶುದ್ಧನು. ಸಾಧುವು. ಯಾವುದೇ ಸನ್ನಿವೇಶದಲ್ಲಿಯೂ ಧೈರ್ಯ ಗೆಡದವನು. ಮಹಾಬುದ್ಧಿಶಾಲಿಯು. ಧರ್ಮಾರ್ಥಪ್ರತಿಪಾದನೆಯಲ್ಲಿ ಕುಶಲರಾದ ಬ್ರಾಹ್ಮಣರಿಂದ ಸುಶಿಕ್ಷಿತನಾದವನು.

ಯಾವಾಗಲಾದರೂ ಗ್ರಾಮದ ಸಲುವಾಗಿ ಅಥವಾ ನಗರದ ಸಲುವಾಗಿ ಲಕ್ಷ್ಮಣನೊಡಗೂಡಿ ಯುದ್ಧಕ್ಕೆ ಹೋಗುವ ಶ್ರೀರಾಮನು ಶತ್ರು

---

* ಇಲ್ಲಿ ಸಮ್ಯಗ್ವಿದ್ಯಾವ್ರತಸ್ನಾತಃ : ಯಥಾವತ್ಸಾಙ್ಗವೇದವಿತ್–ಎಂಬ ಶ್ಲೋಕಾರ್ಧವಿದೆ. ಶ್ರೀರಾಮನು ವಿವಾಹಿತನಾಗಿರುವುದರಿಂದ ಸ್ನಾನವ್ರತವನ್ನು ಮಾಡಿರುವನೆಂದು ಪ್ರತ್ಯೇಕ ವಾಗಿ ಹೇಳುವ ಕಾರಣವಿಲ್ಲ. ಈ ಶ್ಲೋಕಾರ್ಧವು ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ–ಇವರು ಛಾಪಿಸಿರುವ ಪುಸ್ತಕದಲ್ಲಿಲ್ಲ.

ಗಳನ್ನು ಜಯಿಸದೇ ಹಿಂದಕ್ಕೆ ಬರುವುದಿಲ್ಲ. ರಾಷ್ಟ್ರರಕ್ಷಣೆಯಲ್ಲಿ ಮತ್ತು ರಾಷ್ಟ್ರದ ಹಿತದಲ್ಲಿ ಶ್ರೀರಾಮನಿಗೆ ಅಷ್ಟೊಂದು ಅಪಾರವಾದ ಆಸಕ್ತಿಯಿದೆ. ಜಯಶಾಲಿಯಾಗಿ ರಣರಂಗದಿಂದ ಅಥವಾ ಆನೆಯ ಮೇಲೆ ಕುಳಿತು ರಾಜಧಾನಿಗೆ ಹಿಂದಿರುಗಿದೊಡನೆಯೇ–ಬಂಧುಗಳನ್ನು ಕುಶಲಪ್ರಶ್ನೆಗಳನ್ನು ಕೇಳುವಂತೆಯೇ–ಪಟ್ಟಣಿಗರ ಕುಶಲವನ್ನೂ ಅನುದಿನವೂ ಕೇಳುತ್ತಲೇ ಇರುತ್ತಾನೆ.

ಶ್ರೀರಾಮನಿಗೆ ಇವರು ಸ್ವಜನರು, ಇವರು ಪಟ್ಟಣಿಗರು, ಇವರು ಸೇವಕರು–ಎಂಬ ಭೇದವೇ ಇಲ್ಲ. ಶ್ರೀರಾಮನು ಪ್ರಜೆಗಳ ಮನೆಗೆ ಹೋಗಿ ಕುಶಲಪ್ರಶ್ನೆ ಮಾಡುವಾಗಲೂ–ಗ್ರಾಮಾಂತರಕ್ಕೆ ಹೋಗಿ ಮನೆಗೆ ಬಂದ ತಂದೆಯು ತನ್ನ ಹಿರಿಯ ಮಗನನ್ನು ಕರೆದು ಕುಶಲವನ್ನು ಕೇಳುವಂತೆಯೇ–ಪ್ರಜೆಗಳ ಕುಶಲವನ್ನೂ ಪುತ್ರಾನುಕ್ರಮವಾಗಿ ಕೇಳಿ ತಿಳಿದುಕೊಳ್ಳುತ್ತಾನೆ. "ನಿನ್ನ ಹಿರಿಯ ಮಗನು ಕುಶಲಿಯಾಗಿರುವನೇ? ಎರಡನೆಯವನು ಏನು ಮಾಡುತ್ತಿದ್ದಾನೆ? ಕಿರಿಯವನ ವಯಸ್ಸೆಷ್ಟು? ಹಿರಿಯ ಮಗಳಿಗೆ ಮದುವೆಯಾಯಿತೇ? ಕಿರಿಯವಳು ಕುಶಲದಿಂದಿರುವಳೇ? ಔಪಾಸನ, ಅಗ್ನಿಹೋತ್ರ, ವೈಶ್ವದೇವಾದಿ ನಿತ್ಯ-ನೈಮಿತ್ತಿಕವಾದ ಕರ್ಮಗಳು ನಿರ್ವಿಘ್ನವಾಗಿ ನಡೆಯುತ್ತಿರುವುವೇ? ನಿನ್ನ ಪತ್ನಿಯು ಸುಖವಾಗಿರುವಳೇ? ಸೊಸೆಯರು ಅತ್ತೆ-ಮಾವಂದಿರ ವಿಷಯದಲ್ಲಿ ವಿಧೇಯರಾಗಿರುವರೇ? ನಿನ್ನ ಭೃತ್ಯರೂ ಮತ್ತು ಅವರ ಪರಿವಾರದವರೂ ನೀರೋಗದೃಢಕಾಯರಾಗಿರುವರೇ? ಸ್ವಾಮಿಭಕ್ತಿಯುಳ್ಳವರಾಗಿರುವರೇ? ಶಿಷ್ಯರು ಗುರುಶುಶ್ರೂಷೆಯಲ್ಲಿ ನಿರತರಾಗಿರುವರೇ?"–ಹೀಗೆ ಒಂದು ಮನೆಯಲ್ಲಿ ಯಾರೊಬ್ಬರನ್ನೂ ಬಿಡದೇ ಸಕಲರ ಯೋಗ-ಕ್ಷೇಮಗಳನ್ನೂ ಶ್ರೀರಾಮನು ಪ್ರತ್ಯೇಕ-ಪ್ರತ್ಯೇಕವಾಗಿ ಕೇಳಿ ತಿಳಿದುಕೊಳ್ಳುತ್ತಾನೆ. 'ಧರ್ಮಪರಾಯಣರಾದ ಶಿಷ್ಯರು ಸದಾ ಸನ್ನದ್ಧರಾಗಿ ನಿಮ್ಮ ಶುಶ್ರೂಷೆಮಾಡುವರೇ?'–ಹೀಗೆ ಪುರುಷವ್ಯಾಘ್ರನಾದ ಶ್ರೀರಾಮನು ಆತ್ಮೀಯವಾದ ಮಾತುಗಳನ್ನಾಡುತ್ತಾನೆ.

ಮನುಷ್ಯರ (ಪ್ರಜೆಗಳ) ದುಃಖದಲ್ಲಿ ತಾನೂ ಭಾಗಿಯಾಗುತ್ತಾನೆ. ಪ್ರಜೆಗಳ ಮನೆಗಳಲ್ಲಿ ನಡೆಯುವ ಉತ್ಸವಗಳಲ್ಲಿ ತಾನೂ ಭಾಗವಹಿಸುತ್ತಾ–ತಂದೆಯಾದವನು ಮಗನ ಮನೆಯಲ್ಲಿ ನಡೆಯುವ ಉತ್ಸವಸಮಾರಂಭ

ವನ್ನು ನೋಡಿ ಸಂತೋಷಪಡುವಂತೆ–ತಾನೂ ಸಂತೋಷಪಡುತ್ತಾನೆ. 'ಪ್ರಜೆಗಳ ದುಃಖವೇ ತನ್ನ ದುಃಖ. ಪ್ರಜೆಗಳ ಸಂತೋಷವೇ ತನ್ನ ಸಂತೋಷ'–ಎಂಬುದನ್ನು ಶ್ರೀರಾಮನು ಚೆನ್ನಾಗಿ ಮೈಗೂಡಿಸಿಕೊಂಡಿದ್ದಾನೆ. ಅವನು ಸತ್ಯವಾದಿಯು. ಮಹಾಧನುಷ್ಮಂತನು. ವೃದ್ಧರನ್ನು ಸೇವಿಸುವವನು. ಜಿತೇಂದ್ರಿಯನು. ತುಂಬುಮನಸ್ಸಿನಿಂದ ಮುಗುಳ್ನಗೆಯನ್ನು ಬೀರುತ್ತಾ ಮಾತನಾಡುವವನು. ಧರ್ಮವನ್ನೇ ಆಶ್ರಯಿಸಿರತಕ್ಕವನು.

ಶ್ರೀರಾಮನು ತನ್ನ ಪ್ರಜೆಗಳನ್ನು ಶ್ರೇಯಸ್ಸಿನೊಡನೆ ಚೆನ್ನಾಗಿ ಸೇರಿಸ ತಕ್ಕವನು. ಪ್ರಜೆಗಳಿಗೆ ಒಳ್ಳೆಯ ಶ್ರೇಯಸ್ಸನ್ನುಂಟುಮಾಡುವವನು. **ನ ವಿಗೃಹ್ಯ ಕಥಾಂ ಕುರ್ಯಾತ್** ಎಂಬ ನಿಷೇಧಾನುಸಾರವಾಗಿ ಜಲ್ಪ-ವಿತಂಡ ವಾದಗಳಲ್ಲಿ ಅಭಿರುಚಿಯಿಲ್ಲದವನು. ಯುಕ್ತಿಯುಕ್ತವಾಗಿ ಪ್ರಶ್ನೆಗೊಂದು ಸಮೀಚೀನವಾದ ಉತ್ತರವನ್ನು ಹೊಂದಿಸಿ ಹೇಳುವುದರಲ್ಲಿ ಬೃಹಸ್ಪತಿಗೆ ಸಮಾನವಾದ ವಾಕ್ಪಟುತ್ವವುಳ್ಳವನು. ಸುಂದರವಾದ ಹುಬ್ಬು ಗಳುಳ್ಳವನು. ಕಮಲದಂತೆ ವಿಶಾಲವಾದ ಮತ್ತು ಕೆಂಪಾದ ಕಣ್ಣುಗಳುಳ್ಳವನು. ಹೆಚ್ಚೇನು ಹೇಳುವುದು, ಮಹಾರಾಜ! ನಿನ್ನ ಮಗನು ಸಾಕ್ಷಾತ್ ವಿಷ್ಣುವಿನಂತೆಯೇ ಇದ್ದಾನೆ. ತನ್ನ ಶೌರ್ಯ-ವೀರ್ಯ-ಪರಾಕ್ರಮಗಳಿಂದ* ಶ್ರೀರಾಮನು ಲೋಕಾಭಿರಾಮನಾಗಿದ್ದಾನೆ. (ಲೋಕಮನೋಹರನಾಗಿ ದ್ದಾನೆ.) ಪ್ರಜೆಗಳನ್ನು ಹೇಗೆ ಪಾಲನೆಮಾಡಬೇಕೆಂಬ ರಹಸ್ಯವನ್ನು ತಿಳಿದಿರ

---

* ಶೌರ್ಯ-ವೀರ್ಯ-ಪರಾಕ್ರಮ ಎಂಬುವು ಪರ್ಯಾಯಪದಗಳಾದರೂ ವ್ಯಾಖ್ಯಾನಕಾರರು ಒಂದೊಂದು ಪದಕ್ಕೂ ವಿಶೇಷವಾದ ಅರ್ಥವನ್ನು ಕಲ್ಪಿಸಿರುತ್ತಾರೆ. ಶೌರ್ಯಂ=ಮರಣನಿರ್ಭಯತ್ವಂ ಶೂರೋ ಮರಣ ನಿರ್ಭಯಾತ್. ಶೂರಸ್ಯ ಭಾವಃ ಶೌರ್ಯಂ–ಮರಣವುಂಟಾಗುವುದೆಂಬ ಅಂಜಿಕೆಯಿಲ್ಲದವನು. ವೀರ್ಯಂ-ಸ್ವಯಂ ಅವಿಕೃತಃ ಸನ್ ಪರಾನ್ ವಿವಿಧಮೀರಯತಿ ವಿದ್ರಾವಯತಿ ಇತಿ ವೀರಃ; ತಸ್ಯ ಭಾವಃ ವೀರ್ಯಂ-ಶತ್ರುವನ್ನು ಎದುರಿಸುವಾಗ ತಾನು ಸ್ವಲ್ಪವಾದರೂ ಭೀತನಾಗದೇ ಶತ್ರುವನ್ನು ಓಡಿಸುವ ಸಾಮರ್ಥ್ಯವಿರುವವನು ವೀರನೆನಿಸಿಕೊಳ್ಳುತ್ತಾನೆ. ಪರಾಕ್ರಮಃ ದೇವಾಸುರಾನಪಿ ಯೇನ ಉತ್ಸಾಹೇನ ಆಕ್ರಮತಿ ಸಃ ಪರಾಕ್ರಮಃ–ದೇವಾಸುರರನ್ನೂ ಯಾವ ಉತ್ಸಾಹದಿಂದ ಆಕ್ರಮಿಸುವನೋ ಅದಕ್ಕೆ ಪರಾಕ್ರಮವೆಂದು ಹೆಸರು.

ತಕ್ಕವನು. ರಾಗ-ದ್ವೇಷಾದಿಗಳಿಂದ ಕಲುಷಿತವಾಗದ ಇಂದ್ರಿಯಗಳುಳ್ಳವನು. ಅವನೊಬ್ಬನೇ ಏಕಾಕಿಯಾಗಿ ಮೂರು ಲೋಕಗಳನ್ನೂ ಪರಿಪಾಲಿಸಲು ಸಮರ್ಥನು. ಹೀಗಿರುವಾಗ ಕೇವಲ ಭೂಲೋಕವೊಂದರ ಪರಿಪಾಲನೆಯ ವಿಷಯದಲ್ಲಿ ಹೇಳುವುದೇನಿದೆ? ಶ್ರೀರಾಮನ ಕೋಪವಾಗಲೀ ಪ್ರಸನ್ನತೆ ಯಾಗಲೀ ಎಂದೂ ನಿರರ್ಥಕವಾಗುವುದಿಲ್ಲ. ಅಪರಾಧಿಯ ವಿಷಯದಲ್ಲಿ ಕೋಪಗೊಳ್ಳುತ್ತಾನೆ ; ಹಾಗೆಯೇ ಅವನನ್ನು ಶಿಕ್ಷಿಸುತ್ತಾನೆ. ಸತ್ಪುರುಷರ ವಿಷಯದಲ್ಲಿ ಪ್ರಸನ್ನನಾಗುತ್ತಾನೆ. ಹಾಗೆಯೇ ಅವರ ಸೇವೆಯನ್ನೂ ಮಾಡುತ್ತಾನೆ ಅಥವಾ ಅವರಿಗೆ ಬೇಕಾದುದನ್ನು ಮಾಡುತ್ತಾನೆ. ಅಪರಾಧಿ ಯಾಗಿದ್ದರೂ ಶರಣಾಗತನಾದರೆ ಅನುಗ್ರಹಬುದ್ಧಿಯಿಂದ ಶಿಕ್ಷಿಸದೇ ಬಿಟ್ಟು ಬಿಡುತ್ತಾನೆ. ಮಹಾಪರಾಧವನ್ನು ಮಾಡಿ ವಧೆಗೆ ಯೋಗ್ಯರಾದವರನ್ನೂ ಸ್ವೇಚ್ಛೆಯಿಂದ ಸಂಹರಿಸುವುದಿಲ್ಲ. ನಿಯಮಬದ್ಧವಾಗಿ ಅವರನ್ನು ವಿಚಾರಣೆಗೆ ಗುರಿಪಡಿಸಿ ಅಪರಾಧವು ಸ್ಥಿರಪಟ್ಟನಂತರವೇ ಮರಣದಂಡನೆಗೆ ಆಜ್ಞೆಮಾಡು ತ್ತಾನೆ. ಒಂದು ವೇಳೆ ನ್ಯಾಯಾಲಯದಲ್ಲಿ ಅವರ ಅಪರಾಧವು ಸ್ಥಿರಪಡದಿದ್ದರೆ ಅಪರಾಧಿಯ ವಿಷಯದಲ್ಲಿ ಕೋಪಗೊಳ್ಳುವುದಿಲ್ಲ. ಸೌಜನ್ಯವನ್ನೇ ತೋರುತ್ತಾನೆ. ಮನುಷ್ಯನು ಮಾಡಿದ ಒಳ್ಳೆಯ ಕಾರ್ಯದಿಂದ ಅಥವಾ ಅವನ ಗುಣಗಳಿಂದ ತೃಪ್ತನಾಗುವ ಮತ್ತು ಸಂತೋಷಪಡುವ ಶ್ರೀರಾಮನು ಅಂತಹ ಸದ್ಗುಣಿಗೆ ಅಥವಾ ಸತ್ಕರ್ಮಿಗೆ ಧನ-ಕನಕಾದಿ ಐಶ್ವರ್ಯಗಳನ್ನಿತ್ತು ಗೌರವಿಸುತ್ತಾನೆ. ಇಂದ್ರಿಯನಿಗ್ರಹಗಳಿಂದಲೂ, ಸಕಲಪ್ರಜೆಗಳಿಗೂ ಆಹ್ಲಾದ ವನ್ನುಂಟುಮಾಡುವ ಮತ್ತು ಮನುಷ್ಯರಿಗೆ ಪ್ರೀತಿಯನ್ನು ಹುಟ್ಟಿಸುವ ಗುಣಗಳಿಂದಲೂ ಶ್ರೀರಾಮನು–ಕಿರಣಗಳಿಂದ ಯುಕ್ತನಾದ ಸೂರ್ಯ ನಂತೆಯೇ ಬೆಳಗುತ್ತಿದ್ದಾನೆ.

ಮಹಾರಾಜ! ಇಂತಹ ಸಕಲಸದ್ಗುಣಪರಿಪೂರ್ಣನಾದ, ಸತ್ಯಪರಾ ಕ್ರಮನಾದ, ಲೋಕಪಾಲಸದೃಶನಾದ ಶ್ರೀರಾಮನನ್ನು ಭೂದೇವಿಯೇ ನಾಥನನ್ನಾಗಿ ಮಾಡಿಕೊಳ್ಳಲು ಅಪೇಕ್ಷಿಸುತ್ತಿದ್ದಾಳೆ. (ಹೀಗಿರುವಾಗ ಭೂಮಿ ಯಲ್ಲಿ ವಾಸಿಸುತ್ತಿರುವ ಪ್ರಜೆಗಳ ಅಭಿಪ್ರಾಯವನ್ನು ಕೇಳುವುದೇನಿದೆ?) ಮರೀಚಿಬ್ರಹ್ಮನಿಗೆ ಪುತ್ರಗುಣಗಳಿಂದ ಯುಕ್ತನಾದ ಕಶ್ಯಪನು ಹುಟ್ಟಿದಂತೆ– ನಿನ್ನ ಭಾಗ್ಯವಿಶೇಷದಿಂದ ನಿನ್ನ ಶ್ರೇಯಸ್ಸಿಗಾಗಿಯೇ ಶ್ರೀರಾಮನು ನಿನ್ನ

ಮಗನಾಗಿ ಹುಟ್ಟಿದ್ದಾನೆ. ದೇವಾಸುರ-ಮನುಷ್ಯರ ಸಮೂಹಗಳಿರುವೆಡೆಯಲ್ಲಿ, ಗಂಧರ್ವ-ಸರ್ಪಸಮೂಹಗಳಿರುವೆಡೆಯಲ್ಲಿ, ಸಕಲರಾಷ್ಟ್ರಗಳಲ್ಲಿ, ಪಟ್ಟಣಗಳಲ್ಲಿ, ಊರುಗಳಲ್ಲಿ, ಹಳ್ಳಿಗಳಲ್ಲಿ, ಅಂತಃಪುರದಲ್ಲಿ, ಅಂತಃಪುರದ ಹೊರಗಡೆಯಲ್ಲಿ, ಇಬ್ಬರು ಸೇರಿದೆಡೆಯಲ್ಲಿ ಸರ್ವತ್ರ ಶ್ರೀರಾಮನ ಮಾತೇ ಆಗಿದೆ. ಆತ್ಮಜ್ಞಾನಿಯಾದ ಶ್ರೀರಾಮನಿಗೆ ಎಲ್ಲರೂ ಬಲವನ್ನೂ, ಆರೋಗ್ಯವನ್ನೂ, ದೀರ್ಘಾಯುಷ್ಯವನ್ನೂ ಅಭಿಲಾಷಿಸುತ್ತಾರೆ. ಸ್ತ್ರೀಯರು, ವೃದ್ಧರು ಮತ್ತು ತರುಣಿಯರು ಯಶೋವಂತನಾದ ಶ್ರೀರಾಮನ ಶುಭಾಕಾಂಕ್ಷಿಗಳಾಗಿ ಅನುದಿನವೂ ಸಾಯಂಕಾಲ-ಪ್ರಾತಃಕಾಲಗಳಲ್ಲಿ ಏಕಾಗ್ರಚಿತ್ತರಾಗಿ ಸಮಸ್ತ ದೇವತೆಗಳಿಗೂ ನಮಸ್ಕಾರಮಾಡುತ್ತಾರೆ. ಮಹಾರಾಜ! ಪ್ರಜೆಗಳು ಅನುದಿನವೂ ದೇವರ ಸನ್ನಿಧಿಯಲ್ಲಿ ಮಾಡಿಕೊಳ್ಳುತ್ತಿರುವ ಪ್ರಾರ್ಥನೆಯು ನಿನ್ನ ಪ್ರಸನ್ನತೆಯಿಂದ ಫಲಿಸುವಂತಾಗಲಿ.

ರಾಮಮಿನ್ದೀವರಶ್ಯಾಮಂ ಸರ್ವಶತ್ರುನಿಬರ್ಹಣಮ್ ।
ಪಶ್ಯಾಮೋ ಯೌವರಾಜ್ಯಸ್ಥಂ ತವ ರಾಜೋತ್ತಮಾತ್ಮಜಮ್ ॥೫೪॥

ರಾಜಶ್ರೇಷ್ಠನೇ! ಕನ್ನೈದಿಲೆಹೂಗಳ ಸಮೂಹದ ಕಾಂತಿಗೆ ಸಮಾನವಾದ ಶ್ಯಾಮಲವರ್ಣದ ಕಾಂತಿಯಿಂದ ಕೂಡಿರುವ, ಸಕಲಶತ್ರುಸಂಹಾರಕನಾದ ಶ್ರೀರಾಮನು ಯೌವರಾಜ್ಯಪದವಿಯಲ್ಲಿ ಅಭಿಷಿಕ್ತನಾಗುವುದನ್ನು ನಾವೆಲ್ಲರೂ ನೋಡಬಯಸಿದ್ದೇವೆ. ಅಂತಹ ಭಾಗ್ಯವು ನಮಗೆ ಪ್ರಾಪ್ತ ವಾಗಲಿ.

ವರದನೇ! ದಶರಥಮಹಾರಾಜ! ದೇವದೇವನಾದ ವಿಷ್ಣುವಿಗೆ ಅನುರೂಪನಾದ, ಸಕಲಲೋಕಗಳ (ಪ್ರಜೆಗಳ) ಹಿತದಲ್ಲಿಯೇ ಸರ್ವದಾ ನಿರತನಾದ, ಉದಾರಿಯಾದ ಅಥವಾ ಉದಾರಿಗಳಿಂದ ಸಂಸೇವ್ಯಮಾನನಾದ ನಿನ್ನ ಮಗನಾದ ಶ್ರೀರಾಮನಿಗೆ ನಮ್ಮೆಲ್ಲರ ಹಿತಕ್ಕಾಗಿ ಸಂತೋಷದಿಂದ ಯುವರಾಜಪಟ್ಟಗಟ್ಟುವುದು ನಿನಗೆ ಯೋಗ್ಯವಾಗಿದೆ."

ಎರಡನೆಯ ಸರ್ಗವು ಮುಗಿಯಿತು.

ದಶರಥರಾಜನು ಶ್ರೀರಾಮನ ಪಟ್ಟಾಭಿಷೇಕಕ್ಕೆ ಸಿದ್ಧತೆಯನ್ನು ಮಾಡುವಂತೆ ವಸಿಷ್ಠ-ವಾಮದೇವರನ್ನು ಪ್ರಾರ್ಥಿಸಿದುದು : ರಾಜನು ಸುಮಂತ್ರನ ಮೂಲಕವಾಗಿ ಶ್ರೀರಾಮನನ್ನು ಕರೆಸಿಕೊಂಡು ರಾಜನೀತಿಯ ವಿಷಯಗಳನ್ನು ಹೇಳಿದುದು

ತೇಷಾಮಞ್ಜಲಿಪದ್ಮಾನಿ ಪ್ರಗೃಹೀತಾನಿ ಸರ್ವಶಃ ।
ಪ್ರತಿಗೃಹ್ಯಾಬ್ರವೀದ್ರಾಜಾ ತೇಭ್ಯಃ ಪ್ರಿಯಹಿತಂ ವಚಃ ॥೧॥

ಸಭಾಭವನದಲ್ಲಿ ನೆರೆದಿದ್ದ ರಾಜಪ್ರಮುಖರಾದ ಪ್ರಜೆಗಳು ದಶರಥನ ಪ್ರಶ್ನೆಗೆ ಹೀಗೆ ಉತ್ತರವಿತ್ತು ಕಮಲದ ಮೊಗ್ಗಿನ ರೂಪದಲ್ಲಿ ಕೈಗಳೆರಡನ್ನೂ ಜೋಡಿಸಿದರು. ಈ ವಿಧವಾದ ಅಂಜಲಿಪದ್ಮಗಳನ್ನು ದಶರಥರಾಜನು ವೀಕ್ಷಣ, ವಚನ-ಪ್ರತ್ಯಂಜಲಿಗಳಿಂದ ಪ್ರತಿಗ್ರಹಿಸಿ ಸಭ್ಯರನ್ನು ಕುರಿತು ಪ್ರಿಯವೂ, ಹಿತಕರವೂ ಆಗಿದ್ದ ಈ ಮಾತುಗಳನ್ನು ಹೇಳಿದನು :

"ಅದ್ಭುತ! ಪರಮಾಶ್ಚರ್ಯ! ಜ್ಯೇಷ್ಠನೂ ಅತ್ಯಂತಪ್ರಿಯನೂ ಆಗಿರುವ ನನ್ನ ಮಗ ಶ್ರೀರಾಮನು ಯುವರಾಜನಾಗಲು ನೀವೆಲ್ಲರೂ ಏಕ ಮುಖವಾಗಿ ಅಪೇಕ್ಷಿಸಿರುವಿರಿ. ಇದರಿಂದ ನಾನು ಪರಮಪ್ರೀತನಾಗಿದ್ದೇನೆ. ನನ್ನ ಸಂತೋಷಕ್ಕೆ ಪಾರವೇ ಇಲ್ಲದಾಗಿದೆ. ಇದರಿಂದಾಗಿ ನನ್ನ ಪ್ರಭು ಶಕ್ತಿಯೂ ಎಣೆಯಿಲ್ಲದಷ್ಟು ಹೆಚ್ಚಿದೆ."

ದಶರಥನು ಹೀಗೆ ಹೇಳಿ ಪ್ರಜೆಗಳೆಲ್ಲರನ್ನೂ ಯಥೋಚಿತವಾದ ಸವಿ ಮಾತುಗಳಿಂದ ಸಮ್ಮಾನಿಸಿ ಅವರೆಲ್ಲರ ಸಮ್ಮುಖದಲ್ಲಿಯೇ ವಸಿಷ್ಠರನ್ನೂ, ವಾಮದೇವರನ್ನೂ, ಅಲ್ಲಿ ನೆರೆದಿದ್ದ ಇತರ ಬ್ರಾಹ್ಮಣರನ್ನೂ ಉದ್ದೇಶಿಸಿ ಹೇಳಿದನು :

ಚೈತ್ರಃ ಶ್ರೀಮಾನಯಂ ಮಾಸಃ ಪುಣ್ಯಃ ಪುಷ್ಪಿತಕಾನನಃ ।
ಯೌವರಾಜ್ಯಾಯ ರಾಮಸ್ಯ ಸರ್ವಮೇವೋಪಕಲ್ಪ್ಯತಾಮ್ ॥೪॥

"ವಸಿಷ್ಠಪ್ರಮುಖರಾದ ಬ್ರಾಹ್ಮಣೋತ್ತಮರೇ! ಈಗ ನಡೆಯು

ತ್ತಿರುವ ಚೈತ್ರವು ಅತ್ಯಂತಪುಣ್ಯಕರವಾದ ಮತ್ತು ವನಸಿರಿಯೆಂಬ ಸಂಪತ್ತಿನಿಂದ ಕೂಡಿರುವ ಮಾಸವಾಗಿದೆ. ಈ ಸಮಯದಲ್ಲಿ ಅರಣ್ಯದಲ್ಲಿರುವ ಮರ-ಗಿಡ-ಬಳ್ಳಿಗಳೆಲ್ಲವೂ ಪುಷ್ಪಭರಿತವಾಗಿವೆ. ಈ ಮಾಸವು ಶ್ರೀರಾಮನ ಜನ್ಮಮಾಸವೂ ಆಗಿರುವುದರಿಂದ ಪುಣ್ಯತಮವಾದ ಮಾಸವಾಗಿರುತ್ತದೆ. ಶ್ರೀರಾಮನ ಯೌವರಾಜ್ಯಾಭಿಷೇಕಕ್ಕೆ ಇದೇ ಪ್ರಶಸ್ತವಾದ ಮಾಸವೆಂಬುದು ನನ್ನ ಅಭಿಪ್ರಾಯವಾಗಿದೆ. ಆದುದರಿಂದ ಈ ಸಮಾರಂಭಕ್ಕೆ ಬೇಕಾಗುವ ಸಕಲಸಾಮಗ್ರಿಗಳನ್ನೂ ಈಗಲೇ ಸಿದ್ಧಪಡಿಸಿರಿ."

ದಶರಥನು ಹೀಗೆ ಹೇಳಿ ಮುಗಿಸಿದೊಡನೆಯೇ 'ಶ್ರೀರಾಮೋ ಜಯತು! ರಾಜಾ ರಾಮೋ ಜಯತು'–ಎಂಬ ಜನರ ಮಹತ್ತರವಾದ ಜಯಘೋಷವುಂಟಾಯಿತು. ಜಯಘೋಷದ ನಿನಾದವು ಶಾಂತವಾದ ನಂತರ ಮುನಿಶ್ರೇಷ್ಠರಾದ ವಸಿಷ್ಠರೊಡನೆ ದಶರಥನು ಹೇಳಿದನು :

"ಪೂಜ್ಯರೇ! ಶ್ರೀರಾಮನ ಪಟ್ಟಾಭಿಷೇಕದ ಪೂರ್ವಾಂಗಕರ್ಮಗಳಾವುವು? ಮತ್ತು ಅವುಗಳಿಗೆ ಬೇಕಾಗುವ ಉಪಕರಣಗಳಾವುವು? ಇವೆಲ್ಲವನ್ನೂ ತಾವು ಒಡನೆಯೇ ಆಜ್ಞಾಪಿಸಿರಿ."

ದಶರಥನ ಆ ಮಾತನ್ನು ಕೇಳಿ ಮುನಿಶ್ರೇಷ್ಠರಾದ ವಸಿಷ್ಠರು ಆಜ್ಞಾನಿರ್ವಹಣೆಗಾಗಿ ರಾಜನ ಮುಂದೆ ಬದ್ಧಾಂಜಲಿಯಾಗಿ ನಿಂತಿದ್ದ ಅಮಾತ್ಯರನ್ನು ಕುರಿತು ಹೇಳಿದರು :

"ಮಂತ್ರಿಸತ್ತಮರೇ! ಸುವರ್ಣವೇ ಮೊದಲಾದ ದಾನಯೋಗ್ಯವಾದ ಲೋಹಗಳು, ನವರತ್ನಗಳು, ಪೂಜಾದ್ರವ್ಯಗಳು, ಉಪಹಾರಗಳು, ಅಭಿಷೇಕೋಚಿತವಾದ ಓಷಧಿಲತೆಗಳು, ಸುಗಂಧಮಯವಾದ ಬಿಳಿಯ ಹೂಗಳಿಂದ ಕಟ್ಟಿದ ಮಾಲಿಕೆಗಳು, ಬತ್ತದ ಅರಳು, ಜೇನುತುಪ್ಪ, ನೆನೆಸಿ ಒಣಗಿಸಿರುವ–ಅಂಚುಗಳಿರುವ ನೂತನವಸ್ತ್ರಗಳು,* ರಥ, ಎಲ್ಲ ಆಯುಧ

---

* ಇಲ್ಲಿ ಅಹತಾನಿ ಚ ವಾಸಾಂಸಿ–ಎಂಬ ಶ್ಲೋಕಪಾದವಿದೆ. ಅಹತವಸ್ತ್ರಲಕ್ಷಣವನ್ನು ಹೀಗೆ ಹೇಳಿದ್ದಾರೆ : **ಈಷದ್ಧೌತಂ ನವಂ ಶ್ವೇತಂ ಸದಶಂ ಯನ್ನಧಾರಿತಮ್ । ಅಹತಂ ತದ್ವಿಜಾನೀಯಾದ್ದೈವೇ ಪಿತ್ರ್ಯೇ ಚ ಕರ್ಮಣಿ ॥** ಸ್ವಲ್ಪ ಒಗೆದಿರುವ, ಹೊಸದಾದ, ಅಂಚುಗಳುಳ್ಳ, ಬೇರೆಯವರಿಂದ ಧರಿಸಲ್ಪಡದ ಬಿಳಿಯ ವಸ್ತ್ರವು ಅಹತವಸ್ತ್ರವೆನಿಸಿಕೊಳ್ಳುತ್ತದೆ. ಇದು ದೇವ-ಪಿತೃಕರ್ಮಗಳಲ್ಲಿ ಪ್ರಶಸ್ತವಾದುದು.

ಗಳು, ಚತುರಂಗಬಲ, ಶುಭಲಕ್ಷಣವಿರುವ ಆನೆ, ಬಿಳಿಯ ಚಾಮರ, ಬೀಸಣಿಗೆ, ಧ್ವಜ, ಶ್ವೇತಛತ್ರ, ಅಗ್ನಿಯಂತೆ ಪ್ರಕಾಶಮಾನವಾದ ನೂರು ಚಿನ್ನದ ಕೊಡಗಳು, ಚಿನ್ನದ ಆಭರಣಗಳಿಂದ ಅಲಂಕೃತವಾದ ಕೋಡು ಗಳುಳ್ಳ ಎತ್ತು, ಉಗುರುಗಳಿಂದ ಯುಕ್ತವಾದ ಹುಲಿಯ ಚರ್ಮ–ಇವೆಲ್ಲ ವನ್ನೂ ಪ್ರಾತಃಕಾಲ ರಾಜನ ಅಗ್ನಿಶಾಲೆಯಲ್ಲಿರಿಸಿರಿ. ಇವುಗಳಲ್ಲದೇ ಇನ್ನೂ ಯಾವುದಾದರೂ ಅಪೇಕ್ಷಣೀಯವಾದ ವಸ್ತುಗಳಿದ್ದರೆ ಅವನ್ನೂ ಅಲ್ಲಿಯೇ ಇರಿಸಿರಿ.

ಅಂತಃಪುರದ ಬಾಗಿಲುಗಳನ್ನೂ, ನಗರದ ಮಹಾದ್ವಾರ ಮತ್ತು ಎಲ್ಲ ಉಪದ್ವಾರಗಳನ್ನೂ ಚಂದನದಿಂದಲೂ ಹೂಮಾಲೆಗಳಿಂದಲೂ ಅಲಂಕರಿಸಿ, ಸುಗಂಧದ ಮೂಲಕ ಸಕಲರನ್ನೂ ಆಕರ್ಷಿಸಲು ಸಮರ್ಥವಾದ ಧೂಪ ಗಳನ್ನು ಹಚ್ಚಿ ದ್ವಾರಗಳ ಸಮೀಪದಲ್ಲಿಡಿರಿ. ಹಾಲು-ಮೊಸರಿನಿಂದ ಕೂಡಿದ ಗುಣವಿಶಿಷ್ಟವಾದ ಅನ್ನವನ್ನು ಅಸಂಖ್ಯಾತಬ್ರಾಹ್ಮಣರಿಗೆ ಸಾಕು-ಸಾಕೆ ನ್ನುವವರೆಗೂ ಬಡಿಸಲು ಸಾಧ್ಯವಾಗುವಂತೆ ಸಿದ್ಧಪಡಿಸಿರಿ. ನಾಳೆಯ ದಿನ ಪ್ರಾತಃಕಾಲ ದ್ವಿಜಮುಖ್ಯರನ್ನು ಯಥೋಚಿತವಾಗಿ ಸತ್ಕರಿಸಿ ಅವರಿಗೆ ಯಥೇಚ್ಛವಾಗಿ ತುಪ್ಪ-ಮೊಸರು-ಅರಳು ಇವುಗಳನ್ನು ದಕ್ಷಿಣಾಸಹಿತವಾಗಿ ದಾನಮಾಡಿರಿ. ನಾಳೆಯ ಬೆಳಿಗ್ಗೆ ಸೂರ್ಯೋದಯವಾದೊಡನೆಯೇ ಪಟ್ಟಾಭಿಷೇಕಾಂಗವಾದ ಸ್ವಸ್ತಿವಾಚನವು ನಡೆಯಬೇಕಾಗಿದೆ. ಸ್ವಸ್ತಿವಾಚನಕ್ಕಾಗಿ ಬ್ರಾಹ್ಮಣರನ್ನು ಆಹ್ವಾನಿಸಿರಿ ಮತ್ತು ಅವರು ಕುಳಿತುಕೊಳ್ಳಲು ಆಸನಗಳನ್ನು ಸಿದ್ಧಪಡಿಸಿರಿ. ರಾಷ್ಟ್ರಧ್ವಜಗಳು ಎಲ್ಲೆಲ್ಲಿಯೂ ಹಾರಾಡುವಂತೆ ಧ್ವಜಸ್ತಂಭಗಳನ್ನು ಎಲ್ಲೆಡೆಗಳಲ್ಲೂ ಸ್ಥಾಪಿಸಿ ಅವುಗಳಲ್ಲಿ ಪತಾಕೆಗಳನ್ನು ಹಾರಿಸಿರಿ. ರಾಜಮಾರ್ಗದುದ್ದಕ್ಕೂ ನೀರನ್ನು ಚುಮುಕಿಸಿರಿ.

ತಾಲಜೀವಿಗಳಾದ ನರ್ತಕರು, ಗಾಯಕರು ಮತ್ತು ವೇಶ್ಯೆಯರು ಅಲಂಕೃತರಾಗಿ ರಾಜಗೃಹದ ಎರಡನೆಯ ಪ್ರಾಂಗಣದಲ್ಲಿ ಉಪಸ್ಥಿತರಾಗಲಿ. ದೇವಮಂದಿರಗಳಲ್ಲಿಯೂ, ಭಜನಮಂದಿರಗಳಲ್ಲಿಯೂ, ಯಜ್ಞಶಾಲೆಗಳ ಲ್ಲಿಯೂ ದೇವತಾವಿಗ್ರಹಗಳ ಮುಂದೆ ನೈವೇದ್ಯಕ್ಕೆ ಭಕ್ಷ್ಯಸಹಿತವಾದ ಅನ್ನ ವನ್ನೂ, ದಕ್ಷಿಣಾಸಹಿತವಾದ ತಾಂಬೂಲಗಳನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಇರಿಸಿರಿ. ಉದ್ದವಾದ ಕತ್ತಿಗಳಿಂದಲೂ, ಗುರಾಣಿಗಳಿಂದಲೂ ಸನ್ನದ್ಧರಾದ,

ಶುಭ್ರವಾದ ವಸ್ತ್ರಗಳನ್ನು ಧರಿಸಿರುವ, ಶೂರರಾದ ಸೈನಿಕರು ಸಂತುಷ್ಟ ಚಿತ್ತರಾಗಿ ರಾಮಾಭಿಷೇಕವು ನಡೆಯಲಿರುವ ದಶರಥರಾಜನ ಭವ್ಯವಾದ ಅರಮನೆಯನ್ನು ಪ್ರವೇಶಿಸಲಿ."

ಹೀಗೆ ನಿಷ್ಠಾವಂತರಾದ ವಶಿಷ್ಠ-ವಾಮದೇವರು ಶ್ರೀರಾಮನ ಪಟ್ಟಾಭಿಷೇಕಾಂಗವಾಗಿ ಮಾಡಬೇಕಾದ ಕಾರ್ಯಗಳನ್ನೂ, ತರಬೇಕಾದ ಸಾಮಗ್ರಿಗಳನ್ನೂ ಮಂತ್ರಿಗಳಿಗೆ ತಿಳಿಯಪಡಿಸಿ, ಅರಮನೆಯಲ್ಲಿ ಮಾಡ ಬೇಕಾಗಿದ್ದ ಉಳಿದ ಕರ್ಮಗಳನ್ನೂ ರಾಜನಿಗೆ ಯಥೋಚಿತವಾಗಿ ತಿಳಿಯಪಡಿಸಿ ನೆರವೇರಿಸಿದರು. ಹೀಗೆ ಪಟ್ಟಾಭಿಷೇಕದ ವ್ಯವಸ್ಥೆಯಾದ ನಂತರ ಸಂತೋಷಗೊಂಡ ವಸಿಷ್ಠ-ವಾಮದೇವರು ದಶರಥನ ಬಳಿಗೆ ಹೋಗಿ ಶ್ರೀರಾಮನ ಪಟ್ಟಾಭಿಷೇಕಕ್ಕೆ ಬೇಕಾದ ಸಕಲಸಂಭಾರಗಳೂ ಸಿದ್ಧವಾಗಿವೆಯೆಂದು ತಿಳಿಸಿದರು.

ಬಳಿಕ ಕಾಂತಿಮಂತನಾದ ದಶರಥನು ಧರ್ಮಾತ್ಮನಾದ ಶ್ರೀರಾಮನನ್ನು ಶೀಘ್ರವಾಗಿ ಕರೆತರುವಂತೆ ಸುಮಂತ್ರನಿಗೆ ಹೇಳಿದನು. ಸುಮಂತ್ರನು ಹಾಗೆಯೇ ಆಗಲೆಂದು ಹೇಳಿ ರಾಜಾಜ್ಞೆಯಂತೆ ರಥಿಗಳಲ್ಲಿ ಶ್ರೇಷ್ಠನಾದ ಶ್ರೀರಾಮನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ದಶರಥನ ಬಳಿಗೆ ಕರೆತಂದನು.

ಸುಮಂತ್ರನು ಶ್ರೀರಾಮನನ್ನು ಕರೆತರಲು ಹೊರಟನಂತರ ಸಭಾ ಮಂದಿರದಲ್ಲಿ ಸುಖಾಸೀನರಾಗಿದ್ದ ಪೂರ್ವ-ಪಶ್ಚಿಮ-ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿದ್ದ ರಾಜ್ಯಗಳ ರಾಜರೂ, ಯವನರಾಜರೂ, ಮಧ್ಯದೇಶಗಳ ರಾಜರೂ, ಇವರಲ್ಲದೇ ಅರಣ್ಯ ಮತ್ತು ಗಿರಿದುರ್ಗಗಳ ಸಮೀಪದಲ್ಲಿ ವಾಸಿ ಸುತ್ತಿದ್ದ ಇನ್ನೂ ಅನೇಕ ಜನನಾಯಕರೂ–ದೇವತೆಗಳು ಮಹೇಂದ್ರನನ್ನು ಸೇವಿಸುವಂತೆ–ಇಂದ್ರಸದೃಶನಾದ ದಶರಥನನ್ನು ಅನರ್ಘ್ಯವಾದ ಕಪ್ಪ-ಕಾಣಿಕೆಗಳ ಮೂಲಕವಾಗಿ ಗೌರವಿಸಿದರು.

ದೇವತೆಗಳಿಂದ ಪರಿವೃತನಾದ ಇಂದ್ರನು ದಿವ್ಯಪ್ರಾಸಾದದಲ್ಲಿ ವಿರಾಜಿಸುವಂತೆ–ಭೂಮಂಡಲದ ರಾಜರಿಂದ ಪರಿವೃತನಾಗಿ ಉಪ್ಪರಿಗೆಯ ಮೇಲೆ ವಿರಾಜಿಸುತ್ತಿದ್ದ ದಶರಥನು ತನ್ನ ಮಗನು ಸುಮಂತ್ರನೊಡನೆ ರಥದಲ್ಲಿ ಕುಳಿತು ಬರುವುದನ್ನು ನೋಡಿದನು.

ಶ್ರೀರಾಮನು ಸೌಂದರ್ಯದಲ್ಲಿ ಗಂಧರ್ವರಾಜನಾದ ಚಿತ್ರರಥನಿಗೆ

ಅನುರೂಪನು. ಲೋಕವಿಖ್ಯಾತವಾದ ಪರಾಕ್ರಮವುಳ್ಳವನು. ನೀಳವಾದ ತೋಳುಗಳುಳ್ಳವನು. ಮಹಾಬಲಶಾಲಿಯು. ಮದಿಸಿದ ಆನೆಯಂತೆ ನಡಿಗೆಯುಳ್ಳವನು. ಚಂದ್ರನ ಕಾಂತಿಗಿಂತಲೂ ಮಿಗಿಲಾದ ಕಾಂತಿಯಿಂದ ಕೂಡಿದ ಮುಖವುಳ್ಳವನು. ನೋಡಲು ಅತಿಚೆಲುವನು. ಅವನ ದರ್ಶನವೇ ಎಲ್ಲರಿಗೂ ಅತಿಪ್ರಿಯವಾಗಿದ್ದಿತು. ನಯನಾಹ್ಲಾದಕರವಾದ ರೂಪಿನಿಂದಲೂ ಔದಾರ್ಯಾದಿ ಗುಣಗಳಿಂದಲೂ ಶ್ರೀರಾಮನು ಪುರುಷರ ಕಣ್ಮನಗಳನ್ನೂ ಅಪಹರಿಸುವವನು.* ಮನುಷ್ಯರು ಗ್ರೀಷ್ಮರ್ತುವಿನ ಬಿಸಿಲಿನ ಬೇಗೆಯಲ್ಲಿ ಬೆಂದುಹೋಗುತ್ತಿರುವಾಗ ಪರ್ಜನ್ಯನು ಮಳೆಗರೆದರೆ ಅವರಿಗೆ ಎಷ್ಟು ಆನಂದವಾಗುವುದೋ–ಅದೇ ಆನಂದವು ಶ್ರೀರಾಮನ ದರ್ಶನಮಾಡಿದವರೆಲ್ಲರಿಗೂ ಉಂಟಾಗುವುದು. ಅಂತಹ ಸರ್ವಾಂಗಸುಂದರನಾದ ಶ್ರೀರಾಮನನ್ನು ಎವೆಯಿಕ್ಕದೇ ನೋಡುತ್ತಿದ್ದರೂ ದಶರಥನಿಗೆ ತೃಪ್ತಿಯಾಗಲಿಲ್ಲ.

ಇತ್ತಲಾಗಿ ಸುಮಂತ್ರನೂ ಶ್ರೀರಾಮನನ್ನು ಶ್ರೇಷ್ಠವಾದ ರಥದಿಂದ ಕೆಳಗಿಳಿಸಿದನು. ದಶರಥನ ಸಮೀಪಕ್ಕೆ ಹೋಗುತ್ತಿದ್ದ ಶ್ರೀರಾಮನನ್ನನುಸರಿಸಿ ಸುಮಂತ್ರನು ಬದ್ಧಾಂಜಲಿಯಾಗಿ ಹೋಗುತ್ತಿದ್ದನು.

---

* ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಕಮ್–ಎಂದು ಶ್ಲೋಕಾರ್ಥವಿದೆ. ರೂಪಾದಿ ಗುಣಗಳಿಂದ ಶ್ರೀರಾಮನು ಪುರುಷರ ಮನಸ್ಸನ್ನೂ ಅಪಹರಿಸಿಬಿಡುತ್ತಿದ್ದನು ; ಅಷ್ಟು ಚೆಲುವನಾಗಿದ್ದನು ಎಂದರ್ಥ. ಸುಂದರಪುರುಷರನ್ನು ಸ್ತ್ರೀಯರು ಕಾಮಿಸುವುದೂ, ಸುಂದರಸ್ತ್ರೀಯರನ್ನು ಪುರುಷರು ಕಾಮಿಸುವುದೂ ಸ್ವಾಭಾವಿಕ. ಪುರುಷನೊಬ್ಬನ ಸೌಂದರ್ಯವನ್ನು ನೋಡಿ ಪುರುಷರೇ ಕಾಮಿಸುವುದೂ, ಸ್ತ್ರೀಯೊಬ್ಬಳ ಸೌಂದರ್ಯವನ್ನು ನೋಡಿ ಸ್ತ್ರೀಯರೇ ಕಾಮಿಸುವುದೂ ವಿಶೇಷರೀತಿಯದು. ಪುಂಸಾಂ ದೃಷ್ಟಿಚಿತ್ತಾಪಹಾರಕಂ ರಾಮಂ–ಎಂದು ಇಲ್ಲಿ ವಾಲ್ಮೀಕಿಗಳು ಸ್ಪಷ್ಟವಾಗಿಯೇ ಹೇಳಿದ್ದಾರೆ. ಪುಂಸಾಂ ಮೋಹನರೂಪಾಯ ಎಂದೂ ಒಂದೆಡೆಯಲ್ಲಿ ರಾಮನ ಸೌಂದರ್ಯಾತಿಶಯವನ್ನು ಕೊಂಡಾಡಲಾಗಿದೆ. ಸುಂದರಸ್ತ್ರೀಯನ್ನು ಸ್ತ್ರೀಯರು ಕಾಮಿಸುತ್ತಿದ್ದ ವಿಷಯವಾಗಿ ಮಹಾಭಾರತದಲ್ಲಿ ಹೀಗೆ ಹೇಳಿದೆ. ಪಾಞ್ಚಾಲ್ಯಾಃ ಪದ್ಮಪತ್ರಾಕ್ಷ್ಯಾಃ ಸ್ನಾಯನ್ತ್ಯಾಃ ಉತ್ತಮಂ ವಪುಃ । ಯಾ ಸ್ತ್ರಿಯೋ ದೃಷ್ಟವತ್ಯಸ್ತಾಃ ಪುಂಭಾವಂ ಮನಸಾ ಯಯುಃ ॥ ತಾವರೆಯ ದಳಗಳಂತೆ ಕಣ್ಣುಗಳುಳ್ಳ ದ್ರೌಪದಿಯು ಸ್ನಾನಮಾಡುತ್ತಿರುವಾಗ ಅವಳ ಶ್ರೇಷ್ಠವಾದ ಶರೀರಸೌಂದರ್ಯವನ್ನು ನೋಡಿದ ಸ್ತ್ರೀಯರೆಲ್ಲರೂ ಮನಸ್ಸಿನಿಂದ ಪುಂಭಾವವನ್ನು ಆಶಿಸಿದರು. ಅರ್ಥಾತ್ ದ್ರೌಪದಿಯು ಸ್ತ್ರೀಯರಿಗೇ ಮೋಹಕಳಾಗಿದ್ದಳು.

ಕೈಲಾಸಶಿಖರಕ್ಕೆ ಸಮಾನವಾಗಿದ್ದ ಆ ಭವ್ಯವಾದ ಅರಮನೆಯ ಉಪ್ಪರಿಗೆಯನ್ನು ಶ್ರೀರಾಮನು ತಂದೆಯಾದ ದಶರಥನನ್ನು ನೋಡುವ ಇಚ್ಛೆಯಿಂದ ಸುಮಂತ್ರನೊಡನೆ ಹತ್ತಿದನು. ಬಳಿಕ ಶ್ರೀರಾಮನು ಸಿಂಹಾಸನಾರೂಢನಾಗಿದ್ದ ದಶರಥನನ್ನು ಕಂಡು ಬದ್ಧಾಂಜಲಿಯಾಗಿ ತಂದೆಯ ಬಳಿಗೆ ಸಾರಿ ದೀರ್ಘದಂಡನಮಸ್ಕಾರಮಾಡಿ ಅನಂತರ–'**ಶ್ರೀರಾಮನಾಮಾಹಮಭಿವಾದಯೇ**'–ಎಂದು ಹೇಳಿಕೊಂಡು ದಶರಥನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದನು. ದಶರಥನು–ನಮಸ್ಕರಿಸಿ ಪಕ್ಕದಲ್ಲಿ ವಿನೀತನಾಗಿ ಕೈಮುಗಿದುಕೊಂಡು ನಿಂತಿದ್ದ ಪ್ರಿಯಪುತ್ರನಾದ ಶ್ರೀರಾಮನ ಅಂಜಲಿಪುಟಗಳನ್ನು ತನ್ನೆರಡು ಕೈಗಳಿಂದಲೂ ಹಿಡಿದು ಅವನನ್ನು ಹತ್ತಿರಕ್ಕೆ ಸೆಳೆದುಕೊಂಡು ಬಾಚಿತಬ್ಬಿದನು. ಹಾಗೆಯೇ ಅವನ ತಲೆಯನ್ನೂ ಆಘ್ರಾಣಿಸಿ ಪಕ್ಕದಲ್ಲಿಯೇ ಇದ್ದ ಮೌಕ್ತಿಕ-ಗೋಮೇಧ-ಪುಷ್ಯರಾಗಾದಿಮಣಿಗಳಿಂದಲೂ, ಸುವರ್ಣದ ರೇಕುಗಳಿಂದಲೂ ಬಹಳ ಚೆನ್ನಾಗಿ ಅಲಂಕರಿಸಲ್ಪಟ್ಟಿದ್ದ, ಅತಿಸುಂದರವಾದ, ಉನ್ನತವಾದ ಮತ್ತು ಪರಮಶ್ರೇಷ್ಠವಾದ ಸಿಂಹಾಸನವನ್ನು ಶ್ರೀರಾಮನಿಗೆ ತೋರಿಸಿ ಅದರಲ್ಲಿ ಕುಳಿತುಕೊಳ್ಳುವಂತೆ ಸೂಚಿಸಿದನು. ಮೇಘರಹಿತವಾದ ಆಕಾಶದಲ್ಲಿ ಉದಯಿಸಿದ ವಿಮಲನಾದ ಸೂರ್ಯನು ತನ್ನದೇ ಆದ ಪ್ರಭೆಯಿಂದ ಮೇರುಪರ್ವತವನ್ನು ಬೆಳಗುವಂತೆ–ನವರತ್ನಖಚಿತವಾದ ಸಿಂಹಾಸನದ ಮೇಲೆ ಕುಳಿತು ಶ್ರೀರಾಮನು ತನ್ನ ಪ್ರಭೆಯಿಂದ ಸಿಂಹಾಸನವನ್ನು ಬೆಳಗಿದನು.* ಥಳ-ಥಳಿಸುವ ಗ್ರಹಗಳ

---

* ಸೂರ್ಯನ ಉದಯಕ್ಕೂ ಮೇರುಪರ್ವಕ್ಕೂ ಸಂಬಂಧಕಲ್ಪನೆಯು ಹೇಗೆ ಸಾಧ್ಯವೆಂಬುದಕ್ಕೆ ಉತ್ತರವಾಗಿ ಒಬ್ಬ ವ್ಯಾಖ್ಯಾನಕಾರರು ಹೀಗೆ ಸಮಾಧಾನಹೇಳಿರುತ್ತಾರೆ. ಯದ್ಯಪಿ ಭರತಖಂಡದಲ್ಲಿ ಸೂರ್ಯನು ಉದಯಿಸುವಾಗ ಮೇರುಪರ್ವತದ ಸಂಪರ್ಕವಿಲ್ಲದಿದ್ದರೂ ಖಂಡಾಂತರಗಳಲ್ಲಿ ಉದಯಿಸುವಾಗ ಸೂರ್ಯನಿಗೆ ಅಸ್ತಪರ್ವತದ ಸಮೀಪದಲ್ಲಿರುವ ಸಾವರ್ಣಿಮೇರುವಿನ ಸಂಬಂಧವಿರುತ್ತದೆ. ಉತ್ತರವರ್ಷದಲ್ಲಿರುವ ಸಿದ್ಧಪುರದ ಜನರಿಗೆ ಈ ಅನುಭವವಾಗುತ್ತದೆ. ಆರ್ಯಭಟ್ಟರ ಸಿದ್ಧಾಂತವು ಹೀಗದೆ :

ಭೂವೃತ್ತಪಾದೇ ಪೂರ್ವಸ್ಯಾಂ ಯವಕೋಟೀತಿ ವಿಶ್ರುತಾ ।
ಭದ್ರಾಶ್ವವರ್ಷೇ ನಗರೀ ಸ್ವರ್ಣಪ್ರಾಕಾರತೋರಣಾ ॥
ಯಾಮ್ಯಾಯಾಂ ಭಾರತೇ ವರ್ಷೇ ಲಙ್ಕಾ ತದ್ವನ್ಮಹಾಪುರೀ ।
ಪಶ್ಚಿಮೇ ಕೇತುಮಾಲಾಖ್ಯೇ ರೋಮಕೇತಿ ಚ ಕೀರ್ತಿತಾ ॥

ಮತ್ತು ನಕ್ಷತ್ರಗಳ ಮಧ್ಯದಲ್ಲಿ ಶರತ್ಕಾಲದ ಚಂದ್ರನಿಂದ ಆಕಾಶವು ವಿರಾಜ ಮಾನವಾಗಿರುವಂತೆ ನಕ್ಷತ್ರ-ಗ್ರಹರೂಪಿಗಳಾದ ವಸಿಷ್ಠ-ವಾಮದೇವ-ದಶರಥಾದಿಗಳಿಂದಲೂ, ರಾಜ-ಮಹಾರಾಜರಿಂದಲೂ ಪರಿವೃತನಾದ ಚಂದ್ರ ರೂಪಿಯಾದ ಶ್ರೀರಾಮನಿಂದ ಆಕಾಶರೂಪವಾಗಿದ್ದ ಆ ಸಭಾಭವನವು ಪ್ರಕಾಶಿಸಿತು.

ನಿಲುಗನ್ನಡಿಯಲ್ಲಿ ಕಾಣುವ ಅಲಂಕೃತವಾದ ತನ್ನ ಪ್ರತಿಬಿಂಬದಂತೆ ಸರ್ವಾಂಗಗಳಲ್ಲಿಯೂ ತನ್ನ ಪ್ರತಿರೂಪದಂತೆಯೇ ಇರುವ ನಿಜಸುತನಾದ ಶ್ರೀರಾಮನನ್ನು ನೋಡಿ ದಶರಥನು ಸಂತೋಷಭರಿತನಾದನು. ಕಶ್ಯಪ ಬ್ರಹ್ಮನು ತನ್ನ ಮಗನಾದ ದೇವೇಂದ್ರನೊಡನೆ ಮಾತನಾಡುವಂತೆ–ಪುತ್ರ ವಂತರಲ್ಲಿ ಶ್ರೇಷ್ಠನಾದ ದಶರಥನು ಮುಗುಳ್ನಗೆಯೊಡನೆ ದಿವ್ಯಾಸನದಲ್ಲಿ ಉಪಸ್ಥಿತನಾಗಿದ್ದ ಪುತ್ರನೊಡನೆ ಹೇಳಿದನು :

"ರಾಮಭದ್ರ! ನನಗೆ ಅನುರೂಪಳಾದ, ನನ್ನ ಹಿತಚಿಂತನೆಯಲ್ಲಿಯೇ ಸರ್ವದಾ ಆಸಕ್ತಳಾದ ಜ್ಯೇಷ್ಠಭಾರ್ಯೆಯಲ್ಲಿ–ನನ್ನ ಪ್ರತಿಬಿಂಬರೂಪನಾಗಿ ರುವ, ಗುಣದಲ್ಲಿಯೂ ಶ್ರೇಷ್ಠತೆಯನ್ನು ಪಡೆದಿರುವ ನೀನು ನನ್ನ ಪ್ರಿಯನೂ ಜ್ಯೇಷ್ಠನೂ ಆದ ಪುತ್ರನಾಗಿ ಜನಿಸಿರುವೆ. ನಿನ್ನ ಸ್ವಭಾವಜನ್ಯವಾದ

ಉದಕ್ ಸಿದ್ಧಪುರೀನಾಮ ಕುರುವರ್ಷೇ ಪ್ರತಿಷ್ಠಿತಾ ।
ಉದಯೋ ಯೋ ಲಙ್ಕಾಯಾಂ ಸೋಽಸ್ತಮಯಃ ಸವಿತುರೇವ ಸಿದ್ಧಪುರೇ ।
ಮಧ್ಯಾಹ್ನೇ ಯವಕೋಟ್ಯಾಂ ರೋಮಕ ವಿಷಯೇಽರ್ಧರಾತ್ರಂ ಸ್ಯಾತ್ ॥
ಭರತಾದಿಷು ವರ್ಷೇಷು ತದ್ವದೇವ ಪರಿಭ್ರಮನ್ ।
ಮಧ್ಯೋದಯಾರ್ಧರಾತ್ರಾಂಸ್ತು ಕಾಲಾನ್ಕುರ್ಯಾತ್ಪ್ರದಕ್ಷಿಣಮ್ ॥

ಭೂಮಿಯ ವೃತ್ತಪಾದದಲ್ಲಿ ಪೂರ್ವದಿಕ್ಕಿನಲ್ಲಿ ಭದ್ರಾಶ್ವವರ್ಷದಲ್ಲಿ ಯವಕೋಟಿ ಎಂದು ಪ್ರಸಿದ್ಧವಾದ, ಚಿನ್ನದ ಪ್ರಾಕಾರ (ಕೋಟೆ) ಗಳಿಂದಲೂ, ತೋರಣ (ಪುರದ್ವಾರ) ಗಳಿಂದಲೂ ಕೂಡಿದ ನಗರಿಯಿದೆ. ದಕ್ಷಿಣದಲ್ಲಿ ಭಾರತವರ್ಷದಲ್ಲಿ ಲಂಕೆಯೆಂಬ ನಗರಿಯಿದೆ. ಪಶ್ಚಿಮದಲ್ಲಿ ಕೇತುಮಾಲವರ್ಷದಲ್ಲಿ ರೋಮಕನಗರಿಯಿದೆ. ಉತ್ತರದಲ್ಲಿ ಕುರುವರ್ಷದಲ್ಲಿ ಸಿದ್ಧಪುರಿಯಿದೆ. ಲಂಕೆಯಲ್ಲಿ ಉದಯವಾದಾಗ ಸಿದ್ಧಪುರದಲ್ಲಿ ಅಸ್ತವಾಗುತ್ತದೆ. ಯವಕೋಟಿಯಲ್ಲಿ ಮಧ್ಯಾಹ್ನವಾದಾಗ ರೋಮಕದೇಶದಲ್ಲಿ ಮಧ್ಯರಾತ್ರಿಯಾಗುತ್ತದೆ. ಹೀಗೆ ಸೂರ್ಯನು ಪ್ರದಕ್ಷಿಣಾಕಾರದಲ್ಲಿ ಸಂಚರಿಸುತ್ತಾ ಆಯಾ ದೇಶಗಳಲ್ಲಿ ಉದಯಾದಿಗಳನ್ನು ಉಂಟುಮಾಡುತ್ತಾನೆ.

ಸದ್ಗುಣಗಳಿಂದಾಗಿ ಈ ನನ್ನ ಪ್ರಜೆಗಳು ನಿನ್ನ ವಿಷಯದಲ್ಲಿ ಹೆಚ್ಚಿನ ಅನು ರಾಗವುಳ್ಳವರಾಗಿರುತ್ತಾರೆ. ಈ ಕಾರಣಗಳಿಂದಾಗಿ ಪುಷ್ಯನಕ್ಷತ್ರಯುಕ್ತವಾದ ಶುಭದಿನದಂದು ಯುವರಾಜಪದವಿಯನ್ನು ನೀನು ಪಡೆಯಲಿರುವೆ. ಸ್ವಭಾವತಃ ನೀನು ವಿನೀತನೆಂಬುದೂ ಗುಣಶಾಲಿಯೆಂಬುದೂ ನಿಶ್ಚಿತವಾಗಿದೆ. ಪ್ರಜೆಗಳೂ ಕೂಡ ನೀನು ಅತ್ಯಂತಗುಣವಂತನೆಂಬ ಅಭಿಪ್ರಾಯವನ್ನು ಹೊಂದಿರುವರು. ನೀನು ಸಕಲಸದ್ಗುಣಸಂಪನ್ನನಾಗಿದ್ದರೂ ಪುತ್ರವಾತ್ಸಲ್ಯ ದಿಂದ ಪ್ರಚೋದಿತನಾದ ನಾನು ನಿನಗೆ ಹಿತದಾಯಕವಾದ ಎರಡು ಮಾತುಗಳನ್ನು ಹೇಳುವೆನು :

ಭೂಯೋ ವಿನಯಮಾಸ್ಥಾಯ ಭವ ನಿತ್ಯಂ ಜಿತೇನ್ದ್ರಿಯಃ ।
ಕಾಮಕ್ರೋಧಸಮುತ್ಥಾನಿ ತ್ಯಜೇಥಾ ವ್ಯಸನಾನಿ ಚ ॥೪೨॥

ಪರೋಕ್ಷಯಾ ವರ್ತಮಾನೋ ವೃತ್ತ್ಯಾ ಪ್ರತ್ಯಕ್ಷಯಾ ತಥಾ ।
ಅಮಾತ್ಯಪ್ರಭೃತೀಃ ಸರ್ವಾಃ ಪ್ರಕೃತೀಶ್ಚಾನುರಞ್ಜಯ ॥೪೩॥

ಕೋಷ್ಠಾಗಾರಾಯುಧಾಗಾರೈಃ ಕೃತ್ವಾ ಸಂನಿಚಯಾನ್ಬಹೂನ್ ।
ಇಷ್ಟಾನುರಕ್ತಪ್ರಕೃತಿರ್ಯಃ ಪಾಲಯತಿ ಮೇದಿನೀಮ್ ॥೪೪॥

ತಸ್ಯ ನನ್ದನ್ತಿ ಮಿತ್ರಾಣಿ ಲಬ್ಧ್ವಾಮೃತಮಿವಾಮರಾಃ ।
ತಸ್ಮಾತ್ಪುತ್ರ ತ್ವಮಾತ್ಮಾನಂ ನಿಯಮ್ಯೈವಂ ಸಮಾಚಾರ ॥೪೫॥

ರಾಮಚಂದ್ರ! ನೀನು ಸ್ವಭಾವತಃ ವಿನಯಶೀಲನು. ರಾಜ್ಯ ನಿರ್ವಹಣೆಯಲ್ಲಿ ನೀನು ಇನ್ನೂ ಹೆಚ್ಚು ವಿನಯಶೀಲನಾಗಿದ್ದು ನಿತ್ಯವೂ ಜಿತೇಂದ್ರಿಯನಾಗಿರು. ಕಾಮ-ಕ್ರೋಧಗಳಿಂದ ಹುಟ್ಟುವ ವ್ಯಸನಗಳನ್ನು ಸಂಪೂರ್ಣವಾಗಿ ಪರಿತ್ಯಜಿಸು.* ಚಾರರ ಮೂಲಕ ಪರೋಕ್ಷದ ಸಮಾಚಾರ

---

* ವ್ಯಸನಗಳು ಏಳು. **ಸ್ತ್ರೀದ್ಯೂತಮೃಗಯಾಮದ್ಯವಾಕ್ಪಾರುಷ್ಯೋಗ್ರದಣ್ಡತಾಃ । ಅರ್ಥಸಂದೂಷಣಂ ಚೇತಿ ರಾಜ್ಞಾಂ ವ್ಯಸನಸಪ್ತಕಮ್ ॥** ಸ್ತ್ರೀಯರು, ಜೂಜು, ಬೇಟೆ, ಮದ್ಯ, ಕಠಿಣವಾದ ಮಾತು, ಕಠೋರವಾಗಿ ಶಿಕ್ಷಿಸುವುದು, ಹಣದ ದುಂದು ವೆಚ್ಚ–ಈ ಏಳು ರಾಜರ ವ್ಯಸನಗಳು (ದುರಭ್ಯಾಸಗಳು.) ಕಾಮಸಂಬಂಧವಾದ ವ್ಯಸನಗಳು ಹತ್ತು. **ಮೃಗಯಾಕ್ಷೋ ದಿವಾಸ್ವಾಪಃ ಪರಿವಾದಃ ಸ್ತ್ರಿಯೋ ಮದಃ ।** ತೌರ್ಯತ್ರಿಕಂ ವೃಥಾಧ್ಯಾ ಚ ಕಾಮಜೋ ದಶಕೋ ಗುಣಃ । ಬೇಟೆ, ಜೂಜು, ಹಗಲು ನಿದ್ದೆಮಾಡುವುದು, ನಿಂದೆ, ಸ್ತ್ರೀಯರಲ್ಲಿ ಆಸಕ್ತಿ, ಗರ್ವ, ನೃತ್ಯ-ಗೀತ-

ಗಳನ್ನು (ಶತ್ರುರಾಷ್ಟ್ರಗಳ ವಿಷಯಗಳನ್ನು) ತಿಳಿದುಕೋ. ಪ್ರಜೆಗಳ ಕುಂದು-ಕೊರತೆಗಳನ್ನು ಪ್ರತ್ಯಕ್ಷವಾಗಿಯೇ ಹೋಗಿ ವಿಚಾರಿಸು. ಮಂತ್ರಿ-ಸೇನಾಪತಿಗಳೇ ಮೊದಲಾದ ಅಧಿಕಾರವರ್ಗದವರನ್ನೂ ಪ್ರಜೆಗಳನ್ನೂ ಸಂತೋಷಗೊಳಿಸು.

ಪುತ್ರ! ಯಾವನು ಬಹುಸಂಖ್ಯಾತವಾದ ಉಗ್ರಾಣಗಳನ್ನೂ ಆಯುಧಾಗಾರಗಳನ್ನೂ ನಿರ್ಮಿಸಿ ಅಪಾರವಾದ ಧಾನ್ಯವನ್ನೂ ಮತ್ತು ಆಯುಧಗಳನ್ನೂ ಸಂಗ್ರಹಿಸುವನೋ ಮತ್ತು ಇಷ್ಟವಾದ ಮತ್ತು ಅನುರಕ್ತರಾದ ಮಂತ್ರಿಗಳಿಂದೊಡಗೂಡಿ ಭೂಮಿಯನ್ನು ಪರಿಪಾಲಿಸುವನೋ–ಅಂತಹ ವನ ಮಿತ್ರರು ಅಮೃತವನ್ನು ಪಡೆದ ದೇವತೆಗಳಂತೆ ಅಂತಹ ರಾಜನನ್ನು ಪಡೆದುದಕ್ಕಾಗಿ ಸಂತೋಷಪಡುತ್ತಾರೆ. ಆದುದರಿಂದ, ಮಗು! ನೀನು ನಾನು ಹೇಳಿದಂತೆ ಮನಸ್ಸನ್ನು ನಿಗ್ರಹಿಸಿ ಸಂಯಮದಿಂದ ರಾಜ್ಯವನ್ನು ಪರಿಪಾಲಿಸು."

ಸಭೆಯಲ್ಲಿ ಕುಳಿತಿದ್ದ ಶ್ರೀರಾಮನ ಅಭ್ಯುದಯಾಕಾಂಕ್ಷಿಗಳಾದ ಸ್ನೇಹಿತರು ದಶರಥನಾಡಿದ ಆ ಮಾತುಗಳನ್ನು ಕೇಳಿ, ಒಡನೆಯೇ ಸಭಾಭವನದಿಂದ ಹೊರಟು ಕೌಸಲ್ಯಾದೇವಿಯ ಅಂತಃಪುರಕ್ಕೆ ಹೋಗಿ ಶ್ರೀರಾಮನ ಯೌವರಾಜ್ಯಾಭಿಷೇಕದ ಶುಭವಾರ್ತೆಯನ್ನು ಅವಳಿಗೆ ತಿಳಿಸಿದರು. ಆ ಶುಭವಾರ್ತೆಯನ್ನು ಕೇಳಿ ಆನಂದಭರಿತಳಾದ ಸ್ತ್ರೀರತ್ನಳಾದ ಕೌಸಲ್ಯಾದೇವಿಯು ಶುಭವಾರ್ತೆಯನ್ನು ಅರುಹಿದ ಶ್ರೀರಾಮನ ಗೆಳೆಯರಿಗೆ ಸುವರ್ಣನಾಣ್ಯಗಳನ್ನೂ, ನೂರಾರು ಹಸುಗಳನ್ನೂ, ವಿಧ-ವಿಧವಾದ ರತ್ನಗಳನ್ನೂ ಪಾರಿತೋಷಿಕವಾಗಿ ಕೊಟ್ಟಳು. ಇತ್ತಲಾಗಿ ದಶರಥನ ಹಿತೋಪ

ವಾದ್ಯಗಳಲ್ಲಿ ಲೋಲುಪತೆ, ವ್ಯರ್ಥವಾಗಿ ಪ್ರವಾಸಮಾಡುವುದು–ಈ ಹತ್ತು ಕಾಮದಿಂದುಟಾಗುವ ವ್ಯಸನಗಳು. ಕೋಪಸಂಬಂಧವಾದ ವ್ಯಸನಗಳು ಎಂಟು : **ಪೈಶುನ್ಯಂ ಸಾಹಸಂ ದ್ರೋಹ ಈರ್ಷ್ಯಾಸೂಯಾರ್ಥದೂಷಣಮ್ । ವಾಗ್ದಣ್ಡಯೋಶ್ಚ ಪಾರುಷ್ಯಂ ಕ್ರೋಧಜೋಽಪಿ ಗುಣೋಽಷ್ಟಕಃ ॥** ಚಾಡಿಯ ಮಾತು ಕೇಳುವಿಕೆ, ವಿಚಾರಮಾಡದೇ ದುಡುಕಿ ನುಗ್ಗುವಿಕೆ, ದ್ರೋಹಬುದ್ಧಿ, ಬೇರೆಯವರಿಗೆ ಒಳ್ಳೆಯದಾಗುವುದನ್ನು ದ್ವೇಷಿಸುವಿಕೆ, ಬೇರೆಯವರ ಗುಣಗಳಲ್ಲಿಯೂ ದೋಷಾರೋಪಮಾಡುವಿಕೆ, ದುಂದುವೆಚ್ಚ, ಮಾತಿನಲ್ಲಿಯೂ, ಶಿಕ್ಷೆಯಲ್ಲಿಯೂ ಕಾಠಿಣ್ಯದಿಂದಿರುವಿಕೆ–ಇವುಗಳು ಕೋಪದಿಂದಾಗುವ ಎಂಟು ವ್ಯಸನಗಳು.

ದೇಶವನ್ನು ಕೇಳಿದ ಶ್ರೀರಾಮನು ಮೌನದಿಂದಲೇ ತನ್ನ ಸಮ್ಮತಿಯನ್ನು ಸೂಚಿಸಿ, ತಂದೆಯಾದ ದಶರಥನಿಗೆ ಪುನಃ ನಮಸ್ಕರಿಸಿ, ಆನಂದಭರಿತರಾಗಿದ್ದ ಪ್ರಜೆಗಳಿಂದ ಪುರಸ್ಕೃತನಾಗಿ, ರಥದಲ್ಲಿ ಕುಳಿತು ತನ್ನ ಭವ್ಯವಾದ ಅರಮನೆಯನ್ನು ಸೇರಿದನು. ಅಲ್ಲಿ ನೆರೆದಿದ್ದ ಪಟ್ಟಣಿಗರು ಕೂಡ ದಶರಥರಾಜನಾಡಿದ ಮಾತುಗಳನ್ನು ಕೇಳಿ ಇಷ್ಟವಾದ ಲಾಭವನ್ನು ಪಡೆದವರಂತೆ ಅಮಿತಾನಂದವನ್ನು ಹೊಂದಿ, ದಶರಥರಾಜನ ಅಪ್ಪಣೆಯನ್ನು ಪಡೆದು, ಶೀಘ್ರವಾಗಿ ತಮ್ಮ-ತಮ್ಮ ಮನೆಗಳಿಗೆ ಹೋಗಿ ಇಷ್ಟದೇವತೆಗಳನ್ನು ಭಕ್ತಿಭಾವದಿಂದ ಸಂಪೂಜಿಸಿದರು.

ಃನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೪ನೆಯ ಸರ್ಗ

ಶ್ರೀರಾಮನಿಗೆ ಯುವರಾಜಪಟ್ಟಗಟ್ಟಲು ನಿಶ್ಚಯಿಸಿದ ದಶರಥನು ಪುನಃ ಸುಮಂತ್ರನ ಮೂಲಕವಾಗಿ ಶ್ರೀರಾಮನನ್ನು ಕರೆಯಿಸಿ ಅವನಿಗೆ ಆವಶ್ಯಕವಾದ ಮಾತುಗಳನ್ನು ಹೇಳಿದುದು : ಶ್ರೀರಾಮನು ತಾಯಿಯಾದ ಕೌಸಲ್ಯಾದೇವಿಯ ಅಂತಃಪುರಕ್ಕೆ ಹೋಗಿ ಪಟ್ಟಾಭಿಷೇಕದ ಶುಭವಾರ್ತೆಯನ್ನು ಅರುಹಿದುದು : ಕೌಸಲ್ಯೆಯ ಆಶೀರ್ವಾದ : ಶ್ರೀರಾಮನು ಲಕ್ಷ್ಮಣನೊಡನೆ ಪ್ರೇಮಪೂರ್ವಕವಾಗಿ ಮಾತನಾಡುತ್ತಾ ತನ್ನ ಅರಮನೆಗೆ ತೆರಳಿದುದು

ಗತೇಷ್ವಥ ನೃಪೋ ಭೂಯಃ ಪೌರೇಷು ಸಹ ಮನ್ತ್ರಿಭಿಃ ।
ಮನ್ತ್ರಯಿತ್ವಾ ತತಶ್ಚಕ್ರೇ ನಿಶ್ಚಯಜ್ಞಃ ಸ ನಿಶ್ಚಯಮ್ ॥೧॥

ಪಟ್ಟಣಿಗರೆಲ್ಲರೂ ತಮ್ಮ-ತಮ್ಮ ನಿವಾಸಗಳಿಗೆ ಹೊರಟುಹೋದ ನಂತರ ದಶರಥರಾಜನು ಪುನಃ ಮಂತ್ರಿಗಳೊಡನೆ ಶ್ರೀರಾಮನ ಪಟ್ಟಾಭಿ ಷೇಕದ ವಿಷಯವಾಗಿ ಸಮಾಲೋಚನೆನಡೆಸಿದನು. ಇಂತಹ ಕಾರ್ಯವನ್ನು–ಹೀಗೆಯೇ ; ಇದೇ ಸಮಯಲ್ಲಿಯೇ ಮಾಡಬೇಕೆಂಬ ನಿಶ್ಚಯಜ್ಞಾನವುಳ್ಳ ದಶರಥನು, ಮಂತ್ರಿಗಳೊಡನೆ ಪುನಃ ಪರ್ಯಾಲೋಚಿಸಿ ಆದಷ್ಟು ಶೀಘ್ರವಾಗಿ ಶ್ರೀರಾಮನಿಗೆ ಪಟ್ಟಾಭಿಷೇಕಮಾಡಬೇಕೆಂದು ನಿಶ್ಚಯಿಸಿದನು.

ಶ್ವ ಏವ ಪುಷ್ಯೋ ಭವಿತಾ ಶ್ವೋಽಭಿಷೇಚ್ಯಸ್ತು ಮೇ ಸುತಃ
ರಾಮೋ ರಾಜೀವತಾಮ್ರಾಕ್ಷೋ ಯೌವರಾಜ್ಯ ಇತಿ ಪ್ರಭುಃ ॥೨॥

'ನಾಳೆಯೇ ಪುಷ್ಯನಕ್ಷತ್ರವು ಬರುತ್ತದೆ. ಆದುದರಿಂದ ನಾಳೆಯೇ ರಾಜೀವಲೋಚನನಾದ ನನ್ನ ಮಗ ಶ್ರೀರಾಮನು ಯುವರಾಜಪದವಿಯಲ್ಲಿ ಅಭಿಷಿಕ್ತನಾಗಲಿ'–ಎಂದು ಪ್ರಭುವಾದ ದಶರಥನು ನಿಶ್ಚಯಿಸಿದನು. ಮಂತ್ರಿಗಳೆಲ್ಲರೂ ರಾಜನು ಹೇಳಿದ ಮಾತಿಗೆ ಸಮ್ಮತಿಯನ್ನಿತ್ತು, ಆನಂದ ಭರಿತರಾಗಿ ಪಟ್ಟಾಭಿಷೇಕದ ಅಂಗವಾಗಿ ಮಾಡಬೇಕಾದ ಕಾರ್ಯಗಳ ನಿರ್ವಹಣೆಗೆ ಹೊರಟುಹೋದರು. ಬಳಿಕ ಅಂತಃಪುರವನ್ನು ಪ್ರವೇಶಿಸಿದ ರಾಜನು ಸೂತನನ್ನು ಕರೆಯಿಸಿ ಶ್ರೀರಾಮನನ್ನು ಒಡನೆಯೇ ಕರೆತರುವಂತೆ ಆಜ್ಞಾಪಿಸಿದನು. ರಾಜನ ಆ ಆಜ್ಞೆಯನ್ನು ಸೂತನು ಶಿರಸಾವಹಿಸಿ ಶ್ರೀರಾಮನನ್ನು ಪುನಃ ಕರೆತರುವ ಸಲುವಾಗಿ ಅವನ ಅರಮನೆಗೆ ಹೋದನು. ಮಹಾದ್ವಾರದ ಬಳಿಗೆ ಹೋದೊಡನೆಯೇ ಸುಮಂತ್ರನು ತಾನು ಬಂದಿರುವ ವಾರ್ತೆಯನ್ನು ಶ್ರೀರಾಮನಿಗೆ ತಿಳಿಸುವಂತೆ ದ್ವಾರಪಾಲಕರ ಮೂಲಕ ಹೇಳಿ ಕಳುಹಿಸಿದನು. ದ್ವಾರಪಾಲಕರು ಸುಮಂತ್ರನು ಪುನಃ ಬಂದಿರುವ ವಾರ್ತೆಯನ್ನು ಶ್ರೀರಾಮನಿಗೆ ತಿಳಿಸಿದರು. ಸುಮಂತ್ರನು ಮತ್ತೊಮ್ಮೆ ಬಂದಿರುವ ವಾರ್ತೆಯನ್ನು ಕೇಳಿ ಶ್ರೀರಾಮನು ಶಂಕಿತನಾದನು. ಸುಮಂತ್ರನನ್ನು ಬಹಳ ಬೇಗ ಒಳಕ್ಕೆ ಬರಮಾಡಿಕೊಂಡು ಪ್ರಶ್ನಿಸಿದನು :

"ಸುಮಂತ್ರ! ಯಾವ ಕಾರ್ಯದ ಸಲುವಾಗ ನೀನು ಪುನಃ ಬಂದಿರುವೆ? ಎಲ್ಲ ವಿಷಯಗಳನ್ನೂ ಸಮಗ್ರವಾಗಿ ಹೇಳು."

'ರಾಜಾ ತ್ವಾಂ ದ್ರಷ್ಟುಮಿಚ್ಛತಿ'–'ರಾಜನು ನಿನ್ನನ್ನು ಪುನಃ ಕಾಣಲು ಬಯಸಿದ್ದಾನೆ. ಈ ವಿಷಯವನ್ನು ಕೇಳಿದನಂತರ ರಾಜನ ಬಳಿಗೆ ಹೋಗುವುದು ಅಥವಾ ಬಿಡುವುದು ನಿನ್ನ ಇಚ್ಛೆಗೆ ಸೇರಿದ್ದಾಗಿದೆ.'

ಸುಮಂತ್ರನು ಹೇಳಿದ ಆ ಮಾತನ್ನು ಕೇಳಿ ಶ್ರೀರಾಮನು ತಂದೆಯಾದ ದಶರಥನನ್ನು ಪುನಃ ನೋಡುವ ಸಲುವಾಗಿ ಅವಸರದಿಂದ ಹೊರಟನು. ಶ್ರೀರಾಮನು ಸುಮಂತ್ರನೊಡನೆ ತನ್ನ ಅರಮನೆಯ ಮಹಾದ್ವಾರದ ಬಳಿಗೆ ಬಂದಿರುವನೆಂದು ತಿಳಿದೊಡನೆಯೇ ದಶರಥನು ಪ್ರಿಯಪುತ್ರನಿಗೆ ಪ್ರಿಯ ವಾರ್ತೆಯನ್ನು ಹೇಳುವ ಉತ್ಸುಕತೆಯಿಂದ ಒಳಕ್ಕೆ ಬರಮಾಡಿಕೊಂಡನು.

ಶ್ರೀರಾಮನು ರಾಜಭವನವನ್ನು ಪ್ರವೇಶಿಸುತ್ತಲೇ ಅನತಿದೂರದಲ್ಲಿದ್ದ ದಶರಥನಿಗೆ ಕೈಮುಗಿದು ನಮಸ್ಕರಿಸಿದನು. ಒಡನೆಯೇ ದಶರಥನು ತಲೆಬಾಗಿ ನಮಸ್ಕರಿಸುತ್ತಿದ್ದ ಶ್ರೀರಾಮನನ್ನು ಎರಡು ಭುಜಗಳಿಂದಲೂ ಹಿಡಿದು ಮೇಲೆತ್ತಿ ಗಾಢವಾಗಿ ಆಲಿಂಗನೆಮಾಡಿಕೊಂಡನು. ತನ್ನ ಸಮೀಪದಲ್ಲಿಯೇ ಶ್ರೀರಾಮನಿಗೆ ಕುಳಿತುಕೊಳ್ಳಲು ಆಸನವನ್ನಿತ್ತು ಅವನು ಕುಳಿತುಕೊಂಡನಂತರ ಹೇಳಿದನು :

"ರಾಮ! ನಾನು ವೃದ್ಧನಾಗಿದ್ದೇನೆ. ಇಷ್ಟು ದೀರ್ಘಕಾಲ ಬಾಳಿ ಬದುಕಿದ್ದೇನೆ. ನಾನಿಚ್ಛಿಸಿದಂತೆ ಬೇಕು-ಬೇಕಾದಷ್ಟು ಭೋಗಗಳನ್ನು ಉಪಭೋಗಿಸಿದ್ದೇನೆ. ಅನ್ನದಾನಪೂರ್ವಕವಾಗಿ ಯಥೇಷ್ಟವಾದ ಭೂರಿ-ದಕ್ಷಿಣೆಗಳೊಡನೆ ನೂರಾರು ಯಾಗಗಳನ್ನು ಮಾಡಿದ್ದೇನೆ. ನನಗೆ ಇಷ್ಟವಾದ ಪುತ್ರಪ್ರಾಪ್ತಿಯೂ ಆಗಿದೆ. ನನ್ನ ನಾಲ್ವರು ಪುತ್ರರಲ್ಲಿ ನೀನು ಲೋಕದಲ್ಲಿಯೇ ಮಿಗಿಲಾಗಿರುವೆ. ಪುರುಷಶ್ರೇಷ್ಠನೇ! ನಾನು ಬೇಡಿದವರಿಗೆ ಯಥೇಚ್ಛವಾಗಿ ಬೇಕು-ಬೇಕಾದ ವಸ್ತುಗಳನ್ನು ದಾನಮಾಡಿದ್ದೇನೆ. ಸಾಂಗ ವೇದಾಧ್ಯಯನಮಾಡಿದ್ದೇನೆ. ನಾನಿಷ್ಟಪಟ್ಟುದುದೆಲ್ಲವನ್ನೂ ಅನುಭವಿಸಿದ್ದೇನೆ. ಜೀವನದಲ್ಲಿ ಅನೇಕ ಸುಖಕ್ಷಣಗಳನ್ನು ಕಳೆದಿರುತ್ತೇನೆ. ದೇವಋಣ, ಋಷಿಋಣ, ಪಿತೃಋಣ, ವಿಪ್ರಋಣ ಮತ್ತು ಆತ್ಮಋಣ—ಈ ಐದು ಋಣಗಳಿಂದಲೂ ಮುಕ್ತನಾಗಿದ್ದೇನೆ.* ಈಗ ನಾನು ನಿನ್ನ ಪಟ್ಟಾಭಿಷೇಕವೊಂದರ ಹೊರತಾಗಿ ಬೇರೆ ಯಾವ ಕರ್ತವ್ಯವನ್ನೂ ಮಾಡಬೇಕಾಗಿರುವುದಿಲ್ಲ. ಎಲ್ಲವನ್ನೂ ಮಾಡಿ ಮುಗಿಸಿರುತ್ತೇನೆ. ಆದುದರಿಂದ ಈಗ ನಾನು ಹೇಳಿದಂತೆ ಮಾಡುವುದು ನಿನಗೆ ಯೋಗ್ಯವಾಗಿದೆ. ಮೇಲಾಗಿ ನಮ್ಮ ಪ್ರಜೆಗಳೆಲ್ಲರೂ ನೀನೇ ರಾಜನಾಗಿರಬೇಕೆಂದು ಬಯಸುತ್ತಿದ್ದಾರೆ. ಆದುದರಿಂದ ನಿನ್ನನ್ನೀಗಲೇ ಯುವರಾಜನನ್ನಾಗಿ ಮಾಡುತ್ತೇನೆ. ಇದಕ್ಕೆ ನೀನು

---

* ಜಾಯಮಾನೋ ವೈ ಬ್ರಾಹ್ಮಣಃ ತ್ರಿಭಿಃ ಋಣವಾನ್ ಜಾಯತೇ । ಬ್ರಹ್ಮ-ಚರ್ಯೇಣ ಋಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ ॥ ಎಂದು ತೈತ್ತಿರೀಯಸಂಹಿತೆಯಲ್ಲಿ ಹೇಳಿರುವಂತೆ ಬ್ರಾಹ್ಮಣನಾದವನು ಮೂರು ಋಣಗಳನ್ನು ಹೊತ್ತು ಹುಟ್ಟುತ್ತಾನೆ. ಋಷಿಋಣ, ದೇವಋಣ ಮತ್ತು ಪಿತೃಋಣ—ಇವುಗಳೇ ಆ ಮೂರು ಋಣಗಳು. ಋಷಿಋಣವನ್ನು ವೇದಾಧ್ಯಯನದಿಂದಲೂ, ದೇವಋಣವನ್ನು ಯಜ್ಞ-ಯಾಗಾದಿಗಳಿಂದಲೂ ಮತ್ತು ಪಿತೃಋಣವನ್ನು ಮಕ್ಕಳನ್ನು

ಸಮ್ಮತಿಸಬೇಕು. ರಾಘವ! ನಾನು ಇತ್ತೀಚೆಗೆ ಅಶುಭಸೂಚಕಗಳಾದ ಅನೇಕ ದುಃಸ್ವಪ್ನಗಳನ್ನು ಕಾಣುತ್ತಿದ್ದೇನೆ. ಸಿಡಿಲಿನೊಡನೆ ಘೋರಗರ್ಜನೆಗಳನ್ನು ಮಾಡುತ್ತಾ ಉಲ್ಕೆಗಳು ಹಗಲಿನಲ್ಲಿಯೇ ಅಂತರಿಕ್ಷದಿಂದ ಬೀಳುತ್ತಿವೆ. ಇದಕ್ಕನುಗುಣವಾಗಿ ನನ್ನ ಜನ್ಮನಕ್ಷತ್ರವು ಅಶುಭಗ್ರಹಗಳಾದ ಸೂರ್ಯಾಂಗಾರಕ-ರಾಹುಗಳಿಂದ ಸಮಾಕ್ರಾಂತವಾಗಿರುವುದೆಂದು ದೈವಜ್ಞರು ಹೇಳುತ್ತಿದ್ದಾರೆ. ಇಂತಹ ದುರ್ನಿಮಿತ್ತಗಳು ಗೋಚರವಾದಲ್ಲಿ ಪ್ರಾಯಶಃ ರಾಜನು ಸಾಯುತ್ತಾನೆ ಅಥವಾ ಘೋರವಾದ ಆಪತ್ತಿಗಾದರೂ ಒಳಗಾಗುತ್ತಾನೆ. ಆದುದರಿಂದ, ರಾಮ! ನನ್ನ ಈ ಬುದ್ಧಿಯು ವಿಮೋಹಗೊಳ್ಳುವುದರೊಳಗಾಗಿ ನಿನ್ನ ಯೌವರಾಜ್ಯಾಭಿಷೇಕವು ನಡೆದುಹೋಗಲಿ. 'ಚಲಾ ಹಿ ಪ್ರಾಣಿನಾಂ ಮತಿಃ'–'ಪ್ರಾಣಿಮಾತ್ರದವರ ಬುದ್ಧಿಯು ಸಾಮಾನ್ಯವಾಗಿ ಚಂಚಲವಾಗಿಯೇ ಇರುತ್ತದೆ'. ಚಂದ್ರನೀಗ ಪುಷ್ಯನಕ್ಷತ್ರದ ಹಿಂದಿನ ನಕ್ಷತ್ರವಾದ ಪುನರ್ವಸೂನಕ್ಷತ್ರದಲ್ಲಿದ್ದಾನೆ. ನಾಳೆಗೆ ಪುಷ್ಯನಕ್ಷತ್ರಯೋಗವಿದೆ. ಪುಷ್ಯನಕ್ಷತ್ರವು ಪಟ್ಟಾಭಿಷೇಕಕ್ಕೆ ಪ್ರಶಸ್ತವಾಗಿರುವ ನಕ್ಷತ್ರವೆಂದು ಜ್ಯೌತಿಷಿಕರು ಹೇಳುತ್ತಾರೆ. ನೀನು ಆ ಪುಷ್ಯನಕ್ಷತ್ರದಲ್ಲಿ ಪಟ್ಟಾಭಿಷಿಕ್ತನಾಗು. ಇದಕ್ಕಾಗಿ ನನ್ನ ಮನಸ್ಸು ಹಾತೊರೆಯುತ್ತಿದೆ. ಪರಂತಪನೇ! ನಾಳೆಯೇ ನಿನ್ನನ್ನು ಯುವರಾಜಪದವಿಯಲ್ಲಿ ಅಭಿಷೇಚಿಸುತ್ತೇನೆ. ಆದುದರಿಂದ ನೀನು ಈಗಿನಿಂದಲೇ ನಿಯತಾತ್ಮನಾಗಿ ನಿನ್ನ ಪತ್ನಿಯೊಡನೆ ಈ ರಾತ್ರಿಯನ್ನು ಕಳೆಯಬೇಕು. ರಾತ್ರಿ ಉಪವಾಸವಿದ್ದು ದರ್ಭಾಸ್ತರಣದಲ್ಲಿ ಮಲಗಬೇಕು. ಅಪ್ರಮತ್ತರಾದ ನಿನ್ನ ಸ್ನೇಹಿತರು ಈ ರಾತ್ರಿ ನಿನ್ನನ್ನು ಬಹಳ ಜಾಗರೂಕತೆಯಿಂದ

ಪಡೆಯುವುದರಿಂದಲೂ ಪರಿಹರಿಸಿಕೊಳ್ಳಬೇಕು. ಆದರೆ ಕ್ಷತ್ರಿಯನಿಗೆ ಐದು ಋಣಗಳೆಂಬುದು ದಶರಥನ ಮಾತಿನಿಂದ ಸ್ಪಷ್ಟವಾಗಿದೆ. ವಿಪ್ರಋಣ ಎಂದರೆ ಬ್ರಾಹ್ಮಣನಿಗೆ ದಾನಮಾಡುವುದು ಮತ್ತು ಆತ್ಮಋಣ ಎಂದರೆ ವಿಹಿತವಾದ ಸುಖೋಪಭೋಗಗಳನ್ನು ಅನುಭವಿಸುವುದು. ಇವುಗಳೆರಡೂ ಕ್ಷತ್ರಿಯನು ಪರಿಹರಿಸಿಕೊಳ್ಳಬೇಕಾದ ವಿಶೇಷ ಋಣಗಳು. ಅನಿಷಿದ್ಧಸುಖತ್ಯಾಗೀ ಪಶುರೇವ ನ ಸಂಶಯಃ ಎಂಬ ಉಕ್ತಿಯಂತೆ ಧರ್ಮನಿಷಿದ್ಧವಲ್ಲದ ಉಪಭೋಗವಸ್ತುಗಳನ್ನು ಪಡೆದು ಸುಖವನ್ನನುಭವಿಸದವನು ಪಶುವಿಗೆ ಸಮಾನನೆನಿಸುತ್ತಾನೆ. ಆದುದರಿಂದ ಶರೀರಸುಖವನ್ನೂ ನಿರ್ಲಕ್ಷಿಸದಿರುವುದು ರಾಜಧರ್ಮವಾಗಿದೆ.

ರಕ್ಷಿಸಲಿ. 'ಭವನ್ತಿ ಬಹುವಿಘ್ನಾನಿ ಕಾರ್ಯಾಣ್ಯೇವಂವಿಧಾನಿ ಹಿ ॥–ಈ ವಿಧವಾದ ಮಹಾಕಾರ್ಯಗಳು ಅನೇಕವಿಧವಾದ ವಿಘ್ನಗಳಿಂದ ಕೂಡಿರುತ್ತವೆ.' ಮೇಲಾಗಿ ನಮ್ಮಿಂದ ಸೋದರಮಾವನ ಮನೆಗೆ ಕಳುಹಿಸಲ್ಪಟ್ಟಿರುವ ಭರತನು ಹಿಂದಿರುಗಿ ಬರುವುದರೊಳಗಾಗಿ ನಿನಗೆ ಪಟ್ಟಾಭಿಷೇಕವಾಗಬೇಕು. ಆದುದರಿಂದ ಇದೇ ಸರಿಯಾದ ಕಾಲವೆಂಬುದು ನನ್ನ ಅಭಿಪ್ರಾಯವಾಗಿದೆ. ನಿನ್ನ ತಮ್ಮನು ಸತ್ಪುರುಷರ ಮಾರ್ಗದಲ್ಲಿಯೇ ನಡೆಯತಕ್ಕವನು ; ಅಣ್ಣನಾದ ನಿನ್ನನ್ನೇ ಅನುಸರಿಸಿ ಇರುವವನು ; ಧರ್ಮಾತ್ಮನು ; ದಯಾಪರನು ; ಜಿತೇಂದ್ರಿಯನು. ಇದರಲ್ಲಿ ಯಾವ ಸಂಶಯವೂ ಇಲ್ಲ. ಆದರೂ :

ಕಿಂ ತು ಚಿತ್ತಂ ಮನುಷ್ಯಾಣಾಮನಿತ್ಯಮಿತಿ ಮೇ ಮತಿಃ ।
ಸತಾಂ ಚ ಧರ್ಮನಿತ್ಯಾನಾಂ ಕೃತಶೋಭಿ ಚ ರಾಘವ ॥೨೭॥

ಮಾನವರ ಮನಸ್ಸು ಸ್ಥಿರವಲ್ಲವೆಂಬುದು ನನ್ನ ಖಚಿತವಾದ ಅಭಿಪ್ರಾಯವಾಗಿದೆ. ಕೆಲವು ಸಮಯಗಳಲ್ಲಿ ಧರ್ಮನಿರತರಾದ ಸತ್ಪುರುಷರ ಮನಸ್ಸೂ ತತ್ತನ್ನಿಮಿತ್ತವಾದ ರಾಗ-ದ್ವೇಷಾದಿಗಳಿಂದ ಕೂಡಿರುತ್ತದೆ."*

ದಶರಥನು ಮರುದಿನ ನಡೆಯಲಿರುವ ಪಟ್ಟಾಭಿಷೇಕದ ವಿಷಯವಾಗಿ ಹೀಗೆ ಹೇಳಿ ಶ್ರೀರಾಮನು ತನ್ನ ಅರಮನೆಗೆ ಹಿಂದಿರುಗಲು ಅನುಮತಿಸಿದನು. ಶ್ರೀರಾಮನು ದಶರಥನಿಗೆ ಪುನಃ ಅಭಿವಾದನಪೂರ್ವಕವಾಗಿ

---

* 'ಧರ್ಮನಿತ್ಯಾನಾಂ ಸತಾಂ ಕೃತಶೋಭಿ'–ಇಷ್ಟುಮಾತ್ರ ಈ ಶ್ಲೋಕದ ಉತ್ತರಾರ್ಧದಲ್ಲಿದೆ. ಧರ್ಮನಿತ್ಯರಾದ ಸತ್ಪುರುಷರ ಕರ್ಮಗಳು (ಯಾವಾಗಲೂ) ಶೋಭಿಸುತ್ತವೆ–ಎಂದು ಸಾಧಾರಣವಾಗಿ ಅರ್ಥಮಾಡಬಹುದು. ಆದರೆ ಇಲ್ಲಿಯ ಸಂದರ್ಭಕ್ಕೆ ಈ ಅರ್ಥವು ಸರಿಹೊಂದುವುದಿಲ್ಲ. ಆದುದರಿಂದ 'ಚಿತ್ತಂ' ಎಂಬ ಪದದ ಅನುವೃತ್ತಿಯನ್ನು ಎಲ್ಲ ವ್ಯಾಖ್ಯಾನಕಾರರೂ ಮಾಡಿಕೊಂಡು 'ಕೃತಶೋಭಿ' ಎಂಬುದಕ್ಕೆ ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ವಿಧದಲ್ಲಿ ವ್ಯಾಖ್ಯೆ ಮಾಡಿರುತ್ತಾರೆ. (೧) ಕೃತಶೋಭಿ=ತತ್ತನ್ನಿಮಿತ್ತಕೃತೇನ ರಾಗದ್ವೇಷಾದಿನಾ ಶೋಭತೇ=ಯಜ್ಯತೇ–ತತ್ತನ್ನಿಮಿತ್ತವಾದ ರಾಗ-ದ್ವೇಷಾದಿಗಳಿಂದ ಕೂಡಿರುತ್ತದೆ. ಹೀಗೆ ವ್ಯಾಖ್ಯೆಮಾಡುವಾಗ ಧರ್ಮನಿತ್ಯಾನಾಂ ಎಂಬುದನ್ನು ಧರ್ಮನಿತ್ಯಾನಾಮಪಿ ಚಿತ್ತಂ ಎಂದು ಈ ವ್ಯಾಖ್ಯಾನಕಾರರು ಅಪಿಶಬ್ದದ ಅಧ್ಯಾಹಾರವನ್ನೂ ಮಾಡಿಕೊಂಡಿರುತ್ತಾರೆ. ಧರ್ಮಾತ್ಮರಾದವರ ಮನಸ್ಸೂ ಕೂಡ ಕೆಲವು ಸಮಯಗಳಲ್ಲಿ ಆಯಾ ಕಾರ್ಯನಿಮಿತ್ತವಾದ ರಾಗ-ದ್ವೇಷಾದಿಗಳಿಂದ ಕೂಡಿರುತ್ತದೆ. (೨) ಕೃತೇನ

ನಮಸ್ಕಾರಮಾಡಿ ತನ್ನ ಅರಮನೆಗೆ ತೆರಳಿದನು. ತಂದೆಯಾದ ದಶರಥನಿಂದ ಉದ್ದಿಷ್ಟವಾದ ತನ್ನ ಪಟ್ಟಾಭಿಷೇಕದ ಪೂರ್ವಾಂಗವಾಗಿ ತಾನೂ ಮತ್ತು ಪತ್ನಿಯಾದ ಸೀತೆಯೂ ನಿಮಯದಿಂದಿರಬೇಕಾಗಿದ್ದ ವಿಷಯವನ್ನು ಸೀತೆಯೊಡನೆ ಹೇಳುವ ಸಲುವಾಗಿ ತನ್ನ ಅರಮನೆಗೆ ಹೋದನು. (ಆದರೆ ಅರಮನೆಯಲ್ಲಿ ಸೀತೆಯಿಲ್ಲದಿರುವುದನ್ನು ಕಂಡು) ಆ ಕ್ಷಣದಲ್ಲಿಯೇ ಅಲ್ಲಿಂದ ಹೊರಟು ತಾಯಿಯ ಅಂತಃಪುರಕ್ಕೆ ಹೋದನು. ಅಲ್ಲಿ ರೇಷ್ಮೆಯ ಸೀರೆಯನ್ನುಟ್ಟು ವಿನಮ್ರಳಾಗಿ ದೇವಮಂದಿರದಲ್ಲಿ ಮೌನವಾಗಿ ಕುಳಿತು ಮಗನ ಅಭ್ಯುದಯವನ್ನೇ ಯಾಚಿಸುತ್ತಿದ್ದ ತನ್ನ ತಾಯಿಯನ್ನು ಶ್ರೀರಾಮನು ಕಂಡನು. ಶ್ರೀರಾಮನು ಕೌಸಲ್ಯೆಯ ಅಂತಃಪುರಕ್ಕೆ ಹೋಗುವ ಮೊದಲೇ ಶ್ರೀರಾಮನ ಪಟ್ಟಾಭಿಷೇಕದ ಸಂತೋಷವಾರ್ತೆಯನ್ನು ಕೌಸಲ್ಯೆಗೆ ತಿಳಿಸಲು ಸುಮಿತ್ರಾದೇವಿಯೂ ಲಕ್ಷ್ಮಣನೊಡನೆ ಕೌಸಲ್ಯೆಯ ಅಂತಃಪುರಕ್ಕೆ ಹೋಗುತ್ತಿದ್ದಳು. ಶುಭವಾರ್ತೆಯನ್ನು ಸೀತೆಗೂ ತಿಳಿಸುವ ಸಲುವಾಗಿ ಕೌಸಲ್ಯೆಯು ಅವಳನ್ನೂ ತನ್ನ ಅಂತಃಪುರಕ್ಕೆ ಕರೆಸಿಕೊಂಡಿದ್ದಳು. ಶ್ರೀರಾಮನು ತಾಯಿಯ ಬಳಿಗೆ ಹೋಗುವ ವೇಳೆಗೆ ಲಕ್ಷ್ಮಣ-ಸುಮಿತ್ರಾ-ಸೀತೆಯರೂ ಅಲ್ಲಿಯೇ ಇದ್ದರು. ಪುಷ್ಯನಕ್ಷತ್ರಯೋಗವಿರುವ ಮರುದಿನವೇ ತನ್ನ ಪ್ರಿಯಪುತ್ರನಾದ ಶ್ರೀರಾಮನಿಗೆ ಯುವರಾಜಪದವಿಯಲ್ಲಿ ಪಟ್ಟಾಭಿಷೇಕ ವಾಗುವುದೆಂಬ ಶುಭವಾರ್ತೆಯನ್ನು ಕೇಳಿದ ಕೌಸಲ್ಯೆಯು ಪ್ರಾಣಾಯಾಮ

ಕರ್ತವ್ಯಕರ್ಮಣಃ ಸಿದ್ಧ್ಯೈವ ಶೋಭತೇ = ಕರ್ತವ್ಯಕಾರ್ಯದ ಸಿದ್ಧಿಯಿಂದಲೇ ಪರಿಶೋಭಿಸುತ್ತದೆ. (೩) ಕೃತೇನ ಪರಸ್ಪರೋಪಕಾರಣೇ ಶೋಭತೇ ನ ತು ಭೇದಂ ಪ್ರಾಪ್ನೋತಿ. ಧರ್ಮನಿರತರಾದವರ ಮನಸ್ಸು ಪರಸ್ಪರವಾಗಿ ಉಪಕಾರಮಾಡುವುದರಿಂದ ಶೋಭಿಸುತ್ತದೆಯೇ ಹೊರತು ಭೇದವನ್ನು ಹೊಂದುವುದಿಲ್ಲ. (೪) ಕೃತೇನ = ಪರಕೃತಮಿತ್ರಭೇಧಾದಿನಾ ಶೋಭಿತಂ ಶೀಲಂ ಅಸ್ಯಾಸ್ತೀತಿ ಕೃತಶೋಭಿ–ಬೇರೆಯವರು ಮಾಡುವ ಮಿತ್ರಭೇದಾದಿಗಳಿಂದ ಧರ್ಮನಿರತರ ಮನಸ್ಸು ಭಿನ್ನವಾಗುತ್ತದೆ. ಶೋಭಿಸುವ ಶೀಲವುಳ್ಳದ್ದಾಗುತ್ತದೆ. (೫) ಸತಾಂ ಚಿತ್ತಂ ಕೃತೇನ ಕಾರ್ಯೇಣ ಶೋಭತೇ ನ ತು ಕರಿಷ್ಯಮಾಣೇನ = ಕೃತಂ ಕಾರ್ಯಮನುಮೋದತೇ ನ ತು ಕರಿಷ್ಯಮಾಣಮಿತಿ ಭಾವಃ. ಸತ್ಪುರುಷರ ಮನಸ್ಸು ಮಾಡಿದ ಕಾರ್ಯದಿಂದ ಶೋಭಿಸುತ್ತದೆ. ಮುಂದೆಮಾಡುವ ಕಾರ್ಯದಿಂದಲ್ಲ. ಎಂದರೆ ಮಾಡಿದ ಒಳ್ಳೆಯ ಕಾರ್ಯವನ್ನು ಅನುಮೋದಿಸುತ್ತದೆಯೇ ಹೊರತು ಮಾಡಬೇಕೆಂದಿರುವುದನ್ನಲ್ಲ.

ಪೂರ್ವಕವಾಗಿ ಹೃನ್ಮಂದಿರದಲ್ಲಿ ಪುರುಷಸೂಕ್ತಪ್ರತಿಪಾದ್ಯನಾದ ಜನಾರ್ದನ ಸ್ವಾಮಿಯನ್ನು ಧ್ಯಾನಮಾಡುತ್ತಿದ್ದಳು. ಹೀಗೆ ನಿಯಮದಿಂದ ಧ್ಯಾನ ಮಾಡುತ್ತಾ ಕುಳಿತಿದ್ದ ತಾಯಿಯ ಬಳಿಗೆ ಶ್ರೀರಾಮನು ಹೋಗಿ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಅವಳನ್ನು ಸಂತೋಷಗೊಳಿಸುತ್ತಾ ಈ ಮಾತನ್ನು ಹೇಳಿದನು :

"ಅಮ್ಮಾ! ಪ್ರಜಾಪಾಲನೆಮಾಡಲು ನಾನು ನನ್ನ ತಂದೆಯಿಂದ ಆಜ್ಞಪ್ತನಾಗಿದ್ದೇನೆ. ತಂದೆಯ ಅನುಶಾಸನದಂತೆ ನಾಳೆಯೇ ನನಗೆ ಪಟ್ಟಾಭಿಷೇಕವಾಗಲಿದೆ. ಈ ರಾತ್ರಿಯಲ್ಲಿ ನಾನು ಸೀತೆಯೊಡನೆ ಜಿತೇಂದ್ರಿಯ ನಾಗಿ ಉಪವಾಸದಿಂದಿದ್ದು ದರ್ಭಾಸ್ತರಣದಲ್ಲಿ ಮಲಗಬೇಕು. ಪುರೋ ಹಿತರು ಹೇಳಿದ್ದ ಈ ವಿಷಯವನ್ನು ತಂದೆಯು ನನ್ನೊಡನೆ ಹೇಳಿದನು.

ಅಮ್ಮಾ! ನಾಳೆಯೇ ನಡೆಯಬೇಕಾಗಿರುವ ಪಟ್ಟಾಭಿಷೇಕಕ್ಕೆ ಪೂರ್ವಾಂಗವಾಗಿ ಮಾಡಬೇಕಾಗಿರುವ ವಿಧ್ಯುಕ್ತವಾದ ಮತ್ತು ಯೋಗ್ಯವಾದ ಮಂಗಳಕಾರ್ಯಗಳನ್ನು ನನ್ನಿಂದಲೂ ಮತ್ತು ಸೀತೆಯಿಂದಲೂ ಮಾಡಿಸು."

ಶ್ರೀರಾಮನಿಗೆ ಪಟ್ಟಾಭಿಷೇಕವಾಗಬೇಕೆಂಬುದು ಕೌಸಲ್ಯಾದೇವಿಯ ಬಹಳ ದಿವಸಗಳ ಬಯಕೆಯಾಗಿದ್ದಿತು. ಆ ಬಯಕೆಯು ಪೂರ್ಣವಾಗುವ ದಿನವು ಸಮೀಪಿಸಿರುವುದಕ್ಕಾಗಿ ಕೌಸಲ್ಯೆಗೆ ಅಮಿತಾನಂದವಾಯಿತು. ಶ್ರೀರಾಮನು ಹೇಳಿದ ಮಾತುಗಳನ್ನು ಕೇಳಿ ಅವಳು ಆನಂದಬಾಷ್ಪಗಳನ್ನು ಸುರಿಸುತ್ತಾ ಹೇಳಿದಳು :

ವತ್ಸ ರಾಮ ಚಿರಂ ಜೀವ ಹತಾಸ್ತೇ ಪರಿಪನ್ಥಿನಃ ।
ಜ್ಞಾತೀನ್ಮೇ ತ್ವಂ ಶ್ರಿಯಾ ಯುಕ್ತಃ ಸುಮಿತ್ರಾಯಾಶ್ಚ ನನ್ದಯ ॥

"ಮಗು! ರಾಮ! ಚಿರಂಜೀವಿಯಾಗಿ ಬಾಳು. ನಿನ್ನ ಶತ್ರುಗಳೆಲ್ಲರೂ ವಿನಾಶಹೊಂದಲಿ. ರಾಜ್ಯಶ್ರೀಯನ್ನು ಪಡೆದ ನೀನು ನನ್ನನ್ನೂ, ಸುಮಿತ್ರಾ ದೇವಿಯನ್ನೂ ಮತ್ತು ನಮ್ಮ ಜ್ಞಾತಿ-ಬಾಂಧವರನ್ನೂ ಧರ್ಮಮೂಲ ವಾದ ರಾಜ್ಯಭಾರದಿಂದ ಆನಂದಭರಿತರನ್ನಾಗಿ ಮಾಡು. ಶುಭಕರ ವಾದ (ಪುನರ್ವಸು) ನಕ್ಷತ್ರದಲ್ಲಿ ನನ್ನಲ್ಲಿ ನೀನು ಜನ್ಮತಾಳಿರುವೆ. ನಿನ್ನ

ಕಲ್ಯಾಣಗುಣಗಳಿಂದ ನೀನು ನಿನ್ನ ತಂದೆಯನ್ನು ಆರಾಧಿಸಿರುವೆ. ನಿನ್ನ ಕಲ್ಯಾಣಗುಣಗಳಿಂದ ನಿನ್ನ ತಂದೆಯು ಸಂತೃಪ್ತನಾಗಿದ್ದಾನೆ. ನಿಶ್ಚಯವಾಗಿಯೂ ಇದು ಅತ್ಯಂತಸಂತೋಷದ ವಿಷಯವಾಗಿದೆ. ವತ್ಸ! ಕಮಲ ದಳಲೋಚನನಾದ ಪರಮಪುರುಷನಲ್ಲಿ ನಾನು ಮಾಡಿಕೊಂಡ ಪ್ರಾರ್ಥನೆಯೂ ಮತ್ತು ಕ್ಲೇಶಸಹನೆಯೂ (ವ್ರತಗಳೂ) ಇಂದಿಗೆ ಸಫಲ ವಾದುವು. ಇಕ್ಷ್ವಾಕುವಂಶದವರ ಸಾಮ್ರಾಜ್ಯಶ್ರೀಯು ನಾಳೆಯಿಂದ ನಿನ್ನ ಆಶ್ರಯವನ್ನು ಪಡೆಯುವಳು. ಈ ಅಮೋಘಫಲವನ್ನು ನಾನಿಂದು ಪಡೆದು ಕೊಂಡೆನು.”

ತಾಯಿಯು ಹೀಗೆ ಹೇಳಿದನಂತರ ಶ್ರೀರಾಮನು, ಕೈಮುಗಿದು ಕೊಂಡು ವಿನೀತನಾಗಿ ಕುಳಿತಿದ್ದ ತಮ್ಮನಾದ ಲಕ್ಷ್ಮಣನನ್ನು ನೋಡಿ ಮುಗುಳ್ನಗೆಯೊಡನೆ ಹೇಳಿದನು :

ಲಕ್ಷ್ಮಣೇಮಾಂ ಮಯಾ ಸಾರ್ಧಂ ಪ್ರಶಾಧಿ ತ್ವಂ ವಸುಂಧರಾಮ್ ।
ದ್ವಿತೀಯಂ ಮೇಽನ್ತರಾತ್ಮಾನಾಂ ತ್ವಾಮಿಯಂ ಶ್ರೀರುಪಸ್ಥಿತಾ ॥೪೩॥

ಸೌಮಿತ್ರೇ ಭುಂಕ್ಷ್ವ ಭೋಗಾಂಸ್ತ್ವಮಿಷ್ಟಾನ್ರಾಜ್ಯಫಲಾನಿ ಚ ।
ಜೀವಿತಂ ಚ ಹಿ ರಾಜ್ಯಂ ಚ ತ್ವದರ್ಥಮಭಿಕಾಮಯೇ ॥೪೪॥

“ಲಕ್ಷ್ಮಣ! ನನ್ನೊಡನೆ ನೀನೂ ಈ ರಾಜ್ಯವನ್ನು ಶಾಸನಮಾಡು. ನನ್ನ ಎರಡನೆಯ ಅಂತರಾತ್ಮನ ರೂಪದಲ್ಲಿರುವ ನಿನಗೂ ಈ ಇಕ್ಷ್ವಾಕುಕುಲದ ರಾಜ್ಯಶ್ರೀಯು ಸ್ವಾಭಾವಿಕವಾಗಿಯೇ ಪ್ರಾಪ್ತವಾಗಿರುವುದು. ನಾನು ರಾಜನಾದೆನೆಂದರೆ, ನನ್ನ ಅಂತರಾತ್ಮನ ರೂಪದಲ್ಲಿರುವ ನೀನೂ ರಾಜನಾದಂತೆಯೇ ಸರಿ. ನಿನಗಿಷ್ಟವಾದ ಸುಖೋಪಭೋಗಗಳನ್ನು ಅನುಭವಿಸು. ಸಾಮ್ರಾಜ್ಯಫಲಗಳಾದ ಅನರ್ಘವಸ್ತ್ರಾಭರಣಗಳನ್ನು ಧರಿಸು. ನಿಜವಾಗಿ ಹೇಳುವುದಾದರೆ ನಾನು ಜೀವಿಸಿರುವುದು, ನಾನು ನಾಳೆ ಈ ಸಾಮ್ರಾಜ್ಯಭಾರವನ್ನು ವಹಿಸಿಕೊಳ್ಳುವುದು ನಿನ್ನ ಸಲುವಾಗಿಯೇ. ನೀನು ಸುಖೋಪಭೋಗಗಳನ್ನು ಅನುಭವಿಸಲೆಂಬ ಅಭಿಲಾಷೆಯಿಂದಲೇ ನಾನು ಯುವರಾಜನಾಗಲು ಒಪ್ಪಿದ್ದೇನೆ.”

ಶ್ರೀರಾಮನು ಲಕ್ಷ್ಮಣನಿಗೆ ಹೀಗೆ ಹೇಳಿ, ಕೌಸಲ್ಯೆಗೂ-ಸುಮಿತ್ರೆಗೂ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಿ, ತನಗೂ ಮತ್ತು ಸೀತೆಗೂ

ತನ್ನ ಅರಮನೆಗೆ ಹೋಗಲು ಅನುಮತಿಸುವಂತೆ ತಾಯಂದಿರನ್ನು ಪ್ರಾರ್ಥಿಸಿ, ಅವರಿಂದ ಅನುಜ್ಞೆಯನ್ನು ಪಡೆದು ಸೀತೆಯೊಡನೆ ತನ್ನ ನಿವಾಸಕ್ಕೆ ತೆರಳಿದನು.

೪ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೫ನೆಯ ಸರ್ಗ

ದಶರಥನ ಸಲಹೆಯಂತೆ ವಸಿಷ್ಠರು ಸೀತಾ-ರಾಮರಿಗೆ ಉಪವಾಸವ್ರತವನ್ನು ಕೈಗೊಳ್ಳಲು ಸಂಕಲ್ಪಮಾಡಿಸಿದುದು : ಸೀತಾ-ರಾಮರು ಉಪವಾಸವ್ರತವನ್ನು ಕೈಗೊಂಡರೆಂಬ ವಾರ್ತೆಯನ್ನು ವಸಿಷ್ಠರು ದಶರಥನಿಗೆ ತಿಳಿಯಪಡಿಸಿದುದು

ಸಂದಿಶ್ಯ ರಾಮಂ ನೃಪತಿಃ ಶ್ವೋಭಾವಿನ್ಯಭಿಷೇಚನೇ ।
ಪುರೋಹಿತಂ ಸಮಾಹೂಯ ವಸಿಷ್ಠಮಿದಮಬ್ರವೀತ್ ॥೧॥

ದಶರಥನು ಶ್ರೀರಾಮನಿಗೆ ಮರುದಿನ ನಡೆಯಬೇಕಾಗಿದ್ದ ಪಟ್ಟಾಭಿಷೇಕದ ವಿಷಯದಲ್ಲಿ ಸೂಕ್ತವಾದ ಸಂದೇಶವನ್ನಿತ್ತು ಕಳುಹಿಸಿಕೊಟ್ಟನಂತರ ಪುರೋಹಿತರಾದ ವಸಿಷ್ಠರನ್ನು ಕರೆಯಿಸಿ ಹೇಳಿದನು :

"ತಪೋಧನರೇ! ಶ್ರೀ, ಯಶಸ್ಸು ಮತ್ತು ರಾಜ್ಯಗಳ ಲಾಭಕ್ಕಾಗಿ ವ್ರತನಿಷ್ಠನಾದ ಶ್ರೀರಾಮನು ಕೈಗೊಳ್ಳಬೇಕಾಗಿರುವ ಉಪವಾಸಾದಿ ನಿಯಮಾನುಷ್ಠಾನಗಳಿಗೆ ಯಥೋಚಿತವಾಗಿ ಯಥಾವಿಧಿಯಾಗಿ ಸಂಕಲ್ಪವನ್ನು ಮಾಡಿಸಿರಿ."

ದಶರಥನು ಹೀಗೆ ಹೇಳಲು ಮಂತ್ರವಿದರಲ್ಲಿ ಶ್ರೇಷ್ಠರಾದ, ದೃಢವ್ರತರಾದ, ಪೂಜ್ಯರಾದ ವಸಿಷ್ಠರು ಹಾಗೆಯೇ ಆಗಲೆಂದು ದಶರಥನಿಗೆ ಹೇಳಿ, ಮಂತ್ರಕೋವಿದನಾದ ಶ್ರೀರಾಮನನ್ನು ಉಪವಾಸವ್ರತದಲ್ಲಿ ತೊಡಗಿಸಲು ಬ್ರಾಹ್ಮಣರ ಪ್ರಯಾಣಕ್ಕೆ ಯೋಗ್ಯವಾದ ಮತ್ತು ಶ್ರೇಷ್ಠವಾದ ರಥದಲ್ಲಿ ಕುಳಿತು ಶ್ರೀರಾಮನ ಭವನಕ್ಕೆ ಹೊರಟರು. ಶ್ರೀರಾಮನ ಅರಮನೆಗಿದ್ದ ಮೂರು ಪ್ರಾಕಾರಗಳನ್ನೂ ರಥದಿಂದಲೇ ದಾಟಿ ಬಿಳಿಯದಾದ ಮೋಡದಂತೆ ಪ್ರಕಾಶಮಾನವಾಗಿದ್ದ ಶ್ರೀರಾಮನ ಅರಮನೆಯನ್ನು ಮುನಿಶ್ರೇಷ್ಠರಾದ ವಸಿಷ್ಠರು ಪ್ರವೇಶಿಸಿದರು.

ಅರಮನೆಯೊಳಗೆ ಪ್ರವೇಶಿಸುತ್ತಿದ್ದ, ಪೂಜಾರ್ಹರಾದ ವಸಿಷ್ಠರನ್ನು ಗೌರವಿಸಿ ಒಳಕ್ಕೆ ಕರೆತರಲು ಶ್ರೀರಾಮನು ಸಂಭ್ರಮದಿಂದ ಅರಮನೆಯ ಹೊರಾಂಗಣಕ್ಕೆ ಬಂದನು. ಮನೀಷಿಗಳಾದ ವಸಿಷ್ಠರ ರಥದ ಬಳಿಗೆ ಶ್ರೀರಾಮನು ಅವಸರದಿಂದಲೇ ಹೋಗಿ, ರಥದಲ್ಲಿ ಕುಳಿತಿದ್ದ ವಸಿಷ್ಠರನ್ನು ತಾನೇ ಕೈಹಿಡಿದುಕೊಂಡು ಮೆಲ್ಲ-ಮೆಲ್ಲನೆ ರಥದಿಂದ ಇಳಿಸಿದನು. ವಿನಯ ಗುಣಸಂಪನ್ನನಾದ ಶ್ರೀರಾಮನನ್ನು ಕಂಡು ವಸಿಷ್ಠರು ಪರಮಸಂತುಷ್ಟರಾಗಿ, ಅವನೊಡನೆ ಕುಶಲಪ್ರಶ್ನೆಗಳನ್ನು ಮಾಡಿ ಅವನನ್ನು ಶ್ಲಾಘಿಸಿ, ಪ್ರಿಯ ವಾರ್ತೆಯನ್ನು ಕೇಳಲು ಅರ್ಹನಾದ ಶ್ರೀರಾಮನನ್ನು ಯೌವ ರಾಜ್ಯಾಭಿಷೇಕಾದಿ ಸಂದರ್ಭೋಚಿತವಾದ ಪ್ರಿಯವಾಕ್ಯಗಳಿಂದ ಸಂತೋಷ ಗೊಳಿಸುತ್ತಾ, ತಾವು ಬಂದಿರುವ ಕಾರ್ಯನಿರ್ವಹಣೆಗಾಗಿ ಈ ಮಾತನ್ನು ಹೇಳಿದರು :

"ರಾಮ! ನಿನ್ನ ತಂದೆಯಾದ ದಶರಥನು ನಿನ್ನ ವಿಷಯದಲ್ಲಿ ಪ್ರಸನ್ನನಾಗಿರುವನು. ಈ ಕಾರಣದಿಂದಲೇ ನೀನು ನಾಳೆಯಿಂದ ರಾಜನಾಗ ಲಿರುವೆ. ಪಟ್ಟಾಭಿಷೇಕದ ಪೂರ್ವಾಂಗವಾಗಿ ನೀನಿಂದು ಸೀತೆಯೊಡನೆ ಉಪವಾಸವ್ರತವನ್ನು ಕೈಗೊಳ್ಳಬೇಕು. ಉಪವಾಸವ್ರತದ ಸಂಕಲ್ಪವನ್ನು ಮಾಡಿಸುವ ಸಲುವಾಗಿಯೇ ನಾನಿಲ್ಲಿಗೆ ಬಂದಿರುವೆನು. ನಾಳೆಯ ದಿನ ಪ್ರಾತಃಕಾಲದಲ್ಲಿಯೇ–ಯಯಾತಿಯು ನಹುಷನಿಗೆ ಪಟ್ಟಗಟ್ಟಿದಂತೆ–ನಿನ್ನ ತಂದೆಯಾದ ದಶರಥನು ನಿನಗೆ ಆದರಪೂರ್ವಕವಾಗಿ ಯೌವರಾಜ್ಯದ ಪಟ್ಟಾಭಿಷೇಕಮಾಡುತ್ತಾನೆ."

ವಸಿಷ್ಠರು ಹೀಗೆ ಹೇಳಲು ಶ್ರೀರಾಮನು ವೈದೇಹಿಯೊಡನೆ ಕರ್ಮಾನುಷ್ಠಾನಕ್ಕೆ ಸಿದ್ಧನಾದನು. ವ್ರತನಿಷ್ಠನಾದ ವೈದೇಹಿಸಹಿತನಾದ ಶ್ರೀರಾಮನನ್ನು ವಸಿಷ್ಠರು ಮಂತ್ರವತ್ತಾಗಿ ಉಪವಾಸವ್ರತದಲ್ಲಿ ತೊಡಗಿ ಸಿದರು. ಸಂಕಲ್ಪಾನಂತರದಲ್ಲಿ ರಾಜಗುರುಗಳಾದ ವಸಿಷ್ಠರು ಶ್ರೀರಾಮನಿಂದ ಸತ್ಕೃತರಾಗಿ ಮುಂದೆ ಮಾಡಬೇಕಾದ ವ್ರತನಿಯಮಗಳೆಲ್ಲವನ್ನೂ ತಿಳಿಯ ಹೇಳಿ, ಅವನ ಅನುಮತಿಯನ್ನು ಪಡೆದು ಶ್ರೀರಾಮನ ಅರಮನೆಯಿಂದ ಹೊರಟುಹೋದರು.

ಶ್ರೀರಾಮನಿಗೆ ಪಟ್ಟಾಭಿಷೇಕವಾಗುವುದೆಂಬ ಶುಭವಾರ್ತೆಯನ್ನು

ಕೇಳಿ ಪ್ರಿಯವಾದ ಮಾತುಗಳನ್ನಾಡಲು ಬಂದಿದ್ದ ಸ್ನೇಹಿತರೊಡನೆ ಶ್ರೀರಾಮನು ಮಾತನಾಡುತ್ತಾ ಸ್ವಲ್ಪಹೊತ್ತು ಸುಖವಾಗಿ ಕುಳಿತಿದ್ದನು. ಬಳಿಕ ಅವನು ಸುಹೃದರಿಂದ ಪುರಸ್ಕಾರವನ್ನು ಪಡೆದು, ಅವರೆಲ್ಲರನ್ನೂ ಆದರದಿಂದ ಅವರವರ ಮನೆಗಳಿಗೆ ಕಳುಹಿಸಿಕೊಟ್ಟು ಅಂತಃಪುರವನ್ನು ಪ್ರವೇಶಿಸಿದನು. ಶ್ರೀರಾಮನ ಪಟ್ಟಾಭಿಷೇಕವಾರ್ತೆಯನ್ನು ಕೇಳಿ ಸಂತೋಷಗೊಂಡು ಶ್ರೀರಾಮನಿಗೆ ಶುಭಾಶಯಗಳನ್ನು ಕೋರಲು ಆಗಮಿಸುತ್ತಿದ್ದ ಪುರುಷರಿಂದಲೂ ಮತ್ತು ಸ್ತ್ರೀಯರಿಂದಲೂ ತುಂಬಿಹೋಗಿದ್ದ ಶ್ರೀರಾಮನ ಅರಮನೆಯು–ಪಕ್ಷಿಗಳಿಂದಲೂ ಮತ್ತು ವಿಕಸಿತವಾದ ಕಮಲಗಳಿಂದಲೂ ಕೂಡಿದ ಸರೋವರದಂತೆಯೇ ಪ್ರಕಾಶಿಸುತ್ತಿದ್ದಿತು.

ರಾಜಭವನಸದೃಶವಾಗಿದ್ದ ಶ್ರೀರಾಮನ ಅರಮನೆಯಿಂದ ಹೊರಟ ವಸಿಷ್ಠರು ಜನರಿಂದ ತುಂಬಿಹೋಗಿದ್ದ ರಾಜಮಾರ್ಗವನ್ನು ಕಂಡರು. ಶ್ರೀರಾಮನ ಪಟ್ಟಾಭಿಷೇಕವಾರ್ತೆಯನ್ನು ಕೇಳಿ ಕುತೂಹಲಾವಿಷ್ಟರಾಗಿ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದ ಜನರ ಗುಂಪುಗಳಿಂದ ಅಯೋಧ್ಯಾ ಪಟ್ಟಣದ ಎಲ್ಲ ಬೀದಿಗಳೂ ತುಂಬಿಹೋಗಿದ್ದುವು. ಸಮುದ್ರದ ಅಲೆಗಳೋ ಪಾದಿಯಲ್ಲಿ ಆ ಜನಸಮೂಹವು ಒಂದೆಡೆಯಿಂದ ಮತ್ತೊಂದೆಡೆಗೆ ಚಲಿಸು ತ್ತಿದ್ದಿತು. ಅಲೆಯ ರೂಪವಾದ ಜನರ ಒಂದು ಗುಂಪು ಮತ್ತೊಂದು ಗುಂಪಿ ನೊಡನೆ ಸೇರಿದಾಗ ಶ್ರೀರಾಮಪಟ್ಟಾಭಿಷೇಕದ ವಾರ್ತೆಯನ್ನು ಪರಸ್ಪರ ವಿನಿಮಯಮಾಡಿಕೊಂಡು ಸಂತೋಷಾಧಿಕ್ಯದಿಂದ ನಿನಾದಮಾಡುತ್ತಿದ್ದರು. ಅದರಿಂದಾಗಿ ರಾಜಮಾರ್ಗವು–ಅಲೆಗಳ ಸಂಘಟ್ಟನೆಯಿಂದ ನಿನಾದಿತ ವಾಗುವ ಸಮುದ್ರದಂತೆಯೇ ಕಾಣುತ್ತಿದ್ದಿತು. ಶ್ರೀರಾಮನಿಗೆ ಪಟ್ಟಾಭಿಷೇಕ ವಾಗುವುದೆಂದು ತಿಳಿದೊಡನೆಯೇ ಪುರವಾಸಿಗಳು ಅಯೋಧ್ಯಾಪಟ್ಟಣದ ಎಲ್ಲ ಬೀದಿಗಳನ್ನೂ ನೀರುಹಾಕಿ ಶುದ್ಧಿಗೊಳಿಸಿದರು. ಸಂತೋಷಭರಿತರಾದ ಪ್ರಜೆಗಳು ತಮ್ಮ ಮನೆಗಳನ್ನು ಹೂಮಾಲೆಗಳಿಂದಲೂ, ತಳಿರು-ತೋರಣ ಗಳಿಂದಲೂ ಅಲಂಕರಿಸಿದರು. ತಮ್ಮ-ತಮ್ಮ ಮನೆಗಳ ಮೇಲೆ ಎತ್ತರವಾದ ಪತಾಕೆಗಳನ್ನು ಹಾರಿಸಿದರು. ಅಯೋಧ್ಯೆಯಲ್ಲಿ ವಾಸಮಾಡುತ್ತಿದ್ದ ಸ್ತ್ರೀ-ಬಾಲ-ವೃದ್ಧಸಹಿತರಾದ ಪ್ರಜೆಗಳು ಶ್ರೀರಾಮನ ಪಟ್ಟಾಭಿಷೇಕವನ್ನು ನೋಡುವ ಆಕಾಂಕ್ಷೆಯಿಂದ ಬೇಗನೆ ಸೂರ್ಯೋದಯವಾಗಲೆಂದು ತವಕಿ

ಸುತ್ತಿದ್ದರು. ಪ್ರಜೆಗಳ ಅಲಂಕಾರಕ್ಕೆ ಕಾರಣಭೂತವಾಗಿದ್ದ, ಪ್ರಜೆಗಳಿಗೆ ಆನಂದವನ್ನು ಹೆಚ್ಚಿಸುತ್ತಿದ್ದ ಶ್ರೀರಾಮನ ಪಟ್ಟಾಭಿಷೇಕೋತ್ಸವವನ್ನು ನೋಡಲು ಅಯೋಧ್ಯೆಯ ಪ್ರಜೆಗಳು ಬಹಳ ಉತ್ಸುಕರಾಗಿದ್ದರು. ಜನ ನಿಬಿಡವಾಗಿದ್ದ ರಾಜಮಾರ್ಗವನ್ನು ವೀಕ್ಷಿಸುತ್ತಾ ರಥದ ಮೇಲೆ ಕುಳಿತು ಹೋಗುತ್ತಿದ್ದ ವಸಿಷ್ಠರು, ರಥವು ಮುಂದೆ ಹೋಗದಂತೆ ಹಾದಿಯಲ್ಲಿ ಗುಂಪಾಗಿ ನಿಂತಿರುತ್ತಿದ್ದ ಜನರನ್ನು ಕ್ಷಣ-ಕ್ಷಣಕ್ಕೂ ವ್ಯವಸ್ಥಿತವಾಗಿ ಪಕ್ಕಕ್ಕೆ ನಿಲ್ಲುವಂತೆ ಸೂಚನೆಕೊಡುತ್ತಿದ್ದುದನ್ನು ನೋಡಿದರೆ–ಅವರು ರಾಮಾಭಿ ಷೇಕದ ಸಲುವಾಗಿ ಜನರನ್ನು ವ್ಯೂಹಕ್ರಮದಲ್ಲಿ ನಿಲ್ಲಿಸುತ್ತಿರುವರೋ ಎಂಬಂತೆ ಕಾಣುತ್ತಿದ್ದಿತು. ಹೀಗೆ ವಸಿಷ್ಠರು ಜನಸಮುದಾಯದ ಮಧ್ಯದಲ್ಲಿ ಮೆಲ್ಲ-ಮೆಲ್ಲನೆ ಪ್ರಯಾಣಮಾಡುತ್ತಾ ದಶರಥನ ಅರಮನೆಯನ್ನು ಸೇರಿ ದರು. ಅರಮನೆಯ ಮುಂದೆ ರಥದಿಂದಿಳಿದು–ಬಿಳಿಯದಾದ ಮೋಡ ಗಳಿಂದ ಆಚ್ಛಾದಿತವಾದ ಪರ್ವತಶಿಖರಸದೃಶವಾಗಿದ್ದ ದೇವರಾಜನಾದ ಇಂದ್ರನನ್ನು ಸಂದರ್ಶಿಸಲು ಹೋಗುವಂತೆ–ದಶರಥನನ್ನು ಸಂದರ್ಶಿಸಲು ವಸಿಷ್ಠರು ಸಭಾಮಂದಿರವನ್ನು ಪ್ರವೇಶಿಸಿದರು. ಆಗಮಿಸಿದ ವಸಿಷ್ಠರನ್ನು ನೋಡಿದೊಡನೆಯೇ ದಶರಥನು ಸಿಂಹಾಸನದಿಂದ ಮೇಲೆದ್ದು ಅವರನ್ನು ಆದರದಿಂದ ಸ್ವಾಗತಿಸಿ ಪ್ರಶ್ನಿಸಿದನು :

"ಶ್ರೀರಾಮನು ಪಟ್ಟಾಭಿಷೇಕಕರ್ಮಾಂಗವಾದ ಉಪವಾಸವ್ರತವನ್ನು ಕೈಗೊಂಡನೇ?"

"ಮಹಾರಾಜ! ನೀನು ಹೇಳಿದ ಕಾರ್ಯವನ್ನು ಯಥಾವತ್ತಾಗಿ ಪೂರ್ಣಗೊಳಿಸಿರುವೆನು"–ಎಂದು ವಸಿಷ್ಠರು ಉತ್ತರಿಸಿದರು.

ವಸಿಷ್ಠರನ್ನು ನೋಡಿ ದಶರಥನು ಪ್ರತ್ಯುತ್ಥಾನಮಾಡಿ ಗೌರವಿಸಿ ದಂತೆಯೇ ಆ ಸಭೆಯಲ್ಲಿ ಉಪವಿಷ್ಟರಾಗಿದ್ದ ರಾಜರೂ ಮತ್ತು ಪ್ರಜೆಗಳೂ ಕೂಡ ಪ್ರತ್ಯುತ್ಥಾನಮಾಡಿ ವಸಿಷ್ಠರನ್ನು ಗೌರವಿಸಿದರು. ಬಳಿಕ ದಶರಥನು ಅಂದಿನ ಸಭೆಯನ್ನು ವಿಸರ್ಜಿಸಿ ಗುರುಗಳಾದ ವಸಿಷ್ಠರ ಅಪ್ಪಣೆಯನ್ನು ಪಡೆದು–ಸಿಂಹವು ಪರ್ವತದ ಗುಹೆಯೊಳಗೆ ಹೋಗುವಂತೆ–ತನ್ನ ಅಂತಃಪುರಕ್ಕೆ ತೆರಳಿದನು. ನಯನಮನೋಹರವಾದ ರೂಪ-ಲಾವಣ್ಯ

ಗಳುಳ್ಳ ಶ್ರೇಷ್ಠರಾದ ಸ್ತ್ರೀಯರಿಂದ ನಿಬಿಡವಾಗಿದ್ದ, ಮಹೇಂದ್ರನ ಅಂತಃಪುರದಂತೆಯೇ ಇದ್ದ ಸುಂದರವಾದ ಅಂತಃಪುರವನ್ನು ದಶರಥನು ತನ್ನ ಕಾಂತಿಯಿಂದ ಬೆಳಗಿಸುತ್ತಾ–ಚಂದ್ರನು ತಾರಾಗಣಗಳಿಂದ ನಿಬಿಡವಾದ ನಭೋಮಂಡಲವನ್ನು ತನ್ನ ಕಾಂತಿಯಿಂದ ಬೆಳಗುತ್ತಾ ಪ್ರವೇಶಿಸುವಂತೆ–ಪ್ರವೇಶಿಸಿದನು.

೫ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೬ನೆಯ ಸರ್ಗ

ಸೀತಾಸಹಿತನಾಗಿ ಶ್ರೀರಾಮನು ನಿಯಮವ್ರತವನ್ನು ಕೈಗೊಂಡುದು : ಹರ್ಷಭರಿತರಾದ ಪುರವಾಸಿಗಳು ನಗರವನ್ನು ಸಿಂಗರಿಸಿದುದು : ಶ್ರೀರಾಮನ ಪಟ್ಟಾಭಿಷೇಕಕ್ಕೆ ಆಜ್ಞಾಪಿಸಿದ ದಶರಥರಾಜನಿಗೆ ಅಯೋಧ್ಯಾಪುರವಾಸಿಗಳ ಕೃತಜ್ಞತೆ

ಗತೇ ಪುರೋಹಿತೇ ರಾಮಃ ಸ್ನಾತೋ ನಿಯತಮಾನಸಃ ।
ಸಹ ಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್ ॥೧॥

ಪುರೋಹಿತರಾದ ವಸಿಷ್ಠರು ಹೊರಟುಹೋದನಂತರ ಶ್ರೀರಾಮನು ಸ್ನಾನಮಾಡಿ ಪತ್ನಿಯಾದ* ವಿಶಾಲಾಕ್ಷಿಯಾದ ಸೀತಾದೇವಿಯೊಡನೆ ಏಕಾಗ್ರಚಿತ್ತನಾಗಿ ಶ್ರೀಮನ್ನಾರಾಯಣನನ್ನು[1] ಧ್ಯಾನಿಸಿದನು. ಹೃದಯ ಕಮಲದ ಮಧ್ಯದಲ್ಲಿ ಶ್ರೀಮನ್ನಾರಾಯಣನನ್ನು ಧ್ಯಾನಮಾಡಿದನಂತರ ಶ್ರೀರಾಮನು ಹವಿಸ್ಸಿನ ಪಾತ್ರೆಯನ್ನು ತಲೆಯಲ್ಲಿ ಧರಿಸಿ ಕೈಯಲ್ಲಿದ್ದ ಸ್ರುಕ್ಕಿನಿಂದ ಆಜ್ಯಪಾತ್ರೆಯಲ್ಲಿದ್ದ ಆಜ್ಯವನ್ನು ತೆಗೆದುಕೊಂಡು ತನ್ನ ಮುಂದೆ ವಿಧಿವತ್ತಾಗಿ ಪ್ರತಿಷ್ಠಿತವಾಗಿದ್ದ ಅಗ್ನಿಯಲ್ಲಿ ಮಹತೇ ದೈವತಾಯ

---

* ಪತ್ನೀ : ಪತ್ಯುರ್ನೋ ಯಜ್ಞಸಂಯೋಗೇ ಎಂಬ ವ್ಯಾಕರಣಸೂತ್ರದಂತೆ ಪತಿಯೊಡನೆ ಸತಿಯು ಯಜ್ಞಕಾರ್ಯದಲ್ಲಿ ಸಹಕರಿಸುವುದರಿಂದ ಪತ್ನೀಶಬ್ದವು ನಿಷ್ಪನ್ನವಾಗಿದೆ.

1 ನಾರಾಯಣಃ : **ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ । ತಾವದಸ್ಯಾಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ ॥** ನರನ (ಪುರುಷರೂಪಿಯಾದ ಪರಮಾತ್ಮನ) ಪ್ರಥಮಸೃಷ್ಟಿಯಾದ ನೀರು ನಾರವೆನಿಸಿಕೊಳ್ಳುತ್ತದೆ. ಪ್ರಳಯಕಾಲದಲ್ಲಿ ಇಂತಹ ನೀರು ಆಶ್ರಯವಾಗಿ ಯಾವನಿಗಿದ್ದತೋ ಅವನೇ

ಸ್ವಾಹಾ–ಎಂದು ಹೇಳಿಕೊಂಡು ಮಹಾದೇವನ ಪ್ರೀತ್ಯರ್ಥವಾಗಿ ಹೋಮ ಮಾಡಿದನು.*

ಬಳಿಕ ಮನುಷ್ಯಶ್ರೇಷ್ಠನಾದ ಶ್ರೀರಾಮನು ತನಗೆ ಒಳ್ಳೆಯದಾಗಲೆಂದು ಆಶಿಸಿ ಹವಿಸ್ಸಿನ ಶೇಷವನ್ನು ಪ್ರಾಶನಮಾಡಿ, ಕಾಂತಿಯಿಂದ ಬೆಳಗುತ್ತಿದ್ದ ಮಹಾವಿಷ್ಣುವಿನ ಮಂದಿರದಲ್ಲಿ ಚೆನ್ನಾಗಿ ಹರಡಿದ್ದ ದರ್ಭಾಸ್ತರಣದಲ್ಲಿ ಮೌನಿಯಾಗಿ, ಜಿತೇಂದ್ರಿಯನಾಗಿ ಶ್ರೀಮನ್ನಾರಾಯಣನನ್ನೇ ಧ್ಯಾನ ಮಾಡುತ್ತಾ ಸೀತೆಯೊಡನೆ ಮಲಗಿದನು. ರಾತ್ರಿಯಲ್ಲಿ ಮೂರು ಯಾಮ ಗಳು ಕಳೆದು ಒಂದು ಯಾಮವು ಉಳಿದಿರಲಾಗಿ (ಬ್ರಾಹ್ಮೀಮುಹೂರ್ತದಲ್ಲಿ) ಶ್ರೀರಾಮನು ಎಚ್ಚರಗೊಂಡು ಅರಮನೆಗೆ ತಳಿರು-ತೋರಣಾದಿಗಳಿಂದ ಯಥಾವಿಧಿಯಾಗಿ ಅಲಂಕಾರವನ್ನು ಮಾಡಿಸಿದನು. ಆ ಸಮಯದಲ್ಲಿ ಪುರಾಣಕಥೆಗಳನ್ನು ಹೇಳುವ ಸೂತರಿಂದಲೂ, ವಂಶಾವಳಿಯನ್ನು ಕೀರ್ತನ ಮಾಡುವ ಮಾಗಧರಿಂದಲೂ, ಸ್ತುತಿಪಾಠಕರಾದ ವಂದಿಗಳಿಂದಲೂ ಕರ್ಣ ಸುಖಾವಹವಾದ ಮಾತುಗಳನ್ನು ಕೇಳಿ, ಶ್ರೀರಾಮನು ಸ್ನಾನಮಾಡಿ ಶುಚಿಯಾಗಿ, ಸುಖಾಸನದಲ್ಲಿ ಜಿತೇಂದ್ರಿಯನಾಗಿ ಕುಳಿತು ಪ್ರಾತಃಸಂಧ್ಯೋಪಾಸನೆ ಮಾಡಿ ಗಾಯತ್ರೀಮಹಾಮಂತ್ರವನ್ನು ಜಪಿಸಿದನು.[1] ಗಾಯತ್ರೀಜಪಾನಂತರದಲ್ಲಿ ಶ್ರೀರಾಮನು ಸವಿತೃಮಂಡಲಮಧ್ಯವರ್ತಿಯಾದ ಶ್ರೀಮನ್ನಾರಾಯಣನನ್ನು (ಮಧುಸೂದನನನ್ನು) ದೀರ್ಘದಂಡಪ್ರಣಾಮಮಾಡುತ್ತಾ ಸ್ತುತಿಸಿದನು. (ಸೂರ್ಯೋಪಸ್ಥಾನಮಾಡಿದನು.) ಶುಭ್ರವಾದ ರೇಷ್ಮೆಯ

ನಾರಾಯಣ. ೨) ನಾರಂ = ಜೀವಸಮೂಹಃ ಅಯನಂ = ಅನ್ತರ್ಯಾಮಿತಯಾ ಸ್ಥಾನಂ ಯಸ್ಯ ಸಃ–ಅಖಂಡಬ್ರಹ್ಮಾಂಡದ ಜೀವಕೋಟಿಗಳಲ್ಲಿ ಯಾವನ ಅಂತರ್ಯಾಮಿಯಾಗಿ ಸ್ಥಾನಪಡೆದಿರುವನೋ ಅವನು ನಾರಾಯಣ. ೩) ನಾರೇಣ ನೀತ್ಯೈವ ಅಯತೇ ಇತಿ ನಾರಾಯಣಃ– ನೀತಿಯಿಂದಲೇ ಹೊಂದಲ್ಪಡುವನಾದುದರಿಂದ ನಾರಾಯಣ.

* ಪ್ರಗೃಹ್ಯ ಶಿರಸಾ ಪಾತ್ರೀಂ = ಹವಿಸ್ಸಿನ ಪಾತ್ರೆಯನ್ನು ಶಿರಸ್ಸಿನ ಅಂತರದಲ್ಲಿ ಧಾರಣೆಮಾಡಿ, ಉಪರಿ ಹಿ ದೇವೇಭ್ಯೋ ಧಾರಯತಿ–ಎಂಬ ಶ್ರುತಿವಚನದಂತೆ ದೇವತೆಗಳನ್ನು ಉದ್ದೇಶಿಸಿ ಹೋಮಮಾಡುವಾಗ ಆಜ್ಯಪಾತ್ರೆಯನ್ನು ಶಿರಸ್ಸಿನಲ್ಲಿ ಅಥವಾ ಶಿರಸ್ಸಿನ ಅಂತರದಲ್ಲಿ ಹಿಡಿದು ಹೋಮಮಾಡಬೇಕು.

1 ಪೂರ್ವಾಂ ಸಂಧ್ಯಾಮುಪಾಸೀನಃ – ಜಜಾಪ–ಪ್ರಾತಃಸಂಧ್ಯೋಪಾಸನೆ ಮಾಡುತ್ತಾ

ವಸ್ತ್ರವನ್ನು ಧರಿಸಿದ್ದ ಶ್ರೀರಾಮನಿಗೆ ಬ್ರಾಹ್ಮಣರು ಸ್ವಸ್ತಿವಾಚನವನ್ನು ಮಾಡಿದರು. ಬ್ರಾಹ್ಮಣರು ಶ್ರೀರಾಮನಿಗೆ ಮಾಡಿದ ಮಧುರವಾದ ಮತ್ತು ಗಂಭೀರಧ್ವನಿಯಿಂದ ಕೂಡಿದ ಸ್ವಸ್ತಿವಾಚನದ ಘೋಷವು ಮಂಗಳವಾದ್ಯಗಳ ಧ್ವನಿಯೊಡನೆ ಅಯೋಧ್ಯಾಪಟ್ಟಣವನ್ನು ತುಂಬಿಬಿಟ್ಟಿತು. (ಬ್ರಾಹ್ಮಣರ ಸ್ವಸ್ತಿವಾಚನವೂ ಮತ್ತು ಆ ಸಮಯದಲ್ಲಿ ಆಗುತ್ತಿದ್ದ ಮಂಗಳವಾದ್ಯ ಘೋಷವೂ ಅಯೋಧ್ಯಾಪಟ್ಟಣದ ಎಲ್ಲೆಡೆಯಲ್ಲಿಯೂ ಪ್ರತಿಧ್ವನಿಸುತ್ತಿದ್ದಿತು.) ಶ್ರೀರಾಮನು ವೈದೇಹೀಸಹಿತನಾಗಿ ಅಭಿಷೇಕದ ಪೂರ್ವಾಂಗವಾದ ಉಪವಾಸವ್ರತಾದಿಗಳನ್ನು ಮುಗಿಸಿದನೆಂಬುದನ್ನು ಮಂಗಳವಾದ್ಯಗಳ ಮೊಳಗುವಿಕೆಯಿಂದಲೂ ಮತ್ತು ಸ್ವಸ್ತಿಪುಣ್ಯಾಹಘೋಷಗಳಿಂದಲೂ ತಿಳಿದು ಅಯೋಧ್ಯಾನಿವಾಸಿಗಳಾದ ಜನರು ಆನಂದತುಂದಿಲರಾದರು. ರಾತ್ರಿಯು ಕಳೆದು ಬೆಳಗಾದುದನ್ನು ನೋಡಿ ಅಂದೇ ಶ್ರೀರಾಮನ ಪಟ್ಟಾಭಿಷೇಕವಾಗುವೆಂಬುದನ್ನು ಕೇಳಿದ ಪಟ್ಟಣಿಗರು ಅಯೋಧ್ಯಾಪಟ್ಟಣವನ್ನು ನಾನಾ ಪ್ರಕಾರವಾಗಿ ಸಿಂಗರಿಸತೊಡಗಿದರು. ಬಿಳಿಯ ಮೋಡಗಳಂತೆ ಶುಭ್ರವಾದ ಮತ್ತು ಕಾಂತಿಯುಕ್ತವಾದ ಶಿಖರಗಳಿಂದ ಕೂಡಿದ್ದ ದೇವಾಲಯಗಳಲ್ಲಿ, ನಾಲ್ಕು ಮಾರ್ಗಗಳು ಸೇರುವ ಚೌಕಗಳಲ್ಲಿ, ರಾಜಬೀದಿಗಳಲ್ಲಿ, ಗಡಿಗಳಲ್ಲಿರುವ ಶಿಲಾಸ್ತಂಭಗಳಲ್ಲಿ ಧ್ವಜ-ಪತಾಕೆಗಳು ರಾರಾಜಿಸಿದುವು. ಕೋಟೆಯ ಮೇಲೆ, ಹೇರಳವಾದ ಮಾರಾಟದ ವಸ್ತುಗಳಿಂದ ತುಂಬಿದ್ದ ವೈಶ್ಯರ ಅಂಗಡಿಗಳ ಮೇಲೆ, ಅನೇಕ ಕುಟುಂಬಗಳಿಂದ ಕೂಡಿದ್ದ ಕಾಂತಿಯುಕ್ತವಾದ ದೊಡ್ಡ-ದೊಡ್ಡ ಸೌಧಗಳ ಮೇಲೆ, ನಗರಸಭೆ-ನ್ಯಾಯನಿರ್ಣಾಯಕಸಭೆ ಇವೇ ಮುಂತಾದ ಸಭೆಗಳು ಸೇರುವ ಭವ್ಯಭವನಗಳ ಮೇಲೆ, ಬಹಳ ದೂರದಿಂದ ಗೋಚರವಾಗುವ ಎತ್ತರವಾದ ವೃಕ್ಷಗಳ ಮೇಲೆ ಉತ್ಸಾಹಿಗಳಾದ ಪಟ್ಟಣಿಗರು ವಿಚಿತ್ರವಾದ ಧ್ವಜ-ಪತಾಕೆಗಳನ್ನು ಹಾರಿಸಿದರು. ನಟ-ನರ್ತಕ

ಗಾಯತ್ರೀಮಂತ್ರವನ್ನು ಜಪಿಸಿದನು. ಸಂಧ್ಯಾವಂದನೆ–ಎಂಬುದು ಮೂರು ಕರ್ಮಗಳನ್ನೊಳಗೊಂಡಿದೆ. ಸೂರ್ಯಾರ್ಘ್ಯಪ್ರದಾನಾಂತವಾಗಿ ಮಾಡುವ ಕರ್ಮಕ್ಕೆ ಅರ್ಘ್ಯಪ್ರದಾನಕರ್ಮ ಎಂದು ಹೆಸರು. ಅನಂತರ ಗಾಯತ್ರೀಜಪ. ಇದಕ್ಕೆ ಜಪಕರ್ಮವೆಂದು ಹೇಳುವ ರೂಢಿಯಿದೆ. ಕಡೆಯಲ್ಲಿ ಸೂರ್ಯೋಪಸ್ಥಾನ. ಈ ಮೂರು ಕರ್ಮಗಳೂ ಸೇರಿ ಸಂಧ್ಯಾವಂದನೆ ಅಥವಾ ಆಹ್ನಿಕ–ಎನ್ನಿಸಿಕೊಳ್ಳುತ್ತದೆ.

ಸಮೂಹಗಳು ಮಾಡುತ್ತಿದ್ದ ನರ್ತನಗಳನ್ನೂ, ಗಾಯಕರ ಗಾಯನಗಳನ್ನೂ, ಮನಸ್ಸಿಗೂ ಕಿವಿಗಳಿಗೂ ಇಂಪಾಗುವಂತಹ ಶ್ರೀರಾಮನ ಸಂಬಂಧವಾದ ಮಾತುಗಳನ್ನೂ ಅಯೋಧ್ಯಾಪುರವಾಸಿಗಳು ಪಟ್ಟಣದ ನಾನಾಕಡೆಗಳಲ್ಲಿ ನೋಡುತ್ತಿದ್ದರು ಹಾಗೂ ಕೇಳುತ್ತಿದ್ದರು. ಶ್ರೀರಾಮನಿಗೆ ಅಭಿಷೇಕವಾಗುವ ಸಮಯದಲ್ಲಿ ಮನೆಗಳಲ್ಲಿಯೂ ನಾಲ್ಕು ಬೀದಿಗಳು ಸೇರುವ ಚೌಕ ಗಳಲ್ಲಿಯೂ ಶ್ರೀರಾಮನ ಗುಣಾತಿಶಯಗಳನ್ನು ಹಾಡಿ-ಪಾಡಿಕೊಂಡು ನಲಿದಾಡಲು ಪಟ್ಟಣಿಗರು ಪರಸ್ಪರವಾಗಿ ಕಲೆತು ರೂಪಕಗಳನ್ನು ರಚಿಸುತ್ತಿ ದ್ದರು. ಮನೆಗಳ ಬಾಗಿಲುಗಳಲ್ಲಿ ಗುಂಪು-ಗುಂಪಾಗಿ ಸೇರಿಕೊಂಡು ಆಟ ವಾಡುತ್ತಿದ್ದ ಬಾಲಕರು ಕೂಡ ರಾಮಾಭಿಷೇಕಕ್ಕೆ ಸಂಬಂಧಿಸಿದ ಗೀತೆಗಳನ್ನು ಹಾಡಿಕೊಂಡು ನಲಿದಾಡುತ್ತಿದ್ದರು. ಶ್ರೀರಾಮನ ಪಟ್ಟಾಭಿಷೇಕವಾಗಲಿದ್ದ ಆ ದಿನದಲ್ಲಿ ಪಟ್ಟಣಿಗರು ಹೂಗಳನ್ನು ಚೆಲ್ಲಿ ದಶಾಂಗಯುಕ್ತವಾದ ಧೂಪವನ್ನು ಹೊತ್ತಿಸಿ ರಾಜಮಾರ್ಗವನ್ನು ಸುಗಂಧಿತವನ್ನಾಗಿಸಿ ಕಾಂತಿಯುಕ್ತವನ್ನಾಗಿ ಮಾಡಿದರು. ಪಟ್ಟಾಭಿಷೇಕದ ಕಲಾಪಗಳು ಮುಗಿದು ಶ್ರೀರಾಮನು ದಿವ್ಯರಥದಲ್ಲಿ ಕುಳಿತು ಬರುವುದು ಬಹಳ ವೇಳೆಯಾಗಿ ರಾತ್ರಿಯೂ ಆಗಿಬಿಡಬಹುದೆಂದು ಶಂಕೆಯಿಂದ ಪಟ್ಟಣಿಗರು ರಾತ್ರಿಯಲ್ಲಿಯೂ ಶ್ರೀರಾಮನ ದಿವ್ಯಮಂಗಳರೂಪವನ್ನು ನೋಡುವ ಸಲುವಾಗಿ ವೃಕ್ಷೋಪಮ ವಾದ, ಬಹಳ ಎತ್ತರವಾಗಿದ್ದ ದೀಪಸ್ತಂಭಗಳನ್ನು ರಾಜಮಾರ್ಗದುದ್ದಕ್ಕೂ ಇಡಿಸಿದ್ದರು.

ಅಯೋಧ್ಯಾಪಟ್ಟಣವನ್ನು ಈ ವಿಧದಲ್ಲಿ ನೇತ್ರಾನಂದಕರವಾಗಿ ಅಲಂಕರಿಸಿದ ಪಟ್ಟಣಿಗರು, ಶ್ರೀರಾಮನ ಯೌವರಾಜ್ಯಾಭಿಷೇಕವನ್ನು ಅತ್ಯಂತ ಆಕಾಂಕ್ಷೆಯಿಂದ ನಿರೀಕ್ಷಿಸುತ್ತಾ, ಚೌಕಗಳಲ್ಲಿಯೂ ಪುರಮಂದಿರಗಳಲ್ಲಿಯೂ ಗುಂಪು-ಗುಂಪಾಗಿ ಸೇರಿಕೊಂಡು ಪರಸ್ಪರವಾಗಿ ರಾಮಾಭಿಷೇಕದ ಪ್ರಸ್ತಾಪಮಾಡುತ್ತಾ, ಶ್ರೀರಾಮನಿಗೆ ಪಟ್ಟಾಭಿಷೇಕಮಾಡಬೇಕೆಂಬ ನಿರ್ಧಾರವನ್ನು ಕೈಗೊಂಡುದಕ್ಕಾಗಿ ವೃದ್ಧನಾದ ದಶರಥನನ್ನು ಪ್ರಶಂಸಿಸು ತ್ತಿದ್ದರು.

ಅಹೋ ಮಹಾತ್ಮಾ ರಾಜಾಯಮಿಕ್ಷ್ವಾಕುಕುಲನನ್ದನಃ ।
ಜ್ಞಾತ್ವಾ ಯೋ ವೃದ್ಧಮಾತ್ಮಾನಂ ರಾಮಂ ರಾಜ್ಯೇಽಭಿಷೇಕ್ಷ್ಯತಿ ॥

ಸರ್ವೇ ಹ್ಯನುಗೃಹೀತಾಃ ಸ್ಮ ಯನ್ನೋ ರಾಮೋ ಮಹೀಪತಿಃ ।
ಚಿರಾಯ ಭವಿತಾ ಗೋಪ್ತಾ ದೃಷ್ಟಲೋಕಪರಾವರಃ ॥೨೨॥

ಇಕ್ಷ್ವಾಕುಕುಲಸಂಭೂತನಾದ ನಮ್ಮ ದಶರಥಮಹಾರಾಜನು ನಿಶ್ಚಯವಾಗಿಯೂ ಮಹಾತ್ಮನೇ ಸರಿ. ಏಕೆಂದರೆ : ತಾನು ವೃದ್ಧನಾಗಿರುವೆನೆಂದರಿತು ಶ್ರೀರಾಮನನ್ನು ರಾಜ್ಯದ ಅಧಿಪತಿಯನ್ನಾಗಿ ಮಾಡಲು ನಿಶ್ಚಯಿಸಿರುವನಲ್ಲವೇ? ಎಂತಹ ಸಂತಸದ ವಿಷಯವಿದು! ದೇವತೆಗಳ ಅನುಗ್ರಹದಿಂದಲೇ ನಾವಿಂದು ಶ್ರೀರಾಮನನ್ನು ರಾಜನನ್ನಾಗಿ ಪಡೆಯಲಿದ್ದೇವೆ. ಜನರ ಆಗು-ಹೋಗುಗಳನ್ನು ಚೆನ್ನಾಗಿ ಮನಗಂಡಿರುವ ಶ್ರೀರಾಮನು ಚಿರಕಾಲ ನಮ್ಮ ರಕ್ಷಕನಾಗುತ್ತಾನೆ.

ಅನುದ್ಧತಮನಾ ವಿದ್ವಾನ್ಧರ್ಮಾತ್ಮಾ ಭ್ರಾತೃವತ್ಸಲಃ ।
ಯಥಾ ಚ ಭ್ರಾತೃಷು ಸ್ನಿಗ್ಧಸ್ತಥಾಸ್ಮಾಸ್ವಪಿ ರಾಘವಃ ॥೨೩॥

ಶ್ರೀರಾಮನು ಯಾವುದೇ ಸಮಯದಲ್ಲಿಯೂ ಉದ್ವೇಗಗೊಳ್ಳುವುದಿಲ್ಲ. ಕ್ಷಮಾವಂತನು. ವಿದ್ವಾಂಸನು. ಧರ್ಮಾತ್ಮನು. ತಮ್ಮಂದಿರಲ್ಲಿ ವಿಶೇಷವಾದ ಅನುರಾಗವುಳ್ಳವನು. ತಮ್ಮಂದಿರ ವಿಷಯದಲ್ಲಿ ಸ್ನೇಹಪರನಾಗಿರುವಂತೆ ನಮ್ಮ ವಿಷಯದಲ್ಲಿಯೂ ಸ್ನೇಹಪರನಾಗಿರುವನು. ನಮ್ಮನ್ನೂ ತನ್ನ ಸಹೋದರರಂತೆಯೇ ಕಾಣುತ್ತಾನೆ.

ಚಿರಂ ಜೀವತು ಧರ್ಮಾತ್ಮಾ ರಾಜಾ ದಶರಥೋಽನಘಃ ।
ಯತ್ಪ್ರಸಾದೇನಾಭಿಷಿಕ್ತಂ ರಾಮಂ ದ್ರಕ್ಷ್ಯಾಮಹೇವಯಮ್ ॥೨೪॥

ಯಾವನ ವರಪ್ರಸಾದದಿಂದ ಮತ್ತು ಯಾವನ ಅಭಿಲಾಷೆಯಿಂದ ಇಂದು ನಾವು ಲೋಕಾಭಿರಾಮನಾದ ಶ್ರೀರಾಮನ ನೇತ್ರಾನಂದಕರವಾದ ಪಟ್ಟಾಭಿಷೇಕವನ್ನು ಕಾಣಲಿರುವೆವೋ–ನಿಷ್ಪಾಪನಾದ, ಧರ್ಮಾತ್ಮನಾದ ಆ ನಮ್ಮ ದಶರಥರಾಜನು ಇನ್ನೂ ಬಹಳ ಕಾಲದವರೆಗೂ ನೀರೋಗದೃಢಕಾಯನಾಗಿ ಜೀವಿಸಿರಲಿ.”

ಈ ವಿಧವಾದ ಮಾತುಗಳು ಅಯೋಧ್ಯಾಪಟ್ಟಣದ ಎಲ್ಲೆಡೆಗಳಲ್ಲಿಯೂ ಕೇಳಿಬರುತ್ತಿದ್ದುವು. ರಾಮಾಭಿಷೇಕವೃತ್ತಾಂತವನ್ನು ಕರ್ಣಾಕರ್ಣಿಕೆಯಿಂದ

ಕೇಳಿ ಅಯೋಧ್ಯೆಯ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿಯೂ ಇದ್ದ ಗ್ರಾಮ ಗಳಿಂದ ಹಳ್ಳಿಗರು ರಾಮಾಭಿಷೇಕವನ್ನು ವೀಕ್ಷಿಸುವ ಆಶಯದಿಂದ ಸಾವಿ ರಾರು ಸಂಖ್ಯೆಯಲ್ಲಿ ಆಗಮಿಸಿ ರಾಮನಗರಿಯನ್ನು (ಅಯೋಧ್ಯೆಯನ್ನು) ತುಂಬಿಬಿಟ್ಟರು. ಪರ್ವಕಾಲದಲ್ಲಿ ಉಕ್ಕಿಬರುವ ಸಮುದ್ರರಾಜನ ನಿನಾದದಂತೆ ತಂಡ-ತಂಡವಾಗಿ ಸಾವಿರಾರು ಸಂಖ್ಯೆಯಲ್ಲಿ ಅಯೋಧ್ಯೆಗೆ ಆಗಮಿಸುತ್ತಿದ್ದ ಪ್ರಜೆಗಳ ನಿನಾದವು ಅಯೋಧ್ಯಾನಗರಿಯಲ್ಲಿ ಕೇಳಿಬರುತ್ತಿದ್ದಿತು. ಇಂದ್ರನ ಅರಮನೆಯ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ ಸುಂದರ ನಗರಿಯಾದ ಅಯೋಧ್ಯೆಯು ರಾಮಾಭಿಷೇಕವನ್ನು ನೋಡುವ ಸಲುವಾಗಿ ಆಗಮಿಸಿದ್ದ ಪ್ರಜೆಗಳ ನಿನಾದದಿಂದ ಕೂಡಿ–ಸಮುದ್ರದಲ್ಲಿ ಅತ್ತಲಿತ್ತ ಓಡಾಡುವ ಕೋಟ್ಯನುಕೋಟಿ ತಿಮಿ-ತಿಮಿಂಗಿಲಾದಿ ಜಲಚರಪ್ರಾಣಿಗಳ ಕಲ-ಕಲಶಬ್ದವುಳ್ಳ ಜಲರಾಶಿಯಂತೆ ಶೋಭಿಸಿತು.

೬ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭ನೆಯ ಸರ್ಗ

ಶ್ರೀರಾಮನ ಅಭಿಷೇಕದ ಸಮಾಚಾರವನ್ನು ಕೇಳಿ ಖಿನ್ನಳಾದ ಮಂಥರೆಯು ಶ್ರೀರಾಮನಿಗೆ ಪಟ್ಟಾಭಿಷೇಕವಾಗದಂತೆ ತಡೆಯಲು ಕೈಕೇಯಿಯನ್ನು ಹುರಿದುಂಬಿಸಿದುದು : ಕೈಕೇಯಿಯು ಶ್ರೀರಾಮನ ಪಟ್ಟಾಭಿಷೇಕವಾರ್ತೆಯನ್ನು ಮಂಥರೆಯಿಂದ ಕೇಳಿ ಸಂತುಷ್ಟಳಾಗಿ ಅವಳಿಗೆ ಪಾರಿತೋಷಕವನ್ನು ನೀಡಲು ಹೋದುದು : ಮಂಥರೆಯು ಕುಟಿಲೋಪಾಯದಿಂದ ಕೈಕೇಯಿಯ ಮನಸ್ಸನ್ನು ತಿರುಗಿಸಿ ದಶರಥನಿಂದ ಎರಡು ವರಗಳನ್ನು ಕೇಳುವಂತೆ ಪ್ರೇರಿಸಿದುದು

ಜ್ಞಾತಿದಾಸೀ ಯತೋ ಜಾತಾ ಕೈಕೇಯ್ಯಾಸ್ತು ಸಹೋಷಿತಾ ।
ಪ್ರಾಸಾದಂ ಚನ್ದ್ರಸಂಕಾಶಮಾರುರೋಹ ಯದೃಚ್ಛಯಾ ॥೧॥

ಎಲ್ಲಿಯೋ ಹುಟ್ಟಿ, ಎಲ್ಲಿಯೋ ಬೆಳೆದು, ಕಡೆಗೆ ಕೈಕೇಯಿಯ ಜೊತೆ ಯಲ್ಲಿದ್ದು ಕೈಕೇಯಿಯ ತಂದೆಯ ಮನೆಯಿಂದ ಅವಳ ಜೊತೆಯಲ್ಲೇ

ಬಂದ ದಾಸಿಯೊಬ್ಬಳು–ಚಂದ್ರನ ಬೆಳದಿಂಗಳಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ ಉಪ್ಪರಿಗೆಯನ್ನು ಸ್ವೇಚ್ಛೆಯಿಂದ (ಆಕಸ್ಮಿಕವಾಗಿ) ಹತ್ತಿದಳು.*

ಆ ಸಮಯದಲ್ಲಿ ಶ್ರೀರಾಮನ ಪಟ್ಟಾಭಿಷೇಕದ ಸಲುವಾಗಿ ರಾಜ ಮಾರ್ಗವು ನೀರಿನಿಂದ ಶುದ್ಧಿಗೊಳಿಸಲ್ಪಟ್ಟಿದ್ದಿತು. ಎಲ್ಲೆಡೆಗಳಲ್ಲಿಯೂ ಸುಗಂಧಮಯವಾದ ಹೂಗಳನ್ನೆರಚಿ ಬೀದಿಗಳನ್ನು ಸಿಂಗರಿಸಿದ್ದರು. ಅಂತಹ ರಮ್ಯವಾದ ಅಯೋಧ್ಯಾಪಟ್ಟಣವನ್ನು ಉಪ್ಪರಿಗೆಯ ಮೇಲಿನಿಂದ ಮಂಥರೆಯು ನೋಡಿದಳು.

ಪತಾಕೆಗಳಿಂದಲೂ, ಉತ್ಕೃಷ್ಟವಾದ ಧ್ವಜಗಳಿಂದಲೂ ನಗರವು ಸಿಂಗರಿಸಲ್ಪಟ್ಟಿದ್ದಿತು. ಜನರು ನಿರಾತಂಕವಾಗಿ ತಿರುಗಾಡಲು ಸಾಧ್ಯವಾಗುವಂತೆ ಉಪವೀಥಿಗಳೂ ಸಜ್ಜುಗೊಳಿಸಲ್ಪಟ್ಟಿದ್ದುವು. ಅಭ್ಯಂಜನಸ್ನಾನಮಾಡಿ ಶುಚಿಗಳಾಗಿದ್ದ ಪ್ರಜೆಗಳಿಂದ ಅಯೋಧ್ಯಾನಗರವು ತುಂಬಿಹೋಗಿದ್ದಿತು. ಬ್ರಾಹ್ಮಣರು ಶ್ರೀರಾಮನಿಗೆ ಅರ್ಪಿಸುವ ಸಲುವಾಗಿ ಹೂಮಾಲೆಗಳನ್ನೂ, ಮೋದಕಗಳನ್ನೂ ಹಿಡಿದು–'**ಶ್ರೀರಾಮೋ ಜಯತು ।**' '**ರಾಜಾ ರಾಮೋ ಜಯತು ।**'–ಎಂಬುದಾಗಿ ಜಯಘೋಷಗಳನ್ನು ಮಾಡುತ್ತಿದ್ದರು. ದೇವಾಲಯದ ಬಾಗಿಲುಗಳು ಶುಭ್ರವಾಗಿದ್ದುವು. ದೇವಾಲಯಗಳನ್ನು ಹೂಮಾಲೆಗಳಿಂದ ಸಿಂಗರಿಸಿದ್ದರು. ಎಲ್ಲೆಡೆಗಳಲ್ಲಿಯೂ ಮಂಗಳ ವಾದ್ಯಗಳು ಮೊಳಗುತ್ತಿದ್ದುವು. ಶ್ರೀರಾಮನ ಪಟ್ಟಾಭಿಷೇಕದ ವಾರ್ತೆಯನ್ನು ಕೇಳಿ ಆನಂದಪುಳಕಿತರಾಗಿದ್ದ ಜನರಿಂದಲೂ ಅಯೋಧ್ಯೆಯು ತುಂಬಿಹೋಗಿದ್ದಿತು. ವೇದಘೋಷಗಳಿಂದ ನಿನಾದಿತವಾಗಿದ್ದಿತು. ಮನು

---

* ಮಂಥರೆಯ ಪೂರ್ವೇತಿಹಾಸವು ವಾಲ್ಮೀಕಿರಾಮಾಯಣದಲ್ಲಿ ಕಂಡುಬರುವುದಿಲ್ಲ. ಪದ್ಮಪುರಾಣದಲ್ಲಿ ಮಂಥರೆಯ ವಿಷಯವಾಗಿ ಹೀಗೆ ಹೇಳಿದ್ದಾರೆ : **ಮನ್ಥರಾ ನಾಮ ಕಾರ್ಯಾರ್ಥಮಪ್ಸರಾ ಪ್ರೇಷಿತಾ ಸುರೈಃ । ದಾಸೀ ಕಾಚನ ಕೈಕೇಯ್ಯೈ ದತ್ತಾ ಕೇಕಯಭೂಭೃತಾ ॥** ದೇವತೆಗಳು ರಾವಣನ ವಧೆಯೆಂಬ ಕಾರ್ಯವನ್ನು ಸುಗಮಗೊಳಿಸಲು ಅಪ್ಸರೆಯೊಬ್ಬಳನ್ನು ಭೂಲೋಕಕ್ಕೆ ಕಳುಹಿಸಿದರು. ಆಕೆಯು ಕೇಕಯ ರಾಜನ ಬಳಿಯಲ್ಲಿ ದಾಸಿಯಾಗಿದ್ದಳು. ಕೇಕಯರಾಜನು ಅವಳನ್ನು ಮಗಳಾದ ಕೈಕೇಯಿಗೆ ದಾಸಿಯನ್ನಾಗಿ ನಿಯಮಿಸಿದನು. ದಶರಥನನ್ನು ವರಿಸಿದ ಕೈಕೇಯಿಯೊಡನೆ ಮಂಥರೆಯೂ ಅಯೋಧ್ಯೆಗೆ ಬಂದಳು.

ಷ್ಯರು ಮಾತ್ರವಲ್ಲ; ಪ್ರಾಣಿಗಳೂ ಹರ್ಷವನ್ನು ವ್ಯಕ್ತಪಡಿಸುತ್ತಿದ್ದುವು. ಕುದುರೆಗಳು ಸಂತೋಷದಿಂದ ಕೆನೆಯುತ್ತಿದ್ದವು. ಆನೆಗಳು ಘೀಂಕರಿಸುತ್ತಿದ್ದುವು. ಹಸುಗಳು ಮತ್ತು ಎತ್ತುಗಳು 'ಹುಂಭಾ' ಎಂದು ಕೂಗುತ್ತಾ ತಮ್ಮ ಹರ್ಷವನ್ನು ವ್ಯಕ್ತಪಡಿಸುತ್ತಿದ್ದುವು. ಸಂತೋಷಭರಿತರಾಗಿದ್ದ ಪೌರರು ಮಾಲೆಗಳಿಂದ ಅಲಂಕೃತವಾಗಿದ್ದ ಧ್ವಜಗಳನ್ನು ಹಿಡಿದು ನಿಂತಿದ್ದರು. ಶ್ರೀರಾಮನ ಪಟ್ಟಾಭಿಷೇಕದ ವಾರ್ತೆಯಿಂದ ಇಷ್ಟೊಂದು ಸಂಭ್ರಮವಿಶಿಷ್ಟವಾಗಿದ್ದ ಅಯೋಧ್ಯಾನಗರಿಯನ್ನು ಕೈಕೇಯಿಯ ಅಂತಃಪುರದ ಉಪ್ಪರಿಗೆಯ ಮೇಲೆ ನಿಂತಿದ್ದ ಮಂಥರೆಯು ಕಂಡು ಆಶ್ಚರ್ಯಭರಿತಳಾದಳು. ಆ ವೇಳೆಗೆ ಸರಿಯಾಗಿ ಶ್ರೀರಾಮನ ಪಟ್ಟಾಭಿಷೇಕವಾರ್ತೆಯನ್ನು ಕೇಳಿ ಆನಂದತುಂದಿಲಳಾಗಿ ವಿಕಸಿತವಾದ ಕಣ್ಣುಗಳಿಂದ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದ, ಬಿಳುವಾದ ರೇಷ್ಮೆಯ ಸೀರೆಯನ್ನುಟ್ಟಿದ್ದ ದಾಸಿಯೊಬ್ಬಳು ಹತ್ತಿರದಲ್ಲಿಯೇ ಇದ್ದುದನ್ನು ಕಂಡು ಮಂಥರೆಯು ಕೇಳಿದಳು :

ಉತ್ತಮೇನಾಭಿಸಂಯುಕ್ತಾ ಹರ್ಷೇಣಾರ್ಥಪರಾ ಸತೀ ।
ರಾಮಮಾತಾ ಧನಂ ಕಿಂ ನು ಜನೇಭ್ಯಃ ಸಂಪ್ರಯಚ್ಛತಿ ॥೮॥

ಅತಿಮಾತ್ರಪ್ರಹರ್ಷೋಽಯಂ ಕಿಂ ಜನಸ್ಯ ಚ ಶಂಸ ಮೇ ।
ಕಾರಯಿಷ್ಯತಿ ಕಿಂ ವಾಪಿ ಸಂಪ್ರಹೃಷ್ಟೋ ಮಹೀಪತಿಃ ॥೯॥

"ಧಾತ್ರಿ! ಮಹಾನಂದದಿಂದ ಯುಕ್ತಳಾಗಿರುವ ಶ್ರೀರಾಮನ ತಾಯಿಯು ಉತ್ತರೋತ್ತರ ಅಭಿವೃದ್ಧಿಗಾಗಿ ಜನರಿಗೆ ಐಶ್ವರ್ಯವನ್ನೇನಾದರೂ ಹಂಚುತ್ತಿರುವಳೇ? ಅಯೋಧ್ಯಾಪಟ್ಟಣದ ಜನರಿಗಿಂದು ಅತ್ಯಧಿಕವಾದ ಸಂತೋಷವುಂಟಾಗಿದೆ. ಇದರ ಕಾರಣವೇನೆಂಬುದನ್ನು ತಿಳಿಸು. ದಶರಥಮಹಾರಾಜನು ಅತ್ಯಂತಪ್ರಹೃಷ್ಟನಾಗಿ ಪ್ರಜೆಗಳಿಗೆ ಸಂತೋಷದಾಯಕವಾದ ಯಾವುದಾದರೂ ಕಾರ್ಯವನ್ನು ಮಾಡುತ್ತಿರುವನೇ?"

ರಾಮಾಭಿಷೇಕದ ವಾರ್ತೆಯನ್ನು ಹೇಳಲು ದಾಸಿಯ ಹೃದಯವು ಸಂತೋಷಾಧಿಕ್ಯದಿಂದ ಬಿರಿದುಹೋಯಿತು. ಅಂತಹ ಅನಿರ್ವಾಚ್ಯವಾದ ಸಂತೋಷದಿಂದ ಯುಕ್ತಳಾಗಿದ್ದ ಧಾತ್ರಿಯು ಶ್ರೀರಾಮನಿಗೆ ಪ್ರಾಪ್ತವಾಗಲಿರುವ ಪರಮೋತ್ಕೃಷ್ಟವಾದ ಶ್ರೇಯಸ್ಸಿನ ವಾರ್ತೆಯನ್ನು ಕುಬ್ಜೆಯಾದ ಮಂಥರೆಗೆ ವಿವರಿಸಿ ಹೇಳಿದಳು :

ಶ್ವಃ ಪುಷ್ಯೇಣ ಜಿತಕ್ರೋಧಂ ಯೌವರಾಜ್ಯೇನ ರಾಘವಮ್ ।
ರಾಜಾ ದಶರಥೋ ರಾಮಮಭಿಷೇಚಯಿತಾನಘಮ್ ॥೧೧॥

"ಮಂಥರೆ! ನಾಳೆ ಪುಷ್ಯನಕ್ಷತ್ರಯುಕ್ತವಾದ ಅಭಿಜಿನ್ಮುಹೂರ್ತದಲ್ಲಿ ಜಿತಕ್ರೋಧನಾದ, ಜಿತೇಂದ್ರಿಯನಾದ, ಪಾಪರಹಿತನಾದ, ತನ್ನ ಆಶ್ರಯ ಪಡೆದವರ ಪಾಪಗಳನ್ನು ಪರಿಹರಿಸಲು ಸಮರ್ಥನಾದ, ರಘುಕುಲಾವತಂಸನಾದ ಶ್ರೀರಾಮನನ್ನು ದಶರಥರಾಜನು ಯೌವರಾಜ್ಯಪದವಿಯಲ್ಲಿ ಅಭಿಷೇಚಿಸಲಿದ್ದಾನೆ."

ಧಾತ್ರಿಯ ಆ ಮಾತನ್ನು ಕೇಳಿದೊಡನೆಯೇ ಮಂಥರೆಗೆ ಆಗಬಾರದ್ದು ಆಗಿಹೋಯಿತೆಂಬುವಷ್ಟು ಸಂಕಟವುಂಟಾಯಿತು. ರಾಮಾಭಿಷೇಕದ ವಿಷಯವಾಗಿ ಮುಂದೆ ಒಂದು ಮಾತನ್ನು ಕೇಳಲು ಕೂಡ ಅವಳಿಗೆ ಸಹನೆಯಿರಲಿಲ್ಲ. ಒಡನೆಯೇ ಧಾತ್ರಿಯ ಕಡೆಯಿಂದ ತನ್ನ ಮುಖವನ್ನು ತಿರುಗಿಸಿಕೊಂಡು ಅಲ್ಲಿ ಒಂದು ಕ್ಷಣವೂ ನಿಲ್ಲದೇ ಕೈಲಾಸಶಿಖರಾಕಾರದ ಪ್ರಾಸಾದದಿಂದ ಕೆಳಗಿಳಿದಳು. ಕೋಪದಿಂದ ಉರಿದು ಬೀಳುತ್ತಿದ್ದ ಪಾಪದೃಷ್ಟಿಯುಳ್ಳ ಮಂಥರೆಯು ಮಲಗಿ ನಿದ್ರಿಸುತ್ತಿದ್ದ ಕೈಕೇಯಿಯ ಬಳಿಗೆ ಹೋಗಿ ಅವಳನ್ನು ತನ್ನ ಕರ್ಕಶಧ್ವನಿಯಿಂದ ಕೂಗಿ ಎಬ್ಬಿಸಿ ಹೇಳಿದಳು :

ಉತ್ತಿಷ್ಠ ಮೂಢೇ ಕಿಂ ಶೇಷೇ ಭಯಂ ತ್ವಾಮಭಿವರ್ತತೇ ।
ಉಪಪ್ಲುತಮಘೌಘೇನ ಕಿಮಾತ್ಮಾನಂ ನ ಬುಧ್ಯಸೇ ॥೧೪॥

"ಮೂರ್ಖಳೇ! ಎದ್ದೇಳು. ಯಾಕಿನ್ನೂ ಮಲಗಿರುವೆ? ಭಯವು ನಿನ್ನನ್ನು ಸುತ್ತುವರಿದು ನಿಂತಿದೆ. ದುಃಖಸಮೂಹದಲ್ಲಿ (ಸಾಗರದಲ್ಲಿ) ಮುಳುಗಿಹೋಗುತ್ತಿರುವೆಯೆಂಬುದನ್ನು ನೀನಿನ್ನೂ ಅರಿಯೆಯಾ?

ಅನಿಷ್ಟೇ ಸುಭಗಾಕಾರೇ ಸೌಭಾಗ್ಯೇನ ವಿಕತ್ಥಸೇ ।
ಚಲಂ ಹಿ ತವ ಸೌಭಾಗ್ಯಂ ನದ್ಯಾಃ ಸ್ರೋತ ಇವೋಷ್ಣಗೇ ॥೧೫॥

ರಾಜನಿಗೆ ಇಷ್ಟವಾಗದವಳೇ! ಸೌಭಾಗ್ಯದ ಆಕಾರವನ್ನು ಮಾತ್ರವೇ ಹೊಂದಿರುವವಳೇ!* ನೀನು ರಾಜನಿಗೆ ಇಷ್ಟಳಾಗಿರದಿದ್ದರೂ, ಸೌಭಾಗ್ಯ

---

* 'ಅನಿಷ್ಟೇ! ಸುಭಗಾಕಾರೇ!' ಇವೆರಡೂ ಸಂಬೋಧನೆಗಳು. ಇದರ ಇಂಗಿತಾರ್ಥವು ಹೀಗಿದೆ : ನೀನು ರಾಜನಿಗೆ ಇಷ್ಟವಿಲ್ಲದವಳು. ಅವನಿಗೆ ನಿನ್ನನ್ನು ಕಂಡರೆ

ವತಿಯಲ್ಲದಿದ್ದರೂ–'ನಾನೇ ಮಹಾಸೌಭಾಗ್ಯವತಿಯೆಂದೂ, ಪಟ್ಟದರಸಿಗೂ ಮಿಗಿಲಾದವಳೆಂದೂ'–ಜಂಬಕೊಚ್ಚಿಕೊಳ್ಳುವೆ. ನದಿಯ ಪ್ರವಾಹವು ಬೇಸಿಗೆಯಲ್ಲಿ ಬತ್ತಿಹೋಗುವಂತೆ–ನಿನ್ನ ಸೌಭಾಗ್ಯವು ಚಂಚಲವಾದುದು. ವಿನಾಶಹೊಂದುವ ಸ್ಥಿತಿಯಲ್ಲಿದೆ."

ಕುಪಿತಳಾಗಿದ್ದ, ಪಾಪೈಕದೃಷ್ಟಿಯುಳ್ಳ ಮಂಥರೆಯು ಕರ್ಣಕಠೋರವಾಗಿ ಹೀಗೆ ಹೇಳಲು–ಕೈಕೇಯಿಯು ಬಹಳವಾಗಿ ವಿಷಾದಿಸಿದಳು. ಅಂತೆಯೇ ಕುಬ್ಜೆಯನ್ನು ಪ್ರಶ್ನಿಸಿದಳು :

"ಮಂಥರೆ! ಅಮಂಗಳದ ಪ್ರಸಂಗವೇನಾದರೂ ಸಂಭವಿಸಿರುವುದೇ? ನಮ್ಮ ಬಂಧುಗಳಿಗೇನಾದರೂ ಅನಾರೋಗ್ಯವುಂಟಾಗಿರುವುದೇ? ನೀನು ಅತ್ಯಂತ ದುಃಖಿತಳಾಗಿರುವುದನ್ನೂ ವಿಷಣ್ಣವದನಳಾಗಿರುವುದನ್ನೂ ನಾನು ಕಾಣುತ್ತಿದ್ದೇನೆ."

ಮಂಥರೆಯು ಕಠಿಣವಾದ ಮಾತುಗಳನ್ನಾಡಿದರೂ ಕೈಕೇಯಿಯು ಸೌಜನ್ಯದಿಂದಲೇ ಮಾತನಾಡಿದಳು. ಮಧುರಾಕ್ಷರಯುಕ್ತವಾದ ಆ ಮಾತನ್ನು ಕೇಳಿ ಪ್ರೋತ್ಸಾಹಿತಳಾಗಿ, ಮಾತನಾಡುವುದರಲ್ಲಿ ಚತುರೆಯಾದ ಮಂಥರೆಯು ಕುಪಿತಳಾಗಿಯೇ ಹೇಳಿದಳು.

ಮಂಥರೆಯು ಕೈಕೇಯಿಯೊಡನೆ ಮಾತನಾಡುವಾಗ ಕೈಕೇಯಿಯ ದುರ್ದೈವವನ್ನು ನೆನೆದು ಬಹಳವಾಗಿ ವಿಷಾದಿಸುತ್ತಿರುವಂತೆಯೂ, ಕೈಕೇಯಿಗೆ ಹಿತೈಷಿಣಿಯೆಂದರೆ ಮಂಥರೆಯೊಬ್ಬಳೇ–ಎಂಬ ಭಾವನೆಯುಂಟಾಗುವಂತೆಯೂ ಚಾತುರ್ಯದಿಂದ ಮಾತನಾಡುತ್ತಾ, ಶ್ರೀರಾಮನ ವಿಷಯದಲ್ಲಿ ಕೈಕೇಯಿಗೆ ಭೇದಬಾವನೆಯುಂಟಾಗುವಂತೆ ಮಾಡಿದಳು :

ಅಕ್ಷಯಂ ಸುಮಹದ್ದೇವಿ ಪ್ರವೃತ್ತಂ ತ್ವದ್ವಿನಾಶನಮ್ ।
ರಾಮಂ ದಶರಥೋ ರಾಜಾ ಯೌವರಾಜ್ಯೇಽಭಿಷೇಕ್ಷ್ಯತಿ ॥೨೦॥

ಪ್ರೀತಿಯಿಲ್ಲ. ಪ್ರೀತಿಯಿರುವವನಂತೆ ತೋರ್ಪಡಿಸಿಕೊಳ್ಳುತ್ತಾನೆ. ತೋರಿಕೆಯ ಪ್ರೇಮವನ್ನೇ ಸಹಜವೆಂದು ನಂಬಿರುವ ಮೂಢೆಯು ನೀನು. ನಿನ್ನಲ್ಲಿ ಸೌಭಾಗ್ಯದ ಆಕಾರವಿದೆ. ಮಹಾಸೌಭಾಗ್ಯಶಾಲಿನಿಯಂತೆ ನೀನು ಕಾಣಿಸಿಕೊಳ್ಳುವೆ. ಆದರೆ ನಿನ್ನಷ್ಟು ದೌರ್ಭಾಗ್ಯಳು ಬೇರೆ ಯಾರೂ ಇಲ್ಲ. ನಿಶ್ಚಯವಾಗಿ ನೋಡಿದರೆ ನೀನು ಹತಭಾಗ್ಯಳು–ಈ ಅರ್ಥದಲ್ಲಿ ಮಂಥರೆಯು ಕೈಕೇಯಿಯನ್ನು ಸಂಬೋಧಿಸಿದ್ದಾಳೆ.

"ದೇವಿ! ಕ್ಷಯವೇ ಇಲ್ಲದ (ಪ್ರತೀಕಾರಮಾಡಲು ಸಾಧ್ಯವಿಲ್ಲದ) ವಿನಾಶವು ನಿನಗೆ ಪ್ರಾಪ್ತವಾಗಲಿದೆ. (ಆ ಕಾರ್ಯವು ನಡೆದುಹೋಯಿತೆಂದರೆ ನಿನ್ನ ವಿನಾಶವು ಖಂಡಿತ. ಆ ವಿನಾಶದಿಂದ ಉಳಿದುಕೊಳ್ಳುವ ಸಾಧ್ಯತೆಯೇ ಇಲ್ಲ. ಕ್ಷಯವೇ ಇಲ್ಲದ ವಿನಾಶವಿದು. ಅಪರಿಹಾರ್ಯವಾದುದು.) ಅಂತಹ ನಿನ್ನ ಸರ್ವವಿನಾಶಕಾರಿಯಾದ ಕಾರ್ಯವು ಯಾವುದೆನ್ನುವೆಯಾ? ದಶರಥರಾಜನು ರಾಮನನ್ನು ಯುವರಾಜಪದವಿಯಲ್ಲಿ ಅಭಿಷೇಚಿಸಿಬಿಡುತ್ತಾನೆ–ಇದೇ ನಿನ್ನ ಸರ್ವವಿನಾಶಕವಾದ ಕಾರ್ಯ.

ಸಾಸ್ಮ್ಯಗಾಧೇ ಭಯೇ ಮಗ್ನಾ ದುಃಖಶೋಕಸಮನ್ವಿತಾ ।
ದಹ್ಯಮಾನಾನಲೇನೇವ ತ್ವದ್ಧಿತಾರ್ಥಮಿಹಾಗತಾ ॥೨೧॥

ರಾಮನಿಗೆ ನಾಳೆಯೇ ಪಟ್ಟಾಭಿಷೇಕವು ನಡೆಯಲಿದೆಯೆಂಬ ಘೋರ ವಾರ್ತೆಯನ್ನು ಕೇಳಿದಾಗಿನಿಂದ ಅಗಾಧವಾದ ಭಯವೆಂಬ ಸಮುದ್ರದಲ್ಲಿ ಮುಳುಗಿಹೋಗಿದ್ದೇನೆ. ದುಃಖ-ಶೋಕಗಳಿಂದ ಪರಿತಪಿಸುತ್ತಿದ್ದೇನೆ. 'ರಾಮನಿಗೆ ಪಟ್ಟಾಭಿಷೇಕವಾಗುವುದು'–ಎಂಬ ಈ ಒಂದು ಮಾತು ಅಗ್ನಿಯಂತೆ ನನ್ನ ಹೃದಯದಲ್ಲಿ ಸೇರಿಕೊಂಡು ನನ್ನ ಅಂಗಾಂಗಗಳೆಲ್ಲವನ್ನೂ ಸುಟ್ಟುಹಾಕುತ್ತಿದೆ. ಈ ಸಮಯದಲ್ಲಿ ಪ್ರಿಯಗೆಳತಿಯಾದ ನಿನ್ನ ಹಿತವನ್ನು ಹೇಗಾದಾರೂ ಸಾಧಿಸಿಯೇ ತೀರಬೇಕೆಂದು ನಿಶ್ಚಯಿಸಿ ನಿನ್ನಲ್ಲಿಗೆ ಅವಸರದಿಂದ ಬಂದಿರುತ್ತೇನೆ.

ತವ ದುಃಖೇನ ಕೈಕೇಯಿ ಮಮ ದುಃಖಂ ಮಹದ್ಭವೇತ್ ।
ತ್ವದ್ವೃದ್ಧೌ ಮಮ ವೃದ್ಧಿಶ್ಚ ಭವೇದತ್ರ ನ ಸಂಶಯಃ ॥೨೨॥

ಒಡತಿ! ನೀನು ದುಃಖಿತೆಯಾದರೆ ನನಗೂ ಬಹಳ ದುಃಖವಾಗುತ್ತದೆ. ನಿನ್ನ ಏಳಿಗೆಯಲ್ಲಿ ನನ್ನ ಏಳಿಗೆಯೂ ಆಗುತ್ತದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ನರಾಧಿಪಕುಲೇ ಜಾತಾ ಮಹಿಷೀ ತ್ವಂ ಮಹೀಪತೇಃ ।
ಉಗ್ರತ್ವಂ ರಾಜಧರ್ಮಾಣಾಂ ಕಥಂ ದೇವಿ ನ ಬುಧ್ಯಸೇ ॥೨೩॥

ನೀನು ರಾಜನ ವಂಶದಲ್ಲಿ ಹುಟ್ಟಿದವಳು. ಮಹಾರಾಜನ ಪತ್ನಿ

ಯಾಗಿರತಕ್ಕವಳು. ಹೀಗಿರುವಾಗ ರಾಜಧರ್ಮಗಳಲ್ಲಿರುವ ಕ್ರೌರ್ಯವನ್ನು ನೀನೇಕೆ ತಿಳಿದುಕೊಂಡಿಲ್ಲ?

ಧರ್ಮವಾದೀ ಶಠೋ ಭರ್ತಾ ಶ್ಲಕ್ಷ್ಣವಾದೀ ಚ ದಾರುಣಃ ।
ಶುದ್ಧಭಾವೇನ ಜಾನೀಷೇ ತೇನೈವಮತಿಸಂಧಿತಾ ॥೨೪॥

ನಿನ್ನ ಪತಿಯು ಯಾವಾಗಲೂ ಧರ್ಮಸಮ್ಮತವಾದ ಮಾತುಗಳನ್ನೇ ಆಡುತ್ತಿರುವನು. ಆದರೆ ಮಹಾಮೋಸಗಾರನು. ನಂಬಿಸಿ ಮೋಸಮಾಡುವುದು ಹೇಗೆಂಬುದನ್ನೇ ಯೋಚಿಸುತ್ತಿರುತ್ತಾನೆ. ಸವಿಯಾದ ಮಧುರವಾದ ಸ್ಮಿತಪೂರ್ವಕವಾದ ಮಾತುಗಳನ್ನೇ ಆಡುತ್ತಾನೆ. ಆದರೆ ಹೃದಯದಲ್ಲಿ ಅವನು ಮಹಾಕ್ರೂರಿಯು. ಅವನಿಗೆ ಕರುಣೆಯೆಂಬುದೇ ಇಲ್ಲ. ಅಂತಹವನನ್ನು ನೀನು ಪರಿಶುದ್ಧನೆಂದೂ, ಪರಮಧಾರ್ಮಿಕನೆಂದೂ, ಕಲ್ಮಶಲೇಶವೂ ಇಲ್ಲದವನೆಂದೂ ತಿಳಿದುಕೊಂಡಿರುವೆ. ಅವನ ಸ್ವಭಾವದಿಂದ ನೀನು ವಂಚಿತಳಾಗಿರುವೆ. ರಾಜನು ನಿನ್ನ ಬಳಿಯಲ್ಲಿಯೇ ಹೆಚ್ಚುಕಾಲ ಇರುತ್ತಾನೆ. ನಿನ್ನೊಡನಿರುವಾಗ ತನ್ನ ಕಾಮೇಚ್ಛೆಯ ಪೂರಣಕ್ಕಾಗಿ ನಿನ್ನ ಮನಸ್ಸನ್ನು ಉಲ್ಲಾಸಗೊಳಿಸಲು ಅರ್ಥರಹಿತವಾದ ಸರಸ-ಸಲ್ಲಾಪಗಳನ್ನು ಮಾಡುತ್ತಿರುತ್ತಾನೆ. ನಿನ್ನನ್ನು ಕ್ಷಣ-ಕ್ಷಣಕ್ಕೂ ಸವಿಮಾತುಗಳಿಂದ ಸಂತೈಸುತ್ತಾನೆ. ಆದರೆ ಅವನ ಹೃದಯವು ಮಾತ್ರ ಬೇರೆ ಯಾವುದನ್ನೋ ಯೋಚಿಸುತ್ತಿರುತ್ತದೆ. ನಿನ್ನಲ್ಲಿ ಅಷ್ಟೊಂದು ಅನುರಾಗವನ್ನು ತೋರುವ ಆ ನಿನ್ನ ಪತಿಯು ನಿನ್ನ ಸವತಿಯಾದ ಕೌಸಲ್ಯೆಯನ್ನು ಅರ್ಥರೂಪವಾದ ರಾಜ್ಯಶ್ರೀಗೆ ಭಾಗಿನಿ ಯನ್ನಾಗಿ ಯೋಜಿಸಲಿದ್ದಾನೆ. (ಅವಳೀಗ ರಾಜಮಾತೆಯಾಗುತ್ತಾಳೆ.) ದುಷ್ಟಾತ್ಮನಾದ ಆ ರಾಜನು ನಿನ್ನ ಮಗನಾದ ಭರತನನ್ನು ಸೋದರಮಾವನ ಮನೆಗೆ ಕಳುಹಿಸಿ ನಿಷ್ಕಂಟಕವಾದ ಈ ರಾಜ್ಯದ ಪಟ್ಟಾಭಿಷೇಕವನ್ನು ನಾಳೆಯೇ ನೆರವೇರಿಸಲಿದ್ದಾನೆ.

ಶತ್ರುಃ ಪತಿಪ್ರವಾದೇನ ಮಾತ್ರೇನ ಹಿತಕಾಮ್ಯಯಾ ।
ಆಶೀವಿಷ ಇವಾಙ್ಕೇನ ಬಾಲೇ ಪರಿಹೃತಸ್ತ್ವಯಾ ॥೨೭॥

ರಾಜನು ಪತಿಯೆಂಬ ವ್ಯಾಜದಿಂದ ಇರುವ ನಿನ್ನ ಶತ್ರುವೇ ಆಗಿದ್ದಾನೆ. ಆದರೆ ಇಂತಹ ಶತ್ರುವನ್ನೂ ವಂಚಕನನ್ನೂ ಮುಗ್ಧೆಯಾದ, ತಿಳಿವಳಿಕೆಯಿಲ್ಲದ ನೀನು–ತಾಯಿಯಾದವಳು ಹಿತವನ್ನು ಬಯಸಿ ಹಾವಿನ

ಮರಿಯನ್ನು ತೊಡೆಯ ಮೇಲಿಟ್ಟುಕೊಂಡು ಹಾಲೆರೆದು ಪೋಷಿಸುವಂತೆ– ಆದರಿಸಿ ಉಪಚರಿಸಿ ಆಲಿಂಗಿಸಿಕೊಳ್ಳುತ್ತಿರುವೆ.

ಯಥಾ ಹಿ ಕುರ್ಯಾಚ್ಛತ್ರುರ್ವಾ ಸರ್ಪೋ ವಾ ಪ್ರತ್ಯುಪೇಕ್ಷಿತಃ ।
ರಾಜ್ಞಾ ದಶರಥೇನಾದ್ಯ ಸಪುತ್ರಾ ತ್ವಂ ತಥಾ ಕೃತಾ ॥೨೮॥

ಶತ್ರುವನ್ನಾಗಲೀ, ವಿಷಸರ್ಪವನ್ನಾಗಲೀ ಉಪೇಕ್ಷಿಸಿದರೆ ಯಾವ ಪರಿಣಾಮವುಂಟಾಗುವುದೋ ಅದೇ ಪರಿಣಾಮವು ಈಗ ನಿನಗುಂಟಾಗಿದೆ. ಶತ್ರುವನ್ನು ಉಪೇಕ್ಷಿಸಿದರೆ ಸಮಯವರಿತು ತನ್ನ ಸೇಡನ್ನು ತೀರಿಸಿಕೊಳ್ಳು ತ್ತಾನೆ. ಸರ್ಪವನ್ನು ಉಪೇಕ್ಷಿಸಿದರೆ ಸಮಯವರಿತು ತನಗೆ ಹಾಲುಣಿಸಿದವ ಳನ್ನೇ ಕಚ್ಚಿಬಿಡುತ್ತದೆ. ಹಾಗೆಯೇ ಈ ಶತ್ರುರೂಪನಾಗಿರುವ ನಿನ್ನ ಪತಿಯು ಸಪುತ್ರಳಾದ ನಿನ್ನನ್ನು ಸಂಪೂರ್ಣವಾಗಿ ವಿನಾಶಮಾಡಲು ಹವಣಿಸಿದ್ದಾನೆ.

ಶ್ರೀರಾಮನಿಗೆ ಪಟ್ಟಗಟ್ಟಲು ಹೊರಟಿರುವ, ಪಾಪಿಷ್ಠನಾದ, ತೋರಿ ಕೆಯ ಪ್ರೇಮಾದರಗಳನ್ನು ನಿನ್ನಲ್ಲಿ ತೋರಿಸುತ್ತಿರುವ ರಾಜನು ಸುಖೋ ಚಿತಳಾದ ನಿನ್ನನ್ನು ಪುತ್ರಸಮೇತವಾಗಿ ವಿನಾಶಗೊಳಿಸಿದ್ದಾನೆ. ನಿನ್ನನ್ನೂ ನಿನ್ನ ಮಗನನ್ನೂ ಕಡೆಗಾಣಿಸಿ ರಾಮನಿಗೆ ಪಟ್ಟಗಟ್ಟುವ ನಿಶ್ಚಯಮಾಡಿರು ವುದರಿಂದ ನಿಮ್ಮನ್ನವನು ವಧಿಸಿದಂತೆಯೇ ಸರಿ. (ರಾಮಾಭಿಷೇಕವಾದ ಬಳಿಕ ನೀವು ಬದುಕಿದ್ದರೂ ಸತ್ತಂತೆಯೇ.)

ವಿಸ್ಮಯದರ್ಶನಳೇ! ನಾನು ಇಷ್ಟು ಬಗೆಯಲ್ಲಿ ಹೇಳುತ್ತಿದ್ದರೂ ನಿನ್ನ ಮುಖದಲ್ಲಿ ಭಯವಾಗಲೀ, ಕೋಪವಾಗಲೀ, ಅಸೂಯೆಯಾಗಲೀ ಕಾಣುತ್ತಿಲ್ಲ. ನಾನು ಹೇಳುವುದಕ್ಕೆ ಆಶ್ಚರ್ಯಪಡುವಂತೆ ಕಾಣುತ್ತಿರುವೆ. ಹೀಗಿರುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ. ಕಾರ್ಯಮಾಡಲು ಇದು ಸಕಾಲವಾಗಿದೆ. ಕಾಲವು ಮೀರಿಹೋಗಿಲ್ಲ. ಕ್ಷಿಪ್ರವಾಗಿ ನಿನ್ನ ಹಿತವನ್ನು ಸಾಧಿಸಿಕೋ. ಮಗನನ್ನೂ, ನನ್ನನ್ನೂ ರಕ್ಷಿಸು. ನಿನ್ನನ್ನೂ ರಕ್ಷಿಸಿಕೋ. ಉದಾಸೀನಮಾಡಬೇಡ."

ಮಂಥರೆಯು ಇಷ್ಟು ಪ್ರಚೋದನೆಯ ಮಾತುಗಳನ್ನಾಡಿದರೂ

ಕೈಕೇಯಿಯ ಮನಸ್ಸು ಸ್ವಲ್ಪವಾದರೂ ಉದ್ವೇಗಗೊಳ್ಳಲಿಲ್ಲ. ಮಂಥರೆಯು ಹೇಳಿದ ಮಾತುಗಳಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕವಾಗುವುದೆಂಬುದನ್ನು ಗ್ರಹಿಸಿ ಹರ್ಷಪೂರ್ಣಳಾದ ಕೈಕೇಯಿಯು ಶರತ್ಕಾಲದ ಚಂದ್ರನ ಬೆಳದಿಂಗಳಿನಂತೆ ಪ್ರಫುಲ್ಲವಾದ ಮುಖಾರವಿಂದದಿಂದ ಕೂಡಿದವಳಾಗಿ ಹಾಸಿಗೆಯಿಂದ ಮೇಲೆದ್ದು ಕುಳಿತಳು. ಕೈಕೇಯಿಯು ರಾಮಾಭಿಷೇಕದ ವಿಷಯವನ್ನು ಕೇಳಿ ಪರಮಸಂತುಷ್ಟಳಾದಳು. ಅಂತೆಯೇ ದಶರಥನ ವಿಷಯದಲ್ಲಿ ಮಂಥರೆಯಾಡಿದ ನಿಷ್ಠುರದ ಮಾತುಗಳನ್ನು ಕೇಳಿ ವಿಸ್ಮಿತಳೂ ಆದಳು. ಆ ಸಮಯದಲ್ಲಿ ಅವಳಿಗೆ ರಾಮನಿಗೆ ಪಟ್ಟಾಭಿಷೇಕಮಾಡುವುದರ ಮೂಲಕ ರಾಜನು ತನಗೆ ವಿರುದ್ಧವಾದ ಕಾರ್ಯಮಾಡುತ್ತಿರುವನೆಂದು ಭಾಸವಾಗಲಿಲ್ಲ. ರಾಮಾಭಿಷೇಕದ ಸುವಾರ್ತೆಯನ್ನು ಹೇಳಿದುದಕ್ಕಾಗಿ ದಿವ್ಯವಾದ ಶುಭಾವಹವಾದ ಕಂಠಾಭರಣವನ್ನೇ ತೆಗೆದು ಮಂಥರೆಗೆ ಪಾರಿತೋಷಿಕವಾಗಿ ಕೊಟ್ಟಳು.

ಸ್ತ್ರೀಯರಲ್ಲಿ ಶ್ರೇಷ್ಠಳಾದ ಕೈಕೇಯಿಯು ಮಂಥರೆಗೆ ಆಭರಣವನ್ನು ಕೊಟ್ಟು ಅಸಹನೆಯಿಂದಲೇ ಇದ್ದ ಅವಳನ್ನು ನೋಡಿ ಹೀಗೆ ಹೇಳಿದಳು :

ಇದಂ ತು ಮನ್ಥರೇ ಮಹ್ಯಮಾಖ್ಯಾಸಿ ಪರಮಂ ಪ್ರಿಯಮ್ ।
ಏತನ್ಮೇ ಪ್ರಿಯಮಾಖ್ಯಾತುಃ ಕಿಂ ವಾ ಭೂಯಃ ಕರೋಮಿ ತೇ ॥

"ಮಂಥರೇ! ಶ್ರೀರಾಮನ ಪಟ್ಟಾಭಿಷೇಕವೆಂಬ ಪರಮಪ್ರಿಯವಾದ ಮಾತನ್ನು ನನಗೆ ನೀನೀಗ ಹೇಳಿರುವೆ. ಇಂತಹ ಪರಮಪ್ರಿಯವಾದ, ಹೃದ್ಯವಾದ, ಸಂತೋಷಜನಕವಾದ ರಾಮಪಟ್ಟಾಭಿಷೇಕವಾರ್ತೆಯನ್ನು ಹೇಳಿರುವ ನಿನಗೆ ನಾನೀಗ ಪಾರಿತೋಷಿಕವಾಗಿ ಕೊಟ್ಟಿರುವ ಆಭರಣವು ಏನೇನೂ ಸಾಲದು. ಮತ್ತೇನನ್ನು ಕೊಡಲಿ ; ಅಥವಾ ಬೇರೆ ಯಾವ ಸಂತೋಷಜನಕವಾದ ಕಾರ್ಯವನ್ನು ಮಾಡಿಕೊಡಲಿ ? ಹೇಳು, ಮಂಥರೆ!

ರಾಮೇ ವಾ ಭರತೇ ವಾಹಂ ವಿಶೇಷಂ ನೋಪಲಕ್ಷಯೇ ।
ತಸ್ಮಾತ್ತುಷ್ಟಾಸ್ಮಿ ಯದ್ರಾಜಾ ರಾಮಂ ರಾಜ್ಯೇಽಭಿಷೇಕ್ಷ್ಯತಿ ॥೩೫॥

ಧಾತ್ರಿ! ರಾಮ-ಭರತರಲ್ಲಿ ನನಗೆ ತಾರತಮ್ಯವೇ ಇಲ್ಲ. ಭರತನು ನನಗೆಷ್ಟು ಪ್ರಿಯನೋ ರಾಮನೂ ಅಷ್ಟೇ ಪ್ರಿಯನಾಗಿದ್ದಾನೆ. ಆದುದರಿಂದ

ರಾಜನು ಶ್ರೀರಾಮನಿಗೆ ಪಟ್ಟಾಭಿಷೇಕಮಾಡಲು ನಿಶ್ಚಯಿಸಿರುವುದು ನನಗೆ ಹೆಚ್ಚು ಸಂತೋಷವಾಗಿದೆ.

ನ ಮೇ ಪರಂ ಕಿಂಚಿದಿತಸ್ತ್ವಯಾ ಪುನಃ
ಪ್ರಿಯಂ ಪ್ರಿಯಾರ್ಹೇ ಸುವಚಂ ವಚೋಽಮೃತಮ್ ।
ತಥಾ ಹ್ಯವೋಚಸ್ತ್ವಮತಃ ಪ್ರಿಯೋತ್ತರಂ
ವರಂ ಪರಂ ತೇ ಪ್ರದದಾಮಿ ತಂ ವೃಣು ॥೩೬॥

ಮಂಥರೆಯೇ! ನೀನಿಂದು ಅಮೃತಧಾರೆಗೆ ಸಮಾನವಾದ ಅತ್ಯಂತ ಪ್ರಿಯವಾದ ವಾರ್ತೆಯನ್ನು ಹೇಳಿರುವೆ. ಇದಕ್ಕಿಂತಲೂ ಪ್ರಿಯವಾದ ವಾರ್ತೆಯು ನನಗೆ ಬೇರಾವುದೂ ಇಲ್ಲ. ನಿನಗೂ ಇದಕ್ಕಿಂತಲೂ ಪ್ರಿಯವಾದ ವಾರ್ತೆಯನ್ನು ಹೇಳುವ ಸಾಧ್ಯತೆಯೂ ಇಲ್ಲ. ಪ್ರಿಯ ವಾರ್ತೆಗಳಲ್ಲಿಯೇ ಸರ್ವಶ್ರೇಷ್ಠವಾದ ರಾಮಾಭಿಷೇಕವಾರ್ತೆಯನ್ನು ನೀನು ನನಗೆ ಹೇಳಿರುವೆ. ಇಂತಹ ಸುವಾರ್ತೆಯನ್ನು ಹೇಳಿರುವ ನಿನಗೆ ಯಾವ ಬಹುಮಾನವನ್ನು ಕೊಡಬೇಕೆಂಬುದೇ ನನಗೆ ತಿಳಿಯದಾಗಿದೆ. ಏಕೆಂದರೆ : ಯಾವುದೇ ಅನರ್ಘವಸ್ತುವೂ ಇಂತಹ ಶ್ರೇಷ್ಠವಾದ ಪ್ರಿಯವಾರ್ತೆಗೆ ಸಾಟಿಯಾದ ಬಹುಮಾನವಾಗುವುದಿಲ್ಲ. ಆದುದರಿಂದ ನಿನಗೆ ಬೇಕಾದ ವಸ್ತುವನ್ನು ನಿಸ್ಸಂಕೋಚವಾಗಿ ಕೇಳು. ನೀನು ಯಾವುದನ್ನು ಕೇಳಿದರೂ ಆ ವಸ್ತುವು ನನಗೆ ಅತ್ಯಂತಪ್ರಿಯವೇ ಆಗಿದ್ದರೂ–ರಾಮಾಭಿಷೇಕವಾರ್ತೆಯೆಂಬ ಅಮೃತಧಾರೆಯನ್ನು ನನ್ನ ಕಿವಿಗಳಲ್ಲಿ ಸುರಿಸಿರುವ ನಿನಗೆ ಕೊಟ್ಟು ಬಿಡುತ್ತೇನೆ.”

೭ನೆಯ ಸರ್ಗವು ಮುಗಿಯಿತು.

ಮಂಥರೆಯು ಕೈಕೇಯಿಗೆ ರಾಮನಿಗೆ ಪಟ್ಟಗಟ್ಟುವುದು ಅನಿಷ್ಟಕಾರಿ ಎಂಬುದನ್ನು ಮನದಟ್ಟಾಗುವಂತೆ ಹೇಳಿದುದು : ಕೈಕೇಯಿಯು ಶ್ರೀರಾಮನ ಗುಣಗಳನ್ನು ವರ್ಣನೆಮಾಡಿ ಅವನಿಗೆ ಪಟ್ಟಗಟ್ಟುವುದು ಉಚಿತವಾಗಿರುವುದೆಂದು ಸಮರ್ಥಿಸಿದುದು : ಪುನಃ ಮಂಥರೆಯು ರಾಮನಿಗೆ ಪಟ್ಟಗಟ್ಟುವುದರಿಂದ ಭರತನಿಗೆ ಅನಿಷ್ಟವುಂಟಾಗುವುದೆಂದು ಸಮರ್ಥಿಸಿದುದು

ಮನ್ಥರಾ ತ್ವಭ್ಯಸೂಯ್ಯೈನಾಮುತ್ಸೃಜ್ಯಾಭರಣಂ ಚ ತತ್ ।
ಉವಾಚೇದಂ ತತೋ ವಾಕ್ಯಂ ಕೋಪದುಃಖಸಮನ್ವಿತಾ ॥೧॥

ಕೈಕೇಯಿಯು ತನ್ನ ಅಭಿಪ್ರಾಯವನ್ನು ಇಷ್ಟು ಸ್ಪಷ್ಟವಾಗಿ ತಿಳಿಸಿದರೂ ಮಂಥರೆಯು ತನ್ನ ಪ್ರಯತ್ನವನ್ನು ನಿಲ್ಲಿಸಲಿಲ್ಲ. 'ಇವಳೆಂತಹ ಮೂಢೆಯಿರಬಹುದು?' –ಎಂದು ಚಿಂತಿಸಿದ ಮಂಥರೆಯು ಕೈಕೇಯಿಯ ಮೌಢ್ಯಕ್ಕಾಗಿ ಅವಳನ್ನು ನಿಂದಿಸುತ್ತಾ, ಅವಳು ಪಾರಿತೋಷಿಕವಾಗಿ ಕೊಟ್ಟಿದ್ದ ಕಂಠಾಭರಣವನ್ನು ಅವಳ ಮುಂದೆಯೇ ಎಸೆದು, ತಾನು ಹೇಳಿದ ಹಿತವಾಕ್ಯವನ್ನು ಕೇಳಲಿಲ್ಲವೆಂಬ ಕೋಪದಿಂದಲೂ–ರಾಮನಿಗೆ ಅಭಿಷೇಕವಾಗಿಬಿಟ್ಟರೆ ಮುಂದೆ ಮಹಾನರ್ಥವು ಸಂಭವಿಸುವುದೆಂಬ ದುಃಖದಿಂದಲೂ ಕೂಡಿದವಳಾಗಿ ಕೈಕೇಯಿಗೆ ಪುನಃ ಹೇಳಿದಳು :

ಹರ್ಷಂ ಕಿಮಿದಮಸ್ಥಾನೇ ಕೃತವತ್ಯಸಿ ಬಾಲಿಶೇ ।
ಶೋಕಸಾಗರಮಧ್ಯಸ್ಥಂ ನಾತ್ಮಾನಮವಬುಧ್ಯಸೇ ॥೨॥

"ಏನೂ ತಿಳಿಯದ ಹಸುಳೆಯಂತಿರುವವಳೇ! ಅನುಚಿತವಾದ ಕಾಲದಲ್ಲಿ (ದುಃಖಿಸಬೇಕಾದ ಸಮಯದಲ್ಲಿ) ಏನಿದು ನಿನ್ನ ಸಂತೋಷ? ನೀನೀಗ ಶೋಕಸಾಗರದ ಮಧ್ಯಭಾಗದಲ್ಲಿ ಮುಳುಗಿಹೋಗುತ್ತಿರುವೆಯೆಂಬುದನ್ನೂ ಅರಿತುಕೊಂಡಿಲ್ಲವಲ್ಲಾ!

ಮನಸಾ ಪ್ರಹಸಾಮಿ ತ್ವಾಂ ದೇವಿ ದುಃಖಾರ್ದಿತಾ ಸತೀ ।
ಯಚ್ಛ್ರೋಚಿತವ್ಯೇ ಹೃಷ್ಟಾಸಿ ಪ್ರಾಪ್ಯೇದಂ ವ್ಯಸನಂ ಮಹತ್ ॥೩॥

ನಿನಗೊದಗಿರುವ ಈ ವಿಪತ್ತನ್ನು ಮನಗಂಡು ನಾನು ದುಃಖಪೀಡಿತ ಳಾಗಿದ್ದೇನೆ. ಇಂತಹ ಮಹಾವ್ಯಸನದಲ್ಲಿ ಮುಳುಗಿ ಶೋಕಿಸಬೇಕಾಗಿರುವ ಈ ಸಮಯದಲ್ಲಿ ನೀನೀಗ ಸಂತೋಷಪಡುತ್ತಿರುವೆ. ನಿನ್ನಲ್ಲುಂಟಾಗಿರುವ ಇಂತಹ ವೈಪರೀತ್ಯವನ್ನು ಕಂಡು ಮನಸ್ಸಿನಲ್ಲಿಯೇ ನಗುತ್ತಲೂ ಇದ್ದೇನೆ.

(ನಾನು ಎಷ್ಟೇ ಸ್ಪಷ್ಟವಾಗಿ ಹೇಳಿದರೂ ನಿನಗೆ ಆ ವಿಪತ್ತಿನ ಅರಿವೇ ಇಲ್ಲದಿರುವುದನ್ನೂ, ಶೋಕಪಡಬೇಕಾಗಿರುವ ಸಮಯದಲ್ಲಿ ಆನಂದಪಡು ತ್ತಿರುವುದನ್ನೂ ಕಂಡು ನನಗೆ ನಗುವು ಬರುತ್ತಿದೆ.)

ಶೋಚಾಮಿ ದುರ್ಮತಿತ್ವಂ ತೇ ಕಾ ಹಿ ಪ್ರಾಜ್ಞಾ ಪ್ರಹರ್ಷಯೇತ್ ।
ಅರೇಃ ಸಪತ್ನೀಪುತ್ರಸ್ಯ ವೃದ್ಧಿಂ ಮೃತ್ಯೋರಿವಾಗತಾಮ್ ॥೪॥

ಒಡತಿ! ನಿನ್ನ ಕೆಟ್ಟಬುದ್ಧಿಯನ್ನು ಕಂಡು ನನಗೆ ದುಃಖವಾಗುತ್ತಿದೆ. ಮೃತ್ಯುರೂಪದಲ್ಲಿ ಪ್ರಾಪ್ತವಾಗಿರುವ ಶತ್ರುವಾದ ಸವತಿಯ ಮಗನ ವೃದ್ಧಿಯಲ್ಲಿ ಯಾವ ಬುದ್ಧಿಮತಿಯು ತಾನೇ ಸಂತೋಷಿಸುವಳು? (ನಿನ್ನ ಬುದ್ಧಿಯು ದುರ್ಬುದ್ಧಿಯಲ್ಲದೇ ಪ್ರಾಜ್ಞಬುದ್ಧಿಯೇ ಆಗಿದ್ದರೆ ಶತ್ರುವಾದ ಸವತಿಯ ಮಗನ ಮೃತ್ಯುರೂಪವಾದ ವೃದ್ಧಿಯನ್ನು ಎಂದಿಗೂ ಸ್ವಾಗತಿಸು ತ್ತಿರಲಿಲ್ಲ.)

ಭರತಾದೇವ ರಾಮಸ್ಯ ರಾಜ್ಯಸಾಧಾರಣಾದ್ಭಯಮ್ ।
ತದ್ವಿಚಿನ್ತ್ಯ ವಿಷಣ್ಣಾಸ್ಮಿ ಭಯಂ ಭೀತಾದ್ಧಿ ಜಾಯತೇ ॥೫॥

ದಶರಥನ ಈ ಸಾಮ್ರಾಜ್ಯದಲ್ಲಿ ರಾಮನಿಗೆ ಎಷ್ಟು ಹಕ್ಕಿದೆಯೋ ಭರತನಿಗೂ ಅಷ್ಟೇ ಹಕ್ಕಿದೆ. ಈ ವಿಷಯವು ರಾಮನಿಗೂ ತಿಳಿದಿರುವುದು. ಇಂದು ದಶರಥನು ತನ್ನನ್ನು ಯುವರಾಜಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿದರೂ ಮುಂದೆ ತನಗೆ ಭರತನಿಂದ ತೊಂದರೆ ಯುಂಟಾಗಬಹುದೆಂಬ ಭಯವು ರಾಮನಿಗಿದೆ. ಈ ವಿಷಯವನ್ನೇ ನೆನೆದು ನಾನು ಬಹಳ ದುಃಖಿತಳಾಗಿದ್ದೇನೆ. ರಾಮನು ಭಯಪಟ್ಟರೆ ನಿನಗೇಕೆ ದುಃಖವೆಂದು ನೀನು ಪ್ರಶ್ನಿಸಬಹುದು. 'ಭಯಂ ಭೀತಾದ್ಧಿ ಜಾಯತೇ'– 'ಯಾವನು ಭಯಗೊಂಡಿರುವನೋ–ಅವನಿಂದಲೇ ಭಯವು ಉತ್ಪನ್ನ ವಾಗುತ್ತದೆ.' ಆದುದರಿಂದ ಭೀತಿಯಿಂದಿರುವವನಿಗೂ ನಾವು ಭಯಪಡ ಬೇಕು. ಏಕೆಂದರೆ : ಭರತನ ವಿಷಯದಲ್ಲಿ ಭಯಗ್ರಸ್ತನಾಗಿರುವ ರಾಮನು ಎಂದೆಂದಿಗೂ ಭಯಗ್ರಸ್ತನಾಗಿಯೇ ಕುಳಿತಿರುವುದಿಲ್ಲ. ತನ್ನ ಭಯದ ನಿವಾರಣೆಗೆ ಉಪಾಯವನ್ನು ಹುಡುಕುತ್ತಲೇ ಇರುತ್ತಾನೆ. ಇದು ರಾಜನೀತಿ. ರಾಮನ ಭಯನಿವಾರಣೆಗೆ ಇರುವ ಒಂದೇ ಒಂದು ಉಪಾಯವೆಂದರೆ ಭರತನ ನಿರ್ಮೂಲನ. ಮೌಢ್ಯದಿಂದ ಈ ರಾಜನೀತಿಯನ್ನು ನೀನು ತಿಳಿದುಕೊಂಡಿಲ್ಲ.*

'ರಾಜ್ಯವು ದಶರಥನ ನಾಲ್ಕು ಮಕ್ಕಳಿಗೂ ಸಮಾನವಾದ ಉಪ

---

* ಮನೆಯೊಳಗೆ ಕೃಷ್ಣಸರ್ಪವು ನುಗ್ಗಿದರೆ ಮನೆಯವರಿಗೆ ಎಷ್ಟು ಭಯವಿರುವುದೋ ಕೃಷ್ಣಸರ್ಪಕ್ಕೂ ಅಷ್ಟೇ ಭಯವಿರುತ್ತದೆ. ಭಯಪಟ್ಟ ಇಬ್ಬರೂ ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ನಾಶಮಾಡುವ ಸನ್ನಾಹಮಾಡುತ್ತಲೇ ಇರುತ್ತಾರೆ.

ಭೋಗ್ಯವಸ್ತುವಾಗಿರುವುದರಿಂದ ಭರತನ ವಿಷಯದಲ್ಲಿ ಮಾತ್ರವೇ ರಾಮನೇಕೆ ಭಯಪಡುತ್ತಾನೆ? ಲಕ್ಷ್ಮಣ-ಶತ್ರುಘ್ನರ ವಿಷಯದಲ್ಲಿ ರಾಮನಿಗೆ ಭಯವಿಲ್ಲವೇ?'–ಎಂದೂ ನೀನು ಪ್ರಶ್ನಿಸಬಹುದು. ಲಕ್ಷ್ಮಣ-ಶತ್ರುಘ್ನರ ವಿಷಯದಲ್ಲಿ ರಾಮನಿಗೆ ಸ್ವಲ್ಪವಾದರೂ ಭಯವಿಲ್ಲ. ಅವರಿಬ್ಬರೂ ಪಾರತಂತ್ರ್ಯದಿಂದಿರುವವರು. ಮಹಾಧನುಷ್ಮಂತನಾದ ಲಕ್ಷ್ಮಣನು ತನ್ನನ್ನು ಸರ್ವಪ್ರಕಾರದಿಂದಲೂ ರಾಮನಿಗೇ ಅರ್ಪಿಸಿಕೊಂಡುಬಿಟ್ಟಿದ್ದಾನೆ. ಲಕ್ಷ್ಮಣನು ರಾಮನಿಗೆ ತನ್ನನ್ನು ಅರ್ಪಿಸಿಕೊಂಡಿರುವಂತೆಯೇ ಶತ್ರುಘ್ನನು ತನ್ನನ್ನು ಭರತನಿಗೆ ಅರ್ಪಿಸಿಕೊಂಡಿರುತ್ತಾನೆ. 'ಒಂದು ವೇಳೆ ಲಕ್ಷ್ಮಣ-ಶತ್ರುಘ್ನರು ರಾಮ-ಭರತರ ಪಾರತಂತ್ರ್ಯದಲ್ಲಿದ್ದರೂ ರಾಜ್ಯದ ಹಕ್ಕು ಅವರಿಗೂ ಸಮಾನವಾಗಿರುವುದಲ್ಲವೇ? ಆದುದರಿಂದ ಲಕ್ಷ್ಮಣ-ಶತ್ರುಘ್ನರ ವಿಷಯ ದಲ್ಲಿ ರಾಮನೇಕೆ ಭಯಪಡುವುದಿಲ್ಲ?'–ಎಂದೂ ನೀನು ಪ್ರಶ್ನಿಸಬಹುದು. ರಾಜ್ಯಪ್ರಾಪ್ತಿಯು ಯಾವಾಗಲೂ ಜ್ಯೇಷ್ಠಾನುಕ್ರಮವಾಗಿರುತ್ತದೆ. ಆದುದ ರಿಂದ ಜ್ಯೇಷ್ಠನಾದ ರಾಮನು ಪಟ್ಟಾಭಿಷಿಕ್ತನಾದೊಡನೆಯೇ ಎರಡನೆಯವ ನಾದ ಭರತನು ರಾಜ್ಯದ ಉತ್ತರಾಧಿಕಾರಿಯಾಗುತ್ತಾನೆ. ಕಿರಿಯವರಾದ ಲಕ್ಷ್ಮಣ-ಶತ್ರುಘ್ನರಿಗೆ ಉತ್ತರಾಧಿಕಾರತ್ವವು ಪ್ರಾಪ್ತವಾಗುವುದಿಲ್ಲ. ಆದುದ ರಿಂದ ಭರತನು ರಾಜ್ಯಲೋಭದಿಂದ ತನ್ನನ್ನು ನಿಗ್ರಹಿಸಲು ಯತ್ನಿಸ ಬಹುದೆಂಬ ಭಯವು ರಾಮನಿಗೆ ಸ್ವಾಭಾವಿಕವಾಗಿಯೇ ಉಂಟಾಗುತ್ತದೆ. ರಾಮನು ಮಹಾಪ್ರಾಜ್ಞನು. ರಾಜತಂತ್ರನಿಪುಣನು. ಸಾಮ-ದಾನ-ಭೇದ-ದಂಡೋಪಾಯಗಳ ಪ್ರಯೋಗದಲ್ಲಿ ಕುಶಲನು. ಕಾಲ-ಕಾಲಗಳಲ್ಲಿ ಮಾಡ ಬೇಕಾದ ಕರ್ತವ್ಯಗಳನ್ನು ಸ್ವಲ್ಪವಾದರೂ ವಿಳಂಬಮಾಡದೇ ಮುಗಿಸುವ ಸಾಮರ್ಥ್ಯವುಳ್ಳವನು. ಇಂತಹ ರಾಮನ ಭಯಕ್ಕೆ ಕಾರಣನಾಗುವ ನಿನ್ನ ಮಗನ ಭವಿಷ್ಯವನ್ನು ಚಿಂತಿಸಿದರೆ ನನಗೆ ನಡುಕವೇ ಉಂಟಾಗುತ್ತದೆ.

ಕೌಸಲ್ಯೆಯು ನಿಶ್ಚಯವಾಗಿಯೂ ಮಹಾಸೌಭಾಗ್ಯವತಿಯು. ಏಕೆಂದರೆ: ಸುಭಗೆಯಾದ ಅವಳ ಮಗನು ಪುಷ್ಯನಕ್ಷತ್ರಯುಕ್ತವಾದ ನಾಳೆಯ ದಿನದಲ್ಲಿಯೇ ಬ್ರಾಹ್ಮಣಶ್ರೇಷ್ಠರಿಂದ ಯುವರಾಜಪದವಿಯಲ್ಲಿ ಅಭಿಷೇಚಿಸಲ್ಪಡುತ್ತಾನೆ.

(ರಾಮನ ಅಭಿಷೇಕವಾದ ಮೇಲೆ ಭರತನಿಗೆ ಅನಿಷ್ಟವು ಸಂಭವಿಸುವಂತೆ ಕೈಕೇಯಿಗೂ ಕೌಸಲ್ಯೆಯಿಂದ ಅನಿಷ್ಟವುಂಟಾಗುವುದೆಂಬುದನ್ನು ಸ್ಪಷ್ಟಪಡಿಸಲು ಮಂಥರೆಯು ಪ್ರಯತ್ನಿಸುತ್ತಾಳೆ.)

ಪಟ್ಟಮಹಿಷಿಯಾಗಿದ್ದ ಕೌಸಲ್ಯೆಯು ರಾಮಾಭಿಷೇಕವಾದ ಬಳಿಕ ರಾಜಮಾತೆಯೂ ಆಗಿ, ಮಹತ್ತರವಾದ ಸಂಪತ್ತನ್ನೂ-ದಶರಥನ ಅನುಪಮವಾದ ಪ್ರೀತಿಯನ್ನೂ ಗಳಿಸಿ, ಶತ್ರುಸಮಾನರಾದ ತನ್ನ ಸವತಿಯರನ್ನು ಕೀಳಾಗಿ ಕಾಣುತ್ತಾ ವಿಖ್ಯಾತೆಯಾಗಿ ವೈಭವದಿಂದಿರುವಾಗ, ಅವಳನ್ನು ನೀನು ಸಾಮಾನ್ಯದಾಸಿಯಂತೆ ಕೈಮುಗಿದು ನಿಂತು ಉಪಚರಿಸಲಿರುವೆ. (ಉಪಚಕರಿಸಬೇಕಾಗುತ್ತದೆ.) ಹಾಗೇನಾದರೂ ಆದರೆ ನಿನ್ನ ದಾಸಿಯಾಗಿರುವ ನಾವೆಲ್ಲರೂ ನಿನ್ನ ಜೊತೆಯಲ್ಲಿಯೇ ಕೌಸಲ್ಯೆಯ ದಾಸಿಯರಾಗುತ್ತೇವೆ. ಇಷ್ಟು ಮಾತ್ರವಲ್ಲ. ನಿನ್ನ ಮಗನೂ ರಾಮನ ದಾಸನಾಗುತ್ತಾನೆ. ರಾಮನು ರಾಜನಾಗುವುದರಿಂದ ರಾಮನಿಗೆ ಸಂಬಂಧಿಸಿದ ಶ್ರೇಷ್ಠಸ್ತ್ರೀಯರೆಲ್ಲರೂ (ಸೀತೆಯ ಸಖಿಯರೇ ಮುಂತಾದವರೆಲ್ಲರೂ) ಪರಮಹರ್ಷಿತರಾಗುತ್ತಾರೆ. ಭರತನ ಪ್ರಭಾವದ ವಿನಾಶದಿಂದಾಗಿ ನಿನ್ನ ಸೊಸೆಯರು ಸಂತೋಷಹೀನರಾಗುತ್ತಾರೆ."

ಹೀಗೆ ಮಂಥರೆಯು ರಾಮನ ವಿಷಯದಲ್ಲಿ ಬಹಳ ಅಪ್ರಿಯವಾದ ಮಾತುಗಳನ್ನಾಡುತ್ತಿದ್ದರೂ-ಕೈಕೇಯಿಯು ಶ್ರೀರಾಮನ ಅನೇಕಗುಣಗಳನ್ನೇ ವರ್ಣಿಸುತ್ತಾ ಅವನನ್ನು ಪ್ರಶಂಸಿಸತೊಡಗಿದಳು :

ಧರ್ಮಜ್ಞೋ ಗುಣವಾನ್ದಾನ್ತಃ ಕೃತಜ್ಞಃ ಸತ್ಯವಾಕ್ಶುಚಿಃ ।
ರಾಮೋ ರಾಜ್ಞಃ ಸುತೋ ಜ್ಯೇಷ್ಠೋ ಯೌವರಾಜ್ಯಮತೋಽರ್ಹತಿ ॥

"ಮಂಥರೇ! ಶ್ರೀರಾಮನು ಧರ್ಮಜ್ಞನು. ಗುಣವಂತನು. ಜಿತೇಂದ್ರಿಯನು. ಮಾಡಿದ ಸ್ವಲ್ಪವೇ ಉಪಕಾರವನ್ನೂ ಸ್ಮರಿಸತಕ್ಕವನು. ಸತ್ಯವಾದಿಯು. ಅಂತಃಶುದ್ಧಿ-ಬಹಿಃಶುದ್ಧಿಯುಳ್ಳವನು. ಮೇಲಾಗಿ ಶ್ರೀರಾಮನು ರಾಜನ ಹಿರಿಯಮಗನು. ಈ ಎಲ್ಲ ಕಾರಣಗಳಿಂದಲೂ ಅವನು ಯೌವರಾಜ್ಯಪದವಿಗೆ ಅರ್ಹನಾಗಿರುತ್ತಾನೆ.

ಭ್ರಾತೄನ್ಭೃತ್ಯಾಂಶ್ಚ ದೀರ್ಘಾಯುಃ ಪಿತೃವತ್ಪಾಲಯಿಷ್ಯತಿ ।
ಸಂತಪ್ಯಸೇ ಕಥಂ ಕುಬ್ಜೇ ಶ್ರುತ್ವಾ ರಾಮಾಭಿಷೇಚನಮ್ ॥೧೫॥

ಕುಬ್ಜೇ! (ಸಂಕುಚಿತವಾದ ಬುದ್ಧಿಯವಳೇ!) ದೀರ್ಘಾಯುಷ್ಮಂತನಾದ ಶ್ರೀರಾಮನು ತನ್ನ ಅನುಜರನ್ನೂ, ಭೃತ್ಯವರ್ಗದವರನ್ನೂ ತಂದೆಯಂತೆಯೇ ಪರಿಪಾಲನೆಮಾಡುತ್ತಾನೆ. ಹೀಗಿರುವಾಗ ರಾಮಾಭಿಷೇಕದ ವಾರ್ತೆಯನ್ನು ಕೇಳಿ ನೀನೇಕೆ ಸಂತಾಪಪಡುವೆ?

ಭರತಶ್ಚಾಪಿ ರಾಮಸ್ಯ ಧ್ರುವಂ ವರ್ಷಶತಾತ್ಪರಮ್ ।
ಪಿತೃಪೈತಾಮಹಂ ರಾಜ್ಯಮವಾಪ್ಸ್ಯತಿ ನರರ್ಷಭಃ ॥೧೬॥

ಪಿತೃ-ಪಿತಾಮಹರಿಂದ ಅನುಭೂತವಾದ ರಾಮನ ರಾಜ್ಯವನ್ನು ನೂರು ವರ್ಷಗಳ ಅನಂತರವಾದರೂ ನರಶ್ರೇಷ್ಠನಾದ ಭರತನು ಪಡೆದುಕೊಳ್ಳುವನೆಂಬುದು ನಿಶ್ಚಯ.*

ಸಾ ತ್ವಮಭ್ಯುದಯೇ ಪ್ರಾಪ್ತೇ ವರ್ತಮಾನೇ ಚ ಮನ್ಥರೇ ।
ಭವಿಷ್ಯತಿ ಚ ಕಲ್ಯಾಣೇ ಕಿಮರ್ಥಂ ಪರಿತಪ್ಯಸೇ ॥೧೭॥

ಮನ್ಥರೇ! ಶ್ರೀರಾಮನ ಪಟ್ಟಾಭಿಷೇಕವೆಂಬ ಶುಭಕಾರ್ಯವು ಸನ್ನಿಹಿತವಾಗಿರುವಾಗ ಮತ್ತು ಶ್ರೀರಾಮನು ರಾಜನಾಗುವುದರಿಂದಲೇ ಮುಂದೆ ನಮ್ಮ ಮತ್ತು ರಾಜ್ಯದ ಕಲ್ಯಾಣವು ಆಗಲಿರುವಾಗ ನೀನೇಕೆ ಪರಿತಪಿಸುವೆ?

ಯಥಾ ಮೇ ಭರತೋ ಮಾನ್ಯಸ್ತಥಾ ಭೂಯೋಽಪಿ ರಾಘವಃ ।
ಕೌಸಲ್ಯಾತೋಽತಿರಿಕ್ತಂ ಚ ಸೋಽನುಶುಶ್ರೂಷತೇ ಹಿ ಮಾಮ್ ॥

---

* ನೂರು ವರ್ಷಗಳ ನಂತರ ಭರತನು ರಾಜ್ಯವನ್ನು ಕೇಳುವನೆಂಬುದು ಅಸಂಗತವಾಗಿ ಕಾಣುತ್ತದೆ. ಮಾನವಸಾಮಾನ್ಯರಂತೆ ಶ್ರೀರಾಮನಿಗೆ ನೂರು ವರ್ಷಗಳು ಆಯುಃಪ್ರಮಾಣವೆಂದು ಹೇಳಿದರೂ–ಆ ವೇಳೆಗೆ ಭರತನಿಗೂ ಒಂದು ದಿವಸ ಕಡಿಮೆಯಾಗಿ ನೂರು ವರ್ಷಗಳೇ ಆಗಿರುತ್ತವೆ. ದಶರಥನ ನಾಲ್ವರು ಮಕ್ಕಳೂ ಎರಡು ದಿವಸಗಳ ಅಂತರದಲ್ಲಿ ಹುಟ್ಟಿರುತ್ತಾರೆ. ಶ್ರೀರಾಮನು ಹನ್ನೊಂದು ಸಾವಿರ ವರ್ಷಗಳ ಕಾಲ ರಾಜ್ಯವಾಳಿದನೆಂದು ವಾಲ್ಮೀಕಿರಾಮಾಯಣದಲ್ಲಿಯೇ ಇದೆ. ಆದುದರಿಂದ ಈ ಶ್ಲೋಕಕ್ಕೆ ವ್ಯಾಖ್ಯಾನಕಾರರು ನಾನಾಪ್ರಕಾರವಾದ ಅರ್ಥಮಾಡಿರುತ್ತಾರೆ. (೧) ರಾಮನು ನೂರು ವರ್ಷಗಳ ಕಾಲ ರಾಜ್ಯವಾಳಿದರೂ ಭರತನು ರಾಜ್ಯವಾಳಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದೊಡನೆಯೇ ಅಖಂಡಸಾಮ್ರಾಜ್ಯದ ನಾಲ್ಕನೆಯ ಒಂದು ಭಾಗಕ್ಕೆ ಭರತನು ರಾಜನಾಗುತ್ತಾನೆ ತನ್ನ ತಮ್ಮನ ಈ

ಭರತನು ನನಗೆಷ್ಟು ಮಾನ್ಯನೋ ಶ್ರೀರಾಮನೂ ಅಷ್ಟೇ ಮಾನ್ಯನು. ಅಥವಾ ರಾಮನು ಭರತನಿಗಿಂತಲೂ ಹೆಚ್ಚು ಮಾನ್ಯನು. ಏಕೆಂದರೆ : ಅವನು ತನ್ನ ತಾಯಿಯಾದ ಕೌಸಲ್ಯೆಯನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚಾಗಿ ನನ್ನನ್ನೇ ಪ್ರೀತಿಸುತ್ತಾನೆ ಮತ್ತು ಅವಳನ್ನು ಶುಶ್ರೂಷೆಮಾಡುವುದಕ್ಕಿಂತಲೂ ಮಿಗಿಲಾಗಿ ನನ್ನ ಶುಶ್ರೂಷೆಯನ್ನು ಮಾಡುತ್ತಾನೆ.

ರಾಜ್ಯಂ ಯದಿ ಚ ರಾಮಸ್ಯ ಭರತಸ್ಯಾಪಿ ತತ್ತಥಾ ।
ಮನ್ಯತೇ ಹಿ ಯಥಾತ್ಮಾನಂ ತಥಾ ಭ್ರಾತೄಂಸ್ತು ರಾಘವಃ ॥೧೯॥

ನಾಳೆ ಪಟ್ಟಾಭಿಷೇಕದ ಮೂಲಕವಾಗಿ ಶ್ರೀರಾಮನಿಗೆ ರಾಜ್ಯವು ಪ್ರಾಪ್ತವಾದರೆ ಪಟ್ಟಾಭಿಷೇಕವಿಲ್ಲದೇ ರಾಜ್ಯವು ಭರತನದೂ ಆಗುತ್ತದೆ. ಏಕೆಂದರೆ : ಶ್ರೀರಾಮನು ತನ್ನ ಮೂವರು ತಮ್ಮಂದಿರನ್ನೂ ತನ್ನ ಪ್ರಾಣ ಸಮಾನರೆಂದೇ ಭಾವಿಸಿದ್ದಾನೆ.”

ಕೈಕೇಯಿಯ ಆ ಮಾತುಗಳನ್ನು ಕೇಳಿ ಮಂಥರೆಗೆ ಬಹಳ ದುಃಖ ವಾಯಿತು. ತನ್ನ ಪ್ರಯತ್ನವು ಫಲಿಸಲಿಲ್ಲವೆಂದು ದೀರ್ಘವಾಗಿ ನಿಟ್ಟುಸಿರು ಬಿಟ್ಟಳು. ಆದರೂ ಹತಾಶಳಾಗಲಿಲ್ಲ. ಪುನಃ ಕೈಕೇಯಿಗೆ ಹೇಳತೊಡಗಿದಳು:

ಹಕ್ಕನ್ನು ಶ್ರೀರಾಮನು ಎಂದಿಗೂ ನಿರಾಕರಿಸಲಾರನು. (೨) **ವರ್ಷಶತಾತ್** = ಬಹು ಖಣ್ಡೈಃ ವ್ಯಾಪ್ತಂ–ಭಾರತವರ್ಷವೇ ಮೊದಲಾದ ನೂರಾರು ಉಪಖಂಡಗಳಿಂದ ವ್ಯಾಪ್ತ ವಾಗಿರುವ, ಪಿತೃ-ಪಿತಾಮಹಪರಂಪರಾಗತವಾದ ಈ ಸಾಮ್ರಾಜ್ಯವನ್ನು ಜ್ಯೇಷ್ಠಪುತ್ರನಾದ ಶ್ರೀರಾಮನು ಪಡೆಯುತ್ತಾನೆ. ಭರತನು ಇದರಿಂದ ತೃಪ್ತಿಹೊಂದುತ್ತಾನೆ. (೩) ಶ್ರೀರಾಮನ ಈ ಸಾಮ್ರಾಜ್ಯವನ್ನು ಭರತನೇ ಪಡೆಯುತ್ತಾನೆ. ಭರತನ ವಿಷಯದಲ್ಲಿ ವಿಶೇಷವಾದ ಪ್ರೀತಿಯಿರುವ ಶ್ರೀರಾಮನು ಭರತನಿಗೇ ರಾಜ್ಯಪರಿಪಾಲನಾಧಿಕಾರವನ್ನು ವಹಿಸಿಬಿಡುತ್ತಾನೆ. (೪) ಹಿರಿಯನಾದ ರಾಮನಿಗೆ ಪ್ರಾಪ್ತವಾಗಲಿರುವ ಈ ರಾಜ್ಯವನ್ನು ನೂರು ವರ್ಷಗಳ ನಂತರವೂ ಭರತನು ಹೊಂದುವುದಿಲ್ಲ. ಅ = ನ, ವಾಪ್ಸ್ಯತಿ = ಅವಾಪ್ಸ್ಯತಿ (**ಭಾಗುರಿಮತೇನಾವಾಕಾರ ಲೋಪಃ**) (೫) ಮಾನವಸಾಮಾನ್ಯರಂತೆ ಶ್ರೀರಾಮನಿಗೂ ನೂರು ವರ್ಷ ಆಯುಷ್ಯವಿರುತ್ತದೆ. ಆದುದರಿಂದ ನೂರು ವರ್ಷಗಳ ಕಾಲ ರಾಮನು ರಾಜ್ಯವಾಳಬಹುದು. ಅನಂತರದಲ್ಲಿ ಉತ್ತರಾಧಿಕಾರಿಯಾದ ಭರತನೇ ರಾಜ್ಯವಾಳುತ್ತಾನೆ. ಭರತನಿಗೇ ರಾಜ್ಯವು ಲಭಿಸುತ್ತದೆ.

"ಒಡತಿ! ನಿನಗೆ ಅರ್ಥಪ್ರಾಪ್ತಿಯ ಅರ್ಥಾತ್ ರಾಜ್ಯಪ್ರಾಪ್ತಿಯ ವಿಷಯವನ್ನು ಹೇಳಿದರೆ ನಿನ್ನ ಮೂರ್ಖತನದಿಂದ ಅದು ಅನರ್ಥಕಾರಿ ಯೆಂದು ಬಗೆಯುವೆ. *ಶೋಕ-ವ್ಯಸನಗಳಿಂದ ವ್ಯಾಪ್ತವಾದ ದುಃಖಸಾಗರ ದಲ್ಲಿ ಮುಳುಗಿಹೋಗುತ್ತಿರುವೆಯೆಂಬ ಅರಿವೂ ನಿನಗುಂಟಾಗಲಿಲ್ಲ.

ಭವಿತಾ ರಾಘವೋ ರಾಜಾ ರಾಘವಸ್ಯ ಚ ಯಃ ಸುತಃ ।
ರಾಜವಂಶಾತ್ತು ಭರತಃ ಕೈಕೇಯಿ ಪರಿಹಾಸ್ಯತೇ ॥೨೨॥

ಕೈಕೇಯಿ! 'ನೂರು ವರ್ಷಗಳು ಕಳೆದನಂತರವಾದರೂ ಭರತನು ಕೂಡ ರಾಜನಾಗುವನು'–ಎಂಬ ನಿನ್ನ ಅಭಿಪ್ರಾಯವು ಸರಿಯಲ್ಲ. ಸಂಪ್ರದಾಯವೂ ಹಾಗೆ ಬೆಳೆದು ಬಂದಿಲ್ಲ. ರಾಮನು ನಾಳೆ ರಾಜನಾಗು ತ್ತಾನೆ. ರಾಮನ ಅನಂತರದಲ್ಲಿ ಅವನ ಮಗನು ರಾಜನಾಗುತ್ತಾನೆ. ಹೀಗಾಗಿ ಭರತನು ರಾಜವಂಶದಿಂದಲೇ ಚ್ಯುತನಾಗುತ್ತಾನೆ. ಮುಂದೆ ಭರತನಿಗಾಗಲೀ ಅವನ ಮಕ್ಕಳಿಗಾಗಲೀ ರಾಜ್ಯವು ಸಿಗುವ ಸಾಧ್ಯತೆಯೇ ಇಲ್ಲ.

ನ ಹಿ ರಾಜ್ಞಃ ಸುತಾಃ ಸರ್ವೇ ರಾಜ್ಯೇ ತಿಷ್ಠನ್ತಿ ಭಾಮಿನಿ ।
ಸ್ಥಾಪ್ಯಮಾನೇಷು ಸರ್ವೇಷು ಸುಮಹಾನನಯೋ ಭವೇತ್ ॥೨೩॥

ರಾಜನ ಮಕ್ಕಳೆಲ್ಲರೂ ರಾಜರಾಗುವ ಸಂಭವವೂ ಇಲ್ಲ. ಹಾಗೆ ಹುಟ್ಟಿದ ಮಕ್ಕಳೆಲ್ಲರಿಗೂ ರಾಜ್ಯದ ಪಟ್ಟಗಟ್ಟಿದರೆ ಅದು ಸಂಪ್ರದಾಯಕ್ಕೂ–

ಆದರೆ ಈ ಯಾವ ಅರ್ಥಗಳೂ ಸಮಂಜಸವಾಗಿ ಕಾಣವುದಿಲ್ಲ. 'ಈಗ ಜ್ಯೇಷ್ಠನಾದ ಶ್ರೀರಾಮನು ರಾಜನಾದರೆ ಉತ್ತರಾಧಿಕಾರಿಯಾದ ಭರತನು ಮುಂದೆ ರಾಜನಾಗುತ್ತಾನೆ. ಇದು ಪಿತೃ-ಪಿತಾಮಹರಿಂದ ಬಂದಿರುವ ರಾಜ್ಯವಾದುದರಿಂದ ಭರತನೂ ರಾಜ್ಯಕ್ಕೆ ಹಕ್ಕುದಾರನಾಗಿರುತ್ತಾನೆ'–ಅಥವಾ ಲೋಕರೀತಿಯಿಂದ ಕೈಕೇಯಿಯು ಹೀಗೆ ಹೇಳಿರ ಬಹುದು. ಇಷ್ಟುಮಾತ್ರ ಈ ಶ್ಲೋಕಕ್ಕೆ ಅರ್ಥಮಾಡಬಹುದಾಗಿದೆ. ಪದಶಃ ಯಥಾವತ್ತಾದ ಅರ್ಥವನ್ನು ಹೇಳಿ ಸಮನ್ವಯಿಸುವುದು ಸಾಧ್ಯವಾಗುವುದಿಲ್ಲ.

* ಶೋಕ-ವ್ಯಸನಗಳು ದುಃಖವೆಂಬ ಅರ್ಥದಲ್ಲಿ ಸಮಾನಾರ್ಥವಾದ ಪದಗಳು. ಆದರೆ ವ್ಯಾಖ್ಯಾನಕಾರರು ಎರಡು ಪದಗಳಿಗೂ ಪ್ರತ್ಯೇಕವಾದ ಅರ್ಥಗಳನ್ನು ಹೇಳಿರುತ್ತಾರೆ. ಶೋಕಃ = ಇಷ್ಟವಿಯೋಗಜಂ ದುಃಖಂ–ಇಷ್ಟವಾದುದರ ವಿಯೋಗದಿಂದ ಉಂಟಾಗುವ ದುಃಖಕ್ಕೆ ಶೋಕವೆಂದು ಹೆಸರು. ವ್ಯಸನಂ = ಅನಿಷ್ಟಾಪ್ತಿಜಂ ದುಃಖಂ– ಅನಿಷ್ಟಪ್ರಾಪ್ತಿಯಿಂದ ಉಂಟಾಗುವ ದುಃಖಕ್ಕೆ ವ್ಯಸನವೆನ್ನುತ್ತಾರೆ.

ರಾಜನೀತಿಗೂ ವಿರುದ್ಧವಾಗುತ್ತದೆ ಮತ್ತು ಪರಸ್ಪರವಾಗಿ ಈರ್ಷ್ಯಾಸೂಯೆ ಗಳುಂಟಾಗಿ ದೊಡ್ಡ ಅನರ್ಥಕ್ಕೆ ಕಾರಣವಾಗುತ್ತದೆ.

ತಸ್ಯಾಜ್ಜ್ಯೇಷ್ಠೇ ಹಿ ಕೈಕೇಯಿ ರಾಜ್ಯತನ್ತ್ರಾಣಿ ಪಾರ್ಥಿವಾಃ ।
ಸ್ಥಾಪಯನ್ತ್ಯನವದ್ಯಾಙ್ಗಿ ಗುಣವತ್ಸ್ವಿತರೇಷ್ವಪಿ ॥೨೪॥

ನಿರ್ದುಷ್ಟವಾದ ಅವಯವಗಳುಳ್ಳವಳೇ! ಈ ಕಾರಣದಿಂದಲೇ ಸಾಮಾನ್ಯವಾಗಿ ರಾಜರು ಜ್ಯೇಷ್ಠಪುತ್ರನಿಗೇ ರಾಜ್ಯಭಾರನಿರ್ವಹಣೆಯ ಕಾರ್ಯವನ್ನು ವಹಿಸಿಕೊಡುತ್ತಾರೆ. ವಿಶೇಷಸಂದರ್ಭಗಳಲ್ಲಿ ಮಾತ್ರ (ಜ್ಯೇಷ್ಠನಲ್ಲಿ ಏನಾದರೂ ನ್ಯೂನತೆಗಳಿದ್ದರೆ) ಸಕಲಗುಣಸಂಪನ್ನರಾದ ಕನಿಷ್ಠರಿಗೂ ರಾಜ್ಯಭಾರವನ್ನು ವಹಿಸುವುದು ವಾಡಿಕೆಯಲ್ಲಿದೆ.

ಅಸಾವತ್ಯನ್ತನಿರ್ಭಗ್ನಸ್ತವ ಪುತ್ರೋ ಭವಿಷ್ಯತಿ ।
ಅನಾಥವತ್ಸುಖೇಭ್ಯಶ್ಚ ರಾಜವಂಶಾಚ್ಚ ವತ್ಸಲೇ ॥೨೫॥

ಮಗನಲ್ಲಿ ಪ್ರೀತಿಯುಳ್ಳವಳೇ! ಈ ಕಾರಣದಿಂದಾಗಿ ರಾಮನು ರಾಜ ನಾಗಿಬಿಟ್ಟರೆ ನಿನ್ನ ಮಗ ಭರತನಿಗಾಲೀ ಅವನ ಮಗನಿಗಾಗಲೀ ರಾಜ್ಯ ಸಿಂಹಾಸನವು ಸಿಕ್ಕುವ ಆಶೆಯೇ ಇಲ್ಲ. ರಾಮನು ರಾಜನಾದನಂತರ ಭರತನು ಅನಾಥನಂತೆ ರಾಜವಂಶದಿಂದಲೂ, ರಾಜನಾಗುವುದರಿಂದ ಪ್ರಾಪ್ತ ವಾಗಬಹುದಾದ ಬಹುವಿಧವಾದ ಸುಖಗಳಿಂದಲೂ ವಂಚಿತನಾಗಿ ಹೋಗು ತ್ತಾನೆ.

ಇಂತಹ ದಾರುಣವಾದ ಸಮಯದಲ್ಲಿ ನಾನು ನಿನಗೆ ಮತ್ತು ನಿನ್ನ ಮಗನಿಗೆ ಹಿತವನ್ನುಂಟುಮಾಡಲೆಂದೇ ನಿನ್ನ ಬಳಿಗೆ ಬಂದಿರುತ್ತೇನೆ. ಆದರೆ ನೀನು ಮಾತ್ರ ನನ್ನನ್ನು ಹಿತಚಿಂತಕಳೆಂದು ಮನಗಂಡಿಲ್ಲ. ನಿನ್ನ ಸವತಿಯ ಅಭ್ಯುದಯವಾರ್ತೆಯನ್ನು ಕೇಳಿ ನೀನು ನನಗೆ ಪಾರಿತೋಷಿಕವನ್ನು ಕೊಡಲು ಬಯಸಿರುವೆ. ಈ ನಿನ್ನ ವಿವೇಕಶೂನ್ಯತೆಗೆ ನಾನೇನು ಹೇಳಲಿ?

ಧ್ರುವಂ ತು ಭರತಂ ರಾಮಃ ಪ್ರಾಪ್ಯ ರಾಜ್ಯಮಕಣ್ಟಕಮ್ ।
ದೇಶಾನ್ತರಂ ವಾ ನಯಿತಾ ಲೋಕಾನ್ತರಮಥಾಪಿ ವಾ ॥೨೬॥

ನಾನು ಹೇಳಲಿರುವ ಈ ವಿಷಯವನ್ನು ನೀನು ಮನದಟ್ಟು ಮಾಡಿಕೊ. ನಿನ್ನ ಈ ವಿಪರೀತಬುದ್ಧಿಯ ಕಾರಣದಿಂದಾಗಿ ಶ್ರೀರಾಮನು

ನಿಷ್ಕಂಟಕವಾದ ಈ ರಾಜ್ಯಸಿಂಹಾಸವನ್ನು ಪಡೆದು ನಿನ್ನ ಮಗನನ್ನು ದೇಶಾಂತರಕ್ಕಾಗಲೀ, ಲೋಕಾಂತರಕ್ಕಾಗಲೀ ಕಳುಹಿಸುವುದಂತೂ ನಿಶ್ಚಯ. (ಸಂಹರಿಸಲೂಬಹುದು.)

ಭರತನ ವಿಷಯದಲ್ಲಿ ನೀನೂ ಅಪರಾಧವನ್ನೆಸಗಿರುವೆ. ಅವನಿನ್ನೂ ಚಿಕ್ಕವಯಸ್ಸಿನವನಾಗಿರುವಾಗಲೇ ಅವನನ್ನು ಅವನ ಸೋದರಮಾವನ ಮನೆಗೆ ಕಳುಹಿಸಿಕೊಟ್ಟೆ. ಅವನಿಲ್ಲಿಯೇ ಇದ್ದಿದ್ದರೆ ರಾಜನು ರಾಮನ ವಿಷಯದಲ್ಲಿ ಪಕ್ಷಪಾತಮಾಡುವ ಸಾಧ್ಯತೆಯಿರಲಿಲ್ಲ. ಭರತನ ಮೇಲೆಯೂ ರಾಜನಿಗೆ ಅನುರಾಗವಿರುತ್ತಿದ್ದಿತು.

ಸಂನಿಕರ್ಷಾಚ್ಚ ಸೌಹಾರ್ದಂ ಜಾಯತೇ ಸ್ಥಾವರೇಷ್ವಪಿ ॥೨೮॥

ಯಾವಾಗಲೂ ಹತ್ತಿರದಲ್ಲಿಯೇ ಇರುವಿಕೆಯಿಂದ ಸೌಹಾರ್ದವು ಹೆಚ್ಚುತ್ತದೆ. ಇದನ್ನು ನಾವು ಮರ-ಗಿಡಗಳಲ್ಲಿಯೂ ಕಾಣಬಹುದಾಗಿದೆ. ಮರದ ಸಮೀಪದಲ್ಲಿರುವ ಬಳ್ಳಿಯು ಸ್ವಾಭಾವಿಕವಾಗಿಯೇ ಮರವನ್ನು ಆಶ್ರಯಿಸುತ್ತದೆ. ಮರವೂ ಬಳ್ಳಿಗೆ ರಕ್ಷಣೆಯಾಗಿರುತ್ತದೆ. ಆದುದರಿಂದ ನೀನು ಭರತನನ್ನು ರಾಜನಿಂದ ಇಷ್ಟು ವರ್ಷಗಳ ಕಾಲ (ಹನ್ನೆರಡು ವರ್ಷಗಳು) ದೂರವಿಟ್ಟಿದ್ದೂ ಸರಿಯಲ್ಲ. ಭರತನ ಜೊತೆಯಲ್ಲಿಯೇ ಹೋಗಿರುವುದರಿಂದ ಶತ್ರುಘ್ನನಿಗೂ ಇದೇ ಪಾಡಾಯಿತು. ಭರತನಂತೆಯೇ ಶತ್ರುಘ್ನನೂ ರಾಜ್ಯದಿಂದಲೂ–ರಾಜಸುಖದಿಂದಲೂ ವಂಚಿತನಾಗುತ್ತಾನೆ. ಆದರೆ ರಾಮನನ್ನು ಅನುಸರಿಸಿರುವ ಲಕ್ಷ್ಮಣನಿಗೆ ಸುಖವೂ ಸಿಕ್ಕುತ್ತದೆ ; ರಾಜ್ಯಭಾರದಲ್ಲಿಯೂ ಅವನ ಪ್ರಭಾವವಿರುತ್ತದೆ. ಆದರೆ ಲಕ್ಷ್ಮಣನು ರಾಮನನ್ನು ಅನುಸರಿಸಿ ಇಲ್ಲಿಯೇ ಇದ್ದಂತೆ ಶತ್ರುಘ್ನನು ಭರತನನ್ನು ಅನುಸರಿಸಿ ನಿನ್ನ ತಂದೆಯ ಮನೆಗೆ ಹೊರಟುಹೋದನು.

ಶ್ರೂಯತೇ ಹಿ ದ್ರುಮಃ ಕಶ್ಚಿಚ್ಛೇತ್ತವ್ಯೋ ವನಜೀವಿಭಿಃ ।
ಸಂನಿಕರ್ಷಾದಿಷೀಕಾಭಿರ್ಮೋಚಿತಃ ಪರಮಾದ್ಭಯಾತ್ ॥೩೦॥

ಶತ್ರುಘ್ನನೊಡನೆ ಭರತನನ್ನು ಕೇಕಯದೇಶಕ್ಕೆ ಕಳುಹಿಸಿಕೊಟ್ಟು ಇಲ್ಲಿ ರಾಮನಿಗೆ ಪಟ್ಟಗಟ್ಟುತ್ತಿರುವುದನ್ನು ನೋಡಿದರೆ–ಅರಣ್ಯದಲ್ಲಿ ನಡೆಯುವ ಒಂದು ಸನ್ನಿವೇಶವು ಸ್ಮರಣೆಗೆ ಬರುತ್ತದೆ. ಅರಣ್ಯವಾಸಿಗಳು ಸೌದೆ

ಗಾಗಿ ಮರವೊಂದನ್ನು ಕಡಿಯಬೇಕಾಗಿದ್ದಿತು. ಆದರೆ ಆ ಮರದ ಸುತ್ತಲೂ ಮುಳ್ಳುಗಿಡಗಳು ಇದ್ದುದರಿಂದ ಆ ವೃಕ್ಷವು ವಿನಾಶಭಯದಿಂದ ಮುಕ್ತ ವಾಯಿತು. ಆದುದರಿಂದ ಭರತ-ಶತ್ರುಘ್ನರು ಇಲ್ಲಿಯೇ ಇದ್ದಿದ್ದರೆ ಭರತನನ್ನು ಕಡೆಗಾಣಿಸಲು ಸಾಧ್ಯವಾಗುತ್ತಿರಲಿಲ್ಲ.

ರಾಮ-ಲಕ್ಷ್ಮಣರಲ್ಲಿ ಪರಸ್ಪರವಾಗಿರುವ ಭ್ರಾತೃಸ್ನೇಹವು ಅನ್ಯಾದೃಶ್ಯವಾಗಿದೆ. ಲಕ್ಷ್ಮಣನು ಯಾವಾಗಲೂ ರಾಮನ ರಕ್ಷಣೆಯಲ್ಲಿಯೇ ಬದ್ಧಕಂಕಣನಾಗಿರುತ್ತಾನೆ. ಅಂತೆಯೇ ರಾಮನೂ ಲಕ್ಷ್ಮಣನ ರಕ್ಷಣೆಯಲ್ಲಿ ಜಾಗರೂಕನಾಗಿರುತ್ತಾನೆ. ಅಶ್ವಿನೀದೇವತೆಗಳಂತೆಯೇ ಪರಸ್ಪರವಾಗಿ ವಿಶೇಷ ವಾದ ಅನುರಾಗದಿಂದ ಕೂಡಿರುವ ಈ ಸೌಭ್ರಾತ್ರವು ತ್ರಿಲೋಕಪ್ರಸಿದ್ಧ ವಾಗಿದೆ. ಈ ಕಾರಣದಿಂದ ಲಕ್ಷ್ಮಣನ ವಿಷಯದಲ್ಲಿ ರಾಮನೆಂದಿಗೂ ಪಾಪಕಾರ್ಯವನ್ನು ಮಾಡಲಾರನು. ಭರತನ ವಿಷಯದಲ್ಲಿ ಪಾಪಕಾರ್ಯ ವನ್ನು ಮಾಡಿಯೇ ತೀರುವನು. ಅವನ ವಿನಾಶಕ್ಕಾಗಿಯೇ ಸತತವಾಗಿ ಪ್ರಯತ್ನವನ್ನು ಮಾಡುವನು. ಇದರಲ್ಲಿ ಸಂಶಯವೇ ಇಲ್ಲ.

ಆದುದರಿಂದ ರಾಜಗೃಹದಿಂದಲೇ (ಸೋದರಮಾವನ ಮನೆ ಯಿಂದಲೇ) ಭರತನು ಅರಣ್ಯಕ್ಕೆ ಬೇಗ ಹೊರಟುಹೋಗಲಿ. ಈ ಸಮಯ ದಲ್ಲಿ ಇದೇ ನನಗೆ ಸಮುಚಿತವಾಗಿ ಕಾಣುತ್ತದೆ. ಮಗನನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಹೀಗೆ ಮಾಡುವುದು ನಿನಗೂ ಹಿತಕರ. (ರಾಮನು ರಾಜನಾದ ನಂತರ ಭರತನು ಅಯೋಧ್ಯೆಗೆ ಬಂದರೆ ವಿನಾಶಹೊಂದುವುದಂತೂ ಖಂಡಿತ. ರಾಜಗೃಹದಲ್ಲೇ ಉಳಿದರೂ ನಿಜಶತ್ರುವಾದ ಭರತನನ್ನು ರಾಮನು ಉಳಿಸಲಾರನು. ಆದುದರಿಂದ ಕಾಡಿಗಾದರೂ ಹೊರಟು ಹೋದರೆ ಮಗನ ಪ್ರಾಣವಾದರೂ ಉಳಿದೀತು.) ಹೀಗೆ ಮಾಡಿದರೆ ನಿನ್ನ ಸವತಿಯ ಪಕ್ಷಕ್ಕೂ ಶ್ರೇಯಸ್ಸುಂಟಾಗುತ್ತದೆ. ನಿಷ್ಕಂಟಕವಾಗಿ ರಾಮನು ರಾಜ್ಯವಾಳಲು ಸಾಧ್ಯವಾಗುತ್ತದೆ.

ಒಂದು ವೇಳೆ ಭರತನು ಧರ್ಮದ ಕಾರಣದಿಂದ ತಂದೆಯ ರಾಜ್ಯದಲ್ಲಿ ಒಂದು ಭಾಗವನ್ನು ಪಡೆದುಕೊಂಡರೂ ರಾಮನಿಲ್ಲಿಯೇ ಇದ್ದರೆ ಆಗಲೂ ಭರತನ ವಿನಾಶವು ಖಂಡಿತ. ಸುಖಾರ್ಹನೂ, ಬಾಲನೂ, ರಾಮನಿಗೆ ಸಹಜ

ಶತ್ರುವೂ, ಅರ್ಥಹೀನನೂ ಆಗಿರುವ ಭರತನು ಐಶ್ವರ್ಯಸಮೃದ್ಧಿಯಿಂದ ಕೂಡಿ ಪ್ರಬಲನಾಗಿರುವ ರಾಮನ ವಶದಲ್ಲಿ ಹೇಗೆತಾನೇ ಇದ್ದಾನು? ಅರಣ್ಯದಲ್ಲಿ ಸಿಂಹದಿಂದ ಅನುಸರಿಸಲ್ಪಡುವ ಆನೆಯೋಪಾದಿಯಲ್ಲಿ ರಾಮನಿಂದ ಆಚ್ಛಾದಿತನಾಗುವ (ರಾಮನ ಅಂಕೆಯಲ್ಲಿ ಸಿಕ್ಕಿಹಾಕಿಕೊಳ್ಳಲಿರುವ) ನಿನ್ನ ಮಗನಾದ ಭರತನನ್ನು ಸರ್ವಪ್ರಯತ್ನದಿಂದಲೂ ರಕ್ಷಿಸುವುದು ನಿನಗೆ ಯೋಗ್ಯವಾಗಿದೆ. (ಸಿಂಹದ ಪರಿಸರದಲ್ಲಿರುವ ಆನೆಗೆ ಅಪಾಯವಿರುವಂತೆ– ರಾಮನ ಪರಿಸರದಲ್ಲಿರುವ ಭರತನಿಗೂ ಅಪಾಯವಿದೆ. ರಾಮನ ಪರಿಸರಕ್ಕೆ ಭರತನು ಸಿಲುಕಿಕೊಳ್ಳದ ರೀತಿಯಲ್ಲಿ ಕಾರ್ಯಮಾಡಬೇಕಾದ ಅಗತ್ಯವಿದೆ.)

ಈ ಹಿಂದೆ ಗಂಡನ ವಿಶೇಷಪ್ರೀತಿಯ ಸೌಭಾಗ್ಯವನ್ನು ಪಡೆದಿದ್ದ ನೀನು ನಿನ್ನ ಸವತಿಯಾದ, ರಾಮನ ತಾಯಿಯಾದ ಕೌಸಲ್ಯೆಯನ್ನು ಬಹಳವಾಗಿ ತಿರಸ್ಕರಿಸುತ್ತಿದ್ದೆ. ತನ್ನ ಮಗನು ರಾಜನಾದನಂತರವಾದರೂ ಕೌಸಲ್ಯೆಯು ತನ್ನ ಹಗೆತನವನ್ನು ತೀರಿಸಿಕೊಳ್ಳದೇ ಹೇಗೆತಾನೇ ಸುಮ್ಮನಿದ್ದಾಳು?

ಭಾಮಿನಿ! ನಿನ್ನ ಮೌಢ್ಯವೇನೇ ಇರಲಿ ; ನಾನಂತೂ ಮುಂದೇನಾಗುವುದೆಂಬುದನ್ನು ನಿರ್ಧಾರಮಾಡಿ ಹೇಳಿಬಿಡುತ್ತೇನೆ. ಸಮುದ್ರ-ನದೀ-ನದ-ಪರ್ವತ-ಗಿರಿಗಳನ್ನೊಳಗೊಂಡ ಈ ಅಖಂಡಸಾಮ್ರಾಜ್ಯವನ್ನು ರಾಮನು ವಹಿಸಿಕೊಂಡ ಕೂಡಲೇ ಭರತನೊಡನೆ ನೀನು ದೀನಳಾಗುವೆ. ಅಶುಭವನ್ನೂ ಪರಾಭವವನ್ನೂ ಹೊಂದುವೆ. ರಾಮನು ರಾಜ್ಯವನ್ನು ಪಡೆದೊಡನೆಯೇ ಭರತನ ವಿನಾಶವಂತೂ ಖಂಡಿತ. ನಿನ್ನ ಪ್ರಿಯಪುತ್ರನಾದ ಭರತನು ಉಳಿಯಲಾರನು. ಆದುದರಿಂದ ಕಾಲವು ಮೀರಿಹೋಗುವುದ ರೊಳಗಾಗಿ ಸಂಪೂರ್ಣವಾಗಿ ಸಮಾಲೋಚಿಸು. ನಿನ್ನ ಮಗನಿಗೇ ರಾಜ್ಯವು ಸಿಕ್ಕಬೇಕು ; ಇಷ್ಟು ಮಾತ್ರವಲ್ಲ. ಈಗ ಪಟ್ಟಾಭಿಷೇಕಮಾಡಿಸಿಕೊಳ್ಳಲು ಸಿದ್ಧನಾಗಿರುವ ರಾಮನನ್ನು ಅರಣ್ಯಕ್ಕೆ ಕಳುಹಿಸುವ ಉಪಾಯವನ್ನೂ ಯೋಚಿಸಬೇಕು.*

ಎಂಟನೆಯ ಸರ್ಗವು ಮುಗಿಯಿತು

---

* (ಅನೇಕ ವಿಷಯಗಳಲ್ಲಿ ರಾಮಾಯಣದ ವಿಸ್ತಾರವೇ ಮಹಾಭಾರತವೆಂದು ಹೇಳಬಹುದಾಗಿದೆ. ಮಹಾಭಾರತದಲ್ಲಿ ಕಣಿಕನ ಉಪದೇಶದಿಂದಾಗಿ ಧೃತರಾಷ್ಟ್ರನ ಮನಸ್ಸು ವಿಕಲ್ಪವಾಯಿತು. ಕಡೆಯವರೆಗೂ ಅವನು ಕಣಿಕನು ಹೇಳಿದುದನ್ನು

ಮಂಥರೆಯ ದುರ್ಬೋಧನೆಯಿಂದ ಪ್ರಭಾವಿತಳಾದ ಕೈಕೇಯಿಯು ದಶರಥನನ್ನು ವಿಮೋಹಗೊಳಿಸಲು ಕೋಪಭವನವನ್ನು ಪ್ರವೇಶಿಸಿದುದು

ಏವಮುಕ್ತಾ ತು ಕೈಕೇಯೀ ಕ್ರೋಧೇನ ಜ್ವಲಿತಾನನಾ ।
ದೀರ್ಘಮುಷ್ಣಂ ವಿನಿಶ್ವಸ್ಯ ಮನ್ಥರಾಮಿದಮಬ್ರವೀತ್ ॥೧॥

(ಕೈಕೇಯಿಯು ರಾಮನ ವಿಷಯದಲ್ಲಿ ಎಷ್ಟೇ ಅಕ್ಕರೆಯಿಂದಿದ್ದರೂ ವಾಕ್ಯವಿಶಾರದಳಾದ ಮಂಥರೆಯು ಭರತನ ತಾಯಿಯ ಮನಸ್ಸನ್ನು ಕದಡಿಯೇಬಿಟ್ಟಳು.) ಮಂಥರೆಯು ಹೀಗೆ ಹೇಳಿದನಂತರ ಕೈಕೇಯಿಯು ಕೋಪದಿಂದ ಕೆಂಡದಂತೆ ಕೆಂಪಾದ ಮುಖಭಾವವನ್ನು ಹೊಂದಿದವಳಾಗಿ ಸುದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಮಂಥರೆಗೆ ಹೇಳಿದಳು :

ಅದ್ಯ ರಾಮಮಿತಃ ಕ್ಷಿಪ್ರಂ ವನಂ ಪ್ರಸ್ಥಾಪಯಾಮ್ಯಹಮ್ ।
ಯೌವರಾಜ್ಯೇ ಚ ಭರತಂ ಕ್ಷಿಪ್ರಮೇವಾಭಿಷೇಚಯೇ ॥೨॥

ಇದಂ ತ್ವಿದಾನೀಂ ಸಂಪಶ್ಯ ಕೇನೋಪಾಯೇನ ಮನ್ಥರೇ ।
ಭರತಃ ಪ್ರಾಪ್ನುಯಾದ್ರಾಜ್ಯಂ ನ ತು ರಾಮಃ ಕಥಂಚನ ॥೩॥

"ಮಂಥರೇ! ನನ್ನ ಸಾಹಸವನ್ನಾದರೂ ನೋಡು! ಈಗಲೇ ನಾನು ಬಹಳ ಶೀಘ್ರವಾಗಿಯೇ ರಾಮನನ್ನು ಅಯೋಧ್ಯೆಯಿಂದ ಕಾಡಿಗೆ

ಮರೆಯಲೇ ಇಲ್ಲ. ರಾಮನ ಮೇಲೆ ಕೈಕೇಯಿಗಿದ್ದ ದೃಢವಿಶ್ವಾಸವು ಮಂಥರೆಯ ಉಪದೇಶದಿಂದ ನುಚ್ಚುನೂರಾಗಿ ಹೋಯಿತು. ಮಂಥರೆಯಂತೆ ಕಣಿಕನೂ ತರ್ಕಬದ್ಧವಾಗಿ ಮಾತನಾಡುತ್ತಾನೆ. ಒಂದು ಸುಳ್ಳನ್ನು ಪದೇ ಪದೇ ಹೇಳುತ್ತಿದ್ದರೆ ಅದು ನಿಜವಿರಬಹುದೆಂಬ ಭಾವನೆಯುಂಟಾಗುತ್ತದೆಂಬುದಕ್ಕೆ ಇಲ್ಲಿಯ ಪ್ರಕರಣವು ಜ್ವಲಂತನಿದರ್ಶನವಾಗಿದೆ. ಶ್ರೀರಾಮನ ಸ್ವಭಾವವನ್ನು ಕೈಕೇಯಿಯು ಚೆನ್ನಾಗಿ ತಿಳಿದುಕೊಂಡಿದ್ದಳು. ಆದರೂ ರಾಮನು ರಾಜ್ಯಕ್ಕಾಗಿ ಭರತನನ್ನು ನಾಶಗೊಳಿಸುವನೆಂದು ಒತ್ತಿಯೊತ್ತಿ ನಾಲ್ಕಾರು ಬಾರಿ ಹೇಳಿದ ಮಂಥರೆಯ ಮಾತು ಕೈಕೇಯಿಯ ಮನಸ್ಸನ್ನೇ ಸಂಪೂರ್ಣವಾಗಿ ಬದಲಾಯಿಸಿಬಿಟ್ಟಿತು. ದುರಂತರೂಪದಲ್ಲಿದ್ದರೂ ರಾಮಾಯಣ-ಮಹಾಭರತಗಳಲ್ಲಿ ಮಂಥರೆ-ಕಣಿಕರ ಪಾತ್ರಗಳು ಬಹುಮುಖ್ಯವಾದುವು.)

ಓಡಿಸಿಬಿಡುತ್ತೇನೆ. ಅಷ್ಟೇ ಶೀಘ್ರವಾಗಿ ಭರತನನ್ನು ಯುವರಾಜಪದವಿಯಲ್ಲಿಯೂ ಅಭಿಷೇಚಿಸುತ್ತೇನೆ. ಯಾವ ಉಪಾಯದಿಂದ ಭರತನು ರಾಜ್ಯವನ್ನು ಪಡೆಯಲು ಸಾಧ್ಯವಾಗುವುದೆಂಬುದನ್ನು ಈಗಲೇ ಯೋಚಿಸಿ ಹೇಳು. ರಾಮನು ಮಾತ್ರ ಯಾವುದೇ ಕಾರಣದಿಂದಲೂ ರಾಜ್ಯವನ್ನು ಪಡೆದುಕೊಳ್ಳಬಾರದು."

ಕೈಕೇಯಿಯು ಹೀಗೆ ಹೇಳಿದೊಡನೆಯೇ ಪಾಪಾತ್ಮಳಾದ ಮಂಥರೆಗೆ ಅಮಿತಾನಂದವಾಯಿತು. ರಾಮಾಭಿಷೇಕರೂಪವಾದ ಪ್ರಯೋಜನವನ್ನು ವಿನಾಶಗೊಳಿಸುತ್ತಾ ಹೇಳಿದಳು :

"ಕೈಕೇಯಿ! ಅಬ್ಬಾ! ಈಗಲಾದರೂ ನಾನು ಹೇಳಿದ್ದು ನಿಜವೆಂದು ನೀನು ಮನಗಂಡೆಯಲ್ಲವೇ! ನಿನ್ನ ಮಗನಾದ ಭರತನು ಈ ಅಖಂಡ ಸಾಮ್ರಾಜ್ಯವನ್ನು ಯಾವ ಉಪಾಯದಿಂದ ಪಡೆಯುವನೆಂಬುದನ್ನು ಹೇಳುವೆನು, ಕೇಳು. ಅದು ಸರಿ! ನಿನಗೀ ಉಪಾಯವು ತಿಳಿಯದೇ? ಅದು ನಿನ್ನ ಸ್ಮರಣೆಯಲ್ಲಿಲ್ಲವೇ? ಜ್ಞಾಪಕದಲ್ಲಿದ್ದರೂ ನನ್ನಿಂದ ಮರೆಮಾಚುತ್ತಿರುವೆಯಾ? ನಿನ್ನ ಹಿರಿಮೆಯನ್ನು ತೋರ್ಪಡಿಸಿಕೊಳ್ಳಲು ಆ ವಿಷಯವನ್ನು ನೀನೇ ನನಗೆ ಹಲವಾರು ಬಾರಿ ಹೇಳಿರುವೆ. ಈಗ ಅದೇ ವಿಷಯವನ್ನು ನನ್ನಿಂದ ಕೇಳಬೇಕೆಂದು ಬಯಸಿರುವೆಯಾ? ಆ ವಿಷಯವನ್ನು ನಾನೇ ಹೇಳಬೇಕು. ನಾನು ಹೇಳಿದ್ದನ್ನು ನೀನು ಕೇಳಬೇಕು–ಎಂಬ ಅಭಿಲಾಷೆಯು ನಿನಗಿರುವುದಾದರೆ ಹಾಗೆಯೇ ಆಗಲಿ. ನೀನು ನನಗೆ ಈ ಹಿಂದೆ ಹಲವು ಬಾರಿ ಹೇಳಿರುವ ವಿಷಯವನ್ನೇ ಈಗ ನಿನ್ನೊಡನೆ ಹೇಳುತ್ತೇನೆ. ಇದನ್ನು ಕೇಳಿದ ಮೇಲಾದರೂ ಆ ಉಪಾಯದಿಂದ ನಮ್ಮ ಈ ಎರಡು ಕಾರ್ಯಗಳನ್ನೂ ಸಾಧಿಸಲು ಸಾಧ್ಯವಾಗುವುದೇ?–ಎಂಬುದನ್ನು ನೀನೇ ವಿಮರ್ಶಿಸು."

ಹಾಸಿಗೆಯ ಮೇಲೆ ಕಾಲುಚಾಚಿಕೊಂಡು ಮಲಗಿ ಮಂಥರೆಯ ಮಾತನ್ನು ಕೇಳುತ್ತಿದ್ದ ಕೈಕೇಯಿಯು ಹಾಸಿಗೆಯಿಂದ ಸ್ವಲ್ಪ ಮೇಲೆದ್ದು ಕುಬ್ಜೆಗೆ ಹೇಳಿದಳು :

"ಹೇಳು! ಮಂಥರೆ! ಬೇಗ ಹೇಳು. ಯಾವ ಉಪಾಯದಿಂದ ಭರತನಿಗೆ ಈ ರಾಜ್ಯವು ಲಭಿಸುವಂತೆ–ರಾಮನಿಗೆ ಪಟ್ಟಾಭಿಷೇಕವಾಗದಂತೆ ಮಾಡಬಹುದೆಂಬುದನ್ನು ಹೇಳು."

ಕೈಕೇಯಿಯು ಹೀಗೆ ಹೇಳುತ್ತಲೇ ಪಾಪದರ್ಶಿನಿಯಾದ ಮಂಥರೆಯು ರಾಮನ ಪಟ್ಟಾಭಿಷೇಕವೆಂಬ ಪ್ರಯೋಜನವನ್ನು ವಿನಾಶಗೊಳಿಸುತ್ತಾ ಹೇಳಿದಳು :

"ಕೈಕೇಯಿ! ಹಿಂದೆ ದೇವಾಸುರಯುದ್ಧವು ನಡೆದ ಸಮಯದಲ್ಲಿ ಇಂದ್ರನಿಗೆ ಸಹಾಯಮಾಡುವ ಉದ್ದೇಶದಿಂದ ಅವನ ಪ್ರಾರ್ಥನೆಯನ್ನಂಗೀಕರಿಸಿ ನಿನ್ನ ಪತಿಯಾದ ದಶರಥನು ಅನೇಕ ಸಾಮಂತರಾಜರೊಡನೆ ನಿನ್ನನ್ನೂ ಕರೆದುಕೊಂಡು ದಕ್ಷಿಣದಿಕ್ಕಿಗೆ ಹೊರಟು ದಂಡಕಾರಣ್ಯದ ಮಧ್ಯದಲ್ಲಿದ್ದ ತಿಮಿಧ್ವಜನೆಂಬ ರಾಕ್ಷಸನ ರಾಜಧಾನಿಯಾದ ವೈಜಯಂತವೆಂದು ಪ್ರಸಿದ್ಧವಾಗಿದ್ದ ಪಟ್ಟಣಕ್ಕೆ ಹೋದನು. ತಿಮಿಧ್ವಜನು ಶಂಬರನೆಂಬ ಹೆಸರಿನಿಂದಲೂ ವಿಖ್ಯಾತನಾಗಿದ್ದನು. ಅವನು ರಾಕ್ಷಸರ ಪ್ರಮುಖನಾಗಿದ್ದುದಲ್ಲದೇ ಅನೇಕಾನೇಕ ಮಾಯೆಗಳನ್ನೂ ತಿಳಿದವನಾಗಿದ್ದನು. ಅವನು ದೇವತೆಗಳೆಲ್ಲರನ್ನೂ ಸೋಲಿಸಿ ಇಂದ್ರನೊಡನೆ ನೇರವಾಗಿ ಯುದ್ಧಕ್ಕೆ ಹೋದನು. ಆ ಸಂಗ್ರಾಮದಲ್ಲಿ ಶಸ್ತ್ರಗಳ ಘಾತಗಳಿಗೆ ಒಳಗಾಗಿ ಕ್ಷತ-ವಿಕ್ಷತರಾಗಿ ಯುದ್ಧರಂಗದಲ್ಲಿ ಪ್ರಜ್ಞಾಹೀನರಾಗಿ ಬಿದ್ದಿದ್ದ ಇಂದ್ರನ ಸೈನಿಕರನ್ನು ರಾಕ್ಷಸರು ರಾತ್ರಿಯಲ್ಲಿ ಬಂದು ಕೊಂದುಹಾಕುತ್ತಿದ್ದರು. ಆ ಸಮಯದಲ್ಲಿ ಇಂದ್ರನ ಸಹಾಯಕ್ಕೆಂದು ಹೋದ ಮಹಾಬಾಹುವಾದ ದಶರಥನು ರಾಕ್ಷಸರೊಡನೆ ಬಹುಘೋರವಾದ ಯುದ್ಧವನ್ನು ಮಾಡಿದನು. ರಾಕ್ಷಸರ ಶಸ್ತ್ರಗಳ ಸತತ ಪ್ರಹಾರದಿಂದಾಗಿ ದಶರಥನ ಸರ್ವಾಂಗಗಳೂ ನುಚ್ಚುನೂರಾದುವು. ಶರೀರಾದ್ಯಂತವೂ ಕ್ಷತ-ವಿಕ್ಷತನಾಗಿದ್ದ ದಶರಥರಾಜನನ್ನು ಅಂದು ರಾತ್ರಿ ರಾಕ್ಷಸರು ಕೊಂದೇಬಿಡುತ್ತಿದ್ದರು. ಅಂತಹ ಒಂದು ಮಹಾವಿಪತ್ತು ರಾಜನಿಗೊದಗಿದ್ದಾಗ–ರಾಜನು ಪ್ರಜ್ಞಾಹೀನನಾಗಿ ರಥದಲ್ಲಿ ಬಿದ್ದಿದ್ದ ವೇಳೆಯಲ್ಲಿ–ನೀನು ಯುದ್ಧರಂಗದಿಂದ ರಾಜನನ್ನು ಬೇರೆಯ ಕಡೆಗೆ ಒಯ್ದು ಅವನನ್ನು ರಕ್ಷಿಸಿದೆ. ಶೈತ್ಯೋಪಚಾರಾದಿಗಳನ್ನು ಮಾಡಿದನಂತರ ರಾಜನಿಗೆ ಪ್ರಜ್ಞೆಯು ಬಂದಿತು. ನೀನು ಮಾಡಿದ ಸಾಹಸಕಾರ್ಯವು ಅವನಿಗೆ ತಿಳಿಯಿತು. ಸುಪ್ರೀತನಾದ ಅವನು ನಿನಗೆರಡು ವರಗಳನ್ನು ಕೊಟ್ಟನು. '**ಯದಾ ಇಚ್ಛೇಯಂ ತದಾ ವರೌ ಗೃಹ್ಣೀಯಾಂ**'–'ಯಾವಾಗ ಬಯಸುವೆನೋ ಆಗ ನಾನು ನಿನ್ನಿಂದ ಎರಡು ವರಗಳನ್ನೂ ಪಡೆದುಕೊಳ್ಳುವೆನು'–ಎಂದು

ನೀನವನಿಗೆ ಹೇಳಿದೆ. ರಾಜನು ಹಾಗೆಯೇ ಆಗಲೆಂದನು. ಆ ವಿಷಯವು ನನಗೇನೂ ತಿಳಿದಿರಲಿಲ್ಲ. ನೀನೇ ಎಲ್ಲವನ್ನೂ ಹಿಂದೆ ನನಗೆ ಹೇಳಿದ್ದೆ. ನಿನ್ನ ಮೇಲೆ ನನಗಿರುವ ಪ್ರೀತಿಯ ವಿಶೇಷದಿಂದಾಗಿ ನೀನಂದು ಹೇಳಿದ–ನಿನ್ನ ಭಾಗ್ಯೋದಯಕ್ಕೆ ಕಾರಣಭೂತವಾದ–ಆ ಪ್ರಸಂಗವನ್ನು ನಾನು ಯಾವಾಗಲೂ ಮನಸ್ಸಿನಲ್ಲಿ ಸ್ಮರಿಸಿಕೊಳ್ಳುತ್ತಲೇ ಇದ್ದೆನು. ಈಗ ನೀನು ನಿನ್ನ ಆ ವರಗಳ ಬಲದಿಂದ ದಶರಥನನ್ನು ಬಲಾತ್ಕರಿಸಿ ರಾಮನ ಅಭಿಷೇಕಕ್ಕೆ ಸಿದ್ಧವಾಗಿರುವ ಸಂಭಾರಗಳೆಲ್ಲವನ್ನೂ ಹಿಂದಿರುಗಿಸುವ ಕಾರ್ಯಮಾಡು. ರಾಮನ ಪಟ್ಟಾಭಿಷೇಕಕ್ಕೆ ಅವಕಾಶಕೊಡಬೇಡ. ನಿನಗೆ ರಾಜನು ಎರಡು ವರಗಳನ್ನು ಕೊಟ್ಟಿದ್ದಾನಷ್ಟೆ? ಭರತನಿಗೆ ರಾಜ್ಯದ ಪಟ್ಟಾಭಿಷೇಕವಾಗಬೇಕೆಂಬ ಮೊದಲನೆಯ ವರವನ್ನೂ–ಹದಿನಾಲ್ಕು ವರ್ಷಗಳ ಕಾಲ ರಾಮನನ್ನು ಕಾಡಿಗೆ ಕಳುಹಿಸಬೇಕೆಂಬ ಎರಡನೆಯ ವರವನ್ನೂ ಕೇಳು. ಹದಿನಾಲ್ಕು ವರ್ಷಗಳ ಕಾಲ ರಾಮನನ್ನು ಕಾಡಿಗೆ ಕಳುಹಿಸಿ ಇಂದಿನಿಂದಲೇ ರಾಜ್ಯ ಪರಿಪಾಲನೆಮಾಡುವ ಭರತನ ವಿಷಯದಲ್ಲಿ ಪ್ರಜೆಗಳಿಗೆ ಕಾಲಾನುಕ್ರಮ ವಾಗಿ ಅನುರಾಗವು ಬೆಳೆದೇ ಬೆಳೆಯುತ್ತದೆ. (ಆ ವೇಳೆಗೆ ರಾಮನ ನೆನಪು ಪ್ರಜೆಗಳಿಗೆ ಇಲ್ಲದೆಯೇ ಹೋಗಬಹುದು. ಭರತನ ಮೇಲಿನ ಪ್ರೀತಿಯೇ ಪ್ರಜೆಗಳಲ್ಲಿ ಸ್ಥಿರವಾಗಿ ಉಳಿದು ಹದಿನಾಲ್ಕು ವರ್ಷಗಳು ಕಳೆದ ಮೇಲೂ ಭರತನೇ ರಾಜನಾಗಿ ಮುಂದುವರಿಯಲು ಅವಕಾಶವಾಗುತ್ತದೆ.)

ಅಶ್ವಪತಿಯ ಮಗಳೇ! ಈಗಲೇ ನೀನು ಕೋಪದ ಮನೆಯನ್ನು ಪ್ರವೇಶಿಸು. ಕೋಪಗೊಂಡಿರುವವಳಂತೆ ನಟಿಸು. ಇದಕ್ಕೆ ಪೂರಕವಾಗಿ ಆಸ್ತರಣವಿಲ್ಲದ ಬರಿಯ ನೆಲದ ಮೇಲೆ ಮಲಗು. ಹಳೆಯದಾದ ಮತ್ತು ಕೊಳೆಯಾಗಿರುವ ಸೀರೆಯನ್ನುಟ್ಟುಕೋ. ರಾಜನು ಬಂದನೆಂದರೆ ಅವನ ಕಡೆಗೆ ತಿರುಗಿಯೂ ನೋಡಬೇಡ. ಅವನೊಡನೆ ಮಾತನ್ನೂ ಆಡಬೇಡ. ರಾಜನು ಬಂದುದನ್ನು ನೋಡಿ ನೆಲದ ಮೇಲೆ ಹೊರಳಾಡುತ್ತಾ ಶೋಕವನ್ನು ವ್ಯಕ್ತಪಡಿಸು. ಗಟ್ಟಿಯಾಗಿ ರೋದನಮಾಡು. ನೀನು ನಿನ್ನ ಪತಿಗೆ ಅತ್ಯಂತ ಪ್ರೀತಿಪಾತ್ರಳಾದ ಪತ್ನಿಯಾಗಿರುವೆ. ಇದರಲ್ಲಿ ಸಂಶಯವೇ ಇಲ್ಲ. ನಿನ್ನ ಸಲುವಾಗಿ, ನಿನಗೆ ಪ್ರೀತಿಯನ್ನುಂಟುಮಾಡುವ ಸಲುವಾಗಿ ನಿನ್ನ ಗಂಡನು ಅಗ್ನಿಪ್ರವೇಶವನ್ನಾದರೂ ಮಾಡುತ್ತಾನೆ. ನಿನಗೆ ಕೋಪಬರುವಂತೆ

ನಡೆದುಕೊಳ್ಳಲು ಮತ್ತು ಕೋಪಗೊಂಡ ನಿನ್ನನ್ನು ನೋಡಲು ಅವನಿಂದ ಸರ್ವಥಾ ಸಾಧ್ಯವಾಗುವುದಿಲ್ಲ. ನೀನು ಸಂತೋಷವಾಗಿರುವುದನ್ನೇ ಅವನು ಸದಾ ಬಯಸುತ್ತಾನೆ. ನಿನಗೆ ಪ್ರಿಯವನ್ನುಂಟುಮಾಡಲು ಅಥವಾ ಸಂತೋಷವನ್ನುಂಟುಮಾಡಲು ಪ್ರಾಣಗಳನ್ನಾದರೂ ತ್ಯಜಿಸಬಲ್ಲನು. ನಿನ್ನ ಮಾತನ್ನು ಅತಿಕ್ರಮಿಸಿ ನಡೆಯಲು ಕೂಡ ರಾಜನು ಶಕ್ತನಲ್ಲ. ಮಂದ ಸ್ವಭಾವದವಳೇ! ನಿನ್ನ ಸೌಂದರ್ಯದ ಪ್ರಭಾವವೆಷ್ಟೆಂಬುದನ್ನಾದರೂ ಮನಗಾಣು. ರಾಜನನ್ನು ಹೇಳಿದ ಹಾಗೆ ಕೇಳುವಂತೆ ಮಾಡುವ ಅಪಾರವಾದ ಶಕ್ತಿಯು ನಿನ್ನಲ್ಲಿದೆ. ಈ ಸಮಯದಲ್ಲವನು ನಿನಗೆ ವಿಧ-ವಿಧವಾದ ಬಹುಮೂಲ್ಯವಾದ, ಅಪಾರವಾದ ಮಣಿ-ಮುತ್ತು-ಸುವರ್ಣ-ರತ್ನಗಳನ್ನು ಕೊಡಬಹುದು. ಅದಕ್ಕೆ ನೀನು ಮನಸೋತುಬಿಡಬೇಡ.

ಮಹಾಭಾಗಳೇ! ದೇವಾಸುರಯುದ್ಧಸಮಯದಲ್ಲಿ ದಶರಥನು ಯಾವ ಎರಡು ವರಗಳನ್ನು ಕೊಟ್ಟಿದ್ದನೋ ಆ ವರಗಳನ್ನು ನೆನಪುಮಾಡಿ ಕೊಡು. ಆ ವರಗಳ ಪ್ರಯೋಜನವು ನಿನ್ನ ಕೈಬಿಟ್ಟು ಹೋಗಬಾರದು. ಆ ವರಗಳ ಪ್ರಯೋಜನವನ್ನು ಈ ಸಮಯದಲ್ಲಿ ನೀನು ಪಡೆದುಕೊಳ್ಳಲೇಬೇಕು. ರಾಜನು ತಾನಾಗಿಯೇ ಬಂದು ಅಳುತ್ತಾ ಹೊರಳಾಡುತ್ತಿರುವ ನಿನ್ನನ್ನು ಎಬ್ಬಿಸಿ ಸಮಾಧಾನಗೊಳಿಸಲು ಪ್ರಯತ್ನಿಸಿದಾಗ ನೀನು ಆ ಎರಡು ವರಗಳ ವಿಷಯವನ್ನು ಅವನ ಜ್ಞಾಪಕಕ್ಕೆ ತರಬೇಕು ಮತ್ತು ಆ ವರಗಳನ್ನು ನೆರವೇರಿಸಿಕೊಡುವೆನೆಂದು ಅವನಿಂದ ಪುನಃ ಪ್ರತಿಜ್ಞೆಮಾಡಿಸಿಕೊಳ್ಳಬೇಕು. ಅನಂತರವೇ ನೀನು ವರಗಳ ಸ್ವರೂಪವೇನೆಂಬುದನ್ನು ಹೊರಗೆಡಹಬೇಕು.

ರಾಮಂ ಪ್ರವ್ರಾಜಯಾರಣ್ಯೇ ನವ ವರ್ಷಾಣಿ ಪಞ್ಚ ಚ ।
ಭರತಃ ಕ್ರಿಯತಾಂ ರಾಜಾ ಪೃಥಿವ್ಯಾಃ ಪಾರ್ಥಿವರ್ಷಭ ॥೩೦॥

‘ರಾಜಶ್ರೇಷ್ಠನೇ! ಮೊದಲನೆಯ ವರವಾಗಿ ರಾಮನನ್ನು ಹದಿನಾಲ್ಕು ವರ್ಷಗಳ ಕಾಲ ಅರಣ್ಯಕ್ಕೆ ಕಳುಹಿಸು. ಎರಡನೆಯ ವರವಾಗಿ ಭರತನನ್ನು ಈ ಭೂಮಂಡಲಕ್ಕೆ ರಾಜನನ್ನಾಗಿ ಮಾಡು.’

ಕೈಕೇಯಿ! ಹದಿನಾಲ್ಕು ವರ್ಷಗಳ ಕಾಲ ರಾಮನು ಕಾಡಿಗೆ ಹೋಗ

ಲಾಗಿ ಭರತನು ಸುವ್ಯವಸ್ಥಿತವಾದ ರಾಜ್ಯಾಡಳಿತದಿಂದ ವೃದ್ಧಿಯನ್ನು ಹೊಂದುತ್ತಾನೆ. ಪ್ರಜೆಗಳ ಮಧ್ಯದಲ್ಲಿ ಚೆನ್ನಾಗಿ ಬೇರೂರುತ್ತಾನೆ. ಸಮೃದ್ಧಿಯನ್ನು ಹೊಂದಿದನಂತರ ಮತ್ತು ಪ್ರಜೆಗಳ ಮನಸ್ಸಿನಲ್ಲಿ ಸ್ಥಾನವನ್ನು ಕಲ್ಪಿಸಿಕೊಂಡನಂತರ ಹದಿನಾಲ್ಕು ವರ್ಷಗಳನ್ನು ಕಳೆದು ಬರುವ ರಾಮನ ಸ್ಮರಣೆಯೂ ಪ್ರಜೆಗಳಿಗೆ ಇರಲಾರದು. ಹೀಗಾಗಿ ನಿನ್ನ ಮಗನು ಉಳಿದ ಆಯುಷ್ಯದ ಭಾಗವನ್ನು ರಾಜನಾಗಿಯೇ ಕಳೆಯುತ್ತಾನೆ. ದೇವಿ! ಆದುದರಿಂದ ಕನಿಕರಕ್ಕೆ ಸ್ವಲ್ಪವಾದರೂ ಎಡೆಮಾಡಿಕೊಡದೆ ರಾಮನನ್ನು ಅರಣ್ಯಕ್ಕೆ ಕಳುಹಿಸಬೇಕೆನ್ನುವ ಆ ಎರಡನೆಯ ವರವನ್ನು ನೀನು ಯಾಚಿಸಲೇಬೇಕು. ಹೀಗೆ ಮಾಡುವುದರಿಂದ ನಿನ್ನ ಮತ್ತು ನಿನ್ನ ಪುತ್ರನ ಸರ್ವಾರ್ಥಗಳೂ ಸಿದ್ಧಿಸುತ್ತವೆ. ಹೀಗೆ ಹದಿನಾಲ್ಕು ವರ್ಷಗಳ ಕಾಲ ಕಾಡಿಗೆ ಕಳುಹಿಸಲ್ಪಡುವ ರಾಮನು ಹಿಂದಿರುಗಿ ಬಂದನಂತರ ಪ್ರಜೆಗಳಿಗೆ ಅಪ್ರಿಯನಾಗುತ್ತಾನೆ. ಅವನನ್ನು ಕೇಳುವವರೇ ಇರುವುದಿಲ್ಲ. ಹತಶತ್ರುವಾದ ನಿನ್ನ ಮಗನು ಚಿರಕಾಲ ರಾಜನಾಗಿರುತ್ತಾನೆ. ರಾಮನು ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಅಯೋಧ್ಯೆಗೆ ಹಿಂದಿರುಗುವ ವೇಳೆಗೆ ನಿನ್ನ ಮಗನು ಮಂತ್ರಿ-ಸೇನಾಪತಿ-ಪುರೋಹಿತರಲ್ಲಿಯೂ, ಪ್ರಜೆಗಳಲ್ಲಿಯೂ ಬೇರೂರಿರುತ್ತಾನೆ. ಅವರಲ್ಲಿ ತನ್ನ ಪ್ರಭಾವವನ್ನು ಬೆಳೆಸಿಕೊಂಡಿರುತ್ತಾನೆ. ದೇಶದ ಮುಖ್ಯಾಧಿಕಾರಿಗಳನ್ನು ಭರತನು ತನ್ನ ಕಡೆಗೆ ಮಾಡಿಕೊಂಡಿರುತ್ತಾನೆ. ಜಿತೇಂದ್ರಿಯನಾಗಿರುವ ಅವನು ಸ್ನೇಹಿತರೊಡನೆ ವಿಶ್ವಾಸವನ್ನು ಗಳಿಸಿರುತ್ತಾನೆ. ರಾಮಾಭಿಷೇಕಕ್ಕೆಂದು ಸಿದ್ಧಮಾಡಿರುವ ಈ ಕಾಲವು ವರಗಳ ಯಾಚನೆಗೆ ಸರಿಯಾದ ಕಾಲವಾಗಿದೆ. ಆದುದರಿಂದ ನೀನು ನಿನ್ನ ಮನಸ್ಸಿನ ಭಯವನ್ನು ದೂರೀಕರಿಸಿ ರಾಜನನ್ನು ರಾಮಾಭಿಷೇಕದ ಸಂಕಲ್ಪದಿಂದ ಬಲಾತ್ಕಾರವಾಗಿಯೇ ಆದರೂ ವಿಮುಖನಾಗುವಂತೆ ಮಾಡು."

ಮಂಥರೆಯ ಈ ಬಗೆಯ ಯುಕ್ತಿಯುಕ್ತವಾದ ಚತುರತೆಯ ಮಾತುಗಳಿಂದ ರಾಮನ ವಿಷಯದಲ್ಲಿ ಪರಿಶುದ್ಧಾಂತಃಕರಣಳಾಗಿದ್ದ ಕೈಕೇಯಿಯು ಪೂರ್ಣವಾಗಿ ಪರಿವರ್ತನೆಹೊಂದಿದಳು. ಮಂಥರೆಯ ಅನರ್ಥಕರವಾದ ಸಲಹೆಯೇ ಸಾಧುವಾಗಿರುವುದೆಂದು ಅದನ್ನು ಪರಿಗ್ರಹಿಸಿದಳು. ಅವಳ ಮಾತನ್ನು ಸಂಪೂರ್ಣವಾಗಿ ನಂಬಿದಳು. ಇಂತಹ ಅಮೋಘವಾದ ಸಲಹೆ

ಯನ್ನು ನೀಡಿದುದಕ್ಕಾಗಿ ಕೈಕೇಯಿಯು ಸಂತಸಗೊಂಡಳು. ಅವಳ ಯುಕ್ತಿ ಯುಕ್ತವಾದ ಮಾತನ್ನು ಕೇಳುತ್ತಿದ್ದಂತೆಲ್ಲಾ ಕೈಕೇಯಿಯು ದಾರಿತಪ್ಪಿದ ಹೆಣ್ಣುಕುದುರೆಯಂತಾದಳು. ನೋಡಲು ಕಡುಚೆಲುವೆಯಾಗಿದ್ದ (ಒಳ್ಳೆಯ ಜ್ಞಾನವುಳ್ಳವಳಾಗಿದ್ದ) ಅವಳು ಮಂಥರೆಯ ಬುದ್ಧಿಶಕ್ತಿಯ ವಿಷಯವಾಗಿ ಆಶ್ಚರ್ಯಗೊಂಡು ಹೇಳಿದಳು :

ಕುಬ್ಜೇ ತ್ವಾಂ ನಾಭಿಜಾನಾಮಿ ಶ್ರೇಷ್ಠಾಂ ಶ್ರೇಷ್ಠಾಭಿಧಾಯಿನೀಮ್ ।
ಪೃಥಿವ್ಯಾಮಸಿ ಕುಬ್ಜಾನಾಮುತ್ತಮಾ ಬುದ್ಧಿನಿಶ್ಚಯೇ ॥೩೮॥

"ಕುಬ್ಜೆ! ನೀನು ಇಷ್ಟೊಂದು ಚತುರೆಯೆಂಬುದನ್ನೂ ಮತ್ತು ಸಮಯೋಚಿತವಾಗಿ ಅತ್ಯುತ್ಕೃಷ್ಟವಾದ ಮತ್ತು ಶ್ರೇಷ್ಠವಾದ ಮಾತುಗಳನ್ನಾಡುವೆ ಯೆಂಬುದನ್ನೂ ನಾನು ತಿಳಿದೇ ಇರಲಿಲ್ಲ. ಈ ಪೃಥ್ವಿಯಲ್ಲಿರುವ ಕುಳ್ಳರಲ್ಲಿಯೇ ನೀನು ಪರಮಶ್ರೇಷ್ಠಳಾಗಿರುವೆಯೆಂಬುದರಲ್ಲಿ ಸಂಶಯವೇ ಇಲ್ಲ.* ನೀನು ನಿಶ್ಚಯವಾಗಿಯೂ ನನ್ನ ಹಿತಕ್ಕಾಗಿಯೇ ನಿತ್ಯವೂ ನಿಯುಕ್ತಳಾಗಿರುವೆ. ನನಗೆ ಹಿತಚಿಂತಕಳೆಂದರೆ ನೀನೊಬ್ಬಳೇ ಸರಿ. ನೀನು ನನಗೆ ತಿಳಿಯಹೇಳದಿದ್ದಿದ್ದರೆ ರಾಜನ ಕೃತ್ರಿಮಸಂಧಾನವನ್ನು ಅರಿತುಕೊಳ್ಳಲು ನನಗೆ ಸಾಧ್ಯವಾಗುತ್ತಲೇ ಇರಲಿಲ್ಲ. ಪ್ರಿಯಸಖಿ! ಪ್ರಪಂಚದಲ್ಲಿ ಬಹು ಮಂದಿ ಕುಳ್ಳರಿದ್ದಾರೆ. ಅವರ ಅವಯವಗಳೆಲ್ಲವೂ ವಕ್ರ-ವಕ್ರವಾಗಿರುತ್ತವೆ. ನೋಡಲು ಕೂಡ ಅತ್ಯಸಹ್ಯರಾಗಿ ಕಾಣುತ್ತಾರೆ. ಆದರೆ ನೀನು ಹಾಗಲ್ಲ. ಗಾಳಿಯ ಆಘಾತಕ್ಕೆ ಸಿಕ್ಕಿ ಬಗ್ಗಿರುವ ಕಮಲಪುಷ್ಪದಂತೆ ನಿನ್ನ ಬೆನ್ನು ಸ್ವಲ್ಪ ಗೂನಾಗಿದೆ. ಆದರೂ ನೀನು ನೋಡಲು ಕಡುಚೆಲುವೆ. ಪ್ರಿಯದರ್ಶನಳು. ನೋಡುತ್ತಿದ್ದರೆ ಮತ್ತೂ ನೋಡಬೇಕೆನ್ನಿಸುತ್ತದೆ. ನಿನ್ನ ವಕ್ಷಃಸ್ಥಳವು ಭುಜಗಳವರೆಗೂ ಉನ್ನತವಾಗಿ ವ್ಯಾಪಿಸಿಕೊಂಡಿದೆ. ನಿನ್ನ ವಕ್ಷಃಸ್ಥಳದ

---

* ಕುಳ್ಳರು ಸಾಮಾನ್ಯವಾಗಿ ಬುದ್ಧಶಾಲಿಗಳೆಂಬ ಪ್ರತೀತಿಯಿದೆ. ಅಂತಹ ಬುದ್ಧಿವಂತರಾದ ಕುಳ್ಳರಲ್ಲಿ ಅತಿಬುದ್ಧಿಶಾಲಿಯಾಗಿದ್ದಳು ಮಂಥರೆ. ಹಾಗಿಲ್ಲದಿದ್ದರೆ ಕೈಕೇಯಿಯ ಸುದೃಢವಾದ ಬುದ್ಧಿಯನ್ನು ತಿರುಗಿಸಲು ಸಾಧ್ಯವಾಗುತ್ತಿರಲಿಲ್ಲ. ಕುಳ್ಳರಿಗಿರುವ ವಿಶೇಷಬುದ್ಧಿಯನ್ನೂ ಮತ್ತು ಈ ವಿಧವಾದ ಕುತ್ಸಿತಕಾರ್ಯಕ್ಕೆ ಬುದ್ಧಿಯನ್ನು ನಿಯೋಜಿಸುವ ಸ್ವಭಾವವು ಅವರಲ್ಲಿರುವುದನ್ನೂ ಗಮನಿಸಿಯೇ ಪ್ರಾಯಶಃ 'ಕಳ್ಳರನ್ನು ನಂಬಿದರೂ ಕುಳ್ಳರನ್ನು ನಂಬಬಾರದು'–ಎಂಬ ಗಾದೆಯು ಹುಟ್ಟಿರಬಹುದು.

ಔನ್ನತ್ಯವನ್ನು ಕಂಡು ನಾಚಿ ಸಂಕಟದಿಂದ ಕೃಶವಾಗಿ ಹೋಗಿರುವುದೋ– ಎಂಬಂತಿದೆ ನಿನ್ನ ಸುಂದರವಾದ ನಾಭಿಯಿಂದ ಕೂಡಿರುವ ಹೊಟ್ಟೆ. (ನಿನ್ನ ಹೊಟ್ಟೆಯು ತೆಳ್ಳಗಿದೆ.) ನಿನ್ನ ನಿತಂಬಪ್ರದೇಶವು (ಪೃಷ್ಠಭಾಗವು) ವಿಶಾಲವಾಗಿದೆ. ನಿನ್ನೆರಡು ಸ್ತನಗಳೂ ಸ್ಥೂಲವಾಗಿವೆ. ನಿನ್ನ ಮುಖವು ಕಳಂಕರಹಿತನಾದ ಚಂದ್ರನಿಗೆ ಸಮಾನವಾಗಿದೆ. ಅಬ್ಬಾ! ನಿಶ್ಚಯವಾಗಿಯೂ ನೀನಿಂದು ಎಷ್ಟು ಚೆಲುವೆಯಾಗಿ ಕಾಣುವೆ! ಒಡ್ಯಾಣದಿಂದ ಪರಿಶೋಭಿತ ವಾಗಿರುವ ನಿನ್ನ ಕಟಿಪುರೋಭಾಗವು ರೋಮರಾಜಿಯಿಂದ ಕೂಡಿರದೇ ಸ್ವಚ್ಛವಾಗಿದೆ. ನೀನು ಧರಿಸಿರುವ ರಜ್ಜುರೂಪವಾದ ಒಡ್ಯಾಣದಿಂದ ನಿನ್ನ ಜಘನವು ಮತ್ತೂ ಸುಂದರವಾಗಿ ಕಾಣುತ್ತಿದೆ. ನಿನ್ನ ಮೊಣಕಾಲುಗಳು ಬಹಳ ಸೊಗಸಾಗಿ ವಿನ್ಯಸ್ತವಾಗಿವೆ. ನಿನ್ನೆರಡು ಪಾದಗಳೂ ವಿಸ್ತಾರವಾಗಿವೆ. ವಿಶಾಲವಾದ ಮತ್ತು ದೀರ್ಘವಾದ ತೊಡೆಗಳಿಂದ ಕೂಡಿರುವೆ. ಹೆಚ್ಚು ನವುರಾದ ವಸ್ತ್ರವನ್ನು ಧರಿಸಿ ನನ್ನ ಮುಂದೆ ಸುಳಿದಾಡುತ್ತಿದ್ದರೆ ರಾಜಹಂಸಿ ಯಂತೆಯೇ ವಿರಾಜಿಸುವೆ. ಅಸುರರಿಗೆ ಒಡೆಯನಾದ ಶಂಬರಾಸುರನಲ್ಲಿ ಸಾವಿರ ಮಾಯೆಗಳಿವೆಯೆಂದು ಹೇಳುತ್ತಾರೆ. ಆ ಸಾವಿರ ಮಾಯೆಗಳೇ ಅಲ್ಲದೇ ಇನ್ನೂ ಸಾವಿರಾರು ಮಾಯೆಗಳು ನಿನ್ನ ಹೃದಯದಲ್ಲಿ ತುಂಬಿ ಕೊಂಡಿವೆ. ರಥಚಕ್ರದ ನಡುಭಾಗದಲ್ಲಿರುವ ಗುಂಭದಂತೆ ನಿನ್ನ ಗೂನು ಉದ್ದವಾಗಿಯೂ ವಿಸ್ತಾರವಾಗಿಯೂ ಇದೆ. ಚಾತುರ್ಯದ ಬುದ್ಧಿಗಳೂ,* ಕ್ಷತ್ರಿಯನೀತಿಗಳೂ, ಮಾಯೆಗಳೂ ನಿನ್ನ ಈ ಗೂನಿನಲ್ಲಿಯೇ ಅಡಗಿಕೊಂಡಿವೆ. ಅಂತಹ ಅಮೋಘವಾದ ನಿನ್ನ ಗೂನಿಗೆ ಈ ಸುವರ್ಣ ಮಾಲೆಯನ್ನು ಹಾಕುತ್ತೇನೆ.

ಕುಬ್ಜೆ! ನಿನ್ನ ಸಲಹೆಯಂತೆ ನಮ್ಮ ಯೋಜನೆಗಳು ಕೈಗೂಡಿ ರಾಮನಿಗೆ ಸಿದ್ಧವಾಗಿರುವ ಅಭಿಷೇಕಸಂಭಾರಗಳಿಂದಲೇ ಭರತನಿಗೆ ರಾಜ್ಯಾಭಿಷೇಕವಾಗಿ ರಾಘವನು ಅರಣ್ಯಕ್ಕೆ ಹೊರಟು ಹೋದನೆಂದರೆ–

---

* **ಮತಯಃ =** ಎಂದು ಬಹುವಚನವನ್ನು ಇಲ್ಲಿ ಹೇಳಿರುತ್ತಾರೆ. ಬುದ್ಧಿಯ ನಾನಾತ್ವ ವನ್ನು ಹೀಗೆ ಹೇಳಿದ್ದಾರೆ. ಸ್ಮೃತಿರ್ವ್ಯತೀತವಿಷಯಾ ಮತಿರಾಗಾಮಿಗೋಚರಾ । ಬುದ್ಧಿಸ್ತಾತ್ಕಾಲಿಕೀ ಜ್ಞೇಯಾ ಪ್ರಜ್ಞಾ ತ್ರೈಕಾಲಿಕೀ ಮತಾ ॥ ಮುಂದೇನಾಗುವು ದೆಂಬುದನ್ನು ತಾರ್ಕಿಕವಾಗಿ ಯೋಚಿಸಿ ನಿರ್ಣಯಿಸುವುದು ಮತಿ. ಆಕಸ್ಮಿಕವಾಗಿ

ಇಷ್ಟಾರ್ಥಪ್ರಾಪ್ತಿಯಿಂದ ಸಂತುಷ್ಟಳಾಗಿ ನಾನು ಪರಮಪ್ರೀತಳಾಗಿ ಉತ್ತಮಜಾತಿಯ, ಪುಟಕ್ಕೆ ಹಾಕಿದ ಚಿನ್ನದ ರೇಕುಗಳನ್ನು ನಿನ್ನ ಗೂನಿಗೆ ಅಂಟಿಸುತ್ತೇನೆ. (ಸುವರ್ಣಕಂಚುಕವನ್ನು ನಿನ್ನ ಗೂನಿಗೆ ತೊಡಿಸುತ್ತೇನೆ.) ಸುಂದರವಾದ ನಿನ್ನ ಮುಖಕ್ಕೆ ಚಿತ್ರಿತವಾದ, ಶುಭಪ್ರದವಾದ ಚಿನ್ನದ ತಿಲಕವನ್ನಿಡುತ್ತೇನೆ. ಶುಭಪ್ರದವಾದ ಅನೇಕ ಆಭರಣಗಳನ್ನು ಮಾಡಿಸಿ ಕೊಡುತ್ತೇನೆ. ನಾನು ಮಾಡಿಸಿಕೊಡುವ ಆಭರಣಗಳನ್ನು ಧರಿಸಿ ಶುಭ್ರವಾದ ವಸ್ತ್ರಗಳನ್ನು ತೊಟ್ಟು ನಿಶ್ಚಯವಾಗಿಯೂ ನೀನು ದೇವತೆಯೋಪಾದಿಯಲ್ಲಿ ಸಂಚರಿಸುವೆ. ಕಾಂತಿಯ ವಿಷಯದಲ್ಲಿ ಆಕಾಶದಲ್ಲಿರುವ ಚಂದ್ರನೊಡನೆ ಸ್ಪರ್ಧಿಸುವಂತಹ ಅಪ್ರತಿಮವಾದ ಮುಖವುಳ್ಳ ನೀನು ನಮ್ಮ ಶತ್ರುಗಳನ್ನು ತಿರಸ್ಕರಿಸುತ್ತಾ ರಾಜಮಾರ್ಗದಲ್ಲಿ ಸಂಚರಿಸುವೆ. ನೀನು ಯಾವಾಗಲೂ ನನ್ನ ಸೇವೆಯನ್ನು ಮಾಡುತ್ತಿರುವಂತೆ ಸರ್ವಾಭರಣಭೂಷಿತೆಯರಾದ ಕುಬ್ಜೆಯರು ನಿನ್ನ ಪಾದಸೇವೆಯಲ್ಲಿ ಸರ್ವದಾ ನಿರತರಾಗಿರುತ್ತಾರೆ."

ಹೀಗೆ ತನ್ನನ್ನು ಪ್ರಶಂಸೆಮಾಡುತ್ತಾ ಯಜ್ಞವೇದಿಕೆಯಲ್ಲಿರುವ ಅಗ್ನಿಜ್ವಾಲೆಯಂತೆ ಶುಭ್ರವಾದ ಹಂಸತೂಲಿಕಾತಲ್ಪದಲ್ಲಿ ಮಲಗಿದ್ದ ಕೈಕೇಯಿಗೆ ಮಂಥರೆಯು ಹೇಳಿದಳು :

ಗತೋದಕೇ ಸೇತುಬನ್ಧೋ ನ ಕಲ್ಯಾಣಿ ವಿಧೀಯತೇ ।
ಉತ್ತಿಷ್ಠ ಕುರು ಕಲ್ಯಾಣಿ ರಾಜಾನಮನುದರ್ಶಯ ॥೫೩॥

"ನೀರೆಲ್ಲವೂ ಹರಿದುಹೋದ ಮೇಲೆ ಯಾರೂ ಅಡ್ಡಗಟ್ಟೆಯನ್ನು ಕಟ್ಟಲು ಯತ್ನಿಸುವುದಿಲ್ಲ. ರಾಮನಿಗೆ ಪಟ್ಟಾಭಿಷೇಕವಾಗಿಬಿಟ್ಟರೆ ನೀನು ಪಡೆದುಕೊಂಡಿರುವ ವರಗಳಿಗೆ ಯಾವ ಪ್ರಯೋಜನವೂ ಇರುವುದಿಲ್ಲ. ಮಂಗಳಾಂಗಿ! ಎದ್ದೇಳು ; ಕಾರ್ಯಪ್ರವೃತ್ತಳಾಗು. ಕ್ರೋಧಾಗಾರಕ್ಕೆ ಹೋಗಿ ರಾಜನನ್ನು ನಿರೀಕ್ಷಿಸುತ್ತಿರು."

ಒದಗಿದ ಸಮಸ್ಯೆಗಳನ್ನು ಒಡನೆಯೇ ಪರಿಹರಿಸುವುದು ಬುದ್ಧಿ. ಹಿಂದೇನಾಯಿತು? ಇಂದು ಹೇಗೆ ನಡೆಯುತ್ತಿದೆ? ಮುಂದೇನಾಗಬಹುದು?—ಈ ಮೂರು ವಿಷಯಗಳನ್ನೂ ಯೋಚಿಸಿ ನಿರ್ಣಯಿಸುವುದು ಪ್ರಜ್ಞೆ. ಹಿಂದಿನ ವಿಷಯಗಳನ್ನು ಸ್ಮರಣೆಗೆ ತಂದು ಕೊಳ್ಳುವುದು ಸ್ಮೃತಿ.

ಹೀಗೆ ಮಂಥರೆಯಿಂದ ಪ್ರೋತ್ಸಾಹಿತಳಾದ, ವಿಶಾಲಾಕ್ಷಿಯಾದ, ರೂಪೈಶ್ವರ್ಯಗಳಿಂದ ಗರ್ವಿಷ್ಠಳಾಗಿದ್ದ ಕೈಕೇಯಿಯು ಮಂಥರೆಯೊಡನೆ ಕ್ರೋಧಾಗಾರವನ್ನು ಪ್ರವೇಶಿಸಿದಳು. ಅನೇಕ ಲಕ್ಷವರಹಗಳ ಮೌಲ್ಯದ ಮುತ್ತಿನಹಾರವನ್ನೂ, ಅಮೂಲ್ಯವಾದ, ಶ್ರೇಷ್ಠವಾದ, ಶುಭಕರವಾದ ಆಭರಣಗಳೆಲ್ಲವನ್ನೂ ಬಿಚ್ಚಿ, ಕುಬ್ಜೆಯ ಮಾತಿಗೆ ಮಾರುಹೋಗಿದ್ದ, ಚಿನ್ನದ ಮೈಬಣ್ಣವುಳ್ಳ ವರಾಂಗನೆಯಾದ ಕೈಕೇಯಿಯು ನೆಲದ ಮೇಲೆ ಮಲಗಿ ಮಂಥರೆಗೆ ಹೇಳಿದಳು :

ಇಹ ವಾ ಮಾಂ ಮೃತಾಂ ಕುಬ್ಜೇ ನೃಪಾಯಾವೇದಯಿಷ್ಯಸಿ ।
ವನಂ ತು ರಾಘವೇ ಪ್ರಾಪ್ತೇ ಭರತಃ ಪ್ರಾಪ್ಸ್ಯತಿ ಕ್ಷಿತಿಮ್ ॥೫೭॥

ಸುವರ್ಣೇನ ನ ಮೇ ಹ್ಯರ್ಥೋ ನ ರತ್ನೈರ್ನ ಚ ಭೋಜನೈಃ ।
ಏಷ ಮೇ ಜೀವಿತಸ್ಯಾನ್ತೋ ರಾಮೋ ಯದ್ಯಭಿಷಿಚ್ಯತೇ ॥೫೮॥

"ಕುಬ್ಜೆ! ರಾಜನೇನಾದರೂ ನನ್ನ ಇಷ್ಟಾರ್ಥವನ್ನು ನಡೆಸಿಕೊಡದೇ ಹೊರಟುಹೋದರೆ ನಾನಿಲ್ಲಿಯೇ ಪ್ರಾಣಗಳನ್ನು ತೊರೆಯುತ್ತೇನೆ. ಅನಂತರ ನಾನು ಮೃತಳಾದ ವಾರ್ತೆಯನ್ನು ನೀನೇ ರಾಜನಿಗೆ ಹೇಳಬೇಕಾಗುತ್ತದೆ. ನನಗೆ ರಾಜನು ವರಗಳನ್ನು ಕೊಡಲೊಪ್ಪಿ ರಾಘವನೇನಾದರೂ ಅರಣ್ಯಕ್ಕೆ ಹೊರಟುಹೋದರೆ ನಮ್ಮ ಇಷ್ಟಾರ್ಥಸಿದ್ಧಿಗಾಗಿ ಭರತನು ರಾಜ್ಯವನ್ನು ಪಡೆದುಕೊಳ್ಳುತ್ತಾನೆ. ಸುವರ್ಣದಿಂದಾಗಲೀ, ರತ್ನಗಳಿಂದಾಗಲೀ, ಮೃಷ್ಟಾನ್ನ ಭೋಜನಗಳಿಂದಾಗಲೀ ನನಗಾವ ಪ್ರಯೋಜನವೂ ಇಲ್ಲ. ರಾಮನೇನಾ ದರೂ ಅಭಿಷಿಕ್ತನಾದರೆ ಅದೇ ನನ್ನ ಬದುಕಿನ ಕೊನೆಯೆಂದೂ ತಿಳಿ."

ಕೈಕೇಯಿಯ ಈ ದೃಢನಿಶ್ಚಯನ್ನು ಕೇಳಿ ಪುನಃ ಮಂಥರೆಯು ರಾಮನಿಗೆ ಹೆಚ್ಚು ಅಹಿತವೂ, ಭರತನ ತಾಯಿಗೆ ಹಿತವೂ ಆಗಿದ್ದ, ಅತ್ಯಂತ ಕ್ರೂರವಾಗಿದ್ದ ಮಾತುಗಳಿಂದ ದಶರಥನ ಅರಸಿಗೆ ಬೋಧಿಸಿದಳು :

"ಒಡತಿ! ರಾಮನೇನಾದರೂ ಈ ರಾಜ್ಯವನ್ನು ಪಡೆದುಬಿಟ್ಟರೆ ಆಗ ನೀನು ನಿಶ್ಚಯವಾಗಿಯೂ ನಿನ್ನ ಮಗನ ಸಮೇತಳಾಗಿ ಸಂತಾಪ

ಪಡುವೆ. ಆದುದರಿಂದ ನೀನು ಭರತನಿಗೆ ಪಟ್ಟಾಭಿಷೇಕವಾಗುವಂತೆ ಸಂಪೂರ್ಣವಾಗಿ ಪ್ರಯತ್ನಿಸು. ಧೃತಿಗೆಡಬೇಡ."

ಕುಬ್ಜೆಯ ಬಾಣರೂಪವಾದ ಚುಚ್ಚುಮಾತುಗಳಿಂದ ಕ್ಷಣ-ಕ್ಷಣಕ್ಕೂ ಇರಿಯಲ್ಪಡುತ್ತಿದ್ದ, ರಾಜಮಹಿಷಿಯಾದ ಕೈಕೇಯಿಯು ಮಂಥರೆಯ ಬುದ್ಧಿಕೌಶಲ್ಯವನ್ನೂ, ದೃಢನಿಶ್ಚಯವನ್ನೂ ಬಾರಿ-ಬಾರಿಗೂ ನೆನೆದು ವಿಸ್ಮಯಗೊಂಡು ತನ್ನ ಕೈಗಳೆರಡನ್ನೂ ಹೃದಯದಲ್ಲಿಟ್ಟುಕೊಂಡು ಕುಬ್ಜೆಯನ್ನು ಪುನಃ ಪುನಃ ಪ್ರಶಂಸೆಮಾಡುತ್ತಾ ಕುಪಿತಳಾಗಿ ಹೇಳಿದಳು :

"ಗೆಳತಿ! ರಾಮಾಭಿಷೇಕವು ಆಗಿಯೇ ಬಿಟ್ಟರೆ ನಾನಿಲ್ಲಿಂದಲೇ ಯಮನ ಮನೆಗೆ ಹೋದೆನೆಂಬ ವಾರ್ತೆಯನ್ನು ತಿಳಿದು ನನ್ನ ನಿಧನವಾರ್ತೆಯನ್ನು ರಾಜನಿಗೆ ತಿಳಿಸುವೆ. ರಾಜನೇನಾದರೂ ತಾನಿತ್ತ ವರವನ್ನು ನಡೆಸಿ ಕೊಟ್ಟು ಅದರ ಫಲವಾಗಿ ರಾಮನು ಚಿರಕಾಲ ಅರಣ್ಯಕ್ಕೆ ಹೊರಟು ಹೋದರೆ ಭರತನು ಪಟ್ಟಾಭಿಷಿಕ್ತನಾಗಿ ಸಮೃದ್ಧಕಾಮನಾಗುತ್ತಾನೆ. ಭರತನ ಎಲ್ಲ ಇಷ್ಟಾರ್ಥಗಳೂ ಸಿದ್ಧಿಸಿದಂತಾಗುತ್ತವೆ. 'ರಾಮನ ವನವಾಸ ಅಥವಾ ನನ್ನ ಮರಣ'–ಈ ಎರಡರಲ್ಲಿ ಯಾವುದಾದರೊಂದು ಆಗಿಯೇ ತೀರುತ್ತದೆ. ರಾಘವನು ಅರಣ್ಯಕ್ಕೆ ಹೋಗದಿದ್ದರೆ ನಾನು ಮಲಗಲು ಹಾಸಿಗೆಯನ್ನು ಹಾಕಿಕೊಳ್ಳುವುದಿಲ್ಲ ; ಮಾಲಿಕೆಗಳಿಂದ ಅಲಂಕರಿಸಿಕೊಳ್ಳುವುದಿಲ್ಲ ; ಚಂದನಾದಿಗಳಿಂದ ಶರೀರವನ್ನು ಲೇಪಿಸಿಕೊಳ್ಳುವುದಿಲ್ಲ ; ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿಕೊಳ್ಳುವುದಿಲ್ಲ ; ಊಟವನ್ನೂ ಮಾಡುವುದಿಲ್ಲ ; ಏನನ್ನೂ ಬಯಸುವುದಿಲ್ಲ. ಈ ಜೀವಿತವೂ ಬೇಡ. ಸತ್ತುಹೋಗುತ್ತೇನೆ."

ಹೀಗೆ ಕೈಕೇಯಿಯು ಅತ್ಯಂತ ಕ್ರೂರವಾದ ಮಾತನ್ನು ಹೇಳಿ ತನ್ನೆಲ್ಲಾ ಆಭರಣಗಳನ್ನೂ ಬಿಚ್ಚಿಟ್ಟಳು. ಯಾವ ಆಸ್ತರಣವೂ ಇಲ್ಲದ ಬರಿಯ ನೆಲದ ಮೇಲೆ ಆಕಾಶದಿಂದ ಜಾರಿಬಿದ್ದ ಕಿನ್ನರಿಯೋಪಾದಿಯಲ್ಲಿ ಅಸ್ತವ್ಯಸ್ತಳಾಗಿ ಮಲಗಿದಳು.

ಉತ್ಕಟವಾದ ಕೋಪವೆಂಬ ಕತ್ತಲಿನಿಂದ ಆವೃತವಾದ ಮುಖದಿಂದ ಕೂಡಿದ್ದ, ಉತ್ತಮೋತ್ತಮವಾದ ಮೌಲ್ಯಾಭರಣಗಳನ್ನು ಕಳಚಿಹಾಕಿದ್ದ ನರೇಂದ್ರಪತ್ನಿಯಾದ ಕೈಕೇಯಿಯು–ಮೊದಲು ನಿರ್ಮಲವಾಗಿ ಬೆಳಗುವ

ನಕ್ಷತ್ರಗಳಿಂದ ಕೂಡಿ ಪ್ರಕಾಶಿಸುತ್ತಿದ್ದು ಅನಂತರ ಮೋಡಕವಿದ, ನಕ್ಷತ್ರ ಗಳಿಲ್ಲದ ಆಕಾಶದಂತೆ ಮ್ಲಾನಿಹೊಂದಿದಳು.

೯ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೦ನೆಯ ಸರ್ಗ

ದಶರಥನು ಕೈಕೇಯಿಯ ಅಂತಃಪುರಕ್ಕೆ ಹೋದಾಗ ಅವಳು ಅಲ್ಲಿಲ್ಲದೇ ಕ್ರೋಧಾಗಾರಕ್ಕೆ ಹೋಗಿರುವುದನ್ನು ತಿಳಿದು ದುಃಖಿಸಿದುದು : ಅಲ್ಲಿಗೇ ತಾನೂ ಹೋಗಿ ಪತ್ನಿಯನ್ನು ಪರಿ-ಪರಿಯಾಗಿ ಸಾಂತ್ವನಗೊಳಿಸಿದುದು

ವಿದರ್ಶಿತಾ ಯದಾ ದೇವೀ ಕುಬ್ಜಯಾ ಪಾಪಯಾ ಭೃಶಮ್ ।
ತದಾ ಶೇತೇ ಸ್ಮ ಸಾ ಭೂಮೌ ದಿಗ್ಧವಿದ್ಧೇವ ಕಿಂನರೀ ॥೧॥

ಪಾಪಿಷ್ಠೆಯಾದ ಕುಬ್ಜೆಯಿಂದ ತಪ್ಪುದಾರಿಗೆಳೆಯಲ್ಪಟ್ಟ ಕೈಕೇಯಿಯು ವಿಷಸವರಿದ ಬಾಣದಿಂದ ಚುಚ್ಚಲ್ಪಟ್ಟ ಕಿನ್ನರಿಯಂತೆ ನೆಲದ ಮೇಲೆ ಮಲಗಿದಳು.

ವಿಚಕ್ಷಣೆಯಾದ ಕೈಕೇಯಿಯು ತಾನು ಮಾಡುತ್ತಿರುವುದು ನ್ಯಾಯೋಚಿತವಾಗಿರುವುದೆಂದು ಮನಸ್ಸಿನಲ್ಲಿ ದೃಢನಿಶ್ಚಯಮಾಡಿ ತಾನು ಮಾಡಲಿರುವುದನ್ನೆಲ್ಲಾ ಮಂಥರೆಗೆ ವಿಶದವಾಗಿ ಹೇಳಿದಳು. ಮಂಥರೆಯ ಮಧುರವಾದ ಮಾತುಗಳಿಂದ ವಿಮೋಹಿತಳಾಗಿದ್ದ ಅವಳು ಮಂಥರೆಯು ಹೇಳಿದಂತೆ ಮಾಡಲು ನಿಶ್ಚಯವನ್ನೇನೋ ಮಾಡಿದಳು. ಆದರೂ–'ಈ ಉಪಾಯದಿಂದಲೇ ಕಾರ್ಯಸಾಧನೆಯಾಗುವುದೇ?'–ಎಂಬ ಸಂದೇಹವೂ ಅವಳಿಗೆ ಬಾರದಿರಲಿಲ್ಲ. ನಾಗಕನ್ಯೆಯಂತೆ ಸುದೀರ್ಘವಾಗಿ ನಿಟ್ಟುಸಿರನ್ನುಬಿಡುತ್ತಾ ತನಗೆ ಒಳ್ಳೆಯದಾಗುವ ಮಾರ್ಗವು ಯಾವುದೆಂಬುದನ್ನು ಮುಹೂರ್ತ ಕಾಲ ಯೋಚಿಸಿದಳು. ಕಡೆಗೆ ಮಂಥರೆಯು ಸೂಚಿಸಿರುವ ಮಾರ್ಗವೇ ತನಗೂ ತನ್ನ ಮಗನಿಗೂ ಸುಖಕರವೆಂದು ನಿಶ್ಚಯಿಸಿಬಿಟ್ಟಳು.

ಅರ್ಥಪ್ರಾಪ್ತಿಯಲ್ಲಿಯೇ ವಿಶೇಷಾಸಕ್ತಿಯುಳ್ಳ ಅವಳ ಗೆಳತಿ ಮಂಥರೆಗೆ ದೇವಿಯ ಈ ನಿರ್ಧಾರವು ತಿಳಿದು ಪರಮಾನಂದವಾಯಿತು. ಸಿದ್ಧಿಯನ್ನು ಪಡೆದವಳಂತೆ ಅವಳು ಹೆಚ್ಚು ಸಂತೋಷಪಟ್ಟಳು.

ಕೈಕೇಯಿಯು ತನ್ನ ಮನಸ್ಸನ್ನು ಮತ್ತಷ್ಟು ದೃಢಪಡಿಸಿಕೊಂಡಳು. ತನಗೂ ಪ್ರಿಯತಮನಾಗಿದ್ದ ಶ್ರೀರಾಮನ ಪಟ್ಟಾಭಿಷೇಕವನ್ನು ತಪ್ಪಿಸುವುದು ಮಾತ್ರವಲ್ಲದೇ ಅವನನ್ನು ಕಾಡಿಗೂ ಕಳುಹಿಸಬೇಕೆಂಬುದು ಸಾಮಾನ್ಯವಾದ ವಿಷಯವಾಗಿರಲಿಲ್ಲ. ಚಿನ್ನದಂತಿದ್ದ ಮನಸ್ಸನ್ನು ಕಲ್ಲಾಗಿಯೇ ಮಾಡಿಕೊಳ್ಳ ಬೇಕಾಗಿದ್ದಿತು. ಆದುದರಿಂದಲೇ ಅವಳು–**ಸಮ್ಯಕ್ಕೃತ್ವಾ ವಿನಿಶ್ಚಯಮ್**– ಯಾವುದಕ್ಕೂ ಸಗ್ಗದ ರೀತಿಯಲ್ಲಿ ನಿಶ್ಚಯವನ್ನು ದೃಢಪಡಿಸಿಕೊಂಡು ಕಾರ್ಯವನ್ನಾರಂಭಿಸಿದಳು. ಕೋಪಗೊಂಡಳು. ಭೂಮಿಯ ಮೇಲೆ ತಲೆಗೆದರಿ ಮಲಗಿದಳು. ಹುಬ್ಬುಗಳನ್ನು ಗಂಟಿಕ್ಕಿದಳು. ಬಳಿಕ ಚಿತ್ರಿತವಾದ ಮಾಲಿಕೆಗಳನ್ನೂ, ದಿವ್ಯಾಭರಣಗಳನ್ನೂ ಕಳಚಿ ಭೂಮಿಯ ಮೇಲೆ ಚೆಲ್ಲಾಪಿಲ್ಲಿಯಾಗಿ ಎಸೆದಳು. ಹೀಗೆ ಎಸೆದ ವಸ್ತ್ರಾಭರಣಗಳೆಲ್ಲವೂ– ನಕ್ಷತ್ರಗಳು ಆಕಾಶವನ್ನು ಬೆಳಗುವಂತೆ–ಅವಳು ಮಲಗಿದ್ದ ಆ ಭೂ ಪ್ರದೇಶವನ್ನು ಶೋಭಾಯಮಾನವನ್ನಾಗಿ ಮಾಡಿದುವು. ಕ್ರೋಧಾಗಾರದಲ್ಲಿ ಕ್ರೋಧಮೂರ್ಛಿತಳಾಗಿ ಬಿದ್ದಿದ್ದ, ಮಲಿನವಸ್ತ್ರಗಳನ್ನುಟ್ಟಿದ್ದ, ಜಡೆಹಾಕಿ ಕೊಳ್ಳದೇ ಮುಡಿಯನ್ನು ದೃಢವಾಗಿ ಬಿಗಿದುಕೊಂಡಿದ್ದ ಕೈಕೇಯಿಯು ಸತ್ತುಹೋದ ಕಿನ್ನರಿಯಂತೆಯೇ ಕಾಣುತ್ತಿದ್ದಳು.

ಇತ್ತಲಾಗಿ ದಶರಥನು ಶ್ರೀರಾಮನ ಪಟ್ಟಾಭಿಷೇಕಕ್ಕೆ ಬೇಕಾದ ಸಂಭಾರಗಳೆಲ್ಲವನ್ನೂ ಸಿದ್ಧಪಡಿಸುವಂತೆ ಸುಮಂತ್ರಾದಿ ಅಮಾತ್ಯರಿಗೆ ಆಜ್ಞಾ ಪಿಸಿ, ಪುರೋಹಿತರಾದ ವಸಿಷ್ಠರ ಅನುಮತಿಯನ್ನು ಪಡೆದು, ಆಸ್ಥಾನದ ಲ್ಲಿದ್ದವರಿಗೆ ಹೊರಡಲು ಅನುಮತಿಯನ್ನಿತ್ತು, ಅಂತಃಪುರದೊಳಗೆ ಪ್ರವೇಶಿ ಸಿದನು. ರಾಮಾಭಿಷೇಕವು ಇಂದು ತಾನೇ ನಿಶ್ಚಿತವಾಗಿದೆ. ಆದುದರಿಂದ ಕೈಕೇಯಿಗೆ ಈ ವಿಷಯವು ತಿಳಿಯಲು ಅವಕಾಶವಾಗಿಲ್ಲವೆಂದು ಭಾವಿಸಿದ ಸರ್ವತಂತ್ರಸ್ವತಂತ್ರನಾದ ದಶರಥನು ಪ್ರಿಯವಾರ್ತೆಯನ್ನು ಹೇಳಲು ಪ್ರೇಮಕ್ಕೆ ಅರ್ಹಳಾದ ಕೈಕೇಯಿಯ ಅಂತಃಪುರಕ್ಕೆ ಹೋದನು. ಬಿಳಿಯ ಮೋಡಗಳಿಂದ ಕೂಡಿರುವ ಮತ್ತು ರಾಹುವಿನಿಂದ ಯುಕ್ತವಾದ ಆಕಾಶವನ್ನು

ರಾಹುವಿಗೆ ಗ್ರಾಸವಾಗುವ ಸಲುವಾಗಿ ಚಂದ್ರನು ಪ್ರವೇಶಿಸುವಂತೆ–ಮಹಾ ಯಶೋವಂತನಾದ ದಶರಥನು ಕೈಕೇಯಿಯ ಭವ್ಯವಾದ ಅಂತಃಪುರವನ್ನು ರಾಹುರೂಪಳಾದ ಕೈಕೇಯಿಗೆ ವಶನಾಗಲೋ ಎಂಬಂತೆ ಪ್ರವೇಶಿಸಿದನು.

ಕೈಕೇಯಿಯ ಅಂತಃಪುರದ ಹೊರಾಂಗಣವು ಗಿಣಿಗಳಿಂದಲೂ, ನವಿಲುಗಳಿಂದಲೂ ಸಮಲಂಕೃತವಾಗಿದ್ದಿತು. ಕೃತಕಸರೋವರಗಳಲ್ಲಿ ಕ್ರೌಂಚ ಪಕ್ಷಿಗಳೂ, ರಾಜಹಂಸಗಳೂ ನಲಿದಾಡುತ್ತಾ ಇಂಚರಗೈಯ್ಯುತ್ತಿದ್ದುವು. ವೀಣಾದಿ ಚತುರ್ವಿಧವಾದ್ಯಗಳು* ಮೊಳಗುತ್ತಿದ್ದುವು. ಗೂನುಬೆನ್ನುಳ್ಳ, ಸಡಗರದಿಂದ ಅತ್ತಿತ್ತ ಓಡಾಡುತ್ತಿದ್ದ ಕುಬ್ಜೆಯರಿಂದಲೂ, ಕುಳ್ಳಾದ ಸ್ತ್ರೀಯ ರಿಂದಲೂ ತುಂಬಿದ್ದಿತು. ಅಂತಃಪುರದ ಸುತ್ತಲೂ ರಾಜದಂಪತಿಗಳ ವಿಹಾರ ಕ್ಕಾಗಿ ಲತಾಗೃಹಗಳಿದ್ದುವು. ಚಂಪಕಾಶೋಕ-ಪುನ್ನಾಗಪುಷ್ಪಗಳಿಂದ ಶೋಭಿತ ವಾದ ಚಿತ್ರಗೃಹಗಳಿದ್ದುವು. ಅವುಗಳಲ್ಲಿ ಕುಳಿತುಕೊಳ್ಳಲು ದಂತದಿಂದಲೂ, ಚಿನ್ನದಿಂದಲೂ ಮತ್ತು ಬೆಳ್ಳಿಯಿಂದಲೂ ಮಾಡಲ್ಪಟ್ಟ ವೇದಿಕೆ (ಜಗುಲಿ) ಗಳಿದ್ದುವು. ನಿತ್ಯವೂ ಫಲ-ಪುಷ್ಪಗಳಿಂದ ಭರಿತವಾಗಿರುತ್ತಿದ್ದ ವೃಕ್ಷ ಗಳಿಂದಲೂ ಕೊಳಗಳಿಂದಲೂ ಆ ಅಂತಃಪುರವು ಶೋಭಿಸುತ್ತಿದ್ದಿತು. ಅಂತಃಪುರದ ಒಳಭಾಗವು ದಂತ-ಬೆಳ್ಳಿ-ಚಿನ್ನಗಳಿಂದ ಮಾಡಿದ ಶ್ರೇಷ್ಠವಾದ ಆಸನಗಳಿಂದ ಸಜ್ಜಾಗಿದ್ದಿತು. ವಿಧ-ವಿಧವಾದ ಅನ್ನ-ಪಾನಗಳಿಂದಲೂ, ಭಕ್ಷ್ಯ-ಭೋಜ್ಯಗಳಿಂದಲೂ, ಅತಿಶ್ರೇಷ್ಠವಾದ, ಅಮೂಲ್ಯವಾದ ಆಭರಣ ಗಳಿಂದಲೂ ಆ ಅಂತಃಪುರವು ಸಂಪನ್ನವಾಗಿದ್ದು ಆ ಎಲ್ಲ ಸೊಬಗಿನಿಂದ ಸ್ವರ್ಗದಂತೆಯೇ ಕಾಣುತ್ತಿದ್ದಿತು.

ಅಂತಹ ಸಂಪತ್ಸಮೃದ್ಧವಾದ ಅಂತಃಪುರವನ್ನು ದಶರಥರಾಜನು ಪ್ರವೇಶಿಸಿದನು. ಆದರೆ ಅಲ್ಲಿದ್ದ ಹಂಸತೂಲಿಕಾತಲ್ಪದಲ್ಲಿ ರಾಜನು ತನ್ನ ಪ್ರಿಯತಮೆಯಾದ ಕೈಕೇಯಿಯನ್ನು ಕಾಣಲಿಲ್ಲ. ಆ ಸಮಯದಲ್ಲಿ ರಾಜನು

---

* ವಾದಿತ್ರರವಸಂಘುಷ್ಟಂ = ವೀಣೆಯೇ ಮೊದಲಾದ ನಾಲ್ಕು ಬಗೆಯ ವಾದ್ಯಗಳ ಘೋಷ. (ತತಂ) ವೀಣೆಯೇ ಮೊದಲಾದುವು ತಂತೀವಾದ್ಯಗಳು. (ಆನದ್ಧಂ) ಮೃದಂಗವೇ ಮೊದಲಾದುವು ಚರ್ಮವಾದ್ಯಗಳು. (ಶುಷಿರಂ) ರಂಧ್ರಗಳಿರುವ ಕೊಳಲೇ ಮೊದಲಾ ದುವು ; ಮುಖವಾದ್ಯಗಳು. (ಘನಂ) ತಾಳವೇ ಮೊದಲಾದುವು ; ಕಂಚಿನವಾದ್ಯಗಳು. ವಾದಿತ್ರ ಎಂದರೆ ಈ ನಾಲ್ಕು ವಾದ್ಯಗಳೂ ಆಗುತ್ತವೆ.

ಕಾಮಪೀಡಿತನಾಗಿದ್ದನು. ಪ್ರೇಯಸಿಯೊಡನೆ ರತಿಸುಖವನ್ನು ಬಯಸಿದ್ದನು. ಪ್ರಿಯಭಾರ್ಯೆಯನ್ನು ಹಾಸಿಗೆಯಲ್ಲಿ ಕಾಣದೇ ರಾಣಿಯೆಲ್ಲಿರುವಳೆಂದು ಸೇವಕಿಯನ್ನು ಪ್ರಶ್ನಿಸಿದನು. ರಾಮಾಭಿಷೇಕದ ಸಂತೋಷವಾರ್ತೆಯನ್ನು ತಿಳಿಸಿ ರತಿಸುಖವನ್ನು ಪಡೆಯಬೇಕೆಂದು ಬಯಸಿದ್ದ ರಾಜನಿಗೆ ಪ್ರೇಯಸಿ ಯಿಲ್ಲದಿರುವುದನ್ನು ಕಂಡು ಬಹಳ ದುಃಖವಾಯಿತು. ಆ ಹಿಂದೆ ಯಾವಾ ಗಲೂ ಕೈಕೇಯಿಯು ಹೊತ್ತುಮೀರಿ ಬಂದವಳಲ್ಲ. ರಾಜನು ಬರುವ ವೇಳೆಗೆ ಅಲಂಕರಿಸಿಕೊಂಡು ನಗುಮುಖದಿಂದ ಸ್ವಾಗತಿಸಲು ಸಿದ್ಧಳಾಗಿರುತ್ತಿದ್ದಳು. ಹಿಂದೆಂದೂ ರಾಜನು ಶೂನ್ಯವಾದ ಅಂತಃಪುರವನ್ನು ಪ್ರವೇಶಿಸಿಯೇ ಇರಲಿಲ್ಲ. ಶೂನ್ಯವಾದ ಅಂತಃಪುರದಲ್ಲಿದ್ದ ರಾಜನು, ಮೂರ್ಖೆಯಾದ ಕೈಕೇಯಿಯು ಸ್ವಾರ್ಥಸಾಧನೆಯಲ್ಲಿ ಪ್ರವೃತ್ತಳಾಗಿರುವಳೆಂಬುದನ್ನು ತಿಳಿ ಯದೇ ಹಿಂದಿನಂತೆಯೇ ಕೈಕೇಯಿಯು ಎಲ್ಲೆಂದು ಪ್ರತಿಹಾರಿಯನ್ನು ಪ್ರಶ್ನಿಸಿದನು. ರಾಜನ ಮಾತನ್ನು ಕೇಳಿ ಭಯಗೊಂಡ ಪ್ರತಿಹಾರಿಯು ಕೈಮುಗಿದುಕೊಂಡು ಹೇಳಿದಳು :

ದೇವ ದೇವೀ ಭೃಶಂ ಕ್ರುದ್ಧಾ ಕ್ರೋಧಾಗಾರಮಭಿದ್ರುತಾ ॥೨೦॥

"ದೇವ! ದೇವಿಯು ಪರಮಕ್ರುದ್ಧೆಯಾಗಿ ಕ್ರೋಧಾಗಾರವನ್ನು ಪ್ರವೇಶಿಸಿದ್ದಾಳೆ."

ಪ್ರತಿಹಾರಿಯ ಆ ಮಾತನ್ನು ಕೇಳಿ ರಾಜನ ಮನಸ್ಸು ಬಹಳವಾಗಿ ನೊಂದಿತು. ಅವನ ಇಂದ್ರಿಯಗಳೆಲ್ಲವೂ ವ್ಯಾಕುಲಗೊಂಡು ಕಂಪಿಸಿದುವು. ಕೈಕೇಯಿಯು ಕ್ರೋಧಾಗಾರಕ್ಕೆ ಹೋಗಿರುವಳೆಂಬುದನ್ನು ತಿಳಿದು ರಾಜನು ಬಹಳವಾಗಿ ವಿಷಾದಿಸಿದನು. ಬಳಿಕ ತಾನೂ ಅಲ್ಲಿಗೇ ಹೋದನು. ಅಲ್ಲವನು ಮಲಿನವಸ್ತ್ರವನ್ನುಟ್ಟು ಅಸ್ತವ್ಯಸ್ತವಾಗಿ ಮಲಗಿದ್ದ ಪ್ರೇಯಸಿಯನ್ನು ಕಂಡನು. ಮಹಾರಾಜನ ಪ್ರಿಯಭಾರ್ಯೆಗೆ ನೆಲದ ಮೇಲೆ ಮಲಗುವುದು ಖಂಡಿತವಾಗಿಯೂ ಉಚಿತವಾಗಿರಲಿಲ್ಲ. ಆ ಸಮಯದಲ್ಲಿ ದಶರಥನು ದುಃಖದಿಂದಲೇ ಬೆಂದುಹೋಗುತ್ತಿರುವನೋ ಎಂಬಂತೆ ಕಾಣುತ್ತಿದ್ದನು. ನಿಷ್ಕಳಂಕನಾಗಿದ್ದ ಆ ಮುದುಕನು ತರುಣಿಯಾಗಿದ್ದ, ತನ್ನ ಪ್ರಾಣಗಳಿ ಗಿಂತಲೂ ಅತಿಪ್ರಿಯಳಾಗಿದ್ದ, ರಾಮನ ಅಭಿಷೇಕಕ್ಕೆ ವಿಘಾತವನ್ನುಂಟು

ಮಾಡುವ ಪಾಪಸಂಕಲ್ಪವುಳ್ಳವಳಾಗಿದ್ದ ತನ್ನ ಭಾರ್ಯೆಯು ಭೂಮಿಯ ಮೇಲೆ ಬಿದ್ದಿರುವುದನ್ನು ನೋಡಿದನು. ಆ ಸಮಯದಲ್ಲಿ ಕೈಕೇಯಿಯು ಕತ್ತರಿಸಿಹಾಕಿದ ಬಳ್ಳಿಯಂತೆಯೂ, ಸ್ವರ್ಗದಿಂದ ಕೆಳಕ್ಕೆಬಿದ್ದ ದೇವತೆ ಯಂತೆಯೂ, ವ್ಯಾಕುಲಗೊಂಡ ಕಿನ್ನರಿಯಂತೆಯೂ, ಆಕಾಶದಿಂದ ಚ್ಯುತ ಳಾದ ಅಪ್ಸರೆಯಂತೆಯೂ, ಕಿತ್ತು ಬಿಸುಡಿದ ಪುಷ್ಪಮಾಲೆಯಂತೆಯೂ, ಬಲೆಯಲ್ಲಿ ಸಿಕ್ಕಿಬಿದ್ದ ಜಿಂಕೆಯಂತೆಯೂ, ವ್ಯಾಧನಿಂದ ವಿಷಸಿಕ್ತವಾದ ಬಾಣಕ್ಕೆ ಗುರಿಯಾದ ಹೆಣ್ಣಾನೆಯಂತೆಯೂ ಕಾಣುತ್ತಿದ್ದಳು.

ಬೇಡನಿಂದ ಗಾಯಗೊಂಡ ಹೆಣ್ಣಾನೆಯನ್ನು ಮಹಾಗಜವು ಸೊಂಡಿಲಿ ನಿಂದ ಮುಟ್ಟಿ ಸಂತೈಸುವಂತೆ–ಭಯಗೊಂಡ ಮನಸ್ಸಿನಿಂದ ಕೂಡಿದ್ದ ಕಾಮಿ ಯಾದ ದಶರಥನು ಕಮಲಪತ್ರದಂತೆ ವಿಶಾಲವಾದ ಕಣ್ಣುಗಳುಳ್ಳ ಪತ್ನಿ ಯನ್ನು ತನ್ನೆರಡು ಕೈಗಳಿಂದಲೂ ಮೃದುವಾಗಿ ಸ್ಪರ್ಶಿಸುತ್ತಾ ಹೇಳಿದನು :

"ಪ್ರಿಯೇ! ನಿನ್ನ ಹೃದಯವೂ ಕೋಪಕ್ಕೆ ಅವಕಾಶಕೊಡುವು ದೆಂಬುದನ್ನು ನಾನು ಇದುವರೆಗೂ ತಿಳಿದೇ ಇರಲಿಲ್ಲ. (ನಿನಗೆ ಕೋಪ ಬಂದುದನ್ನೇ ನಾನಿದುವರೆಗೆ ನೋಡಿರಲಿಲ್ಲ.) ದೇವಿ! ನಿಜ ಹೇಳು. ನಿನ್ನನ್ನು ಯಾರು ನಿಂದಿಸಿದರು? ಯಾರು ಅವಮಾನಗೊಳಿಸಿದರು? ಕಲ್ಯಾಣಿ! ನಿನ್ನ ಈ ದುರವಸ್ಥೆಯಿಂದ ನನ್ನ ಮನಸ್ಸನ್ನು ಕಲಕುತ್ತಿರುವೆ. ನನಗೆ ದುಃಖವನ್ನುಂಟುಮಾಡಲೆಂದೇ ನೀನು ಈ ಧೂಳಿನ ಮೇಲೆ ಮಲಗಿರುವೆಯಾ? ಮಂಗಳಕರವಾದ ಮನಸ್ಸಿನಿಂದ ಕೂಡಿರುವ ನಾನಿನ್ನೂ ಜೀವಿಸಿರುವಾಗ ದೆವ್ವಬಡಿದವಳಂತೆ ನೀನೇಕೆ ಭೂಮಿಯಲ್ಲಿ ಬಿದ್ದು ಹೊರಳಾಡುತ್ತಿರುವೆ?

ಭಾಮಿನಿ! ನಮ್ಮಲ್ಲಿ ಕುಶಲರಾದ ವೈದ್ಯರಿದ್ದಾರೆ. ಅವರೆಲ್ಲರೂ ನನ್ನಿಂದ ಮಾನ್ಯತೆಯನ್ನು ಪಡೆದು ತುಷ್ಟರೂ ಆಗಿದ್ದಾರೆ. ನಿನ್ನ ಈಗಿನ ವ್ಯಾಧಿಯೇನೆಂಬುದನ್ನು ಹೇಳು. ಕ್ಷಣಮಾತ್ರದಲ್ಲಿ ನಿನ್ನ ವ್ಯಾಧಿಯನ್ನು ಔಷಧೋಪಚಾರಗಳಿಂದ ಗುಣಪಡಿಸಿ ನಿನ್ನನ್ನು ಸುಖಿಯನ್ನಾಗಿ ಮಾಡು ತ್ತಾರೆ. ಯಾರಿಂದ ನಿನಗೆ ಪ್ರಿಯವಾದ ಕಾರ್ಯವನ್ನು ಮಾಡಿಸಿಕೊಡ ಬೇಕಾಗಿದೆ? ಯಾರಿಗೆ ನಿನ್ನಿಂದ ಒಳ್ಳೆಯದಾಗಬೇಕಾಗಿದೆ? ನಿನಗಿಷ್ಟವಿಲ್ಲದ

ಕಾರ್ಯವನ್ನು ಯಾರಾದರೂ ಮಾಡಿರುವರೇ? ಅದನ್ನಾದರೂ ಹೇಳು. ಹೀಗೆಲ್ಲಾ ನೆಲದ ಮೇಲೆ ಹೊರಳಾಡುತ್ತಾ ರೋದನಮಾಡಬೇಡ. ಹಾಗೆ ಹೊರಳುತ್ತಾ ಈ ನಿನ್ನ ಕೋಮಲವಾದ ಶರೀರವನ್ನು ಕ್ಲೇಶಗೊಳಿಸಬೇಡ.

ಅವಧ್ಯೋ ವಧ್ಯತಾಂ ಕೋ ವಾ
ವಧ್ಯಃ ಕೋ ವಾ ವಿಮುಚ್ಯತಾಮ್ ।
ದರಿದ್ರಃ ಕೋ ಭವೇದಾಢ್ಯೋ
ದ್ರವ್ಯವಾನ್ಕೋಽಪ್ಯಕಿಂಚನಃ ॥೩೪॥

ದೇವಿ! ನಿನ್ನ ಪ್ರೀತಿಗಾಗಿ ಮಾಡಬಾರದುದನ್ನು ಮಾಡಲೂ ನಾನು ಸಿದ್ಧನಾಗಿರುವೆನು. ವಧಾರ್ಹನಲ್ಲದವನನ್ನು ವಧಿಸಲೇ? ಮರಣದಂಡನೆಗೆ

ಗುರಿಯಾಗಿರುವವನನ್ನು ಬಿಡಿಸಲೇ? ದರಿದ್ರನಾದವನನ್ನು ಐಶ್ವರ್ಯವಂತನನ್ನಾಗಿ ಮಾಡಲೇ? ಐಶ್ವರ್ಯವಂತನನ್ನು ದರಿದ್ರನನ್ನಾಗಿ ಮಾಡಲೇ? ನಿನ್ನ ಪ್ರೀತಿಗಾಗಿ ನಾನೇನು ಮಾಡಬೇಕೆಂಬುದನ್ನು ಹೇಳು.

ನಾನೂ ಮತ್ತು ನನ್ನ ಪರಿವಾರಕ್ಕೆ ಸೇರಿದವರೆಲ್ಲರೂ ನಿನ್ನ ಅಧೀನರಾಗಿದ್ದೇವೆ. ಆದುದರಿಂದ ನಿನ್ನ ಯಾವುದೇ ಅಭಿಪ್ರಾಯವನ್ನೂ ತಿರಸ್ಕರಿಸುವ ಉತ್ಸಾಹವು ನನಗಿಲ್ಲ. ನಿನಗಾಗಿ ನನ್ನ ಪ್ರಾಣಾರ್ಪಣೆ ಮಾಡಲೂ ಸಿದ್ಧನಿದ್ದೇನೆ. ನಿನ್ನ ಮನಸ್ಸಿನಲ್ಲಿರುವುದನ್ನು ನಿಸ್ಸಂಕೋಚವಾಗಿ ಹೇಳು. ನಿನ್ನ ರೂಪ-ಲಾವಣ್ಯಗಳಿಂದ ನನ್ನ ಮನಸ್ಸನ್ನು ಆಕರ್ಷಿಸುವ ಬಲವು ನಿನ್ನಲ್ಲಿ ಎಷ್ಟಿರುವುದೆಂಬುದು ನಿನಗೆ ಗೊತ್ತೇ ಇದೆ. (ನಿನ್ನ ರೂಪ-ಲಾವಣ್ಯಗಳಿಗೆ ಮಾರುಹೋಗಿ ನಾನು ನಿನ್ನ ದಾಸನಾಗಿಬಿಟ್ಟಿರುವೆನು.) ಆದುದರಿಂದ ನನ್ನ ವಿಷಯದಲ್ಲಿ ಸ್ವಲ್ಪವಾದರೂ ಸಂದೇಹಿಸದೇ ನಿನ್ನ ಆಶಯವೇನೆಂಬುದನ್ನು ಹೇಳು. ಭದ್ರೇ! ನಾನಿದುವರೆಗೂ ಸತ್ಕರ್ಮಗಳಿಂದ ಗಳಿಸಿರುವ ಸುಕೃತದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಿನ್ನ ಮನೋಗತವಾದ ಕಾರ್ಯವನ್ನು ಮಾಡಿಕೊಟ್ಟು ನಿನಗೆ ಪ್ರೀತಿಯನ್ನುಂಟು ಮಾಡುತ್ತೇನೆ.

ಪ್ರೇಯಸಿ! ಈ ಸೂರ್ಯನ ರಥದ ಚಕ್ರವು (ಸೂರ್ಯಮಂಡಲವು) ಎಲ್ಲಿಯವರೆಗೆ ಹೋಗುವುದೋ ಅಲ್ಲಿಯವರೆಗೂ ನನ್ನ ರಾಜ್ಯವು ವಿಸ್ತರಿಸಿದೆ. (ಅಖಂಡಭೂಮಂಡಲಕ್ಕೂ ನಾನು ಚಕ್ರವರ್ತಿಯಾಗಿದ್ದೇನೆ.) ನನ್ನ ಆಧಿಪತ್ಯಕ್ಕೆ ಸೇರಿರುವ ದ್ರಾವಿಡ-ಸಿಂಧು-ಸೌವೀರ-ಸೌರಾಷ್ಟ್ರ-ದಕ್ಷಿಣಾಪಥ-ವಂಗ-ಅಂಗ-ಮಗಧ-ಮತ್ಸ್ಯ-ಕಾಶಿ-ಕೋಸಲದೇಶಗಳು ಸಕಲವಾದ ಐಶ್ವರ್ಯಗಳಿಂದಲೂ ಸಮೃದ್ಧವಾಗಿವೆ. ಆ ದೇಶಗಳಲ್ಲಿನ ದ್ರವ್ಯರಾಶಿಯನ್ನೂ, ಧನ-ಧಾನ್ಯಗಳನ್ನೂ, ಆಡು-ಕುರಿಗಳನ್ನೂ, ನೀನು ಅಪೇಕ್ಷಿಸುವ ಯಾವುದೇ ಅನರ್ಘವಸ್ತುಗಳನ್ನೂ ಆ ಕ್ಷಣದಲ್ಲಿಯೇ ತರಿಸಿಕೊಡುವೆನು. ಶೋಭನಳೇ! ಏಳು ; ಎದ್ದೇಳು. ಹೀಗೆ ನೆಲದ ಮೇಲೆ ಹೊರಳಾಡುತ್ತಾ ಆಯಾಸಪಡುವೆಯೇಕೆ? ಯಾವ ಕಾರಣದಿಂದ ನೀನು ಭಯಗೊಂಡಿರುವೆಯೆಂಬುದನ್ನು ಸ್ಪಷ್ಟವಾಗಿ ಹೇಳು. ಸೂರ್ಯನು ಹುಟ್ಟಿದೊಡನೆಯೇ

ಹಿಮವನ್ನು ಕ್ಷಣಮಾತ್ರದಲ್ಲಿ ಹೋಗಲಾಡಿಸುವಂತೆ–ನಿನ್ನ ಭಯವನ್ನು ನಿಮಿಷಮಾತ್ರದಲ್ಲಿ ದೂರೀಕರಿಸುವೆನು.”

ದಶರಥನು ಪತ್ನಿಯನ್ನು ಹೀಗೆ ಸಂತೈಸುತ್ತಿರಲು ಸ್ವಲ್ಪ ಸಮಾಧಾನ ಗೊಂಡ ಕೈಕೇಯಿಯು ಪತಿಗೆ ಅಪ್ರಿಯವಾದ ಮಾತನ್ನು ಹೇಳಬಯಸಿ ತನ್ನ ಮಾತನ್ನು ನಡೆಸಿಕೊಡಲು ಪ್ರತಿಜ್ಞೆಮಾಡುವಂತೆ ಗಂಡನನ್ನು ಪುನಃ ಪೀಡಿಸತೊಡಗಿದಳು.

೧೧೦ನೆಯ ಸರ್ಗವು ಮುಗಿಯಿತು.

ಕೈಕೇಯಿಯು ರಾಜನನ್ನು ಪ್ರತಿಜ್ಞೆಗೆ ಬದ್ಧನಾಗುವಂತೆ ಮಾಡಿ ಹಿಂದೆ ಕೊಟ್ಟಿದ್ದ ಎರಡು ವರಗಳನ್ನು ಅವನ ಸ್ಮರಣೆಗೆ ತಂದು ಭರತನಿಗೆ ಪಟ್ಟಾಭಿಷೇಕವನ್ನೂ-ರಾಮನಿಗೆ ವನವಾಸವನ್ನೂ ಪ್ರಾರ್ಥಿಸಿದುದು

ತಂ ಮನ್ಮಥಶರೈರ್ವಿದ್ಧಂ ಕಾಮವೇಗವಶಾನುಗಮ್ ।
ಉವಾಚ ಪೃಥಿವೀಪಾಲಂ ಕೈಕೇಯೀ ದಾರುಣಂ ವಚಃ ॥೧॥

ಆ ಸಮಯದಲ್ಲಿ ರಾಜನು ಮನ್ಮಥನ ಬಾಣಕ್ಕೆ ಈಡಾಗಿದ್ದನು. ಕಾಮವೇಗಕ್ಕೆ ಕಟ್ಟುಬಿದ್ದಿದ್ದನು. ಅದನ್ನರಿತಿದ್ದ ಕೈಕೇಯಿಯು ರಾಜನೊಡನೆ ಅತ್ಯಂತಕರ್ಣಕಠೋರವಾದ ಈ ಮಾತನ್ನು ಹೇಳಿದಳು :

“ಪತಿದೇವ! ನನ್ನನ್ನು ಯಾರು ತಿರಸ್ಕರಿಸಿಯೂ ಇಲ್ಲ; ಅವಮಾನಿ ಸಿಯೂ ಇಲ್ಲ. ನನ್ನದೊಂದು ಅಭಿಪ್ರಾಯವಿದೆ. ಅದನ್ನು ನೀನು ತಪ್ಪದೇ ನಡೆಸಿಕೊಡಬೇಕಾಗಿದೆ. ನೀನು ನನ್ನ ಮನಸ್ಸಿನಲ್ಲಿರುವುದನ್ನು ನಡೆಸಿಕೊಡಲು ಇಚ್ಛಿಸುವೆಯಾದರೆ ನಡೆಸಿಕೊಡುವೆನೆಂದು ಪ್ರತಿಜ್ಞೆಮಾಡಿಕೊಡು. ಅನಂತರವೇ ನಾನು ನನ್ನ ಹೃದ್ಗತವಾದ ಅಭಿಪ್ರಾಯವನ್ನು ನಿನ್ನೊಡನೆ ಹೇಳುವೆನು.”

ಕಾಮುಕನಾಗಿದ್ದ ದಶರಥನು ಸ್ವಲ್ಪ ಮುಗುಳ್ನಗುತ್ತಾ ನೆಲದ ಮೇಲೆ ಮಲಗಿದ್ದ ಕೈಕೇಯಿಯ ತಲೆಯನ್ನು ಎರಡು ಕೈಗಳಿಂದಲೂ ಎತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡು ಮುಂದಲೆಯನ್ನು ಸವರುತ್ತಾ ಹೇಳಿದನು :

ಆವಲಿಪ್ತೇ ನ ಜಾನಾಸಿ ತ್ವತ್ತಃ ಪ್ರಿಯತಮಾ ಮಮ ।
ಮನುಜೋ ಮನುಜವ್ಯಾಘ್ರಾದ್ರಾಮಾದನ್ಯೋ ನ ವಿದ್ಯತೇ ॥೫॥

"ರೂಪ-ಲಾವಣ್ಯಗಳ ಸಂಪತ್ತಿನಿಂದ ಗರ್ವಿಷ್ಠಳಾಗಿರುವವಳೇ! ನನಗೆ ನಿನಗಿಂತಲೂ ಹೆಚ್ಚಿನ ಪ್ರಿಯತಮೆಯಾಗಲೀ–ಮನುಜಶ್ರೇಷ್ಠನಾದ ರಾಮನಿಗಿಂತಲೂ ಹೆಚ್ಚಿನ ಪ್ರಿಯತಮನಾಗಲೀ ಬೇರೆ ಯಾರೂ ಇಲ್ಲವೆಂಬ ವಿಷಯವು ನಿನಗೆ ಇದುವರೆಗೂ ತಿಳಿದೇ ಇಲ್ಲವೇ? ಅಜೇಯನಾದ, ರಘು ವಂಶೀಯರಲ್ಲಿಯೇ ಮುಖ್ಯನಾದ, ಮಹಾತ್ಮನಾದ, ನನ್ನ ಪ್ರಾಣಗಳಿಗಿಂತಲೂ ಅಧಿಕನೆನಿಸಿದ ರಾಘವನ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಿನ್ನ ಮನಸ್ಸಿನ ಬಯಕೆಯನ್ನು ಹೇಳು. ಯಾವನನ್ನು ಮುಹೂರ್ತಕಾಲ ನೋಡ ದಿದ್ದರೆ ನಿಶ್ಚಯವಾಗಿಯೂ ನಾನು ಜೀವಿಸುವುದೇ ಇಲ್ಲವೋ–ಅಂತಹ ಪ್ರಾಣಪ್ರಿಯನಾದ ರಾಮನ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ. ನಿನ್ನ ಮಾತನ್ನು ಖಂಡಿತವಾಗಿಯೂ ನಡೆಸಿಕೊಡುತ್ತೇನೆ. ನನ್ನ ಪ್ರಾಣಗಳಿಗಿಂತಲೂ ಹೆಚ್ಚಾಗಿ, ನನ್ನ ಇತರ ಮಕ್ಕಳಿಗಿಂತಲೂ ಹೆಚ್ಚಾಗಿ, ನನ್ನ ಬಂಧು-ಬಾಂಧವರಿಗಿಂತಲೂ ಹೆಚ್ಚಾಗಿ ಯಾವ ಪುರುಷಶ್ರೇಷ್ಠನಾದ ಶ್ರೀರಾಮನನ್ನು ನಾನು ಕಂಡುಕೊಂಡಿರುವೆನೋ–ಅಂತಹ ಶ್ರೀರಾಮನ ಮೇಲೆ ಆಣೆಯಿಟ್ಟು ಹೇಳುತ್ತೇನೆ. ರಾಮನಾಣೆಗೂ ನೀನು ಹೇಳುವ ಕಾರ್ಯವನ್ನು ಮಾಡಿಕೊಡುತ್ತೇನೆ.

ಮಂಗಳಸ್ವರೂಪಳೇ! ಇದನ್ನು ನಾನು ಬರಿಯ ಬಾಯಿಮಾತಿನಿಂದ ಹೇಳುತ್ತಿಲ್ಲ. ನನ್ನ ಮನಸ್ಸೂ ನೀನು ಹೇಳಲಿರುವ ಕಾರ್ಯವನ್ನು ಮಾಡಿ ಕೊಡಲು ತವಕಿಸುತ್ತಿದೆ. ಈ ಎಲ್ಲವನ್ನೂ ವಿಮರ್ಶಿಸಿ ನಿನ್ನ ಮನೋಗತವಾದ ಅಭಿಪ್ರಾಯವನ್ನು ತಿಳಿಸಿ ನನ್ನನ್ನು ಈ ದುಃಖದಿಂದ ಉದ್ಧರಿಸು. ನೀನು–'ಸಾಧುವಾಗಿದೆ'–ಎಂದು ಭಾವಿಸಿ ಯಾವ ಕಾರ್ಯವನ್ನು ಹೇಳು ವೆಯೋ–ಆ ಕಾರ್ಯವನ್ನು ನಾನು ಖಂಡಿತವಾಗಿಯೂ ಮಾಡಿಕೊಡುತ್ತೇನೆ. ಮೇಲಾಗಿ ನನ್ನನ್ನು ಮರುಳುಗೊಳಿಸುವ ರೂಪ-ಲಾವಣ್ಯಗಳ ಬಲವೂ ನಿನ್ನಲ್ಲಿದೆ. ನಿನ್ನ ರೂಪಿಗೆ ನಾನು ಮನಸೋತಿದ್ದೇನೆ. (ಕಾಮಪೀಡಿತ ನಾಗಿದ್ದೇನೆ.) ಈ ಕಾರಣದಿಂದಾಗಿ ನಿನ್ನ ಕಾರ್ಯವನ್ನು ಮಾಡಿಕೊಡುವುದ ರಲ್ಲಿ ಸ್ವಲ್ಪವಾದರೂ ಸಂದೇಹಿಸುವುದು ಯೋಗ್ಯವಲ್ಲ. ನಾನು ಗಳಿಸಿರುವ

ಸುಕೃತದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಿನಗೆ ಪ್ರೀತಿಯನ್ನುಂಟು ಮಾಡುವ ಕಾರ್ಯವನ್ನು ಖಂಡಿತವಾಗಿಯೂ ಮಾಡುತ್ತೇನೆ."

ಮಂಥರೆಯ ಪ್ರೇರಣೆಗೆ ಅನುಸಾರವಾಗಿ ಕೈಕೇಯಿಗೆ ಮುಖ್ಯವಾಗಿ 'ರಾಮನ ವನವಾಸ ಮತ್ತು ಭರತನಿಗೆ ಪಟ್ಟಾಭಿಷೇಕ'–ಎಂಬ ಎರಡು ವರಗಳು ಅಪೇಕ್ಷಣೀಯವಾಗಿದ್ದುವು. ಅವಳ ಬಯಕೆಯಂತೆ ಕಾಮಾಭಿಭೂತನಾಗಿದ್ದ ರಾಜನು ತನ್ನ ಮಾತನ್ನು ನಡೆಸಿಕೊಡುವೆನೆಂದು ಪ್ರತಿಜ್ಞೆಮಾಡಿಕೊಟ್ಟನು. ಆ ಸಮಯದಲ್ಲಿ ಕೈಕೇಯಿಗೆ ಭರತ-ರಾಮರಲ್ಲಿದ್ದ ಏಕರೀತಿಯ ಪ್ರೇಮವೂ ಹೊರಟುಹೋಯಿತು. ಭರತನ ವಿಷಯದಲ್ಲಿ ಪಕ್ಷಪಾತವನ್ನು ವಹಿಸಿದಳು. ರಾಜನ ಪ್ರತಿಜ್ಞಾವಚನದಿಂದ ಸಂತೋಷಗೊಂಡ ಕೈಕೇಯಿಯು ಹೇಳಬಾರದ ಮಾತನ್ನು ಹೇಳಿದಳು. ರಾಜನು ರಾಮನ ಮೇಲೆ ಆಣೆಯಿಟ್ಟು ಮಾಡಿದ ಪ್ರತಿಜ್ಞೆಯಿಂದ ಕೈಕೇಯಿಯು ಸಂತುಷ್ಟಳಾದಳು. ತನ್ನ ಮನೋಗತವಾದ ಮಹಾಘೋರವಾದ ಅಭಿಪ್ರಾಯವನ್ನು ಹೇಳಲು ಉಪಕ್ರಮಿಸಿದಳು. ಆ ಮಾತಿನ ತೀಕ್ಷ್ಣತೆಯು ಎಷ್ಟಿತ್ತೆಂದರೆ ಕಾಲಯಮನೇ ಅಲ್ಲಿಗೆ ಬಂದಿರುವನೋ ಎಂಬಂತೆ ಭಾಸವಾಗುತ್ತಿತ್ತು.

"ಮಹಾರಾಜ! ನೀನು ರಾಮನ ಮೇಲೆ ಮತ್ತು ನೀನು ಗಳಿಸಿರುವ ಸುಕೃತದ ಮೇಲೆ ಆಣೆಯಿಟ್ಟು ಹೇಳಿರುವ ಕ್ರಮದಲ್ಲಿ ನನಗೆ ವರವನ್ನು ದಯಪಾಲಿಸುವೆ. ಇದರಲ್ಲಿ ಸಂದೇಹವಿಲ್ಲ.

ಆದರೆ ನೀನು ಮಾಡಿರುವ ಈ ಪ್ರತಿಜ್ಞೆಯನ್ನು ಅಗ್ನಿಪ್ರಮುಖರಾದ ಮೂವತ್ತುಮೂರು ದೇವತೆಗಳೂ ಕೇಳಲಿ. ಚಂದ್ರ-ಸೂರ್ಯರೂ ಕೇಳಲಿ. ಆಕಾಶವೂ ಇದಕ್ಕೆ ಸಾಕ್ಷಿಯಾಗಿರಲಿ. ನವಗ್ರಹಗಳು, ಹಗಲು-ರಾತ್ರಿಗಳು, ಈ ಎಂಟು ದಿಕ್ಕುಗಳು ಕೂಡ ನೀನು ಹೇಳಿರುವ ಈ ಪ್ರತಿಜ್ಞಾವಾಕ್ಯವನ್ನು ಕೇಳಲಿ. ಗಂಧರ್ವ-ರಾಕ್ಷಸರನ್ನೊಳಗೊಂಡಿರುವ ಸ್ವರ್ಗ-ಮರ್ತ್ಯ-ಪಾತಾಳ ಲೋಕಗಳೂ ನಿನ್ನ ಮಾತಿಗೆ ಸಾಕ್ಷಿಗಳಾಗಿರಲಿ. ನಿಶಾಚರರೂ, ಪಿಶಾಚಗಳೂ, ಭೂತಗಣಗಳೂ, ಮನೆಯಲ್ಲಿರುವ ಗೃಹದೇವತೆಗಳೂ ಈ ನಿನ್ನ ಶಪಥ ವಾಕ್ಯವನ್ನು ಕೇಳಲಿ. ಈ ಪೃಥ್ವಿಯಲ್ಲಿರಬಹುದಾದ ಇತರ ಭೂತಗಣಗಳೂ ನೀನು ಹೇಳಿದ ಪ್ರತಿಜ್ಞಾವಚನವನ್ನು ತಿಳಿದಿರಲಿ"–ಎಂದು ರಾಜನಿಗೆ ಹೇಳಿ ಕೈಕೇಯಿಯು ದೇವತೆಗಳನ್ನುದ್ದೇಶಿಸಿ ಹೇಳಿದಳು :

ಸತ್ಯಸಂಧೋ ಮಹಾತೇಜಾ ಧರ್ಮಜ್ಞಃ ಸುಸಮಾಹಿತಾಃ ।
ವರಂ ಮಮ ದದಾತ್ಯೇಷಃ ಸರ್ವೇ ಶೃಣ್ವನ್ತು ದೇವತಾಃ ॥೧೬॥

"ಎಲೈ ದೇವತೆಗಳಿರಾ! ನೀವೆಲ್ಲರೂ ಕೇಳಿರಿ. ಸತ್ಯಸಂಧನಾದ, ಮಹಾತೇಜಸ್ವಿಯಾದ, ಧರ್ಮಜ್ಞನಾದ ದಶರಥನು ಸಮಾಧಾನಚಿತ್ತನಾಗಿ ತಾನು ಪ್ರತಿಜ್ಞೆಮಾಡಿರುವಂತೆ ನನಗೆ ವರವನ್ನು ದಯಪಾಲಿಸಲಿದ್ದಾನೆ."

ಹೀಗೆ ಕೈಕೇಯಿಯು ವರದನಾದ ಮತ್ತು ಕಾಮಮೋಹಿತನಾಗಿದ್ದ ದಶರಥನನ್ನು ಧರ್ಮಪಾಶದಿಂದ ಬಿಗಿದು ದೇವತೆಗಳನ್ನು ಸಾಕ್ಷಿಗಳನ್ನಾಗಿ ಮಾಡಿಕೊಂಡು ಪತಿಯೊಡನೆ ಹೇಳತೊಡಗಿದಳು :

"ಮಹಾರಾಜ! ಬಹಳ ದಿವಸಗಳ ಹಿಂದೆ ನಡೆದ ಒಂದು ವೃತ್ತಾಂತವನ್ನು ಜ್ಞಾಪಿಸಿಕೊ. ವೈಜಯಂತವೆಂಬ ಸ್ಥಳದಲ್ಲಿ ದೇವಾಸುರರಿಗೆ ಯುದ್ಧವು ನಡೆಯಿತು. ನೀನು ಇಂದ್ರನ ಸಹಾಯಾರ್ಥವಾಗಿ ಅಲ್ಲಿಗೆ ಹೋಗಿ ಶಂಬರಾಸುರನೊಡನೆ ಯುದ್ಧಮಾಡುತ್ತಿದ್ದೆ. ಆ ಯುದ್ಧದಲ್ಲಿ ಶತ್ರುವಾದ ಶಂಬರಾಸುರನು ನಿನ್ನ ಪ್ರಾಣಗಳನ್ನು ಮಾತ್ರವೇ ಉಳಿಸಿ ನಖ-ಶಿಖಾಂತವಾಗಿ ತೀಕ್ಷ್ಣವಾದ ಬಾಣಗಳಿಂದ ಗಾಯಗೊಳಿಸಿ ಮೂರ್ಛಿತನನ್ನಾಗಿ ಮಾಡಿದನು. ಆ ಸಮಯದಲ್ಲಿ ನಿನ್ನ ಸಂರಕ್ಷಣೆಯಲ್ಲಿಯೇ ಜಾಗರೂಕಳಾಗಿದ್ದ ನಾನು ಸತತ ಪ್ರಯತ್ನದಿಂದ ನಿನ್ನ ಪ್ರಾಣಗಳನ್ನು ರಕ್ಷಿಸಿದೆನು. ಅದರಿಂದ ಸುಪ್ರೀತನಾದ ನೀನು ನನಗೆರಡು ವರಗಳನ್ನು ದಯಪಾಲಿಸಿದೆ. ಆದರೆ ಆಗಲೇ ನಾನು ಅವುಗಳ ಪ್ರಯೋಜನವನ್ನು ಪಡೆದುಕೊಳ್ಳಲಿಲ್ಲ. ಮುಂದೆ ಆ ವರಗಳ ಪ್ರಯೋಜನವನ್ನು ಪಡೆದುಕೊಳ್ಳುವುದಾಗಿ ಹೇಳಿ ಅವುಗಳನ್ನು ನಿನ್ನಲ್ಲಿಯೇ ನಿಕ್ಷೇಪರೂಪದಲ್ಲಿ ಇರಿಸಿದ್ದೇನೆ. ಈಗ ನಾನು ಆ ಎರಡು ವರಗಳ ಪ್ರಯೋಜನವನ್ನು ಪಡೆದುಕೊಳ್ಳಲು ಅಪೇಕ್ಷಿಸಿದ್ದೇನೆ. ನಿಕ್ಷೇಪರೂಪದಲ್ಲಿರುವ ಆ ವರಗಳನ್ನು ಕೇಳಿದಾಗ ಕೊಡುವುದು ಧರ್ಮಾತ್ಮನಾದ ನಿನಗೆ ತಕ್ಕುದಾಗಿಯೇ ಇದೆ. ಮೇಲಾಗಿ ನನ್ನ ಮಾತನ್ನು ನಡೆಸಿಕೊಡುವುದಾಗಿ ಪ್ರತಿಜ್ಞೆಯನ್ನೂ ಮಾಡಿರುವೆ. ಧರ್ಮದ ಹಿನ್ನೆಲೆಯಲ್ಲಿ ಪ್ರತಿಜ್ಞೆಯನ್ನು ಮಾಡಿ ನಾನು ಆ ಎರಡು ವರಗಳನ್ನು ಕೇಳಿದ ಬಳಿಕ ನೀನು ಕೊಡದಿದ್ದರೆ

ನಿನ್ನಿಂದ ಅವಮಾನಿತಳಾದ ನಾನು ಈಗಲೇ ನಿನ್ನ ಕಣ್ಣೆದುರಿನಲ್ಲಿಯೇ ಪ್ರಾಣಗಳನ್ನು ತೊರೆಯುವೆನು.”

ಚತುರತೆಯ ಮಾತಿನಿಂದಲೇ ಕೈಕೇಯಿಯು ರಾಜನನ್ನು ತನ್ನ ಅಧೀನ ನನ್ನಾಗಿ ಮಾಡಿಕೊಂಡುಬಿಟ್ಟಳು. ವ್ಯಾಧನ ಧ್ವನಿಯಿಂದ ಆಕರ್ಷಿತವಾಗಿ ಬಲೆಗೆ ಬೀಳುವ ಜಿಂಕೆಯಂತೆ–ರಾಜನು ತನ್ನ ವಿನಾಶಕ್ಕಾಗಿಯೇ ಧರ್ಮಪಾಶ ವನ್ನು ಕುತ್ತಿಗೆಗೆ ಬಿಗಿದುಕೊಂಡನು.

ಬಳಿಕ ಕಾಮಮೋಹಿತನಾಗಿದ್ದ, ವರದನಾಗಿದ್ದ ದಶರಥನಿಗೆ ಕೈಕೇಯಿಯು ಹೇಳಿದಳು :

“ಪತಿದೇವ! ಆಗ ನೀನು ಕೊಟ್ಟಿದ್ದು ನಾನು ಪಡೆದುಕೊಳ್ಳದೇ ನಿನ್ನಲ್ಲಿಯೇ ನಿಕ್ಷೇಪರೂಪದಲ್ಲಿಟ್ಟಿರುವ ಆ ಎರಡು ವರಗಳನ್ನೇ ಈಗ ನೀನು ನನಗೆ ಕೊಡಬೇಕು. ನಾನು ಅಪೇಕ್ಷಿಸಿರುವ ಆ ವರಗಳು ಯಾವುವೆಂಬುದನ್ನು ಈಗಲೇ ಹೇಳಿಬಿಡುವೆನು, ಲಾಲಿಸು.

ಯೋಽಭಿಷೇಕಸಮಾರಮ್ಭೋ ರಾಘವಸ್ಯೋಪಕಲ್ಪಿತಃ ।
ಅನೇನೈವಾಭಿಷೇಕೇಣ ಭರತೋ ಮೇಽಭಿಷಿಚ್ಯತಾಮ್ ॥೨೪॥

‘ರಾಘವನಿಗೆ ಪಟ್ಟಾಭಿಷೇಕಮಾಡಲೆಂದು ಯಾವ ಸಂಭ್ರಮ-ಸಮಾರಂಭಗಳು ನಡೆದಿವೆಯೋ, ಯಾವ ಸಂಭಾರಸಾಮಗ್ರಿಗಳು ಸಂಗ್ರಹ ವಾಗಿವೆಯೋ–ಅವೇ ಸಂಭ್ರಮ ಮತ್ತು ಸಂಭಾರಸಾಮಗ್ರಿಗಳಿಂದ ರಾಮನಿಗೆ ಬದಲಾಗಿ ಭರತನಿಗೆ ಪಟ್ಟಾಭಿಷೇಕವಾಗಬೇಕು.’ ಇದು ಮೊದಲನೆಯ ವರ.

ಸಹಾಯವನ್ನೆಸಗಿದ ನನಗೆ ಪ್ರೀತನಾದ ನೀನು ಕೊಟ್ಟಿದ್ದ ಎರಡು ವರಗಳಲ್ಲಿ ಎರಡನೆಯ ವರವನ್ನೂ ಕೇಳುವ ಅಥವಾ ಅದರ ಪ್ರಯೋಜನ ವನ್ನು ಪಡೆದುಕೊಳ್ಳುವ ಕಾಲವು ಈಗಲೇ ಸನ್ನಿಹಿತವಾಗಿದೆ. ಅದನ್ನೂ ಹೇಳಿಬಿಡುವೆನು, ಕೇಳು :

ನವ ಪಞ್ಚ ಚ ವರ್ಷಾಣಿ ದಣ್ಡಕಾರಣ್ಯಮಾಶ್ರಿತಃ ।
ಚೀರಾಜಿನಜಟಾಧಾರೀ ರಾಮೋ ಭವತು ತಾಪಸಃ ॥೨೬॥

'ಹದಿನಾಲ್ಕು ವರ್ಷಗಳ ಕಾಲ ರಾಮನು ದಂಡಕಾರಣ್ಯಕ್ಕೆ ಹೋಗಿ ಅಲ್ಲವನು ಜಟಾಧಾರಿಯಾಗಿ ನಾರಮುಡಿಯನ್ನೂ, ಕೃಷ್ಣಾಜಿನವನ್ನೂ ಧರಿಸಿ ತಪಸ್ವಿಯಾಗಲಿ.'

ಭರತನು ನಿಷ್ಕಂಟಕವಾದ ಈ ಯುವರಾಜಪದವಿಯನ್ನು ಪಡೆಯಲಿ. ಇದೇ ನನ್ನ ಹೆಬ್ಬಯಕೆಯಾಗಿರುವುದು. ನೀನು ಹಿಂದೆ ದಯಪಾಲಿಸಿದ್ದ ಎರಡು ವರಗಳನ್ನೇ ನಾನೀಗ ಪಡೆದುಕೊಳ್ಳಲು ಅಪೇಕ್ಷಿಸಿದ್ದೇನೆ.

ಅದ್ಯ ಚೈವ ಹಿ ಪಶ್ಯೇಯಂ ಪ್ರಯಾನ್ತಂ ರಾಘವಂ ವನಮ್ ॥೨೮॥

ರಾಘವನು ಚೀರಾಜಿನ-ಜಟಾಧಾರಿಯಾಗಿ ಕಾಡಿಗೆ ಹೋಗುವುದನ್ನು ಈಗಲೇ ನಾನು ನೋಡಬೇಕು.

ಸ ರಾಜರಾಜೋ ಭವ ಸತ್ಯಸಂಗರಃ
ಕುಲಂ ಚ ಶೀಲಂ ಚ ಹಿ ರಕ್ಷ ಜನ್ಮ ಚ ।
ಪರತ್ರ ವಾಸೇ ಹಿ ವದನ್ತ್ಯನುತ್ತಮಂ
ತಪೋಧನಾಃ ಸತ್ಯವಚೋ ಹಿತಂ ನೃಣಾಮ್ ॥೨೯॥

ರಾಜಾಧಿರಾಜನಾಗಿರುವ ನೀನು ಸತ್ಯಪ್ರತಿಜ್ಞನಾಗು. ಸತ್ಯನಿಷ್ಠನಾಗಿ ಈ ರಘುವಂಶದ ಕೀರ್ತಿಯನ್ನು ಕಾಪಾಡು. ಶೀಲವನ್ನು ಸಂರಕ್ಷಿಸು. ಜನ್ಮವನ್ನು ಸಾರ್ಥಕಗೊಳಿಸು. ಸತ್ಯವಾಕ್ಯಪಾಲನೆಯೇ ಪರಲೋಕ ಪ್ರಾಪ್ತಿಗೂ ಉತ್ತಮೋತ್ತಮವಾದ ಸಾಧನವೆಂದು ತಪೋಧನರಾದ ಮಹರ್ಷಿಗಳು ಹೇಳುತ್ತಾರೆ. ಮನುಷ್ಯರಿಗೂ ಸತ್ಯನಿಷ್ಠೆಯು ಅತ್ಯಂತ ಹಿತಕರವಾದುದು."

೧೧ನೆಯ ಸರ್ಗವು ಮುಗಿಯಿತು.

ದಶರಥನ ಚಿಂತೆ : ವಿಲಾಪ : ಕೈಕೇಯಿಯನ್ನು ನಿಂದಿಸಿದುದು : ಅವಳನ್ನು ಬಗೆ-ಬಗೆಯಾಗಿ ಸಮಾಧಾನ ಗೊಳಿಸಿ ಇಂತಹ ಘೋರವಾದ ವರವನ್ನು ಕೇಳದಂತೆ ಯಾಚಿಸಿದುದು

ತತಃ ಶ್ರುತ್ವಾ ಮಹಾರಾಜಃ ಕೈಕೇಯ್ಯಾ ದಾರುಣಂ ವಚಃ ।
ಚಿನ್ತಾಮಭಿಸಮಾಪೇದೇ ಮುಹೂರ್ತಂ ಪ್ರತತಾಪ ಚ ॥೧॥

ಕೈಕೇಯಿಯ ಕರ್ಣಕಠೋರವಾದ ಮಾತನ್ನು ಕೇಳಿದೊಡನೆಯೇ ದಶರಥನು ಬಹಳವಾಗಿ ಸಂತಾಪಗೊಂಡು ಚಿಂತಾಮಗ್ನನಾದನು. ಸ್ವಲ್ಪ ಹೊತ್ತು ಅವನಿಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. 'ಇದೇನು ಹಗಲುಗನಸೇ? ನಾನು ಜಾಗ್ರತನಾಗಿರುವೆನೇ? ನನ್ನ ಬುದ್ಧಿಯೇನಾದರೂ ವಿಮೋಹಗೊಂಡಿರುವುದೇ? ಜನ್ಮಾಂತರದಲ್ಲಿ ಅನುಭವಿಸಿರುವ ವಿಷಯದ ಸ್ಮರಣೆಯೇ? ಪಿತ್ತವಿಕಾರದಿಂದ, ಚಿತ್ತಮೋಹವುಂಟಾಗಿ ಎಲ್ಲವೂ ಅದಲು-ಬದಲಾಗಿ ಕಾಣುತ್ತಿರುವುದೇ?'–ಹೀಗೆಲ್ಲಾ ಯೋಚನೆಮಾಡುತ್ತಿದ್ದ ರಾಜನಿಗೆ ಸ್ವಲ್ಪವಾದರೂ ಸುಖವಿಲ್ಲವಾಯಿತು. ಕೈಕೇಯಿಯ ಮಾತೆಂಬ ಚಾವಟಿಯಿಂದ ಪ್ರಹೃತನಾಗಿ ಸ್ವಲ್ಪಹೊತ್ತು ಬುದ್ಧಿಗೆಟ್ಟಿದ್ದ ರಾಜನು ಪುನಃ ಸಂಜ್ಞೆಯನ್ನು ಪಡೆದು–ಹೆಣ್ಣುಹುಲಿಯನ್ನು ಕಂಡ ಜಿಂಕೆಯಂತೆ–ಕೈಕೇಯಿಯನ್ನು ನೋಡಿ ದೀನನೂ, ಅತಿದುಃಖಿತನೂ ಆದನು.

ಬರಿಯ ನೆಲದ ಮೇಲೆ ಕುಳಿತಿದ್ದ ರಾಜನು–ಮಂಡಲದಲ್ಲಿ ಮಂತ್ರ ದಿಂದ ಅಭಿಮಂತ್ರಿತವಾಗಿ ಬಂಧಿಸಲ್ಪಟ್ಟ ವಿಷಸರ್ಪದಂತೆ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ–'ಅಯ್ಯೋ! ನನ್ನ ರಾಜತ್ವಕ್ಕೆ ಧಿಕ್ಕಾರವಿರಲಿ'–ಎಂದು ಉದ್ಗರಿಸುತ್ತಾ ಶೋಕಸಂತಪ್ತನಾಗಿ ಪುನಃ ಎಚ್ಚರದಪ್ಪಿ ಕೆಳಗೆ ಬಿದ್ದನು. ಬಹಳ ಹೊತ್ತಿನ ನಂತರ ಎಚ್ಚರಗೊಂಡ ರಾಜನು ಬಹಳ ದುಃಖಿತನಾಗಿ ಮತ್ತು ಪರಮಕ್ರುದ್ಧನಾಗಿ ಕಣ್ಣುಗಳಿಂದಲೇ ಕೈಕೇಯಿಯನ್ನು ದಹಿಸಿಬಿಡುವನೋ ಎಂಬ ರೀತಿಯಲ್ಲಿ ಅವಳನ್ನು ದುರ-ದುರನೆ ನೋಡುತ್ತಾ ಹೇಳಿದನು :

ನೃಶಂಸೇ ದುಷ್ಟಚಾರಿತ್ರೇ ಕುಲಸ್ಯಾಸ್ಯ ವಿನಾಶಿನಿ ।
ಕಿಂ ಕೃತಂ ತವ ರಾಮೇಣ ಪಾಪೇ ಪಾಪಂ ಮಯಾಪಿ ವಾ ॥೭॥

"ಅತ್ಯಂತಕ್ರೂರಸ್ವಭಾವದವಳೇ! ದುರಾಚಾರಿಣಿಯೇ! ಕುಲವಿನಾಶಿನಿಯೇ! ಪಾಪಿಷ್ಠಳೇ! ರಾಮನು ನಿನಗೆ ಯಾವ ಅಪರಾಧವನ್ನು ಮಾಡಿರುವನು ಅಥವಾ ನಾನಾದರೂ ನಿನಗೆ ಯಾವ ಅಪರಾಧವನ್ನು ಮಾಡಿರುವೆನು?

ಮಹಾತ್ಮನಾದ ರಾಘವನು ತನ್ನ ತಾಯಿಗೆ ಮಾಡುವ ಶುಶ್ರೂಷೆಯನ್ನೇ ನಿನಗೂ ಮಾಡುತ್ತಿರುವನು. ನಿನ್ನನ್ನೂ ಅವನು ಹೆತ್ತತಾಯಿಯೆಂದೇ ಭಾವಿಸಿದ್ದಾನೆ. ನಿನ್ನಲ್ಲಾಗಲೀ ಕೌಸಲ್ಯೆಯಲ್ಲಾಗಲೀ ಅವನಿಗೆ ಯಾವ ವ್ಯತ್ಯಾಸವೂ ಇಲ್ಲ. ಅಂತಹವನಿಗೆ ನೀನು ಈ ಅನರ್ಥವನ್ನುಂಟುಮಾಡಲು ಯತ್ನಿಸುತ್ತಿರುವುದಕ್ಕೆ ಕಾರಣವೇನು? ನಿನ್ನ ನಿಜಸ್ವರೂಪವೇನೆಂಬುದನ್ನು ತಿಳಿಯದೇ–ತೀಕ್ಷ್ಣವಾದ ವಿಷದಿಂದ ಕೂಡಿರುವ ಹೆಣ್ಣುಹಾವನ್ನು ಮನೆಯಲ್ಲಿಟ್ಟುಕೊಳ್ಳುವಂತೆ–ನನ್ನ ವಿನಾಶಕ್ಕಾಗಿಯೇ ರಾಜಪುತ್ರಿಯಾದ ನಿನ್ನನ್ನು ನನ್ನ ಅರಮನೆಗೆ ಕರೆತಂದಂತಾಯಿತು.

ಈ ಪ್ರಪಂಚದಲ್ಲಿರುವ ಸಕಲಪ್ರಜೆಗಳೂ ಶ್ರೀರಾಮನ ಸದ್ಗುಣಗಳನ್ನು ಕೊಂಡಾಡುತ್ತಿರುವಾಗ ಅವನ ಯಾವ ಅಪರಾಧವನ್ನು ನೆಪಮಾಡಿಕೊಂಡು ನನಗೆ ಅತ್ಯಂತಪ್ರಿಯನಾದ ಅವನನ್ನು ಪರಿತ್ಯಜಿಸಲಿ?

ಕೌಸಲ್ಯಾಂ ವಾ ಸುಮಿತ್ರಾಂ ವಾ ತ್ಯಜೇಯಮಪಿ ವಾ ಶ್ರಿಯಮ್ ।
ಜೀವಿತಂ ಚಾತ್ಮನೋ ರಾಮಂ ನ ತ್ವೇವ ಪಿತೃವತ್ಸಲಮ್ ॥೧೧॥

ಅಂತಹ ಪ್ರಸಂಗವು ಸಂಭವಿಸಿದರೆ ಕೌಸಲ್ಯೆ-ಸುಮಿತ್ರೆಯರನ್ನಾದರೂ ಪರಿತ್ಯಜಿಸುವೆನು. ಈ ಸಾಮ್ರಾಜ್ಯವನ್ನಾದರೂ ಪರಿತ್ಯಜಿಸುವೆನು. ನನ್ನ ಪ್ರಾಣವನ್ನಾದರೂ ಪರಿತ್ಯಜಿಸುವೆನು. ಆದರೆ ಪಿತೃವತ್ಸಲನಾದ ಶ್ರೀರಾಮನನ್ನು ಮಾತ್ರ ಪರಿತ್ಯಾಗಮಾಡುವ ಸಾಧ್ಯತೆಯೇ ಇಲ್ಲ.

ನನ್ನ ಹಿರಿಯ ಮಗನಾದ ನಯನಾಭಿರಾಮನಾದ ಶ್ರೀರಾಮನನ್ನು

ನೋಡಿದೊಡನೆಯೇ ನನಗೆ ಅನಿರ್ವಾಚ್ಯವಾದ ಸಂತೋಷವುಂಟಾಗುತ್ತದೆ. ಕ್ಷಣಕಾಲ ಅವನನ್ನು ಕಾಣದಿದ್ದರೂ ನನ್ನ ಚೈತನ್ಯವೇ ಉಡುಗಿಹೋಗುತ್ತದೆ.

ತಿಷ್ಠೇಲ್ಲೋಕೋ ವಿನಾ ಸೂರ್ಯಂ ಸಸ್ಯಂ ವಾ ಸಲಿಲಂ ವಿನಾ ।
ನ ತು ರಾಮಂ ವಿನಾ ದೇಹೇ ತಿಷ್ಠೇತ್ತು ಮಮ ಜೀವಿತಮ್ ॥೧೩॥

ಕೈಕೇಯಿ! ಈ ಪ್ರಪಂಚವು ಸೂರ್ಯನಿಲ್ಲದೆಯೇ ಉಳಿಯಬಹುದು. ನೆಟ್ಟ ಸಸಿಗಳು ನೀರಿಲ್ಲದೆಯೇ ಬೆಳೆಯಲೂಬಹುದು. ಆದರೆ ರಾಮನಿಲ್ಲದಿದ್ದರೆ ಈ ನನ್ನ ದೇಹದಲ್ಲಿ ಪ್ರಾಣಗಳು ಖಂಡಿತವಾಗಿಯೂ ಉಳಿಯಲಾರವು.

ಪಾಪಸಂಕಲ್ಪಳೇ! ಈ ಕಾರಣದಿಂದಾಗಿ ನನ್ನ ಪ್ರಾಣಕ್ಕೇ ವ್ಯಾಘಾತವನ್ನುಂಟುಮಾಡುವ ಈ ನಿನ್ನ ಪಾಪಸಂಕಲ್ಪವನ್ನು ಪರಿತ್ಯಜಿಸು. ನಿನ್ನ ಕಾಲುಗಳಿಗೆ ಬಿದ್ದಾದರೂ ಬೇಡಿಕೊಳ್ಳುವೆನು. ನನ್ನ ವಿಷಯದಲ್ಲಿ ಪ್ರಸನ್ನಳಾಗು. ಪಾಪಿಷ್ಠಳೇ! ಪರಮದಾರುಣವಾದ ಈ ದುರಾಲೋಚನೆಯನ್ನು ನೀನು ಏಕಾದರೂ ಮಾಡಿದೆ? (ಯಾವ ಕಾರಣದಿಂದಾಗಿ ನಿನಗೆ ಇಂತಹ ದುಷ್ಟಯೋಚನೆಯು ಹೊಳೆಯಿತು?)

ಕೈಕೇಯಿ! ಭರತನ ಹಿತಾಹಿತಗಳ ವಿಷಯದಲ್ಲಿ ನನ್ನೊಡನೆ ಜಿಜ್ಞಾಸೆ ಮಾಡಲು ಇಚ್ಛಿಸಿರುವೆಯಾ? ಆಗಲಿ. ಭರತನ ಹಿತದ ವಿಷಯದಲ್ಲಿ ಇಬ್ಬರೂ ಜಿಜ್ಞಾಸೆಮಾಡಿ ಒಂದು ನಿರ್ಧಾರಕ್ಕೆ ಬರೋಣ. ಭರತನಿಗೆ ಹಿತವನ್ನು ಬಯಸುವ ನೀನು ರಾಮನಿಗೆ ಅಹಿತವನ್ನು ಮಾಡುವ ಕಾರಣವಿಲ್ಲ. ರಾಮನ ವಿಷಯವಾಗಿ ನೀನೇ ಹಿಂದೆ ಹೇಳಿದ್ದನ್ನು ನೆನಪುಮಾಡಿಕೋ.

ಸ ಮೇ ಜ್ಯೇಷ್ಠಃ ಸುತಃ ಶ್ರೀಮಾನ್ಧರ್ಮಜ್ಯೇಷ್ಠಃ ॥೧೭॥

'ರಾಮನು ನನ್ನ ಹಿರಿಯ ಮಗನು ; ಶುಭಲಕ್ಷಣಸಂಪನ್ನನು ; ಧರ್ಮಿಷ್ಟರಲ್ಲಿ ಅಗ್ರಗಣ್ಯನು'–ಎಂದೆಲ್ಲಾ ನನ್ನೊಡನೆ ಹೇಳುತ್ತಿದ್ದೆ. ರಾಮನಿಂದ ಶುಶ್ರೂಷೆಮಾಡಿಸಿಕೊಳ್ಳುವ ಸಲುವಾಗಿ ಪ್ರಿಯವಾದಿನಿಯಾದ ನೀನು ಇಂತಹ ಪ್ರಿಯೋಕ್ತಿಗಳನ್ನು ಆಡಿದ್ದಿರಬಹುದು. ಏಕೆಂದರೆ : ಸಕಲಗುಣ ಸಂಪನ್ನನಾದ ಶ್ರೀರಾಮನ ಪಟ್ಟಾಭಿಷೇಕವಾರ್ತೆಯನ್ನು ಕೇಳಿ ಆನಂದ

ತುಂದಿಲಳಾಗಬೇಕಾಗಿದ್ದ ನೀನು ದುಃಖದಿಂದ ಪರಿತಪಿಸುತ್ತಿರುವೆ. ನನ್ನನ್ನೂ ಬಹಳವಾಗಿ ಸಂತಾಪಗೊಳಿಸುತ್ತಿರುವೆ. ಇತರರ ದುಷ್ಟಬೋಧನೆಗಳಿಗೆ ಕಿವಿಗೊಟ್ಟು ಪರಾಧೀನಳಾಗಿ ಶೂನ್ಯವಾಗಿರುವ ಈ ಕ್ರೋಧಾಗಾರವನ್ನು ಪ್ರವೇಶಿಸಿರುವೆ.

ನೀತಿಸಂಪನ್ನಳೇ! ನೀತಿಯುಕ್ತವಾಗಿದ್ದ ನಿನ್ನ ಬುದ್ಧಿಯು ಹೀಗೆ ವಿಕಾರಹೊಂದಲಾಗಿ ಈ ಇಕ್ಷ್ವಾಕುಕುಲಕ್ಕೇ ಮಹತ್ತರವಾದ ಅನರ್ಥವು ಪ್ರಾಪ್ತವಾದಂತಾಗಿದೆ. ಈ ಹಿಂದೆ ನೀನು ನನ್ನ ವಿಷಯದಲ್ಲಿ ಅಯುಕ್ತ ವಾದುದನ್ನಾಗಲೀ, ಅಪ್ರಿಯವಾದುದನ್ನಾಗಲೀ ಮಾಡಿರುವುದಿಲ್ಲ. ಆದುದ ರಿಂದ, ವಿಶಾಲಾಕ್ಷಿಯೇ! ನೀನೀಗ ಹೇಳುತ್ತಿರುವ ಕರ್ಣಕಠೋರವಾದ ಮಾತುಗಳು ಸಹಜವಾಗಿ ನಿನ್ನ ಅಂತಃಕರಣದಿಂದ ಬಂದಿರುವುವೆಂದು ನಾನು ನಂಬುವುದಿಲ್ಲ. ನಿಶ್ಚಯವಾಗಿಯೂ ನಿನಗೆ ರಾಘವನು ಮಹಾತ್ಮನಾದ ಭರತನಿಗೆ ಸಮಾನನಾಗಿದ್ದನಲ್ಲವೇ? ನೀನು ನಿನ್ನ ಮಗನಾದ ಭರತ ನಲ್ಲಿಟ್ಟಿದ್ದ ವಾತ್ಸಲ್ಯವನ್ನೇ ರಾಮನಲ್ಲಿಯೂ ಇಟ್ಟಿದ್ದೆ. ಈ ವಿಷಯವಾಗಿ ನೀನೇ ನನಗೆ ಹಲವಾರು ಬಾರಿ ಹೇಳಿರುವೆ. ಯಶಸ್ವಿಯಾದ ಧರ್ಮಾತ್ಮನಾದ ರಾಮನು ಹದಿನಾಲ್ಕು ವರ್ಷಗಳ ಕಾಲ ವನವಾಸಮಾಡುವುದು ನಿನಗೆ ಹೇಗೆ ತಾನೇ ರುಚಿಸೀತು? ದೇವಿ! ರಾಮನು ವನವಾಸಮಾಡುವುದರಿಂದ ನೀನು ಹೇಗೆ ತಾನೇ ಸಂತೋಷಿಸುವೆ? ಅತ್ಯಂತಸುಕುಮಾರನಾದ, ಧರ್ಮ ದಲ್ಲಿಯೇ ದೃಢವಾದ ಮನಸ್ಸುಳ್ಳ ಶ್ರೀರಾಮನು ಅತ್ಯಂತಭೀಕರವಾದ ಅರಣ್ಯದಲ್ಲಿ ವಾಸಮಾಡುವುದನ್ನು ಹೇಗೆತಾನೇ ಇಷ್ಟಪಡುವೆ? ನಿನ್ನ ಶುಶ್ರೂಷೆಯಲ್ಲಿಯೇ ಸದಾ ನಿರತನಾದ, ಲೋಕಾಭಿರಾಮನಾದ ರಾಮನ ವನವಾಸವನ್ನು ನೀನು ಏತಕ್ಕಾಗಿ ಇಷ್ಟಪಡುತ್ತಿರುವೆ? ಭರತನಿಗಿಂತಲೂ ಹೆಚ್ಚಾಗಿ ರಾಮನೇ ನಿನ್ನ ಶುಶ್ರೂಷೆಯನ್ನು ಸರ್ವದಾ ಮಾಡುತ್ತಿರುವನು. ಆದುದರಿಂದ ನಿನ್ನ ವಿಷಯದಲ್ಲಿ ರಾಮನಿಗಿಂತಲೂ ವಿಶೇಷವಾದ ಭಕ್ತಿಯು ಭರತನಿಗಿರುವುದೆಂದು ನಾನು ಭಾವಿಸುವುದಿಲ್ಲ. ಮಾತಾ-ಪಿತೃಗಳ ಶುಶ್ರೂಷೆಯಲ್ಲಿ, ಹಿರಿಯರಿಗೆ ಗೌರವವನ್ನು ತೋರುವುದರಲ್ಲಿ, ವಿನಯದಲ್ಲಿ, ಹೇಳಿದ ಕೆಲಸವನ್ನು ಮಾಡುವುದರಲ್ಲಿ, ಪ್ರಾಮಾಣಿಕತೆ ಯಲ್ಲಿ– ಪುರುಷಶ್ರೇಷ್ಠನಾದ ರಾಮನನ್ನು ಮೀರಿಸುವವರು ಯಾರಿದ್ದಾರೆ?

ನಮ್ಮ ಅಂತಃಪುರದಲ್ಲಿರುವ ಸಾವಿರಾರು ಸ್ತ್ರೀಯರಲ್ಲಿ ಯಾವಳೂ ರಾಮನು ಅಕಾರ್ಯಮಾಡಿರುವನೆಂದು ಹೇಳಿರುವುದಿಲ್ಲ. ನಮ್ಮನ್ನಾಶ್ರಯಿಸಿ ಜೀವಿಸುತ್ತಿರುವ ಸಾವಿರಾರು ಮಂದಿ ಪರಿಜನರಲ್ಲಿ ಯಾವನೊಬ್ಬನೂ ರಾಮನು ಅಸೂಯಾಪರನೆಂದಾಗಲೀ, ತನ್ನ ಮೇಲಿನ ಅಸೂಯೆಯಿಂದ ತನಗೆ ತೊಂದರೆಮಾಡಿದನೆಂದಾಗಲೀ ಹೇಳಿಲ್ಲ. ಪರಿವಾದ-ಅಪವಾದಗಳೆರಡೂ* ರಾಮನಿಗೆ ಸಲ್ಲವು. ಮನುಜವ್ಯಾಘ್ರನಾದ ಶ್ರೀರಾಮನು ನಿಷ್ಕಪಟವಾದ ಬುದ್ಧಿಯಿಂದ ಸಕಲಪ್ರಜೆಗಳನ್ನೂ, ಪ್ರಾಣಿಗಳನ್ನೂ ಸಂತೈಸುತ್ತಾನೆ. ಪ್ರಜೆಗಳಿಗೆ ಸಂತೋಷವನ್ನುಂಟುಮಾಡುತ್ತಾ ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳುತ್ತಾನೆ.

ಸತ್ಯೇನ ಲೋಕಾಞ್ಜಯತಿ ದೀನಾನ್ದಾನೇನ ರಾಘವಃ ।
ಗುರೂನ್ ಶುಶ್ರೂಷಯಾ ವೀರೋ ಧನುಷಾ ಯುಧಿ ಶಾತ್ರವಾನ್ ॥

ವೀರನಾದ ರಾಮನು ಸತ್ಯನಿಷ್ಠೆಯಿಂದ ಉತ್ತಮಲೋಕಗಳನ್ನು ಜಯಿಸಿದ್ದಾನೆ. ದೀನರಿಗೆ ಯಥೇಚ್ಛವಾಗಿ ದ್ರವ್ಯವನ್ನು ದಾನಮಾಡಿ ಅವರ ಹೃದಯವನ್ನು ಗೆದ್ದಿದ್ದಾನೆ. ಗುರುಜನರಿಗೆ ಶುಶ್ರೂಷೆಮಾಡಿ ಅವರ ಅನುಗ್ರಹವನ್ನು ಸಂಪಾದಿಸಿದ್ದಾನೆ. ಧನುಸ್ಸಿನ ಪ್ರದರ್ಶನಮಾತ್ರದಿಂದಲೇ ಯುದ್ಧದಲ್ಲಿ ಶತ್ರುಗಳನ್ನು ಗೆದ್ದಿದ್ದಾನೆ.

ಸತ್ಯಂ ದಾನಂ ತಪಸ್ತ್ಯಾಗೋ ಮಿತ್ರತಾ ಶೌಚಮಾರ್ಜವಮ್ ।
ವಿದ್ಯಾ ಚ ಗುರುಶುಶ್ರೂಷಾ ಧ್ರುವಾಣ್ಯೇತಾನಿ ರಾಘವೇ ॥೩೦॥

ಸತ್ಯನಿಷ್ಠೆ, ದಾನ, ತಪಸ್ಸು, ತ್ಯಾಗ, ಎಲ್ಲರೊಡನೆಯೂ ಮೈತ್ರಿ, ಸರ್ವದಾ ಪರಿಶುದ್ಧತೆ, ಸರಳತೆ, ವಿದ್ಯಾತತ್ಪರತೆ, ಗುರುಶುಶ್ರೂಷೆ–ಈ ಗುಣಗಳು ರಾಮನಲ್ಲಿ ಮೂರ್ತಿಮತ್ತಾಗಿ ನೆಲೆಸಿವೆ.[1] ಮಹಾಪ್ರಾಮಾಣಿಕ

---

* ಪರಿವಾದಃ = ಸಮೂಲಮಯಶಃ : ಕಾರ್ಯ-ಕಾರಣನಿಮಿತ್ತವಾದ ಅಪಯಶಸ್ಸಿಗೆ ಪರಿವಾದವೆಂದು ಹೆಸರು. ಅಪವಾದಃ = ನಿರ್ಮೂಲಮಯಶಃ: ನಿಷ್ಕಾರಣವಾಗಿ ಪ್ರಾಪ್ತವಾಗುವ ಅಪಯಶಸ್ಸಿಗೆ ಅಪವಾದವೆಂದು ಹೆಸರು.

[1] ಸತ್ಯಂ = ಮೃಷಾಸಂಸರ್ಗಶೂನ್ಯವಚಃ–ಸುಳ್ಳಿನ ಸಂಸರ್ಗವೇ ಇಲ್ಲದ ಮಾತು. ದಾನಂ = ಪರಲೋಕಪ್ರಯೋಜನಂ–ಪರಲೋಕಕ್ಕೆ ಪ್ರಯೋಜನವಾದುದು. ತಪಃ = ಶಾಸ್ತ್ರವಿಹಿತಭೋಜನನಿವೃತ್ತ್ಯಾದಿರೂಪಂ–ಶಾಸ್ತ್ರವಿಹಿತವಾದ ರೀತಿಯಲ್ಲಿ ಮಾಡುವ

ನಾದ, ದೇವತೆಗಳಿಗೆ ಸಮಾನನಾದ, ಮಹರ್ಷಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ಶ್ರೀರಾಮನ ವಿಷಯದಲ್ಲಿ ಪಾಪಹೇತುವಾದ (ಪಟ್ಟಾಭಿಷೇಕದ ತಡೆಗೆ ಕಾರಣವಾದ) ಮಾತನ್ನು ನೀನು ಹೇಗೆತಾನೇ ಹೇಳಿದೆ? ಪ್ರಜೆಗಳೊಡನೆ ಯಾವಾಗಲೂ ಪ್ರಿಯವಾದ ಮಾತುಗಳನ್ನೇ ಆಡುವ ರಾಮನು ಒಮ್ಮೆಯಾದರೂ ಅಪ್ರಿಯವಾದ ಮಾತನ್ನಾಡಿದುದು ನನ್ನ ಸ್ಮರಣೆಯಲ್ಲಿಲ್ಲ. ಹೀಗಿರುವಾಗ ಅವನು ನಿನ್ನ ವಿಷಯದಲ್ಲಿ–ಅದರಲ್ಲಿಯೂ ತಾಯಿಯ ವಿಷಯದಲ್ಲಿ–ಅಪ್ರಿಯವಾದ ಮಾತುಗಳನ್ನು ಆಡುತ್ತಾನೆಂದು ಹೇಗೆತಾನೇ ಹೇಳಲಿ?

ಕ್ಷಮಾ ಯಸ್ಮಿಂಸ್ತಪಸ್ತ್ಯಾಗಃ ಸತ್ಯಂ ಧರ್ಮಃ ಕೃತಜ್ಞತಾ ।
ಅಪಿಹಿಂಸಾ ಚ ಭೂತಾನಾಂ ತಮೃತೇ ಕಾ ಗತಿರ್ಮಮ ॥೩೩॥

ಯಾವ ಮಹಾಪುರುಷನಲ್ಲಿ ಕ್ಷಮೆ, ತಪಸ್ಸು, ತ್ಯಾಗ, ಸತ್ಯಸಂಧತೆ, ಧರ್ಮನಿಷ್ಠೆ, ಕೃತಜ್ಞತೆ, ಭೂತದಯೆ, ಅಹಿಂಸೆ–ಈ ಕಲ್ಯಾಣಗುಣಗಳೆಲ್ಲವೂ ನೆಲೆಸಿರುವುವೋ–ಅಂತಹ ರಾಮನಿಲ್ಲದಿದ್ದರೆ ನನಗೆ ಗತಿ ಯಾರು?

ಕೈಕೇಯಿ! ವೃದ್ಧನಾಗಿರುವ, ಅಂತ್ಯಕಾಲವನ್ನು ಸಮೀಪಿಸುತ್ತಿರುವ, ನಿನ್ನ ಮಾತುಗಳನ್ನು ಕೇಳಿ ಬಹಳವಾಗಿ ಪರಿತಪಿಸುತ್ತಿರುವ, ರಾಮ ವಿಯೋಗದ ಭೀತಿಯಿಂದ ದೈನ್ಯದಿಂದ ಕೂಡಿದ ಮಾತುಗಳನ್ನು ಬಾರಿ-ಬಾರಿಗೂ ಹೇಳುತ್ತಿರುವ ನನ್ನ ವಿಷಯದಲ್ಲಿ ದಯೆತೋರುವುದು ನಿನಗೆ ಯೋಗ್ಯವಾಗಿದೆ. ಸಾಗರಾಂತವಾದ ಈ ನನ್ನ ರಾಜ್ಯದಲ್ಲಿ ಯಾವ-ಯಾವ ಅನರ್ಘವಸ್ತುಗಳಿವೆಯೋ–ಆ ಎಲ್ಲ ವಸ್ತುಗಳನ್ನೂ ನಿನಗೆ ತರಿಸಿಕೊಡು ತ್ತೇನೆ. ರಾಮನಲ್ಲಿ ಮಾತ್ರ ಕೋಪಗೊಳ್ಳಬೇಡ.

ಉಪವಾಸ-ಮೌನಾದಿ ವ್ರತಗಳು. ತ್ಯಾಗಃ = ಐಹಿಕಪ್ರಯೋಜನಃ–ಐಹಿಕಪ್ರಯೋಜನವುಳ್ಳ ದಾನ. ಮಿತ್ರತಾ = ಸರ್ವಸುಹೃತ್ತ್ವಂ–ಸಕಲರಲ್ಲಿಯೂ ಸ್ನೇಹದಿಂದಿರುವುದು. ಶೌಚಂ = ಸ್ನಾನಜನ್ಯಶುದ್ಧಿಃ–ಸ್ನಾನಮಾಡುವುದರಿಂದ ಉಂಟಾಗುವ ಪರಿಶುದ್ಧತೆ. ಆರ್ಜವಂ = ಪರಚಿತ್ತಾನುವರ್ತಿತ್ವಂ ಅಥವಾ ವಂಚನಾರಾಹಿತ್ಯಂ–ಬೇರೆಯವರ ಮನಸ್ಸನ್ನು ಅನುಸರಿಸಿ ನಡೆಯುವುದು ಅಥವಾ ವಂಚನೆಯಿಲ್ಲದಿರುವುದು. ವಿದ್ಯಾ = ತತ್ತ್ವಜ್ಞಾನಂ, ತತ್ತ್ವ ಜ್ಞಾನವು-ಗುರುಶುಶ್ರೂಷಾ = ಪರಿಚರ್ಯಾ–ಸೇವೆಮಾಡುವುದು.

ಅಞ್ಜಲಿಂ ಕುರ್ಮಿ ಕೈಕೇಯಿ ಪಾದೌ ಚಾಪಿ ಸ್ಪೃಶಾಮಿ ತೇ ।
ಶರಣಂ ಭವ ರಾಮಸ್ಯ ಮಾಧರ್ಮೋ ಮಾಮಿಹ ಸ್ಪೃಶೇತ್ ॥೩೬॥

ದೇವಿ! ಕೈಮುಗಿದು ಕೇಳಿಕೊಳ್ಳುತ್ತೇನೆ. ನಿನ್ನ ಕಾಲುಗಳನ್ನು ಮುಟ್ಟಿ ನಮಸ್ಕಾರವನ್ನು ಮಾಡುತ್ತೇನೆ. ರಾಮನಿಗೆ ನೀನು ಶರಣ್ಯಳಾಗು. ರಾಮನನ್ನು ರಕ್ಷಿಸು. ವರದಾನವೆಂಬ ಒಂದು ಪ್ರತಿಜ್ಞಾವಚನವನ್ನು ನಡಸಿಕೊಡಲು ಹೋಗಿ ಜ್ಯೇಷ್ಠವ್ಯತಿಕ್ರಮದ ಮತ್ತು ನಿರಪರಾಧಿಯನ್ನು ಕಾಡಿಗಟ್ಟಿದ ಅಧರ್ಮವು ನನ್ನನ್ನು ತಾಗದಿರಲಿ."

ಹೀಗೆ ದುಃಖದಿಂದ ಪರಿತಪಿಸುತ್ತಿದ್ದ, ವಿಲಪಿಸುತ್ತಿದ್ದ, ಬುದ್ಧಿಹೀನನಾಗಿದ್ದ, ನೆಲದಲ್ಲಿ ಹೊರಳಾಡುತ್ತಿದ್ದ, ಶೋಕದ ಕಣ್ಣೀರಿನಿಂದ ಚೆನ್ನಾಗಿ ನೆನೆದುಹೋಗಿದ್ದ, ಶೋಕಸಮುದ್ರದ ಪಾರವನ್ನು ತೋರೆಂದು ಬಾರಿ-ಬಾರಿಗೂ ಪತ್ನಿಯನ್ನು ಪ್ರಾರ್ಥಿಸುತ್ತಿದ್ದ ದಶರಥನ್ನು ಕುರಿತು ಭಯಂಕರ ರೂಪವನ್ನು ತಾಳಿದ ಕೈಕೇಯಿಯು ಅತ್ಯಂತಘೋರವಾದ ಮಾತನ್ನು ಹೇಳಿದಳು :

"ಮಹಾರಾಜ! ವರಗಳನ್ನು ಕೊಟ್ಟು ಅವುಗಳನ್ನು ಕಾರ್ಯಗತ ಮಾಡಬೇಕಾದ ಕಾಲದಲ್ಲಿ ನೀನು ಅನುತಾಪಪಡುವುದಾದರೆ–'ನಾನು ಧಾರ್ಮಿಕ', 'ಧರ್ಮಪ್ರಿಯ', 'ಧರ್ಮಾತ್ಮ'–ಮುಂತಾಗಿ ಈ ಪ್ರಪಂಚದಲ್ಲಿ ಹೇಗೆತಾನೇ ಹೇಳಿಕೊಳ್ಳುವೆ? ಅನೇಕಾನೇಕ ರಾಜರ್ಷಿಗಳು ಒಂದೆಡೆಯಲ್ಲಿ ಸೇರಿ, ಸಮಯದಲ್ಲಿ ಉಪಕಾರಮಾಡಿದ ನನಗೆ ನೀನು ವರಪ್ರದಾನ ಮಾಡಿದ ವಿಷಯವನ್ನೂ, ಆ ವರಗಳನ್ನು ಕಾರ್ಯಗತಮಾಡುವ ಕಾಲವು ಸನ್ನಿಹಿತವಾದಾಗ ನೀನು ಪರಿತಾಪಪಟ್ಟ ವಿಷಯವನ್ನೂ ಚರ್ಚಿಸಿದ್ದೇ ಆದರೆ ಅವರಿಗೆ ನೀನು ಏನೆಂದು ಸಮಾಧಾನಹೇಳುವೆ?

ಯಸ್ಯಾಃ ಪ್ರಸಾದೇ ಜೀವಾಮಿ ಯಾ ಚ ಮಾಮಭ್ಯಪಾಲಯತ್ ।
ತಸ್ಯಾಃ ಕೃತಂ ಮಯಾ ಮಿಥ್ಯಾ ಕೈಕೇಯ್ಯಾ ಇತಿ ವಕ್ಷ್ಯಸಿ ॥೪೧॥

'ಯಾವಳ ಪ್ರಸನ್ನತೆಯಿಂದ ನಾನು ಬದುಕಿರುವೆನೋ ಮತ್ತು ಯಾವಳು ನನ್ನನ್ನು ಅಪಾಯದಿಂದ ಪಾರುಮಾಡಿದಳೋ–ಅಂತಹವಳಿಗೆ ಸುಪ್ರೀತನಾಗಿ ಎರಡು ವರಗಳನ್ನು ಕೊಟ್ಟ ನಾನು, ಅವುಗಳನ್ನು ಕಾರ್ಯಗತಮಾಡಿಕೊಡಬೇಕೆಂದು ಕೈಕೇಯಿಯು ಪ್ರಾರ್ಥಿಸಿದಾಗ ನಿರಾಕರಿಸಿದೆನು.

ವರಕೊಟ್ಟಿದ್ದನ್ನೇ ಸುಳ್ಳಾಗಿ ಮಾಡಿಬಿಟ್ಟೆನು' –ಎಂದು ಧರ್ಮಿಷ್ಠರಾದ ರಾಜರ ಮುಂದೆ ಹೇಳಲಿರುವೆಯಾ? ನೀನೊಬ್ಬನು ಮಿಥ್ಯಾಭಾಷಿಯಾದುದರಿಂದ ಪ್ರತಿಜ್ಞಾಭಂಗದ ಕಳಂಕವು ಅಥವಾ ಅಪಯಶಸ್ಸು ನಿನಗೊಬ್ಬನಿಗೆ ಮಾತ್ರವೇ ಪ್ರಾಪ್ತವಾಗುವುದಿಲ್ಲ. ನಿನ್ನ ವಂಶದ ಮಹಾಮಹಿಮರಾದ ರಾಜರೆಲ್ಲರಿಗೂ ನೀನು ಅಪಯಶಸ್ಸನ್ನು ತರಲಿರುವೆ. ದಶರಥನ ವಂಶೀಯರೆಲ್ಲರಿಗೂ ಮಿಥ್ಯಾವಾದಿಗಳೆಂಬ ಕಳಂಕವು ಪ್ರಾಪ್ತವಾಗುವುದು. ಹೇಳಿದ ಮಾತನ್ನು ನಡೆಸಿಕೊಡುವುದಾಗಿ ಈಗತಾನೇ ಪ್ರತಿಜ್ಞಾಪೂರ್ವಕವಾಗಿ ಹೇಳಿ ಮರುಕ್ಷಣದಲ್ಲಿಯೇ ಅದಕ್ಕೆ ವಿರುದ್ಧವಾದ ಮಾತುಗಳನ್ನೇ ಆಡುತ್ತಿರುವೆ.

ಶೈಬ್ಯಃ ಶ್ಯೇನಕಪೋತೀಯೇ ಸ್ವಮಾಂಸಂ ಪಕ್ಷಿಣೇ ದದೌ ।
ಅಲರ್ಕಶ್ಚಕ್ಷುಷೀ ದತ್ತ್ವಾ ಜಗಾಮ ಗತಿಮುತ್ತಮಾಮ್ ॥೪೩॥

ಶೈಬ್ಯ, ಅಲರ್ಕ–ಇವರೇ ಮುಂತಾದ ರಾಜರ್ಷಿಗಳು ಪ್ರತಿಜ್ಞಾ ಪರಿಪಾಲನೆಗಾಗಿ ಮಾಡಿರುವ ಮಹಾತ್ಯಾಗಕ್ಕೆ ಹೋಲಿಸುವುದಾದರೆ ನಿನ್ನ ತ್ಯಾಗವು ಅತ್ಯಲ್ಪವೆನಿಸದಿರದು. ಗಿಡಗಹಕ್ಕಿಯಿಂದ ಹಿಂಬಾಲಿಸಲ್ಪಟ್ಟ ಕಪೋತಪಕ್ಷಿಯು ಶೈಬ್ಯನ ಬಳಿಗೆ ಬಂದು ರಕ್ಷಣೆಯನ್ನು ಕೇಳಿದಾಗ ಪರಮ ಧಾರ್ಮಿಕನಾದ ಶೈಬ್ಯನು ಕಪೋತಕ್ಕೆ ರಕ್ಷಣೆನೀಡಿ ಆಹಾರವನ್ನು ಪ್ರಾರ್ಥಿಸಿದ ಗಿಡಗಪಕ್ಷಿಗೆ ತನ್ನ ಶರೀರದಿಂದ ಮಾಂಸವನ್ನೇ ಕತ್ತರಿಸಿಕೊಟ್ಟನು. ಅಲರ್ಕರಾಜನು ತನ್ನೆರಡು ಕಣ್ಣುಗಳನ್ನೇ ದಾನಮಾಡಿ ಉತ್ತಮವಾದ ಗತಿಯನ್ನು ಹೊಂದಿದನು.*

---

* ಶ್ಯೇನ-ಕಪೋತಗಳ ಕಥೆಯು ಈ ರೀತಿಯಾಗಿದೆ : ಇಂದ್ರ ಮತ್ತು ಅಗ್ನಿಗಳು ಶೈಬ್ಯರಾಜನನ್ನು ಪರೀಕ್ಷಿಸಲೋಸುಗ ಗಿಡಗ ಮತ್ತು ಕಪೋತಗಳ ರೂಪವನ್ನು ಧರಿಸಿ ರಾಜನ ಅರಮನೆಗೆ ಹಾರಿಬಂದರು. ಕಪೋತಪಕ್ಷಿಯು ಮುಂದೆ ಹಾರಿಬರುತ್ತಿದ್ದಿತು. ಗಿಡಗವು ಅದನ್ನು ಅಟ್ಟಿಸಿಕೊಂಡು ಹಿಂದೆ ಬರುತ್ತಿದ್ದಿತು. ಕಪೋತವು ಬಹಳ ದೂರ ಓಡಿ ಬಂದ ದಣಿವನ್ನು ತೋರ್ಪಡಿಸುತ್ತಾ ಸಿಂಹಾಸನಾಧಿರೂಢನಾಗಿದ್ದ ಶೈಬ್ಯನ ತೊಡೆಯ ಮೇಲೆ ಬಂದು ಕುಳಿತುಕೊಂಡಿತು. ಆ ವೇಳೆಗೆ ಸರಿಯಾಗಿ ಗಿಡಗಪಕ್ಷಿಯೂ ರಾಜನ ಸಮ್ಮುಖಕ್ಕೆ ಹಾರಿ ಬಂದು ಕಪೋತಪಕ್ಷಿಯು ತನ್ನ ಆಹಾರವೆಂದೂ, ಅದನ್ನು ಬಿಟ್ಟು ಕೊಡಬೇಕೆಂದೂ, ದೇವತೆಗಳೇ ಕಪೋತಪಕ್ಷಿಯನ್ನು ತನಗೆ

ಸಾಗರಃ ಸಮಯಂ ಕೃತ್ವಾ ನ ವೇಲಾಮತಿವರ್ತತೇ ।
ಸಮಯಂ ಮಾನೃತಂ ಕಾರ್ಷೀಃ ಪೂರ್ವವೃತ್ತಮನುಸ್ಮರನ್ ॥೪೪॥

ಮಹಾರಾಜ! ಒಮ್ಮೆ ಪ್ರತಿಜ್ಞೆಮಾಡಿದರೆ ಧರ್ಮಜ್ಞರಾದವರು ಅದನ್ನು ನಿರಂತರವೂ ಪರಿಪಾಲಿಸುತ್ತಾರೆ. ಹಾಗೆ ಮಾಡಿದ ಪ್ರತಿಜ್ಞೆಯನ್ನು ಪರಿಪಾಲಿಸದಿದ್ದರೆ ಲೋಕವೇ ಉಳಿಯುವುದಿಲ್ಲ. ಸಮುದ್ರರಾಜನು ತೀರ ವನ್ನು ಅತಿಕ್ರಮಿಸಿ ಪ್ರಾಣಿಗಳಿಂದ ನಿಬಿಡವಾಗಿರುತ್ತಿದ್ದ ಭೂಭಾಗಗಳನ್ನು ಮುಳುಗಿಸಿ ಬಿಡುತ್ತಿದ್ದನು. ಅದರಿಂದ ಪ್ರಪಂಚಕ್ಕೆ ಅಪಾರವಾದ ಹಾನಿ ಯುಂಟಾಗುತ್ತಿದ್ದಿತು. ದೇವತೆಗಳೊಮ್ಮೆ ತೀರವನ್ನು ಅತಿಕ್ರಮಿಸಿಹೋಗ ದಂತೆ ಸಮುದ್ರರಾಜನನ್ನು ಕೇಳಿಕೊಂಡರು. ಸಮುದ್ರರಾಜನು ಅವರ ಮಾತಿಗೆ ಸಮ್ಮತಿಸಿ ಇನ್ನು ಮುಂದೆ ತೀರವನ್ನು ಅತಿಕ್ರಮಿಸಿಹೋಗುವುದಿಲ್ಲ ವೆಂದು ಪ್ರತಿಜ್ಞೆ ಮಾಡಿದನು. ಅಂದಿನಿಂದ ಇಂದಿನವರೆಗೂ ಸಮುದ್ರವು ತನ್ನ ತೀರವನ್ನು ಅತಿಕ್ರಮಿಸಿರುವುದಿಲ್ಲ. ಪೂರ್ವಜರ ಇತಿಹಾಸಗಳನ್ನು ಸ್ಮರಿಸಿಯಾದರೂ ನೀನು ಮಾಡಿರುವ ಪ್ರತಿಜ್ಞೆಯನ್ನು ಸುಳ್ಳಾಗಿಸಬೇಡ.

ದುರ್ಮತಿಯೇ! ಪರಮಧಾರ್ಮಿಕರ ವಂಶದಲ್ಲಿ ಹುಟ್ಟಿರುವ ನೀನು ಧರ್ಮವನ್ನು ಪರಿತ್ಯಜಿಸಿ ರಾಮನಿಗೆ ಪಟ್ಟಾಭಿಷೇಕವನ್ನು ಮಾಡಿ ಕೌಸಲ್ಯೆ ಯೊಡನೆ ನಿತ್ಯವೂ ರಮಿಸಲು ಇಚ್ಛಿಸಿರುವೆಯಾ?

ಭವತ್ವಧರ್ಮೋ ಧರ್ಮೋ ವಾ ಸತ್ಯಂ ವಾ ಯದಿ ವಾನೃತಮ್ ।
ಯತ್ತ್ವಯಾ ಸಂಶ್ರುತಂ ಮಹ್ಯಂ ತಸ್ಯ ನಾಸ್ತಿ ವ್ಯತಿಕ್ರಮಃ ॥೪೬॥

ಆಹಾರರೂಪವಾಗಿ ಸೃಷ್ಟಿಸಿದ್ದಾರೆಂದೂ ಕೇಳಿಕೊಂಡಿತು. ಆದರೆ ರಾಜನು ಮಾತ್ರ ಕಪೋತಪಕ್ಷಿಯನ್ನು ಬಿಟ್ಟುಕೊಡಲು ಇಷ್ಟಪಡಲಿಲ್ಲ. ಅದಕ್ಕೆ ಪ್ರತಿಯಾಗಿ ಯಾವ ಆಹಾರವನ್ನಾದರೂ ಒದಗಿಸಿಕೊಡಲು ಗಿಡಗಪಕ್ಷಿಗೆ ಆಶ್ವಾಸನೆಯಿತ್ತನು. ಅದಕ್ಕೆ ಗಿಡಗಪಕ್ಷಿಯು ಕಪೋತಪಕ್ಷಿಯ ತೂಕದಷ್ಟು ರಾಜನ ಮಾಂಸವನ್ನೇ ಕೊಡುವಂತೆ ಕೇಳಿತು. ರಾಜನು ನಿರ್ಭಯವಾಗಿ ಗಿಡಗದ ಮಾತಿಗೆ ಸಮ್ಮತಿಯಿತ್ತು ಖಡ್ಗವನ್ನೂ, ತಕ್ಕಡಿಯನ್ನೂ ತರಿಸಿ ತಕ್ಕಡಿಯ ಒಂದು ತಟ್ಟೆಯಲ್ಲಿ ಕಪೋತವನ್ನಿಟ್ಟು ಮತ್ತೊಂದು ತಟ್ಟೆಯಲ್ಲಿ ತನ್ನ ಅವಯವಗಳನ್ನು ಕತ್ತರಿಸಿ ಮಾಂಸವನ್ನು ತೆಗೆ ದಿಟ್ಟನು. ಎಷ್ಟು ಮಾಂಸವನ್ನು ಕತ್ತರಿಸಿ ತೆಗೆದಿಟ್ಟರೂ ಕಪೋತವು ಕುಳಿತಿದ್ದ ತಕ್ಕಡಿಯ ತಟ್ಟೆಯು ಮೇಲೇಳಲೇ ಇಲ್ಲ. ಕಡೆಗೆ ಶೈಬ್ಯನೇ ಮತ್ತೊಂದು ತಟ್ಟೆ

ಮಹಾರಾಜ! ಈ ವಿಷಯವನ್ನು ಸ್ಪಷ್ಟವಾಗಿ ತಿಳಿಸಲು ಬಯಸು ತ್ತೇನೆ. ನಾನು ಕೇಳಿರುವ ಎರಡು ವರಗಳು ಧರ್ಮದಿಂದ ಕೂಡಿರಲಿ ಅಥವಾ ಅಧರ್ಮದಿಂದ ಕೂಡಿರಲಿ ; ನಾನು ಹಿಂದೆ ರಾಮನ ವಿಷಯದಲ್ಲಿ ಹೇಳಿರುವ ಪ್ರಶಂಸೆಯ ಮಾತು ಸತ್ಯವಾಗಿರಲಿ ; ಸುಳ್ಳಾಗಿರಲಿ—ಈಗ ನೀನು ನನಗೆ ಯಾವ ಪ್ರತಿಜ್ಞೆಯನ್ನು ಮಾಡಿಕೊಟ್ಟೆಯೋ ಆ ಪ್ರತಿಜ್ಞಾವಚನಕ್ಕೆ ವ್ಯತಿಕ್ರಮವಿಲ್ಲ. (ಉಲ್ಲಂಘನೆಯು ಸಲ್ಲದು.) ನೀನಿತ್ತಿರುವ ಪ್ರತಿಜ್ಞಾ ವಚನವನ್ನು ಉಲ್ಲಂಘಿಸಿ ರಾಮನಿಗೆ ನೀನೇನಾದರೂ ಪಟ್ಟಾಭಿಷೇಕವನ್ನು ಮಾಡಿದರೆ—ಹೆಚ್ಚು ತೀಕ್ಷ್ಣವಾದ ವಿಷವನ್ನು ಕುಡಿದು—ನೀನು ನೋಡು ತ್ತಿರುವಂತೆಯೇ ಸತ್ತುಹೋಗುತ್ತೇನೆ.

ಏಕಾಹಮಪಿ ಪಶ್ಯೇಯಂ ಯದ್ಯಹಂ ರಾಮಮಾತರಮ್ ।
ಅಞ್ಜಲಿಂ ಪ್ರತಿಗೃಹ್ಣನ್ತೀಂ ಶ್ರೇಯೋ ನನು ಮೃತಿರ್ಮಮ ॥೪೮॥

ರಾಮಪಟ್ಟಾಭಿಷೇಕವಾದೊಡನೆಯೇ ರಾಜಮಾತೆಯಾಗಿ ಸಕಲ ಪ್ರಜೆಗಳೂ ಕೈಜೋಡಿಸಿಕೊಂಡು ಮಾಡುವ ಪ್ರಣಾಮಗಳನ್ನು ಅಟ್ಟಹಾಸ ದಿಂದ ಸ್ವೀಕರಿಸುವ ಕೌಸಲ್ಯೆಯನ್ನು ಒಂದು ದಿನವೂ ನಾನು ನೋಡಿ ಸಹಿಸಲಾರೆನು. ಸವತಿಯ ಅಂತಹ ವೈಭವವನ್ನು ನೋಡುವುದಕ್ಕಿಂತಲೂ ನನಗೆ ಮರಣವೇ ಶ್ರೇಯಸ್ಕರವು.

ಮನುಜಾಧಿಪನೇ! ನನ್ನ ಮೇಲೆ ಮತ್ತು ನನಗೆ ಪ್ರಾಣರೂಪನಾಗಿ ರುವ ಭರತನ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನೀನು ರಾಮನನ್ನು

ಯಲ್ಲಿ ಕುಳಿತುಬಿಟ್ಟನು. ಅವನ ಮನೋನಿರ್ಧಾರಕ್ಕೆ ಇಂದ್ರಾಗ್ನಿಗಳಿಬ್ಬರೂ ಮೆಚ್ಚಿ ಪ್ರತ್ಯಕ್ಷರಾದರು.

ಅಲರ್ಕನ ಕಥೆಯು ಹೀಗಿದೆ : ಕುರುಡನಾದ ಬ್ರಾಹ್ಮಣನೊಬ್ಬನು ಅಲರ್ಕನ ಬಳಿಗೆ ಬಂದು ವರವನ್ನು ಕೇಳಿದನು. ವರವೇನೆಂಬುದನ್ನು ಮೊದಲು ಕೇಳಿ ತಿಳಿದುಕೊಳ್ಳದೇ ಅಲರ್ಕನು ಯಾವ ವರವನ್ನು ಕೇಳಿದರೂ ಕೊಡುವುದಾಗಿ ಪ್ರತಿಜ್ಞೆಮಾಡಿದನು. ಒಡನೆಯೇ ಬ್ರಾಹ್ಮಣನು ನಿನ್ನೆರಡು ಕಣ್ಣುಗಳನ್ನೂ ದಯಪಾಲಿಸೆಂದು ವರಕೇಳಿದನು. ಅಲರ್ಕನು ತನ್ನ ಕಣ್ಣುಗಳು ಹೋಗಿಬಿಡುವುದೆಂದು ಸ್ವಲ್ಪವಾದರೂ ಖಿನ್ನನಾಗದೇ ನೇತ್ರಪರಿಣತರನ್ನು ಕರೆಯಿಸಿ ತನ್ನ ಕಣ್ಣುಗಳನ್ನು ಬ್ರಾಹ್ಮಣನಿಗೆ ಶಸ್ತ್ರಚಿಕಿತ್ಸೆಯ ಮೂಲಕ ತೆಗೆದುಕೊಡ ಬೇಕೆಂಬುದಾಗಿ ಆಜ್ಞಾಪಿಸಿದನು. ಅಲರ್ಕರಾಜನು ಹೀಗೆ ಪ್ರತಿಜ್ಞಾಪಾಲನೆಯಿಂದ ಸದ್ಗತಿಯನ್ನು ಪಡೆದನು.

ಅರಣ್ಯಕ್ಕೆ ಕಳುಹಿಸುವುದರ ಹೊರತಾಗಿ ಬೇರೆ ಯಾವುದರಿಂದಲೂ ನನಗೆ ಸಂತೋಷವಾಗುವುದಿಲ್ಲ."

ಹೀಗೆ ತನ್ನ ಖಚಿತವಾದ ಅಭಿಪ್ರಾಯವನ್ನು ಸ್ಪಷ್ಟವಾದ ಮಾತುಗಳಿಂದ ಹೇಳಿ ಕೈಕೇಯಿಯು ವಿರಮಿಸಿದಳು. ರಾಮನ ವಿರಹವನ್ನು ನೆನೆದು ಗೋಳಾಡುತ್ತಿದ್ದ ರಾಜನಿಗೆ ಸಮಾಧಾನವಾಗುವ ಯಾವ ಮಾತನ್ನೂ ರಾಣಿಯು ಆಡಲಿಲ್ಲ. 'ರಾಮನಿಗೆ ವನವಾಸ ; ಭರತನಿಗೆ ರಾಜ್ಯಾಭಿಷೇಕ' ಎಂಬ ಪರಮದಾರುಣವಾದ ಮಾತನ್ನು ಕೈಕೇಯಿಯಿಂದ ಪುನಃ-ಪುನಃ ಕೇಳಿ ರಾಜನು ಕ್ಷಣಕಾಲ ಏನನ್ನೂ ಹೇಳಲಿಲ್ಲ. ವ್ಯಾಕುಲವಾದ ಮನಸ್ಸಿನಿಂದ ಕೂಡಿದ್ದ ದಶರಥನು ಅಪ್ರಿಯವಾದ ಮಾತುಗಳನ್ನು ಹೇಳುತ್ತಿದ್ದ ಪ್ರೇಯಸಿಯಾದ ಕೈಕೇಯಿಯನ್ನು ಮುಹೂರ್ತಕಾಲ ಎವೆಯಿಕ್ಕದೇ ನೋಡುತ್ತಿದ್ದನು. ಮನಸ್ಸಿಗೆ ಅಪ್ರಿಯವಾದ, ದುಃಖ-ಶೋಕಗಳಿಗೆ ಕಾರಣವಾದ, ಸಿಡಿಲಿನಂತೆ ಅತಿಕಠೋರವಾದ ಕೈಕೇಯಿಯ ಮಾತುಗಳನ್ನು ಕೇಳಿ ರಾಜನು ಅಸುಖಿಯಾದನು. ಭರತನಿಗೆ ಪಟ್ಟಕಟ್ಟಲು ಮತ್ತು ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಲು ಕೈಕೇಯಿಯ ಪ್ರಯತ್ನ ; ಅದಕ್ಕಾಗಿ ಅವಳು ಭರತನ ಮೇಲೆ ಆಣೆಯಿಟ್ಟು ಮಾಡಿದ ಶಪಥ ; ತಾನೂ ಕೂಡ ಶ್ರೀರಾಮನ ಮೇಲೆ ಆಣೆಯಿಟ್ಟು ಕೈಕೇಯಿಯ ಮಾತನ್ನು ನಡೆಸಿಕೊಡುವೆನೆಂದು ಹೇಳಿದುದು–ಈ ಎಲ್ಲವನ್ನೂ ಚಿಂತಿಸುತ್ತಿದ್ದ ದಶರಥನು ಬೇರಾವಗತಿಯನ್ನೂ ಕಾಣದೇ–'ಹಾ ರಾಮ!'–ಎನ್ನುತ್ತಾ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ–ಬುಡಕಡಿದ ಮರವು ದೊಪ್ಪನೆ ಬೀಳುವಂತೆ–ಪ್ರಜ್ಞಾಹೀನನಾಗಿ ನೆಲದ ಮೇಲು ರುಳಿದನು.

ನಷ್ಟಚಿತ್ತೋ ಯಥೋನ್ಮತ್ತೋ ವಿಪರೀತೋ ಯಥಾತುರಃ ।
ಹೃತತೇಜಾ ಯಥಾ ಸರ್ಪೋ ಬಭೂವ ಜಗತೀಪತಿಃ ॥೫೫॥

ದಾರುಣವಾದ ಸಂಕಟದಿಂದ ಬುದ್ಧಿಗೆಟ್ಟಿದ್ದ ರಾಜನು ಉನ್ಮತ್ತನಂತೆ ಕಾಣುತ್ತಿದ್ದನು. ಪ್ರತಿಕ್ಷಣದಲ್ಲಿಯೂ–'ಹಾ ರಾಮ! ನಿನ್ನನ್ನಗಲಿ ನಾನು ಜೀವಿಸಿರುವೆನೇ? ಪಾಪಿಷ್ಠಳೇ! ನನ್ನನ್ನೂ ನಮ್ಮ ವಂಶವನ್ನೂ ನಾಶ ಮಾಡಿಬಿಟ್ಟೆಯಲ್ಲಾ!'–ಮುಂತಾಗಿ ಮನಬಂದಂತೆ ಹೇಳುತ್ತಿದ್ದ ರಾಜನು ಕೆಲಸಮಯದಲ್ಲಿ ಸನ್ನಿಪಾತಜ್ವರದಿಂದ ಪೀಡಿತನಾಗಿರುವಂತೆ ಕಾಣು

ತ್ತಿದ್ದನು. ಮಂತ್ರದಿಂದ ಬಂಧಿಸಲ್ಪಟ್ಟ ಸರ್ಪದಂತೆ ಜಗತೀಪತಿಯಾದ ದಶರಥನು ವರಪ್ರದಾನವೆಂಬ ಧರ್ಮಪಾಶದಿಂದ ಬಿಗಿಯಲ್ಪಟ್ಟವನಾಗಿ ನಿಸ್ತೇಜನಾಗಿದ್ದನು.

ಇಷ್ಟಾದರೂ ರಾಜನು ಕೈಕೇಯಿಯ ಮನಸ್ಸನ್ನು ಹೇಗಾದರೂ ಮಾಡಿ ತಿರುಗಿಸಬೇಕೆಂಬ ಪ್ರಯತ್ನವನ್ನು ಮಾತ್ರ ಬಿಡಲಿಲ್ಲ. ಅತಿದೈನ್ಯವಾದ ಧ್ವನಿಯಾದ ಕೈಕೇಯಿಗೆ ಹೇಳಿದನು :

"ಭರತನಿಗೆ ಪಟ್ಟಾಭಿಷೇಕ ಮತ್ತು ರಾಮನಿಗೆ ವನವಾಸ–ಈ ಎರಡು ವರಗಳೂ ತೋರಿಕೆಗೆ ಲಾಭದಾಯಕಗಳಾಗಿ ಕಂಡರೂ ನಿಜವಾಗಿ ಅನರ್ಥವನ್ನೇ ಉಂಟುಮಾಡತಕ್ಕುವುಗಳು. ಇಂತಹ ಅನರ್ಥಕರವಾದ ವರವನ್ನು ಪಡೆಯಲು ನಿನಗುಪದೇಶಿಸಿದವರಾರು? ದೇವಿ! ಭೂತಾವಿಷ್ಟ

ಳಾಗಿ (ದೆವ್ವಹಿಡಿದು) ವಿಕೃತವಾದ ಮನೋವೃತ್ತಿಯುಳ್ಳವಳಂತೆ ನನ್ನೆದುರಿನಲ್ಲಿ ನಾಚಿಕೆಯಿಲ್ಲದೇ ಮನಬಂದಂತೆ ಮಾತನಾಡುತ್ತಿರುವೆ. ಈ ಹಿಂದೆ ಹೀಗೆ ನೀನು ಶೀಲಭ್ರಷ್ಟಳಾದುದನ್ನು ನೋಡಿದುದಿಲ್ಲ. ಬಾಲೆಯಾಗಿದ್ದಾಗ ನಿನಗಿದ್ದ ಸೌಶೀಲ್ಯವು ಪ್ರೌಢೆಯಾದ ಮೇಲೆ ಇಲ್ಲವಾಗಿದೆ. ನೀನಿಂದು ಶೀಲಭ್ರಷ್ಟಳಾಗಿರುವುದನ್ನು ನಾನು ಕಾಣುತ್ತಿರುವೆನು. ನೀನು ಈ ವಿಧವಾದ ವರವನ್ನು ಕೇಳಲು ರಾಮನಿಂದ ಯಾವ ರೀತಿಯಲ್ಲಿ ನಿನಗೆ ಭಯವು ಪ್ರಾಪ್ತವಾಯಿತು? ರಾಜ್ಯದ ಪಟ್ಟಾಭಿಷೇಕವನ್ನು ಭರತನಿಗೆ ಮಾಡಬೇಕೆನ್ನುವೆ; ಇಷ್ಟುಮಾತ್ರವಲ್ಲ ; ರಾಮನನ್ನು ಹದಿನಾಲ್ಕು ವರ್ಷಗಳ ಕಾಲ ಕಾಡಿಗಟ್ಟಬೇಕೆನ್ನುವೆ. ನೀನು ಈ ನಿನ್ನ ದುಷ್ಟಭಾವವನ್ನು ಪರಿತ್ಯಜಿಸು. ಮಿಥ್ಯಾಭೂತವಾದ ರಾಮನ ಭಯದಿಂದಲೂ ಮುಕ್ತಳಾಗು. ರಾಮನಿಂದ ಭಯವೆಂಬುದು ಕೇವಲ ಸುಳ್ಳಿನ ಕಂತೆ. ಅಂತಹ ಮಾತುಗಳನ್ನು ನಂಬಬೇಡ. ನಿನ್ನ ಪತಿಗೂ, ಮಗನಾದ ಭರತನಿಗೂ ಮತ್ತು ಲೋಕಕ್ಕೂ ಹಿತವನ್ನುಂಟುಮಾಡುವ ಅಪೇಕ್ಷೆಯಿದ್ದಲ್ಲಿ ಈ ದುಷ್ಟಭಾವವನ್ನು ದೂರೀಕರಿಸು.

ನೃಶಂಸೇ ಪಾಪಸಂಕಲ್ಪೇ ಕ್ಷುದ್ರೇ ದುಷ್ಕೃತಕಾರಿಣಿ ।
ಕಿಂ ನು ದುಃಖಮಲೀಕಂ ವಾ ಮಯಿ ರಾಮೇ ಚ ಪಶ್ಯಸಿ ॥೬೧॥

ನಿರ್ದಯಳೇ! ರಾಮನನ್ನು ಕಾಡಿಗಟ್ಟಬೇಕೆನ್ನುವ ಪಾಪದ ಸಂಕಲ್ಪ ವನ್ನು ಮಾಡಿರುವವಳೇ! ಅಲ್ಪಬುದ್ಧಿಯುಳ್ಳವಳೇ! ಪರಮನೀಚವೆನಿಸಿದ ಕಾರ್ಯವನ್ನು ಮಾಡುವವಳೇ! ನಿನ್ನ ದುಃಖಕ್ಕೆ ಕಾರಣವಾದ ಅಪರಾಧವನ್ನು ನನ್ನಲ್ಲಾಗಲೀ, ರಾಮನಲ್ಲಾಗಲೀ ಕಂಡಿರುವೆಯಾ? ನಿನ್ನ ಅಪೇಕ್ಷೆಯಂತೆ ಭರತನಾದರೂ ಈ ರಾಜ್ಯವನ್ನು ಆಳುವನೆಂದು ಭಾವಿಸಿರುವೆಯಾ? ಅವನ ಗುಣವು ನಿನಗಿಂತಲೂ ನನಗೆ ಚೆನ್ನಾಗಿ ತಿಳಿದಿದೆ.

ನ ಕಥಂಚಿದೃತೇ ರಾಮಾದ್ಭರತೋ ರಾಜ್ಯಮಾವಸೇತ್ ।

ಭರತನು ರಾಜ್ಯವಾಳುವುದಂತಿರಲಿ ; ರಾಮನಿಲ್ಲದ ರಾಜ್ಯದಲ್ಲಿ ಭರತನು ಯಾವುದೇ ಕಾರಣದಿಂದಲೂ ವಾಸಮಾಡುವುದಿಲ್ಲ. ಏಕೆಂದರೆ :

ರಾಮಾದಪಿ ಹಿ ತಂ ಮನ್ಯೇ ಧರ್ಮತೋ ಬಲವತ್ತರಮ್ ॥೬೨॥

ಭರತನು ರಾಮನಿಗಿಂತಲೂ ಪರಮಧರ್ಮಿಷ್ಠನೆಂದು ನಾನು ಭಾವಿಸಿದ್ದೇನೆ.

(ರಾಮಾದಪಿ ಹಿತಂ ಎಂಬ ಪಾಠಾಂತರದ ಪ್ರಕಾರ–ಮಹಾಧರ್ಮಿಷ್ಠನಾದ ಭರತನನ್ನು ನಾನು ರಾಮನಿಗಿಂತಲೂ ಹೆಚ್ಚು ಹಿತವಂತನೆಂದು ತಿಳಿದಿರುತ್ತೇನೆ.)

ಕಾಡಿಗೆ ಹೋಗುವಂತೆ ನನ್ನಿಂದ ಆಜ್ಞಪ್ತನಾಗಿ ರಾಹುಗ್ರಸ್ತನಾದ ಚಂದ್ರನಂತೆ ವಿವರ್ಣವಾದ ಮುಖಕಾಂತಿಯನ್ನು ಹೊಂದುವ ರಾಮನನ್ನು ನಾನು ಹೇಗೆತಾನೇ ನೋಡಲಿ? ನನ್ನ ಬುದ್ಧಿಯು ಸನ್ಮಾರ್ಗಪ್ರವೃತ್ತವಾಗಿದೆ. ಸತ್ಪುರುಷರೊಡನೆ ಸಮಾಲೋಚಿಸಲ್ಪಟ್ಟುದಾಗಿದೆ. ಶತ್ರುಗಳಿಂದ ಹೊಡೆದೋಡಿಸಲ್ಪಟ್ಟು ಪರಾಙ್ಮುಖವಾದ ಸೈನ್ಯದಂತೆ–ನನ್ನ ಬುದ್ಧಿಯು ನಿನ್ನ ಪ್ರಭಾವದಿಂದ ಪರಾಙ್ಮುಖವಾಗುವುದನ್ನು ನಾನು ಹೇಗೆತಾನೇ ಸಹಿಸಲಿ? ನಾನಾದಿಕ್ಕುಗಳಲ್ಲಿರುವ ರಾಜ್ಯಗಳಿಂದ ರಾಮನ ಪಟ್ಟಾಭಿಷೇಕದ ಸಲುವಾಗಿ ಆಗಮಿಸಿರುವ ರಾಜರಾದರೂ ನನ್ನ ವಿಷಯದಲ್ಲಿ ಏನು ಹೇಳಿಯಾರು?

ಬಾಲೋ ಬತಾಯಮೈಕ್ಷ್ವಾಕಶ್ಚಿರಂ ರಾಜ್ಯಮಕಾರಯತ್ ॥೬೫॥

'ಅಯ್ಯೋ! ಇಕ್ಷ್ವಾಕುವಂಶದರಸನಾದ ದಶರಥನೂ ಚಿರಕಾಲ ರಾಜ್ಯವಾಳಿದನು. ಆದರೇನು ಪ್ರಯೋಜನ? ಅವನೊಬ್ಬ ಹಸುಳೆಯಂತಿದ್ದಾನೆ. ಏನೂ ತಿಳಿಯದವನಾಗಿದ್ದಾನೆ. ಕರ್ತವ್ಯಾಕರ್ತವ್ಯವಿವೇಚನೆಯೇ ಅವನಿಗಿಲ್ಲ'–ಎಂದು ತಾನೇ ಹೇಳುವರು? ಬಹುಸಂಖ್ಯೆಯಲ್ಲಿ ವೃದ್ಧರೂ, ಗುಣವಂತರೂ, ವಿದ್ವಾಂಸರೂ ನಾನಾದೇಶಗಳಿಂದ ಶ್ರೀರಾಮನ ಪಟ್ಟಾಭಿಷೇಕಕ್ಕೆಂದು ಆಗಮಿಸಿ–'ರಾಮನೆಲ್ಲಿ? ಪಟ್ಟಾಭಿಷೇಕವು ಎಂದು?'–ಮುಂತಾಗಿ ಪ್ರಶ್ನೆಗಳನ್ನು ಕೇಳಿದರೆ ಅವರಿಗೆ ನಾನು ಏನೆಂದು ಉತ್ತರಿಸಲಿ?

ಕೈಕೇಯಿಯ ಉಪಟಳವನ್ನು ತಾಳಲಾರದೇ ನಾನು ರಾಮನನ್ನು ಕಾಡಿಗೆ ಕಳುಹಿಸಿದೆನೆಂದು ಸತ್ಯವನ್ನೇ ಹೇಳಿದರೂ ಅದೂ ಸುಳ್ಳೇ ಆಗುತ್ತದೆ. ಈ ನಿಜಸಂಗತಿಯನ್ನು ಯಾರೂ ನಂಬುವುದಿಲ್ಲ. ಏಕೆಂದರೆ : ತುಂಬಿದ ಸಭೆಯಲ್ಲಿ ರಾಮನಿಗೆ ಪಟ್ಟಗಟ್ಟುವೆನೆಂದು ಹೇಳಿ ಕ್ಷುಲ್ಲಕವಾದ ಕಾರಣವನ್ನು ಮುಂದೊಡ್ಡಿದರೆ ಯಾರು ತಾನೇ ನನ್ನ ಮಾತನ್ನು ನಂಬುವರು? ಅದೂ

ಹಾಗಿರಲಿ ; ರಾಮನು ಕಾಡಿಗೆ ಹೊರಟುಹೋದರೆ ಕೌಸಲ್ಯೆಯು ನನ್ನ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಹೊಂದಿಯಾಳು? 'ಶ್ರೀರಾಮನ ಯಾವ ಅಪರಾಧಕ್ಕಾಗಿ ಅವನನ್ನು ಕಾಡಿಗೆ ಕಳುಹಿಸಿದೆ?'–ಎಂದು ಕೌಸಲ್ಯೆಯು ನನ್ನನ್ನು ಪ್ರಶ್ನಿಸಿದರೆ ಇಷ್ಟೊಂದು ಅಪ್ರಿಯವಾದ ಕಾರ್ಯ ಮಾಡಿರುವ ನಾನು ಅವಳಿಗೆ ಏನೆಂದು ಉತ್ತರಿಸಲಿ?

ಕೌಸಲ್ಯೆಯಾದರೋ ಬಹಳ ಒಳ್ಳೆಯ ಸ್ವಭಾವದಳು. ನನ್ನನ್ನು ಉಪಚರಿಸುವಾಗ ದಾಸಿಗಿಂತಲೂ ಹೆಚ್ಚಾಗಿ ಉಪಚರಿಸುತ್ತಾಳೆ. ಸಲಹೆಗಳನ್ನು ಮಾಡುವ ಸಮಯದಲ್ಲಿ ಪ್ರಿಯಸಖಿಯಂತೆ ವರ್ತಿಸುತ್ತಾಳೆ. ಧರ್ಮಾಚರಣೆಯ ಸಮಯದಲ್ಲಿ ಧರ್ಮಪತ್ನಿಯಂತೆ ವರ್ತಿಸುತ್ತಾಳೆ. ಸಮಯಗಳಲ್ಲಿ ಹಿತಾಕಾಂಕ್ಷಿಣಿಯಾದ ಸೋದರಿಯಂತೆ ವರ್ತಿಸುತ್ತಾಳೆ. ಭೋಜನಸಮಯದಲ್ಲಿ ತಾಯಿಯಂತೆ ಉಪಚರಿಸುತ್ತಾಳೆ. ಅವಳು ಯಾವಾಗಲೂ ನನ್ನ ಹಿತವನ್ನೇ ಬಯಸತಕ್ಕವಳು. ನನಗೆ ಅತ್ಯಂತ ಪ್ರಿಯನಾದ ಪುತ್ರನನ್ನು ಹಡೆದುಕೊಟ್ಟಿದ್ದಾಳೆ. ಯಾವಾಗಲೂ ಅವಳು ಪ್ರಿಯಭಾಷಿಣಿಯು.* ಇಂತಹ ಸಕಲಸದ್ಗುಣಸಂಪನ್ನೆಯಾದ ಸತ್ಕಾರಾರ್ಹಳಾದ ಕೌಸಲ್ಯಾದೇವಿಯನ್ನು ನಾನು ನಿನ್ನ ಸಲುವಾಗಿ ಸಮಾದರಿಸುತ್ತಿರಲಿಲ್ಲ. ಅವಳೊಡನೆ ಕುಳಿತು ಒಂದು ದಿನವಾದರೂ ಒಂದು ಪ್ರಿಯೋಕ್ತಿಯನ್ನಾದರೂ ಆಡುತ್ತಿರಲಿಲ್ಲ. ನಿನಗೆ ಕೋಪಬರುವುದೆಂದು ಭಯಪಡುತ್ತಿದ್ದೆನು. ಆದರೆ ಅವಳನ್ನು ಯಥಾಯೋಗ್ಯವಾಗಿ ಸಮಾದರಿಸಿರದೇ ಇದ್ದುದಕ್ಕಾಗಿ ಮತ್ತು ಅಯೋಗ್ಯಳಾದ ನಿನ್ನನ್ನು ಮಿತಿಮೀರಿ ಸಮಾದರಿಸುತ್ತಿದ್ದುದಕ್ಕಾಗಿ ನಾನಿಂದು ಪರಿತಾಪಪಡುತ್ತಿದ್ದೇನೆ.

ಅಪಥ್ಯವ್ಯಞ್ಜನೋಪೇತಂ ಭುಕ್ತಮನ್ನಮಿವಾತುರಮ್ ॥೭೧॥

ರೋಗಗ್ರಸ್ತನಾದವನು ಅಪಥ್ಯಪದಾರ್ಥಗಳಿಂದ ಯುಕ್ತವಾದ ಭೋಜನವನ್ನು ಮಾಡಿದರೆ ಎಂತಹ ದುಷ್ಪರಿಣಾಮವಾಗುವುದೋ–ರೋಗವು ಉಲ್ಬಣಿಸಿ ಅವನೆಷ್ಟು ಪರಿತಪಿಸುವನೋ–ಹಾಗೆಯೇ ನಾನಿಂದು ಅಪಥ್ಯವ್ಯಂಜನರೂಪಳಾದ ನಿನ್ನನ್ನು ಉಪಭೋಗಿಸಿ ಪರಿತಪಿಸುತ್ತಿದ್ದೇನೆ.

---

* ಕುಲೀನೆಯಾದ ಧರ್ಮಪತ್ನಿಯ ಆರು ಗುಣಗಳನ್ನು ಹಿರಿಯರು ಹೀಗೆ ಹೇಳುತ್ತಾರೆ : ಕಾರ್ಯೇಷು ದಾಸೀ ಕರಣೇಷು ಮನ್ತ್ರೀ ರೂಪೇ ಚ ಲಕ್ಷ್ಮೀಃ ಕ್ಷಮಯಾ

ರಾಮನಿಗೆ ಪಟ್ಟಾಭಿಷೇಕವನ್ನು ಮಾಡದಿರುವುದು ಮಾತ್ರವಲ್ಲದೇ ಅವನನ್ನು ಕಾಡಿಗೂ ಕಳುಹಿಸಿದೆನಾದರೆ ಇದನ್ನು ಕಂಡು ಸುಮಿತ್ರೆಯು ನನ್ನ ಈ ವಿಪರೀತಚರ್ಯೆಯನ್ನು ಕಂಡು ಭಯಪಡದಿರುವಳೇ? ಅವಳಿಗೆ ನನ್ನ ವಿಷಯದಲ್ಲಿ ವಿಶ್ವಾಸವಾದರೂ ಹೇಗೆತಾನೇ ಉಳಿದೀತು?

ವೈದೇಹಿಯನ್ನು ನೆನೆದೊಡನೆಯೇ ನಾನು ಮತ್ತಷ್ಟು ಖಿನ್ನನಾಗುತ್ತೇನೆ. ಏಕೆಂದರೆ : ಅವಳು ಎರಡು ವಿಧವಾದ ದುಃಖವಾರ್ತೆಗಳನ್ನು ಒಂದೇ ಬಾರಿಗೆ ಕೇಳಬೇಕಾದ ಕಾಲವು ಸನ್ನಿಹಿತವಾಗಿದೆ. ಅತ್ತಲಾಗಿ ರಾಮನು ಕಾಡಿಗೆ ಹೋದನೆಂಬ ದಾರುಣವಾರ್ತೆಯನ್ನು ಕೇಳಬೇಕಾಗಿದೆ. ಇತ್ತಲಾಗಿ ನಾನು ಮರಣಹೊಂದಿದೆನೆಂಬುದನ್ನೂ ಕೇಳಬೇಕಾಗಿದೆ. ಅಯ್ಯೋ! ಅಬಲೆಯಾದ ಸೀತೆಯು ರಾಮನ ವಿರಹವೇದನೆಯಿಂದ–ಹಿಮವತ್ಪಾರ್ಶ್ವದಲ್ಲಿರುವ ಪತಿ ಯಾದ ಕಿನ್ನರನಿಂದ ವಿಹೀನಳಾದ ಕಿನ್ನರಿಯಂತೆ–ಸರ್ವದಾ ಶೋಕಪಡುತ್ತಾ ನನ್ನ ಪ್ರಾಣಗಳು ಕ್ಷಯಿಸುವಂತೆ ಮಾಡುತ್ತಾಳೆ.

ನನ್ನ ಪ್ರಿಯಸುತನಾದ ಶ್ರೀರಾಮನು ಘೋರಾರಣ್ಯಕ್ಕೆ ಪ್ರವೇಶಿಸು ವುದನ್ನೂ ಅವನ ವಿರಹತಾಪದಿಂದ ಮೈಥಿಲಿಯು ಶೋಕಿಸುವುದನ್ನೂ ನೋಡುವ ನಾನು ಇನ್ನು ಹೆಚ್ಚು ಕಾಲ ಬದುಕಲು ಬಯಸುವುದಿಲ್ಲ. ದೇವಿ! ರಾಮನು ಕಾಡಿಗೆ ಹೋಗುವುದೇ ಆದರೆ ನಾನು ಖಂಡಿತವಾಗಿಯೂ ಬದುಕುವುದಿಲ್ಲ. ಅತ್ಯಲ್ಪಕಾಲದಲ್ಲಿಯೇ ವಿಧವೆಯಾಗುವ ನೀನು ಪುತ್ರ ನೊಡನೆ ರಾಜ್ಯವಾಳುವೆ. ಇದು ನಿಶ್ಚಯ.

ಸತೀಂ ತ್ವಾಮಹಮತ್ಯನ್ತಂ ವ್ಯವಸ್ಯಾಮ್ಯಸತೀಂ ಸತೀಮ್ ।
ರೂಪಿಣೀಂ ವಿಷಸಂಯುಕ್ತಾಂ ಪೀತ್ವೇವ ಮದಿರಾಂ ನರಃ ॥೭೭॥

ಧರಿತ್ರೀ । ಭೋಜ್ಯೇಷು ಮಾತಾ ಶಯನೇಷು ವೇಶ್ಯಾ ಷಾಡ್ಗುಣ್ಯಯುಕ್ತಾ ಕುಲ ಧರ್ಮಪತ್ನೀ ॥ ಸಂಸಾರಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ದಾಸಿಯಂತೆ ನಡೆದುಕೊಳ್ಳುವಳು. ಮಾಡಬೇಕಾದ ಕೆಲಸಗಳ ವಿಷಯದಲ್ಲಿ ಮಂತ್ರಿಯಂತೆ ಸಲಹೆಕೊಡುವಳು. ರೂಪದಲ್ಲಿ ಲಕ್ಷ್ಮಿಯಂತೆಯೂ, ತಾಳ್ಮೆಯಲ್ಲಿ ಭೂಮಿಯಂತೆಯೂ ಇರುವಳು. ಊಟ-ತಿಂಡಿಗಳ ವಿಷಯದಲ್ಲಿ ತಾಯಿಯಂತಿರುವಳು. ಶಯ್ಯಾಗೃಹದಲ್ಲಿ ವೇಶ್ಯೆಯಂತಿರುವಳು.

ನಿನ್ನನ್ನು ಈ ಮೊದಲು ನಾನು ನನ್ನ ಪ್ರಿಯಸತಿಯೆಂದು ಭಾವಿಸಿದ್ದೆನು. ಆದರೆ ನಿನ್ನ ಈಗಿನ ವರ್ತನೆಯಿಂದ ನೀನು ಬರೀ ರೂಪವತಿಯೇ ಹೊರತು ನಿಜಸತಿಯಿಲ್ಲವೆಂಬ ನಿಶ್ಚಯಕ್ಕೆ ಬಂದಿರುತ್ತೇನೆ. ನಿನ್ನ ರೂಪ- ಲಾವಣ್ಯಗಳಿಂದ ಮೋಹಿತನಾಗಿದ್ದ ನಾನು ನಿನ್ನ ಅಸತೀತ್ವವನ್ನಾಗಲೀ ದುಷ್ಟವರ್ತನೆಯನ್ನಾಗಲೀ ತಿಳಿದವನಾಗಿರಲಿಲ್ಲ. ಮಾನವನು ಸುರೆಯನ್ನು ಕುಡಿದು ಅದರಲ್ಲಿರುವ ವಿಷದ ಪ್ರಭಾವದಿಂದ ಪ್ರಾಣೋತಮಣಾವಸ್ಥೆ ಯನ್ನು ಹೊಂದಿದಾಗ ತಾನೇ ಸುರೆಯು ವಿಷಮಿಶ್ರವಾಗಿದೆಯೆಂಬುದ್ನು ತಿಳಿಯಲು ಸಾಧ್ಯವಾಗುವುದು? ಹಾಗೆಯೇ ನೀನು ನನ್ನ ಪ್ರಾಣಾಂತಕವಾದ ಈ ಕಾರ್ಯಮಾಡುವವರೆಗೂ ನಾನು ನಿನ್ನನ್ನು ನಿಜಸತಿಯೆಂದೇ ಭಾವಿಸಿ ದ್ದೆನು. (ವಿಷಮಿಶ್ರವಾದ ಸುರೆಯನ್ನು ಕುಡಿದವನು ಯಾವ ರೀತಿಯಲ್ಲಿ ಸತ್ತುಹೋಗುವುದು ನಿಶ್ಚಯವೋ–ಅದೇ ರೀತಿಯಲ್ಲಿ ನಿನ್ನ ರೂಪಕ್ಕೆ ಮನಸೋತು ನಿನ್ನ ಹೃದಯದಲ್ಲಿ ವಿಷವಿರುವುದೆಂಬುದನ್ನು ತಿಳಿಯದೇ ನಿನ್ನನ್ನು ಉಪಭೋಗಿಸಿದುದಕ್ಕಾಗಿ ಮೃತ್ಯುವಶನಾಗಬೇಕಾದುದು ಅನಿ ವಾರ್ಯವಾಗಿದೆ.)

ಅನೃತೈರ್ಬಹು ಮಾಂ ಸಾನ್ತ್ವೈಃ ಸಾನ್ತ್ವಯನ್ತೀ ಸ್ಮ ಭಾಷಸೇ ।
ಗೀತಶಬ್ದೇನ ಸಂರುಧ್ಯ ಲುಬ್ಧೋ ಮೃಗಮಿವಾವಧೀಃ ॥೨೮॥

ವ್ಯಾಧನು ಗಾಯನಶಬ್ದದಿಂದ ಮೃಗಗಳನ್ನು ಆಕರ್ಷಿಸಿ ಬಲೆಗೆ ಬೀಳುವಂತೆ ಮಾಡಿ ಕೊಲ್ಲುವಂತೆ–ನೀನು ಸುಳ್ಳಾದ ಮೃದುವಚನಗಳಿಂದ ಸಂತೈಸುತ್ತಿದ್ದು ಕಡೆಗೆ ನಿನ್ನ ವ್ಯಾಮೋಹವೆಂಬ ಬಲೆಯಲ್ಲಿ ಸಿಕ್ಕಿಬಿದ್ದ ನನ್ನನ್ನು ಕೊಂದೇ ಹಾಕಿದೆ. (ನಾನಿನ್ನು ಬದುಕಿದ್ದರೂ ಸತ್ತಂತೆಯೇ ಸರಿ.)

ಸುರಾಪಾನವನ್ನು ಮಾಡುವ ಬ್ರಾಹ್ಮಣನನ್ನು ಯಾವ ರೀತಿಯಲ್ಲಿ ಆರ್ಯಜನರು ಧಿಕ್ಕರಿಸುವರೋ–ಅದೇ ರೀತಿಯಲ್ಲಿ ಮೋಹವಶನಾಗಿ ಧರ್ಮಾತ್ಮನಾದ ನಿಜಸುತನನ್ನು ಸ್ತ್ರೀವ್ಯಾಮೋಹಕ್ಕೆ ವಿಕ್ರಯಿಸಿದವನೆಂದೂ, ಅನಾರ್ಯನೆಂದೂ ಬೀದಿ-ಬೀದಿಗಳಲ್ಲಿಯೂ ಸತ್ಪುರುಷರು ನನ್ನನ್ನು ಧಿಕ್ಕರಿಸುತ್ತಾರೆ.

ಅಯ್ಯೋ! ನಾನೀ ದುಃಖವನ್ನು ತಡೆಯಲಾರೆನಲ್ಲಾ! ಈ ದುಃಖ

ವನ್ನು ತಡೆದುಕೊಳ್ಳಲು ಅತ್ಯಂತಕಷ್ಟವಾಗುತ್ತಿರುವುದಲ್ಲಾ! ಏನು ಮಾಡಲಿ?

ಕೈಕೇಯಿ! ರಾಮನನ್ನು ಕಾಡಿಗೆ ಕಳುಹಿಸಬೇಕೆನ್ನುವ ದಾರುಣವಾದ ನಿನ್ನ ಮಾತುಗಳನ್ನು ಕೇಳಿಯೂ ನಾನು ಸಹನೆಯಿಂದಿರುವೆನಲ್ಲವೇ? ನಾನು ಹಿಂದೆ ಮಾಡಿದ ಅಕಾರ್ಯದ ಫಲವೋ ಎಂಬಂತೆ ಇಂದು ನನಗೆ ಈ ದುಃಖವು ಪ್ರಾಪ್ತವಾಗಿರುವುದು.

ಪಾಪಾತ್ಮಳೇ! ಪಾಪಾತ್ಮನಾದ ನಾನು ನಿನ್ನನ್ನು ಚಿರಕಾಲ ಸಂರಕ್ಷಿಸಿದೆನು. ನನ್ನ ಸೌಖ್ಯಕ್ಕೆಂದು ನಿನ್ನನ್ನು ರಕ್ಷಿಸಿದುದರ ಪರಿಣಾಮವೇನೆಂದರೆ : ಅಜ್ಞಾನದಿಂದ ಕುತ್ತಿಗೆಗೆ ಹಾಕಿಕೊಂಡ ನೇಣುಹಗ್ಗದಂತೆ ನೀನಿಂದು ನನಗೆ ಮೃತ್ಯುರೂಪಳಾಗಿರುವೆ. ನಿನ್ನ ರೂಪ-ಲಾವಣ್ಯಗಳಿಂದ ವಿಮೋಹಿತನಾಗಿದ್ದ ನಾನು ನಿನ್ನೊಡನೆ ರಮಿಸುತ್ತಿದ್ದಾಗ ನೀನೇ ನನಗೆ ಮೃತ್ಯುವಾಗುವೆಯೆಂದು ಭಾವಿಸಿರಲಿಲ್ಲ. ಅರಿಯದ ಬಾಲಕನೊಬ್ಬನು ಯಾರೂ ಇಲ್ಲದ ಸ್ಥಳದಲ್ಲಿ ಬಂದ ಕೃಷ್ಣಸರ್ಪವನ್ನು ಹಿಡಿದುಕೊಳ್ಳವಂತೆ–ನಿನ್ನ ಹೃದಯದಲ್ಲಿ ಹಾಲಾಹಲ ವಿಷವಿರುವುದೆಂಬುದನ್ನು ತಿಳಿಯದೇ ನಿನ್ನೊಡನೆ ರಮಿಸುತ್ತಿದ್ದೆನು. ದುರಾತ್ಮಳಾದ ನಿನ್ನಿಂದ ನನ್ನ ಮಗನು ತಂದೆಯಿದ್ದೂ ಇಲ್ಲದವನಂತೆಯೇ ಆದನು. ಏಕೆಂದರೆ : ತಂದೆಯಾದವನು ಮಗನಿಗೆ ಕೊಡಬೇಕಾಗಿದ್ದ ರಕ್ಷಣೆಯನ್ನು ಕೊಡಲು ನಿನ್ನ ದೆಸೆಯಿಂದಾಗಿ ಅಸಮರ್ಥನಾಗಿದ್ದೇನೆ. ಆದುದರಿಂದ ನನ್ನ ಪ್ರಜೆಗಳು ನನ್ನ ಮೇಲೆ ಕೋಪಗೊಳ್ಳುವುದು ಸಹಜವಾಗಿಯೇ ಇದೆ.

ಬಾಲಿಶೋ ಬತ ಕಾಮಾತ್ಮಾ ರಾಜಾ ದಶರಥೋ ಭೃಶಮ್ ।
ಸ್ತ್ರೀಕೃತೇ ಯಃ ಪ್ರಿಯಂ ಪುತ್ರಂ ವನಂ ಪ್ರಸ್ಥಾಪಯಿಷ್ಯತಿ ॥೮೪॥

'ಯಾವನು ಹೆಂಗಸೊಬ್ಬಳ ಮಾತಿಗೆ ಕಟ್ಟುಬಿದ್ದು ಸ್ತ್ರೀಸುಖಪ್ರಾಪ್ತಿಗಾಗಿ ತನ್ನ ಪ್ರಿಯಸುತನನ್ನೇ ಅರಣ್ಯಕ್ಕೆ ಕಳುಹಿಸಲು ನಿಶ್ಚಯಿಸಿರುವನೋ–ಅಂತಹ ಅತಿಕಾಮಿಯಾದ ದಶರಥನು ನಿಶ್ಚಯವಾಗಿಯೂ ಮೂರ್ಖನೇ ಸರಿ'– ಎಂದು ಪುರಜನರು ನನ್ನನ್ನು ನಿಂದಿಸುವರು.

ಕೃಚ್ಛ್ರ-ಚಾಂದ್ರಾಯಣಾದಿ ವ್ರತಗಳಿಂದಲೂ, ಬ್ರಹ್ಮಚರ್ಯವ್ರತಗಳಿಂದಲೂ, ಗುರುಶುಶ್ರೂಷೆಯಿಂದಲೂ ಕೃಶನಾಗಿದ್ದ ರಾಮನು ಗೃಹಸ್ಥಾಶ್ರಮಿಯಾದನಂತರ ಸುಖೋಪಭೋಗಗಳನ್ನು ಪಡೆಯಬೇಕಾಗಿದ್ದ ಈ ಕಾಲದಲ್ಲಿಯೂ ಅರಣ್ಯವಾಸದ ಮಹಾಕಷ್ಟವನ್ನು ಅನುಭವಿಸಲಿದ್ದಾನೆ. ಪಟ್ಟಾಭಿಷೇಕಕ್ಕೆ ಸಿದ್ಧನಾಗಿರುವ ಈ ಸಮಯದಲ್ಲಿಯೂ ನಾನವನನ್ನು ಕರೆಯಿಸಿ ಕಾಡಿಗೆ ಹೋಗೆಂದು ಹೇಳಿದರೆ–'ಬಾಢಂ'–'ಹಾಗೆಯೇ ಆಗಲಿ'–ಹೋಗುತ್ತೇನೆ ಎಂದೆನ್ನುವನೇ ಹೊರತು ಎರಡನೆಯ ಮಾತನ್ನೇ ಆಡುವುದಿಲ್ಲ. ಕಾಡಿಗೆ ಹೋಗೆಂದು ಹೇಳಿದೊಡನೆಯೇ ಅವನು ನನ್ನ ಮಾತಿಗೆ ವಿರುದ್ಧವಾಗಿ ವರ್ತಿಸಿದರೆ ಅದರಿಂದ ನನಗೆ ಹೆಚ್ಚು ಸಂತೋಷವೇ ಆಗುವುದು. ಆದರೆ ನನ್ನ ಮಗನು ಹಾಗೆಂದೂ ಮಾಡುವುದಿಲ್ಲ. (ಇದೇ ನನ್ನ ದುಃಖಕ್ಕೆ ಕಾರಣವಾಗಿದೆ.) ಪರಿಶುದ್ಧಹೃದಯನಾದ ಶ್ರೀರಾಮನು ನನ್ನ ಭಾವನೆಯೇನೆಂಬುದನ್ನು ತಿಳಿಯನು. ತಿಳಿದುಕೊಳ್ಳಲು ಪ್ರಯತ್ನಿಸುವುದೂ ಇಲ್ಲ. ಕಾಡಿಗೆ ಹೋಗೆಂದರೆ–'ಆಗಲಿ'–ಎಂದು ಹೇಳುವುದೊಂದೇ ಅವನಿಗೆ ಗೊತ್ತು. ರಾಮನು ಅರಣ್ಯಕ್ಕೆ ಹೊರಟುಹೋದನಂತರ ಸರ್ವಪ್ರಜೆಗಳಿಂದಲೂ ಧಿಕ್ಕರಿಸಲ್ಪಡುವ ಕ್ಷಮಾರ್ಹನಲ್ಲದ ನನ್ನನ್ನು ಮೃತ್ಯುದೇವನು ಮಾತ್ರ ಪುರಸ್ಕರಿಸಿ ಸ್ವಾಗತವಿತ್ತು ಯಮನ ಮನೆಗೆ ಒಯ್ಯುತ್ತಾನೆ. ಪುತ್ರವಿಯೋಗದುಃಖದಿಂದ ನಾನು ಮರಣಹೊಂದಿದನಂತರ, ನರಶ್ರೇಷ್ಠನಾದ ರಾಮನು ಕಾಡಿಗೆ ಹೋದನಂತರ–ಇಲ್ಲುಳಿಯುವ ನನಗೆ ಆಪ್ತರಾದ ಕೌಸಲ್ಯೆಯೇ ಮೊದಲಾದರ ವಿಷಯದಲ್ಲಿ ಅವರಿಗೆ ಮತ್ತಷ್ಟು ದುಃಖವಾಗುವಂತೆ ಮತ್ತಾವ ಪಾಪಕಾರ್ಯವನ್ನು ಮಾಡಲು ಹೊಂಚು ಹಾಕಿರುವೆ? ಆದರೆ ನೀನು ನನಗೆ ಇಷ್ಟರಾದವರ (ಕೌಸಲ್ಯಾ-ಸುಮಿತ್ರೆಯರ) ವಿನಾಶಕ್ಕಾಗಿ ಶ್ರಮಪಡಬೇಕಾಗಿಯೇ ಇಲ್ಲ. ಕೌಸಲ್ಯೆಯು ನನ್ನನ್ನೂ ರಾಮನನ್ನೂ ತೊರೆದಳಾದರೆ ಪತಿ-ಪುತ್ರವಿಯೋಗದುಃಖವನ್ನು ಸಹಿಸಲಾರದೇ ನನ್ನನ್ನೇ ಅನುಸರಿಸುತ್ತಾಳೆ. (ಮರಣಹೊಂದುತ್ತಾಳೆ.) ಅಂತೆಯೇ ದೇವಿಯಾದ ಸುಮಿತ್ರೆಯೂ ನನ್ನನ್ನೂ ತನ್ನ ಮಕ್ಕಳಾದ ಲಕ್ಷ್ಮಣ-ಶತ್ರುಘ್ನರನ್ನೂ ತೊರೆದಳಾದರೆ ಅವಳೂ ಕೂಡ ಪತಿ-ಪುತ್ರರ ವಿಯೋಗದುಃಖವನ್ನು ತಾಳಲಾರದೇ ನನ್ನನ್ನೇ ಅನುಸರಿಸುವಳು. ಮೂವರು

ಮಕ್ಕಳೊಡನೆ (ರಾಮ-ಲಕ್ಷ್ಮಣ-ಶತ್ರುಘ್ನರೊಡನೆ) ನನ್ನನ್ನೂ, ಕೌಸಲ್ಯೆಯನ್ನೂ, ಸುಮಿತ್ರೆಯನ್ನೂ ನರಕಕ್ಕೆ ತಳ್ಳಿ (ದುಃಖದಲ್ಲಿ ಮುಳುಗಿಸಿ) ನೀನೊಬ್ಬಳು ಮಾತ್ರ ಸುಖವಾಗಿರು.* ನನ್ನಿಂದಲೂ ಮತ್ತು ಶ್ರೀರಾಮನಿಂದಲೂ ಪರಿತ್ಯಕ್ತವಾದ, ಪುರಾತನಕಾಲದಿಂದಲೂ ವೃದ್ಧಿಹೊಂದುತ್ತಾ ಬಂದಿರುವ, ಅನೇಕಗುಣಶಾಲಿಗಳಾದ ರಾಜರಿಂದ ಸತ್ಕೃತವಾಗಿದ್ದ ಪ್ರಶಾಂತವಾಗಿದ್ದ (ಯಾವ ಶತ್ರುಗಳಿಂದಲೂ ಕ್ಷೋಭೆಗೊಳಿಸಲು ಸಾಧ್ಯವಾಗದಿದ್ದ) ಇಕ್ಷ್ವಾಕುವಂಶವನ್ನು ನೀನೀಗ ಅಲ್ಲೋಲ-ಕಲ್ಲೋಲಗೊಳಿಸಿ ಪರಿಪಾಲಿಸಲಿರುವೆ. ರಾಮನನ್ನು ಅರಣ್ಯಕ್ಕೆ ಕಳುಹಿಸಿಕೊಟ್ಟುದು ಭರತನಿಗೂ ಪ್ರಿಯವೇ ಆಗಿದ್ದ ಪಕ್ಷದಲ್ಲಿ ಆಯುಷ್ಯವು ಕಳೆದು ಮೃತನಾಗುವ ನನ್ನ ಪ್ರೇತಕಾರ್ಯಗಳನ್ನು ಅವನು ಖಂಡಿತವಾಗಿಯೂ ಮಾಡಬಾರದು. ನಾನು ಸತ್ತುಹೋದನಂತರ ಮತ್ತು ಪುರುಷಶ್ರೇಷ್ಠನಾದ ರಾಮನು ಅರಣ್ಯಕ್ಕೆ ಹೋದನಂತರ ಇವೆಲ್ಲಕ್ಕೂ ಮೂಲಕಾರಣಳಾದ ನೀನು ವಿಧವೆಯಾಗಿ ಮಗನೊಡನೆ ಈ ರಾಜ್ಯವನ್ನು ಆಳಲಿರುವೆ. ನೀನು ರಾಜಪುತ್ರಿಯೆಂಬ ವ್ಯಾಜದಿಂದ ನನ್ನ ಮನೆಯಲ್ಲಿ ಸೇರಿಕೊಂಡು ವಾಸಮಾಡುತ್ತಿರುವೆ. ಆದರೆ ನಿಜವಾಗಿ ನೀನು ರಾಜಪುತ್ರಿಯಲ್ಲ. ಧೂರ್ತೆಯಾದೊಬ್ಬ ಹೆಂಗಸು. ನಿನ್ನ ಕಾರಣದಿಂದಾಗಿ ಪಾಪಮಾಡಿದವನಿಗೆ ಪ್ರಾಪ್ತವಾಗುವಂತೆ ಲೋಕದಲ್ಲಿ ಅಪಾರವಾದ ಅಪಕೀರ್ತಿಯೂ, ಮಹಾಜನಸಮಕ್ಷದಲ್ಲಿ ಧಿಕ್ಕಾರವೂ, ಪ್ರಾಣಿಗಳ ಅನಾದರವೂ ನನಗೆ ಪ್ರಾಪ್ತವಾಗುತ್ತವೆ.

ಅಯ್ಯೋ! ಯಾವಾಗಲೂ ರಥ-ಗಜಾಶ್ವಗಳ ಮೇಲೆಯೇ ಸಂಚರಿಸು

---

* ಪ್ರಕ್ಷಿಪ್ಯ ನರಕೇ ಸಾ ತ್ವಂ =ಎಂದು ಮೂಲವಿದೆ. ನರಕಪದಕ್ಕೆ ದುಃಖವೆಂದು ಒಬ್ಬರು ವ್ಯಾಖ್ಯಾನಮಾಡಿರುತ್ತಾರೆ. ನರಕಶಬ್ದಕ್ಕೆ ನೇರವಾಗಿ ದುಃಖ–ಎಂದು ಅರ್ಥವಾಗದಿದ್ದರೂ ಸಂದರ್ಭೋಚಿತವಾಗಿ ಈ ಅರ್ಥವು ಹೊಂದಿಕೊಳ್ಳುತ್ತದೆ. ಮತ್ತೊಬ್ಬರು ನರಕವೆಂಬುದಕ್ಕೆ ನರಕಲೋಕವೆಂಬ ಅರ್ಥವನ್ನೇ ಸಮರ್ಥಿಸುತ್ತಾ ಹೀಗೆ ವಿವರಣೆ ನೀಡಿರುತ್ತಾರೆ : ಮೂವರು ಪುತ್ರರಿಗೂ ರಾಜ್ಯವು ಸಿಕ್ಕದೇ ಕ್ಷತ್ರಿಯೋಚಿತವಾದ ಕರ್ತವ್ಯಗಳನ್ನು ಮಾಡಲು ಸಾಧ್ಯವಾಗದೇ ಇರುವುದರಿಂದ ನರಕಪ್ರಾಪ್ತಿಯಾಗುತ್ತದೆ. ದಶರಥ-ಕೌಸಲ್ಯೆ-ಸುಮಿತ್ರೆಯರಿಗೆ ನಿರಂತರವಾದ ದುಃಖದಿಂದ ಅಪಮೃತ್ಯುವುಂಟಾಗಿ ನರಕ ವಾಸವು ಪ್ರಾಪ್ತವಾಗುತ್ತದೆ.

ತ್ತಿದ್ದ ಸಮರ್ಥನಾದ ನನ್ನ ಮಗ ರಾಮನು ಕಲ್ಲು-ಮುಳ್ಳುಗಳಿಂದ ನಿಬಿಡ ವಾದ ಮಹಾರಣ್ಯದಲ್ಲಿ ಪಾದಚಾರಿಯಾಗಿ ಹೇಗೆ ನಡೆದುಹೋಗುವನು?

ಶ್ರೀರಾಮನಿಗೆ ಆಹಾರವನ್ನು ಸಿದ್ಧಪಡಿಸುವ ಸಮಯದಲ್ಲಿ ಕುಂಡಲ ಗಳನ್ನು ಧರಿಸಿರುವ ಅಡಿಗೆಯವರು ನಾಮುಂದು-ತಾಮುಂದೆಂಬ ಸ್ಪರ್ಧೆ ಯಿಂದ ಪ್ರಶಸ್ತವಾದ ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯ-ಪಾನೀಯಾದಿ ಗಳನ್ನು ಸಿದ್ಧಪಡಿಸಿ ರಾಮನಿಗೆ ಬಡಿಸುತ್ತಿದ್ದರು. ಅಂತಹ ಪ್ರಶಸ್ತವಾದ ಭೋಜನವನ್ನು ಮಾಡುತ್ತಿದ್ದ ಶ್ರೀರಾಮನು ಅರಣ್ಯದಲ್ಲಿ ಸಿಕ್ಕುವ ಕಹಿಯಾದ ಮತ್ತು ಒಗರಾದ ಕಂದ-ಮೂಲಗಳನ್ನು ತಿಂದುಕೊಂಡು ಹೇಗೆ ಜೀವಿಸುವನು? ಬಹುಮೂಲ್ಯವಾದ ವಸ್ತ್ರಗಳನ್ನು ಧರಿಸಿ ಬಹಳ ಹೊತ್ತಿನವರೆಗೂ ಸುಖಕರವಾದ ರತ್ನಗಂಬಳಿಯ ಮೇಲೆ ಪವಡಿಸುತ್ತಿದ್ದ ಶ್ರೀರಾಮನು ಕಾಷಾಯವಸ್ತ್ರಗಳನ್ನು ಧರಿಸಿ ಕಾಡಿನಲ್ಲಿ ನೆಲದ ಮೇಲೆ ಹೇಗೆ ಪವಡಿಸುವನು?

ಕೈಕೇಯಿ! 'ರಾಮನ ಅರಣ್ಯಗಮನ ; ಭರತನ ಅಭಿಷೇಚನ'–ಈ ಎರಡು ಕಠೋರವಾಕ್ಯಗಳ ಚಿಂತಕರಾರು? ಯಾರಿದನ್ನು ಮನಸ್ಸಿನಲ್ಲಿ ಚಿಂತಿಸಿ ನಿನಗುಪದೇಶಿಸಿದರು?

ಧಿಗಸ್ತು ಯೋಷಿತೋ ನಾಮ ಶಠಾಃ ಸ್ವಾರ್ಥಪರಾಯಣಾಃ ।

ಛೀ! ಈ ಹೆಂಗಸರಿಗೇ ಧಿಕ್ಕಾರವಿರಲಿ. ಎಲ್ಲರೂ ಮೋಸಗಾರರು. ಸ್ವಾರ್ಥಪರಾಯಣೆಯರು."

ಉದ್ವೇಗದಿಂದ ಹೀಗೆ ಹೇಳಿದ ರಾಜನು ನಿಟ್ಟುಸಿರುಬಿಡುತ್ತಾ ಹೇಳಿದನು:

ನ ಬ್ರವೀಮಿ ಸ್ತ್ರಿಯಃ ಸರ್ವಾ ಭರತಸ್ಯೈವ ಮಾತರಮ್ ॥೧೦೧॥

"ಇಲ್ಲ ; ಎಲ್ಲ ಸ್ತ್ರೀಯರ ವಿಷಯದಲ್ಲಿಯೂ ನಾನು ಹೀಗೆ ಹೇಳಲಾರೆ. ಭರತನ ತಾಯಿಗೆ ಮಾತ್ರವೇ ಈ ನನ್ನ ಮಾತು ಅನ್ವಯಿಸುತ್ತದೆ. ಅನರ್ಥ ವನ್ನುಂಟುಮಾಡುವ ಸ್ವಭಾವದವಳೇ! ಧನಪಿಶಾಚಿಯೇ! ಕ್ರೂರಳೇ! ನನಗೆ ಅನುತಾಪವನ್ನುಂಟುಮಾಡುವುದರಲ್ಲಿಯೇ ನಿಶ್ಚಿತವಾದ ಅಭಿಪ್ರಾಯ ವುಳ್ಳವಳೇ! ನಾನಾದರೂ ನಿನಗೆ ಅಪ್ರಿಯವಾದ ಯಾವ ಕಾರ್ಯವನ್ನು

ಮಾಡಿರುವೆನು? ಲೋಕಕ್ಕೆ ಹಿತಕರನಾದ ರಾಮನಾದರೂ ನಿನಗೆ ಯಾವ ಅಪ್ರಿಯವಾದ ಕಾರ್ಯವನ್ನು ಮಾಡಿರುವನು? ಅಪ್ರಿಯವಾದ ಯಾವ ನಡವಳಿಕೆಯನ್ನು ನೀನು ನಮ್ಮಲ್ಲಿ ಕಂಡಿರುವೆ?

ರಾಮನನ್ನು ಕಾಡಿಗೆ ಕಳುಹಿಸುವುದರಿಂದ ಆಗಬಹುದಾದ ಪರಿಣಾಮವನ್ನಾದರೂ ಯೋಚಿಸಿರುವೆಯಾ?

ಪರಿತ್ಯಜೇಯುಃ ಪಿತರೋ ಹಿ ಪುತ್ರಾ-
ನ್ಭಾರ್ಯಾಃ ಪತೀಂಶ್ಚಾಪಿ ಕೃತಾನುರಾಗಾಃ ।
ಕೃತ್ಸ್ನಂ ಹಿ ಸರ್ವಂ ಕುಪಿತಂ ಜಗತ್ಸ್ಯಾತ್-
ದೃಷ್ಟ್ವೈವ ರಾಮಂ ವ್ಯಸನೇ ನಿಮಗ್ನಮ್ ॥೧೦೩॥

ರಾಮನು ವ್ಯಸನದಲ್ಲಿ ಮಗ್ನನಾಗಿರುವುದನ್ನು ನೋಡಿದೊಡನೆಯೇ ಸಮಗ್ರವಾದ ಜಗತ್ತೇ ಕೋಪಿಸಿಕೊಳ್ಳಬಹುದು. ಪ್ರಜೆಗಳೇ ನಮ್ಮ ಮೇಲೆ ಬೀಳಬಹುದು. ತಂದೆ-ತಾಯಿಗಳು ಮಕ್ಕಳನ್ನು ಪರಿತ್ಯಜಿಸಬಹುದು. ರಾಮನಲ್ಲಿ ಅನುರಾಗವಿರುವ ಗೃಹಿಣಿಯರು ದುಃಖಾತಿಶಯದಿಂದ ತಮ್ಮ ಗಂಡಂದಿರನ್ನೇ ಪರಿತ್ಯಜಿಸಬಹುದು.

ಜಗದಾನಂದಕರನಾದ ಶ್ರೀರಾಮನ ವೀಕ್ಷಣದಿಂದ ನನಗಾಗುವ ಆನಂದಕ್ಕೆ ಪಾರವೇ ಇರುವುದಿಲ್ಲ. ನನಗೆ ಅಭಿಮುಖವಾಗಿ ಬರುತ್ತಿರುವ, ದಿವ್ಯಾಭರಣಗಳಿಂದ ಅಲಂಕೃತನಾದ, ದೇವಕುಮಾರರೂಪನಾದ (ಕುಮಾರಸ್ವಾಮಿಯಂತೆಯೇ ಇರುವ) ನನ್ನ ಮಗನಾದ ರಾಮನನ್ನು ಪದೇ-ಪದೇ ನೋಡಿ ನೋಡಿ ಸಂತೋಷಪಡುತ್ತಿರುತ್ತೇನೆ. ಶ್ರೀರಾಮನನ್ನು ನೋಡಿದೊಡನೆಯೇ ಯುವಕನಂತೆ ಪುನಃ ಅವನನ್ನು ನೋಡಲು ಉತ್ಸಾಹಿತನಾಗುತ್ತೇನೆ.

ವಿನಾಪಿ ಸೂರ್ಯೇಣ ಭವೇತ್ಪ್ರವೃತ್ತಿ-
ರವರ್ಷತಾ ವಜ್ರಧರೇಣ ವಾಪಿ ।
ರಾಮಂ ತು ಗಚ್ಛನ್ತಮಿತಃ ಸಮೀಕ್ಷ್ಯ
ಜೀವೇನ್ನ ಕಶ್ಚಿತ್ತ್ವಿತಿ ಚೇತನಾ ಮೇ ॥೧೦೪॥

ಸೂರ್ಯನಿಲ್ಲದೆಯೇ ಜಗತ್ತು ಮುಂದುವರಿಯಬಹುದು. ಇಂದ್ರನು

ಮಳೆಗರೆಯದಿದ್ದರೂ ಜಗತ್ತು ವೃದ್ಧಿಹೊಂದಬಹುದು. ಆದರೆ ರಾಮನು ಈ ಅಯೋಧ್ಯಾನಗರಿಯನ್ನು ಬಿಟ್ಟು ಹೊರಡುತ್ತಿರುವುದನ್ನು ಕಂಡ ಯಾವನೊಬ್ಬನೂ ಜೀವದಿಂದ ಉಳಿಯಲಾರನೆಂಬುದೇ ನನ್ನ ಅಭಿಪ್ರಾಯವಾಗಿದೆ.

ಪಾಪಾತ್ಮಳೇ! ಇಕ್ಷ್ವಾಕುವಂಶವನ್ನೇ ವಿನಾಶಮಾಡಲು ಬಯಸಿರುವ, ಪತಿಯ ಹಿತವನ್ನೇ ಬಯಸದ, ಶತ್ರುರೂಪಳಾದ, ನನಗೆ ಮೃತ್ಯುವಿನಂತೆಯೇ ಇರುವ ನಿನ್ನನ್ನು ಅರಮನೆಯಲ್ಲಿ ಇಟ್ಟುಕೊಂಡು ಕಾಪಾಡಿದೆನು. ನೀನು ತೀಕ್ಷ್ಣವಾದ ವಿಷವುಳ್ಳ ಹೆಣ್ಣುನಾಗರಹಾವಿನಂತಿರುವೆ. ಅಂತಹ ನಿನ್ನನ್ನು ಬಹಳ ಕಾಲದಿಂದಲೂ ತೊಡೆಯ ಮೇಲಿಟ್ಟುಕೊಂಡು ಮುದ್ದಿಸಿದೆನು. ಈ ಕಾರಣದಿಂದಲೇ ನಾನಿಂದು ಹತನಾದೆನು. ನನ್ನಿಂದಲೂ, ರಾಮನಿಂದಲೂ ಮತ್ತು ಲಕ್ಷ್ಮಣನಿಂದಲೂ ವಿಹೀನನಾದ ಭರತನು ವಿಧವೆಯಾಗುವ ನಿನ್ನೊಡನೆ ಅಯೋಧ್ಯಾಪಟ್ಟಣವನ್ನೂ, ಕೋಸಲದೇಶವನ್ನೂ ಆಳಲಿ. ಹೀಗೆ ನನ್ನ ಬಂಧುಗಳೆಲ್ಲರನ್ನೂ ನಾಶಗೊಳಿಸಿ ನನ್ನ ಶತ್ರುಗಳಿಗೆ ನೀನು ಸಂತೋಷದಾಯಕಳಾಗು. ಕ್ರೂರಕರ್ಮಳೇ! ವಿಪತ್ತಿನಲ್ಲಿಯೂ ಕಠಿಣವಾದ ಮಾತುಗಳನ್ನಾಡಿ ಮನಸ್ಸಿಗೆ ಘಾಸಿಮಾಡುವ ಸ್ವಭಾವದವಳೇ! ನನ್ನ ಮಾತುಗಳನ್ನು ಅನಾದರಣೆಮಾಡಿ ಮನಬಂದಂತೆ ಮಾತನಾಡುತ್ತಿರುವ ನಿನ್ನ ಮುಖದಿಂದ ಹಲ್ಲುಗಳು ಸಾವಿರಾರು ಚೂರುಗಳಾಗಿ ಕೆಳಗೇಕೆ ಬೀಳು ತ್ತಿಲ್ಲ? ರಾಮನಿಗೆ ಕಠಿಣವಾಗಿ ಮಾತನಾಡಲೇ ತಿಳಿಯದು. ಯಾರ ವಿಷಯದಲ್ಲಿಯೂ ಅವನು ಅಹಿತವಾದುದನ್ನಾಗಲೀ, ಅಪ್ರಿಯವಾದುದನ್ನಾಗಲೀ ಆಡಿದವನೇ ಅಲ್ಲ. ಗುಣವಂತರಿಂದ ಸಮ್ಮಾನಿತನಾದ, ಸರ್ವದಾ ಪ್ರಿಯಭಾಷಿಯಾದ ಶ್ರೀರಾಮನ ವಿಷಯದಲ್ಲಿ ದೋಷಾರೋಪಣೆಯನ್ನು ಹೇಗೆ ಮಾಡುವೆ? (ಅವನಲ್ಲಿ ದೋಷವೇನೂ ಇಲ್ಲವೆನ್ನುವುದಾದರೆ ನಿರ್ದೋಷಿಯಾದ ಅವನು ಅರಣ್ಯಕ್ಕೆ ಹೋಗಬೇಕಾದ ಕಾರಣವಾದರೂ ಏನಿದೆ?)

ಪ್ರತಾಮ್ಯ ವಾ ಪ್ರಜ್ವಲ ಪ್ರಣಶ್ಯ ವಾ
ಸಹಸ್ರಶೋ ವಾ ಸ್ಫುಟಿತಾ ಮಹೀಂ ವ್ರಜ ।
ನ ತೇ ಕರಿಷ್ಯಾಮಿ ವಚಃ ಸುದಾರುಣಂ
ಮಮಾಹಿತಂ ಕೇಕಯರಾಜಪಾಂಸನಿ ॥೧೧೦॥

ಕೇಕಯಕುಲಕಳಂಕಿನಿಯೇ! ಪಾಪಿಷ್ಠಳೇ! ನೀನೀಗ ಬಿದ್ದಿರು

ವಂತೆಯೇ ಸರ್ವದಾ ತಲೆಗೆದರಿಕೊಂಡು ನೆಲದ ಮೇಲೆ ಹೊರಳಾಡುತ್ತಾ ಸೊರಗಿ ಸೊಪ್ಪಾಗು. ಬೆಂಕಿಗೆ ಬಿದ್ದು ಭಸ್ಮವಾಗಿಯಾದರೂ ಹೋಗು. ನೇಣುಹಾಕಿಕೊಂಡಾದರೂ ಸಾಯಿ. ಸಾವಿರಾರು ಬಾರಿ ಕಲ್ಲಿಗೆ ತಲೆಯ ನ್ನಾದರೂ ಚಚ್ಚಿಕೋ. ಪರ್ವತದ ಮೇಲಿನಿಂದ ಭೂಮಿಗೆ ಬಿದ್ದಾದರೂ ಸತ್ತುಹೋಗು. ನಿನ್ನ ಮಾತಿನಂತೆ ನನಗೆ ಅಹಿತವಾದ ಮತ್ತು ಅತಿದಾರುಣ ವಾದ ಕಾರ್ಯವನ್ನು ಮಾಡುವುದಿಲ್ಲ.

ಕ್ಷೌರದ ಕತ್ತಿಯಂತೆ ಅತಿತೀಕ್ಷ್ಣಳಾಗಿರುವ, ತೋರಿಕೆಯ ಪ್ರಿಯೋಕ್ತಿ ಗಳನ್ನಾಡುವ, ಅತ್ಯಂತದುಷ್ಟಭಾವದಿಂದ ಕೂಡಿರುವ, ಪ್ರಾಣಸಹಿತವಾದ ನನ್ನ ಹೃದಯವನ್ನು ಸುಟ್ಟುಹಾಕುತ್ತಿರುವ, ಕುಲಘಾತಿನಿಯಾದ, ಮನಸ್ಸಿಗೆ ಬಹಳ ವೇದನೆಯನ್ನುಂಟುಮಾಡುತ್ತಿರುವ ನೀನು ಜೀವಿಸಿರುವುದನ್ನು ನಾನಿನ್ನು ಸಹಿಸುವುದಿಲ್ಲ."

ಇಷ್ಟು ಕಠೋರವಾಗಿ ಮಾತುಗಳನ್ನಾಡಿದರೂ ಪ್ರತಿಜ್ಞೆಯೆಂಬ ಧರ್ಮಪಾಶದಿಂದ ಬಂಧಿಸಲ್ಪಟ್ಟಿದ್ದ ರಾಜನು ಪುನಃ ಸಾಂತ್ವನದ ಮಾತು ಗಳನ್ನಾಡಲು ಉಪಕ್ರಮಿಸಿದನು :

"ಆತ್ಮವಂತನಾದ ನನಗೆ ಆತ್ಮಜನೇ ಇಲ್ಲದಿದ್ದರೆ ಜೀವಿತವೇ ಇಲ್ಲ.* ಒಂದು ವೇಳೆ ಜೀವದಿಂದುಳಿದಿದ್ದರೂ ಪುತ್ರನಿಂದ ವಿಹೀನನಾದ ನನಗೆ ಸುಖ ವೆಂಬುದಂತೂ ಇಲ್ಲ. ಮಗನನ್ನೇ ಕಳೆದುಕೊಂಡ ಮೇಲೆ ನಿನ್ನೊಡನೆ ರತಿ ಸುಖವಾದರೂ ಏತಕ್ಕೆ ಬೇಕು? ಆದುದರಿಂದ, ದೇವಿ! ನನಗೆ ಅಹಿತ ವಾಗುವುದನ್ನು ಮಾಡುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ. ನಿನ್ನ ಕಾಲುಗಳನ್ನು ಹಿಡಿದಾದರೂ ಬೇಡಿಕೊಳ್ಳುತ್ತೇನೆ. ಪ್ರಸನ್ನಳಾಗು, ಪ್ರಿಯೇ!"

ಲೋಕಮರ್ಯಾದೆಯನ್ನೂ ಮೀರಿ, ದೃಢಸಂಕಲ್ಪಳಾಗಿದ್ದ ಕೈಕೇಯಿಗೆ ಅಧೀನನಾಗಿದ್ದ ದಶರಥರಾಜನು ಅನಾಥನಂತೆ ಗೋಳಾಡುತ್ತಾ ಕೈಕೇಯಿಯ ಪಾದಗಳ ಮೇಲೆ ಬಿದ್ದನು. ಒಡನೆಯೇ ಅವಳು ಕಾಲು

---

* ಆತ್ಮವತಃ ಆತ್ಮಜೇನ ವಿನಾ ನ ಜೀವಿತಂ = ಆತ್ಮವಂತ ಎಂದರೆ ದೇಹಧಾರಿಯು. ಆತ್ಮಜ ಎಂದರೆ ದೇಹದಿಂದ ಅಥವಾ ದೇಹದಲ್ಲಿ ಹುಟ್ಟಿದ್ದು ಪ್ರಾಣ. ದೇಹವಂತನಿಗೆ ಪ್ರಾಣವೇ ಇಲ್ಲದಿದ್ದರೆ ಜೀವಿತವೆಲ್ಲಿಯದು?

ಗಳೆರಡನ್ನೂ ತಿರಸ್ಕಾರದಿಂದ ದೂರಕ್ಕೆ ಚಾಚಿದುದರಿಂದ ಅವೂ ಸಿಕ್ಕದೇ ರೋಗಿಯೊಬ್ಬನು ತತ್ತರಿಸಿ ಬೀಳುವಂತೆ ನೆಲದ ಮೇಲೆ ಬಿದ್ದನು.

೧೨ನೆಯ ಸರ್ಗವು ಮುಗಿಯಿತು.

ದಶರಥನ ವಿಲಾಪ

ಅತದರ್ಹಂ ಮಹಾರಾಜಂ ಶಯಾನಮತಥೋಚಿತಮ್ ।
ಯಯಾತಿಮಿವ ಪುಣ್ಯಾನ್ತೇ ದೇವಲೋಕಾತ್ಪರಿಚ್ಯುತಮ್ ॥೧॥

ಅನರ್ಥರೂಪಾ ಸಿದ್ಧಾರ್ಥಾ ಹ್ಯಭೀತಾ ಭಯದರ್ಶಿನೀ ।
ಪುನರಾಕಾರಯಾಮಾಸ ತಮೇವ ವರಮಙ್ಗನಾ ॥೨॥

ರಾಜಾಧಿರಾಜನಾದ ದಶರಥನು ಕೈಕೇಯಿಯ ಪಾದಗಳಲ್ಲಿ ಬೀಳಲು ಹೋಗಬಾರದಾಗಿತ್ತು. ಹಂಸತೂಲಿಕಾತಲ್ಪದಲ್ಲಿ ಮಲಗಬೇಕಾದವನು ನೆಲದ ಮೇಲೆ ಮಲಗುವುದೇ? ಅವನ ಘನತೆಗೆ ಈ ಎರಡು ಕಾರ್ಯಗಳೂ ತಕ್ಕುವುಗಳಲ್ಲ. ಕೈಕೇಯಿಯ ಪಾದಗಳಿಗೆ ನಮಸ್ಕರಿಸಲು ಹೋಗಿ ಪಾದಗಳು ಸಿಕ್ಕದೇ–ಪುಣ್ಯವು ಕ್ಷಯಿಸಿದೊಡನೆಯೇ ದೇವಲೋಕದಿಂದ ಚ್ಯುತನಾದ ಯಯಾತಿಯಂತೆ–ಭೂಮಿಯ ಮೇಲೆ ಬಿದ್ದಿದ್ದ ದಶರಥರಾಜನನ್ನು ಇಕ್ಷ್ವಾಕುಕುಲಕ್ಕೆ ಅನರ್ಥಕಾರಿಣಿಯೂ, ತಾನು ಮಾಡುತ್ತಿರುವ ಕಾರ್ಯದ ಪರಿಣಾಮವೇನೆಂಬುದನ್ನು ತಿಳಿಯದೇ ಇರತಕ್ಕವಳೂ, ಜನಾಪವಾದಕ್ಕೆ ಹೆದರದವಳೂ, ದಶರಥನಿಗೆ ಭಯೋತ್ಪಾದಕಳೂ ಆದ ಕೈಕೇಯಿಯು ಹಿಂದೆ ಕೇಳಿದ ವರಗಳನ್ನೇ ಕೊಡಬೇಕೆಂದು ಒತ್ತಾಯಪಡಿಸುತ್ತಾ ಹೇಳಿದಳು :

"ಮಹಾರಾಜ! ಸತ್ಯವಾದಿಯೆಂದೂ, ದೃಢವ್ರತನೆಂದೂ ಆತ್ಮಶ್ಲಾಘನೆ ಮಾಡಿಕೊಳ್ಳುವೆ. ನ್ಯಾಸರೂಪವಾಗಿಟ್ಟಿದ್ದ ನನ್ನ ವರಗಳನ್ನೇಕೆ ನನಗೆ ಕೊಡದೇ ನಿನ್ನಲ್ಲಿಯೇ ಉಳಿಸಿಕೊಳ್ಳಲು ಅಪೇಕ್ಷಿಸುತ್ತಿರುವೆ?"

ಕೈಕೇಯಿಯಿಂದ ಹೀಗೆ ಪ್ರಶ್ನಿಸಲ್ಪಟ್ಟ ದಶರಥನು ಮುಹೂರ್ತಕಾಲ ಕೋಪದಿಂದ ಉದ್ವಿಗ್ನನಂತಿದ್ದು ಅನಂತರ ಹೇಳಿದನು :

"ಪಾಪಿಷ್ಠಳೇ! ಅನಾರ್ಯಳೇ! ಶತ್ರುರೂಪಳೇ! ಹಾಗೇಕೆ

ಹೇಳುವೆ? ರಾಮನು ಅರಣ್ಯಕ್ಕೆ ಹೋದನಂತರ–ನಾನು ಪುತ್ರವಿರಹಶೋಕದಿಂದ ಮರಣಹೊಂದಿದನಂತರ–ನಿನ್ನ ಇಷ್ಟಾರ್ಥಸಿದ್ಧಿಯನ್ನು ಪಡೆದು ಸುಖವಾಗಿರು. ಆಯಿತೇ?

ಅಯ್ಯೋ! ನನ್ನ ಮರಣಾನಂತರ ಪ್ರಾಪ್ತವಾಗುವ ಧಿಕ್ಕಾರವು ಸ್ವರ್ಗದಲ್ಲಿಯೂ ನನಗೆ ತಪ್ಪಿದ್ದಲ್ಲ. ಸ್ವರ್ಗದಲ್ಲಿ ದೇವತೆಗಳಿಂದ ಧಿಕ್ಕಾರಪೂರ್ವಕವಾಗಿ ಕೇಳಲ್ಪಡುವ–'ರಾಮನು ಕುಶಲಿಯಾಗಿರುವನೇ?'–ಎಂಬ ಪ್ರಶ್ನೆಗೆ ನಾನೇನೆಂದು ಉತ್ತರವನ್ನೀಯಲಿ? 'ಹೆಂಗಸೊಬ್ಬಳ ಮಾತನ್ನು ಕೇಳಿ ಜ್ಯೇಷ್ಠನೂ, ಸಕಲಗುಣಸಂಪನ್ನನೂ ಆದ ಮಗನನ್ನು ದಶರಥನು ಕಾಡಿಗೆ ಕಳುಹಿಸಿಬಿಟ್ಟನು'–ಎಂದು ನನ್ನ ಮುಂದೆಯೇ ಆಡಿಕೊಳ್ಳುವ ದೇವತೆಗಳ ಮಾತನ್ನು ನಾನು ಹೇಗೆ ಸಹಿಸಿಕೊಳ್ಳಲಿ? ಹೇಳು, ಪಾಪಿಷ್ಠಳೇ!

'ಕೈಕೇಯಿಯು ನನ್ನಲ್ಲಿ ನ್ಯಾಸರೂಪವಾಗಿಟ್ಟಿದ್ದ ಎರಡು ವರಗಳನ್ನು ಅವಳ ಅಪೇಕ್ಷೆಯಂತೆ ನನಗೆ ಮನಸ್ಸಿಲ್ಲದಿದ್ದರೂ ಕಾರ್ಯರೂಪಕ್ಕೆ ತರಬೇಕಾಯಿತು. ರಾಮನು ಅರಣ್ಯಕ್ಕೆ ಹೋಗಬೇಕೆಂಬುದು ಅವಳು ಕೇಳಿದ ವರಗಳಲ್ಲಿ ಒಂದಾಗಿತ್ತು. ಈ ಕಾರಣದಿಂದ ವಿಧಿಯಿಲ್ಲದೇ ಸತ್ಯವಾಕ್ಯದ ಪರಿಪಾಲನೆಗಾಗಿ ರಾಮನನ್ನು ಅರಣ್ಯಕ್ಕೆ ಕಳುಹಿಸಬೇಕಾಯಿತು'–ಎಂದು ಸತ್ಯಸಂಗತಿಯನ್ನೇ ಹೇಳಿದರೂ ದೇವತೆಗಳಾಗಲೀ ಮಾನವರಾಗಲೀ ನಂಬುವುದೇ ಇಲ್ಲ.

ಕೈಕೇಯ್ಯಾಃ ಪ್ರಿಯಕಾಮೇಣ ರಾಮಃ ಪ್ರವ್ರಾಜಿತೋ ಮಯಾ ॥

'ಕೈಕೇಯಿಗೆ ಪ್ರಿಯವನ್ನುಂಟುಮಾಡುವ ಅಪೇಕ್ಷೆಯಿಂದಲೇ ದಶರಥನು ರಾಮನನ್ನು ಅರಣ್ಯಕ್ಕೆ ಕಳುಹಿಸಿದನು'–ಎಂದೇ ಎಲ್ಲರೂ ಹೇಳುತ್ತಾರೆ.

ಕೈಕೇಯಿ! ನಿನಗೆ ತಿಳಿದಿರುವಂತೆಯೇ ನನಗೆ ಬಹಳ ಕಾಲ ಮಕ್ಕಳೇ ಆಗಿರಲಿಲ್ಲ. ಅಪುತ್ರವಂತನಾಗಿದ್ದ ನಾನು ಅತ್ಯಂತಶ್ರಮದಿಂದ ಶ್ರಮಸಾಧ್ಯವಾದ ಯಜ್ಞಗಳನ್ನು ಮಾಡಿ ಮಹಾತೇಜಸ್ವಿಯಾದ, ಮಹಾತ್ಮನಾದ ಈ ರಾಮನನ್ನು ಪಡೆದನು. ಅಂತಹ ರಾಮನನ್ನು ನಾನು ಹೇಗೆ ಪರಿತ್ಯಜಿಸಲಿ? ಮಹಾಶೂರನಾದ, ಸಕಲವಿದ್ಯಾಪಾರಂಗತನಾದ, ಕೋಪವನ್ನು ಜಯಿಸಿರುವ

ಕ್ಷಮಾವಂತನಾದ, ಕಮಲದೆಲೆಯಂತೆ ವಿಶಾಲವಾದ ಕಣ್ಣುಗಳುಳ್ಳ ರಾಮನನ್ನು ಹೇಗೆ ಅರಣ್ಯಕ್ಕೆ ಕಳುಹಿಸಲಿ? ಕನ್ನೈದಿಲೆಯಂತೆ ಶ್ಯಾಮಲವರ್ಣನಾಗಿರುವ, ದೀರ್ಘಬಾಹುವಾದ, ಮಹಾಬಲನಾದ, ಲೋಕಾಭಿರಾಮನಾದ ನನ್ನ ರಾಮನನ್ನು ಮಹಾಭಯಂಕರವಾದ ದಂಡಕಾರಣ್ಯಕ್ಕೆ ಹೇಗೆ ಕಳುಹಿಸಲಿ? ಸುಖಾನುಭವಗಳಿಗೆ ಯೋಗ್ಯನಾದ, ದುಃಖಾನುಭವಕ್ಕೆ ಅನರ್ಹನಾದ, ಧೀಮಂತನಾದ ರಾಮನನ್ನು ಕಾಡಿಗೆ ಕಳುಹಿಸಿ ಅವನು ದುಃಖಪಡುವುದನ್ನು ನಾನು ಹೇಗೆ ಕಣ್ಣಿನಿಂದ ನೋಡಲಿ? ದುಃಖವನ್ನು ಅನುಭವಿಸಲು ಅನರ್ಹನಾದ ರಾಮನಿಗೆ ದುಃಖವನ್ನುಂಟುಮಾಡದೇ (ಅವನನ್ನು ಅರಣ್ಯಕ್ಕೆ ಕಳುಹಿಸದೇ) ಈ ಕ್ಷಣದಲ್ಲಿಯೇ ನನ್ನ ಮರಣವಾಗಿ ಬಿಟ್ಟರೆ ನಾನು ಲೋಕಾಂತರದಲ್ಲಾದರೂ ಸುಖವನ್ನು ಹೊಂದುವೆನು.*

ಕ್ರೂರಾತ್ಮಳೇ! ಪಾಪಸಂಕಲ್ಪಳೇ! ಕೈಕೇಯಿ! ಸತ್ಯಪರಾಕ್ರಮನಾದ, ಪ್ರಿಯನಾದ ರಾಮನನ್ನು ಅಪ್ರಿಯವಾದ ವನವಾಸಕ್ಕೇಕೆ ನಿಯೋಜಿಸುವೆ? ನಿನ್ನ ಮಾತಿನಂತೆ ನಾನು ರಾಮನನ್ನು ಅರಣ್ಯಕ್ಕೆ ಕಳುಹಿಸುವುದರಿಂದ ಲೋಕದಲ್ಲಿ ನನಗೆ ಅಳಿಸಲಾಗದಷ್ಟು ಅಪಕೀರ್ತಿಯೂ–ನಿಂದನೆಯೂ ಉಂಟಾಗುತ್ತದೆ.”

ಪರಿಭ್ರಮಣಗೊಂಡ ಬುದ್ಧಿಯಿಂದ ಕೂಡಿದ್ದ ದಶರಥನು ಹೀಗೆ ವಿಲಪಿಸುತ್ತಿರುವಾಗ ಸೂರ್ಯನು ಅಸ್ತಂಗತನಾದನು. ರಾತ್ರಿಯಾಯಿತು. ಚಂದ್ರಮಂಡಲದಿಂದ ಸಮಲಂಕೃತವಾಗಿದ್ದ ಆ ರಾತ್ರಿಯು ಆರ್ತನಾಗಿದ್ದ, ರೋದನಮಾಡುತ್ತಿದ್ದ ರಾಜನಿಗೆ ಪ್ರಕಾಶಮಾನವಾಗಿ ಕಾಣಲಿಲ್ಲ. ವೃದ್ಧನಾದ ದಶರಥರಾಜನು ಕ್ಷಣ-ಕ್ಷಣಕ್ಕೂ ಸುದೀರ್ಘವಾಗಿ ಬಿಸಿಯಾದ ನಿಟ್ಟುಸಿರು

---

* ದಶರಥನ ಅಭಿಪ್ರಾಯವು ಈ ರೀತಿಯಾಗಿರುವುದು : ಈ ಸಮಯದಲ್ಲಿ ಸಾವೊಂದೇ ನನ್ನನ್ನು ಈ ಉಭಯಸಂಕಟದಿಂದ ಉಳಿಸೀತು. ನಾನೀಗಲೇ ಸತ್ತು ಹೋದೆನಾದರೆ ನಾನಿತ್ತ ವರಗಳನ್ನು ಕೈಕೇಯಿಗೆ ಕಾರ್ಯಗತಮಾಡಿಕೊಡುವ ಪ್ರಸಂಗವೇ ಇರುವುದಿಲ್ಲ. ವರಕೊಟ್ಟವನು ಬದುಕಿದ್ದಾಗ ವರವನ್ನು ಕಾರ್ಯಗತ ಮಾಡಿಕೊಡುವಂತೆ ಕೇಳಬಹುದೇ ಹೊರತು ವರಕೊಟ್ಟವನು ಸತ್ತುಹೋದನಂತರ ಆ ವರಗಳ ವಿಷಯವಾಗಿ ಕೈಕೇಯಿಯು ರಾಮನೊಡನೆ ಪ್ರಸ್ತಾಪಮಾಡುವ ಸಾಧ್ಯತೆಯಿಲ್ಲ. ರಾಮನು ಕಾಡಿಗೆ ಹೋಗಬೇಕಾದ ಪ್ರಸಂಗವು ಬರುವುದಿಲ್ಲ. (ಈಗಲೂ

ಗಳನ್ನು ಬಿಡುತ್ತಾ ಆಕಾಶದ ಕಡೆಗೆ ದಿಟ್ಟಿಸಿ ನೋಡುತ್ತಾ ಮಹಾರೋಗದಿಂದ ಪೀಡಿತನಾದವನಂತೆ ರೋದನಮಾಡುತ್ತಿದ್ದನು.

ಅಂತರಿಕ್ಷದ ಕಡೆಗೆ ದಿಟ್ಟಿಸಿ ನೋಡುತ್ತಿದ್ದ ದಶರಥನು ನಕ್ಷತ್ರಮಾಲೆಯಿಂದ ಸಮಲಂಕೃತಳಾಗಿದ್ದ ನಿಶಾದೇವಿಯನ್ನು ದೈನ್ಯದಿಂದ ಪ್ರಾರ್ಥಿಸಿದನು:

ನ ಪ್ರಭಾತಂ ತ್ವಯೇಚ್ಛಾಮಿ ನಿಶೇ ನಕ್ಷತ್ರಭೂಷಣೇ ।
ಕ್ರಿಯತಾಂ ಮೇ ದಯಾ ಭದ್ರೇ ಮಯಾಯಂ ರಚಿತೋಽಞ್ಜಲಿಃ ॥

"ನಕ್ಷತ್ರಗಳಿಂದ ಸಮಲಂಕೃತಳಾದ ನಿಶಾದೇವಿಯೇ! ನಾನು ನಿನ್ನಿಂದ ಪ್ರಭಾತವಾಗುವುದನ್ನು ಇಚ್ಛಿಸುವುದಿಲ್ಲ. ಬೆಳಗಾಗುವುದು ಬೇಡ, ತಾಯೇ! ಕೈಮುಗಿದು ಕೇಳಿಕೊಳ್ಳುತ್ತೇನೆ. ಮಂಗಳಸ್ವರೂಪಳೇ! ನನ್ನ ಮೇಲೆ ದಯೆ ತೋರು. ಬೆಳಗಾಗದಂತೆ ಮಾಡು.

ಅಥ ವಾ ಗಮ್ಯತಾಂ ಶೀಘ್ರಂ ನಾಹಮಿಚ್ಛಾಮಿ ನಿರ್ಘೃಣಾಮ್ ।
ನೃಶಂಸಾಂ ಕೇಕಯೀಂ ದ್ರಷ್ಟುಂ ಯತ್ಕೃತೇ ವ್ಯಸನಂ ಮಹತ್ ॥

ಬೆಳಗಾಗದಂತೆ ಮಾಡಲು ಸಾಧ್ಯವಾಗದಿದ್ದರೆ ಶೀಘ್ರವಾಗಿಯಾದರೂ ಕಳೆದುಹೋಗು ; ಯಾವಳ ಕಾರಣದಿಂದ ನನಗೆ ಈ ಪರಿಯಾದ ದುಃಖ ಉಂಟಾಗಿರುವುದೋ–ಅಂತಹ ದಯಾರಹಿತಳಾದ, ಕ್ರೂರಿಯಾದ ಈ ಕೈಕೇಯಿಯನ್ನು ಬಹಳ ಹೊತ್ತಿನವರೆಗೆ ನೋಡಿಕೊಂಡು ಕುಳಿತಿರಲಾರೆನು."

ರಾಜನು ಹೀಗೆ ನಿಶಾದೇವಿಗೆ ಹೇಳಿ ಕೈಮುಗಿದುಕೊಂಡು ಪುನಃ ಕೈಕೇಯಿಯನ್ನು ಪ್ರಸನ್ನಗೊಳಿಸಲು ಪ್ರಯತ್ನಿಸುತ್ತಾ ಹೇಳಿದನು :

ಸಹ ಅನೇಕರು ಇದೇ ರೀತಿಯಾದ ಉಭಯಸಂಕಟಕ್ಕೆ ಸಿಕ್ಕಿ ಪ್ರಾಣನೀಗಿಕೊಳ್ಳುವ ಪ್ರಸಂಗಗಳನ್ನು ನಾವು ನೋಡುತ್ತಿದ್ದೇವಲ್ಲವೇ!) 'ಸಂಕ್ರಮಣಂ' ಎಂಬುದಕ್ಕೆ ನೇರವಾಗಿ ಮರಣಾರ್ಥವು ಬರುವುದಿಲ್ಲ. ಒಂದು ಸ್ಥಾನದಿಂದ ಮತ್ತೊಂದು ಸ್ಥಾನಕ್ಕೆ ಹೋಗುವುದಕ್ಕೆ ಸಂಕ್ರಮಣವೆಂದು ಹೆಸರು. ಸೂರ್ಯನು ಒಂದು ರಾಶಿಯನ್ನು ಬಿಟ್ಟು ಮತ್ತೊಂದು ರಾಶಿಗೆ ಹೋಗುವುದಕ್ಕೆ ಸಂಕ್ರಮಣವೆನ್ನುತ್ತಾರೆ. 'ತೃಣ ಜಲೂಕಾನ್ಯಾಯದಂತೆ' ಇಲ್ಲಿ ಜೀವನು ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹೋಗುವುದಕ್ಕೆ 'ಸಂಕ್ರಮಣ ಅರ್ಥಾತ್ ಮರಣ' ಎಂದು ಅರ್ಥಮಾಡಬೇಕು.

ಸಾಧುವೃತ್ತಸ್ಯ ದೀನಸ್ಯ ತ್ವದ್ಗತಸ್ಯ ಗತಾಯುಷಃ ।
ಪ್ರಸಾದಃ ಕ್ರಿಯತಾಂ ಭದ್ರೇ ದೇವಿ ರಾಜ್ಞೋ ವಿಶೇಷತಃ ॥೨೧॥

"ಮಂಗಳಸ್ವರೂಪಳೇ! ದೇವಿ! ಕಪಟ-ಮೋಸಗಳೊಂದನ್ನೂ ತಿಳಿಯದ, ಸಾಧುವೃತ್ತಿಯುಳ್ಳ, ದೀನಸ್ವಭಾವದ, ನಿನ್ನ ಅಧೀನನಾಗಿರುವ, ಆಯುಷ್ಯದ ಅಂತ್ಯಭಾಗವನ್ನು ಸಮೀಪಿಸಿರುವ, ಮೇಲಾಗಿ ರಾಜನೂ ಆಗಿರುವ ನನ್ನ ವಿಷಯದಲ್ಲಿ ಪ್ರಸನ್ನಳಾಗು.

ಶೂನ್ಯೇ ನ ಖಲು ಸುಶ್ರೋಣಿ ಮಯೇದಂ ಸಮುದಾಹೃತಮ್ ।
ಕುರು ಸಾಧು ಪ್ರಸಾದಂ ಮೇ ಬಾಲೇ ಸಹೃದಯಾ ಹ್ಯಸಿ ॥೨೨॥

ದುಃಖಪರಿತಪ್ತನಾದ ಕಾರಣದಿಂದ ಯಾವುದನ್ನು ಹೇಳಬೇಕು ; ಯಾವುದನ್ನು ಹೇಳಬಾರದು—ಎಂಬ ವಿವೇಕದಿಂದ ಶೂನ್ಯನಾಗಿ ನಾನು ನಿನ್ನ ವಿಷಯದಲ್ಲಿ ಹಲವಾರು ಕಠಿಣವಾದ ಮಾತುಗಳನ್ನಾಡಿದೆನು. ಅದಕ್ಕಾಗಿ ಕೋಪಿಸಿಕೊಳ್ಳಬೇಡ. ನೀನು ಸಹೃದಯಳಾಗಿರುವೆ. (ನನ್ನ ಮನಸ್ಸಿನಂತೆಯೇ ನಿನ್ನ ಮನಸ್ಸೂ ಇದೆ.) ಆದುದರಿಂದ ನನ್ನ ವಿಷಯದಲ್ಲಿ ಪ್ರಸನ್ನಳಾಗು.*

ಪ್ರಸೀದ ದೇವಿ ರಾಮೋ ಮೇ ತ್ವದ್ದತ್ತಂ ರಾಜ್ಯಮವ್ಯಯಮ್ ।
ಲಭತಾಮಸಿತಾಪಾಙ್ಗೇ ಯಶಃ ಪರಮವಾಪ್ನುಹಿ ॥೨೩॥

ಕಪ್ಪಾದ ಕಡೆಗಣ್ಣುಗಳುಳ್ಳವಳೇ! ಪ್ರಸನ್ನಳಾಗು. ನಾನಿತ್ತಿರುವ

---

* 'ಶೂನ್ಯೇ-ನ, ಶೂನ್ಯೇನ' ಎಂದು ಎರಡು ರೀತಿಯಲ್ಲಿ ಪದವಿಭಾಗಮಾಡಿ ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. (೧) ಶೂನ್ಯೇನ ದುಃಖವಶಾದ್ವಕ್ತವ್ಯಾವಕ್ತವ್ಯವಿವೇಕರಹಿತೇನ. ದುಃಖಪರಿತಪ್ತನಾದ ಕಾರಣದಿಂದ ಯಾವುದನ್ನು ಹೇಳಬೇಕು ; ಯಾವುದನ್ನು ಹೇಳಬಾರದು ಎಂಬ ವಿವೇಚನಾಶೂನ್ಯನಾದ, (೨) ಜನರಹಿತೇನ ಹೇತುನಾ = ಬೇರಾರೂ ಇಲ್ಲದ ಕಾರಣದಿಂದ. (೩) ದೀನೇನ ಮಯಾ = ದೀನನಾದ ನನ್ನಿಂದ. (೪) ಶೂನ್ಯೇ-ನ, ನಿರ್ಜನಪ್ರದೇಶದಲ್ಲಿ ನಾನು ರಾಮಾಭಿಷೇಕದ ವಿಷಯವನ್ನು ಘೋಷಿಸಿರುವುದಿಲ್ಲ. ರಾಜ-ಮಹಾರಾಜರೂ, ಋಷಿ-ಮಹರ್ಷಿಗಳೂ, ಬ್ರಾಹ್ಮಣೋತ್ತಮರೂ ಸೇರಿದ್ದ ಮಹಾಸಭೆಯಲ್ಲಿ ರಾಮನಿಗೆ ಅಭಿಷೇಕಮಾಡುವುದಾಗಿ ಘೋಷಿಸಿರುತ್ತೇನೆ. ಆದುದರಿಂದ ಸಭ್ಯರು ನನ್ನನ್ನು ಅಪಹಾಸ್ಯಮಾಡಲು ಅವಕಾಶವಾಗದಂತೆ ನನ್ನ ವಿಷಯದಲ್ಲಿ ಸುಪ್ರಸನ್ನಳಾಗು.

ವರದ ಕಾರಣದಿಂದಾಗಿ ರಾಜ್ಯವು ನಿನ್ನದಾಯಿತೆಂದೇ ಭಾವಿಸುವೆನು. ನಿನ್ನ ಅಧೀನವಾಗಿರುವ ಈ ರಾಜ್ಯವನ್ನು ರಾಮನಿಗೆ ಕೊಡು. ನಿನ್ನಿಂದ ಕೊಡಲ್ಪಡುವ ಶಾಶ್ವತವಾದ ಈ ರಾಜ್ಯವನ್ನು ರಾಮನು ಪಡೆದುಕೊಳ್ಳಲಿ. ಹೀಗೆ ಮಾಡಿದೆಯಾದರೆ ನೀನು ಅಪಾರವಾದ ಯಶಸ್ಸನ್ನು ಗಳಿಸುವೆ.

ಮಮ ರಾಮಸ್ಯ ಲೋಕಸ್ಯ ಗುರೂಣಾಂ ಭರತಸ್ಯ ಚ ।
ಪ್ರಿಯಮೇತದ್ಗುರುಶ್ರೋಣಿ ಕುರು ಚಾರುಮುಖೇಕ್ಷಣೇ ॥೨೪॥

ಸುಂದರವಾದ ಮುಖ-ನೇತ್ರಗಳುಳ್ಳವಳೇ! ದಪ್ಪವಾದ ನಿತಂಬವುಳ್ಳ ವಳೇ! ನನಗೂ, ರಾಮನಿಗೂ, ಪ್ರಜೆಗಳಿಗೂ, ಗುರುಜನರಿಗೂ ಮತ್ತು ಭರತನಿಗೂ ಪ್ರಿಯವಾಗುವ ಈ ಕಾರ್ಯವನ್ನು ಮಾಡು.”

ವಿಶುದ್ಧವಾದ ಮನೋಭಾವವುಳ್ಳವನಾಗಿದ್ದ, ಶುದ್ಧಾತ್ಮನಾದ, ದೀನ ನಾದ, ಅತ್ತು-ಅತ್ತು ಕೆಂಪಾದ ಕಣ್ಣುಗಳಿಂದ ಕೂಡಿದ್ದ ಪತಿಯಾದ ದಶರಥ ರಾಜನ ವಿಚಿತ್ರವಾದ, ಕರುಣಾಜನಕವಾದ ವಿಲಾಪವನ್ನು ಕೇಳಿಯೂ ಕ್ರೂರಹೃದಯಳಾದ, ದುಷ್ಟಾತ್ಮಳಾದ ಕೈಕೇಯಿಯು ರಾಜನು ಹೇಳಿದಂತೆ ಮಾಡಲಿಲ್ಲ. ತನಗೆ ಪ್ರತಿಕೂಲವಾಗಿಯೇ ಮಾತನಾಡುತ್ತಿದ್ದ, ಬೇರೆ ಯಾವುದರಿಂದಲೂ ತೃಪ್ತಳಾಗದ, ಪ್ರಿಯೆಯಾದ ಕೈಕೇಯಿಯನ್ನು ಗಮನಿಸಿದ ದಶರಥನು ತಪ್ಪಿಸಲು ಸಾಧ್ಯವಾಗದ ಮಗನ ವನವಾಸವನ್ನೇ ಚಿಂತಿಸುತ್ತಾ ದುಃಖದ ಉದ್ವೇಗದಿಂದ ಪುನಃ ಮೂರ್ಛಿತನಾಗಿ ಭೂಮಿಯಲ್ಲಿ ಕುಸಿದುಬಿದ್ದನು.

ಹೀಗೆ ವ್ಯಥೆಗೊಂಡು ದುಃಖಿಸುತ್ತಾ ಭಯಂಕರವಾಗಿ ನಿಟ್ಟುಸಿರು ಬಿಡುತ್ತಿದ್ದ ಒಳ್ಳೆಯ ಮನಸ್ಸುಳ್ಳವನಾಗಿದ್ದ ರಾಜನಿಗೆ ಆ ರಾತ್ರಿಯು ಕಳೆಯಿತು. ಮಂಗಳವಾದ್ಯಗಳಿಂದಲೂ ವಂದಿ-ಮಾಗಧರಿಂದಲೂ ಎಚ್ಚರ ಗೊಳಿಸಲ್ಪಡುತ್ತಿದ್ದ ರಾಜನು–ಎಲ್ಲರನ್ನೂ ಹಿಂದಕ್ಕೆ ಕಳುಹಿಸಿದನು.

೧೩ನೆಯ ಸರ್ಗವು ಮುಗಿಯಿತು.

ಕೈಕೇಯಿಯು ರಾಜನಿಗೆ ಸತ್ಯನಿಷ್ಠೆಯಲ್ಲಿ ದೃಢವಾಗಿರಲು ಹೇಳಿ ವರಗಳನ್ನು ಕೊಡುವಂತೆ ಆಗ್ರಹಪಡಿಸಿದುದು : ವಸಿಷ್ಠರ ಆಗಮನವನ್ನು ತಿಳಿಸಲು ಅಂತಃಪುರಕ್ಕೆ ಹೋದ ಸುಮಂತ್ರನು ರಾಜನ ಆಜ್ಞಾನುಸಾರವಾಗಿ ಶ್ರೀರಾಮನನ್ನು ಕರೆತರಲು ಹೋದುದು

ಪುತ್ರಶೋಕಾರ್ದಿತಂ ಪಾಪಾ ವಿಸಂಜ್ಞಂ ಪತಿತಂ ಭುವಿ ।
ವಿವೇಷ್ಟಮಾನಮುತ್ಪ್ರೇಕ್ಷ್ಯ ಸೈಕ್ಷ್ವಾಕಮಿದಮಬ್ರವೀತ್ ॥೧॥

ಪುತ್ರಶೋಕಪೀಡಿತನಾದ, ಮೂರ್ಛಿತನಾಗಿ ನೆಲದ ಮೇಲೆ ಬಿದ್ದಿದ್ದ, ದುಃಖೋದ್ವೇಗಗಳಿಂದ ವಿಧ-ವಿಧವಾದ ಚೇಷ್ಟೆಗಳನ್ನು (ಹಣೆಚಚ್ಚಿಕೊಳ್ಳುವುದು, ಗೋಳಾಡುವುದು, ಕುಪಿತನಾಗುವುದು, ಹಲ್ಲುಕಡಿಯುವುದು ಇತ್ಯಾದಿಗಳನ್ನು) ಮಾಡುತ್ತಿದ್ದ ಇಕ್ಷ್ವಾಕುವಂಶಸಂಭೂತನಾದ ದಶರಥ ರಾಜನಿಗೆ ಕಡುಪಾಪಿಯಾದ ಕೈಕೇಯಿಯು ಹೇಳಿದಳು :

"ಮಹಾರಾಜ! ನಾನು ಹೇಳಿದುದನ್ನು ನಡೆಸಿಕೊಡುವೆನೆಂದು ರಾಮನ ಮೇಲೂ, ಪುಣ್ಯದ ಮೇಲೂ ಆಣೆಯಿಟ್ಟು ಹೇಳಿ, ನಾನು ಕೇಳಿದಾಗ ಮಹಾಪಾಪಮಾಡಿದವನಂತೆ ಭಾವಿಸಿಕೊಂಡು ದುಃಖಪೀಡಿತನಾಗಿ ನೆಲದ ಮೇಲೇಕೆ ಮಲಗಿರುವೆ? ಇಕ್ಷ್ವಾಕುವಂಶೀಯರಿಗೆ ಉಚಿತವಾದ ಸತ್ಯವಾಕ್ಯ ಪರಿಪಾಲನೆಯಲ್ಲಿ ಸ್ಥಿರವಾಗಿ ನಿಲ್ಲುವುದು ನಿನಗೆ ಉಚಿತವಾಗಿ ಕಾಣುತ್ತದೆ.

ಆಹುಃ ಸತ್ಯಂ ಹಿ ಪರಮಂ ಧರ್ಮಂ ಧರ್ಮವಿದೋ ಜನಾಃ ।
ಸತ್ಯಮಾಶ್ರಿತ್ಯ ಹಿ ಮಯಾ ತ್ವಂ ಚ ಧರ್ಮಂ ಪ್ರಚೋದಿತಃ ॥೩॥

ಧರ್ಮವನ್ನು ತಿಳಿದವರು ಸತ್ಯವಾಕ್ಯಪರಿಪಾಲನೆಯೇ ಪರಮೋತ್ಕೃಷ್ಟವಾದ ಧರ್ಮವೆಂದು ಹೇಳುತ್ತಾರೆ. ಈ ಸತ್ಯನಿಷ್ಠೆಯನ್ನೇ ಆಶ್ರಯಿಸಿ ನಾನು ಧರ್ಮಮಾರ್ಗದಲ್ಲಿ ನಡೆಯುವಂತೆ ನಿನ್ನನ್ನು ಪ್ರಚೋದಿಸಿದೆನು. ನಾನು ಈ ಹಿಂದೆಯೇ ಒಮ್ಮೆ ಹೇಳಿದಂತೆ ಮಹಾನುಭಾವನಾದ ಜಗತೀಪತಿಯಾದ ಶೈಬ್ಯನು ಕಪೋತಪಕ್ಷಿಗೆ ಸಂರಕ್ಷಣೆಯ ಅಭಯವನ್ನಿತ್ತು, ಆಹಾರ

ವನ್ನಪೇಕ್ಷಿಸಿ ಕಪೋತವನ್ನು ಹಿಂಬಾಲಿಸಿ ಬಂದ ಗಿಡಗಕ್ಕೆ ತನ್ನ ಶರೀರವನ್ನೇ ಕತ್ತರಿಸಿ ಮಾಂಸವನ್ನು ಕೊಟ್ಟು ತೃಪ್ತಿಪಡಿಸಿ ಉತ್ತಮವಾದ ಗತಿಯನ್ನೇ ಹೊಂದಿದನು. ಅದೇ ರೀತಿಯಲ್ಲಿ ತೇಜಸ್ವಿಯಾದ ಅಲರ್ಕನೆಂಬ ರಾಜನೂ ವೇದ-ವೇದಾಂಗಪಾರಂಗತನಾದ, ಯಾಚಕನಾದ ಅಂಧಬ್ರಾಹ್ಮಣನೊಬ್ಬನಿಗೆ ಯಾಚಿಸಿದುದನ್ನು ಕೊಡುವೆನೆಂದು ಪ್ರತಿಜ್ಞೆಮಾಡಿ ಸ್ವಲ್ಪವಾದರೂ ಖಿನ್ನನಾಗದೇ ತನ್ನೆರಡು ಕಣ್ಣುಗಳನ್ನೂ ತೆಗೆದು ಬ್ರಾಹ್ಮಣನಿಗೆ ದಾನಮಾಡಿದನು.* ಸರಿತ್ಪತಿಯಾದ ಸಮುದ್ರರಾಜನೂ ದಡವನ್ನತಿಕ್ರಮಿಸಿ ಹೋಗುವುದಿಲ್ಲವೆಂದು ದೇವತೆಗಳಿಗೆ ಮಾತುಕೊಟ್ಟು ಸತ್ಯವಾಕ್ಯಕ್ಕೆ ಕಟ್ಟುಬಿದ್ದು ಒಮ್ಮೆಯಾದರೂ ತನ್ನ ತೀರವನ್ನು ಉಲ್ಲಂಘಿಸಿರುವುದಿಲ್ಲ.

ಸತ್ಯಮೇಕಪದಂ ಬ್ರಹ್ಮ ಸತ್ಯೇ ಧರ್ಮಃ ಪ್ರತಿಷ್ಠಿತಃ ।
ಸತ್ಯಮೇವಾಕ್ಷಯಾ ವೇದಾಃ ಸತ್ಯೇನೈವಾಪ್ಯತೇ ಪರಮ್ ॥೭॥

'ಓಂ ತದ್ಬ್ರಹ್ಮ' 'ಓಮಿತ್ಯೇಕಾಕ್ಷರಂ ಬ್ರಹ್ಮ'–ಮುಂತಾದ ಶ್ರುತಿವಚನಗಳಿಗೆ ಅನುಸಾರವಾಗಿ 'ಓಂ' ಎಂಬ ಒಂದು ಅಕ್ಷರವೇ ಬ್ರಹ್ಮಾತ್ಮಕವಾಗಿದೆ. ಈ ಅಕ್ಷರವೇ ಸತ್ಯರೂಪವಾದುದು. ಸತ್ಯದಲ್ಲಿ ಧರ್ಮವು ಪ್ರತಿಷ್ಠಿತವಾಗಿದೆ. ಕ್ಷಯ-ವೃದ್ಧಿಗಳಿಲ್ಲದ ವೇದಗಳೂ ಸತ್ಯದ ಸ್ವರೂಪಗಳೇ ಆಗಿವೆ. ಪರಮೋತ್ಕೃಷ್ಟವಾದ ಲೋಕಗಳೂ ಸತ್ಯದ ಅವಲಂಬನೆಯಿಂದಲೇ ಲಭಿಸುತ್ತವೆ.

ಆದುದರಿಂದ, ಮಹಾರಾಜ! ನಿನ್ನ ಬುದ್ಧಿಯು ಧರ್ಮದಲ್ಲಿಯೇ ಸ್ಥಿರವಾಗಿರುವುದಾದರೆ ಸತ್ಯಮಾರ್ಗವನ್ನು ಅನುಸರಿಸು. ನೀನು ವರದನಾಗಿರುವೆ. ನನಗಾಗಲೇ ವರಗಳನ್ನು ದಯಪಾಲಿಸಿರುವೆ. ಪ್ರತಿಜ್ಞಾವಚನದಂತೆ ನೀನಿತ್ತಿರುವ ಆ ವರಗಳನ್ನು ಸಫಲಗಳನ್ನಾಗಿ ಮಾಡು. ನೀನಿತ್ತಿರುವ ಆ ವರಗಳು ನಾನಪೇಕ್ಷಿಸಿರುವ ಫಲವನ್ನೀಯಲಿ. ಧರ್ಮದ ಅಪೇಕ್ಷೆಯಿಂದ ಮತ್ತು ನನ್ನ ಪ್ರೇರಣೆಯಿಂದ ರಾಮನನ್ನು ಅರಣ್ಯಕ್ಕೆ ಕಳುಹಿಸು.

---

* ಒಬ್ಬರ ಕಣ್ಣಗಳನ್ನು ಮತ್ತೊಬ್ಬರಿಗೆ ಜೋಡಿಸುವ ಶಸ್ತ್ರಚಿಕಿತ್ಸೆಯು ಹಿಂದೆಯೇ ನಮ್ಮ ದೇಶದಲ್ಲಿದ್ದಿತೆಂಬುದಕ್ಕೆ ಇದು ಒಂದು ನಿದರ್ಶನವಾಗಿದೆ.

ಮೂರನೆಯ ಬಾರಿಗೆ ಹೇಳುತ್ತಿದ್ದೇನೆ. ಆರ್ಯನೇ! ಕೇಳಿದ ವರವನ್ನು ಕೊಡುವೆನೆಂಬುದಾಗಿ ಪ್ರತಿಜ್ಞೆಯನ್ನು ಮಾಡಿ ಈಗ ನೀನು ಆ ನಿನ್ನ ಪ್ರತಿಜ್ಞೆಯನ್ನು ನಡೆಸಿಕೊಡದಿದ್ದರೆ ನಿನ್ನೆದುರಿನಲ್ಲಿಯೇ ಪ್ರಾಣಗಳನ್ನು ಪರಿತ್ಯಜಿಸುತ್ತೇನೆ."

ಯಾವ ವಿಧವಾದ ಪಾಪಶಂಕೆಯೂ ಇಲ್ಲದಿದ್ದ ಕೈಕೇಯಿಯಿಂದ ಹೀಗೆ ಪ್ರಚೋದಿತನಾದ ರಾಜನು ಸತ್ಯವೆಂಬ ಪಾಶದಿಂದ ಬಂಧಿಸಲ್ಪಟ್ಟವನಾಗಿ ಅದರಿಂದ ಬಿಡುಗಡೆಹೊಂದಲು ಸಮರ್ಥನಾಗಲಿಲ್ಲ. ಇಂದ್ರನ ಪ್ರಾರ್ಥನೆ ಯಂತೆ ವಾಮನನಿಂದ ಯಾಚಿಸಲ್ಪಟ್ಟ ಮೂರು ಹೆಜ್ಜೆಗಳ ದಾನವೆಂಬ ಪಾಶದಿಂದ ಬಂಧಿಸಲ್ಪಟ್ಟ ಬಲಿಚಕ್ರವರ್ತಿಯಂತೆ, ಸತ್ಯ-ಧರ್ಮ-ಪ್ರತಿಜ್ಞೆಗಳೆಂಬ ಪಾಶಗಳಿಂದ ಬಿಗಿಯಲ್ಪಟ್ಟಿದ್ದ ದಶರಥನು ಬೇರೆಯ ಮಾರ್ಗವಿಲ್ಲದೇ ತನ್ನ ಪ್ರಿಯಸುತನನ್ನು ಕಾಡಿಗೆ ಕಳುಹಿಸಲೇಬೇಕಾಯಿತು.

ಗಾಡಿಯ ಎರಡು ಚಕ್ರಗಳ ಮಧ್ಯದಲ್ಲಿ ನೊಗಕ್ಕೆ ಹೂಡಲ್ಪಟ್ಟು ತುಂಬಿದ ಗಾಡಿಯನ್ನು ಎಳೆಯುವ ಎತ್ತಿನೋಪಾದಿಯಲ್ಲಿ ದಶರಥನು– 'ಪ್ರತಿಜ್ಞಾಭಂಗ, ಇಲ್ಲವೇ ರಾಮನ ವನವಾಸ'–ಎಂಬ ಎರಡು ಚಕ್ರಗಳ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡು ಸತ್ಯವೆಂಬ ಪಾಶದಿಂದ ಬಂಧಿಸಲ್ಪಟ್ಟವನಾಗಿ ಬಿಡಿಸಿಕೊಳ್ಳಲು ಯತ್ನಿಸಿ ಸಾಧ್ಯವಾಗದೇ ಉದ್ವಿಗ್ನಹೃದಯನೂ, ಕಳೆಗುಂದಿದ ಮುಖವುಳ್ಳವನೂ ಆದನು. ಆ ಸಮಯದಲ್ಲಿ ದಶರಥನ ಕಣ್ಣುಗಳಲ್ಲಿ ತೇಜಸ್ಸೆಂಬುದೇ ಇರಲಿಲ್ಲ. ಶೂನ್ಯವಾದ ದೃಷ್ಟಿಯಿಂದ ಪ್ರಪಂಚವನ್ನು ನೋಡುತ್ತಿರುವನೋ ಎಂಬಂತೆ ಕಾಣುತ್ತಿದ್ದ ದಶರಥನು ಬಹಳ ಕಷ್ಟದಿಂದ ಮನಸ್ಸನ್ನು ಸ್ಥಿರಪಡಿಸಿಕೊಂಡು ಕೈಕೇಯಿಗೆ ಹೇಳಿದನು :

ಯಸ್ತೇ ಮನ್ತ್ರಕೃತಃ ಪಾಣಿರಗ್ನೌ ಪಾಪೇ ಮಯಾ ಧೃತಃ ।
ತಂ ತ್ಯಜಾಮಿ ಸ್ವಯಂ ಚೈವ ತವ ಪುತ್ರಂ ಸಹ ತ್ವಯಾ ॥೧೪॥

"ಪಾಪಾತ್ಮಳೇ! ಯಾವ ನಿನ್ನ ಕೈಯನ್ನು ಯಜ್ಞೇಶ್ವರನ ಸಮ್ಮುಖದಲ್ಲಿ ಮಂತ್ರಪೂರ್ವಕವಾಗಿ ಪರಿಗ್ರಹಿಸಿದೆನೋ–ಆ ನಿನ್ನ ಕೈಯ್ಯನ್ನಿಂದು ಪರಿತ್ಯಜಿಸುತ್ತೇನೆ, ನಿನ್ನಲ್ಲಿ ಹುಟ್ಟಿರುವ ಆ ನಿನ್ನ ಮಗ ಭರತನನ್ನು ಕೂಡ ನಿನ್ನೊಡನೆಯೇ ಪರಿತ್ಯಜಿಸುತ್ತೇನೆ."

ದಶರಥನು ತವಕದಿಂದ ಹೇಳಿದನು :

"ದೇವಿ! ಸೂರ್ಯನಿಗೆ ಅಭಿಮುಖಳಾಗಿ ನಿಶಾದೇವಿಯು ಹೊರಟು ಹೋದಳು. (ರಾತ್ರಿಯು ಕಳೆದುಹೋಯಿತು.) ರಾಮನ ಪಟ್ಟಾಭಿಷೇಕಕ್ಕಾಗಿ ಗುರುಜನರು ನನ್ನ ಬಳಿಗೆ ಬಂದು ಆತುರಪಡಿಸುತ್ತಾರೆ. ಇದು ನಿಶ್ಚಯ. ಈಗೇನು ಮಾಡಲಿ? ಅವರಿಗೆ ಏನೆಂದು ಉತ್ತರ ಹೇಳಲಿ? ರಾಮನ ಪಟ್ಟಾಭಿಷೇಕಕ್ಕಾಗಿ ಸಂಭಾರಗಳೆಲ್ಲವೂ ಸಿದ್ಧವಾಗಿವೆ. ಎಲ್ಲ ಸಿದ್ಧತೆಗಳೂ ನಡೆದುಹೋಗಿವೆ. ಈಗ ಅವುಗಳ ವಿನಿಯೋಗವಾದರೂ ಹೇಗೆ? (ಆ ಸಂಭಾರಗಳಿಂದ ಭರತನಿಗೆ ಪಟ್ಟಗಟ್ಟಬೇಕೆಂಬ ಕೈಕೇಯಿಯ ಮಾತು ರಾಜನಿಗೆ ಹಿಡಿಸಲಿಲ್ಲ.) ರಾಮನ ಪಟ್ಟಾಭಿಷೇಕಕ್ಕೆಂದು ಸಿದ್ಧಪಡಿಸಿರುವ ಈ ಸಾಮಗ್ರಿಗಳಿಂದಲೇ ರಾಮನು ನನ್ನ ಉತ್ತರಕ್ರಿಯೆಗಳನ್ನು ಮಾಡಲಿ. ಆದರೆ ನೀನಾಗಲೀ ನಿನ್ನ ಮಗನಾಗಲೀ ನನಗೆ ಉತ್ತರಕ್ರಿಯಾದಿಗಳನ್ನು ಮಾಡಲೇಬಾರದು.

ಅಶುಭಾಚಾರಳೇ! ನೀನು ರಾಮನ ಪಟ್ಟಾಭಿಷೇಕಕ್ಕೆ ವಿಘ್ನವನ್ನೇ ಉಂಟುಮಾಡಿದಲ್ಲಿ ನಾನು ನನ್ನ ಪ್ರಜೆಗಳ ಮತ್ತು ಗುರುಜನರ ಮುಖ ಗಳನ್ನು ನೋಡಲು ಖಂಡಿತವಾಗಿಯೂ ಸಮರ್ಥನಾಗಲಾರೆನು. ಹಿಂದೆ ನಾನು ರಾಮನಿಗೆ ಪಟ್ಟಗಟ್ಟುವೆನೆಂದು ಹೇಳಿದೊಡನೆಯೇ ಪ್ರಜೆಗಳೆಲ್ಲರೂ ಆನಂದಭರಿತರಾದರು. ಆನಂದದಿಂದ ಪ್ರಫುಲ್ಲಿತವಾಗಿದ್ದ ಅವರ ಮುಖ ಗಳನ್ನು ಆಗ ನಾನು ನೋಡಿದ್ದೆನು. 'ರಾಮನ ಪಟ್ಟಾಭಿಷೇಕವು ನಿಂತು ಹೋಯಿತು ; ರಾಮನು ಕಾಡಿಗೆ ಹೋಗುತ್ತಾನೆ'–ಎಂಬ ಕರ್ಣಕಠೋರ ವಾದ ಮಾತನ್ನು ಕೇಳಿದೊಡನೆಯೇ ನನ್ನ ಪ್ರಜೆಗಳ ಹರ್ಷವು ಉಡುಗಿ ಹೋಗುತ್ತದೆ. ಆನಂದವು ಕುಗ್ಗಿಹೋಗುತ್ತದೆ. ದುಃಖದಿಂದ ತಲೆಗಳನ್ನು ತಗ್ಗಿಸುತ್ತಾರೆ. ಅಂತಹವರ ಕುಂದಿದ ಮುಖಗಳನ್ನು ನಾನು ಹೇಗೆ ನೋಡಲಿ?"

ಮಹಾತ್ಮನಾದ ದಶರಥನು ಕೈಕೇಯಿಯೊಡನೆ ಹೀಗೆ ಹೇಳುತ್ತಿರು ವಾಗಲೇ ಚಂದ್ರನಿಂದಲೂ, ನಕ್ಷತ್ರಗಳ ಮಾಲೆಗಳಿಂದಲೂ ಸಮಂಲಕೃತ ವಾಗಿದ್ದ ರಾತ್ರಿಯು ಕಳೆದು ಪ್ರಭಾತವಾಯಿತು.

(ರಾಜನು ಗೋಳಾಡುತ್ತಿದ್ದರೂ, ಕಂಗೆಟ್ಟು ಬಾರಿ-ಬಾರಿಗೂ ಮೂರ್ಛೆಹೋಗುತ್ತಿದ್ದರೂ, ಸಾಯುತ್ತೇನೆಂದು ಹೇಳುತ್ತಿದ್ದರೂ, ಪತ್ನೀ-ಪುತ್ರರೆಲ್ಲರನ್ನೂ ಪರಿತ್ಯಜಿಸುವೆನೆಂದು ಭಯಪಡಿಸಿದರೂ, ಯಥಾವತ್ತಾಗಿ ಕಾಲುಗಳಿಗೇ ಬಿದ್ದು ಬೇಡಿಕೊಂಡರೂ–ಕೈಕೇಯಿಯ ನಿರ್ಧಾರವು ಬದಲಾಗಲೇ ಇಲ್ಲ.)

ಮಾತನಾಡುವುದರಲ್ಲಿ ಬಹಳ ಚತುರಳಾಗಿದ್ದ, ಕ್ರೋಧಮೂರ್ಛಿತಳಾಗಿದ್ದ, ಪಾಪಭೂಯಿಷ್ಠವಾದ ವ್ಯವಹಾರವುಳ್ಳ ಕೈಕೇಯಿಯು ದಶರಥನೊಡನೆ ಹೇಳಿದಳು :

ಕಿಮಿದಂ ಭಾಷಸೇ ರಾಜನ್ವಾಕ್ಯಮಜ್ಗರುಜೋಪಮಮ್ ।
ಆನಾಯಯಿತುಮಕ್ಲಿಷ್ಟಂ ಪುತ್ರ ರಾಮಮಿಹಾರ್ಹಸಿ ॥೨೦॥

"ಮಹಾರಾಜ! ಸರ್ವಾಂಗಗಳಲ್ಲಿಯೂ ವ್ಯಾಪಿಸಿರುವ ಮಹಾರೋಗದಂತಿರುವ ಅತ್ಯಂತಕಠಿಣವಾದ ಇಂತಹ ಮಾತುಗಳನ್ನೇಕೆ ಆಡುತ್ತಿರುವೆ? ಕಷ್ಟಸಾಧ್ಯವಾದ ಕಾರ್ಯಗಳನ್ನು ಬಹಳ ಸುಲಭವಾಗಿ ಮಾಡುವ ಸಾಮರ್ಥ್ಯವಿರುವ ರಾಮನನ್ನು ಈಗಲೇ ಕರೆಸುವುದು ನಿನಗೆ ಯೋಗ್ಯವಾಗಿದೆ.*

ಸ್ಥಾಪ್ಯ ರಾಜ್ಯೇ ಮಮ ಸುತಂ ಕೃತ್ವಾ ರಾಮಂ ವನೇಚರಮ್ ।
ನಿಃಸಪತ್ನಾಂ ಚ ಮಾಂ ಕೃತ್ವಾ ಕೃತಕೃತ್ಯೋ ಭವಿಷ್ಯಸಿ ॥೨೧॥

ನನ್ನ ಮಗನನ್ನು ರಾಜ್ಯಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿ, ರಾಮನನ್ನು ವನಚರನನ್ನಾಗಿ ಮಾಡಿ (ಅರಣ್ಯಕ್ಕೆ ಕಳುಹಿಸಿ) ನನ್ನನ್ನೂ ಶತ್ರುರಹಿತಳನ್ನಾಗಿ (ಸವತಿಯರ ಉಪಟಳದಿಂದ ವಿಹೀನಳನ್ನಾಗಿ) ಮಾಡು. ಹೀಗೆ ಮಾಡುವುದರಿಂದ ನೀನು ಕೃತಕೃತ್ಯನಾಗುವೆ.[1]"

---

* ಬರೋಡಾದ ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿರುವ ಪುಸ್ತಕದಲ್ಲಿ ಯಸ್ತೇ ಮನ್ತ್ರಕೃತಃ ಪಾಣಿಃ ॥೧೪॥ ಶ್ಲೋಕದಿಂದ ಕಿಮಿದಂ ಭಾಷಸೇ ರಾಜನ್ ॥೨೦॥ ವರೆಗಿನ ಶ್ಲೋಕಗಳಿರುವುದಿಲ್ಲ. ಇಲ್ಲಿ ಕೈಕೇಯಿಯು ಹೇಳಿರುವುದು ೧೪ನೆಯ ಶ್ಲೋಕಕ್ಕೆ ಅನ್ವಯಿಸಿದಂತಿದೆ. ಆ ಶ್ಲೋಕಗಳನ್ನು ಬಿಟ್ಟು ಉಳಿದ ಶ್ಲೋಕಗಳು ಮಹಾರೋಗದಷ್ಟು ಕಾಠಿಣ್ಯದಿಂದ ಕೂಡಿರುವುದಿಲ್ಲ.

[1] ನಿಃಸಪತ್ನಾಂ ಚ ಮಾಂ ಕೃತ್ವಾ ಎಂದು ಶ್ಲೋಕದ ಪಾದವಿದೆ. ಸವತಿಯರಿಂದ ರಹಿತಳನ್ನಾಗಿ ಮಾಡಿ–ಎಂದು ನೇರವಾದ ಅರ್ಥವಾಗುತ್ತದೆ. ಇದುವರೆಗೆ ಸವತಿಯರ

ತೀಕ್ಷ್ಣವಾದ ಚಾವಟಿಯಿಂದ ಪ್ರೇರಿತವಾದ ಜಾತಿಕುದುರೆಯಂತೆ– ಕೈಕೇಯಿಯ ಕಟುವಾಕ್ಯಗಳಿಂದ ಕ್ಷಣ-ಕ್ಷಣಕ್ಕೂ ಪ್ರಚೋದಿತನಾಗುತ್ತಿದ್ದ ರಾಜನು ಉತ್ತರಿಸಿದನು :

ಧರ್ಮಬನ್ಧೇನ ಬದ್ಧೋಽಸ್ಮಿ ನಷ್ಟಾ ಚ ಮಮ ಚೇತನಾ ।
ಜ್ಯೇಷ್ಠಂ ಪುತ್ರಂ ಪ್ರಿಯಂ ರಾಮಂ ದ್ರಷ್ಟುಮಿಚ್ಛಾಮಿ ಧಾರ್ಮಿಕಮ್ ॥೨೩॥

"ಅಯ್ಯೋ! ನಾನೇನು ಮಾಡಲಿ? ಧರ್ಮವೆಂಬ ಹಗ್ಗದಿಂದ ಬಿಗಿಯಲ್ಪಟ್ಟಿದ್ದೇನೆ. ನನ್ನ ಬುದ್ಧಿಯು ಹಾಳಾಗಿಹೋಗಿದೆ. ಏನು ಮಾಡಬೇಕೆಂಬುದೇ ತಿಳಿಯುತ್ತಿಲ್ಲ. ಧಾರ್ಮಿಕನಾದ, ಹಿರಿಯ ಮಗನಾದ, ಪರಮಪ್ರಿಯನಾದ ರಾಮನನ್ನು ನೋಡಲು ಬಯಸುತ್ತೇನೆ."

ಇತ್ತಲಾಗಿ ರಾತ್ರಿಯು ಕಳೆದು ಬೆಳಗಾಯಿತು. ಸೂರ್ಯನು ಉದಯಿಸಿದನು. ಪುಷ್ಯನಕ್ಷತ್ರಯುಕ್ತವಾದ ಅಭಿಷೇಕದ ಮುಹೂರ್ತವು ಸನ್ನಿಹಿತವಾಯಿತು. ಗುಣಸಂಪನ್ನರಾದ ವಸಿಷ್ಠರು ಪಟ್ಟಾಭಿಷೇಕಕ್ಕೆ ಬೇಕಾದ ಸಂಭಾರಗಳನ್ನು ತೆಗೆಸಿಕೊಂಡು ಶಿಷ್ಯರಿಂದ ಪರಿವೃತರಾಗಿ ಅಯೋಧ್ಯಾ ಪಟ್ಟಣವನ್ನು ಪ್ರವೇಶಿಸಿದರು.

ಅಯೋಧ್ಯೆಯ ಎಲ್ಲ ಬೀದಿಗಳನ್ನೂ ಗುಡಿಸಿ ಸಾರಿಸಿದ್ದರು. ಉತ್ತಮ ವಾದ ಪತಾಕೆಗಳಿಂದ ಪಟ್ಟಣವು ಅಲಂಕೃತವಾಗಿದ್ದಿತು. ಚಿತ್ರ-ವಿಚಿತ್ರವಾದ ಕುಸುಮಗಳನ್ನು ಬೀದಿಯುದ್ದಕ್ಕೂ ಎರಚಿದ್ದರು. ಚಪ್ಪರಗಳನ್ನು ಹಾಕಿ ಅವುಗಳನ್ನು ಹೂಮಾಲೆಗಳಿಂದ ಅಲಂಕರಿಸಿದ್ದರು. ಎಲ್ಲ ಬೀದಿಗಳ ಲ್ಲಿಯೂ ಜನರು ಬಹಳ ಸಂಭ್ರಮದಿಂದ ತಿರುಗಾಡುತ್ತಿದ್ದರು. ಬೀದಿಯ ಎರಡು ಕಡೆಗಳಲ್ಲಿಯೂ ಮಾರಾಟದ ವಸ್ತುಗಳಿಂದ ತುಂಬಿದ್ದ ಅನೇಕ ಅಂಗಡಿಗಳಿದ್ದುವು. ಎಲ್ಲೆಲ್ಲಿಯೂ ಉತ್ಸವದ ದೃಶ್ಯಗಳು ಕಾಣುತ್ತಿ

ಪ್ರಸಂಗವೇ ಬಂದಿರುವುದಿಲ್ಲ. ಕೌಸಲ್ಯೆಯ ವಿಷಯವಾಗಿ ಕೈಕೇಯಿಯು ಅಸೂಯೆಪಡುವಳೇ ಹೊರತು ಅವಳಿಂದ ತನಗೆ ತೊಂದರೆಯಾಗುತ್ತಿರುವುದೆಂದು ಎಲ್ಲಿಯೂ ಹೇಳಿಲ್ಲ. ಕೈಕೇಯಿಯೇ ಸವತಿಯರಿಗೆ ತೊಂದರೆಕೊಡುತ್ತಿದ್ದ ವಿಷಯವು ಪ್ರಸ್ತಾಪಿತವಾಗಿದೆ. ರಾಜನೂ ಅದನ್ನೇ ಹೇಳುತ್ತಾನೆ. ಆದುದರಿಂದ ಇಲ್ಲಿ ನಿಃಸಪತ್ನಾಂ ಮಹೀಂಕೃತ್ವಾ–ಎಂದಿದ್ದಿರಬಹುದು. ಇದು ಈ ಪ್ರಕರಣಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ.

ದ್ದುವು. ರಾಮನಿಗೆ ಪಟ್ಟಾಭಿಷೇಕವಾಗುವುದೆಂದು ಎಲ್ಲರೂ ಹೆಚ್ಚಿನ ಉತ್ಸಾಹದಿಂದ ಕೂಡಿದ್ದರು. ಬೀದಿಗಳು ಚಂದನ ಮತ್ತು ಅಗುರುಗಳ ಧೂಪಗಳಿಂದ ಘಮಘಮಿಸುತ್ತಿದ್ದುವು. ಸೌಂದರ್ಯದಲ್ಲಿ ಇಂದ್ರನ ಅಮರಾವತಿಗೆ ಸರಿದೂಗುತ್ತಿದ್ದ ಅಯೋಧ್ಯಾಪಟ್ಟಣದ ಜನನಿಬಿಡವಾಗಿದ್ದ ಬೀದಿಗಳನ್ನು ವಸಿಷ್ಠರು ದಾಟಿ ತಮ್ಮ ಶಿಷ್ಯರೊಡನೆ ನಾನಾವಿಧವಾದ ಪಕ್ಷಿಗಳಿಂದ ವ್ಯಾಪ್ತವಾಗಿದ್ದ ಅಂತಃಪುರವನ್ನು ನೋಡಿದರು.

ಪಟ್ಟಣಿಗರಿಂದಲೂ ಮತ್ತು ಬೇರೆಯ ಊರುಗಳಿಂದ ಪಟ್ಟಾಭಿಷೇಕ ವನ್ನು ನೋಡುವ ಸಲುವಾಗಿ ಆಗಮಿಸಿದ್ದ ಹಳ್ಳಿಗರಿಂದಲೂ, ಬ್ರಾಹ್ಮಣ ರಿಂದಲೂ, ದಂಡಗಳನ್ನು ಹಿಡಿದು ಸಮವಸ್ತ್ರಗಳನ್ನು ಧರಿಸಿ ನಿಂತಿದ್ದ ರಾಜ ಸೇವಕರಿಂದಲೂ, ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟಿದ್ದ ಒಳ್ಳೆಯ ಕುದುರೆಗಳಿಂದಲೂ–ಅಂತಃಪುರದ ಹೊರಾಂಗಣವು ಅಲಂಕೃವಾಗಿದ್ದಿತು. ಅಂತಹ ಅಂತಃಪುರದ ಬಳಿಗೆ ವಾಮದೇವಾದಿಮಹರ್ಷಿಗಳಿಂದ ಸಮಾವೃತ ರಾದ ವಸಿಷ್ಠರು ಪರಮಪ್ರೀತರಾಗಿ ಬಂದು ಅಲ್ಲಿದ್ದ ಜನಸ್ತೋಮವನ್ನು ದಾಟಿ ಮುಂದೆಹೋದರು. ಆ ವೇಳೆಗೆ ಸರಿಯಾಗಿ ದಶರಥನ ಸಚಿವನೂ, ಸಾರಥಿಯೂ, ಪ್ರಿಯದರ್ಶನನೂ ಆದ ಸುಮಂತ್ರನು ದಶರಥರಾಜನ ಅಂತಃಪುರದ ಬಾಗಿಲಿನಲ್ಲಿ ನಿಂತಿರುವುದನ್ನು ಕಂಡರು. ನೀತಿವಿಶಾರದನಾದ ಸುಮಂತ್ರನನ್ನು ಕಂಡೊಡನೆಯೇ ಮಹಾತೇಜಸ್ವಿಗಳಾದ ವಸಿಷ್ಠರು ತಾವು ಬಂದಿರುವುದನ್ನು ಮಹಾರಾಜನಿಗೆ ಕೂಡಲೇ ತಿಳಿಸಬೇಕೆಂದು ಸುಮಂತ್ರನಿಗೆ ಹೇಳಿ ತಾವು ಅಭಿಷೇಕಾರ್ಥವಾಗಿ ತಂದಿರುವುದನ್ನೆಲ್ಲಾ ವಿವರಿಸಿ ಹೇಳಿದರು :

“ನೋಡು, ಸುಮಂತ್ರ! ನನ್ನ ಶಿಷ್ಯರು ಹೊತ್ತಿರುವ ಗಂಗೋದಕದ ಘಟಗಳು ಸಾಗರದ ಸಂಗಮಸ್ಥಾನದಿಂದ ತರಲ್ಪಟ್ಟಿವೆ. ಅತ್ತೀಮರದಿಂದ ಮಾಡಲ್ಪಟ್ಟಿರುವ ಈ ಭದ್ರಪೀಠವು ಶ್ರೀರಾಮನ ಅಭಿಷೇಕಾರ್ಥವಾಗಿಯೇ ತರಲ್ಪಟ್ಟಿದೆ. ಅಭಿಷೇಕೋಚಿತವಾದ ಸಮಸ್ತಬೀಜಗಳನ್ನೂ ತರಲಾಗಿದೆ. ನಾನಾವಿಧವಾದ ಗಂಧಗಳು, ವಿಧ-ವಿಧವಾದ ರತ್ನಗಳು, ಜೇನುತುಪ್ಪ, ತುಪ್ಪ, ಮೊಸರು–ಇವುಗಳ ಕುಂಭಗಳು, ತೊಳೆದ ಅಕ್ಕಿ, ಬತ್ತದ ಅರಳು, ದರ್ಭೆ, ಪುಷ್ಪಗಳು, ಹಾಲಿನ ಕುಂಭಗಳು–ಈ ಎಲ್ಲವನ್ನೂ ತರಲಾಗಿದೆ.

ಎಂಟು ಮಂದಿ ರೂಪ-ಲಾವಣ್ಯಸಂಪನ್ನೆಯರಾದ ಕನ್ಯೆಯರು ಬಂದಿದ್ದಾರೆ. ಮದಿಸಿದ ಪಟ್ಟದಾನೆ, ನಾಲ್ಕು ಒಳ್ಳೆಯ ಕುದುರೆಗಳನ್ನು ಕಟ್ಟಿರುವ ಅಲಂಕರಿಸಿದ ರಥ, ಝಳಪಿಸುವ ಖಡ್ಗ, ಉತ್ತಮವಾದ ಮತ್ತು ದೀರ್ಘವಾದ ಧನುಸ್ಸು, ಮನುಷ್ಯರು ಹೊರುವ ಪಲ್ಲಕ್ಕಿ, ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ ಶ್ವೇತಚ್ಛತ್ರ, ಬಿಳುಪಾಗಿರುವ ಚಾಮರಗಳು, ಸ್ವರ್ಣಮಯವಾದ ಗಿಂಡಿ, ಸ್ವರ್ಣಮಯವಾದ ಮಾಲೆಗಳಿಂದ ಅಲಂಕೃತವಾಗಿರುವ ಶ್ರೇಷ್ಠವಾದ ಹಿಳಿಲುಳ್ಳ ಬಿಳೀ ಎತ್ತು, ನಾಲ್ಕು ಕೋರೆದಾಡೆಗಳಿಂದ ಕೂಡಿರುವ ಮಹಾಬಲಶಾಲಿಯಾದ ಸಿಂಹ, ನಾಲ್ಕು ಹಲ್ಲುಗಳುಳ್ಳ, ಸುಂದರವಾದ ಕೇಸರಗಳುಳ್ಳ ಉತ್ತಮವಾದ ಕುದುರೆ, ಸ್ವರ್ಣಮಯವಾದ ಸಿಂಹಾಸನ, ವ್ಯಾಘ್ರಾಜಿನ, ಪಟ್ಟಾಭಿಷೇಕದ ಹೋಮಕ್ಕೆ ಬೇಕಾಗುವ ನಾನಾವಿಧವಾದ ಸಮಿತ್ತುಗಳು ಮತ್ತು ಯಜ್ಞೇಶ್ವರ–ಇವೆಲ್ಲವನ್ನೂ ಶ್ರೀರಾಮನ ಪಟ್ಟಾಭಿಷೇಕಕ್ಕಾಗಿ ಸಿದ್ಧಗೊಳಿಸಿ ತರಲಾಗಿದೆ. ಮಂಗಳವಾದ್ಯದವರೂ, ವೇಶ್ಯೆಯರೂ, ಸಿಂಗರಿಸಿಕೊಂಡಿರುವ ಸುಮಂಗಲಿಯರೂ, ಆಚಾರ್ಯರೂ, ಬ್ರಾಹ್ಮಣರೂ ಆಗಮಿಸಿದ್ದಾರೆ. ಮಂಗಳಾಕಾರವಾದ ಗೋವುಗಳನ್ನೂ, ಮೃಗ-ಪಕ್ಷಿಗಳನ್ನೂ ಕರೆತರಲಾಗಿದೆ. ಪುರಪ್ರಮುಖರೂ, ಗ್ರಾಮಪ್ರಮುಖರೂ, ವೈಶ್ಯರೂ ಬಂಧುಗಳ ಸಮೇತರಾಗಿ ಶ್ರೀರಾಮನ ಪಟ್ಟಾಭಿಷೇಕಕ್ಕಾಗಿ ಆಗಮಿಸಿದ್ದಾರೆ. ಇವರೇ ಅಲ್ಲದೇ ಶ್ರೀರಾಮನ ವಿಷಯದಲ್ಲಿ ವಿಶೇಷವಾದ ಪ್ರೀತಿಯಿಂದ ಕೂಡಿರುವ, ಪ್ರಿಯಭಾಷಿಗಳಾದ ಸಾವಿರಾರು ಜನರು ಅವನ ಪಟ್ಟಾಭಿಷೇಕವನ್ನು ನೋಡುವ ಸಲುವಾಗಿ ರಾಜರೊಡನೆ ನಿಂತಿದ್ದಾರೆ.

ಸುಮಂತ್ರ! ಪಟ್ಟಾಭಿಷೇಕಕ್ಕೆ ಯೋಗ್ಯವಾದ ಪುಷ್ಯನಕ್ಷತ್ರದಿಂದಲೂ– ಶುಭಯೋಗ, ಶುಭತಿಥಿ, ಶುಭಕರಣ, ಶುಭವಾರ, ಶುಭಮುಹೂರ್ತಗಳಿಂದಲೂ ಕೂಡಿರುವ ಈ ದಿವಸದಲ್ಲಿ ಶ್ರೀರಾಮನು ರಾಜ್ಯವನ್ನು ಪಡೆಯಲಿ. ದಶರಥರಾಜನನ್ನು ಶೀಘ್ರವಾಗಿ ಬರುವಂತೆ ಹೇಳು. ಅವಸರಪಡಿಸು."

ಮಹಾತ್ಮರಾದ ವಸಿಷ್ಠರ ಆ ಮಾತನ್ನು ಕೇಳಿ ಸುಮಂತ್ರನು ದಶರಥ ರಾಜನನ್ನು ಸ್ತೋತ್ರಮಾಡುತ್ತಾ ಅಂತಃಪುರವನ್ನು ಪ್ರವೇಶಿಸಿದನು.

ಆ ಸಮಯದಲ್ಲಿ ಅಂತಃಪುರದೊಳಗೆ ಹೋಗಲು ಯಾರಿಗೂ ಅನು

ಮತಿಯಿಲ್ಲದಿದ್ದರೂ–'ಯಾರಿಂದಲೂ ಯಾವಾಗಲೂ ವೃದ್ಧನಾದ ಸುಮಂತ್ರನು ತಡೆಯಲ್ಪಡತಕ್ಕವನಲ್ಲ. ಯಾವ ಸಮಯದಲ್ಲಾದರೂ ಸುಮಂತ್ರನು ರಾಜಭವನಕ್ಕೆ ಪ್ರವೇಶಿಸಬಹುದು'–ಎಂಬ ಸಾರ್ವಕಾಲಿಕವಾದ ರಾಜಾಜ್ಞೆಯಿದ್ದುದರಿಂದ ರಾಜನಿಗೆ ಪ್ರಿಯವನ್ನುಂಟುಮಾಡಲು ಆಸಕ್ತರಾದ ದ್ವಾರಪಾಲಕರು ಜ್ಞಾನವೃದ್ಧನೂ, ವಯೋವೃದ್ಧನೂ, ರಾಜಸಮ್ಮತ್ರನೂ ಆದ ಸುಮಂತ್ರನನ್ನು ಅಂತಃಪುರದೊಳಗೆ ಹೋಗದಂತೆ ತಡೆಯಲು ಸಮರ್ಥ ರಾಗಲಿಲ್ಲ. ರಾಜನ ಸಮೀಪಕ್ಕೆ ಹೋದ ಸುಮಂತ್ರನು ಕಳೆದ ರಾತ್ರಿ ಅಂತಃ ಪುರದಲ್ಲಿ ನಡೆದ ಹಗರಣವನ್ನು ತಿಳಿಯದೇ ರಾಜನನ್ನು ಹೆಚ್ಚು ಸಂತೋಷ ಗೊಳಿಸುವ ಮಾತುಗಳಿಂದ ಸ್ತೋತ್ರಮಾಡಲು ಉಪಕ್ರಮಿಸಿದನು.

ಹಿಂದಿನಂತೆಯೇ ಸುಮಂತ್ರನು ಕೈಮುಗಿದು ನಿಂತು ಜಗತೀಪತಿ ಯಾದ ದಶರಥಮಹಾರಾಜನನ್ನು ಸ್ತುತಿಸಿದನು :

ಯಥಾ ನನ್ದತಿ ತೇಜಸ್ವೀ ಸಾಗರೋ ಭಾಸ್ಕರೋದಯೇ ।
ಪ್ರೀತಃ ಪ್ರೀತೇನ ಮನಸಾ ತಥಾನನ್ದಯ ನಃ ಸ್ವತಃ ॥೪೬॥

"ಮಹಾರಾಜ! ತೇಜಸ್ವಿಯಾದ ಸಮುದ್ರನು ಸೂರ್ಯೋದಯ ವಾದೊಡನೆಯೇ ಯಾವ ರೀತಿಯಲ್ಲಿ ತನ್ನ ಅಲೆಗಳ ಮೇಲೆ ಬೀಳುವ ಸೂರ್ಯನ ಕಿರಣಗಳಿಂದ ಸ್ನಾನಾರ್ಥವಾಗಿ ಹೋಗುವ ಜನಕೋಟಿಯನ್ನು ಆನಂದಪಡಿಸುವನೋ–ಅದೇ ರೀತಿಯಲ್ಲಿ ಸಂತುಷ್ಟವಾದ ಮನಸ್ಸುಳ್ಳ ನೀನು ನಮ್ಮ ವಿಷಯದಲ್ಲಿ ಸುಪ್ರೀತನಾಗಿ ನಮ್ಮನ್ನು ಆನಂದಗೊಳಿಸು.*

---

* ಚಂದ್ರೋದಯದಲ್ಲಿ ಸಮುದ್ರವು ಉಕ್ಕಿಬರುವುದೆಂದು ಪ್ರತೀತಿಯಿದೆ. ಆದರೆ ಇಲ್ಲಿ 'ಭಾಸ್ಕರೋದಯೇ' ಎಂಬ ಸ್ಪಷ್ಟೋಕ್ತಿಯಿದೆ. ಇದಕ್ಕೆ ವ್ಯಾಖ್ಯಾನಕಾರರು ನಾನಾರೀತಿಯಾಗಿ ವ್ಯಾಖ್ಯಾನಮಾಡಿರುತ್ತಾರೆ. ಒಬ್ಬ ವ್ಯಾಖ್ಯಾನಕಾರರು 'ಸೂರ್ಯೋದಯ ದಲ್ಲಿಯೂ ಸಮುದ್ರವು ವೃದ್ಧಿಯಾಗುತ್ತದೆ' ಎಂದಿದ್ದಾರೆ. ಮತ್ತೊಬ್ಬರು '**ಸಾಗರೋऽ ಭಾಸ್ಕರೋದಯೇ = ಸಾಗರಃ ಅಭಾಸ್ಕರೋದಯೇ, ಅಭಾಸ್ಕರಃ ಭಾಸ್ಕರ ಸದೃಶಃ ಚಂದ್ರಃ, ತಸ್ಯ ಉದಯೇ ಚನ್ದ್ರೋದಯೇ**' ಎಂದು ಅರ್ಥಮಾಡಿದ್ದಾರೆ. ಮತ್ತೊಬ್ಬರು : 'ಚಂದ್ರನಿಗೇ ಭಾಸ್ಕರನೆಂಬ ಮತ್ತೊಂದು ಹೆಸರು. **ಭಾಸ್ಕರೋದಯೇ = ಚನ್ದ್ರೋದಯೇ**' ಎಂದೇ ಅರ್ಥಮಾಡಬೇಕೆಂದಿದ್ದಾರೆ. ಮತ್ತೊಬ್ಬರು : '**ಭಾಸ್ಕರ**' ಶಬ್ದಕ್ಕೆ ಚಂದ್ರಪರವಾಗಿ ವ್ಯುತ್ಪತ್ತಿಮಾಡುತ್ತಾ–'**ಭಾಸಃ ಕರೋತೀತಿ ಭಾಸ್ಕರಃ = ಚನ್ದ್ರಃ**' ಎಂದು ಸಿದ್ಧಾಂತಮಾಡಿ

ಇನ್ದ್ರಮಸ್ಯಾಂ ತು ವೇಲಾಯಾಮಭಿತುಷ್ಟಾವ ಮಾತಲಿಃ ।
ಸೋಽಜಯದ್ದಾನವಾನ್ಸರ್ವಾಂಸ್ತಥಾ ತ್ವಾಂ ಬೋಧಯಾಮ್ಯಹಮ್ ॥

ಇಂದ್ರನ ಸಾರಥಿಯಾದ ಮಾತಲಿಯು ಇದೇ ವೇಳೆಯಲ್ಲಿ ಇಂದ್ರನನ್ನು ಸ್ತೋತ್ರಮಾಡಿದನು. ಅವನು ಮಾಡಿದ ಸ್ತೋತ್ರದಿಂದ ಉತ್ಸಾಹಗೊಂಡ ಇಂದ್ರನು ಶತ್ರುಗಳಾದ ಸರ್ವದಾನವರನ್ನೂ ನಿಗ್ರಹಿಸಿದನು. ಮಾತಲಿಯು ಇಂದ್ರನನ್ನು ಎಚ್ಚರಗೊಳಿಸಿದಂತೆಯೇ ನಾನು ನಿನ್ನನ್ನು ಎಚ್ಚರ ಗೊಳಿಸುತ್ತಿದ್ದೇನೆ.

ವೇದಾಃ ಸಹಾಙ್ಗವಿದ್ಯಾಶ್ಚ ಯಥಾ ಹ್ಯಾತ್ಮಭುವಂ ವಿಭುಮ್ ।
ಬ್ರಹ್ಮಾಣಂ ಬೋಧಯನ್ತ್ಯದ್ಯ ತಥಾ ತ್ವಾಂ ಬೋಧಯಾಮ್ಯಹಮ್ ॥

ಶಿಕ್ಷಾ-ವ್ಯಾಕರಣಾದಿ ಷಡಂಗಯುಕ್ತವಾದ ವೇದಗಳು ಯಾವ ರೀತಿಯಲ್ಲಿ ಪ್ರಭುವಾದ, ಸ್ವಯಂಭುವಾದ ಬ್ರಹ್ಮನನ್ನು ಇದೇ ಸಮಯದಲ್ಲಿ ಎಚ್ಚರಗೊಳಿಸುತ್ತವೆಯೋ–ಅದೇ ರೀತಿಯಲ್ಲಿ ನಾನು ನಿನ್ನನ್ನು ಎಚ್ಚರ ಗೊಳಿಸುತ್ತಿದ್ದೇನೆ.

ಆದಿತ್ಯಃ ಸಹ ಚನ್ದ್ರೇಣ ಯಥಾ ಭೂತಧರಾಂ ಶುಭಾಮ್ ।
ಬೋಧಯತ್ಯದ್ಯ ಪೃಥಿವೀಂ ತಥಾ ತ್ವಾಂ ಬೋಧಯಾಮ್ಯಹಮ್ ॥

ಆದಿತ್ಯನು ಚಂದ್ರನೊಡನೆ ಯಾವ ರೀತಿಯಲ್ಲಿ ಸಕಲಚರಾಚರ ಪ್ರಾಣಿಗಳನ್ನೂ ಧಾರಣೆಮಾಡಿರುವ ಭೂದೇವಿಯನ್ನು ಇದೇ ಸಮಯದಲ್ಲಿ ಎಚ್ಚರಗೊಳಿಸುವನೋ–ಅದೇ ರೀತಿಯಲ್ಲಿ ನಾನೂ ನಿನ್ನನ್ನು ಎಚ್ಚರ ಗೊಳಿಸುತ್ತಿದ್ದೇನೆ.

ದ್ದಾರೆ. ಇದರಲ್ಲಿರುವ ಒಂದಂಶವನ್ನು ನಾವು ಮುಖ್ಯವಾಗಿ ಗಮನಿಸಬೇಕಾಗಿದೆ. ಸಮುದ್ರದ ಏರಿಳಿತಗಳು ಇಲ್ಲಿ ಪ್ರಧಾನವಲ್ಲ. ಸಮುದ್ರವು ತನ್ನ ಸಮೀಪವರ್ತಿಗಳಾದ ಜನರನ್ನು ಆನಂದಪಡಿಸುವುದು ಮುಖ್ಯವಾದುದು. ಸೂರ್ಯನು ಉದಯಿಸುತ್ತಿರುವಾಗ ಸಮುದ್ರದ ದಡದಲ್ಲಿ ನಿಂತಿದ್ದರೆ ಅವನ ಎಳೆಯ ಕಿರಣಗಳು ಸಮುದ್ರದ ಅಲೆಗಳ ಮೇಲೆ ಬಿದ್ದು ನೋಡುವವರಿಗೆ ನೇತ್ರಾನಂದದಾಯಕವಾಗಿರುವುದೆಂದು ಹೇಳುತ್ತಾರೆ. ಆದುದರಿಂದ 'ಭಾಸ್ಕರೋದಯೇ' ಎಂಬುದಕ್ಕೆ ಸೂರ್ಯೋದಯವೆಂಬುದೇ ಸರಿಯಾದ ಅರ್ಥವೆಂದು ಭಾವಿಸಬಹುದಾಗಿದೆ.

ಉತ್ತಿಷ್ಠಾಶು ಮಹಾರಾಜ ಕೃತಕೌತುಕಮಙ್ಗಲಃ ।
ವಿರಾಜಮಾನೋ ವಪುಷಾ ಮೇರೋರಿವ ದಿವಾಕರಃ ॥೫೦॥

ಮಹಾರಾಜ! ಏಳು ; ಬೇಗನೆ ಎದ್ದೇಳು. ಅಭಿಷೇಕಾಂಗಭೂತವಾಗಿ ಮಂಗಳಸ್ನಾನವನ್ನು ಮಾಡಿ ವಿರಾಜಮಾನವಾದ ಶರೀರದಿಂದ ಕೂಡಿದವನಾಗಿ ಮೇರುಪರ್ವತದಲ್ಲಿನ ಸೂರ್ಯನಂತೆ ಪ್ರಕಾಶಮಾನನಾಗು.

ಸೋಮಸೂರ್ಯೌ ಚ ಕಾಕುತ್ಸ್ಥ ಶಿವವೈಶ್ರವಣಾವಪಿ ।
ವರುಣಶ್ಚಾಗ್ನಿರಿನ್ದ್ರಶ್ಚ ವಿಜಯಂ ಪ್ರದಿಶನ್ತು ತೇ ॥೫೧॥

ಸೋಮ-ಸೂರ್ಯರೂ, ಶಿವ-ಕುಬೇರರೂ, ಅಗ್ನೀಂದ್ರ-ವರುಣರೂ ನಿನಗೆ ವಿಜಯವನ್ನುಂಟುಮಾಡಲಿ.

ರಾತ್ರಿಯು ಕಳೆಯಿತು. ಮಂಗಳಕರವಾದ ಹಗಲು ಪ್ರಾರಂಭವಾಗಿದೆ. ರಾಜಸಿಂಹನೇ! ಎಚ್ಚರಗೊಳ್ಳು. ಮುಂದಿನ ಮಂಗಳಕಾರ್ಯದಲ್ಲಿ ತೊಡಗು. ಶ್ರೀರಾಮನ ಪಟ್ಟಾಭಿಷೇಕಕ್ಕೆ ಬೇಕಾದ ಸಕಲಸಾಮಗ್ರಿಗಳೂ ಸಿದ್ಧವಾಗಿವೆ. ಪಟ್ಟಣಿಗರಿಂದಲೂ, ದೇಶೀಯ ಪ್ರಜೆಗಳಿಂದಲೂ, ವೈಶ್ಯರಿಂದಲೂ ನಮಸ್ಕರಿಸಲ್ಪಡುತ್ತಿರುವ ಪೂಜ್ಯರಾದ ವಸಿಷ್ಠರು ಬ್ರಾಹ್ಮಣರೊಡನೆ ಆಗಮಿಸಿದ್ದಾರೆ. ಆದುದರಿಂದ ಲೋಕಾಭಿರಾಮನಾದ ಶ್ರೀರಾಮ ನಿಗೆ ಪಟ್ಟಾಭಿಷೇಕಮಾಡಲು ಕೂಡಲೇ ಆಜ್ಞಾಪಿಸು.

ಯಥಾ ಹ್ಯಪಾಲಾಃ ಪಶವೋ ಯಥಾ ಸೇನಾ ಹ್ಯನಾಯಕಾ ।
ಯಥಾ ಚನ್ದ್ರಂ ವಿನಾ ರಾತ್ರಿರ್ಯಥಾ ಗಾವೋ ವಿನಾ ವೃಷಮ್ ।
ಏವಂ ಹಿ ಭವಿತಾ ರಾಷ್ಟ್ರಂ ಯತ್ರ ರಾಜಾ ನ ದೃಶ್ಯತೇ ॥೫೫॥

ಮಹಾರಾಜ! ಗೋಪಾಲನಿಲ್ಲದ ಪಶುಗಳಂತೆ, ದಂಡನಾಯಕನಿಲ್ಲದ ಸೇನೆಯಂತೆ, ಚಂದ್ರನಿಲ್ಲದ ರಾತ್ರಿಯಂತೆ, ಹೋರಿಯಿಲ್ಲದ ಹಸುಗಳಂತೆ– ರಾಜನನ್ನು ಕಾಣದ ರಾಷ್ಟ್ರವು ಅಲ್ಲೋಲ-ಕಲ್ಲೋಲವಾಗುತ್ತದೆ."

ಸುಮಂತ್ರನ ಸಾಂತ್ವಪೂರ್ವಕವಾದ ಮತ್ತು ಅರ್ಥವತ್ತಾದ ಮಾತುಗಳನ್ನು ಕೇಳಿ ದಶರಥರಾಜನು ಪುನಃ ಶೋಕಾವಿಷ್ಟನಾದನು. ಬಳಿಕ ಮಗನ ಸಂಬಂಧವಾದ ಸಂತೋಷದಿಂದ ವಂಚಿತನಾಗಿದ್ದ, ನಿರಂತರವಾದ

ರೋದನದಿಂದ ಕೆಂಪಾದ ಕಣ್ಣುಗಳುಳ್ಳವನಾಗಿದ್ದ, ಧಾರ್ಮಿಕನಾದ ರಾಜನು ತಲೆಯೆತ್ತಿ ಸುಮಂತ್ರನನ್ನು ನೋಡಿ ಹೇಳಿದನು :

ವಾಕ್ಯೈಸ್ತು ಖಲು ಮರ್ಮಾಣಿ ಮಮ ಭೂಯೋ ನಿಕೃನ್ತಸಿ ॥೫೮॥

"ಸುಮಂತ್ರ! ನೀನಾಡುತ್ತಿರುವ ಮಾತುಗಳಿಂದ ನನ್ನ ಮರ್ಮಸ್ಥಳಗಳನ್ನು ಪುನಃ ಪುನಃ ಕತ್ತರಿಸುತ್ತಿರುವೆ."

ದೀನನಾಗಿದ್ದ ರಾಜನ ಕರುಣಾಜನಕವಾದ ಮಾತನ್ನು ಕೇಳಿ ಕೈ ಮುಗಿದುಕೊಂಡು ನಿಂತಿದ್ದ ಸುಮಂತ್ರನು ಸ್ವಲ್ಪ ಹಿಂದಕ್ಕೆ ಸರಿದನು. ರಾಜನು ದೈನ್ಯದ ಕಾರಣದಿಂದ ಸುಮಂತ್ರನೊಡನೆ ಮಾತನಾಡಲು ಅಸಮರ್ಥನಾದಾಗ ರಾಜನೀತಿಜ್ಞಳಾದ ಕೈಕೇಯಿಯೇ ಸುಮಂತ್ರನಿಗೆ ಉತ್ತರಿಸಿದಳು :

"ಸುಮಂತ್ರ! ನಿಮ್ಮ ಮಹಾರಾಜನು ರಾಮನಿಗೆ ಪಟ್ಟಾಭಿಷೇಕ ಮಾಡಬೇಕೆನ್ನುವ ಉತ್ಸಾಹದಿಂದ ರಾತ್ರಿಯಲ್ಲಿ ಎಚ್ಚರಗೊಂಡೇ ಇದ್ದನು. ಇದರಿಂದ ಆಯಾಸವಾಗಿ ಈಗ ತಾನೇ ನಿದ್ರೆಯು ಹತ್ತುತ್ತಿದೆ. ಆದುದರಿಂದ ಯಶೋವಂತನಾದ ರಾಜಪುತ್ರನಾದ ರಾಮನನ್ನು ನೀನೀಗಲೇ ಇಲ್ಲಿಗೆ ಕರೆದುಕೊಂಡು ಬಾ. ನಿನಗೆ ಮಂಗಳವಾಗಲಿ. ನೀನೀ ವಿಷಯದಲ್ಲಿ ಹಿಂದು-ಮುಂದು ಯೋಚಿಸುವ ಕಾರಣವಿಲ್ಲ. ಬೇಗ ಹೋಗು."

"ಭಾಮಿನಿ! ರಾಜನ ಅಭಿಪ್ರಾಯವನ್ನು ತಿಳಿಯದೇ ರಾಮನನ್ನು ಕರೆತರಲು ನಾನು ಹೇಗೆ ಹೋಗಲಿ?"

ಮಂತ್ರಿಯು ಹೇಳಿದ ಮಾತನ್ನು ಕೇಳಿ ರಾಜನು ಸುಮಂತ್ರನೊಡನೆ ಹೇಳಿದನು :

"ಸುಮಂತ್ರ! ಸುಂದರನಾದ ರಾಮನನ್ನೊಮ್ಮೆ ನೋಡಬೇಕೆಂದಿದ್ದೇನೆ. ಶೀಘ್ರವಾಗಿ ಅವನನ್ನಿಲ್ಲಿಗೆ ಕರೆದುಕೊಂಡು ಬಾ!"

ರಾಜನ ಮಾತಿನಿಂದಾಗಲೀ–ಕೈಕೇಯಿಯ ಮಾತಿನಿಂದಾಗಲೀ ಸುಮಂತ್ರನಿಗೆ ವಿಷಯವೇನೆಂಬುದೇ ಅರ್ಥವಾಗಲಿಲ್ಲ. ದಶರಥನು ರಾಮನ ಕಲ್ಯಾಣಕ್ಕಾಗಿಯೇ ಅವನನ್ನು ಕರೆಸುತ್ತಿರುವನೆಂದು ಭಾವಿಸಿದ ಸುಮಂತ್ರನು ರಾಜನ ಶಾಸನವನ್ನು ಶಿರಸಾವಹಿಸಿ ಅತ್ಯಂತಸಂತೋಷದಿಂದ ದಶರಥನ

ಅಂತಃಪುರವನ್ನು ಬಿಟ್ಟು ರಾಮನ ಅರಮನೆಯ ಕಡೆಗೆ ಅವಸರದಿಂದಲೇ ಹೊರಟನು.

ರಾಮಭವನಕ್ಕೆ ಹೊರಟಾಗಲೂ ಪುನಃ ಕೈಕೇಯಿಯು 'ಯಶೋ ವಂತನಾದ ರಾಜಪುತ್ರನನ್ನು ಇಲ್ಲಿಗೆ ಅತಿಶೀಘ್ರವಾಗಿ ಕರೆದುಕೊಂಡು ಬಾ'– ಎಂದ ಒತ್ತಾಯಮಾಡಿ ಹೇಳಿದುದನ್ನು ನೆನೆದು ಸುಮಂತ್ರನು ಚಿಂತಿಸ ತೊಡಗಿದನು. 'ಕೈಕೇಯಿಯು ಏತಕ್ಕಾಗಿ ರಾಮನ ಆಗಮನಕ್ಕೆ ಇಷ್ಟೊಂದು ಅವಸರಪಡುತ್ತಿದ್ದಾಳೆ? ಬಹುಶಃ ರಾಮನ ಪಟ್ಟಾಭಿಷೇಕಕ್ಕೆಂದೇ ಅವಸರ ಪಡುತ್ತಿರಬೇಕು. ಕೈಕೇಯಿಯೇ ಹೇಳಿದಂತೆ ರಾಮನ ಪಟ್ಟಾಭಿಷೇಕದ ಸಂತೋಷಾಧಿಕ್ಯದಿಂದ ದಶರಥನು ನಿನ್ನೆಯು ರಾತ್ರಿ ಜಾಗರಣೆ ಮಾಡಿದ್ದು ಆಯಾಸಗೊಂಡು ಇಂದು ಪಟ್ಟಾಭಿಷೇಕವಾಗುವ ಸ್ಥಳಕ್ಕೆ ಬರಲಾಗದೇ ರಾಮನನ್ನು ಅಂತಃಪುರಕ್ಕೆ ಕರೆಯಿಸಿ ಪಟ್ಟಾಭಿಷಿಕ್ತನಾಗಲೂ ಅನುಜ್ಞೆನೀಡುವ ಸಲುವಾಗಿಯೇ ರಾಮನನ್ನು ಶೀಘ್ರವಾಗಿ ಕರೆತರಲು ಹೇಳಿರಬಹುದು.'– ಹೀಗೆ ಸೂತನು ಯೋಚಿಸಿ ಆನಂದಭರಿತನಾಗಿ, ರಾಘವನನ್ನು ನೋಡುವ ಆಶಯದಿಂದ ಸಮುದ್ರದ ಮಡುವಿಗೆ ಸಮಾನವಾಗಿದ್ದ ಶುಭಪ್ರದವಾಗಿದ್ದ ದಶರಥನ ಅಂತಃಪುರದಿಂದ ಹೊರಹೊರಟನು. ಹೀಗೆ ಅವಸರದಿಂದ ಹೊರಟ ಸುಮಂತ್ರನು ಅಂತಃಪುರದ ಮಹಾದ್ವಾರದ ಬಳಿಗೆ ಬಂದು ಅಲ್ಲಿ ಗುಂಪು-ಗುಂಪಾಗಿ ಸೇರಿದ್ದ ಪೌರರನ್ನೂ ಧನಿಕರನ್ನೂ ನೋಡಿದನು.

೧೪ನೇಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೫ನೆಯ ಸರ್ಗ

ಸುಮಂತ್ರನು ರಾಜಾಜ್ಞೆಯಂತೆ ಶ್ರೀರಾಮನನ್ನು ಕರೆತರಲು ರಾಮಭವನಕ್ಕೆ ಹೋದುದು

ತೇ ತು ತಾಂ ರಜನೀಮುಷ್ಯ ಬ್ರಾಹ್ಮಣಾ ವೇದಪಾರಗಾಃ ।
ಉಪತಸ್ಥುರುಪಸ್ಥಾನಂ ಸಹರಾಜಪುರೋಹಿತಾಃ ॥೧॥

ಪಟ್ಟಾಭಿಷೇಕಾಂಗವಾದ ಕರ್ಮಾನುಷ್ಠಾನಗಳಿಗೆ ಋತ್ವಿಜರಾಗಿ

ಬಂದಿದ್ದ ವೇದ-ವೇದಾಂಗಪಾರಂಗತರಾದ ಬ್ರಾಹ್ಮಣರು ರಾತ್ರಿಯು ಕಳೆದು ಬೆಳಗಾಗುತ್ತಲೇ ಶುಚೀಭೂತರಾಗಿ ಅರಮನೆಯ ಮಹಾದ್ವಾರದ ಬಳಿಗೆ ಬಂದು ರಾಜಪುರೋಹಿತರೊಡನೆ ಉಪಸ್ಥಿತರಾದರು.

ದಶರಥನ ಅಮಾತ್ಯರೂ, ಸೇನಾಪತಿಗಳೂ, ವೈಶ್ಯಪ್ರತಿನಿಧಿಗಳೂ, ಪರಮಸಂತುಷ್ಟರಾಗಿ ರಾಮನ ಪಟ್ಟಾಭಿಷೇಕದ ಸಲುವಾಗಿ ಅಲ್ಲಿಗೆ ಬಂದು ಸೇರಿದರು.

ಉದಿತೇ ವಿಮಲೇ ಶೂರ್ಯೇ ಪುಷ್ಯೇ ಚಾಭ್ಯಾಗತೇಽಹನಿ ।
ಲಗ್ನೇ ಕರ್ಕಟಕೇ ಪ್ರಾಪ್ತೇ ಜನ್ಮ ರಾಮಸ್ಯ ಚ ಸ್ಥಿತೇ ॥೩॥

ಅಭಿಷೇಕಾಯ ರಾಮಸ್ಯ ದ್ವಿಜೇನ್ದ್ರೈರುಪಕಲ್ಪಿತಮ್ ।
ಕಾಞ್ಚನಾ ಜಲಕುಮ್ಭಾಶ್ಚ ಭದ್ರಪೀಠಂ ಸ್ವಲಂಕೃತಮ್ ॥೪॥

ರಥಶ್ಚ ಸಮ್ಯಗಾಸ್ತೀರ್ಣೋ ಭಾಸ್ವತಾ ವ್ಯಾಘ್ರಚರ್ಮಣಾ ।
ಗಙ್ಗಾಯಮುನಯೋಃ ಪುಣ್ಯಾತ್ಸಂಗಮಾದಾಹೃತಂ ಜಲಮ್ ॥೫॥

ಸೂರ್ಯನು ಉದಯಿಸಿದ ನಂತರ ಪುಷ್ಯನಕ್ಷತ್ರವು ಹುಟ್ಟಿರಲು ರಾಮನ ಜನ್ಮಲಗ್ನವಾದ ಕರ್ಕಾಟಕಲಗ್ನವು ಪ್ರಾಪ್ತವಾಗಲು–ರಾಮನ ಪಟ್ಟಾಭಿಷೇಕದ ಸಲುವಾಗಿ ಬ್ರಾಹ್ಮಣರು ಸಕಲಸಂಭಾರಗಳನ್ನೂ ಯಾಗ ಶಾಲೆಯಲ್ಲಿ ಸಿದ್ಧಪಡಿಸಿದರು. ಸುವರ್ಣಮಯವಾದ ಜಲಕುಂಭಗಳನ್ನಿಟ್ಟಿ ದ್ದರು. ಪುಷ್ಪಮಾಲಿಕೆಗಳಿಂದ ಸಮಲಂಕೃತವಾದ ಭದ್ರಪೀಠವನ್ನಿಟ್ಟಿದ್ದರು. ಪ್ರಕಾಶಮಾನವಾದ ಹುಲಿಯ ಚರ್ಮವನ್ನು ಹಾಸಿದ್ದ ರಥವು ಸಿದ್ಧವಾಗಿದ್ದಿತು. ಗಂಗಾ-ಯಮುನಾಸಂಗಮದ ಪುಣ್ಯಸ್ಥಳದಿಂದ ಅಭಿಷೇಕಾರ್ಥ ವಾಗಿ ಪವಿತ್ರೋದಕವನ್ನು ತಂದಿದ್ದರು.

ಇನ್ನು ಇತರ ಪುಣ್ಯಕ್ಷೇತ್ರಗಳಲ್ಲಿನ ವಾಪೀ-ಕೂಪಗಳಿಂದಲೂ, ಸರೋ ವರಗಳಿಂದಲೂ, ಮಡುವುಗಳಿಂದಲೂ, ಪೂರ್ವ-ಪಶ್ಚಿಮ-ದಕ್ಷಿಣೋತ್ತರ ದಿಕ್ಕುಗಳ ಕಡೆಗೆ ಪ್ರವಹಿಸುವ ನದಿಗಳಿಂದಲೂ, ನಾಲ್ಕು ಸಮುದ್ರ ಗಳಿಂದಲೂ ಶುಭೋದಕಗಳನ್ನು ಶ್ರೀರಾಮನ ಅಭಿಷೇಕಾರ್ಥವಾಗಿ ಸುವರ್ಣ ಕುಂಭಗಳಲ್ಲಿ ತಂದಿದ್ದರು. ಜೇನುತುಪ್ಪ, ತುಪ್ಪ, ಮೊಸರು–ಇವೆಲ್ಲವನ್ನೂ ಕುಂಭಗಳಲ್ಲಿ ಸಿದ್ಧಪಡಿಸಿದ್ದರು. ತೊಳೆದ ಅಕ್ಕಿ, ಬತ್ತದ ಅರಳು, ದರ್ಭೆ,

ಪುಷ್ಪಗಳು–ಇವೆಲ್ಲವನ್ನೂ ಯಥೇಚ್ಛವಾಗಿ ಸಿದ್ಧಪಡಿಸಿದ್ದರು. ಎಂಟು ಮಂದಿ ಸಮಲಂಕೃತೆಯರಾದ ಕನ್ಯೆಯರನ್ನು ಕರೆತಂದಿದ್ದರು. ನೀರಿನಿಂದಲೂ, ಅರಳಿ-ಅತ್ತಿ ಮುಂತಾದ ವೃಕ್ಷಗಳ ಚಿಗುರುಗಳಿಂದಲೂ ಕೂಡಿದ್ದ ಚಿನ್ನದ ಮತ್ತು ಬೆಳ್ಳಿಯ ಪೂರ್ಣಕುಂಭಗಳು ಕನ್ನೈದಿಲೆಯೇ ಮುಂತಾದ ಹೂಗಳಿಂದ ಸಮಲಂಕೃತವಾಗಿದ್ದುವು. ಎಲ್ಲೆಡೆಗಳಲ್ಲಿಯೂ ಹರಡಿದ ಚಂದ್ರನ ಕಿರಣಗಳಂತೆ ಕಾಣುತ್ತಿದ್ದ, ಶ್ವೇತವರ್ಣದ, ರತ್ನಭೂಷಿತವಾದ, ಶ್ರೇಷ್ಠವಾದ ಚಾಮರಗಳು ಶ್ರೀರಾಮನ ಪಟ್ಟಾಭಿಷೇಕಕ್ಕೆ ಸಿದ್ಧವಾಗಿದ್ದವು. ಚಂದ್ರಮಂಡಲದಂತೆ ಮಂಡಲಾಕಾರವಾಗಿದ್ದ. ಬಿಳುಪಾಗಿದ್ದ, ಪ್ರಕಾಶವನ್ನು ಹೊರಸೂಸುತ್ತಿದ್ದ ಶ್ವೇತಚ್ಛತ್ರಿಯು ಅಭಿಷೇಕಸಾಮಗ್ರಿಗಳ ಅಗ್ರಭಾಗವನ್ನ ಲಂಕರಿಸಿದ್ದಿತು. ಬಿಳುಪಾದ ಎತ್ತೂ ಮತ್ತು ಬಿಳುಪಾದ ಕುದುರೆಯೂ ಸಿದ್ಧವಾಗಿದ್ದುವು. ರಾಜನ ಮೆರವಣಿಗೆಗೆ ಯೋಗ್ಯವಾದ ಆನೆಯು ಮದೋದಕವನ್ನು ಸುರಿಸುತ್ತಾ ನಿರೀಕ್ಷಿಸುತ್ತಿದ್ದಿತು. ನಾಲ್ಕು ವಿಧವಾದ ವಾದ್ಯಗಳನ್ನು ಬಾರಿಸುವವರೂ, ವಂದಿ-ಮಾಗಧರೂ ಸಿದ್ಧರಾಗಿ ನಿಂತಿದ್ದರು. ಇಕ್ಷ್ವಾಕುವಂಶದವರ ರಾಜಧಾನಿಯಾದ ಅಯೋಧ್ಯೆಯಲ್ಲಿ ಪಟ್ಟಾಭಿಷೇಕ ಸಾಮಗ್ರಿಗಳನ್ನು ಹೇಗೆ ಸಿದ್ಧಪಡಿಸಿದ್ದರೋ ಅದೇ ರೀತಿಯಲ್ಲಿ ನಾನಾದೇಶಗಳ ರಾಜರು ರಾಜನ ಆಹ್ವಾನವನ್ನು ಆದರದಿಂದ ಅಂಗೀಕರಿಸಿ, ಉತ್ತಮ ಜಾತಿಯ ವಸ್ತುಗಳನ್ನು ಸಂಗ್ರಹಿಸಿಕೊಂಡು ರಾಜಪುತ್ರನ ಪಟ್ಟಾಭಿಷೇಕಕ್ಕಾಗಿ ಅರಮನೆಯ ಮಹಾದ್ವಾರದಲ್ಲಿ ಬಂದು ಸೇರಿದ್ದರು. ಪಟ್ಟಾಭಿಷೇಕದ ದಿನವಾದ ಅಂದು ಬಹಳಹೊತ್ತಿನವರೆಗೂ ದಶರಥನನ್ನು ಕಾಣದೇ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು–'ಇದೇನಿದು? ರಾಜನ ದರ್ಶನವೇ ಆಗಲಿಲ್ಲವಲ್ಲಾ! ನಾವೆಲ್ಲರೂ ಬಂದಿರುವುದನ್ನು ರಾಜನಿಗೆ ತಿಳಿಸುವವರು ಯಾರೂ ಇಲ್ಲವೇ? ಸೂರ್ಯನಾಗಲೇ ಉದಯಿಸಿದ್ದಾನೆ. ರಾಮನ ಯೌವರಾಜ್ಯಾಭಿಷೇಕಕ್ಕೆ ಸಕಲಸಿದ್ಧತೆಗಳೂ ಆಗಿವೆ.'

ಹೀಗೆ ರಾಜರು ತಮ್ಮ-ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದಾಗ ರಾಜನಿಗೆ ಅತಿಪ್ರಿಯನಾದ ಸುಮಂತ್ರನು ಅಲ್ಲಿಗೆ ಬಂದು ನೆರೆದಿದ್ದ ರಾಜರೆಲ್ಲರನ್ನೂ ಉದ್ದೇಶಿಸಿ ಹೇಳಿದನು :

"ರಾಜೇಂದ್ರರೇ! ನಿಮ್ಮೆಲ್ಲರಿಗೂ ಸ್ವಾಗತವು. ದಶರಥರಾಜನ ಆಜ್ಞೆ

ಯಂತೆ ರಾಮನನ್ನು ಕರೆತರಲು ನಾನು ಅವಸರದಿಂದ ಹೋಗುತ್ತಿದ್ದೇನೆ. ಆದರೆ ನೀವು ರಾಜನಿಗೂ ಮತ್ತು ರಾಮನಿಗೂ ವಿಶೇಷವಾಗಿ ಪೂಜ್ಯರಾಗಿರು ವಿರಿ. ಆದುದರಿಂದ ಮೊದಲು ನೀವು ಬಂದಿರುವ ವಿಷಯವನ್ನು ರಾಜನಿಗೆ ತಿಳಿಸುವುದು ನನ್ನ ಕರ್ತವ್ಯವಾಗಿದೆ. ಆಯುಷ್ಮಂತರಾದ ನಿಮ್ಮ ಆದೇಶದಂತೆ ನಾನೀಗಲೇ ಹೋಗಿ ರಾಜನ ಕುಶಲವನ್ನು ಪ್ರಶ್ನಿಸುತ್ತೇನೆ. ಈಗತಾನೇ ಎಚ್ಚರಗೊಂಡಿರುವ ರಾಜನು (ನಿಮ್ಮನ್ನು ಸ್ವಾಗತಿಸಲು) ಇಲ್ಲಿಗೆ ಆಗಮಿಸದೇ ಇರುವ ಕಾರಣವನ್ನೂ ಪ್ರಶ್ನಿಸುತ್ತೇನೆ." ಹೀಗೆ ಹೇಳಿ ಹಿಂದಿನ ವೃತ್ತಾಂತ ಗಳೆಲ್ಲವನ್ನೂ ತಿಳಿದಿದ್ದ ಸುಮಂತ್ರನು ತನ್ನ ಪ್ರವೇಶಕ್ಕೆ ಯಾವಾಗಲೂ ತಡೆಯಿರದಿದ್ದಅಂತಃಪುರವನ್ನುಪುನಃಪ್ರವೇಶಿಸಿದನು.* ಒಳಗೆ ಹೋಗಿ ರಾಜನ ಸಮೀಪದಲ್ಲಿ ಕೈಮುಗಿದು ನಿಂತು ದಶರಥನ ವಂಶಾವಳಿಯನ್ನು ಸುಮಧುರವಾಗಿ ಹೇಳಿದನು. ದಶರಥನ ಶಯ್ಯಾಗಾರಕ್ಕೆ ಹೋಗಿ ತೆರೆಯ ಹೊರಗೆ ನಿಂತು ಗುಣಯುಕ್ತವಾದ ಆಶಂಸನೆಗಳಿಂದ ರಾಜನನ್ನು ಸ್ತೋತ್ರ ಮಾಡಿದನು :

ಸೋಮಸೂರ್ಯೌ ಚ ಕಾಕುತ್ಸ್ಥ ಶಿವವೈಶ್ರವಣಾವಪಿ ।
ವರುಣಶ್ಚಾಗ್ನಿರಿನ್ದ್ರಶ್ಚ ವಿಜಯಂ ಪ್ರದಿಶನ್ತು ತೇ ॥೨೨॥

"ದಶರಥಮಹಾರಾಜ! ಚಂದ್ರ-ಸೂರ್ಯರೂ, ಶಿವ-ಕುಬೇರರೂ, ಅಗ್ನಿ-ಇಂದ್ರ-ವರುಣರೂ ನಿನಗೆ ವಿಜಯವನ್ನುಂಟುಮಾಡಲಿ, ಪೂಜ್ಯಳಾದ ನಿಶಾದೇವಿಯು ಹೊರಟುಹೋದಳು. ಮಂಗಳಕರವಾದ ಹಗಲು ಉಪಸ್ಥಿತ ವಾಗಿದೆ. ಎಚ್ಚರಗೊಳ್ಳು. ಮುಂದಿನ ಮಂಗಳಕಾರ್ಯಕ್ಕೆ ಸಿದ್ಧನಾಗು. ಬ್ರಾಹ್ಮಣರೂ, ಆಶ್ರಿತರಾಜರೂ, ಸೇನಾಪತಿಗಳೂ, ವೈಶ್ಯಮುಖ್ಯರೂ ನಿನ್ನ ದರ್ಶನಾಕಾಂಕ್ಷಿಗಳಾಗಿ ಅರಮನೆಯ ಮಹಾದ್ವಾರದ ಬಳಿಗೆ ಆಗಮಿಸಿದ್ದಾರೆ."

---

* ಇಲ್ಲಿಗೆ ಮೂರು ಸಾವಿರ ಶ್ಲೋಕಗಳು ಮುಗಿದುವೆಂದೂ ಮುಂದಿನ ಶ್ಲೋಕವಾದ ತುಷ್ಟಾವಾಸ್ಯ–ಎಂಬುದು ನಾಲ್ಕನೆಯ ಸಾವಿರದ ಮೊದಲ ಶ್ಲೋಕವೆಂದು ಮೊದಲನೆಯ ಅಕ್ಷರವಾದ 'ತು' ಎಂಬುದು ಗಾಯತ್ರಿಯ ನಾಲ್ಕನೆಯ ಅಕ್ಷರವೆಂದೂ ವ್ಯಾಖ್ಯಾನಕಾರರು ಹೇಳುತ್ತಾರೆ. ಈಗಿರುವ ಪಾಠಕ್ರಮದಲ್ಲಿ ಸಾವಿರಗಳ ಸಂಖ್ಯೆಯನ್ನು ಸಮನ್ವಯಿಸುವುದು ಕಷ್ಟ.

ತನ್ನನ್ನು ಈ ವಿಧವಾಗಿ ಸ್ತೋತ್ರಮಾಡುತ್ತಿರುವವನು ಮಂತ್ರ ಕೋವಿದನಾದ ಸುಮಂತ್ರನೇ ಆಗಿರುವನೆಂಬುದನ್ನು ರಾಜನು ತಿಳಿದು ಹೇಳಿದನು :

"ಸುಮಂತ್ರ! ರಾಮನನ್ನು ಶೀಘ್ರವಾಗಿ ಕರೆತರಲು ಆಜ್ಞಾಪಿಸಿದ್ದೆ ನಲ್ಲವೇ? ಯಾವ ಕಾರಣದಿಂದ ನೀನು ನನ್ನ ಆಜ್ಞೆಯನ್ನು ನಿರ್ವಹಿಸಲಿಲ್ಲ? ನನ್ನನ್ನು ಎಚ್ಚರಗೊಳಿಸಲು ನಾನಿಲ್ಲಿ ನಿದ್ರೆಮಾಡುತ್ತಿಲ್ಲ. ನನ್ನ ಆಜ್ಞಾನು ಸಾರವಾಗಿ ಶ್ರೀರಾಮನನ್ನು ಶೀಘ್ರವಾಗಿ ಇಲ್ಲಿಗೆ ಕರೆದುಕೊಂಡು ಬಾ."

ಹೀಗೆ ದಶರಥನು ಪುನಃ ಸುಮಂತ್ರನಿಗೆ ರಾಮನನ್ನು ಕರೆತರುವಂತೆ ಆಜ್ಞೆಮಾಡಿದನು. ಆ ಮಾತುಗಳನ್ನು ಕೇಳಿ ಸುಮಂತ್ರನು ರಾಜನಿಗೆ ತಲೆಬಾಗಿ ನಮಸ್ಕರಿಸಿ ಮಹಾಸಂತೋಷಕರವಾದ ಕಾರ್ಯವು ನಡೆಯ ಲಿರುವುದೆಂದು ಭಾವಿಸಿ ರಾಜಭವನದಿಂದ ಹೊರಟನು. ಪತಾಕೆ-ಧ್ವಜ ಗಳಿಂದ ಪರಿಶೋಭಿಸುತ್ತಿದ್ದ ರಾಜಮಾರ್ಗವನ್ನು ನೋಡಿ ಆನಂದಭರಿತನಾಗಿ ಹಾಗೆಯೇ ದಾರಿಯುದ್ದಕ್ಕೂ ಬೀದಿಯ ಸೊಬಗನ್ನು ವೀಕ್ಷಿಸುತ್ತಾ ರಾಮ ಭವನದ ಕಡೆಗೆ ಹೋದನು. ಒಂದೆಡೆಯಲ್ಲಿ ಸರ್ವರಿಗೂ ಹರ್ಷದಾಯಕ ವಾದ ಪಟ್ಟಾಭಿಷೇಕದ ಸನ್ನಿವೇಶಗಳನ್ನೊಳಗೊಂಡ ರಾಮನನ್ನು ಕುರಿತಾದ ಕಥೆಗಳನ್ನು ಕೇಳಿದನು. ಸ್ವಲ್ಪದೂರ ಹೋದನಂತರ ಕೈಲಾಸಶಿಖರದ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ, ಅತ್ಯಂತಮನೋಹರವಾಗಿದ್ದ, ಇಂದ್ರನ ಅರಮನೆಗೆ ಸಮಾನವಾಗಿದ್ದ ಶ್ರೀರಾಮನ ಅರಮನೆಯನ್ನು ಸುಮಂತ್ರನು ನೋಡಿದನು.

ಶ್ರೀರಾಮನ ಅರಮನೆಯು ವಿಶಾಲವಾದ ಮತ್ತು ಎತ್ತರವಾದ ಬಾಗಿಲುಗಳಿಂದ ಕೂಡಿದ್ದಿತು. ನೂರಾರು ವೇದಿಕೆಗಳಿಂದ ಶೋಭಾಯಮಾನ ವಾಗಿದ್ದಿತು. ಸ್ವರ್ಣಮಯವಾದ ಶಿಖರಗಳಿಂದ ಕೂಡಿದ್ದಿತು. ಅರಮನೆಗೆ ಮಣಿಮಯವಾದ ಹೆಬ್ಬಾಗಿಲಿದ್ದಿತು. ಶರತ್ಕಾಲದ ಮೇಘದಂತೆ ಶ್ವೇತವರ್ಣ ದಿಂದ ಪ್ರಕಾಶಿಸುತ್ತಿದ್ದಿತು. ದೇದೀಪ್ಯಮಾನವಾದ ಮೇರುಪರ್ವತದ ಗುಹೆ ಯಂತಿದ್ದಿತು. ಬಹುಮುಖ್ಯವಾದ ಮತ್ತು ಶ್ರೇಷ್ಠವಾದ ಮಣಿಗಳ ಮಾಲಿಕೆಗಳಿಂದ ಸಮಲಂಕೃತವಾಗಿದ್ದಿತು. ಅರಮನೆಯು ಸಂಪೂರ್ಣವಾಗಿ

ಮುತ್ತುಗಳಿಂದಲೂ, ಮಣಿಗಳಿಂದಲೂ ವ್ಯಾಪ್ತವಾಗಿದ್ದಿತು. ಚಂದನ, ಅಗುರು–ಇವೇ ಮುಂತಾದ ಧೂಪಗಳಿಂದ ಸುಗಂಧಿತವಾಗಿದ್ದಿತು. ಅರಮನೆಯ ಎಲ್ಲ ಕಡೆಗಳಿಂದಲೂ ಸುಗಂಧದ್ರವ್ಯಗಳ ಧೂಪಧೂಮವು ಹೊರಸೂಸುತ್ತಿದ್ದು–ಮನೋಜ್ಞವಾದ ಗಂಧಗಳ ಉತ್ಪತ್ತಿಸ್ಥಾನವಾದ ದುರ್ದರಶಿಖರದಂತೆಯೇ ಆ ಅರಮನೆಯು ಶೋಭಿಸುತ್ತಿದ್ದಿತು. ನಿನಾದ ಮಾಡುತ್ತಿದ್ದ ಸಾರಸ–ನವಿಲು ಇವೇ ಮುಂತಾದ ಪಕ್ಷಿಗಳಿಂದ ಸಮಾವೃತ ವಾಗಿದ್ದ ಆ ಅರಮನೆಯು ಪ್ರಕಾಶಮಾನವಾಗಿ ಕಾಣುತ್ತಿದ್ದಿತು. ಬಾಗಿಲುಗಳು, ಗೋಡೆ ಮತ್ತು ಸ್ತಂಭಗಳಲ್ಲಿ ಚಿನ್ನದಿಂದ ನಿರ್ಮಿತವಾದ ತೋಳಗಳ ಸಾಲುಗಳಿಂದ ಅರಮನೆಯು ರಾರಾಜಿಸುತ್ತಿದ್ದಿತು.

ಆ ರಾಜಭವನವು ತನ್ನ ಅತಿಶಯವಾದ ಕಾಂತಿಯಿಂದ ಪ್ರಾಣಿಗಳ ಕಣ್ಮನಗಳೆರಡನ್ನೂ ಆಕರ್ಷಿಸುತ್ತಿದ್ದಿತು. ಚಂದ್ರ-ಸೂರ್ಯರ ಪ್ರಕಾಶದಂತೆ ಪ್ರಕಾಶಮಾನವಾಗಿದ್ದಿತು. ಇಂದ್ರ-ಕುಬೇರರ ಅರಮನೆಗಳಿಗೆ ಸದೃಶವಾಗಿ ದ್ದಿತು. ನಾನಾವಿಧವಾದ ಪಕ್ಷಿಗಳಿಂದ ಸಮಾವೃತವಾಗಿದ್ದಿತು. ಇಂತಹ ಮೇರುಶಿಖರಕ್ಕೆ ಸಮಾನವಾಗಿದ್ದ, ಬಹುರಮ್ಯವಾಗಿದ್ದ ಶ್ರೀರಾಮನ ಅರಮನೆಯನ್ನು ಸುಮಂತ್ರನು ನೋಡಿದನು.

ಆ ಸಮಯದಲ್ಲಿ ರಾಮನ ಅರಮನೆಯ ಸುತ್ತಲೂ ಕೈಮುಗಿದು ಕೊಂಡು ಜನರು ನಿಂತಿದ್ದರು. ಪಟ್ಟಾಭಿಷೇಕದ ಸಮಯದಲ್ಲಿ ರಾಮನಿಗೆ ಕೊಡುವ ಸಲುವಾಗಿ ಉಡುಗೊರೆಗಳೊಡನೆ ಆಗಮಿಸಿದ್ದ, ಸುಮುಖರಾದ ಮತ್ತು ಶ್ರೀರಾಮನನ್ನು ನೋಡುವ ಸಲುವಾಗಿ ತಲೆಯೆತ್ತಿಕೊಂಡು ನಿಂತಿದ್ದ ಜನರಿಂದ ರಾಮಭವನವು ಸಮಲಂಕೃತವಾಗಿದ್ದಿತು. ಮಹಾಮೇಘಸದೃಶ ವಾಗಿದ್ದ ಎತ್ತರವಾಗಿದ್ದ ರಾಮನ ಅರಮನೆಯು ಅತ್ಯಂತಶೋಭಾಯ ಮಾನವಾಗಿ ಕಾಣುತ್ತಿದ್ದಿತು. ನಾನಾವಿಧವಾದ ರತ್ನಗಳಿಂದ ವ್ಯಾಪ್ತವಾಗಿದ್ದ ಆ ಅರಮನೆಯು ಕುಳ್ಳರಿಂದಲೂ, ಕಿರಾತರಿಂದಲೂ ಸಮಾವೃತವಾಗಿ ದ್ದಿತು. ಸುಮಂತ್ರನು ಒಳ್ಳೆಯ ಕುದುರೆಗಳಿಂದ ಯುಕ್ತವಾಗಿದ್ದ ರಥದಲ್ಲಿ ಕುಳಿತು ಜನಭರಿತವಾದ ರಾಜಮಾರ್ಗವನ್ನು ಅವಲೋಕಿಸುತ್ತಾ ಹೋಗುತ್ತಿದ್ದನು. ರಾಮನ ಅರಮನೆಯ ಕಡೆಗೆ ಹೋಗುತ್ತಿದ್ದ ರಕ್ಷಣಾ

ಕವಚಯುಕ್ತವಾಗಿದ್ದ ರಥವನ್ನು ನೋಡಿ ಅಲ್ಲಿದ್ದ ಎಲ್ಲ ಜನರ ಮನಸ್ಸುಗಳು ಹರ್ಷಗೊಂಡುವು.

ಬಳಿಕ ಸುಮಂತ್ರನು ಜಿಂಕೆ-ಸಾರಂಗ ಇವೇ ಮುಂತಾದ ಸಾಧು ಪ್ರಾಣಿಗಳಿಂದಲೂ ನವಿಲು, ಕೋಗಿಲೆ, ಗಿಣಿ–ಇವೇ ಮುಂತಾದ ಪಕ್ಷಿಗಳಿಂದಲೂ ಅತ್ಯಂತಶೋಭಾಯಮಾನವಾಗಿದ್ದ, ಇಷ್ಟಾರ್ಥಸಿದ್ಧಿಗೆ ಕಾರಣವಾದ, ದೇವೇಂದ್ರನ ಅರಮನೆಗೆ ಸಮಾನವಾಗಿದ್ದ, ಮಹೈಶ್ವರ್ಯಯುಕ್ತವಾಗಿದ್ದ ಶ್ರೀರಾಮನ ಭವನವನ್ನು ಸೇರಿ ಅದರ ಅಂದಿನ ಸೊಬಗನ್ನು ಕಂಡು ರೋಮಾಚಿಂತನೂ ಆನಂದಭರಿತನೂ ಆದನು.

ಅಲ್ಲಿ ಸುಮಂತ್ರನು ಕೈಲಾಸಶಿಖರಸದೃಶ್ಯವಾಗಿದ್ದ, ಪುಷ್ಪಮಾಲಿಕೆಗಳಿಂದಲೂ–ಮುತ್ತಿನ ಗೋಡೆಗಳಿಂದಲೂ ಅಲಂಕರಿಸಲ್ಪಟ್ಟಿದ್ದ, ಸ್ವರ್ಗದ ಅರಮನೆಯಂತೆಯೇ ಅತಿಸುಂದರವಾಗಿದ್ದ ದೊಡ್ಡ ದೊಡ್ಡ ಹಜಾರಗಳನ್ನು ದಾಟಿ ರಾಮನಿಗೆ ಅತಿಪ್ರಿಯರೂ, ರಾಮನ ಅಭಿಪ್ರಾಯದಂತೆ ನಡೆಯುವವರೂ ಆಗಿದ್ದ ಸಾವಿರಾರು ಜನರನ್ನೂ ದಾಟಿ ಅಂತಃಪುರಕ್ಕೆ ಹೋದನು.

ರಾಮನ ಅರಮನೆಯು ದೇವೇಂದ್ರನ ಅರಮನೆಗೆ ಸದೃಶವಾಗಿದ್ದಿತು. ರಮ್ಯವಾಗಿದ್ದಿತು. ಸುಮನೋಹರವಾಗಿ ಧ್ವನಿಮಾಡುವ ಸುಂದರವಾದ ಮೃಗ-ಪಕ್ಷಿಗಳಿಗೆ ಆಶ್ರಯವಾಗಿದ್ದಿತು. ಮೇರುಪರ್ವತದ ಶಿಖರದಂತೆಯೇ ಎತ್ತರವಾಗಿದ್ದಿತು. ಇಂತಹ ಅನುಪಮವಾದ ಸೌಂದರ್ಯದಿಂದ ವಿರಾಜಿಸುತ್ತಿದ್ದ ಅರಮನೆಯನ್ನು ಸುಮಂತ್ರನು ನೋಡಿದನು.

ಕೋಟಿ-ಕೋಟಿ ಜನರು, ರಥ, ಕುದುರೆ, ಆನೆ–ಇವೇ ಮುಂತಾದ ವಾಹನಗಳನ್ನು ಬದಿಗೆ ನಿಲ್ಲಿಸಿ ರಾಮನಿಗೆ ಸಲ್ಲಿಸಬೇಕಾಗಿದ್ದ ಕಪ್ಪ-ಕಾಣಿಕೆಗಳನ್ನು ಹಿಡಿದು ಬದ್ಧಾಂಜಲಿಗಳಾಗಿ ಅರಮನೆಯ ಬಾಗಿಲಿನಲ್ಲಿ ನಿಂತಿದ್ದರು. ರಾಮಾನುರಾಗಿಗಳಾದ ಇಂತಹವರಿಂದ ವ್ಯಾಪ್ತವಾಗಿದ್ದ ಮಹಾದ್ವಾರವನ್ನು ಸುಮಂತ್ರನು ನೋಡಿದನು.

ಮಹಾಮೇಘದಿಂದ ಕೂಡಿದ ಪರ್ವತದಂತೆಯೇ ಇದ್ದ, ಮದಿಸಿದ್ದ, ಅಂಕುಶಪ್ರಹಾರವನ್ನು ಸಹಿಸದ, ಸುಂದರವಾದ, ಶತ್ರುಸೈನ್ಯವನ್ನು ಭೇದಿಸುವ ಸಾಮರ್ಥ್ಯವನ್ನು ಹೊಂದಿದ್ದ ಮಹಾಕಾಯವುಳ್ಳ ಶತ್ರುಂಜಯವೆಂಬ ರಾಮನ ಪಟ್ಟದಾನೆಯನ್ನು ಸುಮಂತ್ರನು ನೋಡಿದನು.

ಅಲಂಕೃತರಾಗಿ ಆನಂದಭರಿತರಾಗಿ ಅರಮನೆಯ ಸುತ್ತಲೂ ನಿಂತಿದ್ದ ಕಾಲಾಳುಗಳನ್ನೂ, ಕುದುರೆಸವಾರರನ್ನೂ, ಮಾವಟಿಗರನ್ನೂ, ಸೇನಾಪತಿಗಳನ್ನೂ, ಅಮಾತ್ಯಶ್ರೇಷ್ಠರನ್ನೂ, ರಾಜಮಿತ್ರರನ್ನೂ ಸುಮಂತ್ರನು ನೋಡಿ, ಅವರೆಲ್ಲರನ್ನೂ ದಾಟಿ ಸಕಲಸಂಪತ್ಸಮೃದ್ಧವಾಗಿದ್ದ ಶ್ರೀರಾಮನ ಅಂತಃಪುರವನ್ನು ಪ್ರವೇಶಿಸಿದನು.

ಪರ್ವತದ ಶಿಖರದಲ್ಲಿರುವ ನಿಶ್ಚಲವಾದ ಮೇಘದಂತಿದ್ದ, ದೊಡ್ಡ-ದೊಡ್ಡ ಉಪ್ಪರಿಗೆಯ ಮನೆಗಳಂತಿದ್ದ ಸೌಧಗಳಿಂದ ಯುಕ್ತವಾಗಿದ್ದ, ಹೇರಳವಾದ ರತ್ನರಾಶಿಗಳಿಂದ ತುಂಬಿದ್ದ ಶ್ರೀರಾಮನ ಅಂತಃಪುರವನ್ನು– ಮೊಸಳೆಯು ಅಡ್ಡಿ-ಆತಂಕಗಳಿಲ್ಲದೇ ಸಮುದ್ರವನ್ನು ಹೊಗುವಂತೆ– ಸುಮಂತ್ರನು ಯಾವ ತಡೆಯೂ ಇಲ್ಲದೇ ಪ್ರವೇಶಿಸಿದನು.

೧೫ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೬ನೆಯ ಸರ್ಗ

ಸುಮಂತ್ರನು ರಾಜನ ಸಂದೇಶವನ್ನು ಶ್ರೀರಾಮನಿಗೆ ತಿಳಿಸಿದುದು : ಶ್ರೀರಾಮನು ಸೀತಾದೇವಿಯ ಅನುಮತಿಯನ್ನು ಪಡೆದು ಲಕ್ಷ್ಮಣನೊಡನೆ ದಶರಥರಾಜನ ಅರಮನೆಗೆ ಹೊರಟುದು

ಸ ತದನ್ತಃಪುರದ್ವಾರಂ ಸಮತೀತ್ಯ ಜನಾಕುಲಮ್ ।
ಪ್ರವಿವಿಕ್ತಾಂ ತತಃ ಕಕ್ಷ್ಯಾಮಾಸಸಾದ ಪುರಾಣವಿತ್ ॥೧॥

ಬಳಿಕ ಪುರಾಣಗಳನ್ನು (ಹಿಂದಿನ ವೃತ್ತಾಂತವನ್ನು) ತಿಳಿದಿದ್ದ ಸುಮಂತ್ರನು ಜನರಿಂದ ನಿಬಿಡವಾಗಿದ್ದ ಅರಮನೆಯ ಹೊರಾಂಗಣವನ್ನು ದಾಟಿಕೊಂಡು ಜನಬಾಹುಳ್ಯವಿಲ್ಲದ ಅರಮನೆಯ ಒಳಾಂಗಣವನ್ನು ಪ್ರವೇಶಿಸಿದನು.

ಶ್ರೀರಾಮನು ಅರಮನೆಯ ಆ ಒಳಾಂಗಣದಲ್ಲಿ ಪ್ರಾಸಗಳನ್ನೂ, ಧನುಸ್ಸುಗಳನ್ನೂ, ಪರಿಶುದ್ಧವಾದ ಕರ್ಣಕುಂಡಲಗಳನ್ನು ಧರಿಸಿದ್ದ, ಅಂತಃಪುರದ ರಕ್ಷಣೆಯಲ್ಲಿಯೇ ಏಕಾಗ್ರಚಿತ್ತರಾಗಿದ್ದ, ಜಾಗರೂಕರಾಗಿದ್ದ, ಶ್ರೀರಾಮನಲ್ಲಿಯೇ ಹೆಚ್ಚು ಅನುರಕ್ತರಾಗಿದ್ದ, ಸಮವಸ್ತ್ರಧಾರಿಗಳಾದ

ಯುವಕರನ್ನೂ, ಕಾಷಾಯವಸ್ತ್ರಗಳನ್ನು ಧರಿಸಿ ಬೆತ್ತಗಳನ್ನು ಹಿಡಿದು ಶ್ರೀರಾಮನ ಅಂತಃಪುರದ ಬಾಗಿಲಿನಲ್ಲಿ ಜಾಗರೂಕರಾಗಿ ಕುಳಿತಿದ್ದ ವೃದ್ಧರಾದ ಅಂತಃಪುರದ ಅಧಿಕಾರಿಗಳನ್ನೂ ಸುಮಂತ್ರನು ಕಂಡನು. ಶ್ರೀರಾಮನಿಗೆ ಪ್ರಿಯವನ್ನುಂಟುಮಾಡುವುದರಲ್ಲಿಯೇ ಆಸಕ್ತರಾಗಿದ್ದ ದ್ವಾರಪಾಲಕರು ಸುಮಂತ್ರನು ಬರುತ್ತಿರುವುದನ್ನು ಕಂಡು ಸಂಭ್ರಮಯುಕ್ತರಾಗಿ ಆಸನ ಗಳಿಂದ ಎದ್ದು ನಿಂತರು. ಸೇವಾನಿಪುಣನಾದ, ಉದಾರನಾದ, ವಿನಯ ಶೀಲನಾದ ಸುಮಂತ್ರನು ದ್ವಾರಪಾಲಕರಿಗೆ–ತಾನು ಬಂದು ಬಾಗಿಲಿನಲ್ಲಿ ನಿಂತಿರುವುದನ್ನು–ಶ್ರೀರಾಮನಿಗೆ ಶೀಘ್ರವಾಗಿ ತಿಳಿಸುವಂತೆ ಹೇಳಿದನು. ಶ್ರೀರಾಮನಿಗೆ ಪ್ರಿಯವನ್ನುಂಟುಮಾಡುವುದರಲ್ಲಿಯೇ ವಿಶೇಷವಾದ ಆಸಕ್ತಿ ಯಿದ್ದ ಆ ದ್ವಾರಪಾಲಕರು, ಒಡನೆಯೇ ಭಾರ್ಯೆಯಾದ ಸೀತೆಯೊಡನೆ ಕುಳಿತಿದ್ದ ಶ್ರೀರಾಮನ ಬಳಿಗೆ ಹೋಗಿ ಸುಮಂತ್ರನು ಬಂದಿರುವ ವಾರ್ತೆ ಯನ್ನು ತಿಳಿಸಿದರು.

ದ್ವಾರಪಾಲಕರು ಹೇಳಿದ ಮಾತನ್ನು ಕೇಳಿ ಶ್ರೀರಾಮನು–ತಂದೆಯ ಅಂತರಂಗವನ್ನು ಪೂರ್ಣವಾಗಿ ತಿಳಿದಿರುವ ಅಂತರಂಗಮಿತ್ರನಾದ ಸುಮಂತ್ರ ನನ್ನು, ತಂದೆಗೆ ಸಂತೋಷವನ್ನುಂಟುಮಾಡುವ ಆಶಯದಿಂದ–ತಾನಿದ್ದ ಅಂತಃಪುರಕ್ಕೆ ಕರೆಸಿಕೊಂಡನು. ಶ್ರೀರಾಮನ ಆಜ್ಞಾನುಸಾರವಾಗಿ ಸುಮಂತ್ರನು ಅಂತಃಪುರವನ್ನು ಪ್ರವೇಶಿಸುತ್ತಲೇ ಕುಬೇರನಂತಿದ್ದ, ಕನಕಾಂಗದ-ಕೇಯೂರಾದಿ ದಿವ್ಯಾಭರಣಗಳಿಂದಲೂ–ದಿವ್ಯಾಂಬರಗಳಿಂದಲೂ ಸಮಲಂಕೃತನಾಗಿದ್ದ, ಆಸ್ತರಣಸಹಿತವಾದ ಚಿನ್ನದ ಮಂಚದಲ್ಲಿ ಕುಳಿತಿದ್ದ ಶ್ರೀರಾಮನನ್ನು ನೋಡಿದನು. ಹಂದಿಯ ರಕ್ತದ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ, ಅತಿಪವಿತ್ರವಾದ, ಸುಗಂಧಯುಕ್ತವಾದ, ಅತ್ಯಮೂಲ್ಯವಾದ ರಕ್ತಚಂದನವನ್ನು ಲೇಪಿಸಿಕೊಂಡಿದ್ದ, ದಿವ್ಯ ಮಂಗಳಮೂರ್ತಿಯಾದ ಶ್ರೀರಾಮನನ್ನು ಸುಮಂತ್ರನು ನೋಡಿದನು.

ಚಿತ್ತಾನಕ್ಷತ್ರದಿಂದ ಕೂಡಿರುವ ಚಂದ್ರನಂತೆ–ಚಾಮರವನ್ನು ಹಿಡಿದು ಪಾರ್ಶ್ವದಲ್ಲಿ ನಿಂತಿದ್ದ ಸೀತೆಯೊಡನಿದ್ದ ಶ್ರೀರಾಮನನ್ನು ಸುಮಂತ್ರನು ನೋಡಿದನು. ಸ್ವಯಂಪ್ರಕಾಶನಾದ ಸೂರ್ಯದೇವನಂತೆ ತನ್ನ ದಿವ್ಯ ತೇಜಸ್ಸಿ ನಿಂದ ಬೆಳಗುತ್ತಿದ್ದ ವರದನಾದ ಶ್ರೀರಾಮನನ್ನು ವಿನಯಗುಣಜ್ಞನಾದ

ಸುಮಂತ್ರನು–ವಿನೀತನಾದವನು ಸಾಷ್ಟಾಂಗಪೂರ್ವಕವಾಗಿ ಪ್ರಣಾಮಮಾಡಿ ಸ್ತೋತ್ರಮಾಡುವಂತೆ–ಪ್ರಣಾಮಮಾಡಿ ಸ್ತೋತ್ರಮಾಡಿದನು. ಬಳಿಕ ಶ್ರೀರಾಮನಿಂದ ಯಥೋಚಿತವಾಗಿ ಸತ್ಕೃತನಾದ ಸುಮಂತ್ರನು ಕೈಮುಗಿದು ಕೊಂಡು ವಿಹಾರಾರ್ಥವಾಗಿಯೂ–ಶಯನಾರ್ಥವಾಗಿಯೂ ಸಿದ್ಧಪಡಿಸಿದ್ದ ಚಿನ್ನದ ಮಂಚದಲ್ಲಿ ಮಂದಸ್ಮಿತನಾಗಿ ಸೀತೆಯೊಡನೆ ಕುಳಿತಿದ್ದ ಶ್ರೀರಾಮನಿಗೆ ಹೇಳಿದನು :

"ರಾಮ! ಕೌಸಲ್ಯಾದೇವಿಯು ನಿನಗೆ ಜನ್ಮವಿತ್ತು ಸುಪುತ್ರವಂತ ಳಾದಳು. ನಿನಗೆ ಮಂಗಳವಾಗಲಿ. ಪತ್ನಿಯಾದ ಕೈಕೇಯಿಯೊಡನಿರುವ ರಾಜನು ನಿನ್ನನ್ನು ನೋಡಬಯಸಿದ್ದಾನೆ. ತಡಮಾಡದೇ ಕೈಕೇಯಿಯ ಅಂತಃಪುರಕ್ಕೆ ಹೋಗು."

ಸುಮಂತ್ರನು ಹೀಗೆ ಹೇಳಲು–ಮಹಾತೇಜಸ್ವಿಯಾದ, ಪುರುಷಶ್ರೇಷ್ಠ ನಾದ ರಾಮನು ಸಂತುಷ್ಟನಾಗಿ, ಸುಮಂತ್ರನ ಮಾತನ್ನು ಅಂಗೀಕರಿಸಿ ಅವನನ್ನು ಯಥೋಚಿತವಾಗಿ ಸತ್ಕರಿಸಿ, ಸೀತಾದೇವಿಗೆ ಹೇಳಿದನು :

"ದೇವಿ! ನನ್ನ ತಾಯಿ-ತಂದೆಗಳಾದ ಕೈಕೇಯೀ-ದಶರಥರು ಅಂತಃ ಪುರದಲ್ಲಿ ನನ್ನ ಪಟ್ಟಾಭಿಷೇಕಕ್ಕೆ ಸಂಬಂಧಿಸಿದಂತೆ ಪರ್ಯಾಲೋಚಿಸು ತ್ತಿದ್ದಾರೆ. ಪ್ರಿಯಕಾಮಳೂ, ನಿಪುಣೆಯೂ, ಕಪ್ಪಾದ ಕಣ್ಣುಗಳಿಂದ ಕೂಡಿರು ವವಳೂ ಆದ ನನ್ನ ತಾಯಿಯು ರಾಜನ ಅಭಿಪ್ರಾಯವನ್ನು ಅನುಲಕ್ಷಿಸಿ ನನಗೆ ಪಟ್ಟಾಭಿಷೇಕಮಾಡುವಂತೆ ರಾಜನನ್ನು ಪ್ರಚೋದಿಸುತ್ತಿದ್ದಾಳೆ. ಕೇಕಯರಾಜನ ಮಗಳಾದ, ನನ್ನ ಪ್ರಯೋಜನವನ್ನು ಬಯಸುತ್ತಾ–ಯಾವಾಗಲೂ ನನಗೆ ಹಿತವನ್ನೇ ಬಯಸುವ, ಪತಿಯ ಅನುವರ್ತಿನಿಯಾದ ನನ್ನ ತಾಯಿಯು ನನ್ನ ಪಟ್ಟಾಭಿಷೇಕದ ವಿಷಯವನ್ನು ಕೇಳಿ ಪರಮ ಸಂತುಷ್ಟಳಾಗಿದ್ದಾಳೆ. ಇದರಲ್ಲಿ ಸಂಶಯವೇ ಇಲ್ಲ. ಪ್ರಿಯಪತ್ನಿಯೊಡನಿರುವ ನಮ್ಮ ತಂದೆಯು ನನ್ನನ್ನು ಕರೆದೊಯ್ಯಲು ನನಗೆ ಪ್ರಯೋಜನವಾದ ಕಾರ್ಯವನ್ನು ಮಾಡುವುದರಲ್ಲಿ ಆಸಕ್ತನಾದ ಸುಮಂತ್ರನನ್ನೇ ಕಳುಹಿಸಿರು ತ್ತಾನೆ.

ಯಾದೃಶೀ ಪರಿಷತ್ತತ್ರ ತಾದೃಶೋ ದೂತ ಆಗತಃ ।
ಧ್ರುವಮದ್ಯೈವ ಮಾಂ ರಾಜಾ ಯೌವರಾಜ್ಯೇಽಭಿಷೇಕ್ಷ್ಯತಿ ॥೧೯॥

ಪ್ರಿಯೆ! ಅಂತಃಪುರದಲ್ಲಿ ಯಾವ ಸದಭಿಪ್ರಾಯವುಳ್ಳ ಸಭೆಯಿರುವುದೋ–ಅಂತಹ ಸದಭಿಪ್ರಾಯವುಳ್ಳ ದೂತನೇ ನಮ್ಮಲ್ಲಿಗೆ ಆಗಮಿಸಿದ್ದಾನೆ. (ನನ್ನ ಹಿತಚಿಂತಕನಾದ ಸುಮಂತ್ರನು ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದರಿಂದಲೇ ಅಂತಃಪುರದಲ್ಲಿರುವವರು ನನ್ನ ವಿಷಯದಲ್ಲಿ ಸದಭಿಪ್ರಾಯವುಳ್ಳವರಾಗಿರುವರೆಂಬುದನ್ನು ನಿಶ್ಚಿಯಿಸಬಹುದಾಗಿದೆ.) ಆದುದ ರಿಂದ ಈ ಕೂಡಲೇ ರಾಜನು ನನ್ನನ್ನು ಯುವರಾಜಪದವಿಯಲ್ಲಿರಿಸಿ ಪಟ್ಟಾಭಿಷೇಕಮಾಡುತ್ತಾನೆ. ಇದು ನಿಶ್ಚಯ.

ಪ್ರಿಯೆ! ಅತ್ಯಂತಸಂತೋಷಕರವಾದ ವಿಷಯವಿದು. ನಾನೀಗಲೇ ಸುಮಂತ್ರನೊಡನೆ ರಾಜನ ಅರಮನೆಗೆ ಹೋಗಿ ತಂದೆಯನ್ನು ಕಾಣುತ್ತೇನೆ. ನೀನು ನಿನ್ನ ಸಖೀಜನರೊಡನೆ ಯಥೇಚ್ಛವಾಗಿ ವಿಹರಿಸುತ್ತಾ ಸುಖವಾಗಿರು."

ಶ್ರೀರಾಮನು ಸೀತೆಯನ್ನು ಹೀಗೆ ಸಂತೈಸಿದನಂತರ ಸೀತಾದೇವಿಯು ಪತಿಗೆ ಮಂಗಳವಾಗಲೆಂದು ಪ್ರಾರ್ಥನೆಮಾಡುತ್ತಾ ಪತಿಯ ಜೊತೆ ಯಲ್ಲಿಯೇ ಮಹಾದ್ವಾರದವರೆಗೂ ಹೋದಳು.

ರಾಜ್ಯಂ ದ್ವಿಜಾತಿಭಿರ್ಜುಷ್ಟಂ ರಾಜಸೂಯಾಭಿಷೇಚನಮ್ ।
ಕರ್ತುಮರ್ಹತಿ ತೇ ರಾಜಾ ವಾಸವಸ್ಯೇವ ಲೋಕಕೃತ್ ॥೨೨॥

"ಪತಿದೇವ! ಲೋಕಕರ್ತೃವಾದ ಬ್ರಹ್ಮನು ಇಂದ್ರನಿಗೆ ತ್ರೈಲೋಕ್ಯಾಧಿಪತ್ಯದಲ್ಲಿ ಪಟ್ಟಾಭಿಷೇಕಮಾಡಿದಂತೆ–ದಶರಥರಾಜನು ನಿನಗೆ ಬ್ರಾಹ್ಮಣರಿಂದ ಸಂಸೇವ್ಯಮಾನವಾಗಿರುವ ಈ ರಾಜ್ಯದ ರಾಜಸೂಯಾಭಿಷೇಕವನ್ನು ಮಾಡಲಿ. (ಚಕ್ರವರ್ತಿಯಾಗಿ ನಿನಗೆ ಪಟ್ಟಕಟ್ಟಲಿ.)*

ದೀಕ್ಷಿತಂ ವ್ರತಸಂಪನ್ನಂ ವರಾಜಿನಧರಂ ಶುಚಿಮ್ ।
ಕುರಙ್ಗಶೃಙ್ಗಪಾಣಿಂ ಚ ಪಶ್ಯನ್ತೀ ತ್ವಾಂ ಭಜಾಮ್ಯಹಮ್ ॥೨೩॥

---

* ರಾಜಸೂಯಾಭಿಷೇಚನಮ್ ಕರ್ತುಮರ್ಹತಿ–ಎಂದು ಸೀತೆಯು ಹೇಳುತ್ತಾಳೆ. ಪೃಥ್ವಿಯ ಸಕಲರಾಜರನ್ನೂ ಗೆದ್ದು ರಾಜಸೂಯವನ್ನೂ ಮಾಡಿದವನು ಅಖಂಡ ಭೂಮಂಡಲಕ್ಕೆ ಚಕ್ರವರ್ತಿಯಾಗುತ್ತಾನೆ. ರಾಜಸೂಯಯಾಗಾನಂತರದಲ್ಲಿ ಅಂತಹವನಿಗೆ ಸಾಮ್ರಾಜ್ಯಪಟ್ಟಾಭಿಷೇಕವೂ ನಡೆಯುತ್ತದೆ. ಶ್ರೀರಾಮನಿಗೆ ಅಂತಹ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ಸೀತೆಯು ಆಶಿಸುತ್ತಾಳೆ.

ನೀನು ರಾಜಸೂಯಯಾಗದಲ್ಲಿ ದೀಕ್ಷಿತನಾಗುವುದನ್ನು* ನೋಡಲು ನಾನು ಅಭಿಲಾಷಿಸಿದ್ದೇನೆ. ಯಾಗದ ದೀಕ್ಷಿತನಾಗಿ, ನಿಯಮವ್ರತಾನುಷ್ಠಾನ ಪರನಾಗಿ, ಕೃಷ್ಣಾಜಿನಧರನಾಗಿ, ಶುಚಿಯಾಗಿ ಸಾರಂಗದ ಕೊಂಬನ್ನು[1] ಕೈಯಲ್ಲಿ ಹಿಡಿದಿರುವ ನಿನ್ನ ದಿವ್ಯಮಂಗಳಮೂರ್ತಿಯನ್ನು ನೋಡುತ್ತಾ ನಿನ್ನನ್ನು ಸೇವಿಸುವ ಆಶಯದಿಂದಿರುತ್ತೇನೆ.

ಪೂರ್ವಾಂ ದಿಶಂ ವಜ್ರಧರೋ ದಕ್ಷಿಣಾಂ ಪಾತು ತೇ ಯಮಃ ।
ವರುಣಃ ಪಶ್ಚಿಮಾಮಾಶಾಂ ಧನೇಶಸ್ತೂತ್ತರಾಂ ದಿಶಮ್ ॥೨೪॥

ನಿನ್ನ ಅಖಂಡಸಾಮ್ರಾಜ್ಯದ ಪೂರ್ವದಿಕ್ಕನ್ನು ಇಂದ್ರನು ರಕ್ಷಿಸಲಿ. ದಕ್ಷಿಣದಿಕ್ಕನ್ನು ಯಮನು ರಕ್ಷಿಸಲಿ. ಪಶ್ಚಿಮದಿಕ್ಕನ್ನು ವರುಣನು ರಕ್ಷಿಸಲಿ. ಉತ್ತರದಿಕ್ಕನ್ನು ಧನೇಶನಾದ ಕುಬೇರನು ರಕ್ಷಿಸಲಿ."

ಬಳಿಕ ಮಂಗಳಸ್ನಾನ-ಕೌತುಕಬಂಧನಾದಿಗಳನ್ನು ಮುಗಿಸಿದ್ದ ಶ್ರೀರಾಮನು ಸೀತೆಯ ಅನುಮತಿಯನ್ನು ಪಡೆದು ಸುಮಂತ್ರನೊಡನೆ ತನ್ನ ಅರಮನೆಯಿಂದ ಹೊರಟನು. ಪರ್ವತದ ಗುಹೆಯಲ್ಲಿ ಮಲಗಿರುವ ಸಿಂಹವು ಪರ್ವತದಿಂದ ಹೊರಬರುವಂತೆ–ಅಂತಃಪುರದಿಂದ ಹೊರಬಂದ ಶ್ರೀರಾಮನು ಬಾಗಿಲಿನಲ್ಲಿ ಕೈಮುಗಿದುಕೊಂಡು ವಿನೀತನಾಗಿ ನಿಂತಿದ್ದ ಲಕ್ಷ್ಮಣನನ್ನು ನೋಡಿದನು. ಲಕ್ಷ್ಮಣನೊಡನೆ ಅರಮನೆಯ ಮಧ್ಯದ ಹಜಾರಕ್ಕೆ ಬಂದು, ಅಲ್ಲಿದ್ದ ಸುಹೃದರೊಡನೆ ಸೇರಿ ಪಟ್ಟಾಭಿಷೇಕವನ್ನು ನೋಡಲು ಬಂದಿದ್ದ ಪ್ರಜೆಗಳನ್ನೂ ಕಂಡು, ಅವರೆಲ್ಲರನ್ನೂ ಆದರಪೂರ್ವಕ

---

* ಈ ಶ್ಲೋಕದಲ್ಲಿ ಸೀತೆಯು ರಾಜಸೂಯಯಾಗದ ವಿಷಯವಾಗಿ ಒತ್ತಿಹೇಳುತ್ತಾಳೆ. ರಾಜಸೂಯಯಾಗದ ದೀಕ್ಷಿತನಾಗಲು ಪ್ರಪಂಚವನ್ನೆಲ್ಲಾ ಶ್ರೀರಾಮನು ಜಯಿಸಬೇಕೆಂಬ ವಿಷಯವು ಸೀತೆಗೆ ತಿಳಿಯದೇ ಇಲ್ಲ. ರಾಜನ ಅನುಗ್ರಹದಿಂದ ಸಿಕ್ಕುವ ಯುವರಾಜಪದವಿಯು, ಮುಂದೆ ಪರಾಕ್ರಮದಿಂದ ಭೂಮಂಡಲವನ್ನು ಜಯಿಸಿ ರಾಜಸೂಯಯಾಗಮಾಡಿ ಚಕ್ರವರ್ತಿಯ ಪದವಿಯನ್ನು ಪಡೆಯಲು ಕಾರಣವಾಗುತ್ತದೆ– ಎಂಬುದು ಸೀತೆಯ ಆಶಯವಾಗಿತ್ತೆಂದು ಹೇಳಬಹುದಾಗಿದೆ.

1 ಯಾಗದ ದೀಕ್ಷಿತನಾಗಿರುವಾಗ ಶರೀರದಲ್ಲಾಗುವ ನವೆಯನ್ನು ಉಗುರಿನಿಂದ ಕೆರೆದುಕೊಳ್ಳಬಾರದು. ಅದಕ್ಕಾಗಿ ಸಾರಂಗದ ಕೊಂಬಿನ ಭಾಗವನ್ನು ಇಟ್ಟುಕೊಳ್ಳುತ್ತಾರೆ.

ವಾಗಿ ಅಭಿನಂದಿಸಿ, ಅನಂತರ ಮಹಾದ್ವಾರದ ಬಳಿಗೆ ಸಾಗಿ ಅಲ್ಲಿ ಸಜ್ಜಾಗಿ ನಿಂತಿದ್ದ, ಯಜ್ಞೇಶ್ವರನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ, ಹುಲಿಯ ಚರ್ಮವನ್ನು ಹಾಸಿದ್ದ, ಸೋಭಾಯಮಾನವಾಗಿದ್ದ ದಿವ್ಯರಥವನ್ನು ಪುರುಷವ್ಯಾಘ್ರನಾದ ಶ್ರೀರಾಮನು ಹತ್ತಿದನು.

ಶ್ರೀರಾಮನು ಕುಳಿತಿದ್ದ ಆ ದಿವ್ಯರಥದ ಧ್ವನಿಯು ಮೇಘಮಂಡಲದಿಂದ ಹೊರಬರುವ ಗುಡುಗಿನ ಶಬ್ದವನ್ನು ಅನುಕರಿಸುತ್ತಿದ್ದಿತು. ರಥದ ಒಳಭಾಗವು ವಿಸ್ತಾರವಾಗಿದ್ದಿತು. ನಾನಾವಿಧವಾದ ರತ್ನಗಳಿಂದಲೂ ಸುವರ್ಣಮಯವಾದ ಆಭರಣಗಳಿಂದಲೂ ಅಲಂಕೃತವಾಗಿದ್ದಿತು. ಮೇರು ಪರ್ವತದಂತೆ ಥಳ-ಥಳಿಸುತ್ತಿದ್ದ ಆ ರಥವು ಹಾದಿಯಲ್ಲಿದ್ದ ಜನರ ಕಣ್ಣುಗಳನ್ನು ಅಪಹರಿಸುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ರಥಕ್ಕೆ ಕಟ್ಟಿದ್ದ ಶ್ರೇಷ್ಠವಾದ ಕುದುರೆಗಳು ಆನೆಯ ಮರಿಗಳಂತೆ ಪುಷ್ಟವಾಗಿದ್ದುವು. ಇಂತಹ ಅನುಪಮವಾದ ರಥದಲ್ಲಿ ಕುಳಿತು–ದೇವೇಂದ್ರನು ದಿವ್ಯಾಶ್ವಗಳನ್ನು ಕಟ್ಟಿದ್ದ ದಿವ್ಯರಥದಲ್ಲಿ ಕುಳಿತು ಪ್ರಯಾಣಮಾಡುವಂತೆ–ಶ್ರೀರಾಮನು ದಿವ್ಯವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಾ ಶೀಘ್ರವಾಗಿ ತಂದೆಯ ಅರಮನೆಗೆ ಹೊರಟನು. ಗಡ-ಗಡಾಶಬ್ದಗಳಿಂದ ಕೂಡಿದ್ದ ಕಾಂತಿಯುಕ್ತವಾಗಿದ್ದ ಶ್ರೀರಾಮನ ರಥವು ಅಂತರಿಕ್ಷದಲ್ಲಿ ಗುಡುಗುತ್ತಿರುವ ಮೇಘದೋಪಾದಿಯಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುತ್ತಾ–ಚಂದ್ರನು ದಟ್ಟವಾದ ಮೋಡದಿಂದ ಹೊರಬರುವಂತೆ–ಶ್ರೀರಾಮನ ಅರಮನೆಯಿಂದ ಹೊರಟಿತು.

ಲಕ್ಷ್ಮಣನೂ ರಥವನ್ನು ಹತ್ತಿ ಛತ್ರವನ್ನೂ–ಚಾಮರವನ್ನೂ ಹಿಡಿದುಕೊಂಡು ಶ್ರೀರಾಮನ ಹಿಂದೆ ಅಂಗರಕ್ಷಕನಾಗಿ ನಿಂತಿದ್ದನು. ಬಹಳ ಹೊತ್ತಿನಿಂದಲೂ ಕಾದುನಿಂತಿದ್ದ ಜನರು–ಶ್ರೀರಾಮನು ರಥಾರೂಢನಾಗಿ ದಶರಥನ ಅರಮನೆಗೆ ಹೊರಟೊಡನೆಯೇ ಸಂತೋಷಾಧಿಕ್ಯದಿಂದ ಕಲ-ಕಲನಿನಾದಗಳನ್ನು ಮಾಡಿದರು. ಆ ಜಯಘೋಷವು ಸರ್ವತ್ರ ವ್ಯಾಪಿಸಿತು. ರಥವನ್ನು ಹಿಂಬಾಲಿಸಿ ಶ್ರೇಷ್ಠವಾದ ಕುದುರೆಗಳೂ, ಪರ್ವತೋಪಮವಾದ ಆನೆಗಳೂ ಸಾವಿರಾರು ಸಂಖ್ಯೆಯಲ್ಲಿ ಹೋಗುತ್ತಿದ್ದುವು. ರಥದ ಮುಂಭಾಗದಲ್ಲಿ ಸಮವಸ್ತ್ರಧಾರಿಗಳಾಗಿದ್ದ, ಚಂದನಾಗರುಗಳನ್ನು ಲೇಪಿಸಿಕೊಂಡಿದ್ದ, ಖಡ್ಗ ಮತ್ತು ಧನುಸ್ಸುಗಳನ್ನು ಹಿಡಿದು ಸನ್ನದ್ಧರಾಗಿದ್ದ ಶೂರರಾದ ಸೈನಿಕರೂ–

ಶ್ರೀರಾಮನಿಗೆ ಮಂಗಳವನ್ನು ಹರಸುತ್ತಿದ್ದ ಜನರೂ ಹೋಗುತ್ತಿದ್ದರು. ರಥವು ಹೋಗುತ್ತಿದ್ದ ರಾಜಮಾರ್ಗದಲ್ಲಿ ಮಂಗಳವಾದ್ಯಗಳ ಘೋಷ ವನ್ನೂ, ಶ್ರೀರಾಮನ ಗುಣಾತಿಶಯಗಳನ್ನು ವರ್ಣಿಸುವ ಕರ್ಣಾನಂದಕರ ವಾದ ವಂದಿ-ಮಾಗಧರ ಹಾಡುಗಳನ್ನೂ, ಶೂರರಾದ ಸೈನಿಕರ ಸಿಂಹನಾದ ಗಳನ್ನೂ ಅಯೋಧ್ಯಾಪುರವಾಸಿಗಳು ಕೇಳಿದರು. ಶ್ರೀರಾಮನು ರಥಾರೂಢ ನಾಗಿ ಹೋಗುತ್ತಿದ್ದ ರಾಜಮಾರ್ಗದ ಎರಡು ಕಡೆಗಳಲ್ಲಿಯೂ ಉಪ್ಪರಿಗೆಯ ಮನೆಗಳ ಮೇಲಿದ್ದ ಕಿಟಕಿಗಳ ಸಮೀಪದಲ್ಲಿ ಸರ್ವಾಲಂಕಾರಭೂಷಿತೆಯ ರಾದ ಸ್ತ್ರೀಯರು ನಿಂತು ಶ್ರೀರಾಮನ ಮೇಲೆ ಪುಷ್ಪಾಂಜಲಿಯನ್ನು ಸುರಿಸು ತ್ತಿದ್ದರು. ಅನವರತವಾದ ಪುಷ್ಪವೃಷ್ಟಿಯೊಡನೆ ಶ್ರೀರಾಮನು ಮುಂದೆ ಸಾಗುತ್ತಿದ್ದನು. ಉಪ್ಪರಿಗೆಗಳ ಮೇಲೆ ಮತ್ತು ಕೆಳಭಾಗಗಳಲ್ಲಿದ್ದ ಸರ್ವಾಂಗ ಸುಂದರಿಯಾದ ಸ್ತ್ರೀಯರು ಶ್ರೀರಾಮನನ್ನು ಸಂತೋಷಪಡಿಸುವ ಇಚ್ಛೆಯಿಂದ ಅವನ ಹಿರಿಮೆಯನ್ನು ಮುಕ್ತಕಂಠದಿಂದ ಹೊಗಳುತ್ತಾ ಅಭಿನಂದಿಸುತ್ತಿದ್ದರು.

ನೂನಂ ನನ್ದತಿ ತೇ ಮಾತಾ ಕೌಸಲ್ಯಾ ಮಾತೃನನ್ದನ ।
ಪಶ್ಯನ್ತೀ ಸಿದ್ಧಯಾತ್ರಂ ತ್ವಾಂ ಪಿತ್ರ್ಯಂ ರಾಜ್ಯಮುಪಸ್ಥಿತಮ್ ॥

"ತಾಯಿಗೆ ಸಂತೋಷವನ್ನುಂಟುಮಾಡುವವನೇ! ಶ್ರೀರಾಮ! ನಿಶ್ಚಯವಾಗಿಯೂ ನಿನ್ನ ಈ ಪ್ರಯಾಣದ ಫಲರೂಪವಾಗಿ ತಂದೆಯ ರಾಜ್ಯವನ್ನು ಪಡೆದ ನಿನ್ನನ್ನು ಕಂಡು ನಿನ್ನ ತಾಯಿಯಾದ ಕೌಸಲ್ಯೆಯು ಅಮಿತವಾದ ಆನಂದವನ್ನು ಪಡೆಯುತ್ತಾಳೆ."

ಶ್ರೀರಾಮನ ಹೃದಯಪ್ರಿಯಳಾದ ಸೀತಾದೇವಿಯನ್ನು ಪ್ರಪಂಚದಲ್ಲಿ ರುವ ಎಲ್ಲ ಸ್ತ್ರೀಯರಿಗಿಂತಲೂ ಶ್ರೇಷ್ಠಳಾದ ಸ್ತ್ರೀಯೆಂದು ಅಯೋಧ್ಯಾ ಪಟ್ಟಣದ ಸ್ತ್ರೀಯರು ಭಾವಿಸಿದರು.

ತಯಾ ಸುಚರಿತಂ ದೇವ್ಯಾ ಪುರಾ ನೂನಂ ಮಹತ್ತಪಃ ।
ರೋಹಿಣೀವ ಶಶಾಙ್ಕೇನ ರಾಮಸಂಯೋಗಮಾಪ ಯಾ ॥೪೧॥

"ನಿಶ್ಚಯವಾಗಿಯೂ ಸೀತಾದೇವಿಯು ಹಿಂದಿನ ಜನ್ಮದಲ್ಲಿ ಮಹಾ ತಪಸ್ಸನ್ನು ಚೆನ್ನಾಗಿ ಮಾಡಿದ್ದಾಳೆ. ಆದುದರಿಂದಲೇ ಅವಳು ಈ ಜನ್ಮದಲ್ಲಿ

ರೋಹಿಣಿಯು ಚಂದ್ರನನ್ನು ಸೇರಿದಂತೆ–ಲೋಕಾಭಿರಾಮನಾದ ಶ್ರೀರಾಮನನ್ನು ಸೇರಿದ್ದಾಳೆ."

ರಾಜಮಾರ್ಗದಲ್ಲಿ ರಥಾರೂಢನಾಗಿ ಹೋಗುತ್ತಿದ್ದ ಆ ಸಮಯದಲ್ಲಿ ಹೀಗೆ ಉಪ್ಪರಿಗೆಗಳಲ್ಲಿ ನಿಂತು ಪ್ರಮದೆಯರು ಹೇಳುತ್ತಿದ್ದ ಪ್ರಿಯವಾದ ಮಾತುಗಳನ್ನೂ–ತನ್ನನ್ನು ನೋಡಲು ರಥದ ಬಳಿಗೆ ಆಗಮಿಸಿದ್ದ ಪ್ರಹೃಷ್ಟರಾದ ಅಯೋಧ್ಯಾಪಟ್ಟಣದ ಜನರ ಹೊಗಳಿಕೆಯ ಮಾತುಗಳನ್ನೂ ಶ್ರೀರಾಮನು ಕೇಳಿದನು.

ಏಷ ಶ್ರಿಯಂ ಗಚ್ಛತಿ ರಾಘವೋಽದ್ಯ
ರಾಜಪ್ರಸಾದಾದ್ವಿಪುಲಾಂ ಗಮಿಷ್ಯನ್ ।
ಏತೇ ವಯಂ ಸರ್ವಸಮೃದ್ಧಕಾಮಾ
ಯೇಷಾಮಯಂ ನೋ ಭವಿತಾ ಪ್ರಶಾಸ್ತಾ ॥೪೪॥

"ಈ ನಮ್ಮ ಶ್ರೀರಾಮನು ದಶರಥರಾಜನ ಅನುಗ್ರಹದಿಂದ ಅತುಲವಾದ ಈ ಸಮ್ರಾಜ್ಯಲಕ್ಷ್ಮಿಯನ್ನು ಪಡೆಯಲು ರಾಜಭವನಕ್ಕೆ ಹೋಗುತ್ತಿದ್ದಾನೆ. ಇವನೇ ಇನ್ನು ಮುಂದೆ ನಮ್ಮ ರಾಜನಾಗುತ್ತಾನೆ. ಇವನು ರಾಜನಾಗುವುದರಿಂದ ನಾವೆಲ್ಲರೂ ಸಮೃದ್ಧವಾದ ಕಾಮನೆಗಳನ್ನು ಪಡೆಯುತ್ತೇವೆ.

ಲಾಭೋ ಜನಸ್ಯಾಸ್ಯ ಯದೇಷ ಸರ್ವಂ
ಪ್ರಪತ್ಸ್ಯತೇ ರಾಷ್ಟ್ರಮಿದಂ ಚಿರಾಯ ।
ನ ಹ್ಯಪ್ರಿಯಂ ಕಿಂಚನ ಜಾತು ಕಶ್ಚಿ-
ತ್ಪಶ್ಯೇನ್ನ ದುಃಖಂ ಮನುಜಾಧಿಪೇಽಸ್ಮಿನ್ ॥೪೫॥

ಶ್ರೀರಾಮನು ಸಾಮ್ರಾಜ್ಯಲಕ್ಷ್ಮಿಯನ್ನು ಅನಂತಕಾಲದವರೆಗೆ ಪಡೆಯುವುದು ನಮಗೆ ಲಾಭದಾಯಕವಾಗಿ ಪರಿಣಮಿಸುತ್ತದೆ. ಶ್ರೀರಾಮನು ರಾಜನಾದರೆ ಯಾವಾಗಲೂ ಯಾವುದೇ ಕಾರಣದಿಂದಲೂ ಪ್ರಜೆಗಳು ಅಪ್ರಿಯಪ್ರಸಂಗವನ್ನು ಕಾಣುವುದಿಲ್ಲ. ದುಃಖವನ್ನು ಅನುಭವಿಸುವುದಿಲ್ಲ."

ಹೀಗೆ ಪ್ರಜೆಗಳೆಲ್ಲರೂ ಗುಣಗಾನಮಾಡುತ್ತಿರಲಾಗಿ ಶ್ರೀರಾಮನು ಕಲ-ಕಲನಿನಾದಮಾಡುತ್ತಿದ್ದ ಅಶ್ವಸೈನ್ಯ-ಗಜಸೈನ್ಯಪುರಃಸರನಾಗಿ ಜಯ

ಘೋಷಗಳನ್ನು ಮಾಡುವ ಸೂತ-ಮಾಗಧರಿಂದ ಕೊಂಡಾಡಲ್ಪಡುತ್ತಾ ರಥದಲ್ಲಿ ಕುಳಿತು ಕುಬೇರನಂತೆ ದಶರಥನ ಅರಮನೆಗೆ ಹೋಗುತ್ತಿದ್ದನು.

೧೬ನೆಯ ಸರ್ಗ ಮುಗಿಯಿತು.

ಅಯೋಧ್ಯಾಕಾಂಡ ೧೭ನೆಯ ಸರ್ಗ

ಶ್ರೀರಾಮನು ರಾಜಮಾರ್ಗದ ಸೊಬಗನ್ನು ನೋಡುತ್ತಾ ಸುಹೃದರ ಪ್ರಿಯೋಕ್ತಿಗಳನ್ನು ಕೇಳುತ್ತಾ ತಂದೆಯ ಮನೆಗೆ ಹೋದುದು

ಸ ರಾಮೋ ರಥಮಾಸ್ಥಾಯ ಸಂಪ್ರಹೃಷ್ಟಸುಹೃಜ್ಜನಃ ।
ಪತಾಕಾಧ್ವಜಸಂಪನ್ನಂ ಮಹಾರ್ಹಾಗರುಧೂಪಿತಮ್ ।
ಅಪಶ್ಯನ್ನಗರಂ ಶ್ರೀಮಾನ್ನಾನಾಜನಸಮನ್ವಿತಮ್ ॥೧॥

ಅತ್ಯಂತಹರ್ಷಿತರಾದ ಸುಹೃಜ್ಜನರಿಂದ ಪರಿವೃತ್ತನಾಗಿದ್ದ ಶ್ರೀರಾಮನು ರಥದಲ್ಲಿ ಕುಳಿತು ಪತಾಕೆಗಳಿಂದಲೂ ಧ್ವಜಗಳಿಂದಲೂ ಯುಕ್ತವಾಗಿದ್ದ,* ಬಹುಮೂಲ್ಯವಾದ ಚಂದನಗಳಿಂದಲೂ–ಅಗುರು ಗಳಿಂದಲೂ ಧೂಪಿತವಾಗಿದ್ದ, ನಾನಾಜನರಿಂದ ಸಮಾಕುಲವಾಗಿದ್ದ ನಗರವನ್ನು ನೋಡುತ್ತಾ ಹೋಗುತ್ತಿದ್ದನು. ಬಿಳಿಯ ಮೋಡಕ್ಕೆ ಸದೃಶವಾದ ಶ್ವೇತಭವನಗಳಿಂದ ಪರಿಶೋಭಿತವಾಗಿದ್ದ, ಚಂದನಾಗುರುಗಳಿಂದ ಧೂಪಿತ ವಾಗಿದ್ದ ರಾಜಮಾರ್ಗದ ಮಧ್ಯಭಾಗದಲ್ಲಿ ಶ್ರೀರಾಮನು ರಥದಲ್ಲಿ ಕುಳಿತು ಹೋಗುತ್ತಿದ್ದನು. ಶ್ರೇಷ್ಠವಾದ ಚಂದನಗಳ ಮತ್ತು ಅಗುರುಗಳ ರಾಶಿ ಗಳಿಂದಲೂ, ಶ್ರೇಷ್ಠವಾದ ನಾನಾವಿಧವಾದ ಗಂಧಗಳ ರಾಶಿಗಳಿಂದಲೂ, ದುಕೂಲಗಳ ಮತ್ತು ರೇಷ್ಮೆವಸ್ತ್ರಗಳ ರಾಶಿಗಳಿಂದಲೂ, ಅಲ್ಲಲ್ಲಿ ತೂಗು ಹಾಕಿದ್ದ ಮುತ್ತುಗಳ ಮತ್ತು ಸ್ಫಟಿಕಮಣಿಗಳ ಗೊಂಚಲುಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದ, ವಿಧ-ವಿಧವಾದ ಪುಷ್ಪಗಳಿಂದಲೂ– ನಾನಾಬಗೆಯ ಭಕ್ಷ್ಯಗಳ ರಾಶಿಗಳಿಂದಲೂ ಸಮಾವೃತವಾಗಿದ್ದ, ಯಾವ ವಿಧವಾದ ತಡೆಯೂ ಇಲ್ಲದಿದ್ದ ಶ್ರೇಷ್ಠವಾದ ರಾಜಮಾರ್ಗವನ್ನು–ಸ್ವರ್ಗ

---

* ಯಾವ ವಿಧವಾದ ಲಾಂಛನವೂ ಇಲ್ಲದಿರುವುದಕ್ಕೆ ಪತಾಕೆಯೆಂದೂ–ಲಾಂಛನದಿಂದ ಕೂಡಿರುವುದಕ್ಕೆ ಧ್ವಜವೆಂದೂ ಹೆಸರು.

ದಲ್ಲಿನ ರಾಜಮಾರ್ಗವನ್ನು ದೇವಪತಿಯಾದ ಇಂದ್ರನು ನೋಡು ವಂತೆ–ಶ್ರೀರಾಮನು ನೋಡಿದನು. ಮೊಸರು, ಅಕ್ಷತೆ, ತುಪ್ಪ, ಅರಳು, ಧೂಪ, ದೀಪ, ನಾನಾವಿಧವಾದ ಪುಷ್ಪಮಾಲಿಕೆಗಳು, ಚಂದನ, ಗಂಧ–ಇವೇ ಮೊದಲಾದ ಮಂಗಳದ್ರವ್ಯಗಳಿಂದ ಅರ್ಚಿಸಲ್ಪಟ್ಟಿದ್ದ ಅಯೋಧ್ಯಾಪಟ್ಟಣದ ಚೌಕಗಳನ್ನು ಶ್ರೀರಾಮನು ನೋಡಿದನು. ಮಾರ್ಗದುದ್ದಕ್ಕೂ ನೂರಾರು ಜನರು ಮಾಡುತ್ತಿದ್ದ ಹಲವು ಬಗೆಯ ಆಶೀರ್ವಾದಗಳನ್ನು ಕೇಳುತ್ತಿದ್ದ ಶ್ರೀರಾಮನು ಆಶೀರ್ವಾದಮಾಡಿದವರೆಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸಿ ಮುಂದೆ ಹೋಗುತ್ತಿದ್ದಾಗ, ಜನರು ಶ್ರೀರಾಮನನ್ನು ಹೀಗೆ ಅಭಿನಂದಿಸುತ್ತಿದ್ದರು :

ಪಿತಾಮಹೈರಾಚರಿತಂ ತಥೇವ ಪ್ರಪಿತಾಮಹೈಃ ।
ಅದ್ಯೋಪಾದಾಯ ತಂ ಮಾರ್ಗಮಭಿಷಿಕ್ತೋಽನುಪಾಲಯ ॥೮॥

"ನೀನು ರಾಜ್ಯಾಭಿಷಿಕ್ತನಾಗಿ ನಿನ್ನ ಪಿತಾಮಹ-ಪ್ರಪಿತಾಮಹರಿಂದ ಆಚರಿಸಲ್ಪಡುತ್ತಿದ್ದ ಧರ್ಮಮಾರ್ಗವನ್ನೇ ಅಂಗೀಕರಿಸಿ ಆ ಮಾರ್ಗವನ್ನೇ ಪರಿಪಾಲಿಸು.

ಯಥಾ ಸ್ಮ ಲಾಲಿತಾಃ ಪಿತ್ರಾ ಯಥಾ ಪೂರ್ವೈಃ ಪಿತಾಮಹೈಃ ।
ತತಃ ಸುಖತರಂ ರಾಮೇ ವತ್ಸ್ಯಾಮಃ ಸತಿ ರಾಜನಿ ॥೯॥

ರಾಮನ ತಂದೆಯಾದ ದಶರಥನಿಂದಲೂ, ಪಿತಾಮಹ-ಪ್ರಪಿತಾಮಹರಿಂದಲೂ ನಾವು ಸುಖದಿಂದ ಪೋಷಿಸಲ್ಪಟ್ಟೆವು. ಆದರೆ ರಾಮನು ರಾಜನಾದಲ್ಲಿ ಅವರ ಆಡಳಿತದಲ್ಲಿದ್ದ ಸುಖಕ್ಕಿಂತಲೂ ಹೆಚ್ಚಿನ ಸುಖವನ್ನು ನಾವು ಪಡೆಯುತ್ತೇವೆ.

ಅಲಮದ್ಯ ಹಿ ಭುಕ್ತೇನ ಪರಮಾರ್ಥೈರಲಂ ಚ ನಃ ।
ಯಥಾ ಪಶ್ಯಾಮ ನಿರ್ಯಾನ್ತಂ ರಾಮಂ ರಾಜ್ಯೇ ಪ್ರತಿಷ್ಠಿತಮ್ ॥

ಈಗ ನಮಗೆ ಊಟವೂ ಬೇಡ. ಪರಮಾರ್ಥಸಾಧಕಗಳಾದ ಕರ್ಮಗಳೂ ಬೇಕಾಗಿಲ್ಲ. ಅಭಿಷಿಕ್ತನಾಗಿ ರಶರಥನ ಅರಮನೆಯಿಂದ ಹೊರಟು ಬರುವ ಶ್ರೀರಾಮನನ್ನು ನೋಡಿದ ಮಾತ್ರದಿಂದಲೇ ಮೃಷ್ಟಾನ್ನವನ್ನು ಭೋಜನಮಾಡಿದ ಆನಂದವನ್ನು ಅನುಭವಿಸುತ್ತೇವೆ. ಪರಮಾರ್ಥಸಾಧಕಗಳಾದ ಕರ್ಮಗಳನ್ನು ಮಾಡಿದ ಫಲವೂ ನಮಗೆ ಲಭಿಸುತ್ತದೆ.

ತತೋ ಹಿ ನಃ ಪ್ರಿಯತರಂ ನಾನ್ಯತ್ಕಿಂಚಿದ್ಭವಿಷ್ಯತಿ ।
ಯಥಾಭಿಷೇಕೋ ರಾಮಸ್ಯ ರಾಜ್ಯೇನಾಮಿತತೇಜಸಃ ॥೧೧॥

ಮಹಾತೇಜಸ್ವಿಯಾದ ಶ್ರೀರಾಮನ ರಾಜ್ಯಾಭಿಷೇಕಕ್ಕಿಂತಲೂ ಪ್ರಿಯತರವಾದುದು ನಮಗೆ ಬೇರೆ ಯಾವುದೂ ಇಲ್ಲ."

ಇವೇ ಮುಂತಾದ ಹಿತೈಷಿಗಳಾದ ಜನರು ಹೇಳುತ್ತಿದ್ದ ಶ್ಲಾಘಿಸುವ ಶುಭಕಥನಗಳನ್ನು ಶ್ರೀರಾಮನು ಕೇಳುತ್ತಿದ್ದರೂ ಉದಾಸೀನನಾಗಿ (ತನ್ನನ್ನು ಪ್ರಜೆಗಳು ಶ್ಲಾಘಿಸುತ್ತಿರುವುದಕ್ಕಾಗಿ ಹಿಗ್ಗದೇ) ರಾಜಮಾರ್ಗದಲ್ಲಿ ಹೋಗುತ್ತಿದ್ದನು.

ನ ಹಿ ತಸ್ಮಾನ್ಮನಃ ಕಶ್ಚಿಚ್ಚಕ್ಷುಷೀ ವಾ ನರೋತ್ತಮಾತ್ ।
ಆತ್ಮಸಂಪೂಜನೀಃ ಶೃಣ್ವನ್ಯಯೌ ರಾಮೋ ಮಹಾಪಥಮ್ ॥೧೨॥

ಶ್ರೀರಾಮನು ತನ್ನಿಂದ ದೂರಸರಿದು ಹೋದರೂ ಯಾವ ಮನುಷ್ಯನೂ ತನ್ನ ಕಣ್ಣುಗಳನ್ನಾಗಲೀ, ಮನಸ್ಸನ್ನಾಗಲೀ ಪುರುಷಶ್ರೇಷ್ಠನಾದ ಶ್ರೀರಾಮನಿಂದ ಹಿಂದಿರುಗಿಸಲು ಸಮರ್ಥನಾಗಲಿಲ್ಲ.

ಪುರಜನರು ಹೀಗೂ ಹೇಳುತ್ತಿದ್ದರು :

ಯಶ್ಚ ರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ ।
ನಿನ್ದಿತಃ ಸ ವಸೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ ॥೧೪॥

"ಯಾವ ಪುರುಷನು ಜಗದಾನಂದಕರನಾದ ಶ್ರೀರಾಮನನ್ನು ನೋಡುವುದಿಲ್ಲವೋ ಅಥವಾ ಯಾವ ಅದೃಷ್ಟಹೀನನನ್ನು ಶ್ರೀರಾಮನು ಕಟಾಕ್ಷವೀಕ್ಷಣದಿಂದ ಅನುಗ್ರಹಿಸುವುದಿಲ್ಲವೋ–ಅಂತಹವನು ಸಕಲ ರಿಂದಲೂ ನಿಂದಿಸಲ್ಪಡುತ್ತಾ ಲೋಕದಲ್ಲಿ ಜೀವಿಸಬೇಕಾಗುವುದು ಮಾತ್ರವಲ್ಲದೇ–ಅವನ ಅಂತರಾತ್ಮವೇ ಅವನನ್ನು ಪ್ರತಿಕ್ಷಣದಲ್ಲಿಯೂ ತೆಗಳುತ್ತಿರುತ್ತದೆ.

ಸರ್ವೇಷಾಂ ಸ ಹಿ ಧರ್ಮಾತ್ಮಾ ವರ್ಣಾನಾಂ ಕುರುತೇ ದಯಾಮ್ ।
ಚತುರ್ಣಾಂ ಹಿ ವಯಸ್ಥಾನಾಂ ತೇನ ತೇ ತಮನುವ್ರತಾಃ ॥೧೫॥

ಧರ್ಮಾತ್ಮನಾದ ಶ್ರೀರಾಮನು ನಾಲ್ಕು ವರ್ಣದವರಲ್ಲಿಯೂ–ವಿಶೇಷ ವಾಗಿ ವೃದ್ಧರಾದವರಲ್ಲಿಯೂ ದಯೆಯನ್ನು ತೋರಿ ಅವರನ್ನು ಆದರಿಸಿ

ಸಂತೈಸುತ್ತಾನೆ. ಈ ಕಾರಣದಿಂದಲೇ ನಾಲ್ಕು ವರ್ಣದವರೂ ಶ್ರೀರಾಮನಲ್ಲಿ ಯಾವಾಗಲೂ ಅನುರಾಗವುಳ್ಳವರಾಗಿರುತ್ತಾರೆ."

ನಾಲ್ಕು ಮಾರ್ಗಗಳು ಸೇರುವ ಚೌಕಗಳನ್ನೂ, ಚೈತ್ಯವೃಕ್ಷಗಳನ್ನೂ, ಸಭಾಮಂದಿರಗಳನ್ನೂ ಬಲಪಾರ್ಶ್ವಕ್ಕೆ ಬಿಟ್ಟುಕೊಂಡು ಶ್ರೀರಾಮನು ದಶರಥನ ಅರಮನೆಗೆ ಹೋದನು.

ದಶರಥನ ಅರಮನೆಯ ಹಲವಾರು ಬಗೆಯ ಗೋಪುರಗಳು ಶುಭಪ್ರದವಾದ ಮೇಘಗಳ ಸಮೂಹಗಳಂತೆಯೂ, ಕೈಲಾಸದ ಶಿಖರ ಗಳಂತೆಯೂ ಪ್ರಕಾಶಿಸುತ್ತಿದ್ದುವು. ಗಗನಚುಂಬಿಗಳಂತೆಯೂ, ಅಂತರಿಕ್ಷ ದಲ್ಲಿರುವ ಬಿಳಿಯ ವಿಮಾನಗಳಂತೆಯೂ ಕಾಣುತ್ತಿದ್ದುವು. ರತ್ನದ ಬಲೆ ಗಳಿಂದ ಸಮಲಂಕೃತವಾಗಿದ್ದ ಅನೇಕಕ್ರೀಡಾಗೃಹಗಳಿಂದ ದಶರಥನ ಅರಮನೆಯು ವಿರಾಜಿಸುತ್ತಿದ್ದಿತು. ಶ್ರೇಷ್ಠವಾಗಿದ್ದ ಮತ್ತು ಸುಂದರವಾಗಿದ್ದ ಆ ಅರಮನೆಯು–ಪೃಥ್ವಿಯಲ್ಲಿ ನೆಲೆಸಿರುವ ಮಹೇಂದ್ರನ ಅರಮನೆಯೋ ಎಂಬಂತೆ ಕಾಣುತ್ತಿದ್ದಿತು. ಅಂತಹ ಅರಮನೆಯನ್ನು ಶ್ರೀರಾಮನು ತನ್ನ ಕಾಂತಿಯಿಂದ ಬೆಳಗುತ್ತಾ ಪ್ರವೇಶಿಸಿದನು.

ಪುರುಷಶ್ರೇಷ್ಠನಾದ ಶ್ರೀರಾಮನು ಧನುರ್ಧಾರಿಗಳಾದ ದ್ವಾರಪಾಲಕ ದಿಂದ ರಕ್ಷಿಸಲ್ಪಡುತ್ತಿದ್ದ ಮೂರು ತೊಟ್ಟಿಗಳನ್ನು ರಥದಲ್ಲಿಯೇ ಕುಳಿತು ದಾಟಿದನು. ಉಳಿದೆರಡು ತೊಟ್ಟಿಗಳನ್ನು ಪಾದಚಾರಿಯಾಗಿಯೇ ದಾಟಿ, ತನ್ನನ್ನು ಅನುಸರಿಸಿ ಬರುತ್ತಿದ್ದ ಜನಸಮೂಹವನ್ನು ಹಿಂದಕ್ಕೆ ಕಳುಹಿಸಿ, ದಶರಥರಾಜನ ಅಂತಃಪುರವನ್ನು ಪ್ರವೇಶಿಸಿದನಂತರ ರಾಜಕುಮಾರನಿಗೆ ಪಟ್ಟಾಭಿಷೇಕವಾಗಿಬಿಡುವುದೆಂದು ಅತ್ಯಂತಸಂತೋಷಯುಕ್ತವಾಗಿದ್ದ ಜನ ಸ್ತೋಮವು–ಚಂದ್ರನ ಉದಯವನ್ನು ಸಮುದ್ರವು ಕಾತುರದಿಂದ ನಿರೀಕ್ಷಿಸು ವಂತೆ–ಅರಮನೆಯಿಂದ ಶ್ರೀರಾಮನು ಹೊರಬರುವುದನ್ನೇ ನಿರೀಕ್ಷಿ ಸುತ್ತಿದ್ದಿತು.

೧೭ನೆಯ ಸರ್ಗವು ಮುಗಿಯಿತು.

ಶ್ರೀರಾಮನು ವ್ಯಸನಾಕ್ರಾಂತನಾಗಿದ್ದ ತಂದೆಯ ಚಿಂತೆಗೆ ಕಾರಣವೇನೆಂದು ಕೈಕೇಯಿಯನ್ನು ಕೇಳಿದುದು : ಕೈಕೇಯಿಯು ತಾನು ಕೇಳಿರುವ ವರಗಳ ವಿಷಯವನ್ನು ಹೇಳಿ ಶ್ರೀರಾಮನಿಗೆ ಅರಣ್ಯಕ್ಕೆ ಹೋಗಲು ಹೇಳಿದುದು

ಸ ದದರ್ಶಾಸನೇ ರಾಮೋ ವಿಷಣ್ಣಂ ಪಿತರಂ ಶುಭೇ ।
ಕೈಕೇಯೀಸಹಿತಂ ದೀನಂ ಮುಖೇನ ಪರಿಶುಷ್ಯತಾ ॥೧॥

ಶ್ರೀರಾಮನು ಅಂತಃಪುರವನ್ನು ಪ್ರವೇಶಿಸಿದ ಸಮಯದಲ್ಲಿ ದಶರಥನು ಶುಭಾಸನದಲ್ಲಿ ಕುಳಿತಿದ್ದನು. ಕೈಕೇಯಿಯೂ ಜೊತೆಯಲ್ಲೇ ಇದ್ದಳು. ಆದರೆ ಅವನು ಬಹಳ ದೀನನಾಗಿದ್ದನು ; ವಿಷಣ್ಣನಾಗಿದ್ದನು ; ಮುಖವು ಬಾಡಿಹೋಗಿದ್ದಿತು. ಅಂತಹ ಸ್ಥಿತಿಯಲ್ಲಿದ್ದ ತಂದೆಯನ್ನು ಶ್ರೀರಾಮನು ನೋಡಿದನು.

ಶ್ರೀರಾಮನು ಸ್ಥಿರಚಿತ್ತನಾಗಿಯೇ ವಿನೀತನಾದ ಪುತ್ರನಂತೆ ಮೊದಲು ತಂದೆಯ ಎರಡು ಕಾಲುಗಳನ್ನೂ ಮುಟ್ಟಿ ನಮಸ್ಕರಿಸಿ ಅನಂತರ ಕೈಕೇಯಿಯ ಕಾಲುಗಳನ್ನೂ ಮುಟ್ಟಿ ನಮಸ್ಕರಿಸಿದನು.

ದೀನನಾದ ದಶರಥನು ಭಾವೋದ್ವೇಗದಿಂದ–'ರಾಮ!'–ಎಂದೊಮ್ಮೆ ಉದ್ಗರಿಸಿದನು. ಎರಡು ಕಣ್ಣುಗಳಲ್ಲಿಯೂ ನೀರು ತುಂಬಿದ್ದುದರಿಂದ ಅವನಿಗೆ ಶ್ರೀರಾಮನನ್ನು ಪುನಃ ನೋಡುವುದಕ್ಕೂ ಸಾಧ್ಯವಾಗಲಿಲ್ಲ. ದುಃಖೋದ್ವೇಗದಿಂದ ಕಂಠವು ಬಿಗಿದಿದ್ದು ಮುಂದೆ ಮಾತನಾಡಲೂ ಸಾಧ್ಯವಾಗಲಿಲ್ಲ. ದಶರಥನ ಮಂದಹಾಸಪೂರ್ವಕವಾದ ಅನುಗ್ರಹವನ್ನು ನಿರೀಕ್ಷಿಸಿ ಅಂತಃಪುರಕ್ಕೆ ಬಂದಿದ್ದ ಶ್ರೀರಾಮನಿಗೆ ತಂದೆಯ ರೂಪವು ಅಪೂರ್ವವಾಗಿ ಕಂಡಿತು. ಭಯವನ್ನು ಉಂಟುಮಾಡುವುದಾಗಿದ್ದಿತು.

ರಾಮೋಽಪಿ ಭಯಮಾಪನ್ನಃ ಪದಾ ಸ್ಪೃಷ್ಟ್ವೇವ ಪನ್ನಗಮ್ ॥೪॥

ಶ್ರೀರಾಮನು ಆಕಸ್ಮಿಕವಾದ ಆ ಘಟನೆಯಿಂದ ಹಾವನ್ನು ತುಳಿದವ ನಂತೆ ಭಯಗೊಂಡನು. ರಾಜನು ಅಸಂತುಷ್ಟವಾದ ಇಂದ್ರಿಯಗಳಿಂದ ಕೂಡಿದ್ದನು. ಕಣ್ಣುಗಳು ನಿಸ್ತೇಜವಾಗಿದ್ದುವು. ಮುಖವು ಕುಂದಿದ್ದಿತು.

ಕಿವಿಗಳಿಗೆ ಯಾವ ಮಾತನ್ನೂ ಕೇಳುವ ಇಚ್ಛೆಯಿರಲಿಲ್ಲ. ಆಹಾರವನ್ನು ತಿನ್ನಬೇಕೆಂಬ ಆಶಯವು ನಾಲಿಗೆಗೆ ಇರಲಿಲ್ಲ. ಅವನ ಇಂದ್ರಿಯಗಳಿಗೆ ಯಾವುದೊಂದೂ ಬೇಡವಾಗಿದ್ದಿತು. ರಾಜನು ಶೋಕದಿಂದಲೂ ಸಂತಾಪ ದಿಂದಲೂ ಸಂಕಟಪಡುತ್ತಿದ್ದನು. ಕ್ಷಣ-ಕ್ಷಣಕ್ಕೂ ದೀರ್ಘವಾದ ನಿಟ್ಟುಸಿರನ್ನು ಬಿಡುತ್ತಿದ್ದನು. ಮನಸ್ಸು ವ್ಯಥೆಯಿಂದ ಪ್ರಕ್ಷುಬ್ಧವಾಗಿದ್ದಿತು. ರಾಜನ ಆಗಿನ ಸ್ಥಿತಿಯು–ಪರ್ವಕಾಲಗಳಲ್ಲಿ ಪ್ರಕ್ಷುಬ್ಧವಾಗುವ, ಊರ್ಮಿಮಾಲಿಯಾದ, ಅಕ್ಷೋಭ್ಯನಾದ ಸಮುದ್ರನಂತೆಯೂ–ರಾಹುಗ್ರಸ್ತನಾದ ಸೂರ್ಯ ನಂತೆಯೂ–ಸುಳ್ಳುಹೇಳಿದ ಮಹರ್ಷಿಯಂತೆಯೂ ಇದ್ದಿತು. ಯೋಚಿಸಲು ಕೂಡ ಸಾಧ್ಯವಾಗದಿದ್ದ ರಾಜನ ಅಂತಹ ಶೋಕಕ್ಕೆ ಕಾರಣವೇನೆಂಬುದನ್ನು ಚಿಂತಿಸುತ್ತಾ ಶ್ರೀರಾಮನು ಪರ್ವಕಾಲದಲ್ಲಿನ ಸಮುದ್ರದಂತೆ ಹೆಚ್ಚು ಕ್ಷೋಭೆಗೊಂಡನು. ಅವನ ಮನಸ್ಸು ಅಲ್ಲೋಲ್ಲ-ಕಲ್ಲೋಲವಾಯಿತು. ತಂದೆಯ ಹಿತದಲ್ಲಿಯೇ ನಿರತನಾದ ಶ್ರೀರಾಮನು ಅವನ ದುಃಖಕ್ಕೆ ಕಾರಣವನ್ನು ಚಿಂತಿಸತೊಡಗಿದನು.

ಕಿಂ ಸ್ವಿದದ್ಯೈಷ ನೃಪತಿರ್ನ ಮಾಂ ಪ್ರತ್ಯಭಿನನ್ದತಿ ॥೮॥

ಅನ್ಯದಾ ಮಾಂ ಪಿತಾ ದೃಷ್ಟ್ವಾ ಕುಪಿತೋಽಪಿ ಪ್ರಸೀದತಿ ।
ತಸ್ಯ ಮಾಮದ್ಯ ಸಂಪ್ರೇಕ್ಷ್ಯ ಕಿಮಾಯಾಸಃ ಪ್ರವರ್ತತೇ ॥೯॥

"ಇದೇನಿದು! ಕಾಲುಮುಟ್ಟಿ ನಮಸ್ಕಾರಮಾಡಿದೊಡನೆಯೇ ನನ್ನನ್ನು ಹಿಡಿದು ಮೇಲೆತ್ತಿ ಬಾಚಿ ತಬ್ಬಿಕೊಂಡು, ನೆತ್ತಿಯನ್ನು ಆಘ್ರಾಣಿಸಿ, ತಲೆಯ ಮೇಲೆ ಆನಂದಬಾಷ್ಪಗಳನ್ನು ಸುರಿಸುತ್ತಿದ್ದ ನನ್ನ ತಂದೆಯು ಏನೊಂದನ್ನೂ ಮಾತನಾಡದೇ ಸುಮ್ಮನೇ ಕುಳಿತಿರುವನಲ್ಲಾ! ಇದಕ್ಕೆ ಕಾರಣವಾದರೂ ಏನಿರಬಹುದು? ಉಳಿದ ಸಮಯಗಳಲ್ಲಿ ನನ್ನ ತಂದೆಯು ಕೋಪಗೊಂಡಿ ದ್ದರೂ ನನ್ನನ್ನು ನೋಡಿದೊಡನೆಯೇ ಪ್ರಸನ್ನನಾಗುತ್ತಿದ್ದನು. ಆದರೆ ಈಗ ನನ್ನನ್ನು ನೋಡಿ ಹೆಚ್ಚು ಆಯಾಸ (ದುಃಖ) ಪಡುತ್ತಿರುವಂತೆ ಕಾಣುತ್ತಿದ್ದಾನೆ". ಹೀಗೆಲ್ಲಾ ಯೋಚಿಸುತ್ತಿದ್ದ ಶ್ರೀರಾಮನು ಶೋಕ ಪೀಡಿತನಾಗಿ ಕುಂದಿದ ಮುಖಕಾಂತಿಯಿಂದ ಕೂಡಿ, ಕೈಕೇಯಿಗೆ ಅಭಿವಾದನ ಮಾಡಿದನಂತರ ದೀನನಂತೆ ಅವಳ ಮುಂದೆ ನಿಂತು ಹೇಳಿದನು :

ಕಚ್ಚಿನ್ಮಯಾ ನಾಪರಾದ್ಧಮಜ್ಞಾನಾದ್ಯೇನ ಮೇ ಪಿತಾ ।
ಕುಪಿತಸ್ತನ್ಮಮಾಚಕ್ಷ್ವ ತ್ವಮೇವೈನಂ ಪ್ರಸಾದಯ ॥೧೧॥

"ಅಂಬ! ನಾನು ತಿಳಿದು-ತಿಳಿದೂ ಯಾವ ಅಪರಾಧವನ್ನೂ ಮಾಡಿಲ್ಲ. ಒಂದು ವೇಳೆ ನಾನು ಅಜ್ಞಾನದಿಂದ ಯಾವುದಾದರೂ ಅಪರಾಧವನ್ನು ಮಾಡಿದ್ದು ಅದಕ್ಕಾಗಿಯೇ ತಂದೆಯು ಕೋಪಗೊಂಡಿರುವನೇ? ಹೇಳು ತಾಯೇ! ತಂದೆಯನ್ನು ನೀನೇ ಪ್ರಸನ್ನಗೊಳಿಸು.

ತಂದೆಯು ನನ್ನ ವಿಷಯದಲ್ಲಿ ಯಾವಾಗಲೂ ಹೆಚ್ಚು ಪ್ರೀತಿಯುಳ್ಳವನಾಗಿದ್ದನು. ಆದರೆ ಇಂದು ಇವನ ಮನಸ್ಸು ಪ್ರಸನ್ನವಾಗಿಲ್ಲ. ಮುಖವೂ ಕಳೆಗುಂದಿದೆ. ಅತ್ಯಂತದೀನನಂತೆ ಕಾಣುತ್ತಿದ್ದಾನೆ. ನನ್ನೊಡನೆ ಮಾತನಾಡುವುದೇ ಇಲ್ಲ.

ಶಾರೀರೋ ಮಾನಸೋ ವಾಪಿ ಕಚ್ಚಿದೇನಂ ನ ಬಾಧತೇ ।
ಸಂತಾಪೋ ವಾಭಿತಾಪೋ ವಾ ದುರ್ಲಭಂ ಹಿ ಸದಾ ಸುಖಮ್ ॥

ಶರೀರಸಂಬಂಧವಾದ ವ್ಯಾಧಿಯಾಗಲೀ–ಮನಸ್ಸಿನ ಸಂಬಂಧವಾದ ಆಧಿಯಾಗಲೀ ನಮ್ಮ ರಾಜನನ್ನು ಬಾಧಿಸುತ್ತಿಲ್ಲ ತಾನೇ? ಮನುಷ್ಯನಿಗೆ ಸಂತಾಪವಾಗಲೀ–ಅಭಿತಾಪವಾಗಲೀ* ಇದ್ದೇ ಇರುತ್ತದೆ. ಆದುದರಿಂದ ಮನುಷ್ಯನಿಗೆ ಎಲ್ಲ ಕಾಲಗಳಲ್ಲಿಯೂ ಸುಖವೆಂಬುದೂ ದುರ್ಲಭವೇ ಸರಿ.

ತಾಯೇ! ಪ್ರಿಯದರ್ಶನನಾದ ಭರತ, ಮಹಾಸತ್ತ್ವನಾದ ಶತ್ರುಘ್ನ, ನನ್ನ ತಾಯಿಯರು–ಇವರಲ್ಲಿ ಯಾರಿಗೂ ಅಶುಭವುಂಟಾಗಿಲ್ಲ ತಾನೇ? ಅಮ್ಮ! ನಾನು ತಂದೆಯನ್ನು ಸಂತೋಷಪಡಿಸಲಾಗದೇ, ಅವನ ಮಾತನ್ನು ನಡೆಸಿಕೊಡಲಾಗದೇ ರಾಜನೇನಾದರೂ ಕೋಪಿಸಿಕೊಂಡಿದ್ದರೆ–ನಾನು ಮುಹೂರ್ತಕಾಲವೂ ಜೀವಿಸಿರಲು ಇಚ್ಛಿಪಡುವುದಿಲ್ಲ.

ಯತೋಮೂಲಂ ನರಃ ಪಶ್ಯೇತ್ಪ್ರಾದುರ್ಭಾವಮಿಹಾತ್ಮನಃ ।
ಕಥಂ ತಸ್ಮಿನ್ನ ವರ್ತೇತ ಪ್ರತ್ಯಕ್ಷೇ ಸತಿ ದೈವತೇ ॥೧೬॥

---

* ಸಂತಾಪಃ = ಶರೀರಕ್ಕೆ ಸಂಬಂಧಿಸಿದಂತೆ ವ್ಯಾಧಿಗಳ ಮೂಲಕವಾಗಿ ಉಂಟಾಗುವುದು ಸಂತಾಪ. ಅಭಿತಾಪಃ= ಮನಸ್ಸಿನ ಅಭಿಲಾಷೆಯು ಕೈಗೂಡದಿರುವುದರಿಂದ ಆಧಿಗಳ ಮೂಲಕವಾಗಿ ಉಂಟಾಗುವುದು ಅಭಿತಾಪ.

ಈ ಪ್ರಪಂಚದಲ್ಲಿ ತನ್ನ ಪ್ರಾದುರ್ಭಾವಕ್ಕೆ (ಹುಟ್ಟಿಗೆ) ಮೂಲ ಕಾರಣನು ಯಾರೆಂಬುದನ್ನು ಮನುಷ್ಯನು ಕಂಡುಕೊಂಡುದೇ ಆದರೆ, ಅಂತಹ ಜನ್ಮದಾತನಾದ ಪ್ರತ್ಯಕ್ಷದೇವತೆಯಾದ ತಂದೆಯ ವಿಷಯದಲ್ಲಿ ಯಾರು ತಾನೇ ವಿಧೇಯರಾಗಿ ನಡೆದುಕೊಳ್ಳುವುದಿಲ್ಲ?

ಅಂಬ! ಪತಿಯು ನಿನ್ನ ವಶದಲ್ಲಿರುವನೆಂಬ ಅಭಿಮಾನದಿಂದ ಕುಪಿತಳಾಗಿ ನೀನೇನಾದರೂ ನನ್ನ ತಂದೆಯನ್ನು ಕುರಿತು ಕಟುವಾದ ಮಾತುಗಳನ್ನಾಡಿದೆಯಾ? ಇದರಿಂದಾಗಿ ತಂದೆಯ ಮನಸ್ಸು ಕ್ಷೋಭೆಗೊಂಡಿರಬಹುದೇ? ದೇವಿ! ಮನುಜಾಧಿಪನಾದ ದಶರಥರಾಜನಲ್ಲಿ ಹಿಂದೆಂದೂ ಕಾಣದಿದ್ದ ಈ ಮುಖವಿಕಾರವು ಯಾವ ಕಾರಣದಿಂದ ಆಗಿರುವುದೆಂಬು ದನ್ನು ದೈನ್ಯದಿಂದ ಪ್ರಶ್ನಿಸುತ್ತಿರುವ ನನಗೆ ಯಥಾವತ್ತಾಗಿ ಹೇಳು."

ಮಹಾತ್ಮನಾದ ರಾಘವನು ಹೀಗೆ ಹೇಳಲು, ಕೈಕೇಯಿಯು ದಯಾರಹಿತವಾದ, ಸ್ವಾರ್ಥಕರವಾದ ಈ ಮಾತನ್ನು ಸ್ವಲ್ಪವಾದರೂ ನಾಚಿಕೆಯೇ ಇಲ್ಲದೇ ಹೇಳಿದಳು :

ನ ರಾಜಾ ಕುಪಿತೋ ರಾಮ ವ್ಯಸನಂ ನಾಸ್ಯ ಕಿಂಚನ ।
ಕಿಂಚಿನ್ಮನೋಗತಂ ತ್ವಸ್ಯ ತ್ವದ್ಭಯಾನ್ನಾಭಿಭಾಷತೇ ॥೨೦॥

"ರಾಮ! ರಾಜನು ಕೋಪಗೊಂಡೂ ಇಲ್ಲ; ಇವನಿಗೆ ಯಾವ ವ್ಯಸನವೂ ಇಲ್ಲ. ಆದರೆ ಇವನ ಮನಸ್ಸಿನಲ್ಲಿ ಏನೋ ಒಂದು ವಿಷಯವಿದೆ. ನಿನ್ನ ಸಂಬಂಧವಾದ ಭಯದಿಂದಾಗಿ ಅದನ್ನವನು ಹೇಳುತ್ತಿಲ್ಲ.

ಪ್ರಿಯಂ ತ್ವಾಮಪ್ರಿಯಂ ವಕ್ತುಂ ವಾಣೀ ನಾಸ್ಯ ಪ್ರವರ್ತತೇ ।
ತದವಶ್ಯಂ ತ್ವಯಾ ಕಾರ್ಯಂ ಯದನೇನಾಶ್ರುತಂ ಮಮ ॥೨೧॥

ಪ್ರಿಯನಾದ ನಿನಗೆ ಅಪ್ರಿಯವಾಗುವುದನ್ನು ಹೇಳುವುದಕ್ಕೆ ನಿನ್ನ ತಂದೆಯ ಬಾಯಿಯಿಂದ ಮಾತೇ ಹೊರಡುತ್ತಿಲ್ಲ. ಆದರೆ ರಾಜನು ನನಗೆ ಮಾತುಕೊಟ್ಟಿರುವಂತೆ ಅಪ್ರಿಯವಾಗಿ ಕಂಡರೂ ನೀನು ಆ ಕಾರ್ಯವನ್ನು ಮಾಡಲೇಬೇಕು.

ಏಷ ಮಹ್ಯಂ ವರಂ ದತ್ತ್ವಾ ಪುರಾ ಮಾಮಭಿಪೂಜ್ಯ ಚ ।
ಸ ಪಶ್ಚಾತ್ತಪ್ಯತೇ ರಾಜಾ ಯಥಾನ್ಯಃ ಪ್ರಾಕೃತಸ್ತಥಾ ॥೨೨॥

ಹಿಂದೆ ಈ ನಿನ್ನ ತಂದೆಯು ನಾನು ಸಮಯದಲ್ಲಿ ಮಾಡಿದ ಉಪಕಾರಕ್ಕೆ ನನ್ನನ್ನು ಯಥಾಯೋಗ್ಯವಾಗಿ ಪುರಸ್ಕರಿಸಿ ಎರಡು ವರಗಳನ್ನಿತ್ತಿದ್ದನು. ಈಗ ನಾನು ಆ ವರಗಳನ್ನು ಕೇಳಿದೊಡನೆಯೇ ಮಾತಿನಂತೆ ನಡೆಯಲು ಮನಸ್ಸಿಲ್ಲದೇ ಸಾಮಾನ್ಯಮನುಷ್ಯನಂತೆ ಪಶ್ಚಾತ್ತಾಪಪಡುತ್ತಿದ್ದಾನೆ.

ಅತಿಸೃಜ್ಯ ದದಾನೀತಿ ವರಂ ಮಮ ವಿಶಾಂ ಪತಿಃ ।
ಸ ನಿರರ್ಥಂ ಗತಜಲೇ ಸೇತುಂ ಬನ್ಧಿತುಮಿಚ್ಛತಿ ॥೨೩॥

ವರವನ್ನು ಕೊಡುವೆನೆಂದು ಪ್ರತಿಜ್ಞೆಮಾಡಿ ಬಳಿಕ ರಾಜನು–ನೀರೆಲ್ಲವೂ ಹರಿದುಹೋದ ನಂತರ ಕಟ್ಟೆಯನ್ನು ಕಟ್ಟಲು ಇಚ್ಛಿಸುವಂತೆ–ನಿರರ್ಥಕವಾಗಿ ಪರಿತಪಿಸುತ್ತಿದ್ದಾನೆ.

ಧರ್ಮಮೂಲಮಿದಂ ರಾಮ ವಿದಿತಂ ಚ ಸತಾಮಪಿ ।
ತತ್ಸತ್ಯಂ ನ ತ್ಯಜೇದ್ರಾಜಾ ಕುಪಿತಸ್ತ್ವತ್ಕೃತೇ ಯಥಾ ॥೨೪॥

ಸತ್ಯಪರಿಪಾಲನೆಯೇ ಧರ್ಮಕ್ಕೆ ಮೂಲವೆಂಬುದು ಸತ್ಪುರುಷರೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದುದರಿಂದ ನಿನ್ನ ಸಲುವಾಗಿ ನನ್ನ ಮೇಲೆ ಕೋಪಗೊಂಡಿರುವ ರಾಜನು ಸತ್ಯವನ್ನು ಪರಿತ್ಯಾಗಮಾಡದಂತೆ ನೋಡಿಕೊಳ್ಳುವುದು ನಿನ್ನ ಕರ್ತವ್ಯವೂ ಆಗಿದೆ.

ರಾಜನು ಒಳ್ಳೆಯದನ್ನೇ ಹೇಳಲಿ ; ಕೆಟ್ಟದನ್ನೇ ಹೇಳಲಿ–ಅವನು ಹೇಳಿದಂತೆ ಮಾಡುವೆಯಾದರೆ ಎಲ್ಲ ವಿಷಯಗಳನ್ನೂ ಪುನಃ ನಿನಗೆ ಹೇಳುತ್ತೇನೆ.

ರಾಜನು ಹೇಳಬೇಕಾಗಿರುವ ವಿಷಯವು ನಿನ್ನಲ್ಲಿ ನಿರರ್ಥಕವಾಗದಿದ್ದರೆ ಅವನು ಹೇಳಬೇಕಾದುದನ್ನು ನಾನು ಹೇಳುತ್ತೇನೆ. ಏಕೆಂದರೆ : ಈ ವಿಷಯವನ್ನು ಅವನೆಂದಿಗೂ ನಿನ್ನೊಡನೆ ಹೇಳುವುದಿಲ್ಲ."

ಕೈಕೇಯಿಯು ಹೇಳಿದ ಮಾತುಗಳನ್ನು ಕೇಳಿ ದುಃಖಗೊಂಡ ಶ್ರೀರಾಮನು ರಾಜನ ಸನ್ನಿಧಿಯಲ್ಲಿ ಕೈಕೇಯಿಗೆ ಹೇಳಿದನು :

ಅಹೋ ಧಿಙ್ನಾರ್ಹಸೇ ದೇವಿ ವಕ್ತುಂ ಮಾಮೀದೃಶಂ ವಚಃ ।
ಅಹಂ ಹಿ ವಚನಾದ್ರಾಜ್ಞಃ ಪತೇಯಮಪಿ ಪಾವಕೇ ॥೨೮॥

ಭಕ್ಷಯೇಯಂ ವಿಷಂ ತೀಕ್ಷ್ಣಂ ಮಜ್ಜೇಯಮಪಿ ಚಾರ್ಣವೇ ।
ನಿಯುಕ್ತೋ ಗುರುಣಾ ಪಿತ್ರಾ ನೃಪೇಣ ಚ ಹಿತೇನ ಚ ॥೨೯॥

ತದ್ಬ್ರೂಹಿ ವಚನಂ ದೇವಿ ರಾಜ್ಞೋ ಯದಭಿಕಾಂಕ್ಷಿತಮ್ ।
ಕರಿಷ್ಯೇ ಪ್ರತಿಜಾನೇ ಚ ರಾಮೋ ದ್ವಿರ್ನಾಭಿಭಾಷತೇ ॥೩೦॥

'ರಾಜನು ಹೇಳುವ ಮಾತು ನಿನ್ನಲ್ಲಿ ನಿರರ್ಥಕವಾಗದಿದ್ದರೆ'–ಎಂದು ನೀನು ಪ್ರಶ್ನಿಸಿದೆಯಲ್ಲವೇ ತಾಯೇ! ಇಂತಹ ಸಂಶಯವು ನಿನ್ನ ಮನಸ್ಸಿನಲ್ಲಿ ಮೂಡಿಬಂದುದಕ್ಕಾಗಿ ನನಗೆ ಧಿಕ್ಕಾರವಿರಲಿ. ಆದರೆ ಹೀಗೆ ಹೇಳುವುದು ನಿನಗೆ ಖಂಡಿತವಾಗಿಯೂ ಯೋಗ್ಯವಲ್ಲ. ನಾನು ರಾಜನ ಮಾತಿನಂತೆ ಬೆಂಕಿಯಲ್ಲಾದರೂ ಬಿದ್ದೇನು. ತೀಕ್ಷ್ಣವಾದ ವಿಷವನ್ನಾದರೂ ಕುಡಿದೇನು. ಸಮುದ್ರದಲ್ಲಾದರೂ ಮುಳುಗಿಹೋದೇನು. ಗುರುವಾದ, ತಂದೆಯಾದ, ಹಿತೃಷಿಯಾದ, ಎಲ್ಲಕ್ಕಿಂತಲೂ ಮಿಗಿಲಾಗಿ ರಾಜನಾದ ದಶರಥನಿಂದ ಆಜ್ಞೆ ಮಾಡಲ್ಪಟ್ಟ ನಾನು ಯಾವುದೇ ಕಾರ್ಯವನ್ನು ಮಾಡಲೂ ಸಿದ್ಧನಾಗಿದ್ದೇನೆ. ರಾಜನ ಅಭಿಲಾಷೆಯೇನೆಂಬುದನ್ನು ಹೇಳು ; ತಾಯೆ! ಅವನು ಬಯಸಿದ ಕಾರ್ಯವನ್ನು ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡುವೆನು. ಆ ಕಾರ್ಯವನ್ನು ಮಾಡಿಯೇ ಮಾಡುತ್ತೇನೆ. 'ರಾಮೋ ದ್ವಿರ್ನಾಭಿ ಭಾಷತೇ'– 'ರಾಮನೆಂದಿಗೂ ಎರಡು ಮಾತುಗಳನ್ನಾಡುವವನಲ್ಲ.' (ಮೊದಲೊಂದು ಮಾತನ್ನು ಹೇಳಿ ಅನಂತರ ಅದನ್ನು ಬದಲಾಯಿಸುವವನಲ್ಲ.)"

ಹೀಗೆ ಆಶ್ವಾಸನೆಯನ್ನಿತ್ತನಂತರ ಅನಾರ್ಯಳಾದ ಕೈಕೇಯಿಯು ಸತ್ಯಸಂಧನಾದ, ಸರಳಹೃದಯನಾದ, ಕೌಟಿಲ್ಯರಹಿತನಾದ ರಾಮನಿಗೆ ಅತಿದಾರುಣವಾದ ಈ ಮಾತನ್ನು ಹೇಳಿದಳು :

"ರಾಮ! ಹಿಂದೊಮ್ಮೆ ದೇವತೆಗಳಿಗೂ ಅಸುರರಿಗೂ ಯುದ್ಧವು ನಡೆದಾಗ ನಿನ್ನ ತಂದೆಯು ದೇವತೆಗಳಿಗೆ ಸಹಾಯಮಾಡಲು ಹೋದನು. ಆಗ ನಾನೂ ಜೊತೆಯಲ್ಲಿ ಹೋಗಿದ್ದೆನು. ಶಂಬರಾಸುರನೊಡನೆ ಯುದ್ಧ

ಮಾಡುತ್ತಿದ್ದಾಗ ಇವನ ಶರೀರಾದ್ಯಂತವಾಗಿ ಬಾಣಗಳು ನೆಟ್ಟು ಪ್ರಜ್ಞಾ ಹೀನನಾದನು. ಆ ಸಮಯದಲ್ಲಿ ನಾನು ಇವನನ್ನು ಅಪಾಯವಿಲ್ಲದ ಸ್ಥಳಕ್ಕೆ ಕರೆದೊಯ್ದು ಉಪಚರಿಸಿ ರಕ್ಷಿಸಿದೆನು. ಅದರಿಂದ ಸುಪ್ರೀತನಾದ ರಾಜನು ಆಗಲೇ ನನಗೆರಡು ವರಗಳನ್ನು ಕೊಟ್ಟಿದ್ದನು. ಆ ವರಗಳನ್ನೀಗ ನಾನು ಪಡೆದುಕೊಳ್ಳಲು ಅಪೇಕ್ಷಿಸಿ ಮೊದಲನೆಯ ವರವಾಗಿ ಭರತನಿಗೆ ಪಟ್ಟಾಭಿಷೇಕವನ್ನೂ, ಎರಡನೆಯ ವರವಾಗಿ ದಂಡಕಾರಣ್ಯಕ್ಕೆ ನೀನು ಈಗಲೇ ಹೊರಟುಹೋಗಬೇಕೆಂಬುದನ್ನೂ ಯಾಚಿಸಿದೆನು. ಈಗ ನಿನ್ನ ತಂದೆ

ಯನ್ನು ಸತ್ಯಪ್ರತಿಜ್ಞನನ್ನಾಗಿ ಮಾಡುವ ಅಭಿಲಾಷೆಯುಳ್ಳವನಾಗಿದ್ದರೆ– ನೀನೂ ಸತ್ಯಪ್ರತಿಜ್ಞನಾದರೆ–ನನ್ನ ಮಾತನ್ನು ಕೇಳು.

ನಿಮ್ಮ ತಂದೆಯು ನನಗೆ ಪ್ರತಿಜ್ಞೆಮಾಡಿಕೊಟ್ಟಿರುವಂತೆ ಅವನ ಪ್ರತಿಜ್ಞಾಪಾಲನೆಗೆ ಸಾಧನಭೂತನಾಗಿ ನಿಲ್ಲು. ಇದರ ಫಲವಾಗಿ ನೀನು ಹದಿನಾಲ್ಕು ವರ್ಷಗಳ ಕಾಲ ಅರಣ್ಯದಲ್ಲಿರಬೇಕು. ನಿನಗೋಸ್ಕರ ರಾಜ ನಿಂದ ಸಿದ್ಧಮಾಡಲ್ಪಟ್ಟಿರುವ ಅಭಿಷೇಕಸಾಮಗ್ರಿಗಳಿಂದಲೇ ಭರತನಿಗೆ ಪಟ್ಟಗಟ್ಟಬೇಕು. ಈ ಪಟ್ಟಾಭಿಷೇಕಸಮಾರಂಭವನ್ನು ಪರಿತ್ಯಜಿಸಿ ಜಟೆ-

ನಾರುಮಡಿಗಳನ್ನು ಧರಿಸಿ ಹದಿನಾಲ್ಕು ವರ್ಷಗಳ ಕಾಲ ದಂಡಕಾರಣ್ಯದಲ್ಲಿ ವಾಸಮಾಡಿಕೊಂಡಿರು. ಭರತನು ನಾನಾವಿಧವಾದ ರತ್ನಗಳಿಂದ ವ್ಯಾಪ್ತವಾಗಿರುವ, ಅಶ್ವ-ರಥ-ಗಜಗಳಿಂದ ಸಮೃದ್ಧವಾಗಿರುವ ಕೋಸಲ ದೇಶದ ರಾಜಧಾನಿಯಾದ ಅಯೋಧ್ಯೆಯಲ್ಲಿದ್ದುಕೊಂಡು ಈ ಭೂಮಂಡಲ ವನ್ನು ಆಳಲಿ. ನಿನ್ನ ವಿಷಯದಲ್ಲಿ ಅತ್ಯಂತದಯಾಪರನಾಗಿರುವ ರಾಜನು ಈ ಕಾರಣದಿಂದಲೇ ಮಹಾಶೋಕದಿಂದ ಕ್ಲೇಶಗೊಂಡ ಮುಖವುಳ್ಳವನಾಗಿ ನಿನ್ನನ್ನು ನೋಡಲು ಕೂಡ ಅಸಮರ್ಥನಾಗಿದ್ದಾನೆ. ದಶರಥರಾಜನ ಈ ಮಾತನ್ನು ನಡೆಸಿಕೊಡು. ಮಹತ್ತರವಾದ ಸತ್ಯಪರಿಪಾಲನೆಯಿಂದ ರಾಜ ನನ್ನು ಉದ್ಧರಿಸು."

ಹೀಗೆ ಕೈಕೇಯಿಯು ಅತಿಕಠೋರವಾದ ಮಾತುಗಳನ್ನಾಡುತ್ತಿದ್ದರೂ ಶ್ರೀರಾಮನಿಗೆ ಸ್ವಲ್ಪವಾದರೂ ವ್ಯಸನವಾಗಲಿಲ್ಲ. (ಕಾಡಿಗೆ ಹೋಗ ಬೇಕಾಗುವುದೆಂದು ಶ್ರೀರಾಮನು ಶೋಕತಪ್ತನಾಗಲಿಲ್ಲ.) ಆದರೆ ಮಹಾನು ಭಾವನಾದ ದಶರಥನು ಪುತ್ರನ ವಿಯೋಗವ್ಯಸನದಿಂದ ಪರಿತಪಿಸುತ್ತಾ ಬಹಳವಾಗಿ ವ್ಯಥೆಪಟ್ಟನು.

೧೮ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೯ನೆಯ ಸರ್ಗ

ಶ್ರೀರಾಮನು ಅರಣ್ಯಕ್ಕೆ ಹೋಗುವುದಾಗಿ ಕೈಕೇಯಿಗೆ ಹೇಳಿದುದು : ತಾಯಿಯಿಂದ ಅನುಜ್ಞೆಯನ್ನು ಪಡೆಯಲು ಕೌಸಲ್ಯೆಯ ಬಳಿಗೆ ಹೋದುದು

ತದಪ್ರಿಯಮಮಿತ್ರಘ್ನೋ ವಚನಂ ಮರಣೋಪಮಮ್ ।
ಶ್ರುತ್ವಾ ನ ವಿವ್ಯಥೇ ರಾಮಃ ಕೈಕೇಯೀಂ ಚೇದಮಬ್ರವೀತ್ ॥೧॥

ಶತ್ರುಸೂದನನಾದ ಶ್ರೀರಾಮನು ಅಪ್ರಿಯವಾದ ಮತ್ತು ಮರಣ ಸಮಾನವಾದ ಕೈಕೇಯಿಯ ಅಂತಹ ಮಾತುಗಳನ್ನು ಕೇಳಿಯೂ ದುಃಖಗೊಳ್ಳಲಿಲ್ಲ. ಅಂತೆಯೇ ಕೈಕೇಯಿಗೆ ಹೇಳಿದನು :*

---

* ಇಲ್ಲಿ 'ಮರಣೋಪಮಂ' ಎಂಬ ಪದಪ್ರಯೋಗವು ವೈಶಿಷ್ಟ್ಯಪೂರ್ಣವಾಗಿದೆ. ಮರಣಕಾಲದಲ್ಲಿ ಎಂದರೆ ಪ್ರಾಣೋತ್ಕ್ರಮಣಕಾಲದಲ್ಲಿ ಮಾನವನಿಗೆ ಉಂಟಾಗುವ

"ಹಾಗೆಯೇ ಆಗಲಿ, ತಾಯೇ! ರಾಜನ ಪ್ರತಿಜ್ಞಾವಚನವನ್ನು ಪರಿಪಾಲಿಸುವ ಸಲುವಾಗಿ ಜಟಾ-ವಲ್ಕಲಗಳನ್ನು ಧರಿಸಿ ಇಲ್ಲಿಂದ ಅರಣ್ಯಕ್ಕೆ ಹೋಗಿ ಅಲ್ಲಿಯೇ ವಾಸಮಾಡಿಕೊಂಡಿರುತ್ತೇನೆ. ಆದರೆ ಈ ಒಂದು ವಿಷಯ ವನ್ನು ಮಾತ್ರ ನಿನ್ನಿಂದ ಕೇಳಿ ತಿಳಿದುಕೊಳ್ಳಲು ಬಯಸುತ್ತೇನೆ. ಅತುಲ ಪರಾಕ್ರಾಮಿಯಾದ ರಾಜನೇಕೆ ನನ್ನೊಡನೆ ಹಿಂದಿನಂತೆ ಸಂತೋಷದಿಂದ ಮಾತಾನಾಡುತ್ತಿಲ್ಲ? ಇದರ ಕಾರಣವನ್ನು ದಯಮಾಡಿ ಹೇಳು, ತಾಯೇ! ನಮ್ಮ ತಂದೆಯು ನಿನಗೆ ವರಗಳನ್ನು ಕೊಡಲಿಲ್ಲವೆಂದು ನೀನು ಕೋಪಿಸಿ ಕೊಳ್ಳುವ ಕಾರಣವಿಲ್ಲ. ನಿನ್ನ ಮುಂದೆ ಈ ವಿಷಯವನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನೀನು ಅಪೇಕ್ಷಿಸಿರುವ ವರಗಳ ಅನುಸಾರವಾಗಿ ನಾನು ಜಟಾ-ವಲ್ಕಲಗಳನ್ನು ಧರಿಸಿ ಅರಣ್ಯಕ್ಕೆ ಹೋಗುತ್ತೇನೆ ; ಸುಪ್ರೀತಳಾಗು. ರಾಜನು ಯಾವಾಗಲೂ ನನ್ನ ಹಿತಚಿಂತಕನು. ಉಪನಯನದ ಕಾಲದಲ್ಲಿ ಮಂತ್ರೋಪದೇಶಮಾಡಿದ ಮೊದಲನೆಯ ಆಚಾರ್ಯನು. ಮೇಲಾಗಿ ಜನ್ಮದಾತನಾದ ನನ್ನ ತಂದೆ. ನನಗೆ ವಿಧಿಸುತ್ತಿರುವ ಈ ಕಾರ್ಯವೂ ಅವನು ನಿನ್ನ ವಿಷಯದಲ್ಲಿ ಕೃತಜ್ಞನಾಗಿರುವ ಕಾರಣದಿಂದಲೇ ಆಗಿದೆ. (ನೀನು ಆಪತ್ಕಾಲದಲ್ಲಿ ಮಾಡಿದ ಸಹಾಯಕ್ಕೆ ಕೃತಜ್ಞತಾರೂಪವಾಗಿ ಕೊಟ್ಟಿರುವ ವರವಿದು.) ಮೇಲಾಗಿ ಇವನು ಸಾರ್ವಭೌಮನು. ಸಕಲರೂ ಇವನ ಆಜ್ಞಾಧಾರಕರಾಗಿಯೇ ಇರಬೇಕು. ಇಂತಹವನಿಂದ ಆಜ್ಞಪ್ತನಾಗಿ

ಸಂಕಟವು ಅತಿದುಸ್ಸಹವೆಂದು ಜ್ಞಾನಿಗಳು ಹೇಳುತ್ತಾರೆ. ಪ್ರಾಣಬಿಡುವುದು ಅತಿ ಕಷ್ಟತಮವಾದುದು. 'ಪ್ರಾಣಸಂಕಟ' ಎಂದು ಹೇಳುವ ರೂಢಿಯೂ ಇದೆ. ಇದಕ್ಕೆ 'ಪ್ರಾಣೋತಮಣಸಂಕಟ' ಎಂದರ್ಥ. ಇಂತಹ ಸಂಕಟವು ಶ್ರೀರಾಮನಿಗೆ ಉಂಟಾಗಬೇಕಾದದ್ದು ಸ್ವಾಭಾವಿಕವಾಗಿಯೇ ಇದೆ. ಪಟ್ಟಾಭಿಷೇಕಾರ್ಥವಾಗಿ ಅರಮನೆಗೆ ಬಂದವನಿಗೆ ಅರಣ್ಯವಾಸಮಾಡೆಂದು ಹೇಳಿದರೆ ಅವನ ಮನಸ್ಸಿನಲ್ಲಿ ಉಂಟಾಗುವ ಯಾತನೆಯು ಪ್ರಾಣೋತಮಣಯಾತನೆಗೆ ಸಮಾನವಾದುದು. ಇದಕ್ಕೆ ವ್ಯಾಖ್ಯಾನಕಾರರು 'ಲೋಕದೃಷ್ಟ್ಯಾ' ಎಂಬ ಪದದ ಅಧ್ಯಾಹಾರವನ್ನು ಸೇರಿಸಿದ್ದಾರೆ. ಅರ್ಥಾತ್ ಜನಸಾಮಾನ್ಯರಿಗೆ ಈ ಸನ್ನಿವೇಶವು ಪ್ರಾಣೋತಮಣಸಂಕಟದಂತಹ ಸಂಕಟವನ್ನು ಉಂಟುಮಾಡತಕ್ಕದ್ದು ಎಂಬ ಅರ್ಥವು ಸಾಧುವಾಗಿದೆ. ಆದರೆ ಧೀರನಾದ ಶ್ರೀರಾಮನು ತನಗೆ ಅಪ್ರಿಯವಾಗಿಯೂ, ಸಾವಿಗೆ ಸಮಾನವಾಗಿಯೂ ಇರುವ ಮಾತನ್ನು ಕೇಳಿಯೂ ಅಧೀರನಾಗಲಿಲ್ಲ ; ವ್ಯಥಿತನೂ ಆಗಲಿಲ್ಲ.

ರುವ, ನಿನ್ನ ಮಾತಿನ ಮೇಲೆ ಸಂಪೂರ್ಣವಾಗಿ ವಿಶ್ವಾಸವನ್ನಿಟ್ಟಿರುವ ನಾನು, ನಿನಗೆ ಪ್ರಿಯವೆನಿಸಿರುವ ಕಾರ್ಯವನ್ನು ಖಂಡಿತವಾಗಿಯೂ ಮಾಡುವೆನು. ಆದರೆ ಭರತನ ಪಟ್ಟಾಭಿಷೇಕದ ವಾರ್ತೆಯನ್ನು ರಾಜನೇ ನೇರವಾಗಿ ನನ್ನೊಡನೆ ಹೇಳಲಿಲ್ಲವೆಂಬ ಈ ಒಂದು ದುಃಖವು ನನ್ನ ಹೃದಯವನ್ನೇ ದಹಿಸುವಂತಿದೆ.

ಅಹಂ ಹಿ ಸೀತಾಂ ರಾಜ್ಯಂ ಚ ಪ್ರಾಣಾನಿಷ್ಟಾನ್ಧನಾನಿ ಚ ।
ಹೃಷ್ಟೋ ಭ್ರಾತ್ರೇ ಸ್ವಯಂ ದದ್ಯಾಂ ಭರತಾಯಾಪ್ರಚೋದಿತಃ ॥

ನೀನೇ ಈ ಹಿಂದೆ ಒಮ್ಮೆಯಾದರೂ ನಿನ್ನ ಆಶಯವನ್ನು ನನಗೆ ಹೇಳಿಬಿಟ್ಟಿದ್ದರೆ–ನಾನು ಸೀತೆಯನ್ನೂ, ರಾಜ್ಯವನ್ನೂ, ಅತ್ಯಂತಪ್ರಿಯವಾದ ಪ್ರಾಣಗಳನ್ನೂ, ಸಕಲೈಶ್ವರ್ಯಗಳನ್ನೂ ಅತ್ಯಂತಸಂತೋಷದಿಂದ ನನ್ನ ತಮ್ಮನಾದ ಭರತನಿಗೆ ನಾನಾಗಿಯೇ ಕೊಟ್ಟುಬಿಡುತ್ತಿದ್ದೆನು. ನನ್ನ ಮನೋಭಾವವು ಹೀಗಿರುವಾಗ ನಿನ್ನ ಪ್ರೀತ್ಯರ್ಥವಾಗಿ ಮತ್ತು ಪ್ರತಿಜ್ಞೆಯ ಪರಿಪಾಲನೆಗಾಗಿ ಸಾರ್ವಭೌಮನಾದ ತಂದೆಯೇ ನನ್ನನ್ನು ವನವಾಸಕ್ಕೆ ಪ್ರಚೋದಿಸುತ್ತಿದ್ದಾನೆಂದು ತಿಳಿದೂ ನಾನದನ್ನು ಕಾರ್ಯಗತಮಾಡದಿರುವೆನೇ? ಹೀಗಿದ್ದರೂ ಯಾವ ಕಾರಣದಿಂದ ನಮ್ಮ ರಾಜನು ಅಧೋಮುಖನಾಗಿ ಕುಳಿತು ಭೂಮಿಯನ್ನೇ ದಿಟ್ಟಿಸಿ ನೋಡುತ್ತಾ ಹನಿ-ಹನಿಯಾಗಿ ಕಣ್ಣೀರನ್ನು ತೊಟ್ಟಿಕ್ಕಿಸುತ್ತಿದ್ದಾನೆ? ಅವನ ದುಃಖದ ಕಾರಣವನ್ನು ತಿಳಿದು ರಾಜನನ್ನು ಸಂತೈಸು, ತಾಯೇ! ರಾಜನ ಆಜ್ಞೆಯಂತೆ ರಾಜಭಟರು ಶೀಘ್ರಗಾಮಿಗಳಾದ ಕುದುರೆಗಳ ಮೇಲೆ ಕುಳಿತು ಭರತನನ್ನು ಅವನ ಸೋದರ ಮಾವನ ಮನೆಯಿಂದ ಕರೆತರಲು ಈ ಕೂಡಲೇ ಹೊರಡಲಿ. ನನ್ನ ತಂದೆಯು ನನಗೆ ನೇರವಾಗಿ ಆಜ್ಞೆಮಾಡಲಿಲ್ಲವೆಂಬ ಮತ್ತು ನನ್ನೊಡನೆ ಯಾವ ಮಾತನ್ನೂ ಆಡಲಿಲ್ಲವೆಂಬ ವಿಷಯವನ್ನೇ ಪರ್ಯಾಲೋಚಿಸದೇ ಎರಡನೆಯ ವರದ ಸಾಫಲ್ಯಕ್ಕಾಗಿ ನಾನೀಗಲೇ ಹದಿನಾಲ್ಕು ವರ್ಷಗಳ ಅರಣ್ಯವಾಸಕ್ಕಾಗಿ ದಂಡಕಾರಣ್ಯಕ್ಕೆ ಹೋಗುತ್ತೇನೆ.”

ಶ್ರೀರಾಮನ ಮಾತುಗಳನ್ನು ಕೇಳಿ ಸಂತುಷ್ಟಳಾದ ಕೈಕೇಯಿಗೆ, ಶ್ರೀರಾಮನು ಖಂಡಿತವಾಗಿಯೂ ಅರಣ್ಯಕ್ಕೆ ಹೋಗುವನೆಂಬ ವಿಶ್ವಾಸವುಂಟಾಗಿ, ಅವನನ್ನು ಒಡನೆಯೇ ಕಾಡಿಗೆ ಹೋಗಲು ಅವಸರಪಡಿಸಿದಳು :

(ಕೈಕೇಯಿಯ ಮೊದಲನೆಯ ವರ ಭರತನಿಗೆ ಪಟ್ಟಾಭಿಷೇಕ. ಎರಡನೆಯ ವರ ಶ್ರೀರಾಮನಿಗೆ ವನವಾಸ. ಪಟ್ಟಾಭಿಷೇಕಸಾಮಗ್ರಿಗಳು ಸಿದ್ಧವಾಗಿದ್ದುದರಿಂದ ಭರತನ ಪಟ್ಟಾಭಿಷೇಕವಾದನಂತರವೇ ಶ್ರೀರಾಮನು ಕಾಡಿಗೆ ಹೋಗುವುದು ಉಚಿತವಾಗಿತ್ತು. ಆದರೆ ಕೈಕೇಯಿಗೆ ಇದು ಸಹ್ಯವಾಗಲಿಲ್ಲ. ಶ್ರೀರಾಮನಿಲ್ಲಿಯೇ ಇದ್ದರೆ ಭರತನಾದರೂ ಏನು ಹೇಳುವನೋ?–ಎಂಬ ಸಂಶಯವಿರಲಿಕ್ಕೂ ಅವಕಾಶವಿದೆ. ಆದುದರಿಂದ ಶ್ರೀರಾಮನನ್ನು ಅವಸರವಾಗಿ ಕಾಡಿಗಟ್ಟಬೇಕೆಂದು ನಿರ್ಧರಿಸಿ ಹೇಳುತ್ತಾಳೆ.)

"ರಾಮ! ನೀನು ಹೇಳಿದಂತೆಯೇ ಶೀಘ್ರಗಾಮಿಗಳಾದ ಕುದುರೆಗಳ ಮೂಲಕ ರಾಜಭಟರು ಭರತನನ್ನು ಅವನ ಸೋದರಮಾವನ ಮನೆಯಿಂದ ಕರೆತರಲು ಹೋಗುತ್ತಾರೆ. ಆದರೆ ತಂದೆಯ ಸತ್ಯವಾಕ್ಯಪರಿಪಾಲನೆಗಾಗಿ ಕಾಡಿಗೆ ಹೋಗಲು ಉತ್ಸುಕನಾಗಿರುವ ನೀನು ಯಾವುದೇ ಕಾರಣದಿಂದಲೂ ತಡಮಾಡುವುದು ನನಗೆ ಉಚಿತವಾಗಿ ಕಾಣುವುದಿಲ್ಲ. ಆದುದರಿಂದ ನೀನೀಗಲೇ ಕಾಡಿಗೆ ಹೊರಟುಹೋಗು. ರಾಜನು ನಾಚಿಕೆಗೊಂಡಿರುವುದೇ ನಿನ್ನೊಡನೆ ಮಾತನಾಡದಿರುವುದಕ್ಕೆ ಕಾರಣವಾಗಿದೆ. ಬೇರಾವ ಕಾರಣವೂ ಇಲ್ಲ. ರಾಜನು ಮಾತನಾಡಲಿಲ್ಲವೆಂಬ ನಿನ್ನ ಶೋಕವನ್ನು ಪರಿತ್ಯಜಿಸು.

ಯಾವತ್ತ್ವಂ ನ ವನಂ ಯಾತಃ ಪುರಾದಸ್ಮಾದಭಿತ್ವರನ್ ।
ಪಿತಾ ತಾವನ್ನ ತೇ ರಾಮ ಸ್ನಾಸ್ಯತೇ ಭೋಕ್ಷ್ಯತೇಽಪಿವಾ ॥೧೬॥

ನೀನು ಎಲ್ಲಿಯವರೆಗೆ ಈ ಅಯೋಧ್ಯಾಪಟ್ಟಣದಿಂದ ಅವಸರಪಟ್ಟುಕೊಂಡು ಅರಣ್ಯಕ್ಕೆ ಹೋಗುವುದಿಲ್ಲವೋ–ಅಲ್ಲಿಯವರೆಗೂ ರಾಜನು ಸ್ನಾನವನ್ನೂ ಮಾಡುವುದಿಲ್ಲ ; ಊಟವನ್ನೂ ಮಾಡುವುದಿಲ್ಲ."

ಕೈಕೇಯಿಯ ಆ ಮಾತನ್ನು ಕೇಳಿದೊಡನೆಯೇ ಅದುವರೆಗೂ ಮೌನಿಯಾಗಿದ್ದ, ಶೋಕಸಾಗರದಲ್ಲಿ ಮುಳುಗಿಹೋಗಿದ್ದ ರಾಜನು–'ಅಯ್ಯೋ! ನನಗೆ ಧಿಕ್ಕಾರವಿರಲಿ ; ಈ ಕಷ್ಟವನ್ನು ನಾನು ಸಹಿಸಿಕೊಳ್ಳಲಾರೆ. ಧಿಕ್ಕಷ್ಟಂ!'–ಎಂದು ಉದ್ಗರಿಸುತ್ತಾ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಸುವರ್ಣಮಯವಾಗಿದ್ದ ಮಂಚದ ಮೇಲೆ ಮೂರ್ಛಿತನಾಗಿ ಬಿದ್ದನು. ಒಡನೆಯೇ ಶ್ರೀರಾಮನು ರಾಜನನ್ನು ಹಿಡಿದೆತ್ತಿ ಕುಳ್ಳಿರಿಸಿ ಉಪಚರಿಸಿದನು.

ಆದರೆ ಕೈಕೇಯಿಗೆ ರಾಜನ ದುಃಸ್ಥಿತಿಯನ್ನು ನೋಡಿ ಮರುಕವೇನೂ ಉಂಟಾಗಲಿಲ್ಲ. ಶ್ರೀರಾಮನು ಸಾಧ್ಯವಾದಷ್ಟು ಶೀರ್ಘವಾಗಿ ಅರಣ್ಯಕ್ಕೆ ಹೊರಟುಹೋದರೆ ಎಲ್ಲವೂ ಸರಿಹೋಗುವುದೆಂಬುದು ಅವಳ ಅನಿಸಿಕೆಯಾಗಿದ್ದಿತು. ಚಾವಟಿಯಿಂದ ಕುದುರೆಯನ್ನು ಪ್ರಹರಿಸಿ ಮುಂದೆ ಹೋಗಲು ಪ್ರಚೋದಿಸುವಂತೆ–ಮಾತೆಂಬ ಚಾವಟಿಯಿಂದ ಶ್ರೀರಾಮನನ್ನು ಕ್ಷಣ-ಕ್ಷಣಕ್ಕೂ ಅರಣ್ಯಕ್ಕೆ ಹೊರಟುಬಿಡುವಂತೆ ಪೀಡಿಸತೊಡಗಿದಳು. ಶ್ರೀರಾಮನು ಕೂಡ ಒಡನೆಯೇ ಕಾಡಿಗೆ ಹೊರಡಲು ನಿಶ್ಚಯಿಸಿದನು. ಅನಾರ್ಯೆಯಾದ ಕೈಕೇಯಿಯ ಅಪ್ರಿಯವಾದ ಮತ್ತು ಕಠೋರವಾದ ಮಾತನ್ನು ಕೇಳಿ ಶ್ರೀರಾಮನಿಗೆ ಮಾನವಸಹಜವಾದ ವ್ಯಥೆಯೇನೋ ಉಂಟಾಯಿತು. ಆದರೆ ಪುರುಷಶ್ರೇಷ್ಠನಾದ ಶ್ರೀರಾಮನು ಮರುಕ್ಷಣ ದಲ್ಲಿಯೇ ವ್ಯಥೆಯನ್ನು ದೂರೀಕರಿಸಿ ಕೈಕೇಯಿಗೆ ಹೇಳಿದನು :

ನಾಹಮರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ ।
ವಿದ್ಧಿ ಮಾಮೃಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಮ್ ॥೨೦॥

“ದೇವಿ! ಕೇವಲ ಅರ್ಥಪರನಾಗಿ ಲೋಕದಲ್ಲಿ ಬದುಕಬೇಕೆಂಬ ಆಸೆಯು ನನಗಿಲ್ಲ. ನನ್ನನ್ನು ತ್ಯಾಗಶೀಲರಾದ ಋಷಿಗಳಿಗೆ ಸಮಾನನೆಂದೂ, ಶುದ್ಧಾತ್ಮನೆಂದೂ, ಧರ್ಮೈಕದೃಷ್ಟಿಯುಳ್ಳವನೆಂದೂ ತಿಳಿ.

ಇಲ್ಲಿರುವ ಪೂಜ್ಯಪಾದನಾದ ನಮ್ಮ ತಂದೆಗೆ ಸ್ವಲ್ಪವಾದರೂ ಒಳ್ಳೆಯದನ್ನು ಮಾಡಲು ಸಾಧ್ಯವಾಗುವುದಾಗಿದ್ದರೆ ಪ್ರಾಣಗಳನ್ನಾದರೂ ಒತ್ತೆಯಿಟ್ಟು ಆ ಕಾರ್ಯವನ್ನು ನಾನು ಮಾಡಿಯೇ ತೀರುತ್ತೇನೆ.

ನ ಹ್ಯತೋ ಧರ್ಮಚರಣಂ ಕಿಂಚಿದಸ್ತಿ ಮಹತ್ತರಮ್ ।
ಯಥಾ ಪಿತರಿ ಶುಶ್ರೂಷಾ ತಸ್ಯ ವಾ ವಚನಕ್ರಿಯಾ ॥೨೧॥

ಪೂಜ್ಯಪಾದನಾದ ತಂದೆಯ ಶುಶ್ರೂಷೆಮಾಡುವುದು ಮತ್ತು ಅವನ ಮಾತಿನಂತೆ ನಡೆದುಕೊಳ್ಳುವುದು–ಈ ಎರಡಕ್ಕಿಂತಲೂ ಮಹತ್ತರವಾದ ಧರ್ಮಾಚರಣೆಯು ಬೇರೆ ಯಾವುದೂ ಇರುವುದಿಲ್ಲ. ಪೂಜ್ಯಪಾದನಾದ ನಮ್ಮ ತಂದೆಯೇ ನನಗೆ ನೇರವಾಗಿ ಹೇಳದಿದ್ದರೂ–ನಿನ್ನ ಮಾತಿನಂತೆಯೇ ನಿರ್ಜನವಾದ ಅರಣ್ಯದಲ್ಲಿ ಹದಿನಾಲ್ಕು ವರ್ಷಗಳನ್ನು ಕಳೆಯುವೆನು. ನೀನೇ ನನಗೆ ನೇರವಾಗಿ ಹೇಳಿದ್ದರೂ ನಿನಗೆ ಪ್ರಿಯವಾದ ಈ ಕಾರ್ಯವನ್ನು

ನಾನು ಸರ್ವಥಾ ನಡೆಸಿಕೊಡುತ್ತಿದ್ದೆನು. ನೀನೂ ನನಗೆ ಸ್ವಾಮಿನಿಯು. ನೇರವಾಗಿ ನನಗೆ ಅಪ್ಪಣೆಮಾಡುವ ಅಧಿಕಾರವು ನಿನಗೂ ಇದೆ. ಹೀಗಿದ್ದರೂ ನೀನು ಈ ಸಣ್ಣಕೆಲಸವನ್ನು ಮಾಡಿಕೊಡಲು ರಾಜನಿಗೆ ಹೇಳಿದೆ. ಆದುದರಿಂದ–

ನ ನೂನಂ ಮಯಿ ಕೈಕೇಯಿ ಕಿಂಚಿದಾಶಂಸಸೇ ಗುಣಮ್ ॥೨೪॥

ನಿಶ್ಚಯವಾಗಿಯೂ ಇಷ್ಟು ವರ್ಷಗಳ ಕಾಲ ನಿನ್ನ ಸನಿಹದಲ್ಲೇ ಇದ್ದರೂ ನನ್ನಲ್ಲಿರುವ ಗುಣಗಳನ್ನು ನೀನು ಲೇಶವಾದರೂ ತಿಳಿದವಳಾಗಿಲ್ಲ. ಇದು ಆಶ್ಚರ್ಯವೇ ಸರಿ.

ನನಗೆ ಕಾಡಿಗೆ ಹೊರಡಲು ಸ್ವಲ್ಪವೇ ಸಮಯವು ಬೇಕಾಗಿದೆ. ಅಷ್ಟಕ್ಕೆ ಅವಕಾಶಮಾಡಿಕೊಡು. ನನ್ನ ತಾಯಿಯ ಅಪ್ಪಣೆಯನ್ನು ಪಡೆಯಬೇಕಾಗಿದೆ. ಸೀತೆಯನ್ನು ಸಂತೈಸಬೇಕಾಗಿದೆ. ಇಷ್ಟು ಮಾಡಿದ ಕೂಡಲೇ ದಂಡಕರ ಅರಣ್ಯಕ್ಕೆ* ಹೊರಟುಹೋಗುತ್ತೇನೆ.

ಭರತನು ಯಾವ ರೀತಿಯಲ್ಲಿ ರಾಜ್ಯಪರಿಪಾಲನೆ ಮಾಡುವನೋ– ಅದೇ ರೀತಿಯಲ್ಲಿ ತಂದೆಯ ಶುಶ್ರೂಷೆಯನ್ನೂ ಮಾಡುವಂತೆ ನೋಡಿ ಕೊಳ್ಳುವುದು ನಿನ್ನ ಕರ್ತವ್ಯವಾಗಿದೆ. ತಂದೆಯು ವೃದ್ಧನಾಗಿರುವಾಗ ಅವನ ಶುಶ್ರೂಷೆಮಾಡುವುದು ಸನಾತನಧರ್ಮ."

ಶ್ರೀರಾಮನು ಮಾತನ್ನು ಕೇಳಿ ದಶರಥನು ಮಿತಿಮೀರಿ ದುಃಖಪೀಡಿತ ನಾದನು. ದುಃಖೋದ್ವೇಗದಿಂದ ಧಾರಾಕಾರವಾಗಿ ಬರುತ್ತಿದ್ದ ಕಣ್ಣೀರನ್ನು ತಡೆಯಲಾಗದೇ ಗಟ್ಟಿಯಾಗಿ ಬಿಕ್ಕಿ-ಬಿಕ್ಕಿ ಅಳತೊಡಗಿದನು. ಹಾಗೆ ದುಃಖಾತಿಶಯದಿಂದ ಪುನಃ ಎಚ್ಚರದಪ್ಪಿದ ತಂದೆಯ ಕಾಲುಗಳಿಗೆ ಶ್ರೀರಾಮನು ನಮಸ್ಕರಿಸಿ ಅನಾರ್ಯೆಯಾದ ಕೈಕೇಯಿಯ ಕಾಲುಗಳಿಗೂ ಬಿದ್ದನು. ಬಳಿಕ ಶ್ರೀರಾಮನು ತಂದೆಗೂ ಮತ್ತು ಕೈಕೇಯಿಗೂ ಪ್ರದಕ್ಷಿಣೆ ಮಾಡಿ ಅಂತಃಪುರದಿಂದ ಹೊರಬಂದು ಆತ್ಮೀಯರನ್ನು ಸಂದರ್ಶಿಸಿದನು. ಅದುವರೆಗೂ ಶ್ರೀರಾಮನ ಹಿಂದೆಯೇ ನಿಂತು ವಿಷಯಗಳೆಲ್ಲವನ್ನೂ

---

* ಇಕ್ಷ್ವಾಕುವಂಶದಲ್ಲಿ ದಂಡಕನೆಂಬ ರಾಜನೊಬ್ಬನಿದ್ದನು. ಅವನ ರಾಜ್ಯವು ಇಂದ್ರನ ಶಾಪದಿಂದಾಗಿ ಧೂಳಿನ ಮಳೆಯಿಂದ ವಿಧ್ವಸ್ತವಾಯಿತು . ವಿನಾಶಹೊಂದಿದ ಆ ರಾಜ್ಯವು ಮುಂದೆ ದಂಡಕರ ಅರಣ್ಯ ಅಥವಾ ದಂಡಕಾರಣ್ಯವಾಯಿತು.

ಗ್ರಹಿಸಿದ್ದ, ಸುಮಿತ್ರಾದೇವಿಯ ಆನಂದವರ್ಧನನಾದ ಲಕ್ಷ್ಮಣನು ಕಂಬನಿ ದುಂಬಿದ ಕಣ್ಣುಗಳುಳ್ಳವನಾಗಿ ಪರಮಕ್ರುದ್ಧನಾಗಿ ಶ್ರೀರಾಮನನ್ನೇ ಅನುಸರಿಸಿಹೋದನು. ಶ್ರೀರಾಮನು ಅಂತಃಪುರದಿಂದ ಹೊರಬಿದ್ದೊಡನೆಯೇ ತನ್ನ ಅಭಿಷೇಕಕ್ಕಾಗಿ ಅನೇಕ ನದೀ-ನದ-ಸರೋವರ-ಸಮುದ್ರಗಳಿಂದ ತರಲ್ಪಟ್ಟಿದ್ದ ಪುಣ್ಯತೀರ್ಥಗಳ ಕಲಶಗಳನ್ನು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ, ಆ ಭಾಂಡದ ತೀರ್ಥದಿಂದಲೇ ಭರತನ ಪಟ್ಟಾಭಿಷೇಕವಾಗಲೆಂಬ* ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾ, ಅಭಿಷೇಕಾರ್ಥವಾಗಿ ಸಿದ್ಧಪಡಿಸಿದ್ದ ಸಾಮಗ್ರಿಗಳ ಕಡೆಗೆ ಒಮ್ಮೆಯೂ ದೃಷ್ಟಿಯನ್ನು ಹೊರಳಿಸದೇ ಮೆಲ್ಲ-ಮೆಲ್ಲನೆ ಹೆಜ್ಜೆಗಳನ್ನಿಡುತ್ತಾ ಹೋಗುತ್ತಿದ್ದನು.

ನ ಚಾಸ್ಯ ಮಹತೀಂ ಲಕ್ಷ್ಮೀಂ ರಾಜ್ಯನಾಶೋಽಪಕರ್ಷತಿ ।
ಲೋಕಕಾನ್ತಸ್ಯ ಕಾನ್ತತ್ವಾಚ್ಛೀತರಶ್ಮೇರಿವ ಕ್ಷಪಾ ॥೩೨॥

ಚಂದ್ರನು ಲೋಕಕ್ಕೆಲ್ಲಾ ಕಾಂತಿಯನ್ನುಂಟುಮಾಡುವಷ್ಟು ಕಾಂತಿಯುಳ್ಳವನಾಗಿರುವುದರಿಂದ ರಾತ್ರಿಯು ಆತನ ಕಾಂತಿಯನ್ನು ಕ್ಷೀಣಿಸ ಲಾರದು. ಅಂತೆಯೇ ಶ್ರೀರಾಮನ ಸಹಜವಾದ ಮಹಾತೇಜಸ್ಸನ್ನು ರಾಜ್ಯ ನಾಶವೆಂಬ ಕಲೆಯು ಕುಂದಿಸಲಿಲ್ಲ. (ರಾಜ್ಯವು ಸಿಕ್ಕದೇ ಇದ್ದುದರಿಂದ ಶ್ರೀರಾಮನ ಮುಖವು ಕಾಂತಿಹೀನವಾಗಲಿಲ್ಲ.)

ನ ವನಂ ಗನ್ತುಕಾಮಸ್ಯ ತ್ಯಜತಶ್ಚ ವಸುಂಧರಾಮ್ ।
ಸರ್ವಲೋಕಾತಿಗಸ್ಯೇವ ಲಕ್ಷ್ಯತೇ ಚಿತ್ತವಿಕ್ರಿಯಾ ॥೩೩॥

ಕೆಲವರು ತಮ್ಮ ಸಂಕಟವನ್ನು ಮುಖದಲ್ಲಿ ತೋರದಿದ್ದರೂ ಮನಸ್ಸಿನಲ್ಲಾದರೂ ದುಃಖಪಡುವುದುಂಟು. ಆದರೆ ಅರಣ್ಯಕ್ಕೆ ಹೊರಟ್ಟಿದ್ದ,

---

* ಈ ಶ್ಲೋಕದಲ್ಲಿ ಸಾಪೇಕ್ಷಃ–ಎಂಬ ಪದವಿದೆ. ಅದಕ್ಕೆ ಕೆಲವರು ನಾವು ಅನುವಾದಿಸಿರುವಂತೆಯೇ ವ್ಯಾಖ್ಯಾನಮಾಡಿರುತ್ತಾರೆ. ಕೆಲವರು 'ಅರಣ್ಯಕ್ಕೆ ಹೋಗುವ ಅಪೇಕ್ಷೆಯುಳ್ಳವನಾಗಿ ಸಾಪೇಕ್ಷಃ ವನಂ ಪ್ರತಿ = ವನಗಮನಾಪೇಕ್ಷಾ ಸಹಿತಃ'–ಎಂದಿದ್ದಾರೆ. ಮತ್ತೊಬ್ಬರು–'ಈ ಅಭಿಷೇಚನಿಕದ್ರವ್ಯಗಳಿಂದ ಭರತನ ಅಭಿಷೇಕವಾಗದಿರಲಿ'–ಎಂಬ ಅಭಿಪ್ರಾಯದಿಂದ ; **ಭರತಸ್ಯ ಅನೇನ ನಾಭಿಷೇಕೋಽಸ್ತು ಇತಿ ಪ್ರಾರ್ಥನಾಸಹಿತಃ** ಎಂದಿದ್ದಾರೆ. ಕಡೆಯ ಅರ್ಥವು ಶ್ರೀರಾಮನ ಸಹಜಗುಣಕ್ಕೆ ವಿರುದ್ಧವಾಗಿದೆ.

ರಾಜ್ಯಲಕ್ಷ್ಮಿಯನ್ನು ಪರಿತ್ಯಜಿಸಿದ ಶ್ರೀರಾಮನ ಚಿತ್ತವೃತ್ತಿಯು-ಮಾನಾಪ ಮಾನಗಳನ್ನೂ, ಸುಖ-ದುಃಖಗಳನ್ನೂ, ಶೀತೋಷ್ಣಗಳನ್ನೂ ಸಮವೆಂದು ಭಾವಿಸುವ ಸರ್ವಲೋಕಾತೀತನಾದ ಪರಮಯೋಗೀಶ್ವರನ ಚಿತ್ತವೃತ್ತಿಯಂತೆ ನಿರ್ವಿಕಾರವಾಗಿದ್ದಿತೇ ಹೊರತು ಅದರಲ್ಲಿ ಸ್ವಲ್ಪವಾದರೂ ವ್ಯತ್ಯಾಸವು ಕಂಡುಬರಲಿಲ್ಲ.

ಶುಭಕರವಾದ ಶ್ವೇತಚ್ಛತ್ರವನ್ನೂ-ಅಲಂಕೃತವಾದ ಚಾಮರಗಳನ್ನೂ ಹಿಡಿದುಕೊಂಡು ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ರಾಜಭಟರನ್ನು ತನ್ನೊಡನೆ ಬಾರದಂತೆ ಪ್ರತಿಷೇಧಿಸಿ, ಆತ್ಮೀಯರನ್ನೂ ರಥವನ್ನೂ ಮತ್ತು ಪುರಜನರನ್ನೂ ರಾಜನ ಅಂತಃಪುರದ ಸಮೀಪದಲ್ಲಿಯೇ ಬಿಟ್ಟು, ದುಃಖವನ್ನು ಮನಸ್ಸಿನಲ್ಲಿಯೇ ಅಡಗಿಸಿಕೊಂಡು, ದುಃಖೋದ್ವೇಗದಿಂದ ಉಂಟಾಗುವ ಇಂದ್ರಿಯವಿಕಾರ ಗಳಿಗೂ ಅವಕಾಶವನ್ನೀಯದೇ, ಜಿತೇಂದ್ರಿಯನಾಗಿ ಆತ್ಮ ಬಲದಿಂದ ಕೂಡಿದವನಾಗಿ, ತಾಯಿಗೆ ಅಪ್ರಿಯವಾದ ಮಾತನ್ನು ಹೇಳಲು ಕೌಸಲ್ಯಾದೇವಿಯ ಅಂತಃಪುರವನ್ನು ಪ್ರವೇಶಿಸಿದನು. ಶ್ರೀರಾಮನ ಸುತ್ತಲೂ ಇದ್ದ ಸಕಲ ಶ್ರೀಮಂತಜನರಲ್ಲಿ ಯಾರಿಗೂ, ಶ್ರೀಮಂತನಾದ, ಸತ್ಯಸಂಧನಾದ ಶ್ರೀರಾಮನ ಮುಖದಲ್ಲಿ ಅಭಿಷೇಕವು ತಪ್ಪಿಹೋದುದಕ್ಕಾಗಿ ಮತ್ತು ವನವಾಸವು ಪ್ರಾಪ್ತವಾದುದಕ್ಕಾಗಿ ಯಾವ ವಿಧವಾದ ವಿಕಾರವೂ ಕಂಡುಬರಲಿಲ್ಲ.

ಉಚಿತಂ ಚ ಮಹಾಬಾಹುರ್ನ ಜಹೌ ಹರ್ಷಮಾತ್ಮವಾನ್ ।
ಶಾರದಃ ಸಮುದೀರ್ಣಾಂಶುಶ್ಚನ್ದ್ರಸ್ತೇಜ ಇವಾತ್ಮಜಮ್ ॥೩೭॥

ಸರ್ವತ್ರವ್ಯಾಪ್ತವಾದ ಕಿರಣಗಳಿಂದ ಕೂಡಿದ ಶರಚ್ಚಂದ್ರನು ಸ್ವಾಭಾವಿಕವಾದ ಆತ್ಮತೇಜಸ್ಸನ್ನು ಯಾವ ರೀತಿಯಲ್ಲಿ ಕಳೆದುಕೊಳ್ಳುವುದಿಲ್ಲವೋ ಅಥವಾ ಕಳೆದುಕೊಳ್ಳಲು ಸಾಧ್ಯವಿಲ್ಲವೋ-ಹಾಗೆಯೇ ಮಹಾಬಾಹುವಾದ, ಆತ್ಮಜ್ಞಾನಿಯಾದ ಶ್ರೀರಾಮನು ತನ್ನ ಸ್ವಭಾವಕ್ಕೆ ಉಚಿತವಾದ ಹರ್ಷವನ್ನು ಕಳೆದುಕೊಳ್ಳಲಿಲ್ಲ. ಮಹಾಯಶೋವಂತನಾದ ಧರ್ಮಾತ್ಮನಾದ ಶ್ರೀರಾಮನು ತನ್ನ ಸುತ್ತಲೂ ಇದ್ದ ಎಲ್ಲ ಜನರನ್ನೂ ಸವಿಮಾತುಗಳಿಂದಲೇ ಸಂತೈಸಿ ತಾಯಿಯ ಬಳಿಗೆ ಹೋದನು. ಶ್ರೀರಾಮನಂತೆಯೇ ಸಕಲಸದ್ಗುಣಸಂಪನ್ನನಾಗಿದ್ದ, ಮಹಾಪರಾಕ್ರಮಿಯಾದ,

ಅನುಜನಾದ ಲಕ್ಷ್ಮಣನು ಸಹಿಸಲಾಗದ ದುಃಖವನ್ನು ತನ್ನ ಮನಸ್ಸಿನಲ್ಲಿಯೇ ಹುದುಗಿಸಿಕೊಂಡು ಶ್ರೀರಾಮನನ್ನು ಅನುಸರಿಸಿಹೋದನು.

ಶ್ರೀರಾಮನು ಅವಸರದಿಂದಲೇ ಕೌಸಲ್ಯಾದೇವಿಯ ಅಂತಃಪುರಕ್ಕೆ ಹೋದನು. ಅಲ್ಲಿದ್ದವರೆಲ್ಲರೂ ತನಗೆ ಪಟ್ಟಾಭಿಷೇಕವಾಗುವುದೆಂದು ಆನಂದಪಡುತ್ತಿದ್ದುದನ್ನು ನೋಡಿದನು. ಇಂತಹ ಸಮಯದಲ್ಲಿ ತಾನೇನಾದರೂ–ತನಗೆ ದೊರೆಯುವುದರಲ್ಲಿದ್ದ ರಾಜ್ಯವು ತಪ್ಪಿಹೋದುದಕ್ಕಾಗಿ ವಿಷಾದವನ್ನು ತೋರಿದರೆ–ತನ್ನಲ್ಲಿ ಹೆಚ್ಚು ಮಮತೆಯಿಂದಿರುವ ಸಹೃದಯರು ಆತ್ಮವಿನಾಶಹೊಂದುವರೆಂಬ ಸಂದೇಹದಿಂದ ಶ್ರೀರಾಮನು ಮನಸ್ಸಿನಲ್ಲಿಯೇ ಆಗಲೀಮುಖದಲ್ಲಿಯೇ ಆಗಲೀ ಸ್ವಲ್ಪವೂ ವಿಕಾರಗೊಳ್ಳಲಿಲ್ಲ.

೧೯ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೨೦ನೆಯ ಸರ್ಗ

ದಶರಥರಾಜನ ಇತರ ಪತ್ನಿಯರ ವಿಲಾಪ: ಶ್ರೀರಾಮನು ಕೌಸಲ್ಯೆಯ ಅಂತಃಪುರಕ್ಕೆ ಹೋಗಿ ವನವಾಸದ ವಿಷಯವನ್ನು ಹೇಳಿದುದು : ಕೌಸಲ್ಯೆಯ ಮೂರ್ಛೆ : ಶ್ರೀರಾಮನ ಶೈತ್ಯೋಪಚಾರದಿಂದ ಮೂರ್ಛೆತಿಳಿದ ಕೌಸಲ್ಯೆಯ ವಿಲಾಪ

ತಸ್ಮಿಂಸ್ತು ಪುರುಷವ್ಯಾಘ್ರೇ ನಿಷ್ಕ್ರಾಮತಿ ಕೃತಾಞ್ಜಲೌ ।
ಆರ್ತಶಬ್ದೋ ಮಹಾನ್ ಜಜ್ಞೇ ಸ್ತ್ರೀಣಾಮನ್ತಃಪುರೇ ತದಾ ॥೧॥

ಶ್ರೀರಾಮನು ಕೈಮುಗಿದುಕೊಂಡು ಕೈಕೇಯಿಯ ಅಂತಃಪುರದಿಂದ ಹೊರಬರುತ್ತಿರಲಾಗಿ ಶ್ರೀರಾಮನ ವನವಾಸದ ವಾರ್ತೆಯನ್ನು ತಿಳಿದ ಅಂತಃಪುರಗಳಲ್ಲಿದ್ದ ಸ್ತ್ರೀಯರ ಸಮೂಹದಿಂದ ದೊಡ್ಡದಾದ ಆರ್ತನಾದವು ಕೇಳಿಬಂದಿತು.

ಕೃತ್ಯೇಷ್ವಚೋದಿತಃ ಪಿತ್ರಾ ಸರ್ವಸ್ಯಾನ್ತಃಪುರಸ್ಯ ಚ ।
ಗತಿರ್ಯಃ ಶರಣಂ ಚಾಸೀತ್ಸ ರಾಮೋಽದ್ಯ ಪ್ರವತ್ಸ್ಯತಿ ॥೨॥

“ಅಯ್ಯೋ! ನಮ್ಮ ರಾಮನು ಅಂತಃಪುರದಲ್ಲಿರುವ ನಮಗೆ ಆಗ ಬೇಕಾಗಿದ್ದ ಕಾರ್ಯಗಳೆಲ್ಲವನ್ನೂ ತಂದೆಯು ಹೇಳಿರದಿದ್ದರೂ ಆಯಾ ಕಾಲ

ಗಳಲ್ಲಿ ಮಾಡಿಕೊಡುತ್ತಿದ್ದನು. ಅವನೇ ನಮ್ಮೆಲ್ಲರಿಗೂ ಗತಿಯೂ–ರಕ್ಷಕನೂ ಆಗಿದ್ದನು. ಅಂತಹ ಪರಮಪ್ರಿಯನಾದ ರಾಮನಿಂದು ಅರಣ್ಯಕ್ಕೆ ಹೋಗುತ್ತಿದ್ದಾನೆ ; ಇನ್ನು ನಮ್ಮ ಗತಿಯೇನು?

ಕೌಸಲ್ಯಾಯಾಂ ಯಥಾ ಯುಕ್ತೋ ಜನನ್ಯಾಂ ವರ್ತತೇ ಸದಾ ।
ತಥೈವ ವರ್ತತೇऽಸ್ಮಾಸು ಜನ್ಮಪ್ರಭೃತಿ ರಾಘವಃ ॥೩॥

ಹುಟ್ಟಿದಾಗಿನಿಂದಲೂ ಶ್ರೀರಾಮನು ತಾಯಿಯಾದ ಕೌಸಲ್ಯೆಯ ಹಿತದಲ್ಲಿ ಹೇಗೆ ಆಸಕ್ತನಾಗಿರುತ್ತಿದ್ದನೋ–ಹಾಗೆಯೇ ನಮ್ಮ ಹಿತದಲ್ಲಿಯೂ ಆಸಕ್ತನಾಗಿರುತ್ತಿದ್ದನು.

ನ ಕ್ರುಧ್ಯತ್ಯಭಿಶಪ್ತೋऽಪಿ ಕ್ರೋಧನೀಯಾನಿ ವರ್ಜಯನ್ ।
ಕ್ರುದ್ಧಾನ್ಪ್ರಸಾದಯನ್ಸರ್ವಾನ್ಸ ಇತೋऽದ್ಯ ಪ್ರವತ್ಸ್ಯತಿ ॥೪॥

ಕೇಡಾಗಲೆಂದು ಶಾಪವನ್ನಿತ್ತರೂ ಕೋಪಿಸಿಕೊಳ್ಳುತ್ತಿರಲಿಲ್ಲ. ಕೋಪವುಂಟಾಗುವ ಸನ್ನಿವೇಶಗಳನ್ನೇ ಶ್ರೀರಾಮನು ಪರಿತ್ಯಜಿಸುತ್ತಿದ್ದನು. ಕೋಪಗೊಂಡವರನ್ನು ಸವಿಮಾತುಗಳಿಂದ ಸಂತೈಸಿ ಪ್ರಸನ್ನಗೊಳಿಸುತ್ತಿದ್ದನು. ಅಂತಹ ಸರ್ವಾದರಣೀಯನಾದ ಶ್ರೀರಾಮನು ನಮ್ಮೆಲ್ಲರನ್ನೂ ಬಿಟ್ಟು ಕಾಡಿಗೆ ಹೋಗುತ್ತಿದ್ದಾನೆ. ಮುಂದೆ ನಮ್ಮ ಗತಿಯೇನು?

ಅಬುದ್ಧಿರ್ಬತ ನೋ ರಾಜಾ ಜೀವಲೋಕಂ ಚರತ್ಯಯಮ್ ।
ಯೋ ಗತಿಂ ಸರ್ವಲೋಕಾನಾಂ ಪರಿತ್ಯಜತಿ ರಾಘವಮ್ ॥೫॥

ನಿಶ್ಚಯವಾಗಿಯೂ ನಮ್ಮ ರಾಜನು ಬುದ್ಧಿಯಿಲ್ಲದವನು. ಸರ್ವಲೋಕಗಳಿಗೂ ಶರಣ್ಯನಾದ ರಾಘವನನ್ನೇ ಪರಿತ್ಯಜಿಸುತ್ತಿರುವ ನಮ್ಮ ರಾಜನು ಮುಂದೆ ಸರಿಯಾದ ರಕ್ಷಕರಿಲ್ಲದ ಕಾರಣ ಜೀವಲೋಕವನ್ನೇ ವಿನಾಶಗೊಳಿಸುತ್ತಾನೆ."*

ಹೀಗೆ ಅಂತಃಪುರದ ಸ್ತ್ರೀಯರು ಶ್ರೀರಾಮನ ಗುಣಗಳನ್ನು ಹೊಗಳುತ್ತಾ–ಕರುಗಳನ್ನಗಲಿದ ಹಸುಗಳಂತೆ–ಶ್ರೀರಾಮನ ವಿಯೋಗದಿಂದ ದುಃಖಿತರಾಗಿ ತಮ್ಮ ಪತಿಯನ್ನು ನಾನಾಪ್ರಕಾರವಾಗಿ ನಿಂದಿಸುತ್ತಾ ಗಟ್ಟಿಯಾಗಿ ಅಳತೊಡಗಿದರು.

---

* ಇಲ್ಲಿ ಚರಧಾತುವಿಗೆ ಭಕ್ಷಣಾರ್ಥವನ್ನು ಮಾಡಲಾಗಿದೆ. ಜೀವಲೋಕಂ ಚರತಿ = ಜೀವಲೋಕಂ ಭಕ್ಷಯತಿ ಅರ್ಥಾತ್ ವಿನಾಶಯತಿ 'ಚರಗತಿಭಕ್ಷಣಯೋಃ'

ದಶರಥರಾಜನಾದರೂ ಅಂತಃಪುರದಲ್ಲಿ ಕೇಳಿಬರುತ್ತಿದ್ದ ಘೋರವಾದ ಆರ್ತನಾದವನ್ನು ಕೇಳಿ ಪುತ್ರವಿಯೋಗದುಃಖದಿಂದ ಪರಿತಪಿಸುತ್ತಾ ಹಾಸಿಗೆಯಲ್ಲಿ ಹುದುಗಿಕೊಂಡನು. (ಮುಖವನ್ನು ಮುಚ್ಚಿಕೊಂಡು ಬೇರೆಡೆಗೆ ತಿರುಗಿಕೊಂಡನು.)

ತನಗೆ ವನವಾಸವು ಪ್ರಾಪ್ತವಾದುದಕ್ಕಾಗಿ ಶ್ರೀರಾಮನು ಸ್ವಲ್ಪವಾದರೂ ದುಃಖಗೊಳ್ಳದಿದ್ದರೂ–ತನ್ನ ವನವಾಸದ ವಿಷಯವನ್ನು ಕೇಳಿ ದುಃಖಿತರಾದ ಅಂತಃಪುರದ ಸ್ತ್ರೀಯರು (ರಾಜಮಾತೆಯರು) ಗೋಳಾಡುತ್ತಿದ್ದುದನ್ನು ಕೇಳಿ ಅವನೂ ಅತಿದುಃಖಿತನಾದನು.* ದೀರ್ಘವಾಗಿ ನಿಟ್ಟುಸಿರುಬಿಡುವ ಆನೆ ಯಂತೆ–ತಾನೂ ನಿಟ್ಟುಸಿರುಬಿಡುತ್ತಾ ಜಿತೇಂದ್ರಿಯನಾದ ಶ್ರೀರಾಮನು ಲಕ್ಷ್ಮಣನೊಡನೆ ತಾಯಿಯ ಅಂತಃಪುರಕ್ಕೆ ಹೋದನು.

ಕೌಸಲ್ಯಾದೇವಿಯ ಅಂತಃಪುರದ ಬಾಗಿಲಿನಲ್ಲಿ ವೃದ್ಧನಾದ ಪರಮ ಪೂಜ್ಯನಾದ ದ್ವಾರಾಧ್ಯಕ್ಷನು ಕುಳಿತಿರುವುದನ್ನೂ, ಅವನ ಪಕ್ಕದಲ್ಲಿ ಅನೇಕ ದ್ವಾರಪಾಲಕರು ನಿಂತಿರುವುದನ್ನೂ ಶ್ರೀರಾಮನು ನೋಡಿದನು. ಅಲ್ಲಿ ನಿಂತಿದ್ದ ದ್ವಾರಪಾಲಕರೆಲ್ಲರೂ ವಿಜಯಿಗಳಲ್ಲಿ ಶ್ರೇಷ್ಠನಾದ ಶ್ರೀರಾಮನನ್ನು ನೋಡಿದೊಡನೆಯೇ ಒಕ್ಕೊರಳಿನಿಂದ–'**ರಾಜಕುಮಾರಃ ಶ್ರೀರಾಮೋ ಜಯತು! ಭೋ ಶ್ರೀರಾಮ! ವಿಜಯೀಭವ**' ಇವೇ ಮುಂತಾದ ಜಯಕಾರಗಳಿಂದ ಅಭಿನಂದಿಸಿದರು. ಶ್ರೀರಾಮನು ದ್ವಾರಪಾಲಕರ ಜಯಘೋಷಗಳೊಡನೆ ಅಂತಃಪುರದ ಮೊದಲನೆಯ ಆವರಣವನ್ನು ಪ್ರವೇಶಿಸಿ ಎರಡನೆಯ ಆವರಣವನ್ನು ಪ್ರವೇಶಿಸಲಿದ್ದಾಗ–ಅಲ್ಲಿ ವೇದಾಧ್ಯ ಯನಸಂಪನ್ನರೂ, ಜ್ಞಾನವೃದ್ಧರೂ, ವಯೋವೃದ್ಧರೂ, ರಾಜನಿಂದ ಅನುದಿನವೂ ಸತ್ಕರಿಸಲ್ಪಡತಕ್ಕವರೂ ಆದ ಬ್ರಾಹ್ಮಣರನ್ನು ಕಂಡನು. ಪೂಜ್ಯರಾದ ಬ್ರಾಹ್ಮಣರಿಗೆ ಶ್ರೀರಾಮನು ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಅವರಿಂದ ಆಶೀರ್ವಾದಗಳನ್ನು ಪಡೆದು ಮೂರನೆಯ ಆವರಣ ವನ್ನು ಪ್ರವೇಶಿಸಲು ಮಹಾದ್ವಾರದ ಸಮೀಪಕ್ಕೆ ಹೋದಾಗ ಅಲ್ಲಿ

---

* ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ : ಇದು ರಾಮನ ಸ್ವಭಾವ.

ಅಂತಃಪುರದ ದ್ವಾರರಕ್ಷಣೆಯಲ್ಲಿ ಜಾಗರೂಕರಾಗಿದ್ದ ಅನೇಕ ಸ್ತ್ರೀಯರನ್ನೂ, ಬಾಲಿಕೆಯರನ್ನೂ, ವೃದ್ಧೆಯರನ್ನೂ ನೋಡಿದನು. ಶ್ರೀರಾಮನನ್ನು ನೋಡಿದೊಡನೆಯೇ ಅವರೆಲ್ಲರೂ–'ಜಯತು ಜಯತು ಶ್ರೀರಾಮಃ'–ಇವೇ ಮುಂತಾಗಿ ಜಯಘೋಷಣೆಗಳನ್ನು ಮಾಡುತ್ತಾ ಶ್ರೀರಾಮನನ್ನು ಅಭಿನಂದಿಸಿ ಕೌಸಲ್ಯೆಯ ಅಂತಃಪುರದೊಳಕ್ಕೆ ಹೋಗಿ ಶ್ರೀರಾಮನು ಬರುತ್ತಿರುವನೆಂಬ ಪ್ರಿಯವಾರ್ತೆಯನ್ನು ರಾಮನ ತಾಯಿಗೆ ಹೇಳಿದರು.

ಮರುದಿನ ತನಗೆ ಯೌವರಾಜ್ಯಪಟ್ಟಾಭಿಷೇಕವಾಗುವುದೆಂಬ ಶುಭ ವಾರ್ತೆಯನ್ನು ಶ್ರೀರಾಮನಿಂದಲೇ ಕೇಳಿದ್ದ ಪುತ್ರಹಿತೈಷಿಯಣಿಯಾದ ಕೌಲಸಲ್ಯಾದೇವಿಯೂ, ಶ್ರೀರಾಮನ ಪಟ್ಟಾಭಿಷೇಕಕಾಲದಲ್ಲಿ ಸಕಲದೇವತೆಗಳೂ ಪ್ರಸನ್ನರಾಗಬೇಕೆಂಬ ಆಶಯದಿಂದ ಇಡೀರಾತ್ರಿ ಧ್ಯಾನಾಸಕ್ತಳಾಗಿ ಜಾಗರಣೆಯಿಂದ ಕಳೆದು, ಬೆಳಗಾಗುತ್ತಲೇ ಮಂಗಳಸ್ನಾನಮಾಡಿ ಶುಚಿಯಾಗಿ ಪಟ್ಟೆವಸ್ತ್ರವನ್ನುಟ್ಟು, ಶ್ರೀರಾಮನು ಬರುವ ವೇಳೆಗೆ ಪರಾತ್ಪರನಾದ ಮಹಾವಿಷ್ಣುವಿನ ಪೂಜೆಯನ್ನು ಮಾಡಿ ಮುಗಿಸಿದ್ದಳು. ಸಂತುಷ್ಟಳಾಗಿದ್ದ, ವ್ರತನಿಷ್ಠಳಾಗಿದ್ದ ಕೌಸಲ್ಯಾದೇವಿಯು ರೇಷ್ಮೆಯ ಸೀರೆಯನ್ನುಟ್ಟು, ಮಂತ್ರಪೂರ್ವಕವಾಗಿ ಮಂಗಳಸ್ನಾನಮಾಡಿ, ಬ್ರಾಹ್ಮಣರ ಮೂಲಕ ಯಥಾವಿಧಿಯಾಗಿ ಅಗ್ನಿಯಲ್ಲಿ ಹೋಮಕರ್ಮವನ್ನು ಮಾಡಿಸುತ್ತಿದ್ದಳು.

ಆ ಸಮಯಕ್ಕೆ ಸರಿಯಾಗಿ ಶ್ರೀರಾಮನು ಶುಭಪ್ರದವಾದ ತಾಯಿಯ ಅಂತಃಪುರವನ್ನು ಪ್ರವೇಶಿಸಿ, ತನ್ನ ತಾಯಿಯು ಬ್ರಾಹ್ಮಣರ ಮೂಲಕ ಅಗ್ನಿಯಲ್ಲಿ ಶ್ರೇಯಃಪ್ರದವಾದ ಹೋಮಮಾಡಿಸುತ್ತಿರುವುದನ್ನು ನೋಡಿ ದನು. ದೇವಕಾರ್ಯದ ನಿಮಿತ್ತವಾಗಿ ಸಿದ್ಧಪಡಿಸಿದ್ದ ಮೊಸರು-ಅಕ್ಷತೆ-ತುಪ್ಪ-ಮೋದಕಗಳನ್ನೂ, ನಾನಾವಿಧವಾದ ಹವಿಸ್ಸುಗಳನ್ನೂ, ತೊಳೆದ ಅಕ್ಕಿಯನ್ನೂ, ಅರಳನ್ನೂ, ಬಿಳಿಯ ಪುಷ್ಪಮಾಲಿಕೆಗಳನ್ನೂ, ಪಾಯಸವನ್ನೂ, ಎಳ್ಳನ್ನವನ್ನೂ, ಅನೇಕವಿಧವಾದ ಸಮಿತ್ತುಗಳನ್ನೂ, ಪೂರ್ಣಕುಂಭಗಳನ್ನೂ ಶ್ರೀರಾಮನು ನೋಡಿದನು. ಬಿಳುಪಾದ ರೇಷ್ಮೆಯ ಸೀರೆಯನ್ನುಟ್ಟಿದ್ದ, ಮಗನ ಅಭ್ಯುದಯಕ್ಕಾಗಿ ವ್ರತೋಪವಾಸಾದಿಗಳನ್ನು ಮಾಡಿ ಕೃಶಳಾಗಿದ್ದ, ದೇವತೆಯೋಪಾದಿಯಲ್ಲಿ ಕಾಣುತ್ತಿದ್ದ, ಇಷ್ಟದೇವತೆಯನ್ನು ಮಂತ್ರಪೂತ

ವಾದ ಉದಕಗಳಿಂದ ತೃಪ್ತಿಗೊಳಿಸುತ್ತಿದ್ದ ತಾಯಿಯಾದ ಕೌಸಲ್ಯಾದೇವಿ ಯನ್ನು ಶ್ರೀರಾಮನು ನೋಡಿದನು.

ಬೆಳಗಾದ ಬಹಳ ಹೊತ್ತಿನ ಮೇಲೆ ಮಾತೃನಂದನನಾದ ಪ್ರಿಯಪುತ್ರ ನಾದ ಶ್ರೀರಾಮನು ತನ್ನ ಅಂತಃಪುರಕ್ಕೆ ಬಂದುದನ್ನು ಕಂಡು ಸಂತಸಗೊಂಡ ಕೌಸಲ್ಯೆಯು–ಮರಿಯನ್ನು ಕಂಡೊಡನೆಯೇ ತಾಯಿ ಕುದುರೆಯು ಓಡಿಬರುವ ರೀತಿಯಲ್ಲಿ–ರಾಮನ ಬಳಿಗೆ ಧಾವಿಸಿದಳು. ತನ್ನ ಬಳಿಗೆ ಧಾವಿಸಿ ಬಂದ ತಾಯಿಗೆ ರಾಘವನು ಅಭಿವಾದನಪೂರ್ವಕವಾಗಿ ನಮಸ್ಕರಿಸಿದನು.* ಒಡನೆಯೇ ಕೌಸಲ್ಯೆಯು ತನ್ನ ಪ್ರಿಯಸುತನನ್ನು ಎರಡು ಕೈಗಳಿಂದಲೂ ಹಿಡಿದೆತ್ತಿ, ಎರಡು ತೋಳುಗಳಿಂದಲೂ ಬಿಗಿದಪ್ಪಿ ನೆತ್ತಿಯನ್ನು ಆಘ್ರಾಣಿಸಿದಳು. ಯಾರ ಬೆದರಿಕೆಗೂ ಜಗ್ಗದ, ವೀರಪುತ್ರನಾದ ರಾಘವನಿಗೆ ಕೌಸಲ್ಯೆಯು ಪುತ್ರವಾತ್ಸಲ್ಯದಿಂದ ಚೋದಿತಳಾಗಿ ಪ್ರಿಯವೂ ಹಿತವೂ ಆದ ಈ ಮಾತನ್ನು ಹೇಳಿದಳು :

ವೃದ್ಧಾನಾಂ ಧರ್ಮಶೀಲಾನಾಂ ರಾಜರ್ಷೀಣಾಂ ಮಹಾತ್ಮನಾಮ್ ।
ಪ್ರಾಪ್ನುಹ್ಯಾಯುಶ್ಚ ಕೀರ್ತಿಂ ಚ ಧರ್ಮಂ ಚಾಪ್ಯುಚಿತಂ ಕುಲೇ ॥

"ನಿನ್ನ ಕುಲದಲ್ಲಿ ಹುಟ್ಟಿದ ಜ್ಞಾನವೃದ್ಧ-ವಯೋವೃದ್ಧರಾದ, ಧರ್ಮಶೀಲರಾದ, ಮಹಾತ್ಮರಾದ ನಿನ್ನ ಹಿಂದಿನ ರಾಜರ್ಷಿಗಳಂತೆ ಆಯುಷ್ಯವನ್ನೂ, ಕೀರ್ತಿಯನ್ನೂ, ಉಚಿತವಾದ ಧರ್ಮವನ್ನೂ ನೀನು ಪಡೆಯುವವನಾಗು.

ಮಗು! ಈಗಲೇ ನೀನು ಸತ್ಯಪ್ರತಿಜ್ಞನಾದ, ರಾಜನಾದ, ನಿನ್ನ ತಂದೆಯನ್ನು ಕಾಣು. ಧರ್ಮಾತ್ಮನಾದ ನಿನ್ನ ತಂದೆಯು ನಿನಗೆ ಇಂದೇ ಯುವರಾಜಪದವಿಯಲ್ಲಿ ಪಟ್ಟಾಭಿಷೇಕವನ್ನು ಮಾಡುವನು. ಭೋಜನ ಮಾಡಿಕೊಂಡು ತಂದೆಯ ಬಳಿಗೆ ಹೋಗು"–ಎಂದು ಹೇಳಿ ಕೌಸಲ್ಯೆಯು

---

* ಉಪಸಂಗೃಹ್ಯ ರಾಘವಃ = ಎಂದು ಶ್ಲೋಕದ ಪಾದವಿದೆ. ರಾಘವನು ಅಭಿ ವಾದನಪೂರ್ವಕವಾಗಿ ನಮಸ್ಕರಿಸಿ–ಎಂದರ್ಥ. 'ಉಪಸಂಗ್ರಹಃ'ಎಂಬುದರ ವಿವರಣೆಯನ್ನು ಮನುಸ್ಮೃತಿಯಲ್ಲಿ ಹೀಗೆ ಹೇಳಿದ್ದಾರೆ : ವ್ಯತ್ಯಸ್ತಪಾಣಿನಾ ಕಾರ್ಯಮುಪಸಂಗ್ರಹಣಂ ಗುರೋಃ । ಸವ್ಯೇನ ಸವ್ಯಃ ಸ್ಪ್ರಷ್ಟವ್ಯೋ ದಕ್ಷಿಣೇನ ಚ ದಕ್ಷಿಣಃ ॥ ವ್ಯತ್ಯಸ್ತವಾದ ಕೈಗಳಿಂದ ಗುರುವಿನ ಕಾಲುಗಳನ್ನು ಮುಟ್ಟಿ ನಮಸ್ಕರಿಸಬೇಕು.

ಭೋಜನಕ್ಕೆಂದು ಸಿದ್ಧಪಡಿಸಿದ ಪೀಠವನ್ನು ತಾಯಿಯ ಮಾತಿಗೆ ಗೌರವ ಕೊಡಬೇಕೆಂಬ ಆಶಯದಿಂದ ಸ್ಪರ್ಶಮಾಡಿ, ಸ್ವಭಾವತಃ ವಿನಯಶೀಲನಾದ ಶ್ರೀರಾಮನು ಕೈಮುಗಿದುಕೊಂಡು ವಿನಮ್ರನಾಗಿ, ಸ್ವಲ್ಪ ನಾಚಿಕೆಯಿಂದಲೇ ತಾನು ದಂಡಕಾರಣ್ಯಕ್ಕೆ ಹೊರಟಿರುವ ವಾರ್ತೆಯನ್ನು ತಾಯಿಗೆ ತಿಳಿಸಲು ಮತ್ತು ಅನುಜ್ಞೆಯನ್ನು ಕೋರಲು ಹೇಳತೊಡಗಿದನು :

ದೇವಿ ನೂನಂ ನ ಜಾನೀಷೇ ಮಹದ್ಭಯಮುಪಸ್ಥಿತಮ್ ।
ಇದಂ ತವ ಚ ದುಃಖಾಯ ವೈದೇಹ್ಯಾ ಲಕ್ಷ್ಮಣಸ್ಯ ಚ ॥೨೭॥

ಗಮಿಷ್ಯೇ ದಣ್ಡಕಾರಣ್ಯಂ ಕಿಮನೇನಾಸನೇನ ಮೇ ।
ವಿಷ್ಟರಾಸನಯೋಗ್ಯೋ ಹಿ ಕಾಲೋಽಯಂ ಮಾಮುಪಸ್ಥಿತಃ ॥೨೮॥

"ತಾಯೇ! ಮಹಾಭಯವು ಸನ್ನಿಹಿತವಾಗಿರುವುದೆಂಬುದನ್ನು ನೀನರಿಯೆ. ಇಂದಿನ ಸನ್ನಿವೇಶವು ನಿನಗೂ, ಸೀತೆಗೂ ಮತ್ತು ಲಕ್ಷ್ಮಣನಿಗೂ ಅತ್ಯಂತದುಃಖವನ್ನು ಉಂಟುಮಾಡುವುದಾಗಿದೆ. ನಾನೀಗಲೇ ದಂಡಕಾರಣ್ಯಕ್ಕೆ ಹೋಗುವೆನಮ್ಮಾ! ಈ ಸುವರ್ಣಮಯವಾದ ಆಸನವಾದರೂ ನನಗೇಕೆ? ದರ್ಭಾಸನದಲ್ಲಿ ಕುಳಿತುಕೊಳ್ಳಲು ಯೋಗ್ಯವಾದ ಕಾಲವು ನನಗೆ ಸನ್ನಿಹಿತವಾಗಿದೆ.

ಚತುರ್ದಶ ಹಿ ವರ್ಷಾಣಿ ವತ್ಸ್ಯಾಮಿ ವಿಜನೇ ವನೇ ।
ಕನ್ದಮೂಲಫಲೈರ್ಜೀವನ್ಹಿತ್ವಾ ಮುನಿವದಾಮಿಷಮ್ ॥೨೯॥

ಹದಿನಾಲ್ಕು ವರ್ಷಗಳ ಕಾಲ ಜನರಹಿತವಾದ ದಂಡಕಾರಣ್ಯದಲ್ಲಿ

ಅರ್ಥಾತ್ ಬಲಗೈಯ್ಯಿನಿಂದ ಬಲದ ಕಾಲನ್ನು ಮುಟ್ಟಬೇಕು ; ಎಡದ ಕೈಯ್ಯಿನಿಂದ ಎಡಗಾಲನ್ನು ಮುಟ್ಟಿ ನಮಸ್ಕರಿಸಬೇಕು. ಆದುದರಿಂದಲೇ ಪ್ರವರವನ್ನು ಹೇಳಿ, ಕಿವಿಯನ್ನು ಎರಡು ಕೈಗಳಿಂದಲೂ ಮುಟ್ಟಿ ಅನಂತರದಲ್ಲಿ ಬಲಗೈಯನ್ನು ಎಡದ ಕಡೆಗೂ–ಎಡಗೈಯನ್ನು ಬಲದ ಕಡೆಗೂ ಮಾಡಿಕೊಂಡು, ಹಿರಿಯರ ಪಾದಗಳನ್ನು ಮುಟ್ಟಿ ನಮಸ್ಕರಿಸುವ ಸಂಪ್ರದಾಯವು ಬೆಳೆದುಬಂದಿರುವುದು.

ಮುನಿಗಳಂತೆ ಭೋಗ್ಯವಸ್ತುಗಳನ್ನು ತೊರೆದು ಕಂದ-ಮೂಲ-ಫಲಗಳನ್ನು ಸೇವಿಸುತ್ತಾ ಜೀವಿಸುತ್ತೇನೆ.*

ಅಮ್ಮ! ಭರತನಿಗೆ ಮಹಾರಾಜನು ಯೌವರಾಜ್ಯಪದವಿಯನ್ನು ವಹಿಸಿಕೊಡುತ್ತಾನೆ. ನನ್ನನ್ನು ತಾಪಸನನ್ನಾಗಿ ಮಾಡಿ ದಂಡಕಾರಣ್ಯಕ್ಕೆ ಕಳುಹಿಸುತ್ತಾನೆ. ನಾನು ಹದಿನಾಲ್ಕು ವರ್ಷಗಳ ಕಾಲ ನಿರ್ಜನವಾದ ಅರಣ್ಯದಲ್ಲಿ ವಾನಪ್ರಸ್ಥಾಶ್ರಮೋಕ್ತವಾದ ಕರ್ಮಗಳನ್ನು ಆಚರಿಸುತ್ತಾ ಫಲ-ಮೂಲಾದಿಗಳಿಂದ ಜೀವಿಸುವೆನು."

ಸಾ ನಿಕೃತ್ತೇವ ಸಾಲಸ್ಯ ಯಷ್ಟಿಃ ಪರಶುನಾ ವನೇ ।
ಪಪಾತ ಸಹಸಾ ದೇವೀ ದೇವತೇವ ದಿವಶ್ಚ್ಯುತಾ ॥೩೨॥

ಶ್ರೀರಾಮನ ಮಾತುಗಳನ್ನು ಕೇಳಿದೊಡನೆಯೇ ಕೌಸಲ್ಯಾದೇವಿಯು ಕಾಡಿನಲ್ಲಿ ಕೊಡಲಿಯಿಂದ ಕತ್ತರಿಸಿದ ಸಾಲವೃಕ್ಷದ ರೆಂಬೆಯಂತೆ–ಅಂತರಿಕ್ಷ ದಿಂದ ಕೆಳಗೆ ಬಿದ್ದ ದೇವತೆಯಂತೆ–ದೊಪ್ಪನೆ ನೆಲದ ಮೇಲೆ ಬಿದ್ದುಬಿಟ್ಟಳು. ದುಃಖಕ್ಕೀಡಾಗಲು ಅನರ್ಹಳಾದ–ಬುಡವನ್ನು ಕಡಿದ ಬಾಳೆಯ ಕಂದಿ ನಂತೆ–ಕೆಳಕ್ಕೆ ಬಿದ್ದು ಮೂರ್ಛಿತಳಾದ ತಾಯಿಯನ್ನು ಶ್ರೀರಾಮನು ಒಡನೆಯೇ ಹಿಡಿದೆತ್ತಿ ಕುಳ್ಳಿರಿಸಿದನು. ಭಾರವನ್ನು ಹೊತ್ತು ಶ್ರಮವನ್ನು ಪರಿಹರಿಸಿಕೊಳ್ಳಲು ನೆಲದ ಮೇಲೆ ಬಿದ್ದು ಹೊರಳಾಡುವ ಹೆಣ್ಣುಕುದುರೆ ಯಂತೆ–ಅತಿದೀನಳಾಗಿದ್ದ, ನೆಲದ ಧೂಳಿಯಿಂದ ಆವೃತಳಾಗಿದ್ದ ಕೌಸಲ್ಯಾ ದೇವಿಯನ್ನು ಶ್ರೀರಾಮನು ಮೈದಡವಿ ಸಂತೈಸಿದನು. ಶ್ರೀರಾಮನ ಪಟ್ಟಾಭಿಷೇಕವನ್ನು ನೋಡಿ ಆನಂದಿಸಲು ಅರ್ಹಳಾಗಿದ್ದ, ಅದಕ್ಕೆ ವಿರುದ್ಧ ವಾದ ವಾರ್ತೆಯನ್ನು ಕೇಳಿ ದುಃಖಪೀಡಿತಳಾದ ಕೌಸಲ್ಯಾದೇವಿಯು ಹತ್ತಿರ ದಲ್ಲಿ ಕುಳಿತಿದ್ದ ಪುರುಷವ್ಯಾಘ್ರನಾದ ಶ್ರೀರಾಮನಿಗೆ–ಪಕ್ಕದಲ್ಲಿಯೇ ಇದ್ದ ಲಕ್ಷ್ಮಣನಿಗೂ ಕೇಳಿಸುವಂತೆ ಹೇಳಿದಳು :

---

* ಮುನಿವತ್ ಆಮಿಷಂ ಹಿತ್ವಾ = ಆಮಿಷಶಬ್ದಕ್ಕೆ ಮಾಂಸವೆಂದೂ, ಭೋಗ್ಯ ವಸ್ತುವೆಂದೂ, ದುರಾಸೆಯೆಂದೂ ಅರ್ಥವಾಗುತ್ತದೆ. ಪ್ರಕೃತಸಂದರ್ಭದಲ್ಲಿ ಈ ಶಬ್ದಕ್ಕೆ ಭೋಗ್ಯವಸ್ತುವೆಂದೇ ಅರ್ಥಮಾಡಲಾಗಿದೆ. ಮಾಂಸವೆಂದು ಅರ್ಥಮಾಡಿದರೆ ಮುಂದೆ ಬರುವ–ನಿಷಣ್ಣಾಂ ತಾಂ ಗಿರಿಪ್ರಸ್ಥೇ ಸೀತಾ ಮಾಂಸೇನ ಛಂದಯನ್ । ಇದಂ ಮೇಧ್ಯಮಿದಂ ಸ್ವಾದು ನಿಷ್ಟಪ್ತಮಿದಮಗ್ನಿನಾ ॥ ಮುಂತಾದ ಪ್ರಕರಣಗಳಿಗೆ ವಿರೋಧವುಂಟಾಗುತ್ತದೆ. ಅಯೋಧ್ಯಾ–ಸರ್ಗ-೯೬-೨.

ಯದಿ ಪುತ್ರ ನ ಜಾಯೇಥಾ ಮಮ ಶೋಕಾಯ ರಾಘವ ।
ನ ಸ್ಮ ದುಃಖಮತೋ ಭೂಯಃ ಪಶ್ಯೇಯಮಹಮಪ್ರಜಾಃ ॥೩೬॥

"ಮಗು! ನನಗೆ ಈ ವಿಧವಾದ ಪರಮದಾರುಣವಾದ ಪುತ್ರ ವಿಯೋಗದುಃಖವನ್ನುಂಟುಮಾಡಲು ನೀನು ಹುಟ್ಟದಿದ್ದರೇ ಚೆನ್ನಾಗಿತ್ತು. ಆಗ ಬಂಜೆಯೆಂಬ ಮಾನಸಿಕವಾದ ದುಃಖವೊಂದರ ಹೊರತಾಗಿ ಅದಕ್ಕಿಂತಲೂ ಮಿಗಿಲಾದ ಇಂತಹ ದುಃಖವನ್ನು ನಾನು ಅನುಭವಿಸಬೇಕಾಗಿರಲಿಲ್ಲ.

ಏಕ ಏವ ಹಿ ವನ್ಧ್ಯಾಯಾಃ ಶೋಕೋ ಭವತಿ ಮಾನಸಃ ।
ಅಪ್ರಜಾಸ್ಮೀತಿ ಸಂತಾಪೋ ನ ಹ್ಯನ್ಯಂ ಪುತ್ರ ವಿದ್ಯತೇ ॥೩೭॥

ಬಂಜೆಯಾದವಳಿಗೆ ತನಗೆ ಮಕ್ಕಳಾಗಲಿಲ್ಲವೆಂಬ ಮಾನಸಿಕವಾದ ಒಂದು ಚಿಂತೆಯಿರುತ್ತದೆಯೇ ಹೊರತು ಬೇರೆ ಯಾವ ದುಃಖವೂ ಇರುವುದಿಲ್ಲ.

ನ ದೃಷ್ಟಪೂರ್ವಂ ಕಲ್ಯಾಣಂ ಸುಖಂ ವಾ ಪತಿಪೌರುಷೇ ।
ಅಪಿ ಪುತ್ರೇ ತು ಪಶ್ಯೇಯಮಿತಿ ರಾಮಾಸ್ಥಿತಂ ಮಯಾ ॥೩೮॥

ಪೌರುಷವುಳ್ಳ ಪತಿಯಿದ್ದಾಗ್ಯೂ ನಾನು ಪಟ್ಟಮಹಿಷಿಗೆ ಉಚಿತವಾದ ಶುಭವನ್ನಾಗಲೀ–ಸುಖವನ್ನಾಗಲೀ ಎಂದೂ ಕಂಡವಳೇ ಅಲ್ಲ. ಮಗನಿಂದ ಲಾದರೂ ಕಲ್ಯಾಣವನ್ನೂ–ಸುಖವನ್ನೂ ಪಡೆಯಬಹುದೆಂಬ ಆಕಾಂಕ್ಷೆ ಯಿಂದ ನಾನು ಇದುವರೆಗೂ ಜೀವಂತಳಾಗಿರುವೆನು.

ಸಾ ಬಹೂನ್ಯಮನೋಜ್ಞಾನಿ ವಾಕ್ಯಾನಿ ಹೃದಯಚ್ಛಿದಾಮ್ ।
ಅಹಂ ಶ್ರೋಷ್ಯೇ ಸಪತ್ನೀನಾಮವರಾಣಾಂ ವರಾ ಸತಿ ॥೩೯॥

ನಾನು ರಾಜನ ಎಲ್ಲ ಪತ್ನಿಯರಿಗಿಂತಲೂ ಹಿರಿಯಳೆಂಬುದೇನೋ ನಿಜ. ಆದರೆ ಮಾತಿನಿಂದಲೇ ನನ್ನ ಹೃದಯವನ್ನು ಸೀಳಿಬಿಡುವ ನನಗಿಂತಲೂ ಚಿಕ್ಕವರಾದ ಸವತಿಯರ ಕೇಳಬಾರದ ಮಾತುಗಳೆಲ್ಲವನ್ನೂ ನಾನು ಅನುದಿನವೂ ಕೇಳುತ್ತಲೇ ಇದ್ದೇನೆ.

ಅತೋ ದುಃಖತರಂ ಕಿಂ ನು ಪ್ರಮದಾನಾಂ ಭವಿಷ್ಯತಿ ।
ಮಮ ಶೋಕೋ ವಿಲಾಪಶ್ಚ ಯಾದೃಶೋಽಯಮನನ್ತಕಃ ॥೪೦॥

ಸವತಿಯರಿಂದ ಕೆಟ್ಟಮಾತುಗಳನ್ನು ಕೇಳುವುದಕ್ಕಿಂತಲೂ ದುಃಖ ಕರವಾದುದು ಹೆಂಗಸರಿಗೆ ಬೇರೆ ಯಾವುದಿದೆ? ನಿಶ್ಚಯವಾಗಿ ಹೇಳುವು ದಾದರೆ ಮಗು! ನನ್ನ ದುಃಖ-ಶೋಕಗಳ ಪಾರವೆಷ್ಟೆಂಬುದನ್ನು ಹೇಳ ತೀರದಾಗಿದೆ. ಅದು ಅನಂತವಾದುದು. ನೀನು ನನ್ನ ಬಳಿಯಲ್ಲಿರುವಾಗಲೇ ನನ್ನನ್ನು ಸವತಿಯರು ತಿರಸ್ಕಾರಭಾವದಿಂದ ಕಾಣುತ್ತಿದ್ದಾರೆ. ನೀನೂ ಇಲ್ಲಿಂದ ಹೊರಟುಹೋದೆಯಾದರೆ–ನನ್ನ ಪಾಡೇನಾಗುವುದೆಂಬುದನ್ನು ಹೇಳಬೇಕಾ ಗಿಯೇ ಇಲ್ಲ. **'ಧ್ರುವಂ ಮರಣಮೇವ ಮೇ'**–'ನನಗೆ ಮರಣವೇ ನಿಶ್ಚಯ'–ಬದುಕಿರಲು ನನ್ನ ಸವತಿಯರು ನನ್ನನ್ನು ಬಿಡಲಾರರು. ಪ್ರಧಾನಮಹಿಷಿಯಾದರೂ ನನ್ನ ಪತಿಯು ನನ್ನನ್ನು ಅಪ್ರಧಾನಳಂತೆ ಬಹಳ ತಿರಸ್ಕಾರಭಾವದಿಂದ ಕಾಣುತ್ತಿದ್ದಾನೆ. ಅವನು ನನ್ನನ್ನು ಕೈಕೇಯಿಯ ಪರಿವಾರದವರಿಗೆ ಸಮಾನಳೆಂದೋ ಅಥವಾ ಅವಳ ಊಳಿಗದವರಿಗಿಂತಲೂ ಕೀಳೆಂದೋ ಭಾವಿಸಿದ್ದಾನೆ. ಇಲ್ಲಿರುವ ಅನೇಕ ದಾಸ-ದಾಸಿಯರಲ್ಲಿ ಒಬ್ಬಿಬ್ಬ ರಾದರೂ ನನ್ನ ಸೇವೆಮಾಡಲು ನನ್ನನ್ನು ಅನುಸರಿಸಿಕೊಂಡಿರಲು ಮುಂದೆ ಬರಬಹುದು. ಆದರೆ ಅವರೂ ಕೈಕೇಯಿಯ ಮಗನಾದ ಭರತನನ್ನು ನೋಡಿದೊಡನೆಯೇ ನನ್ನೊಡನೆ ಮಾತನಾಡುವುದನ್ನೂ ನಿಲ್ಲಿಸಿಬಿಡುತ್ತಾರೆ. ಭರತನು ರಾಜನಾದನಂತರ ಸೇವಕರು ನನ್ನ ಹತ್ತಿರಕ್ಕೂ ಸುಳಿಯುವುದಿಲ್ಲ. ನೀನು ಹೊರಟುಹೋದನಂತರ ಅತ್ಯಂತದುಃಸ್ಥಿತಿಯನ್ನು ಹೊಂದುವ ನಾನು–ಸರ್ವದಾ ನನ್ನ ವಿಷಯದಲ್ಲಿ ಕೋಪಗೊಂಡೇ ಇರುವ ಕೈಕೇಯಿಯು ಆಡುವ ಕೆಟ್ಟಮಾತುಗಳನ್ನು ಹೇಗೆ ಕೇಳಿಕೊಂಡಿರಲಿ? ಗಂಟಿಕ್ಕಿದ ಅವಳ ಮುಖವನ್ನಾದರೂ ನೋಡಲು ಹೇಗೆ ಸಮರ್ಥಳಾಗುವೆನು?

ದಶ ಸಪ್ತ ಚ ವರ್ಷಾಣಿ ಜಾತಸ್ಯ ತವ ರಾಘವ ।
ಅತೀತಾನಿ ಪ್ರಕಾಂಕ್ಷನ್ತ್ಯಾ ಮಯಾ ದುಃಖಪರಿಕ್ಷಯಮ್ ॥೪೫॥

ತದಕ್ಷಯಂ ಮಹದ್ದುಃಖಂ ನೋತ್ಸಹೇ ಸಹಿತುಂ ಚಿರಮ್ ।
ವಿಪ್ರಕಾರಂ ಸಪತ್ನೀನಾಮೇವಂ ಜೀರ್ಣಾಪಿ ರಾಘವ ॥೪೬॥

ರಾಮ! ನೀನು ಹುಟ್ಟಿ ಹದಿನೇಳು ವರ್ಷಗಳು ಕಳೆದುಹೋದುವು. ಇನ್ನು ಮೇಲಾದರೂ ನನ್ನ ದುಃಖವು ಕಡಿಮೆಯಾಗುವುದೆಂದು ಆಶಿಸಿದ್ದೆನು.

ಆದರೆ ನನ್ನ ದುಃಖವು ಅಕ್ಷಯವಾಗಿದೆ. ಈ ದುಃಖವನ್ನು ಬಹಳ ಕಾಲದವರೆಗೆ ಸಹಿಸಿಕೊಂಡಿರಲು ನನಗೆ ಸಾಧ್ಯವಿಲ್ಲ. ನಾನು–ವೃದ್ಧೆಯಾಗಿರುವ ಈ ಸಮಯದಲ್ಲಿಯೂ ಸವತಿಯರ ಈ ವಿಧವಾದ ಸೇಡನ್ನು ಹೇಗೆ ಸಹಿಸಿ ಕೊಳ್ಳಲಿ?*

ಹುಣ್ಣಿಮೆಯ ಚಂದ್ರನ ಕಾಂತಿಯಿಂದ ಕೂಡಿರುವ ನಿನ್ನ ಮುಖ ಚಂದ್ರನನ್ನು ಸ್ವಲ್ಪಹೊತ್ತು ಕಾಣದಿದ್ದರೂ ದೀನಳಂತೆ ಕಾತರಳಾಗುತ್ತೇನೆ. ಹೀಗಿರುವಾಗ ಬಹಳ ಕಾಲದವರೆಗೆ ನಿನ್ನನ್ನಗಲುವ ನಾನು ದುಸ್ತರವಾದ ದೈನ್ಯಜೀವನವನ್ನು ಹೇಗೆ ನಡೆಸಲಿ? ಉಪವಾಸ, ದೇವತಾಧ್ಯಾನ, ನಾನಾ ವಿಧವಾದ ಪರಿಶ್ರಮಪೂರ್ಣವಾದ ವ್ರತ-ನಿಯಮಾದಿಗಳು–ಇವೆಲ್ಲವನ್ನೂ ಮಾಡಿ ಬಹಳ ಕಷ್ಟದಿಂದ ನಿರ್ಭಾಗ್ಯಳಾದ ನಾನು ನಿನ್ನನ್ನು ಬೆಳೆಸಿದೆನು. ಆದರೆ ಇಂದು ನಾನು ಮಾಡಿದ ವ್ರತಾದಿಗಳೆಲ್ಲವೂ ನಿರರ್ಥಕವಾದುವು. ನಿನಗೆ ಶ್ರೇಯಸ್ಸಾಗುವುದಕ್ಕೆ ಬದಲಾಗಿ ಅರಣ್ಯವಾಸವು ಪ್ರಾಪ್ತವಾಯಿತು.

ಸ್ಥಿರಂ ನು ಹೃದಯಂ ಮನ್ಯೇ ಮಮೇದಂ ಯನ್ನ ದೀರ್ಯತೇ ।
ಪ್ರಾವೃಷೀವ ಮಹಾನದ್ಯಾಃ ಸ್ಪೃಷ್ಟಂ ಕೂಲಂ ನವಾಮ್ಭಸಾ ॥೪೯॥

ರಾಮ! ಆದರೆ ನನ್ನ ಹೃದಯವು ಬಹಳ ಗಟ್ಟಿಯಾದುದು. ಏಕೆಂದರೆ : ನಿನ್ನ ವಿಯೋಗವಾರ್ತೆಯನ್ನು ಕೇಳಿಯೂ ನನ್ನ ಹೃದಯವು ದುಃಖದ ಆವೇಗದಿಂದ ಬಿರಿದುಹೋಗಲಿಲ್ಲ. ವರ್ಷರ್ತುವಿನಲ್ಲಿ ಮಹಾ

---

* ದಶ ಸಪ್ತ ಚ ವರ್ಷಾಣಿ–ನೀನು ಹುಟ್ಟಿ ಹದಿನೇಳು ವರ್ಷಗಳು ಕಳೆಯಿತೆಂದು ಕೌಸಲ್ಯೆಯು ಇಲ್ಲಿ ಹೇಳಿದ್ದಾಳೆ. ಆದರೆ ಬಾಲಕಾಂಡದ ೨೦ನೆಯ ಸರ್ಗದ ೨ಯ ಶ್ಲೋಕದಲ್ಲಿ ದಶರಥನು ವಿಶ್ವಾಮಿತ್ರರಿಗೆ ರಾಮನ ವಯಸ್ಸನ್ನು ಹೇಳುವಾಗ **ಊನಷೋಡಶವರ್ಷೋಽಯಂ** –ಹದಿನಾರಕ್ಕಿಂತಲೂ ಕಡಿಮೆ ವಯಸ್ಸಿನವನು ಎನ್ನು ತ್ತಾನೆ. ಶ್ರೀರಾಮನು ವನವಾಸಕ್ಕೆ ಹೋಗುವ ವೇಳೆಗೆ ವಿವಾಹವಾಗಿ ಹನ್ನೆರಡು ವರ್ಷಗಳು ಕಳೆದಿರುತ್ತವೆ. ಆದುದರಿಂದ ಶ್ರೀರಾಮನು ಅರಣ್ಯಕ್ಕೆ ಹೊರಡುವ ವೇಳೆಗೆ ೨೭ ವರ್ಷಗಳಾದರೂ ಆಗಿರಬೇಕು. ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ.

ದಶ ಸಪ್ತ ಚ ವರ್ಷಾಣಿ –ಎಂಬುದಕ್ಕೆ **ಸಪ್ತವಿಂಶತಿರದ್ಯೇಹ** ಮತ್ತು **ದಶಾಷ್ಟಾದಶ ಚೈವ ತೇ ।** ಎಂಬ ಪಾಠಾಂತರಗಳೂ ಇವೆ. ಆದರೆ ಈ ಪಾಠಾಂತರಗಳನ್ನು ವಿದ್ವಾಂಸರು ಪುರಸ್ಕರಿಸಿರುವುದಿಲ್ಲ.

ನದಿಯ ವೇಗವಾದ ಪ್ರವಾಹವು ತೀರಗಳನ್ನು ಕೊರೆದುಹಾಕುವಂತೆ–ನಿನ್ನ ವಿಯೋಗವೆಂಬ ದುಃಖದ ಮಹಾಪ್ರವಾಹವು ನನ್ನ ಹೃದಯವನ್ನು ಕೊರೆದು ವಿನಾಶಗೊಳಿಸಲು ಸಮರ್ಥವಾಗಲಿಲ್ಲ.

ಮಮೈವ ನೂನಂ ಮರಣಂ ನ ವಿದ್ಯತೇ
ನ ಚಾವಕಾಶೋಽಸ್ತಿ ಯಮಕ್ಷಯೇ ಮಮ ।
ಯದನ್ತಕೋಽದ್ಯೈವ ನ ಮಾಂ ಜಿಹೀರ್ಷತಿ
ಪ್ರಸಹ್ಯ ಸಿಂಹೋ ರುದತೀಂ ಮೃಗೀಮಿವ ॥೫೦॥

ಚೀತ್ಕಾರಮಾಡುತ್ತಿರುವ ಹೆಣ್ಣುಜಿಂಕೆಯನ್ನು ಸಿಂಹವು ಬಲಾತ್ಕಾರದಿಂದ ಸೆಳೆದುಕೊಂಡು ಹೋಗುವಂತೆ–ಬಹಳ ದುಃಖಿತೆಯಾಗಿರುವ ನನ್ನನ್ನು ಮೃತ್ಯುವು ಈಗಲೇ ಸೆಳೆದುಕೊಂಡು ಹೋಗದಿರುವುದನ್ನು ನೋಡಿದರೆ ನನಗೆ ನಿಶ್ಚಯವಾಗಿಯೂ ಮರಣವೇ ಇಲ್ಲ. ಯಮನ ಮನೆ ಯಲ್ಲಿ ನನಗೆ ಸ್ಥಳವೂ ಇಲ್ಲ.

ನನ್ನ ಹೃದಯವು ನಿಶ್ಚಯವಾಗಿಯೂ ಕಬ್ಬಿಣದಂತೆ ಕಠಿಣವಾದುದು. ಇಂತಹ ಪರಮದುಃಖದಿಂದ ದೇಹವು ಆಹತವಾಗಿದ್ದರೂ ದೇಹದಲ್ಲಿರುವ ನನ್ನ ಹೃದಯವು ಒಡೆದುಹೋಗಲೂ ಇಲ್ಲ ; ಸೀಳಿಹೋಗಲೂ ಇಲ್ಲ. 'ಧ್ರುವಂ **ಹ್ಯಕಾಲೇ ಮರಣಂ ನ ವಿದ್ಯತೇ**'–'ಅಕಾಲದಲ್ಲಿ ಮರಣವು ಸಂಭವಿಸುವುದಿಲ್ಲವೆಂಬುದು ನಿಜ.' ಒಳ್ಳೆಯ ಮಗನು ಹುಟ್ಟಬೇಕು. ಅವನಿಂದ ನನಗೆ ಸುಖ-ಸಂತೋಷಗಳೂ ಲಭಿಸಬೇಕು–ಎಂಬ ಕಾಮನೆಯಿಂದ ನಾನು ಮಾಡಿದ ವ್ರತ-ದಾನ-ಜಿತೇಂದ್ರಿಯತೆ-ತಪಸ್ಸು–ಇವೆಲ್ಲವೂ ಬಂಜರು ಭೂಮಿಯಲ್ಲಿ ಬಿತ್ತಿದ ಬೀಜದಂತೆ ನಿರರ್ಥಕವಾದುವು. ಇಷ್ಟು ಮಾತ್ರವಲ್ಲ ; ಇವು ನನ್ನ ವಿಷಯದಲ್ಲಿ ಅನರ್ಥಕ್ಕೇ ಕಾರಣಗಳಾದುವೆಂಬುದೇ ನನ್ನ ದುಃಖವಾಗಿದೆ. ಮಹಾದುಃಖಕ್ಕೀಡಾದವನಿಗೆ ಅಕಾಲದಲ್ಲಿಯೂ ಸ್ವೇಚ್ಛಾ ಮರಣವು ಪ್ರಾಪ್ತವಾಗುವುದಾಗಿದ್ದರೆ–ನಾನೀಗಲೇ ಯಮಾಲಯಕ್ಕೆ ಹೋಗಿಬಿಡುತ್ತಿದ್ದೆನು. ಕರುವನ್ನಗಲಿದ ಹಸುವಿನಂತೆ–ನಾನು ನಿನ್ನನ್ನಗಲಿ ಕ್ಷಣಮಾತ್ರವೂ ಜೀವಿಸುತ್ತಿರಲಿಲ್ಲ. ಚಂದ್ರನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿರುವವನೇ! ರಾಮ! ನನಗೆ ಮರಣವು ಒಡನೆಯೇ ಪ್ರಾಪ್ತವಾಗದಿದ್ದರೂ ನೀನಿಲ್ಲದ ನನ್ನ ಜೀವನವು ವ್ಯರ್ಥವೇ ಸರಿ. ಆದುದ

ರಿಂದ ಕರುವನ್ನರಸಿ ತಾಯಿಯು ವಾತ್ಸಲ್ಯದಿಂದ ಅದರ ಹಿಂದೆಯೇ ಹೋಗುವಂತೆ–ದುಃಖದಿಂದ ಅತಿದುರ್ಬಲಳಾಗಿರುವ ನಾನು ನಿನ್ನ ಮೇಲಿನ ವಾತ್ಸಲ್ಯದಿಂದ ನಿನ್ನ ಜೊತೆಯಲ್ಲಿಯೇ ಅರಣ್ಯಕ್ಕೆ ಬಂದುಬಿಡುತ್ತೇನೆ."

ಕೌಸಲ್ಯಾದೇವಿಯು ಆ ಸಮಯದಲ್ಲಿ ಆಕಸ್ಮಿಕವಾಗಿ ಒದಗಿದ ದುಃಖ ವನ್ನು ಸಹಿಸಿಕೊಳ್ಳಲಾಗದೇ ಹೋದಳು. ದುಃಖದ ವಾರ್ತೆಯನ್ನೂ ಕೇಳಿ, ಮಗನು ತಂದೆಯ ಆಜ್ಞೆಗೆ ಕಟ್ಟುಬಿದ್ದಿರುವುದನ್ನು ಮನಗಂಡು, ಶ್ರೀರಾಮನನ್ನೇ ಎವೆಯಿಕ್ಕದೇ ನೋಡುತ್ತಾ–ಬಂಧನಕ್ಕೆ ಸಿಕ್ಕಿದ ಮಗನನ್ನು ನೋಡಿ ದುಃಖಗೊಂಡ ಕಿನ್ನರಿಯಂತೆ–ಕೌಸಲ್ಯೆಯು ಬಹಳವಾಗಿ ಗೋಳಾಡಿದಳು.

೨೦ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೨೧ನೆಯ ಸರ್ಗ

ಲಕ್ಷ್ಮಣನ ಕೋಪ : ರಾಜ್ಯಾಧಿಕಾರವನ್ನು ತಂದೆಯಿಂದ ಬಲಾತ್ಕಾರಪೂರ್ವಕವಾಗಿ ಪಡೆದುಕೊಳ್ಳಲು ಸಲಹೆನೀಡಿದುದು : ಶ್ರೀರಾಮನು ಪಿತೃವಾಕ್ಯಪರಿಪಾಲನೆಯೇ ಪರಮಧರ್ಮವೆಂದು ಪ್ರತಿಪಾದಿಸಿ ಕೌಸಲ್ಯೆಯನ್ನೂ-ಲಕ್ಷಣನನ್ನೂ ಸಮಾಧಾನಗೊಳಿಸಿದುದು

ತಥಾ ತು ವಿಲಪನ್ತೀಂ ತಾಂ ಕೌಸಲ್ಯಾಂ ರಾಮಮಾತರಮ್ ।
ಉವಾಚ ಲಕ್ಷ್ಮಣೋ ದೀನಸ್ತತ್ಕಾಲಸದೃಶಂ ವಚಃ ॥೧॥

ಶ್ರೀರಾಮನ ವಿಯೋಗವನ್ನು ನೆನೆ-ನೆನೆದು ಈ ಪರಿಯಲ್ಲಿ ಗೋಳಾ ಡುತ್ತಿದ್ದ ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಗೆ, ದೀನಭಾವದಿಂದ ಕೂಡಿದ್ದ ಲಕ್ಷ್ಮಣನು ಆ ಸಮಯಕ್ಕೆ ಉಚಿತವಾದ ಮಾತನ್ನು ಹೇಳಿದನು :

"ಆರ್ಯೇ! ಶ್ರೀರಾಮನು ಒಬ್ಬ ಹೆಂಗಸಿನ ಮಾತಿಗೆ ಕಟ್ಟುಬಿದ್ದು ಈ ಸಾಮ್ರಾಜ್ಯದ ಐಶ್ವರ್ಯವನ್ನೂ ಪರಿತ್ಯಜಿಸಿ ಅರಣ್ಯಕ್ಕೆ ಹೋಗುವುದು ನನಗೂ ಸರಿಯಾಗಿ ಕಾಣುತ್ತಿಲ್ಲ. 'ಶ್ರೀರಾಮನು ಕೈಕೇಯಿಯ ಆಜ್ಞೆಯಂತೆ ಕಾಡಿಗೆ ಹೋಗುತ್ತಿಲ್ಲ ; ರಾಜಾಜ್ಞೆಯಂತೆ ಕಾಡಿಗೆ ಹೋಗುತ್ತಿದ್ದಾನೆ'– ಎನ್ನುವುದಾದರೆ-ಈಗಿನ ಸಂದರ್ಭದಲ್ಲಿ ರಾಜಾಜ್ಞೆಯೂ ಪಾಲಿಸಲು ಅನರ್ಹ

ವಾಗಿದೆ. ಏಕೆಂದರೆ : ರಾಜನು ವ್ಯತ್ಯಸ್ತವಾದ ಬುದ್ಧಿಯುಳ್ಳವನು. ವೃದ್ಧನು. ವಿಷಯಲಂಪಟನು. ಮೇಲಾಗಿ ಮನ್ಮಥನ ಪೀಡೆಗೂ ಒಳಗಾಗಿರತಕ್ಕ ರಾಜನು ಕೈಕೇಯಿಯು ಹೇಳಿದ ಯಾವ ಕಾರ್ಯವನ್ನು ತಾನೇ ಮಾಡದಿರುವನು? ಶ್ರೀರಾಮನಲ್ಲಿ ಕಾಡಿಗೆ ಕಳುಹಿಸುವಂತಹ ಅಪರಾಧ ವನ್ನೇನೂ ನಾನು ಕಾಣುತ್ತಿಲ್ಲ. ರಾಷ್ಟ್ರದಿಂದ ಗಡೀಪಾರುಮಾಡಿ ಅರಣ್ಯಕ್ಕೆ ಕಳುಹಿಸುವಂತಹ ಯಾವ ದೋಷವೂ ರಾಮನಲ್ಲಿರುವುದಿಲ್ಲ.

ನ ತಂ ಪಶ್ಯಾಮ್ಯಹಂ ಲೋಕೇ ಪರೋಕ್ಷಮಪಿ ಯೋ ನರಃ ।
ಸ್ವಮಿತ್ರೋಽಪಿ ನಿರಸ್ತೋಽಪಿ ಯೋಽಸ್ಯ ದೋಷಮುದಾಹರೇತ್ ॥

ಶ್ರೀರಾಮನ ಶತ್ರುವಾಗಲೀ, ಶ್ರೀರಾಮನಿಂದ ಶಿಕ್ಷಿಸಲ್ಪಟ್ಟ ಅಪ ರಾಧಿಯೇ ಆಗಲೀ–ಪರೋಕ್ಷದಲ್ಲಿಯೂ ಕೂಡ ಶ್ರೀರಾಮನಲ್ಲಿ ಒಂದೇ ಒಂದು ದೋಷವಾದರೂ ಇದೆಯೆಂದು ಹೇಳಿರುವವರನ್ನು ಈ ಪ್ರಪಂಚದಲ್ಲಿ ನಾನು ನೋಡಿಯೂ ಇಲ್ಲ ; ಹೇಳಿರುವುದನ್ನು ಕೇಳಿಯೂ ಇಲ್ಲ.

ದೇವಕಲ್ಪಮೃಜುಂ ದಾನ್ತಂ ರಿಪೂಣಾಮಪಿ ವತ್ಸಲಮ್ ।
ಅವೇಕ್ಷಮಾಣಃ ಕೋ ಧರ್ಮಂ ತ್ಯಜೇತ್ಪುತ್ರಮಕಾರಣಾತ್ ॥೬॥

ದೇವಸದೃಶನಾದ, ಸರಳಸ್ವಭಾವವುಳ್ಳ, ಜಿತೇಂದ್ರಿಯನಾದ, ಶತ್ರ ಗಳಿಗೂ ಕೂಡ ಪ್ರಿಯನಾದ, ಧರ್ಮಸ್ವರೂಪನಾದ ಮಗನನ್ನು ಅನುದಿನವೂ ನೋಡುತ್ತಾ ಇರುವ ಯಾವನು ತಾನೇ ನಿಷ್ಕಾರಣವಾಗಿ ಪರಿತ್ಯಜಿಸುತ್ತಾನೆ? ವೃದ್ಧಾಪ್ಯದಿಂದ ಬಾಲಭಾವವನ್ನು ಹೊಂದಿರುವ,* ವಿವೇಕಶೂನ್ಯನಾದ ಈ ರಾಜನ ವಿವೇಕರಹಿತವಾದ ಮಾತುಗಳನ್ನು ರಾಜನೀತಿಯನ್ನು ಪೂರ್ಣವಾಗಿ ತಿಳಿದಿರುವ ಯಾವ ರಾಜಪುತ್ರನು ತಾನೇ ಮನಸ್ಸಿಗೆ ತಂದುಕೊಳ್ಳುತ್ತಾನೆ?

---

* ಪುಟ್ಟ ಮಗುವಿಗೂ, ಅತಿವೃದ್ಧನಿಗೂ ಅನೇಕ ವಿಷಯಗಳಲ್ಲಿ ಸಾಮ್ಯವಿದೆ. ಮಗುವಿಗೆ ಹಲ್ಲು ಹುಟ್ಟಿರುವುದಿಲ್ಲ. ವೃದ್ಧನಿಗೆ ಹಲ್ಲುಗಳೆಲ್ಲವೂ ಬಿದ್ದುಹೋಗಿರು ತ್ತವೆ. ಒಟ್ಟಿನಲ್ಲಿ ಇಬ್ಬರೂ ಹಲ್ಲಿಲ್ಲದವರು. ಪುಟ್ಟ ಮಗುವನ್ನು ಎತ್ತಿಕೊಂಡಾಗ ಅದರ ತಲೆಯು ನಿಲ್ಲದೆ ತೂಗಾಡುತ್ತದೆ. ವೃದ್ಧನಾದವನಿಗೂ ತಲೆಯು ತೂಗಾಡು ತ್ತದೆ. ಮಗುವಿಗೆ ವಿವೇಕವಿರುವುದಿಲ್ಲ. ವೃದ್ಧನೂ ವಿವೇಕಶೂನ್ಯನಾಗಿರುತ್ತಾನೆ.

ಅಣ್ಣ! 'ರಾಮನು ವನವಾಸಮಾಡಬೇಕೆಂಬ ರಾಜಾಜ್ಞೆಯಾಗಿದೆ'– ಎಂಬ ಈ ವಾರ್ತೆಯು ಜನಜನಿತವಾಗುವುದರೊಳಗೆ ನೀನು ನನ್ನ ಸಹಕಾರದಿಂದ ಈ ರಾಜ್ಯಸಿಂಹಾಸನವನ್ನು ಸ್ವಾಧೀನಕ್ಕೆ ತೆಗೆದುಕೊಂಡು ರಾಜ್ಯಶಾಸನವನ್ನು ಮಾಡಲು ಉಪಕ್ರಮಿಸು.

'ಕೈಕೇಯಿಯಿಂದ ಪ್ರಚೋದಿತರಾಗಿ ಯಾರಾದರೂ ನಮ್ಮ ಮೇಲೆ ಯುದ್ಧಮಾಡಲು ಬಂದರೆ?'–ಎಂಬ ಶಂಕೆಯೂ ನಿನ್ನ ಮನಸ್ಸಿನಲ್ಲಿ ಉಂಟಾಗದಿರಲಿ. ನಿನ್ನ ಪಕ್ಕದಲ್ಲಿ ಧನುಷ್ಪಾಣಿಯಾಗಿ ನಿಂತು ನನ್ನಿಂದ ರಕ್ಷಿಸಲ್ಪಡುತ್ತಾ ಯಮಧರ್ಮನಂತೆಯೇ ನಿಲ್ಲುವ ನಿನ್ನ ಮೇಲೆ ಯಾರು ತಾನೇ ತಮ್ಮ ಅಧಿಕಸಾಮರ್ಥ್ಯವನ್ನು ತೋರಬಲ್ಲರು? (ನನ್ನಿಂದ ರಕ್ಷಿಸಲ್ಪಡುವ ನಿನ್ನನ್ನು ಯಾರೂ ಎದುರಿಸಲಾರರು.) ಒಂದು ವೇಳೆ ನಿನಗೆ ವಿರೋಧವಾಗಿ ಭರತನ ಪಕ್ಷವನ್ನು ವಹಿಸಿ ಈ ಅಯೋಧ್ಯೆಯೇ ನಮ್ಮ ಮೇಲೆ ದಂಗೆಯೆದ್ದು ಬಂದರೂ–ತೀಕ್ಷ್ಣವಾದ ನನ್ನ ಈ ಬಾಣಗಳಿಂದ ಈ ಅಯೋಧ್ಯಾಪಟ್ಟಣವನ್ನೇ ಜನರಹಿತವನ್ನಾಗಿ ಮಾಡಿಬಿಡುತ್ತೇನೆ. ಭರತನ ಕಡೆಯ ಬಂಧುಗಳಾಗಲೀ–ಅವನ ಹಿತವನ್ನು ಬಯಸುವ ಯಾರಾದರೂ ಸರಿಯೇ–ನಮ್ಮೆದುರಾಗಿ ಬಂದಲ್ಲಿ ಅವರೆಲ್ಲರನ್ನೂ ಧ್ವಂಸಮಾಡಿಬಿಡುತ್ತೇನೆ. **'ಮೃದುರ್ಹಿ ಪರಿಭೂಯತೇ'**–'ಮೃದುತ್ವಕ್ಕೆ ಯಾವಾಗಲೂ ಬೆಲೆಯಿಲ್ಲ.' (ಮೆತ್ತಗಿರುವವನನ್ನು ಎಲ್ಲರೂ ತಿರಸ್ಕರಿಸುತ್ತಾರೆ.) ಕೈಕೇಯಿಯಿಂದ ಪ್ರೋತ್ಸಾಹಿತನಾಗಿ ದುಷ್ಟನಾದ ನಮ್ಮ ತಂದೆಯೇನಾದರೂ ಭರತನಿಗೆ ಯೌವರಾಜ್ಯಾಭಿಷೇಕವನ್ನು ಮಾಡುವುದರಿಂದಲೇ ಸಂತುಷ್ಟನಾಗುವುದಾದರೆ ನಮ್ಮ ವಿಷಯದಲ್ಲಿ ಶತ್ರುತ್ವವನ್ನೇ ತಾಳುವುದಾದರೆ–ತಂದೆಯೆಂಬುದನ್ನೂ ಲೆಕ್ಕಿಸದೇ ಅವನನ್ನು ಬಂಧನದಲ್ಲಿಡೋಣ ಅಥವಾ ಕೊಂದೇಬಿಡೋಣ.

ಮಗುವು ಮಾತನಾಡುವಾಗ ತೊದಲುತ್ತದೆ. ವಯಸ್ಸಾದ ಮುದುಕನು ತೊದಲು ಮಾತುಗಳನ್ನಾಡುತ್ತಾನೆ. ಈ ರೀತಿಯಲ್ಲಿ ಮದುಕನಾದವನಿಗೆ ಬಾಲಭಾವವುಂಟಾಗುತ್ತದೆ. ಇಂತಹ ವಿವೇಕಶೂನ್ಯವಾದ ಮುದುಕನು ಹೇಳಿದ ಮಾತುಗಳನ್ನು ರಾಜಧರ್ಮವನ್ನು ತಿಳಿದಿರುವ ರಾಜಪುತ್ರನೂ ಖಂಡಿತವಾಗಿಯೂ ಮಾನ್ಯಮಾಡಬಾರದು–ಎಂಬುದು ಲಕ್ಷ್ಮಣನ ಅಭಿಪ್ರಾಯವಾಗಿದೆ.

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ಕಾರ್ಯಂ ಭವತಿ ಶಾಸನಮ್ ॥೧೩॥

ಗರ್ವಿಷ್ಠನಾಗಿ, ಕಾರ್ಯಾಕಾರ್ಯವಿವೇಚನೆಯಿಲ್ಲದೇ, ಶಿಷ್ಟರ ಮಾರ್ಗವನ್ನು ಅನುಸರಿಸದೇ ತಪ್ಪುದಾರಿಯನ್ನು ಹಿಡಿದವನು ಗುರುವೇ ಆಗಿದ್ದರೂ–ಶಿಕ್ಷಾರ್ಹನಾಗುತ್ತಾನೆ. ಅವನಿಗೂ ತಕ್ಕ ಶಿಕ್ಷೆಯನ್ನು ಮಾಡಿಯೇ ತೀರಬೇಕಾಗುತ್ತದೆ. ಪುರುಷಶ್ರೇಷ್ಠನೇ! ಧರ್ಮದಿಂದ ಪ್ರಾಪ್ತವಾಗಿರುವ ನಿನ್ನ ಈ ರಾಜ್ಯವನ್ನು ರಾಜನು ಕೈಕೇಯಿಗೆ ಪರಾಕ್ರಮವನ್ನಾಶ್ರಯಿಸಿ ಕೊಡಲು ಬಯಸಿರುವನೋ ಅಥವಾ ಬೇರಾವುದಾದರೂ ಕಾರಣವಿರುವುದೋ?

ಶತ್ರುನಾಶಕನೇ! ನಿನ್ನೊಡನೆಯೂ ನನ್ನೊಡನೆಯೂ ಮಹತ್ತರವಾದ ವೈರವನ್ನು ಕಟ್ಟಿಕೊಂಡು ಭರತನಿಗೆ ಈ ಸಾಮ್ರಾಜ್ಯಲಕ್ಷ್ಮಿಯನ್ನು ಒಪ್ಪಿಸಲು ರಾಜನಿಗೆ ಯಾವ ಶಕ್ತಿಯಿದೆ?"

ಶ್ರೀರಾಮನಿಗೆ ಹೀಗೆ ಹೇಳಿದನಂತರ ಲಕ್ಷ್ಮಣನು ಕೌಸಲ್ಯೆಗೆ ಪುನಃ ಹೇಳುತ್ತಾನೆ :

"ದೇವಿ! ಅಣ್ಣನಾದ ಶ್ರೀರಾಮನ ವಿಷಯದಲ್ಲಿ ನನಗೆ ವಿಶೇಷವಾದ ಮಮತೆಯಿದೆ. ನನ್ನಲ್ಲಿರುವ ಸತ್ಯ, ನಿಷ್ಠೆ, ಧನುಸ್ಸು, ನಾನು ಮಾಡಿರುವ ದಾನ-ಯಜ್ಞಗಳು–ಇವೆಲ್ಲವುಗಳ ಮೇಲೆಯೂ ಆಣೆಯಿಟ್ಟು ಹೇಳುತ್ತೇನೆ.

ದೀಪ್ತಮಗ್ನಿಮರಣ್ಯಂ ವಾ ಯದಿ ರಾಮಃ ಪ್ರವೇಕ್ಷ್ಯತಿ ।
ಪ್ರವಿಷ್ಟಂ ತತ್ರ ಮಾಂ ದೇವಿ ತ್ವಂ ಪೂರ್ವಮವಧಾರಯ ॥೧೭॥

ಪ್ರಜ್ವಲಿಸುತ್ತಿರುವ ಅಗ್ನಿಯನ್ನಾಗಲೀ, ಅರಣ್ಯವನ್ನಾಗಲೀ ರಾಮನು ಪ್ರವೇಶಿಸಲು ಹೊರಟರೆ–ಅವನಿಗಿಂತಲೂ ಮುಂಚಿತವಾಗಿ ನಾನು ಅಲ್ಲಿರುವೆನೆಂದು ತಿಳಿ.

ಹರಾಮಿ ವೀರ್ಯಾದ್ದುಃಖಂ ತೇ ತಮಃ ಸೂರ್ಯ ಇವೋದಿತಃ ।
ದೇವೀ ಪಶ್ಯತು ಮೇ ವೀರ್ಯಂ ರಾಘವಶ್ಚೈವ ಪಶ್ಯತು ॥೧೮॥

ಸೂರ್ಯನು ತಾನು ಹುಟ್ಟಿದೊಡನೆಯೇ ಕತ್ತಲೆಯನ್ನು ಹೋಗಲಾಡಿಸುವಂತೆ–ನನ್ನ ಪರಾಕ್ರಮದಿಂದ ಕ್ಷಣಮಾತ್ರದಲ್ಲಿ ನಿನ್ನ ದುಃಖವನ್ನು

ಹೋಗಲಾಡಿಸುವೆನು. ನನ್ನ ಶಕ್ತಿಯು ಎಷ್ಟೆಂಬುದನ್ನು ಅಣ್ಣನೂ ನೋಡಲಿ ; ನೀನೂ ನೋಡುವೆಯಂತೆ.

ಹನಿಷ್ಯೇ ಪಿತರಂ ವೃದ್ಧಂ ಕೈಕೇಯ್ಯಾಸಕ್ತಮಾನಸಮ್ ।
ಕೃಪಣಂ ಚಾಸ್ಥಿರಂ ಬಾಲಂ ವೃದ್ಧಭಾವೇನ ಗರ್ಹಿತಮ್ ॥೧೯॥

ಕೈಕೇಯಿಯಲ್ಲಿಯೇ ಆಸಕ್ತವಾದ ಮನಸ್ಸುಳ್ಳ, ಕಾಮುಕನಾದ, ಕೃಪಣನಾದ, ಮಕ್ಕಳಂತೆ ವಿವೇಕಶೂನ್ಯನಾಗಿ ವ್ಯವಹರಿಸುತ್ತಿರುವ, ಮುಪ್ಪಿನಿಂದ ನಿಂದ್ಯನಾಗಿರುವ* ಈ ನಮ್ಮ ತಂದೆಯನ್ನು ಈಗಲೇ ಸಂಹರಿಸುತ್ತೇನೆ."

ಮಹಾತ್ಮನಾದ ಲಕ್ಷ್ಮಣನ ಆ ಮಾತುಗಳನ್ನು ಕೇಳಿ ಶೋಕಾಕುಲಳಾದ ಕೌಸಲ್ಯಾದೇವಿಯು ಬಿಕ್ಕಿ-ಬಿಕ್ಕಿ ಅಳುತ್ತಾ ಶ್ರೀರಾಮನಿಗೆ ಹೇಳಿದಳು :

"ಮಗು! ನಿನ್ನ ಪ್ರೀತಿಯ ತಮ್ಮನಾದ ಲಕ್ಷ್ಮಣನು ಹೇಳಿದುದೆಲ್ಲವನ್ನು ಕೇಳಿರುವೆ. ಮುಂದೆ ಮಾಡಬೇಕಾಗಿರುವ ಕಾರ್ಯದಲ್ಲಿ ನಿನಗೆ ಯಾವುದೇ ಸೂಕ್ತವಾಗಿ ಕಾಣುವುದೋ ಆ ಕಾರ್ಯವನ್ನು ಮಾಡು. ಆದರೆ ನನ್ನ ಸವತಿಯ ಅಧರ್ಮಯುಕ್ತವಾದ ಮಾತನ್ನು ಕೇಳಿ ಶೋಕದಿಂದ ಪರಿತಪಿಸುತ್ತಿರುವ ನನ್ನನ್ನು ಇಲ್ಲಿಯೇ ಬಿಟ್ಟು ಕಾಡಿಗೆ ಹೋಗುವುದು ನಿನಗೆ ಉಚಿತವಲ್ಲ. ಧರ್ಮಜ್ಞನೇ! ನೀನು ಧರ್ಮಿಷ್ಠನಾಗಿದ್ದು ಧರ್ಮ ಮಾರ್ಗದಲ್ಲಿಯೇ ನಡೆಯುವ ಇಚ್ಛೆಯುಳ್ಳವನಾಗಿದ್ದರೆ–ಇಲ್ಲಿಯೇ ನನ್ನ ಶುಶ್ರೂಷೆಮಾಡಿಕೊಂಡಿರು. ಮಾತೃಶುಶ್ರೂಷೆಯೆಂಬುದು ಉತ್ತಮೋತ್ತಮ ವಾದ ಧರ್ಮವಾಗಿರುತ್ತದೆ. ಅದನ್ನು ಆಚರಿಸುತ್ತಾ ಇಲ್ಲಿಯೇ ಇರು.

ಶುಶ್ರೂಷುರ್ಜನನೀಂ ಪುತ್ರ ಸ್ವಗೃಹೇ ನಿಯತೋ ವಸನ್ ।
ಪರೇಣ ತಪಸಾ ಯುಕ್ತಃ ಕಾಶ್ಯಪಸ್ತ್ರಿದಿವಂ ಗತಃ ॥೨೪॥

---

* ವೃದ್ಧಭಾವೇನ ಗರ್ಹಿತಂ –ಎಂಬುದಕ್ಕೆ ಹೀಗೆ ವಿವರಣೆಕೊಡಬಹುದಾಗಿದೆ. ರಾಜನಿಗೆ ವಯಸ್ಸಿನಿಂದ ವೃದ್ಧಭಾವವಿದೆಯೇ ಹೊರತು ಬುದ್ಧಿಯಿಂದ ವಾರ್ಧಕ್ಯವಿಲ್ಲ. ವೃದ್ಧರಾದವರು ಸಾಮಾನ್ಯವಾಗಿ ಹೆಚ್ಚಿನ ಅನುಭವವನ್ನು ಪಡೆದು ವಿವೇಕಿಗಳಾಗಿರುತ್ತಾರೆ. ಅಂತಹ ಅನುಭವೈಕಪ್ರಧಾನವಾದ ವಾರ್ಧಕ್ಯವಿಲ್ಲದೇ ಕೇವಲ ವಯೋವಾರ್ಧಕ್ಯದಿಂದ ಇವನು ನಿಂದ್ಯನಾಗಿರುತ್ತಾನೆ. ವೃದ್ಧನಾಗಿದ್ದರೂ ಕಾಮಿಯಾಗಿದ್ದಾನೆ–ಇತ್ಯಾದಿ. ಈ ಶ್ಲೋಕವನ್ನು ಒಬ್ಬ ವ್ಯಾಖ್ಯಾನಕಾರರು ಪ್ರಕ್ಷಿಪ್ತವೆಂದು ಬಿಟ್ಟಿರುತ್ತಾರೆ.

ಹಿಂದೆ ಕಾಶ್ಯಪನೆಂಬ ಮಹರ್ಷಿಯು ತನ್ನ ಮನೆಯಲ್ಲಿಯೇ ನಿಯತಾಹಾರನಾಗಿ ಅನುಷ್ಠಾನಪರನಾಗಿದ್ದುಕೊಂಡು ತಾಯಿಯ ಶುಶ್ರೂಷೆ ಮಾಡುತ್ತಾ ಮಾತೃಶುಶ್ರೂಷೆಯೆಂಬ ಶ್ರೇಷ್ಠವಾದ ತಪಸ್ಸನ್ನು ಆಚರಿಸಿ ಆ ಮಹಾತಪಸ್ಸಿನ ಫಲದಿಂದಲೇ ಸ್ವರ್ಗವನ್ನು ಪಡೆದುಕೊಂಡನು.

ಯಥೈವ ರಾಜಾ ಪೂಜ್ಯಸ್ತೇ ಗೌರವೇಣ ತಥಾ ಹ್ಯಹಮ್ ।
ತ್ವಾಂ ನಾಹಮನುಜಾನಾಮಿ ನ ಗನ್ತವ್ಯಮಿತೋ ವನಮ್ ॥೨೫॥

ರಾಜನು ಹೇಗೆ ನಿನಗೆ ಪೂಜ್ಯನೋ–ಹಾಗೆಯೇ ತಾಯಿಯಾಗಿರುವ ನಾನೂ ನಿನಗೆ ಪೂಜ್ಯಳು.* ತಂದೆಯ ಆಜ್ಞೆಯನ್ನು ಪರಿಪಾಲಿಸಲು ಬಯಸುವವನು ತಾಯಿಯ ಆಜ್ಞೆಯನ್ನೂ ಅದೇ ಗೌರವಭಾವದಿಂದಲೇ ಪರಿಪಾಲಿಸಬೇಕು. ನಾನು ನಿನಗೆ ಅರಣ್ಯಕ್ಕೆ ಹೋಗಲು ಅನುಮತಿಯನ್ನು ಕೊಡುವುದಿಲ್ಲ. ನೀನಿಲ್ಲಿಂದ ಅರಣ್ಯಕ್ಕೆ ಹೋಗಬಾರದು.

ತ್ವದ್ವಿಯೋಗಾನ್ನ ಮೇ ಕಾರ್ಯಂ ಜೀವಿತೇನ ಸುಖೇನ ವಾ ।
ತ್ವಯಾ ಸಹ ಮಮ ಶ್ರೇಯಸ್ತೃಣಾನಾಮಪಿ ಭಕ್ಷಣಮ್ ॥೨೬॥

ನಿನ್ನನ್ನಗಲಿದ ಮೇಲೆ ಇಲ್ಲಿ ನಾನಿದ್ದುಕೊಂಡು ಮಾಡಬೇಕಾಗಿರುವ ಕಾರ್ಯವು ಯಾವುದೂ ಇರುವುದಿಲ್ಲ. ನೀನಿಲ್ಲದೇ ನನಗೆ ಸುಖೋಪ ಭೋಗಗಳೂ ಬೇಕಾಗಿಲ್ಲ ; ಜೀವನವೂ ಬೇಕಾಗಿಲ್ಲ. ನಿನ್ನೊಡನೆ ಹುಲ್ಲನ್ನು ತಿಂದುಕೊಂಡಿರುವುದಾದರೂ ಅದೇ ನನಗೆ ಶ್ರೇಯಸ್ಕರವು.

ಯದಿ ತ್ವಂ ಯಾಸ್ಯಸಿ ವನಂ ತ್ಯಕ್ತ್ವಾ ಮಾಂ ಶೋಕಲಾಲಸಾಮ್ ।
ಅಹಂ ಪ್ರಾಯಮಿಹಾಸಿಷ್ಯೇ ನೇಹ ಶಕ್ಷ್ಯಾಮಿ ಜೀವಿತುಮ್ ॥೨೭॥

ಒಂದು ವೇಳೆ ನೀನೇನಾದರೂ ಶೋಕಪರಿತಪ್ತಳಾಗಿರುವ ನನ್ನನ್ನು ಬಿಟ್ಟು ಒಬ್ಬನೇ ಅರಣ್ಯಕ್ಕೆ ಹೊರಟುಹೋದರೆ–ನಾನಿಲ್ಲಿ ಪ್ರಾಯೋಪ ವೇಶವನ್ನು ಮಾಡಿಯಾದರೂ ಪ್ರಾಣಗಳನ್ನು ತೊರೆಯುತ್ತೇನೆ. ನಿನ್ನನ್ನು ಬಿಟ್ಟು ಜೀವಿಸಿರಲು ನನಗೆ ಸಾಧ್ಯವಿಲ್ಲ.

---

* ತಂದೆಗಿಂತಲೂ ತಾಯಿಯು ಹತ್ತು ಪಾಲು ಹೆಚ್ಚು ಗೌರವಾರ್ಹಳೆಂದು ಸ್ಮೃತಿ ವಚನವಿದೆ. ಪಿತುರ್ದಶಗುಣಂ ಮಾತಾ ಗೌರವವೇಣಾತಿರಿಚ್ಯತೇ.

ತತಸ್ತ್ವಂ ಪ್ರಾಪ್ಸ್ಯಸೇ ಪುತ್ರ ನಿರಯಂ ಲೋಕವಿಶ್ರುತಮ್ ।
ಬ್ರಹ್ಮಹತ್ಯಾಮಿವಾಧರ್ಮಾತ್ಸಮುದ್ರಃ ಸರಿತಾಂ ಪತಿಃ ॥೨೮॥

ನಾನು ಸತ್ತೆನೆಂದರೆ ತಾಯಿಯ ಮರಣಕ್ಕೆ ಕಾರಣನಾಗುವ ನೀನು– ನದಿಗಳಿಗೆ ಒಡೆಯಾದ ಸಮುದ್ರರಾಜನು ತಾಯಿಯ ವಿಷಯದಲ್ಲಿ ಅಧರ್ಮದ ಕಾರ್ಯವನ್ನು ಮಾಡಿದ ಕಾರಣ ಬ್ರಹ್ಮಹತ್ಯಾಪಾಪವನ್ನು ಹೊಂದಿ ಲೋಕವಿಖ್ಯಾತವಾದ ನರಕವನ್ನು ಸೇರಿದಂತೆ–ನೀನೂ ನರಕ್ಕೆ ಹೋಗುವೆ.”*

ಇದೇ ಮುಂತಾಗಿ ಹೇಳಿಕೊಂಡು ಬಿಕ್ಕಿ-ಬಿಕ್ಕಿ ಅಳುತ್ತಿದ್ದ, ದೀನಳಾದ ತಾಯಿಗೆ ಧರ್ಮಾತ್ಮನಾದ ಶ್ರೀರಾಮನು ಧರ್ಮಸಮ್ಮತವಾದ ಸಮಾಧಾನ ಕರವಾದ ಮಾತನ್ನು ಹೇಳಿದನು :

ನಾಸ್ತಿ ಶಕ್ತಿಃ ಪಿತುರ್ವಾಕ್ಯಂ ಸಮತಿಕ್ರಮಿತುಂ ಮಮ ।
ಪ್ರಸಾದಯೇ ತ್ವಾಂ ಶಿರಸಾ ಗನ್ತುಮಿಚ್ಛಾಮ್ಯಹಂ ವನಮ್ ॥೩೦॥

“ಅಮ್ಮ! ತಂದೆಯ ಆಜ್ಞೆಯನ್ನು ಮೀರಲು ನನಗೆ ಸಾಮರ್ಥ್ಯವಿಲ್ಲ. ನಿನಗೆ ತಲೆಬಾಗಿ ನಮಸ್ಕರಿಸಿ ಬೇಡಿಕೊಳ್ಳುತ್ತೇನೆ ; ಪ್ರಸನ್ನಳಾಗು. ನಾನು ಅರಣ್ಯಕ್ಕೆ ಹೋಗಬಯಸುತ್ತೇನೆ. ಅನುಜ್ಞೆಯನ್ನು ನೀಡು, ತಾಯೇ!

ಋಷಿಣಾ ಚ ಪಿತುರ್ವಾಕ್ಯಂ ಕುರ್ವತಾ ವ್ರತಚಾರಿಣಾ ।
ಗೌರ್ಹತಾ ಜಾನತಾ ಧರ್ಮಂ ಕಣ್ಡುನಾಪಿ ವಿಪಶ್ಚಿತಾ ॥೩೧॥

---

* ಸಮುದ್ರರಾಜನು ಕಲ್ಪಾಂತರದಲ್ಲಿ ತನ್ನ ತಾಯಿಗೆ ದುಃಖವನ್ನುಂಟುಮಾಡಿ ಅಪರಾಧಮಾಡಿದ ಕಾರಣದಿಂದ ಬ್ರಹ್ಮಹತ್ಯಾಪಾಪವನ್ನು ಪಡೆದು ನರಕವಾಸವನ್ನನು ಭವಿಸಿದನು. ಇಲ್ಲಿ ಅಧರ್ಮಾತ್–ಎಂಬುದಕ್ಕೆ ಸಂದರ್ಭಾನುಸಾರವಾಗಿ ತಾಯಿಯ ವಿಷಯದಲ್ಲಿ ಅಧರ್ಮಾಚರಣೆಮಾಡಿದ್ದರಿಂದ ಎಂದು ಅರ್ಥಮಾಡಬಹುದಾಗಿದೆ. ಆದರೆ ತಾಯಿಯ ವಿಷಯದಲ್ಲಿ ಅಧರ್ಮಾಚರಣೆಯನ್ನು ಮಾಡಿದರೆ ಬ್ರಹ್ಮಹತ್ಯಾದೋಷವು ಹೇಗೆ ಬರುತ್ತದೆಂಬುದಕ್ಕೆ ಕಾರಣವನ್ನು ಈ ಶ್ಲೋಕದಿಂದ ಗ್ರಹಿಸುವ ಸಾಧ್ಯತೆಯಿಲ್ಲ. ಬ್ರಹ್ಮಹತ್ಯಾ = ಬ್ರಹ್ಮಹತ್ಯಾಪಾಪಕ್ಕೆ ಅನುರೂಪವಾದ ಪಾಪ ಅರ್ಥಾತ್ ತಾಯಿಗೆ ಮಾಡುವ ಅಪರಾಧರೂಪವಾದ ಪಾಪವು ಬ್ರಹ್ಮಹತ್ಯಾಪಾಪಕ್ಕೆ ಸಮಾನವಾದುದು ಎಂದು ಅರ್ಥಮಾಡಬಹುದಾಗಿದೆ. ವ್ಯಾಖ್ಯಾನಕಾರರು ಹೀಗೆಯೇ ವಿವರಿಸಿರುತ್ತಾರೆ.

ವ್ರತನಿಷ್ಠನಾದ, ವಿದ್ವಾಂಸನಾದ ಕಂಡುಮಹರ್ಷಿಯು ಗೋವನ್ನು ಹತ್ಯೆಮಾಡಕೂಡದೆಂಬ ಧರ್ಮವನ್ನು ತಿಳಿದವನಾಗಿದ್ದರೂ–ಪಿತೃವಾಕ್ಯವನ್ನು ಪರಿಪಾಲಿಸುವ ಸಲುವಾಗಿ ಗೋಹತ್ಯೆಯನ್ನು ಮಾಡಿದನು.

ಅಸ್ಮಾಕಂ ಚ ಕುಲೇ ಪೂರ್ವಂ ಸಗರಸ್ಯಾಜ್ಞಯಾ ಪಿತುಃ ।
ಖನದ್ಭಿಃ ಸಾಗರೈರ್ಭೂಮಿಮವಾಪ್ತಃ ಸುಮಹಾನ್ವಧಃ ॥೩೨॥

ನಮ್ಮ ವಂಶದಲ್ಲಿಯೇ ತಂದೆಯಾದ ಸಗರಚಕ್ರವರ್ತಿಯ ಆಜ್ಞೆಯಂತೆ ಅಶ್ವಮೇಧದ ಕುದುರೆಯನ್ನು ಹುಡುಕಿತರಲು ಭೂಮಿಯನ್ನು ಅಗೆಯುತ್ತಿದ್ದ ಅರುವತ್ತು ಸಾವಿರ ಮಕ್ಕಳೂ ಕಪಿಲಮಹರ್ಷಿಯ ಕೋಪಾಗ್ನಿಗೆ ಸಿಕ್ಕಿ ಭಸ್ಮೀಭೂತರಾದರು. ಪಿತೃವಾಕ್ಯಪರಿಪಾಲನೆಗಾಗಿ ಅವರು ತಮ್ಮ ಪ್ರಾಣ ಗಳನ್ನೇ ತೊರೆದರು.

ಜಾಮದಗ್ನ್ಯೇನ ರಾಮೇಣ ರೇಣುಕಾ ಜನನೀ ಸ್ವಯಮ್ ।
ಕೃತ್ತಾ ಪರಶುನಾರಣ್ಯೇ ಪಿತುರ್ವಚನಕಾರಿಣಾ ॥೩೩॥

ಪಿತೃವಾಕ್ಯಪರಿಪಾಲಕನಾದ ಪರಶುರಾಮನು ತಂದೆಯಾದ ಜಮ ದಗ್ನಿಯ ಆಜ್ಞೆಯಂತೆ ಅರಣ್ಯದಲ್ಲಿ ತಾಯಿಯಾದ ರೇಣುಕೆಯ ತಲೆಯನ್ನೇ ಗಂಡುಗೊಡಲಿಯಿಂದ ಕತ್ತರಿಸಿದನು.

ಅಮ್ಮ! ಇವರೇ ಅಲ್ಲದೇ ದೇವಸದೃಶರಾದ ಇನ್ನೂ ಅನೇಕ ಪುರುಷರು ತಂದೆಯ ಆಜ್ಞೆಯನ್ನು ಪರಿಪಾಲಿಸಿದ್ದಾರೆ. ಅಂತೆಯೇ ನಾನೂ ಕೂಡ ವೀರಪುರುಷಯೋಗ್ಯವಾದ, ತಂದೆಗೆ ಹಿತಕರವಾದ ಈ ಕಾರ್ಯ ವನ್ನು ಮಾಡುತ್ತೇನೆ. ಪಿತೃವಾಕ್ಯಪರಿಪಾಲನಾಧರ್ಮವನ್ನು ಅನುಸರಿಸು ವವನು ನಾನೊಬ್ಬನೇ ಅಲ್ಲ ಅಥವಾ ನಾನು ಮೊದಲನೆಯವನೂ ಅಲ್ಲ. ನಾನು ಹೇಳಿರುವ ಆ ಮಹಾತ್ಮರೆಲ್ಲರೂ ತಂದೆಯ ಆಜ್ಞೆಯಂತೆ ನಡೆದು ಕೊಂಡಿರುವರು.

ನಾಹಂ ಧರ್ಮಮಪೂರ್ವಂ ತೇ ಪ್ರತಿಕೂಲಂ ಪ್ರವರ್ತಯೇ ।
ಪೂರ್ವೈರಯಮಭಿಪ್ರೇತೋ ಗತೋ ಮಾರ್ಗೋಽನುಗಮ್ಯತೇ ॥೩೬॥

ಜನನಿ! ನಾನು ನಿನಗೆ ಪ್ರತಿಕೂಲವಾದ, ಹಿಂದೆಂದೂ ನಡೆಯ ದಿರುವ ಹೊಸದಾದ ಧರ್ಮವನ್ನು ಆಚರಿಸುತ್ತಿಲ್ಲ. ಈ ಪಿತೃವಾಕ್ಯ

ಪರಿಪಾಲನಾಧರ್ಮವು ಹಿಂದಿನವರಿಗೂ ಇಷ್ಟವಾಗಿದ್ದಿತು. ಅವರ ಮಾರ್ಗವನ್ನೇ ನಾನೂ ಅನುಸರಿಸುತ್ತಿದ್ದೇನೆ.

ತಂದೆಯ ಆಜ್ಞೆಯನ್ನು ಪರಿಪಾಲಿಸುವುದೇ ಇಂದಿನ ನನ್ನ ಮುಖ್ಯ ಕರ್ತವ್ಯವಾಗಿದೆ. ಪ್ರಪಂಚದಲ್ಲಿ ಧಾರ್ಮಿಕರ ಮಾರ್ಗಾನುಸರಣೆಯೂ ಇದೇ ಆಗಿರುವುದು. ಇದಕ್ಕೆ ವಿರುದ್ಧವಾಗಿ ಪ್ರಪಂಚದ ನಡವಳಿಕೆಯೂ ಇರುವುದಿಲ್ಲ. ನನ್ನ ಅಭಿಪ್ರಾಯದಂತೆ–**ಪಿತುರ್ಹಿ ವಚನಂ ಕುರ್ವನ್ನ ಕಶ್ಚಿನ್ನಾಮ ಹೀಯತೇ ।** ತಂದೆಯ ಆಜ್ಞೆಯನ್ನು ಪರಿಪಾಲಿಸಿದ ಯಾವನೂ ಹಾಳಾಗಿ ಹೋಗಿಲ್ಲ ; ಹೋಗುವುದೂ ಇಲ್ಲ."

ಹೀಗೆ ವಾಗ್ಮಿಗಳಲ್ಲಿ ಮತ್ತು ಸರ್ವಧನುಷ್ಮಂತರಲ್ಲಿ ಶ್ರೇಷ್ಠನಾದ ಶ್ರೀರಾಮನು ತಾಯಿಯನ್ನು ಸಮಾಧಾನಗೊಳಿಸಿ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ನಿನಗೆ ನನ್ನ ಮೇಲಿರುವ ಅತಿಶ್ರೇಷ್ಠವಾದ ಸ್ನೇಹವನ್ನು ನಾನು ಬಲ್ಲೆನು. ಅಂತೆಯೇ ನಿನ್ನಲ್ಲಿರುವ ಪರಾಕ್ರಮವನ್ನೂ, ಸತ್ತ್ವವನ್ನೂ ಮತ್ತು ಶತ್ರುಗಳಿಂದ ಎದುರಿಸಲಾಗದ ತೇಜಸ್ಸನ್ನೂ ಬಲ್ಲೆನು. ಶುಭ ಲಕ್ಷಣನೇ! ಸತ್ಯ ಮತ್ತು ಶಾಂತಿಗಳ ರಹಸ್ಯವೇನೆಂಬುದನ್ನು ತಿಳಿಯಲಾಗದೆ, ನನ್ನ ವನವಾಸದ ವಾರ್ತೆಯನ್ನು ಕೇಳಿ ತಾಯಿಗೆ ಮಹತ್ತರವಾದ ಮತ್ತು ಅಪಾರವಾದ ದುಃಖವುಂಟಾಗಿರುವುದು ಸಹಜವಾಗಿಯೇ ಇದೆ. (ಆದರೆ ಸತ್ಯ-ಧರ್ಮ-ಶಮ-ದಮಾದಿಗಳಿಂದ ಯುಕ್ತನಾಗಿರುವ ನೀನು ನಿನ್ನ ಗುಣಕ್ಕೆ ತಕ್ಕುವುಗಳಲ್ಲದ ಇಂತಹ ಮಾತುಗಳನ್ನಾಡಬಹುದೇ ?)

ಧರ್ಮೋ ಹಿ ಪರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಮ್ ।
ಧರ್ಮಸಂಶ್ರಿತಮೇತಚ್ಚ ಪಿತುರ್ವಚನಮುತ್ತಮಮ್ ॥೪೧॥

ಧರ್ಮವೇ ಲೋಕದಲ್ಲಿ ಪರಮಶ್ರೇಷ್ಠವಾದುದು. ಧರ್ಮದಲ್ಲಿಯೇ ಸತ್ಯವು ಅಡಗಿದೆ. ಉತ್ತಮೋತ್ತಮವಾದ ತಂದೆಯ ಮಾತು ಧರ್ಮ ದಲ್ಲಿಯೇ ಅಡಕವಾಗಿದೆ.

ಸಂಶ್ರುತ್ಯ ಚ ಪಿತುರ್ವಾಕ್ಯಂ ಮಾತುರ್ವಾ ಬ್ರಾಹ್ಮಣಸ್ಯ ವಾ ।
ನ ಕರ್ತವ್ಯಂ ವೃಥಾ ವೀರ ಧರ್ಮಮಾಶ್ರಿತ್ಯ ತಿಷ್ಠತಾ ॥೪೨॥

ಧರ್ಮವನ್ನು ಆಶ್ರಯಿಸಿರುವವನು ತಂದೆಗಾಗಲೀ, ತಾಯಿಗಾಗಲೀ,

ಬ್ರಾಹ್ಮಣನಿಗಾಗಲೀ–ಕಾರ್ಯವನ್ನು ಮಾಡಿಕೊಡುವುದಾಗಿ ಮಾತುಕೊಟ್ಟು ಅನಂತರ ಅದನ್ನು ಯಾವುದೇ ಕಾರಣದಿಂದಲೂ ವ್ಯರ್ಥವನ್ನಾಗಿ ಮಾಡಬಾರದು. (ಮೀರಬಾರದು.)

ಈ ಕಾರಣದಿಂದ ತಂದೆಯ ಆಜ್ಞೆಯನ್ನು ಮೀರಿ ನಡೆಯಲು ನನಗೆ ಶಕ್ಯವಿಲ್ಲ. ತಂದೆಯ ಮಾತಿನಿಂದಲೇ ಅಥವಾ ಅಭಿಪ್ರಾಯಕ್ಕೆ ಅನುಸಾರವಾಗಿಯೇ ಕೈಕೇಯಿಯು ನನ್ನನ್ನು ಕಾಡಿಗೆ ಹೋಗುವಂತೆ ಪ್ರಚೋದನೆಯನ್ನು ಮಾಡಿರುವಳು.

ತದೇನಾಂ ವಿಸೃಜಾನಾರ್ಯಾಂ ಕ್ಷತ್ರಧರ್ಮಾಶ್ರಿತಾಂ ಮತಿಮ್ ।
ಧರ್ಮಮಾಶ್ರಯ ಮಾ ತೈಕ್ಷ್ಣ್ಯಂ ಮದ್ಬುದ್ಧಿರನುಗಮ್ಯತಾಮ್ ॥

ಲಕ್ಷ್ಮಣ! ಆದುದರಿಂದ ತಂದೆಯನ್ನಾದರೂ ಕೊಂದು ರಾಜ್ಯವನ್ನು ಪಡೆಯಬೇಕೆನ್ನುವ ಅನಾರ್ಯವಾದ (ಅತಿದುಷ್ಟವಾದ), ಕ್ಷತ್ರಧರ್ಮೋಚಿತವಾದ ಬುದ್ಧಿಯನ್ನು ಬಿಡು. ತೀಕ್ಷ್ಣಸ್ವಭಾವದವನಾಗಬೇಡ. ಸಜ್ಜನೋಚಿತವಾದ ಧರ್ಮವನ್ನು ಆಚರಿಸು. ನನ್ನ ಬುದ್ಧಿಯನ್ನೇ ಅನುಸರಿಸು."*

ಶ್ರೀರಾಮನು ಸೌಹಾರ್ದಭಾವದಿಂದ ತಮ್ಮನಿಗೆ ಹೀಗೆ ಹೇಳಿ, ಕೈಮುಗಿದುಕೊಂಡು ತಾಯಿಗೆ ತಲೆಬಾಗಿ ನಮಸ್ಕರಿಸಿ ಪುನಃ ಹೇಳತೊಡಗಿದನು:

"ತಾಯೇ! ತಂದೆಯ ಆಜ್ಞಾನುಸಾರವಾಗಿ ಕಾಡಿಗೆ ಹೊರಟಿರುವ ನನಗೆ ಅನುಮತಿಯನ್ನು ನೀಡು. ನನ್ನ ಪ್ರಾಣಗಳ ಮೇಲೆ ಆಣೆಯಿಟ್ಟು

---

* ಲೌಕಿಕನೀತಿ, ಅಲೌಕಿಕ ನೀತಿ (ಪರಮಾರ್ಥನೀತಿ) ಗಳೆಂಬ ಎರಡು ನೀತಿಗಳಿವೆ. ಪರಮಾರ್ಥವನ್ನೇ ಪ್ರಧಾನವನ್ನಾಗಿಟ್ಟುಕೊಂಡಾಗ ಅನೇಕ ಸಂದರ್ಭಗಳಲ್ಲಿ ಲೌಕಿಕ ನೀತಿಗೆ ಘಾತವಾಗುತ್ತದೆ. ವಿಘಾತವಾಗುವುದೂ ಉಂಟು. ಹೀಗೆಯೇ ಲೌಕಿಕನೀತಿ ಯನ್ನು ಪ್ರಧಾನವನ್ನಾಗಿಟ್ಟುಕೊಂಡರೆ ಪರಮಾರ್ಥನೀತಿಗೆ ಘಾತವಾಗುತ್ತದೆ. ಲಕ್ಷ್ಮಣನು ಈ ಹಿಂದೆ ಶ್ರೀರಾಮನಿಗೆ ಹೇಳಿದುದು ಲೌಕಿಕನೀತಿಗೆ ಅಥವಾ ಕೇವಲ ಕ್ಷತ್ರಧರ್ಮಕ್ಕೆ ಅನುಸಾರವಾಗಿದೆ. ಕ್ಷತ್ರಧರ್ಮದ ಸ್ವರೂಪವೇನೆಂಬುದನ್ನು ಮಹಾ ಭಾರತದ ರಾಜಧರ್ಮಪರ್ವದಲ್ಲಿ ಹೀಗೆ ಹೇಳಿದೆ : ಕ್ಷತ್ರಧರ್ಮೋ ಮಹಾರೌದ್ರಃ ಶಠಕೃತ್ಯ ಇತಿ ಸ್ಮೃತಃ । ಕ್ಷತ್ರಧರ್ಮವು ಮಹಾಕ್ರೌರ್ಯದಿಂದ ಕೂಡಿದ್ದಾಗಿದೆ. ಈ ಧರ್ಮವು ಶಠರಿಂದ ಆಚರಿಸಲ್ಪಡುತ್ತದೆ. ಆದರೆ ರಾಜಕುಮಾರನಾದವನು ಕ್ಷತ್ರಿಯ

ಹೇಳುತ್ತೇನೆ. ನನ್ನ ಪ್ರಯಾಣಕ್ಕೆ ತಡೆಯನ್ನುಂಟುಮಾಡಬೇಡ. ನನ್ನ ಮಾರ್ಗವು ಸುಗಮವಾಗಲೆಂದು ಮಂಗಳಾಶಾಸನವನ್ನು ಮಾಡು. ಸ್ವರ್ಗದಿಂದ ಚ್ಯುತನಾದ ಯಯಾತಿಯು ಕಾಲಾನಂತರದಲ್ಲಿ ಪುನಃ ಸ್ವರ್ಗವನ್ನು ಸೇರಿದಂತೆ–ಪ್ರತಿಜ್ಞಾತವಾದ ಹದಿನಾಲ್ಕು ವರ್ಷಗಳು ಮುಗಿದೊಡನೆಯೇ ಕಾಡಿನಿಂದ ಅಯೋಧ್ಯೆಗೆ ಬಂದುಬಿಡುತ್ತೇನೆ.

ಮಾತೆಯೇ! ಶೋಕವನ್ನು ಮನಸ್ಸಿನಲ್ಲಿಯೇ ಅಡಗಿಸು. ವೃಥಾ ದುಃಖಪಡಬೇಡ. ತಂದೆಯ ಮಾತನ್ನು ನಡೆಸಿಕೊಟ್ಟು ವನವಾಸವನ್ನು ಮುಗಿಸಿ ಪುನಃ ನಾನು ಇಲ್ಲಿಗೆ ಬಂದುಬಿಡುತ್ತೇನೆ. ನೀನು, ನಾನು, ವೈದೇಹಿ, ಲಕ್ಷ್ಮಣ, ಸುಮಿತ್ರೆ–ಇವರೆಲ್ಲರೂ ತಂದೆಯಾದ ದಶರಥನ ಆಜ್ಞಾಧಾರಕರಾಗಿರಬೇಕು. ಇದೇ ಸನಾತನಧರ್ಮವಾಗಿದೆ. ಪಟ್ಟಾಭಿಷೇಕಕ್ಕಾಗಿ ಸಿದ್ಧಪಡಿಸಿರುವ ಈ ಸಾಮಾಗ್ರಿಗಳನ್ನು ತೆಗೆದಿಟ್ಟು ನನ್ನ ವಿಯೋಗದ ದುಃಖವನ್ನು ಹೃದಯದಲ್ಲಿಯೇ ಅಡಗಿಸಿಕೊಂಡು, ಪಿತೃವಾಕ್ಯಪರಿಪಾಲನೆಗಾಗಿ ವನವಾಸ ಮಾಡಬೇಕೆಂದು ನಿಶ್ಚಯಿಸಿರುವ ನನ್ನ ಧಾರ್ಮಿಕವಾದ ಬುದ್ಧಿಯನ್ನೇ ಅನುಸರಣೆಮಾಡಮ್ಮ!"

ಧರ್ಮದಿಂದ ಕೂಡಿದ್ದ, ವ್ಯಗ್ರತೆಯಿಲ್ಲದ, ಸ್ಪಷ್ಟವಾದ, ಭಯರಹಿತವಾದ ಶ್ರೀರಾಮನ ಮಾತುಗಳನ್ನು ಕೇಳಿ ಕೌಸಲ್ಯೆಯು ಕ್ಷಣಕಾಲ ಸತ್ತು ಹೋದವಳಂತೆಯೇ ಪ್ರಜ್ಞಾಹೀನಳಾದಳು. ಶೈತ್ಯೋಪಚಾರಾದಿಗಳಾದ

ಧರ್ಮಾನುಸರಣೆ ಮಾಡಬೇಕೆ? ಅಥವಾ ಧರ್ಮದ ಹಿನ್ನೆಲೆಯಲ್ಲಿ ಕ್ಷತ್ರಿಯಧರ್ಮಕ್ಕೆ ಅಸಹಜವಾದ ನೀತಿಯನ್ನು ಅನುಸರಿಸಬೇಕೆ? ಎಂಬ ಪ್ರಶ್ನೆಯು ಬರುವುದು ಸಹಜ. ಏಕೆಂದರೆ : ಎರಡು ಮಾರ್ಗಗಳಲ್ಲಿಯೂ ಯಶಸ್ಸು ಸಿಕ್ಕುವುದು ನಿಶ್ಚಯ. ಈ ಮಾರ್ಗಗಳ ಅನುಸರಣೆಯು ಕೇವಲ ವ್ಯಕ್ತಿಗೆ ಸಂಬಂಧಿಸಿದ್ದಾಗಿರುತ್ತದೆ. ಲಕ್ಷ್ಮಣನು ರಾಮನಿಗೆ ಹೇಳಿದ ರೀತಿಯಲ್ಲಿಯೇ ಮಹಾಭಾರತದಲ್ಲಿಯೂ ದ್ರೌಪದೀ-ಭೀಮಸೇನರು ಧರ್ಮಜನಿಗೂ ಹೇಳಿದರು. ಇನ್ನೂ ಕಟುವಾಗಿ ತರ್ಕಬದ್ಧವಾಗಿ ಹೇಳಿದರು. ಆದರೆ ಧರ್ಮಜನು ಮಾತ್ರ ಅವರ ಮಾತಿಗೆ ಒಡಂಬಡಲಿಲ್ಲ. ಕ್ಷತ್ರಧರ್ಮದಲ್ಲಿ ಪರಮಾರ್ಥಧರ್ಮವನ್ನೂ ಬೆರೆಸಿಕೊಂಡು ಕಾರ್ಯಸಾಧನೆಮಾಡುವುದು ಬಹಳ ಕಷ್ಟ. ಶ್ರೀರಾಮ-ಯುಧಿಷ್ಠಿರರು ಈ ಕ್ಲಿಷ್ಟತರವಾದ ಮಾರ್ಗವನ್ನು ಅನುಸರಿಸಿ ಕಾರ್ಯಸಾಧನೆಮಾಡಿ ತೋರಿಸಿದ್ದಾರೆ.

ನಂತರ ಎಚ್ಚರಗೊಂಡು ಶ್ರೀರಾಮನನ್ನೇ ದಿಟ್ಟಿಸಿ ನೋಡುತ್ತಾ ಪುನಃ ಹೇಳಿದಳು:

"ಮಗು! ನಿನಗೆ ತಂದೆಯು ಹೇಗೆ ಗೌರವಾರ್ಹನೋ ಹಾಗೆಯೇ ಪಾಲನಾದಿರೂಪವಾದ ಮಾತೃಧರ್ಮದಿಂದಲೂ, ಪುತ್ರಸ್ನೇಹದಿಂದಲೂ ಕೂಡಿರುವ ನಾನೂ ಕೂಡ ಗೌರವಾರ್ಹಳಾಗಿದ್ದೇನೆ. ನೀನು ಕಾಡಿಗೆ ಹೋಗಲು ಅನುಮತಿಸುವುದಿಲ್ಲ. ಅತ್ಯಂತದುಃಖಿತಳಾಗಿರುವ ನನ್ನನ್ನು ಬಿಟ್ಟು ನೀನು ಕಾಡಿಗೆ ಹೋಗುವುದೂ ಯೋಗ್ಯವಾಗಿ ಕಾಣುವುದಿಲ್ಲ. ರಾಮ! ನೀನಿಲ್ಲದೇ ನಾನಿಲ್ಲಿ ಬದುಕಿದ್ದುತಾನೇ ಪ್ರಯೋಜನವೇನು? ಸ್ವಜನರಿಂದಾ ಗಲೀ, ದೇವ-ಪಿತೃಗಳ ಪೂಜೆಯಿಂದಾಗಲೀ, ಅಮೃತದಿಂದಲೇ ಆಗಲೀ– ನನಗಾವ ಪ್ರಯೋಜನವೂ ಇಲ್ಲ. ಸಮಗ್ರವಾದ ಈ ಪ್ರಪಂಚವನ್ನೇ ಪಡೆದು ಕೊಂಡು ಅನುಭವಿಸುವ ಸುಖಕ್ಕಿಂತಲೂ ನಿನ್ನ ಸನ್ನಿಧಾನದಲ್ಲಿ ಒಂದು ಮೂಹೂರ್ತಕಾಲವಿದ್ದರೂ ಅದೇ ನನಗೆ ಶ್ರೇಯಸ್ಕರವೆಂದು ನಾನು ಭಾವಿಸುತ್ತೇನೆ."

ಮದಿಸಿದ ಕಾಡಾನೆಯನ್ನು ಗಜಗ್ರಾಹಿಗಳು ಕೊಳ್ಳಿಗಳಿಂದ ಮುಂದೆ ಹೋಗದಂತೆ ಅಡ್ಡಿಪಡಿಸುತ್ತಿದ್ದರೂ ಲೆಕ್ಕಿಸದೇ ಕಾಡಾನೆಯು ಮುನ್ನುಗ್ಗಿ ಹೋಗುವಂತೆ ಶ್ರೀರಾಮನು ಕಾಡಿಗೆ ಹೋಗುವುದಕ್ಕೆ ಪ್ರತಿಬಂಧರೂಪವಾದ ತಾಯಿಯ ಕುರುಣಾಜನಕವಾದ ಮಾತುಗಳನ್ನು ಕೇಳಿಯೂ ತನ್ನ ನಿರ್ಧಾರ ವನ್ನು ಬದಲಿಸದೇ, ಕಾಡಿಗೆ ಹೋಗಬೇಕೆಂಬುದನ್ನೇ ದೃಢಪಡಿಸಿದ ಮುಖಭಾವದಿಂದ ವಿರಾಜಿಸಿದನು.

ಕೌಸಲ್ಯಾದೇವಿಯು ಶೋಕಾಧಿಕ್ಯದಿಂದಾಗಿ ಮೈಮೇಲೆ ಪ್ರಜ್ಞೆಯಿಲ್ಲ ದವಳಂತೆಯೇ ಕಾಣುತ್ತಿದ್ದಳು. ಲಕ್ಷ್ಮಣನಾದರೂ ಕೋಪಾಧಿಕ್ಯದಿಂದ ಪರಿತಪಿಸುತ್ತಿದ್ದನು. ಧರ್ಮದೇವತೆಯ ಮಡಿಲಿನಲ್ಲಿ ಸ್ಥಿರನಾಗಿದ್ದ ಶ್ರೀರಾಮನು ಧರ್ಮಾನುಗುಣವಾದ ಈ ಮಾತುಗಳನ್ನು ಹೇಳಿದನು. ಅಂತಹ ಸಮಯದಲ್ಲಿ ಕೌಸಲ್ಯಾ-ಲಕ್ಷ್ಮಣರಿಗೆ ಸಮಾಧಾನವಾಗುವಂತೆ ಮಾತನಾಡಲು ಶ್ರೀರಾಮನೊಬ್ಬನೇ ಸಮರ್ಥನಾಗಿದ್ದನು.

"ಲಕ್ಷ್ಮಣ! ನನ್ನ ವಿಷಯದಲ್ಲಿ ನಿನಗಿರುವ ಭಕ್ತಿಯನ್ನೂ ಮತ್ತು ನಿನ್ನಲ್ಲಿರುವ ಪರಾಕ್ರಮವನ್ನೂ ನಾನು ತಿಳಿದಿರುವೆನು ಮತ್ತು ಅನುದಿನವೂ

ನಾನಿದನ್ನು ನೋಡುತ್ತಲೂ ಇರುವೆನು. ಆದರೆ ನನ್ನ ಅಭಿಪ್ರಾಯವೇ ನೆಂಬುದನ್ನು ಚೆನ್ನಾಗಿ ಪರಿಶೀಲಿಸದೇ ತಾಯಿಯೊಡನೆ ನೀನೂ ನನ್ನನ್ನು ಬಹಳವಾಗಿ ಪೀಡಿಸುತ್ತಿರುವೆ. ಇದರಿಂದ ನನಗೆ ಬಹಳ ದುಃಖವಾಗಿದೆ.

ಧರ್ಮಾರ್ಥಕಾಮಾಃ ಖಲು ತಾತ ಲೋಕೇ
ಸಮೀಕ್ಷಿತಾ ಧರ್ಮಫಲೋದಯೇಷು ।
ಯೇ ತತ್ರ ಸರ್ವೇ ಸ್ಯುರಸಂಶಯಂ ಮೇ
ಭಾರ್ಯೇವ ವಶ್ಯಾಭಿಮತಾ ಸಪುತ್ರಾ ॥೫೮॥

ಲಕ್ಷ್ಮಣ! ಧರ್ಮದ ಅಥವಾ ಧರ್ಮಾಚರಣೆಯ ಫಲದಿಂದ ಏನೇನು ಪ್ರಾಪ್ತವಾಗುವುದೆಂಬ ವಿಷಯದಲ್ಲಿ ಹಿಂದೆ (ಮನ್ವಾದಿಗಳ ಕಾಲದಲ್ಲಿ) ವಿವೇಚನೆಯು ನಡೆದಾಗ ಧರ್ಮಫಲದಿಂದ ಅರ್ಥವೂ—ಅರ್ಥದ ಸಹಾಯ ದಿಂದ ಕಾಮವೂ ಜೀವಲೋಕದಲ್ಲಿ ಪ್ರಾಪ್ತವಾಗುವುದೆಂಬ ನಿರ್ಧಾರ ವಾಯಿತು. ಆ ನಿರ್ಧಾರದ ಪ್ರಕಾರ ಧರ್ಮವಿದ್ದೆಡೆಯಲ್ಲಿ ಅಥವಾ ಧರ್ಮ ಮಾರ್ಗವನ್ನು ಅನುಸರಿಸಿದಲ್ಲಿ ಧರ್ಮಾರ್ಥ-ಕಾಮಗಳೆಂಬ ಮೂರು ಪುರು ಷಾರ್ಥಗಳೂ ಸಿದ್ಧವಾಗುವುದೆಂಬ ವಿಷಯದಲ್ಲಿ ನನಗೆ ಸ್ವಲ್ಪವಾದರೂ ಸಂಶಯವಿಲ್ಲ. ವಶ್ಯಳೂ[1], ಅಭಿಮತಳೂ[2], ಪುತ್ರವಂತಳೂ[3] ಆಗಿರುವ ಭಾರ್ಯೆಯಂತೆ ಧರ್ಮವು ಮೂರು ಪುರುಷಾರ್ಥಗಳಿಂದ ಯುಕ್ತವಾಗಿದೆ. ಅರ್ಥ-ಕಾಮ-ಮೋಕ್ಷಗಳೆಂಬ ಈ ಮೂರು ಪುರುಷಾರ್ಥಗಳೂ ಧರ್ಮ ದಿಂದ ಸಿದ್ಧಿಸುವುವು.[4]

---

[1]ವಶ್ಯಾ = ವಿಧೇಯಳಾಗಿರುವವಳು (ಅರ್ಥರೂಪಳು). [2] ಅಭಿಮತಾ = ರತಿಕ್ರಿಯೆ ಯಲ್ಲಿ ಗಂಡನ ಮನೋನುವರ್ತಿಯಾಗಿರುವವಳು (ಕಾಮರೂಪಳು). [3] ಸಪುತ್ರಾ = ಪುತ್ರಪ್ರಾಪ್ತಿಯಿಂದ ಪುನ್ನಾಮನರಕವನ್ನು ಹೋಗಲಾಡಿಸಿ ಸದ್ಗತಿಗೆ ಮಾರ್ಗವ ನ್ನುಂಟುಮಾಡತಕ್ಕವಳು. (ಮೋಕ್ಷರೂಪಳು.)

[4]ಸತ್ಕುಲಪ್ರಸೂತೆಯಾದ ವಧುವನ್ನು ವಿಧಿಪೂರ್ವಕವಾಗಿ ವಿವಾಹಮಾಡಿಕೊಂಡ ನಂತರ ಭಾರ್ಯೆಯಾಗಿ ತ್ರಿಗುಣವಿಶಿಷ್ಟಳಾಗಿರುವಂತೆ, ಋಷಿ-ಮಹರ್ಷಿಗಳಿಂದ ಪ್ರೋಕ್ತವಾದ ಧರ್ಮವನ್ನವಲಂಬಿಸಿದರೆ ಅದರ ಫಲವಾಗಿ ಧರ್ಮಾರ್ಥ-ಕಾಮಗಳು ಸ್ವಾಭಾವಿಕವಾಗಿಯೇ ಸಿದ್ಧಿಸುವುವು. ಭಾರ್ಯೆಯಲ್ಲಿ ವಶ್ಯತ್ವ, ಅಭಿಮತ್ವ ಮತ್ತು ಸುಪುತ್ರತ್ವಗಳು ನಿಯತವಾಗಿರುವಂತೆ—ಧರ್ಮದಲ್ಲಿ ಅರ್ಥ-ಕಾಮ-ಮೋಕ್ಷಗಳೂ ನಿಯತ

ಯಸ್ಮಿಂಸ್ತು ಸರ್ವೇ ಸ್ಯುರಸಂನಿವಿಷ್ಟಾ
ಧರ್ಮೋ ಯತಃ ಸ್ಯಾತ್ತದುಪಕ್ರಮೇತ ।
ದ್ವೇಷ್ಯೋ ಭವತ್ಯರ್ಥಪರೋ ಹಿ ಲೋಕೇ
ಕಾಮಾತ್ಮತಾ ಖಲ್ವಪಿ ನ ಪ್ರಶಸ್ತಾ ॥೫೮॥

ಯಾವ ಕಾರ್ಯದಲ್ಲಿ ಧರ್ಮಮೂಲವಾದ ಅರ್ಥ-ಕಾಮಗಳ ಪ್ರಾಪ್ತಿಯಾಗುವುದಿಲ್ಲವೋ–ಅಂತಹ ಕಾರ್ಯವನ್ನು ಮಾಡಲೇಬಾರದು. ತಾತ್ಕಾಲಿಕವಾಗಿ ಅರ್ಥ-ಕಾಮಗಳ ಪ್ರಯೋಜನವು ಕಂಡುಬರದಿದ್ದರೂ ಯಾವ ಕಾರ್ಯವು ಧರ್ಮಪ್ರತಿಪಾದಕವಾಗಿರುವುದೋ–ಅಂತಹ ಕಾರ್ಯ ವನ್ನು ಆರಂಭಿಸಬೇಕು. ಧರ್ಮಮಾರ್ಗವನ್ನು ದೂರೀಕರಿಸಿ ಕೇವಲ ಅರ್ಥ ಪರನಾಗಿ ಕಾರ್ಯಮಾಡಿದಲ್ಲಿ ಅಂತಹವನನ್ನು ಜನರು ದ್ವೇಷಿಸುತ್ತಾರೆ. ಮಾನವನು ಕೇವಲ ಕಾಮಾತ್ಮನಾಗಿರುವುದಂತೂ ಲೋಕದಲ್ಲಿ ಅತಿನಿಂದ್ಯ ವಾದುದು.

ಗುರುಶ್ಚ ರಾಜಾ ಚ ಪಿತಾ ಚ ವೃದ್ಧಃ
ಕ್ರೋಧಾತ್ಪ್ರಹರ್ಷಾದ್ಯದಿ ವಾಪಿ ಕಾಮಾತ್ ।
ಯದ್ವ್ಯಾದಿಶೇತ್ಕಾರ್ಯಮವೇಕ್ಷ್ಯ ಧರ್ಮಂ
ಕಸ್ತಂ ನ ಕುರ್ಯಾದನೃಶಂಸವೃತ್ತಿಃ ॥೫೯॥

ನಮ್ಮ ತಂದೆಯು ಉಪನಯನಕಾಲದಲ್ಲಿ ಬ್ರಹ್ಮೋಪದೇಶವನ್ನು ಮಾಡಿದ ಗುರುವಾಗಿದ್ದಾನೆ. ನಮ್ಮೆಲ್ಲರಿಗೂ ಆಜ್ಞೆಮಾಡಲು ಅಧಿಕಾರವಿರತಕ್ಕ ರಾಜನೂ ಆಗಿದ್ದಾನೆ. ನಮ್ಮ ಜನ್ಮದಾತನಾದ ತಂದೆಯಾಗಿದ್ದಾನೆ. ಮೇಲಾಗಿ ವೃದ್ಧನೂ ಆಗಿದ್ದಾನೆ. ಅವನು ಕಾಮಾಭಿಭೂತನಾಗಿರಲಿ ; ಕ್ರೋಧಾಭಿ ಭೂತನಾಗಿರಲಿ ; ಸ್ವಸಂತೋಷದಿಂದಲೇ ಆಜ್ಞೆಮಾಡಿರಲಿ–ಅವನು ಯಾವ ಕಾರ್ಯವನ್ನು ಮಾಡಲು ಆಜ್ಞಾಪಿಸಿರುವನೋ–ಅಂತಹ ಕಾರ್ಯವನ್ನು ಧರ್ಮವನ್ನವಲಂಬಿಸಿರುವ, ಘಾತುಕನಲ್ಲದ ಯಾವನು ತಾನೇ ಮಾಡ ದಿರುವನು?

ವಾಗಿವೆ. ಆದುದರಿಂದ ಧರ್ಮಮಾರ್ಗವನ್ನು ಬಿಟ್ಟು ಖಂಡಿತವಾಗಿಯೂ ಚಲಿಸಲಾರೆನೆಂಬ ದೃಢನಿರ್ಧಾರವನ್ನು ಶ್ರೀರಾಮನು ಈ ಶ್ಲೋಕದಲ್ಲಿ ಸ್ಪಷ್ಟಪಡಿಸಿದ್ದಾನೆ.

ಆದುದರಿಂದ ನಮ್ಮ ತಂದೆಯು ಕೈಕೇಯಿಗಿತ್ತಿರುವ–'ರಾಮನ ವನವಾಸ–ಭರತಾಭಿಷೇಚನಗಳೆಂಬ'–ಎರಡು ಪ್ರತಿಜ್ಞಾವಚನಗಳನ್ನು ನಾನು ಯಥಾವತ್ತಾಗಿ ನಡೆಸಿಕೊಡದಿರಲಾರೆನು. ನನಗೂ ಮತ್ತು ಭರತನಿಗೂ (ನಿನಗೂ) ಕಾರ್ಯಗಳನ್ನು ನಿಯೋಜಿಸುವುದರಲ್ಲಿ ತಂದೆಯೇ ನಮಗೆ ಗುರುವೂ ಆಗಿದ್ದಾನೆ. ತಾಯಿಯಾದ ಕೌಸಲ್ಯಾದೇವಿಗೂ ಪತಿಯಾಗಿರುವ ಅವನೇ ಪರಮಾಶ್ರಯನು. ಪತಿಯನ್ನಾಶ್ರಯಿಸಿರುವುದೇ ಪತ್ನಿಯ ಶ್ರೇಷ್ಠವಾದ ಸನಾತನಧರ್ಮವಾಗಿದೆ.

ಧರ್ಮಿಷ್ಠನಾದ ರಾಜನು ಜೀವಿಸಿರುವಾಗ–ಅದರಲ್ಲಿಯೂ ವಿಶೇಷ ವಾಗಿ ರಾಜನು ತನ್ನ ಧರ್ಮವಾದ ಕ್ಷತ್ರಿಯಧರ್ಮದಲ್ಲಿ ನಿರತನಾಗಿರು ವಾಗ–ಕೌಸಲ್ಯಾದೇವಿಯು ದಿಕ್ಕುಗೆಟ್ಟ ಒಬ್ಬ ವಿಧವೆಯಂತೆ–ನನ್ನೊಡನೆ ಹೇಗೆ ತಾನೇ ಬರುವಳು?

ಅಮ್ಮ! ಪಿತೃವಾಕ್ಯಪರಿಪಾಲನೆಗಾಗಿ ಅರಣ್ಯಕ್ಕೆ ಹೊರಡುತ್ತಿರುವ ನನಗೆ ಅನುಮತಿಯನ್ನು ಕೊಡು. ಅರಣ್ಯದಲ್ಲಿ ಹದಿನಾಲ್ಕು ವರ್ಷಗಳನ್ನು ಮುಗಿಸಿ ಸುಖವಾಗಿ ಹಿಂದಿರುಗುವಂತೆ ನಮಗೆ ಮಂಗಳಾಶಾಸನವನ್ನು ಮಾಡು. ಮೊಮ್ಮಕ್ಕಳಾದ ಅಷ್ಟಕಾದಿಗಳ ಸತ್ಯವಚನದ ಪ್ರಭಾವದಿಂದ ಯಯಾತಿಯು ಪುನಃ ಸ್ವರ್ಗಕ್ಕೆ ಹೋದಂತೆ–ಅದೇ ಸತ್ಯದ ಅವಲಂಬನೆಯಿಂದಲೇ ನಾನೂ ಕೂಡ ವನವಾಸವನ್ನು ಮುಗಿಸಿ ಸುಖವಾಗಿ ಹಿಂದಿರುಗುವೆನು.*

---

* ಕುರುಷ್ವ ನಃ ಸ್ವಸ್ತ್ಯಯನಾನಿ ದೇವಿ! ಎಂಬುದು ಈ ಶ್ಲೋಕದ ಎರಡನೆಯ ಪಾದ. ಇಲ್ಲಿ ಶ್ರೀರಾಮನು, ನಃ = ನಮಗೆ ಎಂದು ಬಹುವಚನವನ್ನು ಹೇಳಿದ್ದಾನೆ. ಈ ಹಿಂದೆ ಲಕ್ಷ್ಮಣನು–'ಶ್ರೀರಾಮನು ಅರಣ್ಯಕ್ಕೆ ಹೋದರೂ ನಾನು ಮುಂದಾಗಿ ಅಲ್ಲಿಗೂ ಹೋಗಿರುತ್ತೇನೆ. ದೀಪ್ತಮಗ್ನಿಮರಣ್ಯಂ ವಾ... ಪ್ರವಿಷ್ಟಂ ತತ್ರ ಮಾಂ ದೇವಿ....' (ಅಯೋಧ್ಯಾ-ಸರ್ಗ ೨೧-ಶ್ಲೋಕ ೧೭)–ಎಂದು ಹೇಳಿರುವುದರಿಂದ ಲಕ್ಷ್ಮಣನನ್ನು ಸೇರಿಸಿಕೊಂಡು ದ್ವಿವಚನವನ್ನು ಹೇಳಬಹುದಾಗಿದ್ದಿತು. ಸೀತೆಯನ್ನು ಸೇರಿಸಿಕೊಂಡು ಹೇಳಲು ಈ ಸಂದರ್ಭದಲ್ಲಿ ಅವಕಾಶವಿಲ್ಲ. ೫೧ನೆಯ ಶ್ಲೋಕದಿಂದ ಮುಂದಿರುವ ಶ್ಲೋಕಗಳು ಸಾಮಾನ್ಯವಾಗಿ ಹಿಂದಿನ ಶ್ಲೋಕಗಳ ಪುನರುಕ್ತಿಗಳೇ ಆಗಿವೆ. ಈ ಶ್ಲೋಕದ ಭಾವಾರ್ಥವೂ ಇದೇ ಸರ್ಗದ ೪೬-೪೭ನೆಯ ಶ್ಲೋಕಗಳಲ್ಲಿಯೇ ಇದೆ. ಅಲ್ಲಿ ಶ್ರೀರಾಮನು ಸ್ವಸ್ತ್ಯಯನಾನಿ ಮೇ–ಎಂದು ಏಕವಚನವನ್ನೇ ಹೇಳಿದ್ದಾನೆ.

ಯಶೋ ಹ್ಯಹಂ ಕೇವಲರಾಜ್ಯ ಕಾರಣಾ-
ನ್ನ ಪೃಷ್ಠತಃ ಕರ್ತುಮಲಂ ಮಹೋದಯಮ್ ।
ಅದೀರ್ಘಕಾಲೇ ನ ತು ದೇವಿ ಜೀವಿತೇ
ವೃಣೇಽವರಾಮದ್ಯ ಮಹೀಮಧರ್ಮತಃ ॥೬೩॥

ದೇವಿ! ರಾಜ್ಯವನ್ನು ಪಡೆಯುವ ಒಂದು ಕಾರಣದಿಂದಾಗಿ ಸುಯೋಗದಿಂದ ಲಭಿಸಿರುವ, ಮಹಾಫಲವನ್ನು ಕೊಡುವ ಯಶಸ್ಸನ್ನು ಕಳೆದುಕೊಳ್ಳಲು ನಾನು ಬಯಸುವುದಿಲ್ಲ. ಮೇಲಾಗಿ ಮಾನವನ ಜೀವನವು ಕ್ಷಣಿಕವಾದುದು. ಅಶಾಶ್ವತವಾದುದು. ಆದುದರಿಂದ ನಿಕೃಷ್ಟವಾದ ಈ ಸಾಮ್ರಾಜ್ಯವನ್ನು ಅಧರ್ಮದ ಮೂಲಕವಾಗಿ ಖಂಡಿತವಾಗಿಯೂ ನಾನು ಪಡೆದುಕೊಳ್ಳುವುದಿಲ್ಲ."

ಪುರುಷಶ್ರೇಷ್ಠನಾದ ಶ್ರೀರಾಮನು ಇಂತಹ ಧರ್ಮಮೂಲವಾದ ಮಾತುಗಳಿಂದ ತಾಯಿಯನ್ನು ಪ್ರಸನ್ನಗೊಳಿಸುತ್ತಾ ದಂಡಕಾರಣ್ಯಕ್ಕೆ ಹೋಗಲೇಬೇಕೆಂಬುದಾಗಿ ಧೈರ್ಯದಿಂದ* ನಿಶ್ಚಯಮಾಡಿ, ಲಕ್ಷ್ಮಣನಿಗೆ ಸಮ್ಮತವಾದ ಧರ್ಮರಹಸ್ಯವನ್ನು ಉಪದೇಶಿಸಿ ತಾಯಿಯನ್ನು ಮನಸ್ಸಿನಲ್ಲಿಯೇ ಪ್ರದಕ್ಷಿಣೆಮಾಡಿದನು.

ಎ೧ನೆಯ ಸರ್ಗವು ಮುಗಿಯಿತು.

ಆದುದರಿಂದ ಪುನರುಕ್ತಿಗಳಿರುವ ಈ ಶ್ಲೋಕಗಳು ಪ್ರಕ್ಷಿಪ್ತವಾಗಿರಬಹುದು ಅಥವಾ **ಕುರುಷ್ವ** ನಃ ಎಂಬುದಕ್ಕೆ ಬದಲಾಗಿ **ಕುರುಷ್ವ ಮೇ** ಎಂದಾದರೂ ಇರಬಹುದು. ಪುನರುಕ್ತಿಗಳಿರುವ ಈ ಕೆಲವು ಶ್ಲೋಕಗಳು ಬರೋಡ ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನವರ ಪುಸ್ತಕದಲ್ಲಿ ಇಲ್ಲ.

* **ಪರಾಕ್ರಮಾತ್**–ಶಬ್ದಕ್ಕೆ ಒಬ್ಬೊಬ್ಬರು ಒಂದೊಂದು ವಿಧವಾಗಿ ವ್ಯಾಖ್ಯಾನ ಮಾಡಿರುತ್ತಾರೆ. ೧) **ಪರಾಕ್ರಮಾತ್** =ಧೈರ್ಯಾತ್, ಧೈರ್ಯದಿಂದ. ೨) **ಪರೇಷಾಂ** = **ಮುನಿಶತ್ರೂಣಾಂ**, ಋಷಿ-ಮಹರ್ಷಿಗಳ ಶತ್ರುಗಳ **ಆಕ್ರಮಃ**=ವಿಧ್ವಂಸನಮ್ ಸಂಹಾರವು. **ತಸ್ಮಾತ್**–ಇದನ್ನೇ ಕಾರಣವಾಗಿಟ್ಟುಕೊಂಡು.... ೩) **ಪರಾಕ್ರಮಾತ್** = **ರಾಮ ತಸ್ಮಾದಿತಃ ಶೀಘ್ರಂ ವನಂ ಗನ್ತುಂ ತ್ವಮರ್ಹಸಿ ಇತ್ಯುಕ್ತ ಕೈಕೇಯೀ ಪ್ರೇರಣಾತ್** = **ರಾಮ!** ಆದಕಾರಣದಿಂದ ನೀನು ಅತಿಶೀಘ್ರದಲ್ಲಿಯೇ ಈ ಅಯೋಧ್ಯಾಪಟ್ಟಣದಿಂದ ಅರಣ್ಯಕ್ಕೆ ಹೋಗಲು ಅರ್ಹನಾಗಿರುವೆ. ಎಂಬ ಕೈಕೇಯಿಯ ಪ್ರೇರಣೆಯಿಂದ (**ಪರ** = ಇತರರ (ಕೈಕೇಯಿಯ) **ಆಕ್ರಮಃ**-= ಪ್ರೇರಣೆ ಎಂದು ಅರ್ಥಮಾಡಲಾಗಿದೆ.) ಇಲ್ಲಿ **ಪರಾಕ್ರಮಾತ್**

ಅಯೋಧ್ಯಾಕಾಂಡ ೨೨ನೆಯ ಸರ್ಗ

ಶ್ರೀರಾಮನು ಲಕ್ಷ್ಮಣನನ್ನು ಸಮಾಧಾನಗೊಳಿಸುತ್ತಾ ತನ್ನ ವನವಾಸಕ್ಕೆ ದೈವವೇ ಕಾರಣವೆಂದು ಪ್ರತಿಪಾದಿಸಿದುದು : ಅಭಿಷೇಕದ ಸಾಮಗ್ರಿಗಳನ್ನು ಹಿಂದಕ್ಕೆ ತೆಗೆದುಕೊಂಡು ಹೋಗಲು ಆದೇಶನೀಡಿದುದು

ಅಥ ತಂ ವ್ಯಥಯಾ ದೀನಂ ಸವಿಶೇಷಮಮರ್ಷಿತಮ್ ।
ಶ್ವಸನ್ತಮಿವ ನಾಗೇನ್ದ್ರಂ ರೋಷವಿಸ್ಫಾರಿತೇಕ್ಷಣಮ್ ॥೧॥

ಬಳಿಕ ಶ್ರೀರಾಮನ ನಿರ್ಗಮನದ ವ್ಯಥೆಯಿಂದ ಬಹಳ ದೀನನಾಗಿದ್ದ, ರಾಮನಿಗೆ ಪ್ರಿಯರಾದವರಲ್ಲಿ ವಿಶೇಷಸ್ಥಾನವನ್ನು ಪಡೆದಿದ್ದ, ಕೋಪಗೊಂಡ ಸರ್ಪದಂತೆ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದ, ಕೋಪದಿಂದ ಕಣ್ಣುಗಳನ್ನು ವಿಶಾಲವಾಗಿ ತೆರೆದಿದ್ದ, ಸುಹೃದನಾದ, ಪ್ರೀತಿಯ ತಮ್ಮನಾದ ಸೌಮಿತ್ರಿಯ ಬಳಿಗೆ ಹೋಗಿ ದೃಢಚಿತ್ತನಾದ ಶ್ರೀರಾಮನು ಸತ್ತ್ವಗುಣವನ್ನೇ ಧೈರ್ಯದಿಂದ ಅವಲಂಬಿಸುತ್ತಾ ಇಂತೆಂದನು :

"ಲಕ್ಷ್ಮಣ! ತಂದೆಯ ಮೇಲಿನ ಕೋಪವನ್ನೂ, ನನ್ನ ವನವಾಸ

ಎಂಬುದಕ್ಕೆ ಧೈರ್ಯಾತ್ ಎಂಬ ಅರ್ಥವೇ ಯುಕ್ತವೆಂಬುದು ನಮ್ಮ ಅಭಿಪ್ರಾಯವಾಗಿದೆ. ರಾಕ್ಷಸರಿಂದ ನಿಬಿಡವಾಗಿರುವ ದಂಡಕಾರಣ್ಯಕ್ಕೆ ಹೋಗಬೇಕಾದರೂ ಧೈರ್ಯವು ಬೇಕು. ಮೇಲಾಗಿ ತಾಯಿಯೇ ಬಹಳವಾಗಿ ಗೋಳಿಡುತ್ತಿರುವಾಗ, ಲಕ್ಷ್ಮಣನೂ ರಾಮನ ಪ್ರಯಾಣಕ್ಕೆ ತಡೆಮಾಡುತ್ತಿರುವಾಗ, ಪ್ರಜೆಗಳೆಲ್ಲರೂ ರಾಮನೇ ರಾಜನಾಗಬೇಕೆಂದು ಹಂಬಲಿಸುತ್ತಿರುವಾಗ–ವೃದ್ಧನಾದ ತಂದೆಯ ಮಾತಿನ ಪರಿಪಾಲನಾಧರ್ಮದ ಸಲುವಾಗಿ ಕಾಡಿಗೆ ಹೋಗುವ ನಿರ್ಧಾರಮಾಡಲು ಧೈರ್ಯವು ಬೇಕು. ಚಂಚಲಮನಸ್ಸುಳ್ಳವನಿಗೆ, ಸ್ಥೈರ್ಯವಿಲ್ಲದವನಿಗೆ ಈ ಧೈರ್ಯವು ಬರಲಾರದು. ಈ ಸಮಯದಲ್ಲಿ ಲಕ್ಷ್ಮಣನ ಪರಾಕ್ರಮದ ಬೆಂಬಲದಿಂದ ತಂದೆಯನ್ನು ಬದಿಗೊತ್ತಿ ಸಿಂಹಾಸನವನ್ನು ಆಕ್ರಮಿಸುವುದು ಪರಾಕ್ರಮವಲ್ಲ. ಹಲವಾರು ಎಡರು-ತೊಡರುಗಳಿದ್ದರೂ ದೇವರೂಪಿಣಿಯಾದ ತಾಯಿಯೇ ಅರಣ್ಯಕ್ಕೆ ಹೋಗುವುದನ್ನು ನಿರೋಧಿಸುತ್ತಿದ್ದರೂ–ರಾಮನು ಧರ್ಮ ಸಾಧನೆಗಾಗಿ, ಧರ್ಮರಕ್ಷಣೆಗಾಗಿ ದಂಡಕಾರಣ್ಯಕ್ಕೆ ಹೋಗುವುದು ಸರಿಯೆಂದು ಇಚ್ಛೆಪಟ್ಟಿದ್ದು ನಿಶ್ಚಯವಾಗಿಯೂ ಪರಾಕ್ರಮವೇ ಸರಿ. ಹೇಡಿಯಾದವನಿಗೆ ಇಂತಹ ಸಂದಿಗ್ಧಸ್ಥಿತಿಯಲ್ಲಿ ಧರ್ಮರಕ್ಷಣೆಯಾಗಲೀ ಧರ್ಮವಿಹಿತಮಾರ್ಗದ ಪ್ರವರ್ತನೆಯಾಗಲೀ ಶಕ್ಯವಲ್ಲ.

ದಿಂದ ಉಂಟಾಗಿರುವ ದುಃಖವನ್ನೂ ಪರಿತ್ಯಜಿಸು. ಧೈರ್ಯವನ್ನು ಹೊಂದು. ಪಟ್ಟಾಭಿಷೇಕಕ್ಕೆ ಸಿದ್ಧನಾಗಿದ್ದವನು ಅರಣ್ಯಕ್ಕೆ ಹೋಗುವುದು ಅವಮಾನವೆಂದು ಭಾವಿಸಬೇಡ. ಅರಣ್ಯಕ್ಕೆ ಹೋಗುವುದೂ ಒಳ್ಳೆಯದಕ್ಕಾಗಿಯೇ ಎಂದು ಸಂತೋಷಿಸು. ಇಲ್ಲಿ ನನ್ನ ಅಭಿಷೇಕದ ಸಲುವಾಗಿ ಯಾವ ಕೆಲವು ಸಾಮಗ್ರಿಗಳು ಸಿದ್ಧವಾಗಿವೆಯೋ–ಅವೆಲ್ಲವನ್ನೂ ಶೀಘ್ರವಾಗಿ ವಿಸರ್ಜಿಸು. ಸತ್ಯಪಾಲನೆಗೆ ವಿಘಾತವುಂಟಾಗದ ರೀತಿಯಲ್ಲಿ ಮುಂದಿನ ಕಾರ್ಯವನ್ನು ಮಾಡು.

ಸೌಮಿತ್ರೇ ಯೋಽಭಿಷೇಕಾರ್ಥೇ ಮಮ ಸಂಭಾರಸಂಭ್ರಮಃ ।
ಅಭಿಷೇಕನಿವೃತ್ಯರ್ಥೇ ಸೋಽಸ್ತು ಸಂಭಾರಸಂಭ್ರಮಃ ॥೫॥

ಸುಮಿತ್ರಾನಂದನನೇ! ನನ್ನ ಯೌವರಾಜ್ಯಾಭಿಷೇಕಕ್ಕಾಗಿ ನೀನು ಸಡಗರದಿಂದ ಅಭಿಷೇಕೋಚಿತವಾದ ಸಾಮಗ್ರಿಗಳನ್ನು ಸಿದ್ಧಗೊಳಿಸಿದಂತೆ ಈಗ ಅಭಿಷೇಕದ ನಿವೃತ್ತಿಗಾಗಿ ಅಷ್ಟೇ ಸಡಗರದಿಂದ ಸಾಮಗ್ರಿಗಳನ್ನು ಸಿದ್ಧಗೊಳಿಸು. (ಸಾಮ್ರಾಜ್ಯಪಟ್ಟಾಭಿಷೇಕಕ್ಕಾಗಲೀ ವನವಾಸಕ್ಕಾಗಲೀ ತಾರತಮ್ಯವನ್ನೆಣಿಸಬೇಡ.)

ಯಾವಳ ಮನಸ್ಸು ನನಗೆ ಪಟ್ಟಾಭಿಷೇಕವಾಗಿಬಿಡುವುದೆಂದು ಪರಿತಪಿಸುತ್ತಿದ್ದಿತೋ–ಆ ನಮ್ಮ ತಾಯಿಯಾದ ಕೈಕೇಯಿಯು ನನ್ನ ವಿಷಯದಲ್ಲಿ ಸಂಶಯಪಡದಂತೆ ಕಾರ್ಯಮಾಡು. ಅವಳ ಮನಸ್ಸಿನಲ್ಲಿ ಹುಟ್ಟಬಹುದಾದ ಶಂಕಾರೂಪವಾದ ದುಃಖವನ್ನು ನಾನು ಒಂದು ಮುಹೂರ್ತ ಕಾಲವಾದರೂ ಉಪೇಕ್ಷಿಸಲು ಬಯಸುವುದಿಲ್ಲ. ನನ್ನ ತಾಯಂದಿರಿಗೆ ಮತ್ತು ತಂದೆಗೆ ಬುದ್ಧಿಪೂರ್ವಕವಾಗಿಯೇ ಆಗಲೀ, ಅಜ್ಞಾನದಿಂದಲೇ ಆಗಲೀ–ಅತ್ಯಲ್ಪವಾದ ಅಪ್ರಿಯಕಾರ್ಯವನ್ನಾದರೂ ಯಾವಾಗಲಾದರೂ ಮಾಡಿದ ಸ್ಮರಣೆಯು ನನಗಿರುವುದಿಲ್ಲ.

ನಮ್ಮ ತಂದೆಯು ಸತ್ಯಸ್ವರೂಪನು. ಸತ್ಯಪ್ರತಿಜ್ಞನು. ಸತ್ಯವೇ ಪರಾಕ್ರಮವಾಗಿರುವವನು. ಆಪತ್ಕಾಲದಲ್ಲಿಯೂ ಸತ್ಯವನ್ನು ತೊರೆಯದವನು. ಅಂತಹವನಿಂದು, ನಮ್ಮ ತಾಯಿಯಾದ ಕೈಕೇಯಿಗಿತ್ತಿರುವ ಪ್ರಮಾಣವಚನವು ಫಲಿತವಾಗದು–ಎಂದು ಭಾವಿಸಿ, ಸತ್ಯಭ್ರಷ್ಟನಾಗುವುದರಿಂದ ಪರಲೋಕಗಳು ತನಗೆ ಸಿಕ್ಕಲಾರವೆಂದು ಭಯಪಟ್ಟಿದ್ದಾನೆ. ಆ

ಭಯವನ್ನು ದೂರಮಾಡುವುದು ನಮ್ಮ ಕರ್ತವ್ಯವಾಗಿರುವುದು. ನಾನು ಕೈಕೇಯಿಯ ನಿರ್ದೇಶದಂತೆ ವನವಾಸಕ್ಕೆ ಹೊರಟೆನೆಂಬ ವಾರ್ತೆಯನ್ನು ಕೇಳಿ ನಮ್ಮ ರಾಜನು ತನಗುಂಟಾಗಿರುವ ಭಯವನ್ನು ತೊರೆಯಲಿ. ನಿರ್ಭೀತ ನಾಗಲಿ. ತಾನಿತ್ತ ಸತ್ಯವಚನವು ಪರಿಪಾಲಿಸಲ್ಪಟ್ಟಿತೆಂದು ಸಮಾಧಾನವನ್ನು ಹೊಂದಲಿ.

ಆರಂಭಿಸಿರುವ ಪಟ್ಟಾಭಿಷೇಕಸಮಾರಂಭವು ಕೂಡಲೇ ನಿಲ್ಲದಿದ್ದರೆ–ನಾನೂ ಕೂಡ ಚೀರಾಜಿನಗಳನ್ನು ಧರಿಸಿ ವನವಾಸಕ್ಕೆ ಹೊರಡದಿದ್ದರೆ–ನಮ್ಮ ತಂದೆಯು ತಾನು ಕೈಕೇಯಿಗಿತ್ತ ಸತ್ಯವಚನವು ಫಲಿತವಾಗಲಿಲ್ಲವೆಂದು ಮನಸ್ಸಿನಲ್ಲಿಯೇ ಪರಿತಪಿಸುತ್ತಾನೆ. ಅವನ ಮನಸ್ಸಿನ ಪರಿತಾಪವು ನನಗೂ ಪರಿತಾಪವನ್ನುಂಟುಮಾಡುತ್ತದೆ. (ತಂದೆಯನ್ನು ಸತ್ಯವಂತನನ್ನಾಗಿ ಮಾಡ ಲಾಗದ ನನ್ನಂತಹ ಮಗನಿದ್ದೇನು ಪ್ರಯೋಜನವೆಂದು ನಾನೂ ಪರಿತಪಿ ಸುತ್ತೇನೆ.) ಈ ಕಾರಣಗಳಿಂದಾಗಿ ಅಭಿಷೇಕಾಂಗವಾಗಿ ಮಾಡುತ್ತಿರುವ ಕರ್ಮಗಳನ್ನು ಈ ಕೂಡಲೇ ನಿಲ್ಲಿಸಿ ಈ ಕ್ಷಣದಲ್ಲಿಯೇ ನಾನು ಅಯೋಧ್ಯಾ ಪಟ್ಟಣದಿಂದ ದಂಡಕಾರಣ್ಯಕ್ಕೆ ಹೊರಟುಹೋಗಲು ಬಯಸಿದ್ದೇನೆ. ನನ್ನನ್ನು ಅರಣ್ಯಕ್ಕೆ ಕಳುಹಿಸಿದನಂತರ ಕೃತಕೃತ್ಯಳಾಗುವ ಕೈಕೇಯಿಯು ಮಗನಾದ ಭರತನ ಪಟ್ಟಾಭಿಷೇಕವನ್ನು ಯಾವ ವಿಧವಾದ ವ್ಯಾಕುಲತೆಯೂ ಇಲ್ಲದೇ ನೆರವೇರಿಸುವಳು. ನಾನು ನಾರುಮಡಿಯನ್ನುಟ್ಟು ಕೃಷ್ಣಾಜಿನವನ್ನು ಧರಿಸಿ ಜಟಾಮಂಡಲಧರನಾಗಿ ಅರಣ್ಯಕ್ಕೆ ಹೊರಟುಹೋದನಂತರವೇ ಕೈಕೇಯಿಗೆ ಮಾನಸಿಕವಾದ ಸುಖವು ಲಭಿಸುತ್ತದೆ.

ಬುದ್ಧಿಃ ಪ್ರಣೀತಾ ಯೇನೇಯಂ ಮನಶ್ಚ ಸುಸಮಾಹಿತಮ್ ।
ತಂ ತು ನಾರ್ಹಾಮಿ ಸಂಕ್ಲೇಷ್ಟುಂ ಪ್ರವ್ರಜಿಷ್ಯಾಮಿ ಮಾ
ಚಿರಮ್ ॥೧೪॥

ಯಾವ ವಿಧಾತನು ನನ್ನನ್ನು ಅರಣ್ಯಕ್ಕೆ ಕಳುಹಿಸುವಂತೆ ಕೈಕೇಯಿಯ ಬುದ್ಧಿಯನ್ನು ಮಂಥರೆಯ ಮೂಲಕ ಸಂಸ್ಕರಿಸಿದನೋ ಮತ್ತು ನನ್ನನ್ನು ಅರಣ್ಯಕ್ಕೆ ಕಳುಹಿಸುವುದರಲ್ಲಿಯೇ ಅವಳ ಮನಸ್ಸನ್ನು ಸುದೃಢಗೊಳಿ ಸಿದನೋ–ಅಂತಹ ವಿಧಾತನನ್ನು (ವಿಧಾತನ ನಿಯಮವನ್ನು) ವ್ಯತ್ಯಸ್ತ

ಗೊಳಿಸಲು ನಾನು ಇಷ್ಟಪಡುವುದಿಲ್ಲ. ಆದುದರಿಂದ ಬಹಳ ಬೇಗ ನಾನು ಕಾಡಿಗೆ ಹೊರಟುಹೋಗುತ್ತೇನೆ.*

ಕೃತಾನ್ತಸ್ತ್ವೇವ ಸೌಮಿತ್ರೇ ದ್ರಷ್ಟವ್ಯೋ ಮತ್ಪ್ರವಾಸನೇ ।
ರಾಜ್ಯಸ್ಯ ಚ ವಿತೀರ್ಣಸ್ಯ ಪುನರೇವ ನಿವರ್ತನೇ ॥೧೫॥

ಲಕ್ಷ್ಮಣ! ರಾಜನು ರಾಜ್ಯವನ್ನು ವಹಿಸಿಕೊಡಲು ನಿಶ್ಚಯಿಸಿದುದೂ, ವಹಿಸಿಕೊಡಬೇಕಾದ ದಿನವೇ ಈ ರಾಜ್ಯದ ಯೌವರಾಜ್ಯಾಧಿಕಾರವು ನನಗಿಲ್ಲದಂತಾದುದೂ, ರಾಜ್ಯವನ್ನು ಪಡೆದುಕೊಳ್ಳುವುದಕ್ಕೆ ಬದಲಾಗಿ ನಾನು ವನವಾಸಮಾಡಬೇಕಾಗಿ ಬಂದುದೂ–ಈ ಎಲ್ಲ ಕಾರ್ಯಗಳಲ್ಲಿಯೂ ವಿಧಿಯ ಕೈವಾಡವನ್ನೇ ನಾವು ಕಾಣಬಹುದಾಗಿದೆ.

ಕೈಕೇಯಿಗಿಂದು ಉಂಟಾಗಿರುವ ತಾರತಮ್ಯಭಾವನೆಯು ವಿಧಿಯಿಂದ ಪ್ರೇರಿತವಾಗದೇ ಇದ್ದಿದ್ದರೆ–ಕೈಕೇಯಿಯ ಬುದ್ಧಿಯು ನನ್ನನ್ನು ವನ ವಾಸಕ್ಕೆ ಕಳುಹಿಸುವುದರ ಮೂಲಕ ಪೀಡಿಸುವುದರಲ್ಲಿ ಹೇಗೆತಾನೇ ಪ್ರವೃತ್ತವಾಗುತ್ತಿದ್ದಿತು? ನನಗೆ ಹೇಗೆ ನನ್ನ ತಾಯಂದಿರಲ್ಲಿ (ಕೌಸಲ್ಯಾ-ಸುಮಿತ್ರಾ-ಕೈಕೇಯಿಯರಲ್ಲಿ) ತಾರತಮ್ಯವಿಲ್ಲವೋ–ಹಾಗೆಯೇ ನನ್ನ ತಾಯಿ ಯಾದ ಕೈಕೇಯಿಗೂ ನನ್ನಲ್ಲಿಯೇ ಆಗಲೀ, ತನ್ನ ಮಗನಾದ ಭರತ ನಲ್ಲಿಯೇ ಆಗಲೀ–ಹಿಂದಿನಿಂದಲೂ ಯಾವ ವಿಧವಾದ ತಾರತಮ್ಯವೂ ಇರಲಿಲ್ಲವೆಂಬುದನ್ನು ನೀನು ಬಲ್ಲೆ. ಕೈಕೇಯಿಗೂ ನನ್ನ ಮೇಲೆ ಎಷ್ಟು ವಾತ್ಸಲ್ಯವಿದ್ದಿತೆಂಬುದನ್ನು ಸಂಪೂರ್ಣವಾಗಿ ಮನಗಂಡಿದ್ದ ನಾವಿಂದು ನನ್ನ ಪಟ್ಟಾಭಿಷೇಕದ ನಿಲುಗಡೆಗಾಗಿ ಅವಳು ತಾಳಿರುವ ಧೋರಣೆ ಗಳಿಂದಲೂ, ನನ್ನನ್ನು ಕಾಡಿಗಟ್ಟಲು ಮಾಡಿರುವ ಯೋಜನೆಗಳಿಂದಲೂ, ಅವಳಾಡುತ್ತಿದ್ದ ಕರ್ಣಕಠೋರವಾದ ಮತ್ತು ಕೆಟ್ಟುದಾದ ಮಾತು ಗಳಿಂದಲೂ–ಈ ಪ್ರಕರಣವು ದೈವಕಲ್ಪಿತವಲ್ಲದೇ ಬೇರೆ ಯಾವುದೂ

---

* ಈ ಶ್ಲೋಕಕ್ಕೆ ಹೀಗೂ ಅರ್ಥಮಾಡಬಹುದಾಗಿದೆ : ಅರಣ್ಯಕ್ಕೆ ಹೋಗಲು ನಾನೇ ನನ್ನ ಬುದ್ಧಿಯನ್ನು ಸಿದ್ಧಗೊಳಿಸಿದೆನು. ಅರಣ್ಯಕ್ಕೆ ಹೋಗುವುದರಲ್ಲಿ ನನ್ನ ಮನಸ್ಸು ಸುದೃಢವಾಗಿದೆ. ಅಂತಹ ಮನಸ್ಸನ್ನು ಕ್ಲೇಶಗೊಳಿಸುವುದು ನನಗೆ ಯೋಗ್ಯವೆನಿಸುವುದಿಲ್ಲ. ಆದುದರಿಂದ ಪ್ರಣೀತಾ ಎಂಬ ಪದಕ್ಕೆ ಸಂಸ್ಕರಿಸಲ್ಪಟ್ಟ, ಸಿದ್ಧಗೊಳಿಸಲ್ಪಟ್ಟ, ರಚಿಸಲ್ಪಟ್ಟ ಎಂಬ ಅರ್ಥಗಳಾಗುತ್ತವೆ.

ಅಲ್ಲವೆಂದು ನಾನು ಸಮರ್ಥಿಸುತ್ತೇನೆ. ಇದು ವಿಧಿವಿಹಿತವೇ ಆಗಿರದಿದ್ದರೆ ಸಾಧುಸ್ವಭಾವದವಳಾದ, ರಾಜಪುತ್ರಿಯಾದ, ರಾಜಪುತ್ರಿಗೆ ಅನುಗುಣವಾದ ಸದ್ಗುಣಗಳನ್ನು ಹೊಂದಿದ್ದ ಕೈಕೇಯಿಯು–ದುಷ್ಟಪ್ರಕೃತಿಯ, ದುಷ್ಕುಲದಲ್ಲಿ ಹುಟ್ಟಿದ, ಸದ್ಗುಣಶೂನ್ಯಳಾದ ಹೆಂಗಸಿನಂತೆ ಪತಿಯ ಸನ್ನಿಧಿಯಲ್ಲಿಯೇ ನನಗೆ ಅನಿಷ್ಟಕರವಾದ ಮಾತುಗಳನ್ನು ಹೇಗೆತಾನೇ ಆಡುತ್ತಿದ್ದಳು?

ಯದಚಿನ್ತ್ಯಂ ತು ತದ್ದೈವಂ ಭೂತೇಷ್ವಪಿ ನ ಹನ್ಯತೇ ।
ವ್ಯಕ್ತಂ ಮಯಿ ಚ ತಸ್ಯಾಂ ಚ ಪತಿತೋ ಹಿ ವಿಪರ್ಯಯಃ ॥೨೦॥

ನಮ್ಮ ಚಿಂತನೆಗೆ ಯಾವುದು ನಿಲುಕುವುದಿಲ್ಲವೋ ಅದೇ ದೈವ. (ವಿಧಿ.) ಪ್ರಾಣಿಗಳ ಅಧಿಷ್ಠಾತೃಗಳಾದ ಬ್ರಹ್ಮಾದಿಗಳಲ್ಲಿಯೂ ವಿಧಿಯು ಪರಾಭವವನ್ನು ಹೊಂದುವುದಿಲ್ಲ. ನನಗೆ ಪ್ರಾಪ್ತವಾಗಿರುವ ವನವಾಸ ಮತ್ತು ಕೈಕೇಯಿಯ ಬುದ್ಧಿಯಲ್ಲಿ ಉಂಟಾಗಿರುವ ವಿಪರ್ಯಾಸ–ಇವುಗಳಿಂದಲೇ ವಿಧಿಯ ಪ್ರಭಾವವು ವ್ಯಕ್ತವಾಗುತ್ತದೆ.*

ಕಶ್ಚಿದ್ದೈವೇನ ಸೌಮಿತ್ರೇ ಯೋದ್ಧುಮುತ್ಸಹತೇ ಪುಮಾನ್ ।
ಯಸ್ಯ ನ ಗ್ರಹಣಂ ಕಿಂಚಿತ್ಕರ್ಮಣೋಽನ್ಯತ್ರ ದೃಶ್ಯತೇ ॥೨೧॥

ವಿಧಿಯೆಂಬುದು ಕೈಗೆ ಸಿಕ್ಕುವುದಿಲ್ಲ. ವಿಧಿಯ ವಿಲಾಸವನ್ನು ನಾವು ಕಾರ್ಯವಾದ ಬಳಿಕವೇ ಕಾಣುತ್ತೇವೆ. ಅಂತಹ ಅದೃಶ್ಯವಾದ ದೈವದೊಡನೆ ಸೆಣೆಸಲು ಯಾವ ಮನುಷ್ಯನು ತಾನೇ ಉತ್ಸಾಹಿತನಾಗುತ್ತಾನೆ?

---

* ವಿಧಿಯ ಪ್ರಭಾವವು ಅಪ್ರತಿಹತವಾದುದು. ಹಾಗಿಲ್ಲದಿದ್ದರೆ ರಾಮನಿಗೆ ಪಟ್ಟಾಭಿಷೇಕವಾಗಬೇಕೆಂದಿದ್ದ ದಿನವೇ ಅವನ ಪಟ್ಟಾಭಿಷೇಕವು ತಪ್ಪುತ್ತಿರಲಿಲ್ಲ. ರಾಜನೇ ಮೊದಲಾಗಿ ಸಕಲರೂ ಶ್ರೀರಾಮನು ರಾಜನಾಗುವುದನ್ನು ಅಭಿಲಾಷಿಸಿದ್ದರು. **ರಾಮೇ ವಾ ಭರತೇ ವಾಹಂ ವಿಶೇಷಂ ನೋಪಲಕ್ಷಯೇ । ತಸ್ಮಾತ್ತುಷ್ಟಾಸ್ಮಿ ಯದ್ರಾಜಾ ರಾಮಂ ರಾಜ್ಯೇಽಭಿಷೇಕ್ಷ್ಯತಿ ॥** (ಅಯೋಧ್ಯಾ-ಸರ್ಗ ೭ ಶ್ಲೋ-೩೫) **ಧರ್ಮಜ್ಞೋ ಗುಣವಾನ್ದಾನ್ತಃ ಕೃತಜ್ಞಃ ಸತ್ಯವಾಕ್ಛುಚಿಃ । ರಾಮೋ ರಾಜ್ಞಃ ಸುತೋ ಜ್ಯೇಷ್ಠೋ ಯೌವರಾಜ್ಯಮತೋಽರ್ಹತಿ ॥** (ಅಯೋಧ್ಯಾ - ಸರ್ಗ ೮ ಶ್ಲೋ. ೧೪) ಎಂದು ತಾನೇ ಹೇಳಿದ್ದ ಕೈಕೇಯಿಯು ರಾಮನನ್ನು ಕಾಡಿಗಟ್ಟಬೇಕೆಂಬ ನಿರ್ಧಾರಮಾಡಿ ಹಟಮಾಡುತ್ತಿರಲಿಲ್ಲ. ಆದುದರಿಂದ ಕೈಕೇಯಿಯ ಈ ಬುದ್ಧಿವಿಪರ್ಯಾಸಕ್ಕೆ ವಿಧಿಯೇ ಕಾರಣವಲ್ಲದೇ ಕೈಕೇಯಿಯು ಕಾರಣಳಲ್ಲ–ಎಂಬುದು ರಾಮನ ಅಭಿಪ್ರಾಯವಾಗಿದೆ.

ಸುಖದುಃಖೇ ಭಯಕ್ರೋಧೌ ಲಾಭಾಲಾಭೌ ಭವಾಭವೌ ।
ಯಚ್ಚ ಕಿಂಚಿತ್ತಥಾಭೂತಂ ನನು ದೈವಸ್ಯ ಕರ್ಮ ತತ್ ॥೨೨॥

ಲಕ್ಷ್ಮಣ! ಸುಖ-ದುಃಖಗಳು, ಶಾಂತಿ-ಕ್ರೋಧಗಳು, ಲಾಭ-ನಷ್ಟಗಳು, ಉತ್ಪತ್ತಿ-ವಿನಾಶಗಳು, ಬಂಧ-ಮೋಕ್ಷಗಳು ಇವುಗಳೇ ಅಲ್ಲದೇ ಇದೇ ರೂಪದಲ್ಲಿರುವ ಅಚಿಂತ್ಯಕರ್ಮಫಲಗಳು–ಇವೆಲ್ಲವೂ ದೈವದ ಕರ್ಮಗಳೇ ಅಲ್ಲವೇ!*

ಘೋರತಪಸ್ವಿಗಳಾದ ವಿಶ್ವಾಮಿತ್ರಾದಿ ಮಹರ್ಷಿಗಳೂ ದೈವದಿಂದ ಪೀಡಿತರಾಗಿದ್ದಾರೆ. ಹಲವು ಸಾವಿರ ವರ್ಷಗಳ ಕಾಲ ವ್ರತ-ನಿಯಮಾನುಷ್ಠಾನಗಳಿಂದಿದ್ದು ಅತಿಪ್ರಯಾಸದಿಂದ ಸಂಪಾದಿಸಿದ್ದ ತಪಸ್ಸಿನ ಫಲವನ್ನು ವಿಧಿಪ್ರಚೋದಿತವಾದ ಕಾಮ-ಕ್ರೋಧಗಳಿಗೆ ಬಲಿಕೊಟ್ಟು ಭ್ರಷ್ಟರಾಗಿದ್ದಾರೆ.

ಅಸಂಕಲ್ಪಿತಮೇವೇಹ ಯದಕಸ್ಮಾತ್ಪ್ರವರ್ತತೇ ।
ನಿವರ್ತ್ಯಾರಮ್ಭಮಾರಬ್ಧಂ ನನು ದೈವಸ್ಯ ಕರ್ಮ ತತ್ ॥೨೪॥

ಈ ಲೋಕದಲ್ಲಿ ಆರಂಭಿಸಿದ ಕಾರ್ಯದ ಪ್ರಯತ್ನವನ್ನು ತಡೆಹಿಡಿದು, ಸಂಕಲ್ಪಿಸದೆಯೇ ಇರುವ ಯಾವ ಕಾರ್ಯವು ಆಕಸ್ಮಿಕವಾಗಿ ಪ್ರಾರಂಭವಾಗುವುದೋ–ಅದು ದೈವದ ಕಾರ್ಯವಲ್ಲದೇ ಮತ್ತೇನು?

---

* ಸುಖ-ದುಃಖಗಳೆರಡೂ ಮನುಷ್ಯನ ಅಧೀನವಲ್ಲ. ಅಯಾಚಿತವಾಗಿ ಸುಖವೂ ಸಿಕ್ಕಬಹುದು ; ಆಕಸ್ಮಿಕವಾಗಿ ದುಃಖವೂ ಪ್ರಾಪ್ತವಾಗಬಹುದು. ಈ ಆಯಾಚಿತ-ಆಕಸ್ಮಿಕ ಇವುಗಳು ದೈವಾಧೀನವಾದುವುಗಳು. ಭಯವಾಗಲೀ, ಕ್ರೋಧವಾಗಲೀ ಮಾನವನು ಅಪೇಕ್ಷಿಸಿದಾಗ ಉಂಟಾಗುವುದಿಲ್ಲ. ಆಕಸ್ಮಿಕವಾಗಿ ಪ್ರಾಪ್ತವಾಗುತ್ತವೆ. ಲಾಭ-ಅಲಾಭ ಇವುಗಳೂ ಸಹ ಮನುಷ್ಯನ ಹಿಡಿತಕ್ಕೆ ಸಿಕ್ಕುವುದಿಲ್ಲ. ಸ್ವಲ್ಪ ದಿನಗಳು ಲಾಭಗಳಿಸಿ ಐಶ್ವರ್ಯವಂತನಾಗುತ್ತಾನೆ. ಮತ್ತೆ ಕೆಲದಿನಗಳಲ್ಲಿಯೇ ನಷ್ಟಪಟ್ಟು ದರಿದ್ರನಾಗುತ್ತಾನೆ. ಆದರೆ ಲಾಭವು ಬಂದಾಗ ಮಾತ್ರ ಸ್ವಶಕ್ತಿಯಿಂದ ಲಾಭವು ಬಂದಿತೆಂದೂ, ನಷ್ಟವುಂಟಾದಾಗ ದೈವಕಲ್ಪಿತವಾಗಿ ನಷ್ಟವುಂಟಾಯಿತೆಂದೂ ಮನುಷ್ಯನು ಭ್ರಾಂತಿಪಡುತ್ತಾನೆ. ಲಾಭ-ನಷ್ಟಗಳೆರಡೂ ಸಹ ದೈವಕ್ಕೆ ಸೇರಿದ್ದಾಗಿವೆ. ಭವ-ಅಭವ = ಹುಟ್ಟುವುದು-ಸಾಯುವುದು. ಇವುಗಳೂ ಸಹ ಮನುಷ್ಯನ ಹತೋಟಿಯಲ್ಲಿಲ್ಲವೆಂಬುದು ಸಿದ್ಧಾಂತದ ಮಾತು.

ಯಥಾರ್ಥವಾದ ಬುದ್ಧಿಯೋಗದಿಂದ ಮನಸ್ಸನ್ನೂ, ಮನಸ್ಸಿನಿಂದ ಚೇತನವನ್ನೂ ನಿಶ್ಚಲಗೊಳಿಸಿರುವ ನನಗೆ ಯೌವರಾಜ್ಯಾಭಿಷೇಕವು ನಿಂತು ಹೋದುದಕ್ಕಾಗಿ ಪರಿತಾಪವೇನೂ ಇಲ್ಲ. ಆದುದರಿಂದ ನೀನೂ ಕೂಡ ಮನಸ್ಸಿನ ಪರಿತಾಪವನ್ನು ದೂರಮಾಡಿ ನನ್ನ ಬುದ್ಧಿಯನ್ನೇ ಅನುಸರಿಸಿ ಅಭಿಷೇಕಕ್ಕೆ ಸಂಬಂಧಿಸಿದ ಕಾರ್ಯಗಳೆಲ್ಲವನ್ನೂ ಕೂಡಲೇ ನಿಲ್ಲಿಸಿಬಿಡು. ಪಟ್ಟಾಭಿಷೇಕಾರ್ಥವಾಗಿ ನದೀ-ನದ-ಸರೋವರ-ಸಮುದ್ರಗಳಿಂದ ತಂದಿರುವ ಪೂರ್ಣಕುಂಭಗಳಿಂದಲೇ ಈಗ ನಾನು ಕೈಗೊಳ್ಳಲಿರುವ ತಾಪಸವೃತ್ತಿಗೆ ಮಂಗಳಸ್ನಾನವಾಗುತ್ತದೆ ಅಥವಾ ಅಭಿಷೇಕಾರ್ಥವಾಗಿ ತಂದಿರುವ, ರಾಜದ್ರವ್ಯವಾಗಿರುವ ಈ ಪುಣ್ಯೋದಕಗಳಿಂದ ನಾನು ಅರಣ್ಯವಾಸದ ಮಂಗಳಸ್ನಾನವನ್ನೇಕೆ ಮಾಡಲಿ? ನಾನೇ ತೀರ್ಥವನ್ನು ತಂದು ಅದರಿಂದ ಸ್ನಾನಮಾಡಿದರೆ ಅದೇ ನನ್ನನ್ನು ವನವಾಸಕ್ಕೆ ಯೋಗ್ಯನನ್ನಾಗಿ ಮಾಡುತ್ತದೆ. ರಾಜ್ಯಲಕ್ಷ್ಮಿಯು ಸಿಕ್ಕುವ ಬದಲು ವನಲಕ್ಷ್ಮಿಯು ಸಿಕ್ಕಿದುದಕ್ಕಾಗಿ ಸಂತಾಪಪಡಬೇಡ ; ಲಕ್ಷ್ಮಣ! ರಾಜಲಕ್ಷ್ಮಿಯಾದರೇನು? ವನಲಕ್ಷ್ಮಿಯಾದರೇನು? ನನ್ನ ಅಭಿಪ್ರಾಯದಲ್ಲಿ ಇಂದು ನನಗೆ ವನವಾಸವೇ ಅಭ್ಯುದಯಕಾರಕವಾಗಿದೆ.

ನ ಲಕ್ಷ್ಮಣಾಸ್ಮಿನ್ಖಲು ಕರ್ಮವಿಘ್ನೇ
ಮಾತಾ ಯವೀಯಸ್ಯಭಿಶಙ್ಕಿತವ್ಯಾ ।
ದೈವಾಭಿಪನ್ನಾ ಹಿ ವದನ್ತ್ಯನಿಷ್ಟಂ
ಜಾನಾಸಿ ದೈವಂ ಚ ತಥಾ ಪ್ರಭಾವಮ್ ॥೩೦॥

ಲಕ್ಷ್ಮಣ! ನನಗಿಂದು ಆಗಬೇಕಾಗಿದ್ದ ಯೌವರಾಜ್ಯಾಭಿಷೇಕದ ವಿಘ್ನಕ್ಕೆ ನಮ್ಮ ಚಿಕ್ಕ ತಾಯಿಯು ಕಾರಣಳೆಂದು ಶಂಕಿಸಬೇಕಾಗಿಲ್ಲ. ದೈವದಿಂದ ಪ್ರಚೋದಿತಳಾಗಿ ಅವಳು ಹೀಗೆ ಮಾಡುತ್ತಿದ್ದಾಳೆ. ನಮ್ಮ ತಂದೆಯೂ ಇದಕ್ಕೆ ಕಾರಣನಲ್ಲ. ನಮ್ಮ ತಂದೆ-ತಾಯಿಗಳು ದೈವದಿಂದ ಪ್ರೇರಿತರಾಗಿದ್ದಾರೆ. ವಿಧಿವಿಲಾಸವು ಎಷ್ಟೊಂದು ಪ್ರಭಾವಯುತವಾದುದೆಂಬುದನ್ನು ಈಗಲಾದರೂ ತಿಳಿದೆಯಲ್ಲವೇ?"

೨೨ನೆಯ ಸರ್ಗವು ಮುಗಿಯಿತು.

ಲಕ್ಷ್ಮಣನ ಗಡುಸಾದ ಮಾತುಗಳು : ದೈವದ ಖಂಡನೆ : ಪುರುಷಪ್ರಯತ್ನದ ಪ್ರಶಂಸೆ : ವಿರೋಧಿಗಳೊಡನೆ ಯುದ್ಧ ಮಾಡಲು ಕತ್ತಿಯನ್ನು ಹಿಡಿದು ಹೊರಡಲು ಉದ್ಯುಕ್ತನಾದುದು

ಇತಿ ಬ್ರುವತಿ ರಾಮೇ ತು ಲಕ್ಷ್ಮಣೋಽಧಃಶಿರಾ ಮುಹುಃ ।
ಶ್ರುತ್ವಾ ಮಧ್ಯಂ ಜಗಾಮೇವ ಮನಸಾ ದುಃಖಹರ್ಷಯೋಃ ॥೧॥

ಶ್ರೀರಾಮನು ಹೀಗೆ ಹೇಳುತ್ತಿರಲಾಗಿ–ಲಕ್ಷ್ಮಣನು ತಲೆಯನ್ನು ತಗ್ಗಿಸಿ ಕೊಂಡು ಶ್ರೀರಾಮನು ಹೇಳಿದುದೆಲ್ಲವನ್ನೂ ಮನನಮಾಡಿ ದುಃಖ-ಹರ್ಷ ಗಳ ಮಧ್ಯದಲ್ಲಿ ತೊಳಲುವಂತಾದನು.*

ಆದರೆ ದುಃಖವಾಗಲೀ, ಸಂತೋಷವಾಗಲೀ ಲಕ್ಷ್ಮಣನಲ್ಲಿ ಹೆಚ್ಚು ಕಾಲ ಉಳಿಯಲಿಲ್ಲ. ಶ್ರೀರಾಮನು ರಾಜ್ಯವನ್ನು ಬಿಟ್ಟು ಅರಣ್ಯಕ್ಕೆ ಹೋಗುವುದು ರಾಜಧರ್ಮವಲ್ಲವೆಂದು ಲಕ್ಷ್ಮಣನು ನಿಶ್ಚಯಿಸಿದನು. ಅಂತೆಯೇ ಅವನಿಗೆ ಕ್ಷತ್ರಿಯಸಹಜವಾದ ಕೋಪವೂ ಬಂದಿತು. ಎರಡು ಹುಬ್ಬುಗಳನ್ನೂ ಗಂಟಿಕ್ಕಿದನು. ಕುಪಿತನಾದ ಲಕ್ಷ್ಮಣನು–ಬಿಲದಲ್ಲಿ ತಡೆಯಲ್ಪಟ್ಟ ಮಹಾಸರ್ಪ ದಂತೆ–ದೀರ್ಘವಾಗಿ ನಿಟ್ಟುಸಿರನ್ನು ಬಿಟ್ಟನು. ಗಂಟಿಕ್ಕಿದ ಹುಬ್ಬುಗಳಿಂದ ಕೂಡಿದ್ದ, ದಿಟ್ಟಿಸಿ ನೋಡಲು ಅಸಾಧ್ಯವಾಗಿದ್ದ ಲಕ್ಷ್ಮಣನ ಆ ಮುಖವು ಕೋಪಗೊಂಡ ಸಿಂಹದ ಮುಖದಂತೆಯೇ ಕಂಡಿತು. ಕೋಪಗೊಂಡ ಆನೆಯು ಸೊಂಡಿಲನ್ನು ಮೇಲೆತ್ತುವ ರೀತಿಯಲ್ಲಿ ಲಕ್ಷ್ಮಣನು ಬಲಗೈಯನ್ನು ಮೇಲಕ್ಕೆತ್ತಿ ಅಲುಗಾಡಿಸುತ್ತಾ, ಕುತ್ತಿಗೆಯನ್ನು ಮೇಲಕ್ಕೂ ಕೆಳಕ್ಕೂ, ಶರೀರದ ಎರಡು ಪಕ್ಕಗಳಿಗೂ ಅಲುಗಾಡಿಸುತ್ತಾ ತಲೆಯನ್ನು ತಗ್ಗಿಸಿ ಅಣ್ಣನನ್ನು ಕಡೆಗಣ್ಣಿನಿಂದ ಓರೆಯಾಗಿ ನೋಡುತ್ತಾ ಶ್ರೀರಾಮನಿಗೆ ಹೇಳಿದನು :

"ಅಣ್ಣ! ಪಿತೃವಾಕ್ಯಪರಿಪಾಲನಾಧರ್ಮಕ್ಕೆ ದೋಷವುಂಟಾಗುವು

---

* ರಾಮನಿಗೆ ಪಟ್ಟಾಭಿಷೇಕವು ತಪ್ಪಿಹೋದುದಕ್ಕಾಗಿ ದುಃಖವೂ, ಇಂತಹ ಸಂದಿಗ್ಧ ಸ್ಥಿತಿಯಲ್ಲಿಯೂ ರಾಮನು ಧರ್ಮೈಕದೃಷ್ಟಿಯುಳ್ಳವನಾಗಿರುವುದಕ್ಕಾಗಿ ಸಂತೋಷವೂ ಲಕ್ಷ್ಮಣನಿಗೆ ಉಂಟಾಯಿತು.

ದೆಂಬ ಭಯದಿಂದಲೂ–ಪ್ರಜೆಗಳಲ್ಲಿ ಯಾವ ವಿಧವಾದ ಶಂಕೆಯೂ ಇರಬಾರದೆಂಬ ಕಾರಣದಿಂದಲೂ–ನಿನಗೆ ಅಸಮಯದಲ್ಲಿ ಕಾಡಿಗೆ ಹೋಗ ಬೇಕೆಂಬ ಮಹಾಸಂಭ್ರಮವುಂಟಾಗಿದೆ.

ಶೂರಾಗ್ರೇಸರನೇ! ಕ್ಷತ್ರಿಯಶ್ರೇಷ್ಠನೇ! ನಿನ್ನಂತಹ ಶೂರ-ವೀರ-ಪರಾಕ್ರಮಿಯು ಮತ್ತು ಯಾವ ವಿಧವಾದ ಭ್ರಾಂತಿಗೂ ಒಳಗಾಗದವನು ಈ ವಿಧವಾದ ಮಾತುಗಳನ್ನೇಕೆ ಆಡುತ್ತಿರುವೆ? ದೈವವೆಂಬುದು ಹೇಡಿಗಳಿಗೆ ಉಚಿತವಾದ ಮಾತಾಗಿದೆ. ವೀರರು ಇಂತಹ ಮಾತುಗಳನ್ನಾಡಲಾರರು. ಶಕ್ತಿಹೀನವಾದ ದರಿದ್ರದೈವವನ್ನು ನೀನು ಏನೆಂದು ಪ್ರಶಂಸಿಸುವೆ? ಪಾಪಿಷ್ಠರಾಗಿ, ಪ್ರತ್ಯಕ್ಷವಾಗಿಯೇ ಕೇಡನ್ನು ಬಯಸುತ್ತಿರುವ ದಶರಥ-ಕೈಕೇಯಿಯರ ವಿಷಯದಲ್ಲಿ ನಿನಗೇಕೆ ಸಂದೇಹವುಂಟಾಗಿಲ್ಲ? ಧರ್ಮವನ್ನು ನೆಪವನ್ನಾಗಿಟ್ಟುಕೊಂಡು ಸ್ವಾರ್ಥವನ್ನು ಸಾಧಿಸಿಕೊಳ್ಳುವವರು ಇದ್ದಾರೆಂಬು ದನ್ನು ನೀನರಿಯೆಯಾ? ನಮಗೆ ಪ್ರಯೋಜನವಾಗಲಿರುವ ಈ ಪಟ್ಟಾಭಿ ಷೇಕಸಮಾರಂಭವನ್ನು ಮೋಸದಿಂದ ತಪ್ಪಿಸುವ ಸಲುವಾಗಿ ದಶರಥ-ಕೈಕೇಯಿಯರು ಚೆನ್ನಾಗಿ ಸಮಾಲೋಚನೆಮಾಡಿರುವ ಒಳಸಂಚೇ ಇದಾಗಿರುತ್ತದೆ.

ಹಿಂದೆಯೇ ಇವರು ದುರ್ಮಂತ್ರಾಲೋಚನೆಯನ್ನು ಮಾಡಿ ನಿನಗೆ ಪಟ್ಟಾಭಿಷೇಕಮಾಡಬಾರದೆಂದು ನಿಶ್ಚಯಿಸಿರಲಿಲ್ಲ–ಎನ್ನುವುದಾದರೆ ಅನೇಕ ದಿವಸಗಳ ಹಿಂದೆಯೇ ಕೊಡಲ್ಪಟ್ಟಿದ್ದ ಆ ವರಗಳನ್ನು ಅಂದೇ ಕಾರ್ಯಗತ ಮಾಡಿಕೊಡಬೇಕಾಗಿದ್ದಿತು. ಎಂದೋ ವರಕೊಟ್ಟು ಎಂದೋ ಅದರ ಫಲ ವನ್ನು ಪಡೆಯುವುದೆಂಬುದರಲ್ಲಿ ಯಾವ ಧರ್ಮವಿದೆ? ಆರಂಭವಾಗಿದ್ದ ನಿನ್ನ ಪಟ್ಟಾಭಿಷೇಕಸಮಾರಂಭವನ್ನು ನಿಲ್ಲಿಸಿ ಬೇರೆಯವನಿಗೆ ಪಟ್ಟಗಟ್ಟಬೇಕೆನ್ನುವ ಲೋಕವಿರುದ್ಧವಾದ ಈ ಕಾರ್ಯವನ್ನು ನಾನೆಂದಿಗೂ ಸಹಿಸಲಾರೆನು. ಈ ವಿಷಯದಲ್ಲಿ ನೀನು ನನ್ನನ್ನು ಕ್ಷಮಿಸಿಬಿಡು.

ಮಹಾಮತಿವಂತನೇ! ಯಾವ ಕಾರಣದಿಂದ ನಿನಗೆ ಇಂತಹ ಬುದ್ಧಿ ಯುಂಟಾಗಿದೆ? ಆ ಇಬ್ಬರ ಕಪಟಾಚರಣೆಯನ್ನೇ ನೀನು ಅರ್ಥಮಾಡಿ ಕೊಳ್ಳುತ್ತಿಲ್ಲ. ಯಾವ ಪಿತೃವಾಕ್ಯಪರಿಪಾಲನಾಧರ್ಮದ ಪ್ರಸಂಗದಿಂದ ನೀನು ವಿಮೋಹಗೊಂಡಿರುವೆಯೋ–ಆ ಧರ್ಮವನ್ನೇ ನಾನು ದ್ವೇಷಿಸುತ್ತೇನೆ.

ಯಾವುದೇ ಕಾರ್ಯವನ್ನಾದರೂ ಮಾಡಲು ಸಮರ್ಥನಾಗಿರುವ ನೀನು–ಕೈಕೇಯಿಗೆ ದಾಸನಾಗಿರುವ ನಮ್ಮ ತಂದೆಯ ಧರ್ಮಬಾಹಿರವೂ ನಿಂದ್ಯವೂ ಆದ ಮಾತನ್ನು ಏಕೆ ನಡೆಸಿಕೊಡುವೆ? ಮನಸ್ಸಿನಲ್ಲಿ ಕಲ್ಮಷವನ್ನಿಟ್ಟುಕೊಂಡು ಈ ವಂಚನೆಯನ್ನು ಅವರಿಬ್ಬರೂ ಹೀಗೆ ಮಾಡಿದ್ದರೂ (ಅದು ಪ್ರತ್ಯಕ್ಷವಾಗಿಯೇ ಕಾಣುತ್ತಿದ್ದರೂ) ನೀನು ಅದನ್ನು ಒಪ್ಪುತ್ತಿಲ್ಲ. ಇದರಿಂದಲೇ ನನಗೆ ಬಹಳ ದುಃಖವಾಗಿದೆ. ಅಧರ್ಮಕಾರ್ಯಗಳಿಗೆ ಧರ್ಮದ ಸಂಬಂಧವನ್ನು ಕಲ್ಪಿಸುವುದು ನಿಂದ್ಯವಾಗುವುದೆಂದು ನಾನು ಭಾವಿಸುತ್ತೇನೆ. ತಂದೆ-ತಾಯಿಗಳು ಮಾಡುತ್ತಿರುವ ಅಧರ್ಮದ ಕಾರ್ಯಕ್ಕೆ ಧರ್ಮದ ಮೆರುಗನ್ನು ಕೊಟ್ಟು, ಅಂತಹ ಧರ್ಮವನ್ನೇ ಆಶ್ರಯಿಸಿ ನೀನು ಕಾಡಿಗೆ ಹೊರಡಲು ನಿಶ್ಚಯಿಸಿರುವುದು ನಿಶ್ಚಯವಾಗಿಯೂ ಲೋಕನಿಂದ್ಯವಾದುದು. ಹೆಸರಿಗೆ ಮಾತ್ರವೇ ತಂದೆ-ತಾಯಿಗಳಾಗಿರುವ, ಕಾಮುಕರಾಗಿರುವ, ಯಾವಾಗಲೂ ನಿನಗೆ ಅಹಿತವನ್ನೇ ಬಯಸುತ್ತಿರುವ, ಶತ್ರುಗಳೇ ಆಗಿರುವ ಅವರ ಇಚ್ಛೆಯನ್ನು ನೀನು ಮನಸ್ಸಿನಿಂದಾದರೂ ಹೇಗೆ ನಡೆಸಿಕೊಡುವೆ? (ಮನಸ್ಸಿನಿಂದಲೂ ಮಾಡಲಾಗದ ಕಾರ್ಯವನ್ನು ಕಾರ್ಯತಃ ಮಾಡಹೋಗುವುದು ಸರಿಯಲ್ಲ.)

ಒಂದು ವೇಳೆ ಅವರ ಇಂದಿನ ಅಭಿಪ್ರಾಯವು ದೈವಪ್ರೇರಣೆಯಿಂದ ಉಂಟಾದುದೆಂಬ ವಿಶ್ವಾಸವು ನಿನಗಿರುವುದಾದರೆ–ಆಗಲೂ ನೀನು ಅವರ ಮಾತನ್ನು ಉಪೇಕ್ಷಿಸುವುದೇ ಉಚಿತವಾಗಿದೆ. ದೈವಪ್ರೇರಿತವಾದ ಮಾತ್ರಕ್ಕೇ ಅದನ್ನು ನಡೆಸಿಕೊಡಬೇಕೆಂಬ ನಿನ್ನ ಆಶಯವೂ ನನಗೆ 'ಸರಿ' ಎನಿಸುವುದಿಲ್ಲ.*

ವಿಕ್ಲವೋ ವೀರ್ಯಹೀನೋ ಯಃ ಸ ದೈವಮನುವರ್ತತೇ ।
ವೀರಾಃ ಸಂಭಾವಿತಾತ್ಮಾನೋ ನ ದೈವಂ ಪರ್ಯುಪಾಸತೇ ॥೧೬॥

ಯಾವನು ಭಯಗೊಂಡಿರುವನೋ, ನಿರ್ವೀರ್ಯನೋ–ಅಂತಹ

* ದೈವಪ್ರೇರಣೆ–ಎನ್ನುವುದಾದರೆ ಕೈಕೇಯಿಗಾಗಲೀ, ದಶರಥರಾಜನಿಗಾಗಲೀ ನಿನ್ನನ್ನು ಅರಣ್ಯಕ್ಕೆ ಕಳುಹಿಸುವ ಆಶಯವು ಸ್ವಭಾವತಃ ಇಲ್ಲವೆಂದು ನೀನೇ ಒಪ್ಪಿಕೊಂಡಂತಾಯಿತು. ಅವರು ತಮ್ಮ ಸಹಜವಾದ ಬುದ್ಧಿಯಿಂದ ನಿನ್ನನ್ನು ಅರಣ್ಯಕ್ಕೆ ಹೋಗುವಂತೆ ಹೇಳದಿರುವಾಗ ಅವರ ಮಾತನ್ನು ಮೀರಿದ ದೋಷವೂ ನಿನಗೆ

ವನು ಮಾತ್ರವೇ ದೈವವನ್ನು ಆಶ್ರಯಿಸುತ್ತಾನೆ. ವೀರರು, ದೃಢವಾದ ಮನಸ್ಸುಳ್ಳ ಧೀರರು ದೈವವನ್ನು ಉಪಾಸನೆಮಾಡುವುದಿಲ್ಲ. (ದೈವವನ್ನೇ ಆಶ್ರಯಿಸಿಕೊಂಡಿರುವುದಿಲ್ಲ.)

ದೈವಂ ಪುರುಷಕಾರೇಣ ಯಃ ಸಮರ್ಥಃ ಪ್ರಬಾಧಿತುಮ್ ।
ನ ದೈವೇನ ವಿಪನ್ನಾರ್ಥಃ ಪುರುಷಃ ಸೋಽವಸೀದತಿ ॥೧೭॥

ಪುರುಷಪ್ರಯತ್ನದಿಂದ ದೈವಗತಿಯನ್ನು ಅತಿಕ್ರಮಿಸಿ ವರ್ತಿಸಲು ಯಾವನು ಸಮರ್ಥನಾಗಿರುವನೋ–ಅವನು ದೈವದಿಂದ ನಷ್ಟವಾದ ಪ್ರಯೋಜನವುಳ್ಳವನಾಗಿ ನಾಶಹೊಂದುವುದಿಲ್ಲ. ದೈವವು ಅವನನ್ನು ಏನೂ ಮಾಡುವುದಿಲ್ಲ.

ಅಣ್ಣ! ಕೋಸಲರಾಜ್ಯದ ಪ್ರಜೆಗಳು ದೈವದ ಪೌರುಷವನ್ನೂ ಪುರುಷನ ಪೌರುಷವನ್ನೂ ಈಗಲೇ ಕಾಣಲಿದ್ದಾರೆ. ದೈವ-ಮಾನುಷರ ಸ್ವರೂಪವು ಈಗಲೇ ಪ್ರಕಟವಾಗುತ್ತದೆ. ದೈವಗತಿಯಿಂದ ನಿನ್ನ ಪಟ್ಟಾಭಿಷೇಕವು ನಿಂತುಹೋದುದನ್ನು ನಮ್ಮ ಪ್ರಜೆಗಳು ನೋಡಿರುವರಲ್ಲವೇ? ಈಗ ಪುರುಷಪ್ರಯತ್ನದಿಂದ ದೈವದ ಗತಿಯು ವಿಧ್ವಸ್ತವಾಗುವುದನ್ನು ಜನರು ನೋಡುತ್ತಾರೆ. ಅಂಕುಶವನ್ನು ಲೆಕ್ಕಿಸದೇ ಸರಪಣಿಯನ್ನು ಮುರಿದು ಮದದಿಂದ ಸೊಕ್ಕಿ ಮುನ್ನುಗ್ಗುತ್ತಿರುವ ಆನೆಯಂತೆ–ಮುನ್ನುಗ್ಗಿ ಬರುತ್ತಿರುವ ಈ ದೈವವನ್ನು ನಾನು ಪೌರುಷದಿಂದ ತಡೆದು ಹಿಮ್ಮೆಟ್ಟಿಸುತ್ತೇನೆ. ನನ್ನ ಭುಜಬಲ-ಪರಾಕ್ರಮಗಳಿಂದ ನಿನಗೆ ಪಟ್ಟಗಟ್ಟಲು ನಾನು ನಿಂತಾಗ ಎಲ್ಲ ಲೋಕಪಾಲರೂ ಒಟ್ಟುಗೂಡಿ ಬಂದರೂ–ಸಮಗ್ರವಾದ ಮೂರು ಲೋಕಗಳೇ ಎದುರಾಗಿ ಬಂದರೂ–ಶ್ರೀರಾಮನ (ನಿನ್ನ) ಪಟ್ಟಾಭಿಷೇಕವನ್ನು ನಿಲ್ಲಿಸಲಾರರು. ಹೀಗಿರುವಾಗ ತಂದೆಯ ವಿಷಯವಾಗಿ ಹೇಳುವುದೇನಿದೆ?

(ತಾನಾಗಲೇ ಶ್ರೀರಾಮನನ್ನು ರಾಜನನ್ನಾಗಿ ಮಾಡಿಬಿಟ್ಟೆನೆಂಬ

ಪ್ರಾಪ್ತವಾಗುವುದಿಲ್ಲ. ಭೂತಾವೇಶವಿದ್ದವನ, ಹುಚ್ಚನ ಮಾತು ಹೇಗೆ ಗೌರವಿಸಲು ಅಯೋಗ್ಯವಾಗಿರುವುದೋ–ಹಾಗೆಯೇ ದೈವಪ್ರೇರಣೆಯಿಂದ ಹೇಳಿದ ಮಾತುಗಳೂ ಮಾನ್ಯಮಾಡಲು ಯೋಗ್ಯವಾದುವುಗಳಲ್ಲ.

ಭಾವನೆಯಿಂದ ಲಕ್ಷ್ಮಣನು ಶ್ರೀರಾಮನನ್ನು 'ರಾಜನ್'-ಎಂದೇ ಸಂಬೋಧಿಸುತ್ತಾನೆ.)

ಮಹಾರಾಜ! ಯಾರು ನಿನ್ನನ್ನು ಅರಣ್ಯಕ್ಕೆ ಕಳುಹಿಸಬೇಕೆಂದು ರಹಸ್ಯದಲ್ಲಿ ಒಳಸಂಚನ್ನು ನಡೆಸಿರುವರೋ-ಅವರೇ ಈಗ ಹದಿನಾಲ್ಕು ವರ್ಷಗಳ ಕಾಲ ಅರಣ್ಯವಾಸವನ್ನು ಮಾಡುತ್ತಾರೆ. (ಅವರನ್ನೇ ನಾನೀಗ ಕಾಡಿಗೆ ಅಟ್ಟುತ್ತೇನೆ.) ನಿನ್ನ ಪಟ್ಟಾಭಿಷೇಕಕ್ಕೆ ತಡೆಯನ್ನುಂಟುಮಾಡಿದರೆ ರಾಜ್ಯಕ್ಕೆ ತಮ್ಮ ಮಗ ಭರತನೇ ರಾಜನಾಗುತ್ತಾನೆ-ಎಂಬ ನಮ್ಮ ತಂದೆಗೂ ಮತ್ತು ಕೈಕೇಯಿಗೂ ಇರುವ ದುರಾಸೆಯನ್ನು ಕಡಿದುಹಾಕುತ್ತೇನೆ. ನನ್ನ ಪೌರುಷವು ಅತ್ಯುಗ್ರವಾದುದರಿಂದ ನನ್ನ ಬಲವನ್ನು ವಿರೋಧಿಸಿ ದೈವಬಲವು ಖಂಡಿತವಾಗಿಯೂ ಉಳಿಯಲಾರದು. ದೈವಬಲವನ್ನು ನಿರಸನಗೊಳಿಸುವುದೇ ಅಲ್ಲದೇ ನನ್ನ ಬಲವು ವಿರೋಧಿಗಳ ದುಃಖಕ್ಕೂ ಕಾರಣವಾಗುತ್ತದೆ. ಈಗ ನೀನು ನನ್ನ ಪೌರುಷದಿಂದ ರಾಜ್ಯಾಭಿಷಿಕ್ತನಾದರೆ ಭರತನಿಗಾಗಲೀ ಭರತನ ಮಕ್ಕಳಿಗಾಗಲೀ-ಮುಂದೆಯೂ ರಾಜ್ಯ ಸಿಂಹಾಸನವು ಲಭಿಸುವುದಿಲ್ಲ. ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಪ್ರಜೆಗಳ ಪಾಲನೆಯನ್ನು ಮಾಡಿ ನೀನು ವರ್ಣಾಶ್ರಮಧರ್ಮ ಗಳಿಗೆ ಅನುಸಾರವಾಗಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಅರಣ್ಯಕ್ಕೆ ಹೋದ ನಂತರ ನಿನ್ನ ಮಕ್ಕಳು ಈ ರಾಜ್ಯವನ್ನು ಪರಿಪಾಲನೆಮಾಡುತ್ತಾರೆ. ಪ್ರಜೆಗಳನ್ನು ತಮ್ಮ ಮಕ್ಕಳಂತೆ ಪೋಷಿಸುವ ಸಲುವಾಗಿ ಪ್ರಜೆಗಳನ್ನು ಮಕ್ಕಳ ವಶಕ್ಕೊಪ್ಪಿಸಿ ಹಿಂದಿನ ರಾಜರ್ಷಿಗಳು ಆಚರಿಸುತ್ತಿದ್ದಂತೆ ವಾನಪ್ರಸ್ಥಾಶ್ರಮಕ್ಕೆ ಯೋಗ್ಯವಾದ ವನವಾಸವು ರಾಜನಿಗೆ ಉಕ್ತವಾಗಿದೆ. ರಾಜನ ಮನಸ್ಸು ಅಸ್ಥಿರವಾಗಿರುವಾಗ-ರಾಜ್ಯಾಭಿಷೇಕಕ್ಕೆ ವಿರೋಧಿಗಳೂ ಹಲವಾರು ಜನರಿರುವಾಗ-ಅವರೆಲ್ಲರನ್ನೂ ವಿರೋಧಿಸಿ ಈ ರಾಜ್ಯವನ್ನು ಪಡೆದಿದ್ದೇ ಆದರೆ ಮುಂದೆ ಶತ್ರುಗಳು ಪ್ರಬಲರಾಗಿ ನಮ್ಮ ಮೇಲೆ ಬಿದ್ದು ರಾಜ್ಯಸಿಂಹಾಸನವು ಕೈಬಿಟ್ಟು ಹೋಗಬಹುದೆಂಬ ಶಂಕೆಯು ನಿನಗಿದ್ದು, ಈ ಕಾರಣದಿಂದ ನೀನು ಈ ರಾಜ್ಯವನ್ನು ಪಡೆದುಕೊಳ್ಳಲು ಬಯಸದಿರಬಹುದು. ಯಾವುದೇ ಸಮಯದಲ್ಲಿಯೂ ತೀರಪ್ರದೇಶವು ಸಮುದ್ರವನ್ನು ರಕ್ಷಿಸುವಂತೆ-ನಿನ್ನ ರಾಜ್ಯವನ್ನು ನಾನು ರಕ್ಷಿಸುವುದಾಗಿ ಪ್ರತಿಜ್ಞೆಮಾಡಿ

ಕೊಡುತ್ತೇನೆ. ಹಾಗೇನಾದರೂ ರಕ್ಷಣೆಮಾಡದಿದ್ದರೆ ವೀರಯೋಗ್ಯವಾದ ಪುಣ್ಯಲೋಕಗಳು ನನಗೆ ಲಭಿಸದಂತಾಗಲಿ. ಪಟ್ಟಾಭಿಷೇಕಕ್ಕೆಂದು ಸಿದ್ಧವಾಗಿರುವ ಮಂಗಳತೀರ್ಥಗಳಿಂದ ಅಭಿಷಿಕ್ತನಾಗು. ನಡೆದಿರುವ ಪ್ರಕರಣವನ್ನು ಸಂಪೂರ್ಣವಾಗಿ ಮರೆತು ಯಾವವಿಧವಾದ ಶಂಕೆಯೂ ಇಲ್ಲದೇ ಪಟ್ಟಾಭಿಷೇಕದ ಕಾರ್ಯಗಳಲ್ಲಿಯೇ ಮಗ್ನನಾಗಿರು. ನಿನ್ನ ಪಟ್ಟಾಭಿಷೇಕವನ್ನು ವಿರೋಧಿಸಿ ಬರಲಿರುವ ರಾಜರೆಲ್ಲರನ್ನೂ ಪರಾಕ್ರಮದಿಂದ ತಡೆದು ಹಿಂದಕ್ಕಟ್ಟಲು ನಾನೊಬ್ಬನೇ ಸಾಕು.

ನ ಶೋಭಾರ್ಥಾವಿಮೌ ಬಾಹೂ ನ ಧನುರ್ಭೂಷಣಾಯ ಮೇ ।
ನಾಸಿರಾಬನ್ಧನಾರ್ಥಾಯ ನ ಶರಾಃ ಸ್ತಮ್ಭಹೇತವಃ ।
ಅಮಿತ್ರಮಥನಾರ್ಥಂ ಮೇ ಸರ್ವಮೇತಚ್ಚತುಷ್ಟಯಮ್ ॥೩೦॥

ಅಗ್ರಜ! ನನ್ನ ಈ ಬಾಹುಗಳು ಶರೀರದ ಶೋಭೆಗಾಗಿ ನಿರ್ಮಿತವಾಗಿಲ್ಲ. ಸುದೀರ್ಘವಾದ ಈ ಧನುಸ್ಸನ್ನೂ ನಾನು ಅಲಂಕಾರಾರ್ಥವಾಗಿ ಧರಿಸಿಲ್ಲ. ಸೊಂಟಕ್ಕೆ ಕಟ್ಟಿಕೊಳ್ಳುವುದಕ್ಕಾಗಿಯೇ ನಾನು ಈ ಕತ್ತಿಯನ್ನಿಟ್ಟುಕೊಂಡಿಲ್ಲ. ಊರುಗೋಲಿಗಾಗಿ ನಾನು ಈ ಬಾಣಗಳನ್ನು ಇಟ್ಟುಕೊಂಡಿಲ್ಲ. ಶತ್ರುಗಳ ವಿಧ್ವಂಸನಕ್ಕಾಗಿಯೇ ನಾನು ಈ ನಾಲ್ಕು ಉಪಕರಣಗಳನ್ನೂ ಇಟ್ಟುಕೊಂಡಿರುತ್ತೇನೆ. ಯಾವನು ನನಗೆ ಪ್ರಬಲಶತ್ರುವಾಗಿರುವನೋ, ನಾನು ಯಾರನ್ನು ನನ್ನ ಪರಮಶತ್ರುಗಳೆಂದು ಪರಿಗಣಿಸುವೆನೋ– ಅವರ ಉಳಿವನ್ನು ನಾನು ಸಹಿಸುವುದಿಲ್ಲ. ಶತ್ರುವು ದೇವೇಂದ್ರನೇ ಆಗಿರಲಿ ; ದಶರಥನೇ ಆಗಿರಲಿ–ತೀಕ್ಷ್ಣವಾದ ಅಲುಗುಳ್ಳ, ವಿದ್ಯುತ್ತಿನಂತೆ ಥಳ-ಥಳಿಸುವ ಮುಷ್ಟಿಬದ್ಧವಾದ ಕತ್ತಿಯಿಂದ ಅವರನ್ನು ಕತ್ತರಿಸಿಬಿಡುತ್ತೇನೆ. ನನ್ನ ಖಡ್ಗದಿಂದ ಕತ್ತರಿಸಲ್ಪಟ್ಟ ಗಜ-ತುರಗ-ಪದಾತಿಗಳ ಕೈಕಾಲುಗಳಿಂದಲೂ ರುಂಡ-ಮುಂಡಗಳಿಂದಲೂ ಈ ಪೃಥ್ವಿಯು ತುಂಬಿಹೋಗಿ ಸಂಚರಿಸಲು ಅಸಾಧ್ಯವಾಗುತ್ತದೆ. ನನ್ನ ಖಡ್ಗದ ಅಲುಗುಗಳಿಂದ ಕತ್ತರಿಸಲ್ಪಡುವ, ಪರ್ವತಗಳಂತೆ ದೇದೀಪ್ಯಮಾನವಾದ ಆನೆಗಳು ಮಿಂಚಿನಿಂದ ಕೂಡಿದ ಮೇಘಗಳಂತೆ ಪ್ರಕಾಶಿಸುತ್ತಾ ನೆಲಕ್ಕುರುಳುತ್ತವೆ. ಧನುಸ್ಸಿನ ಬಾಣನ್ನು ಅನವರತವಾಗಿ ಸೆಳೆಯುವುದರಿಂದ ಉಂಟಾಗುವ ಗಾಯವನ್ನು ತಪ್ಪಿಸಿಕೊಳ್ಳುವ ಸಲುವಾಗಿ ಹಾಕಿಕೊಳ್ಳುವ ಅಂಗುಲಿ

ರಕ್ಷೆಯನ್ನು ತೊಟ್ಟು ಧನುಷ್ಪಾಣಿಯಾಗಿ ನಾನು ನಿಂತರೆ–ಈ ಪುರುಷರ ಮಧ್ಯದಲ್ಲಿ ಪುರುಷನೆಂದು ಹೇಳಿಕೊಳ್ಳುವವನು ಯಾವನಿದ್ದಾನೆ?

ಅನೇಕ ಬಾಣಗಳಿಂದ ಒಬ್ಬ ಶೂರನನ್ನು ಅತಿಯಾಗಿ ಘಾಸಿಪಡಿಸುತ್ತಾ ಒಂದೇ ಬಾಣದಿಂದ ಹಲವಾರು ಕರಿ-ತುರಗ-ಪದಾತಿಗಳ ಮರ್ಮಸ್ಥಳ ಗಳನ್ನು ಭೇದಿಸುತ್ತಾ ಎಲ್ಲರನ್ನೂ ಧ್ವಂಸಮಾಡುತ್ತೇನೆ. ಪ್ರಭುವೇ! ಈಗ ನನ್ನ ಅಸ್ತ್ರಗಳ ಮಹಿಮೆಯ ಪ್ರಭಾವವು ಈಗಿರುವ ರಾಜನನ್ನು ಪದಚ್ಯುತಿ ಗೊಳಿಸಲು ಮತ್ತು ನಿನ್ನನ್ನು ಪ್ರಭುವನ್ನಾಗಿ ಮಾಡಲು ಸಮರ್ಥವಾಗುತ್ತದೆ. ಗಂಧಾನುಲೇಪನಕ್ಕೂ, ಕೇಯೂರಾಭರಣಗಳನ್ನು ಧರಿಸುವುದಕ್ಕೂ, ಐಶ್ವರ್ಯವನ್ನು ದಾನಮಾಡುವುದಕ್ಕೂ, ಸತ್ಪುರುಷರನ್ನು ಪಾಲನೆಮಾಡು ವುದಕ್ಕೂ ಅನುರೂಪವಾಗಿರುವ ಈ ತೋಳುಗಳು ನಿನ್ನ ಅಭಿಷೇಕಕ್ಕೆ ವಿಘ್ನ ವನ್ನುಂಟುಮಾಡುವವರ ನಿವಾರಣೆಗಾಗಿ ಕಾರ್ಯಮಾಡಲಿವೆ. ರಾಮ! ನಿನ್ನ ಶತ್ರುಗಳಾರು? ನಿನ್ನ ಯಾವ ಶತ್ರುಗಳನ್ನು ಪ್ರಾಣಗಳಿಂದಲೂ, ಕೀರ್ತಿ ಯಿಂದಲೂ, ಮಿತ್ರರಿಂದಲೂ ಬೇರ್ಪಡಿಸಬೇಕು? (ಸಂಹರಿಸಬೇಕು?) ಯಾವ ಕಾರ್ಯಮಾಡುವುದರಿಂದ ಈ ಭೂಮಂಡಲವು ನಿನ್ನ ವಶವಾ ದೀತು?–ಎಂಬುದನ್ನು ಈಗಲೇ ಹೇಳು. ನಾನು ನಿನ್ನ ಕಿಂಕರನಾಗಿದ್ದೇನೆ.”

ಹೀಗೆ ವೀರೋಚಿತವಾದ ಮಾತನ್ನು ಹೇಳಿ ಶ್ರೀರಾಮನಿಗೆ ಪ್ರಾಪ್ತವಾದ ಅರಣ್ಯವಾಸಕ್ಕಾಗಿ ಶೋಕಪಡುತ್ತಿದ್ದ ಲಕ್ಷ್ಮಣನ ಕಣ್ಣೀರನ್ನು ರಘುವಂಶ ವರ್ಧನನಾದ ಶ್ರೀರಾಮನು ಒರೆಸುತ್ತಾ ಬಾರಿ-ಬಾರಿಗೂ ಸಂತೈಸುತ್ತಾ, ಲಕ್ಷ್ಮಣನಿಗೆ ತಾನು ಪಿತೃವಾಕ್ಯಪರಿಪಾಲನೆಯಲ್ಲಿ ಸ್ಥಿರಚಿತ್ತನಾಗಿರುವೆನೆಂದು ಪುನಃ ದೃಢಪಡಿಸಿ ಹೇಳಿದನು :

ನಿಬೋಧ ಮಾಮೇಷ ಹಿ ಸೌಮ್ಯ ಸತ್ಪಥಃ ॥೪೦॥

“ಸೌಮ್ಯನೇ! ನನ್ನ ಮಾತನ್ನು ಕೇಳು. ಇದೇ ಸತ್ಪುರುಷರ ಮಾರ್ಗವಾಗಿದೆ. ಇದನ್ನೇ ನಾವೂ ಅನುಸರಿಸಬೇಕು.”*

೨೩ನೆಯ ಸರ್ಗವು ಮುಗಿಯಿತು.

---

* ಮಗನಿಗೆ ಪುತ್ರತ್ವವು ಸಿದ್ಧಿಯಾಗಬೇಕಾದರೆ ಅವನು ಈ ಮೂರು ಮುಖ್ಯ ಕ್ರಿಯೆಗಳನ್ನು ಮಾಡಿಯೇ ತೀರಬೇಕು. ‘ಜೀವತೋರ್ವಾಕ್ಯಕರಣಾತ್ಪ್ರತ್ಯಬ್ದಂ **ಭೂರಿಭೋಜನಾತ್ । ಗಯಾಯಾಂ ಪಿಣ್ಡದಾನಾಚ್ಚ ತ್ರಿಭಿಃ ಪುತ್ರಸ್ಯ ಪುತ್ರತಾ ॥’**

ಅಯೋಧ್ಯಾಕಾಂಡ ೨೪ನೆಯ ಸರ್ಗ

ವಿಲಪಿಸುತ್ತಿದ್ದ ಕೌಸಲ್ಯೆಯು ತನ್ನನ್ನೂ ಜೊತೆಯಲ್ಲಿ ಅರಣ್ಯಕ್ಕೆ ಕರೆದುಕೊಂಡು ಹೋಗುವಂತೆ ಆಗ್ರಹಪಡಿಸಿದುದು : ಪತಿಸೇವೆಯೇ ಹೆಂಗಸಿನ ಧರ್ಮವೆಂದು ಶ್ರೀರಾಮನು ಪ್ರತಿಪಾದಿಸಿದುದು : ಅರಣ್ಯಕ್ಕೆ ಹೋಗಲು ತಾಯಿಯ ಅನುಮತಿ

ತಂ ಸಮೀಕ್ಷ್ಯ ವ್ಯವಸಿತಂ ಪಿತುರ್ನಿರ್ದೇಶಪಾಲನೇ ।
ಕೌಸಲ್ಯಾ ಬಾಷ್ಪಸಂರುದ್ಧಾ ವಚೋ ಧರ್ಮಿಷ್ಠಮಬ್ರವೀತ್ ॥೧॥

ಪಿತೃವಾಕ್ಯಪರಿಪಾಲನೆಯಲ್ಲಿಯೇ ನಿಶ್ಚಿತವಾದ ಬುದ್ಧಿಯಿಂದ ಅರಣ್ಯಕ್ಕೆ ಹೋಗಲು ನಿರ್ಧರಿಸಿದ ಧರ್ಮಿಷ್ಠನಾದ ಶ್ರೀರಾಮನನ್ನು ನೋಡಿ ಅಳುವಿನಿಂದ ಸ್ಪಷ್ಟವಾಗಿ ಮಾತನಾಡಲು ಆಗದಿದ್ದ ಕೌಸಲ್ಯೆಯು ಬಹು ಪ್ರಯಾಸದಿಂದ ಈ ಮಾತನ್ನು ಹೇಳಿದಳು :

"ಮಗು! ನೀನು ದುಃಖವನ್ನೇ ಅರಿಯದವನು. ಧರ್ಮಾತ್ಮನು. ಸಕಲಪ್ರಾಣಿಗಳ ವಿಷಯದಲ್ಲಿಯೂ ಪ್ರಿಯವಾದ ಮಾತುಗಳನ್ನೇ ಆಡುವವನು. ದಶರಥಚಕ್ರವರ್ತಿಯಿಂದ ನನ್ನಲ್ಲಿ ಹುಟ್ಟಿರುವ ರಾಜಕುಮಾರನಾದ ನೀನಿಂದು ಉಂಛವೃತ್ತಿಯಿಂದ* ಹೇಗೆ ಜೀವಿಸುವೆ? ಶ್ರೀರಾಮನ ಭೃತ್ಯ-ಸೇವಕವರ್ಗದವರೇ ರುಚಿಕರವಾದ ಮೃಷ್ಟಾನ್ನವನ್ನು ಭೋಜನಮಾಡುತ್ತಾರೆ. ಹೀಗಿರುವಾಗ ಒಡೆಯನಾದ ಈ ಶ್ರೀರಾಮನು ಅರಣ್ಯದಲ್ಲಿರುವ ಕಂದ-ಮೂಲಗಳನ್ನು ತಿಂದುಕೊಂಡು ಹೇಗೆ ಜೀವಿಸುವನು? ಸಕಲಗುಣ

[ಮನುಸ್ಮೃತಿಃ] (೧) ತಾಯಿ-ತಂದೆಗಳು ಜೀವಿಸಿರುವಾಗ ಅವರ ಮಾತಿನಂತೆ ನಡೆಯುವುದು. (೨) ಅವರು ಸತ್ತುಹೋದನಂತರ ಪ್ರತಿವರ್ಷವೂ ಅವರ ಪ್ರೀತ್ಯರ್ಥವಾಗಿ ಭೂರಿಭೋಜನಮಾಡಿಸುವುದು. (ಶ್ರಾದ್ಧಮಾಡುವುದು.) (೩) ಗಯೆಯಲ್ಲಿ ಪಿಂಡಪ್ರದಾನಮಾಡುವುದು–ಈ ಮೂರರಿಂದ ಸುತನು ನಿಜವಾಗಿಯೂ ಸುತನಾಗುತ್ತಾನೆ.

* ಉಂಛಃ = ಹೊಲ-ಗದ್ದೆಗಳಲ್ಲಿ ಬೆಳೆದ ಧಾನ್ಯವನ್ನು ಕೃಷಿಕನು ತೆಗೆದುಕೊಂಡನಂತರ ಕೆಳಗೆ ಉದುರಿದ್ದ ಕಾಳುಗಳನ್ನು ಆರಿಸಿಕೊಳ್ಳುವುದು. ಉಂಛೋಧಾನ್ಯಸ್ಯ ಆದಾನಮ್ (ವೈಜಯನ್ತೀ) ಪ್ರಸಕ್ತಸಂದರ್ಭದಲ್ಲಿ ಉಂಛಶಬ್ದಕ್ಕೆ ಭೂಮಿಯಲ್ಲಿರುವ ಗೆಡ್ಡೆ-ಗೆಣಸುಗಳನ್ನು ಆರಿಸಿಕೊಂಡು ಎಂದೂ ಲಾಕ್ಷಣಿಕವಾಗಿ ಅರ್ಥಮಾಡಬಹುದು.

ಸಂಪನ್ನನಾದ ಶ್ರೀರಾಮನು ಕಾಡಿಗೆ ಹೋಗುವನೆಂಬ ವಾರ್ತೆಯನ್ನು ಯಾರು ತಾನೇ ನಂಬುವರು? ಗುಣಶಾಲಿಯಾದ ರಾಜನಿಗೆ ಅತ್ಯಂತಪ್ರಿಯ ನಾದ ಕಾಕುತ್ಸ್ಥನೇ ನಗರದಿಂದ ಹೊರದೂಡಲ್ಪಟ್ಟರೆ ಯಾರು ತಾನೇ ಭಯಪಡುವುದಿಲ್ಲ? ಇಂತಹ ಗುಣಶಾಲಿಯನ್ನೇ ರಾಜನು ಅರಣ್ಯಕ್ಕೆ ಕಳುಹಿಸಿದರೆ ನಮ್ಮ ಪಾಡೇನು? (ರಾಮನು ಅರಣ್ಯಕ್ಕೆ ಹೊರಟುಹೋದರೆ ನಮ್ಮ ಯೋಗ-ಕ್ಷೇಮಗಳನ್ನು ನೋಡಿಕೊಳ್ಳುವವರು ಮತ್ತಾರಿದ್ದಾರೆ? ನಾವು ಅರಕ್ಷಕರಾಗುತ್ತೇವೆ–ಎಂದು ಪ್ರಜೆಗಳೆಲ್ಲರೂ ಭಯಪಡುತ್ತಾರೆ.)

ನೂನಂ ತು ಬಲವಾನ್ ಲೋಕೇ ಕೃತಾನ್ತಃ ಸರ್ವಮಾದಿಶೇತ್ ।
ಲೋಕೇ ರಾಮಾಭಿರಾಮಸ್ತ್ವಂ ವನಂ ಯತ್ರ ಗಮಿಷ್ಯಸಿ ॥೫॥

ನಿಶ್ಚಯವಾಗಿಯೂ ಕೃತಾಂತನು (ದೈವವು) ಮಹಾಬಲಶಾಲಿಯು. ಏಕೆಂದರೆ : ಅವನು ರಾಜರು-ಪ್ರಜೆಗಳೆಂಬ, ಐಶ್ವರ್ಯವಂತರು-ಬಡವ ರೆಂಬ ತಾರತಮ್ಯವೇ ಇಲ್ಲದೇ ಸಕಲವನ್ನೂ ಸುಖ-ದುಃಖಗಳೊಡನೆ ಸೇರಿಸು ತ್ತಾನೆ. ರಾಮ! ಲೋಕಾಭಿರಾಮನಾದ ನೀನು ಅರಣ್ಯಕ್ಕೆ ಹೊರಟಿರುವುದೇ ವಿಧಿಯು ಸರ್ವಶಕ್ತನೆಂಬುದಕ್ಕೆ ಸಾಕ್ಷಿಯಾಗಿದೆ.

ಅಯಂ ತು ಮಾಮಾತ್ಮಭವಸ್ತವಾದರ್ಶನಮಾರುತಃ ।
ವಿಲಾಪದುಃಖಸಮಿಧೋ ರುದಿತಾಶ್ರುಹುತಾಹುತಿಃ ॥೬॥

ಚಿನ್ತಾಬಾಷ್ಪಮಹಾಧೂಮಸ್ತವಾದರ್ಶನಚಿತ್ತಜಃ ।
ಕರ್ಶಯಿತ್ವಾಧಿಕಂ ಪುತ್ರ ನಿಃಶ್ವಾಸಾಯಾಸಸಂಭವಃ ॥೭॥

ತ್ವಯಾ ವಿಹೀನಾಮಿಹ ಮಾಂ ಶೋಕಾಗ್ನಿರತುಲೋ ಮಹಾನ್ ।
ಪ್ರಧಕ್ಷ್ಯತಿ ಯಥಾ ಕಕ್ಷಂ ಚಿತ್ರಭಾನುರ್ಹಿಮಾತ್ಯಯೇ ॥೮॥

ಶೋಕಾಗ್ನಿಯು ನಿನ್ನಿಂದ ಅಗಲಿದ ನನ್ನನ್ನು ಬಹುವಾಗಿ ಕೃಶ ಗೊಳಿಸಿ–ಶಿಶಿರರ್ತುವಿನಲ್ಲಿ ಹುಲ್ಲಿನ ಮೆದೆಗೆ ಬಿದ್ದ ಬೆಂಕಿಯಂತೆ–ಸಾವಕಾಶ ವಾಗಿ ಸುಟ್ಟುಹಾಕುತ್ತದೆ. ನಿನ್ನನ್ನು ಕಾಣಲಿಲ್ಲವೆಂಬ ಗಾಳಿಯು ನನ್ನ ಮನಸ್ಸಿನಲ್ಲಿ ಹುಟ್ಟಿ ಆ ಅಗ್ನಿಗೆ ಸಹಾಯಕವಾಗುತ್ತದೆ. ಗೋಳಾಟ-ದುಃಖ ಗಳೇ ಆ ಶೋಕಾಗ್ನಿಯ ಸಮಿತ್ತುಗಳು. ಅಳುವಿನಿಂದ ಹೊರಬರುವ ಕಣ್ಣೀರೇ ಅದಕ್ಕೆ ಆಜ್ಯಾಹುತಿ. ನಿನ್ನ ಆಗಮನವನ್ನು ಚಿಂತಿಸುತ್ತಾ

ಕಣ್ಣೀರುಸುರಿಸುವುದೇ ಹೋಮಧೂಮ. ನಿಃಶ್ವಾಸವೆಂಬ ಆಯಾಸದಿಂದ ಹುಟ್ಟುವ ಶೋಕಾಗ್ನಿಯು ನಿನ್ನಿಂದ ವಿಹೀನಳಾದ ನನ್ನನ್ನು ಬಹಳವಾಗಿ ಸಂಕಟಪಡಿಸುತ್ತದೆ.*

ಕಥಂ ಹಿ ಧೇನುಃ ಸ್ವಂ ವತ್ಸಂ ಗಚ್ಛನ್ತಂ ನಾನುಗಚ್ಛತಿ ।
ಅಹಂ ತ್ವಾನುಗಮಿಷ್ಯಾಮಿ ಯತ್ರ ವತ್ಸ ಗಮಿಷ್ಯಸಿ ॥೯॥

ತನ್ನ ಕರುವು ಮುಂದೆ ಹೋಗುತ್ತಿರುವುದನ್ನು ನೋಡಿ ಹಸುವು ಅದರ ಹಿಂದೆ ಹೋಗದೇ ಹೇಗೆತಾನೇ ಇರುವುದು? ಮಗು! ಹಾಗೆಯೇ ನೀನೆಲ್ಲಿಗೆ ಹೋಗುವೆಯೋ ಅಲ್ಲಿಗೆ ನಿನ್ನನ್ನನುಸರಿಸಿ ನಾನೂ ಬರುತ್ತೇನೆ."

ಪುರುಷಶ್ರೇಷ್ಠನಾದ ಶ್ರೀರಾಮನು ಅತ್ಯಂತದುಃಖಿತಳಾದ ತಾಯಿಯ ಮಾತನ್ನು ಕೇಳಿ ಅವಳನ್ನು ಸಮಾಧಾನಗೊಳಿಸುತ್ತಾ ಹೇಳಿದನು :

"ಅಮ್ಮ! ಈ ಸಮಯದಲ್ಲಿ ನೀನು ರಾಜನನ್ನು ಬಿಟ್ಟು ಬರುವುದು ಸರ್ವಥಾ ಯುಕ್ತವಲ್ಲ. ಕೈಕೇಯಿಯಿಂದ ವಂಚಿತನಾಗಿರುವ ನಮ್ಮ ರಾಜನು–ನಾನೂ ಕಾಡಿಗೆ ಹೋಗಿ, ನಿನ್ನಿಂದಲೂ ಪರಿತ್ಯಕ್ತನಾದರೆ–ಖಂಡಿತ ವಾಗಿಯೂ ಬದುಕಲಾರನು.

ಭರ್ತುಃ ಕಿಲ ಪರಿತ್ಯಾಗೋ ನೃಶಂಸಃ ಕೇವಲಂ ಸ್ತ್ರಿಯಾಃ ।
ಸ ಭವತ್ಯಾ ನ ಕರ್ತವ್ಯೋ ಮನಸಾಪಿ ವಿಗರ್ಹಿತಃ ॥೧೨॥

ಹೆಂಗಸಿಗೆ ಗಂಡನನ್ನು ಪರಿತ್ಯಜಿಸುವುದು ಕೇವಲ ಕ್ರೌರ್ಯವಾಗುತ್ತದೆ.

---

* ಕೌಸಲ್ಯೆಯು ತನ್ನ ಹೃದಯದಲ್ಲಡಗಿರುವ ಶೋಕಾಗ್ನಿಯು ಹೇಗೆ ತನ್ನನ್ನು ದಹಿಸುವುದೆಂಬ ವಿಷಯವಾಗಿ ನಿರೂಪಣೆಮಾಡುತ್ತಾಳೆ. ಸುಪ್ತವಾಗಿರುವ ಅಗ್ನಿಯು ಗಾಳಿಬೀಸಿದೊಡನೆಯೇ ಜ್ವಲಿಸಲಾರಂಭಿಸುವುದು. ರಾಮನನ್ನು ಕಾಣದಿರುವುದೇ ಶೋಕಾಗ್ನಿಯನ್ನು ಪ್ರಜ್ವಲಗೊಳಿಸುವ ಗಾಳಿ. ರಾಮನು ಬರವವರೆಗೂ ಈ ವಾಯುವು ಜೋರಾಗಿಯೇ ಬೀಸುತ್ತಿರುವುದು. ರಾಮನನ್ನು ಮರೆಯಲು ಕೌಸಲ್ಯೆಗೆ ಹೇಗೆ ತಾನೇ ಸಾಧ್ಯವಾದೀತು? ಊಟಮಾಡುವಾಗ, ಕುಳಿತಿರುವಾಗ, ಮಲಗಿರುವಾಗ ಸರ್ವ ಕಾಲಗಳಲ್ಲಿಯೂ ರಾಮನ ನೆನಪು ಕೌಸಲ್ಯೆಗುಂಟಾಗುವುದು ಸಹಜ. ರಾಮನ ನೆನಪುಂಟಾದೊಡನೆಯೇ ಪ್ರಯತ್ನವೇ ಇಲ್ಲದೇ ಕೌಸಲ್ಯೆಯು ವಿಲಾಪಮಾಡವಳು. ವಿಲಾಪದಿಂದ ಅಶ್ರುಬಿಂದುಗಳು ಧಾರಾಕಾರವಾಗಿ ಪ್ರವಹಿಸುವುವು. ವಿಲಾಪದುಃಖ ವನ್ನೇ ಅಗ್ನಿಗೆ ಹೋಮಮಾಡುವ ಸಮಿತ್ತೆಂದೂ, ಅಳುವಿನಿಂದ ಧಾರಾವಾಹಿಯಾಗಿ

ಅಂತಹ ಅತಿನಿಂದ್ಯವಾದ ಕಾರ್ಯವನ್ನು ನೀನು ಮನಸ್ಸಿನಲ್ಲಿಯೂ ಚಿಂತಿಸಬಾರದು.

ಯಾವಜ್ಜೀವತಿ ಕಾಕುತ್ಸ್ಥಃ ಪಿತಾ ಮೇ ಜಗತೀಪತಿಃ ।
ಶುಶ್ರೂಷಾ ಕ್ರಿಯತಾಂ ತಾವತ್ಸ ಹಿ ಧರ್ಮಃ ಸನಾತನಃ ॥೧೩॥

ಜಗತೀಪತಿಯಾದ ನನ್ನ ತಂದೆಯು ಎಲ್ಲಿಯವರೆಗೆ ಜೀವಿಸಿರುವನೋ–ಅಲ್ಲಿಯವರೆಗೂ ನೀನು ಅವನ ಶುಶ್ರೂಷೆಯನ್ನು ಮಾಡಲೇಬೇಕು. ಇದೇ ಸನಾತನಧರ್ಮ."

ಶ್ರೀರಾಮನಿಂದ ಹೀಗೆ ಹೇಳಲ್ಪಟ್ಟ, ಶುಭದರ್ಶನಳಾದ, ಧರ್ಮೈಕ ಬುದ್ಧಿಯುಳ್ಳ ಕೌಸಲ್ಯೆಯು ಸುಪ್ರೀತಳಾಗಿ ಸಕಲರ ದುಃಖನಿವಾರಕನಾದ ಶ್ರೀರಾಮನಿಗೆ ಹಾಗೆಯೇ ಆಗಲೆಂದಳು. ಶ್ರೀರಾಮನ ಸಮಾಧಾನಕ್ಕಾಗಿ ಹಾಗೆ ಹೇಳಿದರೂ ಅವಳ ದುಃಖವು ಕಡಿಮೆಯಾಗಲೇ ಇಲ್ಲ. ಧರ್ಮಾತ್ಮರಲ್ಲಿ ಶ್ರೇಷ್ಠನಾದ ಶ್ರೀರಾಮನು ಬಹಳವಾಗಿ ದುಃಖಪಡುತ್ತಿದ್ದ ತಾಯಿಯನ್ನು ಕುರಿತು ಪುನಃ ಹೇಳತೊಡಗಿದನು :

ಮಯಾ ಚೈವ ಭವತ್ಯಾ ಚ ಕರ್ತವ್ಯಂ ವಚನಂ ಪಿತುಃ ।
ರಾಜಾ ಭರ್ತಾ ಗುರುಃ ಶ್ರೇಷ್ಠಃ ಸರ್ವೇಷಾಮೀಶ್ವರಃ ಪ್ರಭುಃ ॥

"ತಂದೆಯ ಮಾತಿನಂತೆ ನಡೆಯುವುದು ನನ್ನ ಮತ್ತು ನಿನ್ನ ಕರ್ತವ್ಯ

ಬರುವ ಕಣ್ಣೀರನ್ನೇ ಆಜ್ಯಾಹುತಿಯೆಂದೂ ಕೌಸಲ್ಯೆಯು ಹೇಳುತ್ತಾಳೆ. ಸಮಿತ್ತು ಮತ್ತು ಆಜ್ಯಾಹುತಿಗಳಿಂದ ಯಜ್ಞೇಶ್ವರನು ಹೊತ್ತಿಕೊಂಡು ಉರಿಯುವುದು ಸಹಜ. ರಾಮನ ವಿಷಯದಲ್ಲಿ ಮಾಡುವ ಚಿಂತೆಯೇ ಆವಿಯಿಂದ ಕೂಡಿದ ಮಹಾಧೂಮ. ಇಂತಹ ಧೂಮಾವೃತವಾದ ಶೋಕಾಗ್ನಿಯು ತನ್ನನ್ನು ಬಹಳ ಸಂಕಟಗೊಳಿಸುವುದೆಂದು ಕೌಸಲ್ಯೆಯು ಹೇಳುತ್ತಾಳೆ. ದುಃಖದಿಂದ ಬಿಡುವ ನಿಟ್ಟುಸಿರೇ ಅಗ್ನಿಯು ಪ್ರಜ್ವಲಿಸುವಂತೆ ಮನುಷ್ಯನು ಮಾಡುವ ಊದುವುದು, ಬೀಸುವುದು ಮೊದಲಾದ ಪ್ರಯತ್ನಗಳ ಮೂಲಕ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವುದು. ಸ್ವಾಭಾವಿಕವಾಗಿ ಬೀಸುವ ಗಾಳಿಯೊಡನೆ ಮನುಷ್ಯನ ಪ್ರಯತ್ನವೂ ಸೇರಿದರೆ ಅಗ್ನಿಯು ಜ್ವಲಿಸುವುದರಲ್ಲಿ ಸಂದೇಹವೇನು? ತ್ವಯಾ ವಿಹೀನಾಮಿಹ ಮಾಂ ನಿಃಶ್ವಾಸಾಯಾಸಸಂಭವಃ ಅತುಲಃ ಮಹಾನ್ ಶೋಕಾಗ್ನಿಃ ಪ್ರಧಕ್ಷ್ಯತಿ = ನಿನ್ನಿಂದ ವಿಹೀನಳಾದ ನನ್ನನ್ನು ನಿಃಶ್ವಾಸಾಯಾಸದಿಂದ ಪ್ರಜ್ವಲಿತನಾದ ಈ ಆತುಲಪರಾಕ್ರಮನಾದ ಮಹಾನ್ ಶೋಕಾಗ್ನಿಯು ದಹಿಸುತ್ತಾನೆ. ಇದಕ್ಕೆ ಕೊಟ್ಟಿರುವ

ವಾಗಿದೆ. ಅವನು ನಮ್ಮೆಲ್ಲರಿಗೂ ರಾಜನು. ನಿನಗೆ ಸ್ವಾಮಿಯು. ನನಗೆ ವಿದ್ಯೆಯನ್ನು ಉಪದೇಶಿಸಿದ ಗುರುವು. ಆದುದರಿಂದ ಅವನು ಸರ್ವ ಶ್ರೇಷ್ಠನೂ, ಸರ್ವೇಶ್ವರನೂ, ನಮ್ಮೆಲ್ಲರಿಗೂ ಪ್ರಭುವೂ ಆಗಿರುವನು.

ತಂದೆಯಿಂದ ಆಜ್ಞಪ್ತವಾಗಿರುವ ಈ ಹದಿನಾಲ್ಕು ವರ್ಷಗಳನ್ನು ವಿಹಾರಮಾಡಿಕೊಂಡು ಕಳೆದು ಪರಮಪ್ರೀತನಾಗಿ ನಿನ್ನ ಸಮೀಪಕ್ಕೆ ಬಂದು ಮುಂದೆ ನೀನು ಹೇಳಿದಂತೆಯೇ ನಡೆದುಕೊಂಡಿರುತ್ತೇನೆ.”

ಶ್ರೀರಾಮನು ಹೀಗೆ ಹೇಳಿದನಂತರ ಪುತ್ರವಿಯೋಗದುಃಖದಿಂದ ಅತ್ಯಂತಪೀಡಿತಳಾಗಿದ್ದ ಪುತ್ರವಾತ್ಸಲ್ಯದಿಂದ ಕೂಡಿದ್ದ, ಕಂಬನಿದುಂಬಿದ ಮುಖವುಳ್ಳವಳಾಗಿದ್ದ ಕೌಸಲ್ಯಾದೇವಿಯು ಪ್ರಿಯನಾದ ಪುತ್ರನಿಗೆ ಹೇಳಿದಳು:

“ರಾಮ! ಈ ಸವತಿಯರ ಮಧ್ಯದಲ್ಲಿರುವುದು ನನಗೆ ಸರ್ವಥಾ ಸಾಧ್ಯವಿಲ್ಲ. ತಂದೆಯ ಮಾತಿನಂತೆ ನೀನು ಅರಣ್ಯಕ್ಕೆ ಹೋಗಲು ನಿಶ್ಚಯಿಸುವುದಾದರೆ ಅರಣ್ಯದ ಹೆಣ್ಣುಜಿಂಕೆಯಂತಿರುವ ನನ್ನನ್ನೂ ಜೊತೆ ಯಲ್ಲಿಯೇ ಕರೆದುಕೊಂಡುಹೋಗು.”

ಹಾಗೆ ಹೇಳಿಕೊಂಡು ಅಳುತ್ತಿದ್ದ ತಾಯಿಯನ್ನು ನೋಡಿ ಶ್ರೀರಾಮನು ತಾನೂ ಕಣ್ಣೀರಿಡುತ್ತಾ ಅವಳಿಗೆ ಪುನಃ ಈ ಮಾತನ್ನು ಹೇಳಿದನು :

“ಜೀವಿಸಿರುವ ಹೆಂಗಸಿಗೆ ಪತಿಯೇ ದೈವವಮ್ಮಾ! ಅವನೇ ಸ್ವಾಮಿಯು. ಸರ್ವಸ್ವವೂ ಅವನೇ. ಈಗ ನನಗೂ ಮತ್ತು ನಿನಗೂ ರಾಜನೂ, ಪ್ರಭಾವಶಾಲಿಯಾದ ಪ್ರಭುವೂ ಅವನೇ ಆಗಿರುವನು.

ಉಪಮಾನವೂ ಸಹ ಹೃದಯಂಗಮವಾಗಿದೆ. ‘ಹೇಮಂತರ್ತುವು ಕಳೆದೊಡನೆಯೇ ಬರುವ ಶಿಶಿರರ್ತುವಿನಲ್ಲಿ ಹುಲ್ಲುಮೆದೆಯನ್ನು ಬೆಂಕಿಯು ಸುಟ್ಟುಹಾಕುವಂತೆ ಶೋಕಾಗ್ನಿಯು ನನ್ನನ್ನು ಸುಟ್ಟುಹಾಕುತ್ತದೆ. ಹೇಮಂತರ್ತುವಿನಲ್ಲಿ ಹುಲ್ಲುಮೆದೆಗೆ ಬೆಂಕಿಬಿದ್ದರೆ ಹಿಮವು ಬಿದ್ದು ಬೆಂಕಿಯು ಬೇಗ ಆರಿಹೋಗಬಹುದು. ಹೇಮಂತರ್ತುವು ಕಳೆದು ಶಿಶಿರರ್ತುವು ಪ್ರಾರಂಭವಾದಾಗ ಹಿಮವು ಹೆಚ್ಚು ಬೀಳದೇ ಇರುವುದರಿಂದ ಬೆಂಕಿಯು ಆರಿಹೋಗುವುದಿಲ್ಲ. ಗ್ರೀಷ್ಮರ್ತುವಿನಲ್ಲಿ ಹೊತ್ತಿಕೊಂಡು ಉರಿಯುವಂತೆ ಧಗಧಗನೆ ಉರಿದು ಭಸ್ಮವಾಗುವುದೂ ಇಲ್ಲ. ಧೂಮದಿಂದ ಕೂಡಿ ನಿಧಾನವಾಗಿ ಉರಿಯುತ್ತಾ ಹೋಗುವುದು. ಈ ರೀತಿಯಲ್ಲಿ ಕೌಸಲ್ಯೆಯ ಹೃದಯದಲ್ಲಿನ ಶೋಕಾಗ್ನಿಯು ಉರಿಯುವುದೆಂದು ಹೃದಯಂಗಮವಾಗಿ ವಾಲ್ಮೀಕಿಗಳು ಚಿತ್ರಿಸಿದ್ದಾರೆ.

ನ ಹ್ಯನಾಥಾ ವಯಂ ರಾಜ್ಞಾ ಲೋಕನಾಥೇನ ಧೀಮತಾ ।

ಲೋಕನಾಥನಾದ, ಧೀಮಂತನಾದ ರಾಜನಿರುವಾಗ ನಾವೆಂದಿಗೂ ಅನಾಥರಾಗುವುದಿಲ್ಲ.

ಭರತಶ್ಚಾಪಿ ಧರ್ಮಾತ್ಮಾ ಸರ್ವಭೂತಪ್ರಿಯಂವದಃ ।
ಭವತೀಮನುವರ್ತೇತ ಸ ಹಿ ಧರ್ಮರತಃ ಸದಾ ॥೨೨॥

ಭರತನು ಕೂಡ ಧರ್ಮಾತ್ಮನು. ಸರ್ವಪ್ರಾಣಿಗಳ ವಿಷಯದಲ್ಲಿಯೂ ಪ್ರಿಯವಚನವನ್ನೇ ಆಡತಕ್ಕವನು. ಧರ್ಮದಲ್ಲಿಯೇ ನಿರತನಾಗಿರುವ ಅವನು ನಿನ್ನನ್ನೇ ಅನುಸರಿಸಿಕೊಂಡಿರುತ್ತಾನೆ.

ನಾನು ಹೊರಟುಹೋದನಂತರ ಪುತ್ರಶೋಕಪೀಡಿತನಾದ ರಾಜನಿಗೆ ಸ್ವಲ್ಪವೂ ಶ್ರಮವಾಗದ ರೀತಿಯಲ್ಲಿ, ಖೇದವಾಗುವ ರೀತಿಯಲ್ಲಿ, ಜಾಗರೂಕತೆಯಿಂದ ಅವನನ್ನು ನೋಡಿಕೊಳ್ಳಬೇಕು. ಪುತ್ರಶೋಕವೆಂಬುದು ಅತಿದಾರುಣವಾದುದು. ಅಪರಿಹಾರ್ಯವಾದುದು. ಈ ಶೋಕವು ನಮ್ಮ ರಾಜನನ್ನು ವಿನಾಶಗೊಳಿಸದಂತೆ ನೋಡಿಕೋ. ನೀನು ಏಕಾಗ್ರಚಿತ್ತಳಾಗಿ ವೃದ್ಧನಾದ ರಾಜನಿಗೆ ಯಾವಾಗಲೂ ಹಿತವಾಗುವುದನ್ನೇ ಮಾಡುತ್ತಿರು.

ವ್ರತೋಪವಾಸನಿರತಾ ಯಾ ನಾರೀ ಪರಮೋತ್ತಮಾ ।
ಭರ್ತಾರಂ ನಾನುವರ್ತೇತ ಸಾ ತು ಪಾಪಗತಿರ್ಭವೇತ್ ॥೨೫॥

ಪರಮಶ್ರೇಷ್ಠಳಾದ ಸ್ತ್ರೀಯು ವ್ರತೋಪವಾಸಗಳಲ್ಲಿ ನಿರತಳಾಗಿ, ಪತಿಯನ್ನು ಅನುಸರಿಸಿ ನಡೆಯದಿದ್ದರೆ (ಪತಿಶುಶ್ರೂಷೆಯನ್ನು ಮಾಡದಿದ್ದರೆ) ಪರಮಪಾಪಿಗಳಿಗೆ ಪ್ರಾಪ್ತವಾಗುವ ದುರ್ಗತಿಯನ್ನೇ ಹೊಂದುವಳು.

ಭರ್ತುಃ ಶುಶ್ರೂಷಯಾ ನಾರೀ ಲಭತೇ ಸ್ವರ್ಗಮುತ್ತಮಮ್ ।
ಅಪಿ ಯಾ ನಿರ್ನಮಸ್ಕಾರಾ ನಿವೃತ್ತಾ ದೇವಪೂಜನಾತ್ ॥೨೬॥

ವ್ಯವಧಾನವಿಲ್ಲದೇ ಪೂಜ್ಯರಾದವರಿಗೆ ನಮಸ್ಕಾರವನ್ನು ಮಾಡದಿದ್ದರೂ, ದೈನಂದಿನದೇವಪೂಜಾದಿಗಳನ್ನು ಬಿಟ್ಟಿದ್ದರೂ–ಪತಿಶುಶ್ರೂಷೆಯೊಂದರಿಂದಲೇ ಸ್ತ್ರೀಯು ಉತ್ತಮವಾದ ಸ್ವರ್ಗಲೋಕವನ್ನು ಹೊಂದುತ್ತಾಳೆ.

ಶುಶ್ರೂಷಾಮೇವ ಕುರ್ವೀತ ಭರ್ತುಃ ಪ್ರಿಯಹಿತೇ ರತಾ ।
ಏಷ ಧರ್ಮಃ ಪುರಾ ದೃಷ್ಟೋ ವೇದೇ ಲೋಕೇ ಶ್ರುತಃ ಸ್ಮೃತಃ ॥

ಸತಿಯು ಯಾವಾಗಲೂ ಪತಿಗೆ ಪ್ರಿಯವನ್ನುಂಟುಮಾಡುವುದರಲ್ಲಿಯೂ, ಹಿತವನ್ನುಂಟುಮಾಡುವುದರಲ್ಲಿಯೂ ನಿರತಳಾಗಿದ್ದು ಪತಿ ಶುಶ್ರೂಷೆಯನ್ನೇ ಅನವರತವಾಗಿ ಮಾಡುತ್ತಿರಬೇಕು. ಇದು ಲೋಕದಲ್ಲಿ ನಿತ್ಯಧರ್ಮ. ಲೋಕದಲ್ಲಿ ಈ ಧರ್ಮದ ಆಚರಣೆಯಿದೆ. ಹಾಗೂ ಶ್ರುತಿ-ಸ್ಮೃತಿಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ನೀನು ಪತಿಯು ಮಾಡುವ ಅಗ್ನಿಕಾರ್ಯಗಳಲ್ಲಿ ಸಹಭಾಗಿನಿಯಾಗಿರಬೇಕು. ದೇವತೆಗಳನ್ನು ಚಂದನ-ಪುಷ್ಪಾದಿಗಳಿಂದ ಅರ್ಚಿಸುತ್ತಿರಬೇಕು. ನನ್ನ ಸಲುವಾಗಿ ನೀನು ಸುವ್ರತರಾದ ಬ್ರಾಹ್ಮಣರನ್ನು ಸತ್ಕರಿಸಬೇಕು.

ಹೀಗೆ ನನ್ನ ಆಗಮನವನ್ನೇ ಅಭಿಲಾಷಿಸುವ ನೀನು ನಿಯಮಾನುಷ್ಠಾನಪರಳಾಗಿ, ನಿಯತಾಹಾರಳಾಗಿ, ಪತಿಶುಶ್ರೂಷೆಯನ್ನು ಅನವರತವಾಗಿ ಮಾಡುತ್ತಾ ನಾನು ಬರುವ ಕಾಲವನ್ನು ನಿರೀಕ್ಷಿಸುತ್ತಿರು.

ಪ್ರಾಪ್ಸ್ಯಸೇ ಪರಮಂ ಕಾಮಂ ಮಯಿ ಪ್ರತ್ಯಾಗತೇ ಸತಿ ।
ಯದಿ ಧರ್ಮಭೃತಾಂ ಶ್ರೇಷ್ಠೋ ಧಾರಯಿಷ್ಯತಿ ಜೀವಿತಮ್ ॥೩೦॥

ಅಮ್ಮ! ನಾನು ಬರುವವರೆಗೂ ಧರ್ಮಾತ್ಮರಲ್ಲಿ ಶ್ರೇಷ್ಠನಾದ ದಶರಥನು ಜೀವಿಸಿದ್ದರೆ ನಾನು ಹಿಂದಿರುಗಿದನಂತರ ನಿನ್ನ ಪರಮೇಷ್ಟವು ಈಡೇರುವುದು."

ಶ್ರೀರಾಮನು ಹೀಗೆ ಹೇಳಲು ಕಂಬನಿದುಂಬಿದ ಕಣ್ಣುಗಳುಳ್ಳವಳಾಗಿದ್ದ ಪುತ್ರವಿರಹಶೋಕದಿಂದ ಪೀಡಿತಳಾಗಿದ್ದ ಕೌಸಲ್ಯಾದೇವಿಯು ಶ್ರೀರಾಮನಿಗೆ ಹೇಳಿದಳು :

"ಪುತ್ರ! ಕಾಡಿಗೆ ಹೋಗುವುದರಲ್ಲಿ ನಿನ್ನ ಸುದೃಢವಾದ ಬುದ್ಧಿಯನ್ನು ಬದಲಿಸಲು ನಾನು ಖಂಡಿತವಾಗಿಯೂ ಶಕ್ತಳಲ್ಲ. **ನೂನಂ ಕಾಲೋ ದುರತ್ಯಯಃ**–ನಿಶ್ಚಯವಾಗಿಯೂ ಕಾಲಧರ್ಮವನ್ನು ಮೀರಿ ನಡೆಯಲು ಸಾಧ್ಯವಿಲ್ಲ. ಪಿತೃವಾಕ್ಯಪರಿಪಾಲನೆಯಲ್ಲಿಯೇ ಏಕಾಗ್ರಚಿತ್ತನಾಗಿ ನೀನು ಅರಣ್ಯಕ್ಕೆ ಪ್ರಯಾಣಮಾಡು. ನಿನಗೆ ಸರ್ವಕಾಲಗಳಲ್ಲಿಯೂ

ಮಂಗಳವುಂಟಾಗಲಿ. ನೀನು ಅರಣ್ಯದಿಂದ ಹಿಂದಿರುಗಿದನಂತರ ನಾನು ಶೋಕರಹಿತಳಾಗುವೆನು. ಪ್ರತಿಜ್ಞೆಯಂತೆ ಹದಿನಾಲ್ಕು ವರ್ಷಗಳ ಕಾಲ ವನವಾಸವನ್ನು ಮುಗಿಸಿ ಪಿತೃಋಣವನ್ನು ತೀರಿಸಿ ಕೃತಾರ್ಥನಾಗಿ ಅಯೋಧ್ಯೆಗೆ ಬರುವ, ಸುಚರಿತನಾದ, ಮಹಾಭಾಗನಾದ ನಿನ್ನಿಂದ ಪರಮೋತ್ಕೃಷ್ಟವಾದ ಸುಖವನ್ನು ಪಡೆಯುವೆನು.

ಕೃತಾನ್ತಸ್ಯ ಗತಿಃ ಪುತ್ರ ದುರ್ವಿಭಾವ್ಯಾ ಸದಾ ಭುವಿ ।
ಯಸ್ತ್ವಾಂ ಸಂಚೋದಯತಿ ಮೇ ವಚ ಆಚ್ಛಿದ್ಯ ರಾಘವ ॥೩೫॥

ಪ್ರಪಂಚದಲ್ಲಿ ವಿಧಿಯ ಮಾರ್ಗವನ್ನು ಭಾವಿಸಿಕೊಳ್ಳಲೂ (ಊಹಿಸಲೂ) ಕಷ್ಟಸಾಧ್ಯವಾದುದು. ತಾಯಿಯಾದ ನನ್ನ ಕರುಣಾ ಜನಕವಾದ ಮಾತನ್ನೂ ಕತ್ತರಿಸಿ ವನವಾಸಕ್ಕೆ ನಿನ್ನನ್ನು ವಿಧಿಯು ಪ್ರಚೋದಿಸುತ್ತಿರುವುದಲ್ಲವೇ?

ಮಹಾಬಾಹುವೇ! ಈಗ ನೀನು ಅರಣ್ಯಕ್ಕೆ ಪ್ರಯಾಣಮಾಡು. ಕ್ಷೇಮದಿಂದ ಹಿಂದಿರುಗಿ ಬರುವ ನೀನು ನನ್ನನ್ನು ಮೃದುವಾದ ಮನೋಹರವಾದ ಸಾಂತ್ವನದ ವಚನಗಳಿಂದ ಸಂತೋಷಗೊಳಿಸುವೆಯಂತೆ. ನೀನು ಅರಣ್ಯದಿಂದ ಬರುವ ಕಾಲವೂ ಈಗಲೇ ಸನ್ನಿಹಿತವಾಗಿಬಿಟ್ಟರೆ ಜಟಾ-ವಲ್ಕಲಗಳನ್ನು ಧರಿಸಿ ಅರಣ್ಯದಿಂದ ಹಿಂದಿರುಗುವ ನಿನ್ನನ್ನು ಈಗಲೇ ನೋಡಿಬಿಡುತ್ತೇನೆ."*

ವನವಾಸಕ್ಕೆ ಹೊರಡಲು ನಿಶ್ಚಯಿಸಿ ನಿಂತಿದ್ದ ಶ್ರೀರಾಮನನ್ನು ಕೌಸಲ್ಯಾದೇವಿಯು ಪರಮಾನಂದದಿಂದ ನೋಡಿದಳು. ಹಾಗೆ ಹೊರಟಿರುವ ಶ್ರೀರಾಮನಿಗೆ ಮಂಗಳಾಶಂಸನೆಗಳನ್ನು ಮಾಡಲು ಅಪೇಕ್ಷಿಸಿ ಶುಭಲಕ್ಷಣ ಸಂಪನ್ನನಾದ ಶ್ರೀರಾಮನಿಗೆ ಹೇಳತೊಡಗಿದಳು.

ಇಳನೆಯ ಸರ್ಗವು ಮುಗಿಯಿತು.

---

* ಕೌಸಲ್ಯೆಯು ರಾಮನ ವಿಯೋಗವನ್ನು ಹೆಚ್ಚು ಕಾಲ ಸಹಿಸಲಾರಳು. ಆದುದರಿಂದ ಹದಿನಾಲ್ಕು ವರ್ಷಗಳು ಹದಿನಾಲ್ಕು ಕ್ಷಣಗಳಂತೆ ಕಳೆದುಹೋಗಲೆಂಬ ಆಶಯವನ್ನು ವ್ಯಕ್ತಪಡಿಸುತ್ತಾಳೆ.

ಕೌಸಲ್ಯಾದೇವಿಯು ಮಂಗಳಕರವಾದ ಶುಭಾಶಂಸನೆಗಳನ್ನು ಮಾಡಿದುದು : ಶ್ರೀರಾಮನು ತಾಯಿಗೆ ನಮಸ್ಕರಿಸಿ ಸೀತಾದೇವಿಯ ಅಂತಃಪುರಕ್ಕೆ ಹೋದುದು

ಸಾಪನೀಯ ತಮಾಯಾಸಮುಪಸ್ಪೃಶ್ಯ ಜಲಂ ಶುಚಿ ।
ಚಕಾರ ಮಾತಾ ರಾಮಸ್ಯ ಮಙ್ಗಲಾನಿ ಮನಸ್ವಿನೀ ॥೧॥

ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಯು ಪುತ್ರವಿಯೋಗ ಶೋಕದಿಂದ ಪ್ರಾಪ್ತವಾಗಿದ್ದ ಆಯಾಸವನ್ನು* ದೂರಮಾಡಿ, ಶುದ್ಧಾಚಮನಮಾಡಿ ಸುಮನಸ್ಕಳಾಗಿ ಮಂಗಳಾಶಂಸನೆಗಳನ್ನು ಮಾಡಲು ಉಪಕ್ರಮಿಸಿದಳು.

"ರಘೂತ್ತಮನೇ! ನಿನ್ನನ್ನು ವನವಾಸಗಮನದಿಂದ ಪರಾಙ್ಮುಖನನ್ನಾಗಿ ಮಾಡಲು ಶಕ್ಯವಿಲ್ಲ. ಆದುದರಿಂದ ನೀನಿನ್ನು ಅರಣ್ಯಕ್ಕೆ ಹೊರಡು. ಆದರೆ ಬೇಗ ಬಂದು ಬಿಡು. ಯಾವಾಗಲೂ ಸತ್ಪುರುಷರ ಮಾರ್ಗವನ್ನೇ ಅನುಸರಿಸು.

ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನ ಚ ।
ಸ ವೈ ರಾಘವಶಾರ್ದೂಲ ಧರ್ಮಸ್ತ್ವಾಮಭಿರಕ್ಷತು ॥೩॥

ರಾಘವಶ್ರೇಷ್ಠನೇ! ನೀನು ಯಾವ ಧರ್ಮವನ್ನು ಧೈರ್ಯದಿಂದಲೂ ನಿಯಮದಿಂದಲೂ ಪರಿಪಾಲನೆಮಾಡುವೆಯೋ–ಅದೇ ಧರ್ಮವು ನಿನ್ನನ್ನು ರಕ್ಷಿಸಲಿ.

ಯೇಭ್ಯಃ ಪ್ರಣಮಸೇ ಪುತ್ರ ಚೈತ್ಯೇಷ್ವಾಯತನೇಷು ಚ ।
ತೇ ಚ ತ್ವಾಮಭಿರಕ್ಷನ್ತು ವನೇ ಸಹ ಮಹರ್ಷಿಭಿಃ ॥೪॥

ಪವಿತ್ರಸ್ಥಳಗಳಲ್ಲಿಯೂ ಮತ್ತು ದೇವಮಂದಿರಗಳಲ್ಲಿಯೂ ಇರುವ

---

* ಆಯಾಸ-ಶೋಕ-ದುಃಖಗಳೆಲ್ಲವೂ ಸ್ನೇಹಮೂಲಗಳೆಂಬುದಕ್ಕೆ ಮಹಾಭಾರತದಲ್ಲಿ ಹೀಗೆ ಹೇಳಿದೆ : ಸ್ನೇಹಮೂಲಾನಿ ದುಃಖಾನಿ ಸ್ನೇಹಜಾನಿ ಭಯಾನಿ ಚ । ಶೋಕಹರ್ಷೌ ತಥಾಯಾಸಃ ಸರ್ವಂ ಸ್ನೇಹಾತ್ಪ್ರವರ್ತತೇ ॥ (ವನಪರ್ವ) ದುಃಖಗಳು, ಭಯಗಳು, ಶೋಕ-ಹರ್ಷಗಳು, ಆಯಾಸ–ಇವೆಲ್ಲವೂ ಸ್ನೇಹದಿಂದಲೇ ಉಂಟಾಗುತ್ತವೆ.

ಯಾವ ದೇವತೆಗಳನ್ನು ನೀನು ಅನುದಿನವೂ ಭಕ್ತಿಪೂರ್ವಕವಾಗಿ ನಮಸ್ಕರಿಸುವೆಯೋ–ಆ ಎಲ್ಲ ದೇವತೆಗಳೂ ಅರಣ್ಯದಲ್ಲಿ ಮಹರ್ಷಿಗಳೊಡನಿರುವ ನಿನ್ನನ್ನು ರಕ್ಷಿಸಲಿ.

ಯಾನಿ ದತ್ತಾನಿ ತೇಽಸ್ತ್ರಾಣಿ ವಿಶ್ವಾಮಿತ್ರೇಣ ಧೀಮತಾ ।
ತಾನಿ ತ್ವಾಮಭಿರಕ್ಷನ್ತು ಗುಣೈಃ ಸಮುದಿತಂ ಸದಾ ॥೫॥

ಬುದ್ಧಿವಂತರಾದ ವಿಶ್ವಾಮಿತ್ರರು ನಿನಗೆ ಯಾವ-ಯಾವ ಮಹಾಸ್ತ್ರಗಳನ್ನು ಕೊಟ್ಟಿರುವರೋ–ಆ ಮಹಾಸ್ತ್ರಗಳು ಸಕಲಸದ್ಗುಣಸಂಪನ್ನನಾದ ನಿನ್ನನ್ನು ಸದಾ ರಕ್ಷಿಸಲಿ.

ಪಿತೃಶುಶ್ರೂಷಯಾ ಪುತ್ರ ಮಾತೃಶುಶ್ರೂಷಯಾ ತಥಾ ।
ಸತ್ಯೇನ ಚ ಮಹಾಬಾಹೋ ಚಿರಂ ಜೀವಾಭಿರಕ್ಷಿತಃ ॥೬॥

ಪಿತೃಶುಶ್ರೂಷೆಯಿಂದ ಪ್ರಾಪ್ತವಾದ ಫಲದಿಂದಲೂ, ಮಾತೃಶುಶ್ರೂಷೆಯಿಂದ ಪ್ರಾಪ್ತವಾದ ಫಲದಿಂದಲೂ, ಸತ್ಯಪರಿಪಾಲನೆಯ ಫಲದಿಂದಲೂ ಸಂರಕ್ಷಿಸಲ್ಪಟ್ಟವನಾಗಿ ಚಿರಂಜೀವಿಯಾಗು.

ಸಮಿತ್ಕುಶಪವಿತ್ರಾಣಿ ವೇದ್ಯಶ್ಚಾಯತನಾನಿ ಚ ।
ಸ್ಥಣ್ಡಿಲಾನಿ ಚ ಚಿತ್ರಾಣಿ ಶೈಲಾ ವೃಕ್ಷಾಃ ಕ್ಷುಪಾ ಹ್ರದಾಃ ।
ಪತಙ್ಗಾಃ ಪನ್ನಗಾಃ ಸಿಂಹಾಸ್ತ್ವಾಂ ರಕ್ಷನ್ತು ನರೋತ್ತಮ ॥೭॥

ನರೋತ್ತಮನೇ! ಅರಣ್ಯದಲ್ಲಿರುವ ಸಮಿತ್ತುಗ್ಗಳು, ದರ್ಭೆಗಳು, ದರ್ಭೆಯ ಗ್ರಂಥಿಗಳು, ಯಜ್ಞವೇದಿಕೆಗಳು, ದೇವಪೂಜಾಸ್ಥಳಗಳು, ಬ್ರಾಹ್ಮಣರು ಮಲಗುವ ಪವಿತ್ರಪ್ರದೇಶಗಳು, ಪರ್ವತಗಳು, ದೊಡ್ಡ ಮರಗಳು, ಸಣ್ಣ ಕೊಂಬೆಗಳಿರುವ ವೃಕ್ಷಗಳು, ಸರೋವರಗಳು, ಪಕ್ಷಿಗಳು, ಸರ್ಪಗಳು, ಸಿಂಹಗಳು–ನಿನ್ನನ್ನು ಸದಾ ರಕ್ಷಣೆಮಾಡಲಿ.

ಸ್ವಸ್ತಿ ಸಾಧ್ಯಾಶ್ಚ ವಿಶ್ವೇ ಚ ಮರುತಶ್ಚ ಮಹರ್ಷಯಃ ।
ಸ್ವಸ್ತಿ ಧಾತಾ ವಿಧಾತಾ ಚ ಸ್ವಸ್ತಿ ಪೂಷಾ ಭಗೋಽರ್ಯಮಾ ॥೮॥

ಲೋಕಪಾಲಾಶ್ಚ ತೇ ಸರ್ವೇ ವಾಸವಪ್ರಮುಖಾಸ್ತಥಾ ।
ಋತವಶ್ಚೈವ ಪಕ್ಷಾಶ್ಚ ಮಾಸಾಃ ಸಂವತ್ಸರಾಃ ಕ್ಷಪಾಃ ।
ದಿನಾನಿ ಚ ಮುಹೂರ್ತಾಶ್ಚ ಸ್ವಸ್ತಿ ಕುರ್ವನ್ತು ತೇ ಸದಾ ॥೯॥

ಸಾಧ್ಯರು, ವಿಶ್ವೇದೇವತೆಗಳು, ಸಪ್ತಮರುತ್ತುಗಳು, ಮಹರ್ಷಿಗಳು, ದಕ್ಷಬ್ರಹ್ಮ, ಚತುರ್ಮುಖಬ್ರಹ್ಮ, ಪೂಷಾ, ಭಗ, ಅರ್ಯಮನೇ ಮೊದಲಾದ ದ್ವಾದಶಾದಿತ್ಯರು, ಇಂದ್ರನೇ ಮೊದಲಾದ ಲೋಕಪಾಲಕರು, ವಸಂತವೇ ಮೊದಲಾದ ಆರು ಋತುಗಳು, ಶುಕ್ಲ-ಕೃಷ್ಣಪಕ್ಷಗಳು, ಚೈತ್ರವೇ ಮೊದಲಾದ ಹನ್ನೆರಡು ಮಾಸಗಳು, ಪ್ರಭವ-ವಿಭವಾದಿ ಅರುವತ್ತು ಸಂವತ್ಸರಗಳು, ರಾತ್ರಿಗಳು, ಹಗಲುಗಳು ಮತ್ತು ಮುಹೂರ್ತಗಳು–ನಿನಗೆ ಸರ್ವಕಾಲಗಳಲ್ಲಿಯೂ ಮಂಗಳವನ್ನುಂಟುಮಾಡಲಿ.

ಸ್ಮೃತಿರ್ಧೃತಿಶ್ಚ ಧರ್ಮಶ್ಚ ಪಾತು ತ್ವಾಂ ಪುತ್ರ ಸರ್ವತಃ ॥೧೦॥

ಮಗು! ಸ್ಮೃತಿ, ಧೃತಿ ಮತ್ತು ಧರ್ಮಗಳು ಎಲ್ಲ ಕಡೆಗಳಿಂದಲೂ ನಿನ್ನನ್ನು ರಕ್ಷಿಸಲಿ.

ಸ್ಕನ್ದಶ್ಚ ಭಗವಾನ್ದೇವಃ ಸೋಮಶ್ಚ ಸಬೃಹಸ್ಪತಿಃ ।
ಸಪ್ತರ್ಷಯೋ ನಾರದಶ್ಚ ತೇ ತ್ವಾಂ ರಕ್ಷನ್ತು ಸರ್ವತಃ ॥೧೧॥

ಪೂಜ್ಯನಾದ ಸ್ಕಂದ (ಸನತ್ಕುಮಾರ), ಸೋಮ, ಬೃಹಸ್ಪತಿ, ಸಪ್ತರ್ಷಿಗಳು ಮತ್ತು ನಾರದ–ಇವರೆಲ್ಲರೂ ನಿನ್ನನ್ನು ಎಲ್ಲ ಕಡೆಗಳಲ್ಲಿಯೂ ರಕ್ಷಿಸಲಿ.

ಯೇ ಚಾಪಿ ಸರ್ವತಃ ಸಿದ್ಧಾ ದಿಶಶ್ಚ ಸದಿಗೀಶ್ವರಾಃ ।
ಸ್ತುತಾ ಮಯಾ ವನೇ ತಸ್ಮಿನ್ಪಾನ್ತು ತ್ವಾಂ ಪುತ್ರ ನಿತ್ಯಶಃ ॥೧೨॥

ಸಿದ್ಧರೂ, ಹತ್ತು ದಿಕ್ಕುಗಳೂ ಮತ್ತು ದಿಕ್ಪಾಲಕರೂ ನಾನು ಮಾಡುವ ಸ್ತೋತ್ರದಿಂದ ಸಂತುಷ್ಟರಾಗಿ ಕಾಡಿನಲ್ಲಿ ನಿನ್ನನ್ನು ಅನುದಿನವೂ ಎಲ್ಲ ಕಡೆಗಳಿಂದಲೂ ಸಂರಕ್ಷಿಸಲಿ.

ಶೈಲಾಃ ಸರ್ವೇ ಸಮುದ್ರಾಶ್ಚ ರಾಜಾ ವರುಣ ಏವ ಚ ।
ದ್ಯೌರನ್ತರಿಕ್ಷಂ ಪೃಥಿವೀ ನದ್ಯಃ ಸರ್ವಾಸ್ತಥೈವ ಚ ॥೧೩॥

ನಕ್ಷತ್ರಾಣಿ ಚ ಸರ್ವಾಣಿ ಗ್ರಹಾಶ್ಚ ಸಹದೇವತಾಃ ।
ಅಹೋರಾತ್ರೇ ತಥಾ ಸಂಧ್ಯೇ ಪಾನ್ತು ತ್ವಾಂ ವನಮಾಶ್ರಿತಮ್ ॥

ಸಮಸ್ತಪರ್ವತಗಳೂ, ಸಮಸ್ತಸಮುದ್ರಗಳೂ, ಇವುಗಳ ರಾಜನಾದ

ವರುಣನೂ, ದ್ಯುಲೋಕ-ಅಂತರಿಕ್ಷ-ಭೂಮಿಗಳೂ, ಸಮಸ್ತನದಿಗಳೂ, ಎಲ್ಲ ನಕ್ಷತ್ರಗಳೂ, ಅಭಿಮಾನಿದೇವತೆಗಳಿಂದ ಕೂಡಿದ ಎಲ್ಲ ಗ್ರಹಗಳೂ, ಹಗಲು-ರಾತ್ರಿಗಳೂ, ಎರಡು ಸಂಧ್ಯೆಗಳೂ–ಅರಣ್ಯವನ್ನು ಆಶ್ರಯಿಸುವ ನಿನ್ನನ್ನು ರಕ್ಷಿಸಲಿ.

ಋತವಶ್ಚಾಪಿ ಷಟ್ ಪುಣ್ಯಾ ಮಾಸಾಃ ಸಂವತ್ಸರಾಸ್ತಥಾ ।
ಕಲಾಶ್ಚ ಕಾಷ್ಠಾಶ್ಚ ತಥಾ ತವ ಶರ್ಮ ದಿಶನ್ತು ತೇ ॥೧೫॥

ಆರು ಋತುಗಳೂ, ಚೈತ್ರಾದಿ ಮಾಸಗಳೂ, ಪ್ರಭವಾದಿ ಸಂವತ್ಸರಗಳೂ, ಕಲೆಗಳೂ, ಕಾಷ್ಠಗಳೂ ನಿನಗೆ ಸುಖವನ್ನುಂಟುಮಾಡಲಿ.

ಮಹಾವನೇ ವಿಚರತೋ ಮುನಿವೇಷಸ್ಯ ಧೀಮತಃ ।
ತಥಾ ದೇವಾಶ್ಚ ದೈತ್ಯಾಶ್ಚ ಭವನ್ತು ಸುಖದಾಃ ಸದಾ ॥೧೬॥

ಮುನಿವೇಷವನ್ನು ಧರಿಸಿ ಅರಣ್ಯದಲ್ಲಿ ಸಂಚರಿಸುವ ಧೀಮಂತನಾದ ನಿನಗೆ ಅಲ್ಲಿರುವ ದೇವತೆಗಳೂ ದೈತ್ಯರೂ ಸರ್ವದಾ ಸುಖದಾಯಕರಾಗಿರಲಿ.

ರಾಕ್ಷಸಾನಾಂ ಪಿಶಾಚಾನಾಂ ರೌದ್ರಾಣಾಂ ಕ್ರೂರಕರ್ಮಣಾಮ್ ।
ಕ್ರವ್ಯಾದಾನಾಂ ಚ ಸರ್ವೇಷಾಂ ಮಾ ಭೂತ್ಪುತ್ರಕ ತೇ ಭಯಮ್ ॥೧೭॥

ಭಯಂಕರರಾದ ರಾಕ್ಷಸರಿಂದಲೂ, ಕ್ರೂರಕರ್ಮಿಗಳಾದ ಪಿಶಾಚರಿಂದಲೂ, ಮಾಂಸಭಕ್ಷಕಪ್ರಾಣಿಗಳಿಂದಲೂ ನಿನಗೆ ಭಯವುಂಟಾಗದಿರಲಿ.

ಪ್ಲವಗಾ ವೃಶ್ಚಿಕಾ ದಂಶಾ ಮಶಕಾಶ್ಚೈವ ಕಾನನೇ ।
ಸರೀಸೃಪಾಶ್ಚ ಕೀಟಾಶ್ಚ ಮಾ ಭೂವನ್ಗಹನೇ ತವ ॥೧೮॥

ಗಹನವಾದ ಕಾಡಿನಲ್ಲಿರುವ ಕಪಿಗಳೂ, ಚೇಳುಗಳೂ, ಕಾಡುನೊಣಗಳೂ, ಸೊಳ್ಳೆಗಳೂ, ಸರ್ಪಗಳೂ, ಕೀಟಗಳೂ ನಿನಗೆ ಬಾಧೆಯನ್ನುಂಟುಮಾಡದಿರಲಿ.

ಮಹಾದ್ವಿಪಾಶ್ಚ ಸಿಂಹಾಶ್ಚ ವ್ಯಾಘ್ರಾ ಋಕ್ಷಾಶ್ಚ ದಂಷ್ಟ್ರಿಣಃ ।
ಮಹಿಷಾಃ ಶೃಙ್ಗಿಣೋ ರೌದ್ರಾ ನ ತೇ ದ್ರುಹ್ಯನ್ತು ಪುತ್ರಕ ॥೧೯॥

ಮದಿಸಿದ ಕಾಡಾನೆಗಳೂ, ಸಿಂಹಗಳೂ, ಹುಲಿಗಳೂ, ಕರಡಿಗಳೂ,

ಕಾಡುಹಂದಿಗಳೂ, ದೊಡ್ಡ-ದೊಡ್ಡ ಕೋಡುಗಳಿರುವ ಕಾಡುಕೋಣಗಳೂ, ಕಾಡೆಮ್ಮೆಗಳೂ ಮತ್ತು ಭಯಂಕರವಾದ ಇತರ ದುಷ್ಟಪ್ರಾಣಿಗಳೂ ಅರಣ್ಯದಲ್ಲಿ ನಿನ್ನನ್ನು ಘಾಸಿಪಡಿಸದಿರಲಿ.

ನೃಮಾಂಸಭೋಜಿನೋ ರೌದ್ರಾ ಯೇ ಚಾನ್ಯೇ ಸತ್ತ್ವಜಾತಯಃ ।
ಮಾ ಚ ತ್ವಾ ಹಿಂಸಿಷುಃ ಪುತ್ರ ಮಯಾ ಸಂಪೂಜಿತಾಸ್ತ್ವಿಹ ॥೨೦॥

ಮನುಷ್ಯರ ಮಾಂಸವನ್ನು ಭಕ್ಷಿಸುವ ಭಯಂಕರವಾದ ಯಾವ ಕ್ರೂರಪ್ರಾಣಿಗಳಿವೆಯೋ–ಅವೆಲ್ಲವೂ ನಾನು ಮಾಡುವ ಪೂಜೆಯಿಂದ ಸಂತುಷ್ಟವಾಗಿ ನಿನ್ನನ್ನು ಹಿಂಸಿಸದಿರಲಿ.

ಆಗಮಾಸ್ತೇ ಶಿವಾಃ ಸನ್ತು ಸಿಧ್ಯನ್ತು ಚ ಪರಾಕ್ರಮಾಃ ।
ಸರ್ವಸಂಪತ್ತಯೇ ರಾಮ ಸ್ವಸ್ತಿಮಾನ್ಗಚ್ಛ ಪುತ್ರಕ ॥೨೧॥

ನೀನು ಅರಣ್ಯದಲ್ಲಿ ಹೋಗುವ ಮಾರ್ಗಗಳು* ನಿನಗೆ ಶುಭದಾಯಕಗಳಾಗಲಿ. ನಿನ್ನ ಪರಾಕ್ರಮಗಳು ಅರಣ್ಯದಲ್ಲಿ ಸಫಲಗಳಾಗಲಿ. ಸಮಸ್ತ ಸಂಪತ್ತಿನ ಪ್ರಾಪ್ತಿಗಾಗಿ ಕ್ಷೇಮದಿಂದ ಅರಣ್ಯಕ್ಕೆ ಪ್ರಯಾಣಮಾಡು.

ಸ್ವಸ್ತಿ ತೇಽಸ್ತ್ವಾನ್ತರಿಕ್ಷೇಭ್ಯಃ ಪಾರ್ಥಿವೇಭ್ಯಃ ಪುನಃ ಪುನಃ ।
ಸರ್ವೇಭ್ಯಶ್ಚೈವ ದೇವೇಭ್ಯೋ ಯೇ ಚ ತೇ ಪರಿಪನ್ಥಿನಃ ॥೨೨॥

ವತ್ಸ! ಅಂತರಿಕ್ಷದಲ್ಲಿ ಸಂಚರಿಸುವವರಿಂದಲೂ, ಭೂಮಿಯಲ್ಲಿ ಸಂಚರಿಸುವವರಿಂದಲೂ, ಸಕಲದೇವತೆಗಳಿಂದಲೂ ಮತ್ತು ಶತ್ರುಗಳಿಂದಲೂ ನಿನಗೆ ಮಂಗಳವುಂಟಾಗಲಿ.

ಶುಕ್ರಃ ಸೋಮಶ್ಚ ಸೂರ್ಯಶ್ಚ ಧನದೋಽಥ ಯಮಸ್ತಥಾ ।
ಪಾನ್ತು ತ್ವಾಮರ್ಚಿತಾ ರಾಮ ದಣ್ಡಕಾರಣ್ಯವಾಸಿನಮ್ ॥೨೩॥

ನಾನು ಪೂಜಿಸುವ ಶುಕ್ರ-ಸೋಮ-ಸೂರ್ಯ-ಯಮ-ಕುಬೇರರು ದಂಡಕಾರಣ್ಯದಲ್ಲಿ ವಾಸಮಾಡಲಿರುವ ನಿನ್ನನ್ನು ರಕ್ಷಿಸಲಿ.

ಅಗ್ನಿರ್ವಾಯುಸ್ತಥಾ ಧೂಮೋ ಮನ್ತ್ರಾಶ್ಚರ್ಷಿಮುಖಾಚ್ಚ್ಯುತಾಃ ।
ಉಪಸ್ಪರ್ಶನಕಾಲೇ ತು ಪಾನ್ತು ತ್ವಾಂ ರಘುನನ್ದನ ॥೨೪॥

---

* ಆಗಮ್ಯನ್ತೇ ಇತಿ ಆಗಮಾಃ = ಮಾರ್ಗಾಃ (ಸಂಚಾರಮಾರ್ಗವು ಪ್ರಯಾಣಿಕರಿಂದ) ಉಪಯೋಗಿಸಲ್ಪಡುತ್ತದೆಯಾದ್ದರಿಂದ ಅದಕ್ಕೆ ಆಗಮವೆಂದು ಹೆಸರು.

ರಘುನಂದನನೇ! ಅಗ್ನಿಯೂ, ವಾಯುವೂ, ಅಗ್ನಿಸಂಬಂಧವಾದ ಧೂಮವೂ, ಯಜ್ಞಕಾಲದಲ್ಲಿ ಋಷಿಗಳ ಮುಖಗಳಿಂದ ಹೊರಡುವ ವೇದಮಂತ್ರಗಳೂ ಶುದ್ಧಾಚಮನಕಾಲದಲ್ಲಿ (ಸ್ನಾನಕಾಲದಲ್ಲಿ) ನಿನ್ನನ್ನು ರಕ್ಷಿಸಲಿ.*

ಸರ್ವಲೋಕಪ್ರಭುರ್ಬ್ರಹ್ಮಾ ಭೂತಭರ್ತಾ ತಥರ್ಷಯಃ ।
ಯೇ ಚ ಶೇಷಾಃ ಸುರಾಃ ಸರ್ವೇ ರಕ್ಷನ್ತು ವನವಾಸಿನಮ್ ॥೨೫॥

ಸಕಲಲೋಕಗಳಿಗೂ ಪ್ರಭುವಾದ ನಾರಾಯಣನೂ, ಸಕಲಚರಾಚರ ಪ್ರಾಣಿಗಳ ಉತ್ಪತ್ತಿಗೆ ಕಾರಣನಾದ ಬ್ರಹ್ಮನೂ, ಋಷಿ-ಮಹರ್ಷಿಗಳೂ, ಇವರೇ ಅಲ್ಲದೇ ಇನ್ನೂ ಅನೇಕ ದೇವಾಧಿದೇವತೆಗಳೂ ವನವಾಸಿಯಾಗಲಿರುವ ನಿನ್ನನ್ನು ರಕ್ಷಿಸಲಿ."

ಹೀಗೆ ವಿಶಾಲಾಕ್ಷಿಯಾದ ಕೌಸಲ್ಯಾದೇವಿಯು ದಿವ್ಯಕುಸುಮಾಲೆಗಳಿಂದಲೂ, ದಿವ್ಯಗಂಧಗಳಿಂದಲೂ, ಆಯಾ ದೇವತೆಗಳಿಗೆ ಅನುರೂಪವಾದ ಸ್ತೋತ್ರಗಳಿಂದಲೂ ಸಕಲದೇವತೆಗಳನ್ನೂ ತನ್ನ ಮಗನ ಕಲ್ಯಾಣಕ್ಕಾಗಿ ಪೂಜಿಸಿದಳು. ಮಹಾತ್ಮನಾದ ಬ್ರಾಹ್ಮಣನ ಮೂಲಕವಾಗಿ ಯಜ್ಞೇಶ್ವರನನ್ನು ವಿಧಿಪೂರ್ವಕವಾಗಿ ಪ್ರತಿಷ್ಠಾಪನೆಮಾಡಿಸಿ ಶ್ರೀರಾಮನಿಗೆ ವನವಾಸಕಾಲದಲ್ಲಿ ಮಂಗಳವಾಗಲೆಂದು ಹೋಮವನ್ನು ಮಾಡಿಸಿದಳು. ತುಪ್ಪ, ಬಿಳಿಯ ಹೂವಿನ ಮಾಲೆಗಳು, ನಾನಾವಿಧವಾದ ಸಮಿತ್ತುಗಳು, ಬಿಳಿಯ ಸಾಸಿವೆ ಮುಂತಾದ ಹೋಮದ್ರವ್ಯಗಳನ್ನೂ ವರಾಂಗನೆಯಾದ ಕೌಸಲ್ಯಾದೇವಿಯು ಸಿದ್ಧಪಡಿಸಿದಳು. ಹೀಗೆ ಸಿದ್ಧಪಡಿಸಿದ ಹೋಮದ್ರವ್ಯಗಳಿಂದ ಪುರೋಹಿತರು ಶ್ರೀರಾಮನಿಗೆ ಶಾಂತಿಯನ್ನೂ, ನೀರೋಗದೃಢಕಾಯತ್ವವನ್ನೂ ಸಂಕಲ್ಪಿಸಿ ವಿಧಿಪೂರ್ವಕವಾಗಿ ಹೋಮಮಾಡಿದರು. ಹೋಮಶೇಷ

---

* ಉಪಸ್ಪರ್ಶನ ಅಥವಾ ಉಪಸ್ಪರ್ಶಶಬ್ದಕ್ಕೆ ಶುದ್ಧಾಚಮನ, ಸ್ಪರ್ಶ ಮತ್ತು ಸ್ನಾನ–ಈ ಮೂರು ಅರ್ಥಗಳೂ ಇವೆ. ಉಪಸ್ಪರ್ಶಃ ಸ್ಪರ್ಶಮಾತ್ರೇ ಸ್ನಾನಾಚಮನಯೋರಪಿ [ಮೇದಿನೀ] ಆಚಮನವಿಧಿಯು ಹೀಗೆ ಉಕ್ತವಾಗಿದೆ. ತ್ರಿಃ ಪ್ರಾಶ್ಯಾಪೋ ದ್ವಿರುನ್ಮೃಜ್ಯ ಮುಖಮೇತಾನುಪಸ್ಪೃಶೇತ್ । ಆಸ್ಯನಾಸಾಕ್ಷಿಕರ್ಣಾಂಶ್ಚ ನಾಭಿವಕ್ಷಃ ಶಿರೋಂಸಕಾನ್ ॥ ಮಂತ್ರಪೂರ್ವಕವಾಗಿ ಮೂರು ಬಾರಿ ನೀರನ್ನು ಕುಡಿದು, ಎರಡು ಬಾರಿ ಕೈತೊಳೆದು ಮುಖ, ಮೂಗು, ಕಣ್ಣು, ಕಿವಿ, ಹೊಕ್ಕಳು, ಎದೆ, ತಲೆ, ಭುಜಗಳು–ಇವುಗಳನ್ನು ಮುಟ್ಟಿಕೊಳ್ಳಬೇಕು.

ದಿಂದ ವೇದಿಕೆಯ ಹೊರಭಾಗದಲ್ಲಿ ಲೋಕಪಾಲರ ಪ್ರೀತ್ಯರ್ಥವಾಗಿ ಬಲಿಪ್ರದಾನವನ್ನೂ ಮಾಡಿದರು. ಬಳಿಕ ಪುರೋಹಿತರು ಜೇನುತುಪ್ಪ, ಮೊಸರು, ಅಕ್ಷತೆ, ತುಪ್ಪ ಮುಂತಾದ ಶುಭವಸ್ತುಗಳೊಡನೆ ಋತ್ವಿಜರನ್ನು ಕುರಿತು 'ಪುಣ್ಯಾಹಂ ಭವನ್ತೋ ಬ್ರುವನ್ತು' ಮುಂತಾಗಿ ಹೇಳಿ ಅರಣ್ಯದಲ್ಲಿ ಪ್ರಾಪ್ತವಾಗಬಹುದಾದ ಅರಿಷ್ಟಗಳ ನಿರಸನಮಂತ್ರಗಳನ್ನು ಬ್ರಾಹ್ಮಣರಿಂದ ಹೇಳಿಸಿದರು.*

ಪುಣ್ಯಾಹವಾಚನವು ಯಥಾವಿಧಿಯಾಗಿ ಮುಗಿದನಂತರ ಕೌಸಲ್ಯಾದೇವಿಯು ಪುರೋಹಿತರನ್ನು ಸತ್ಕರಿಸಿ, ಅವರು ಅಪೇಕ್ಷಿಸಿದಷ್ಟು ದಕ್ಷಿಣೆಯನ್ನು ಕೊಟ್ಟು ಕಳುಹಿಸಿ ಶ್ರೀರಾಮನಿಗೆ ಹೇಳಿದಳು :

ಯನ್ಮಙ್ಗಲಂ ಸಹಸ್ರಾಕ್ಷೇ ಸರ್ವದೇವನಮಸ್ಕೃತೇ ।
ವೃತ್ರನಾಶೇ ಸಮಭವತ್ತತ್ತೇ ಭವತು ಮಙ್ಗಲಮ್ ॥೩೨॥

"ರಾಮ! ವೃತ್ರಾಸುರನನ್ನು ಸಂಹಾರಮಾಡಿದ ಕಾಲದಲ್ಲಿ ಸರ್ವದೇವನಮಸ್ಕೃತನಾದ ಇಂದ್ರನಿಗೆ ಯಾವ ಮಂಗಳವುಂಟಾಯಿತೋ ಅದೇ ಸನ್ಮಂಗಳವು ನಿನಗೂ ಉಂಟಾಗಲಿ.

ಯನ್ಮಙ್ಗಲಂ ಸುಪರ್ಣಸ್ಯ ವಿನತಾ ಕಲ್ಪಯತ್ಪುರಾ ।
ಅಮೃತಂ ಪ್ರಾರ್ಥಯಾನಸ್ಯ ತತ್ತೇ ಭವತು ಮಙ್ಗಲಮ್ ॥೩೩॥

ತಾಯಿಯ ದಾಸ್ಯಶೃಂಖಲೆಯನ್ನು ಬಿಡಿಸಲು ಅಮೃತವನ್ನು ತರಲು ಹೊರಟ ಗರುಡನಿಗೆ ವಿನತಾದೇವಿಯು ಹೇಗೆ ಮಂಗಳಾಶಾಸನವನ್ನು ಮಾಡಿದಳೋ–ಹಾಗೆಯೇ ನಾನೂ ಅರಣ್ಯಕ್ಕೆ ಹೊರಟಿರುವ ಈ ಸಮಯದಲ್ಲಿ ನಿನಗೆ ಮಂಗಳಾಶಾಸನವನ್ನು ಮಾಡುತ್ತೇನೆ. ಗರುಡನಿಗೆ ಪ್ರಾಪ್ತವಾದ ಮಂಗಳವು ನಿನಗೂ ಪ್ರಾಪ್ತವಾಗಲಿ.

---

* ಪ್ರತಿಯೊಂದು ಕರ್ಮದ ಆದಿಯಲ್ಲಿ ಮತ್ತು ಅಂತ್ಯದಲ್ಲಿ ಪುಣ್ಯಾಹವೆಂಬ ಕರ್ಮವನ್ನು ಮಾಡುತ್ತಾರೆ. ಯಜಮಾನನು ಪುಣ್ಯಾಹಕಲಶವನ್ನು ಸ್ಥಾಪಿಸಿ, ಪೂಜಿಸಿ, ಅರ್ಚಿಸಿದನಂತರ ಬ್ರಾಹ್ಮಣಪೂಜೆಮಾಡಿ ಮಂತ್ರಪೂರ್ವಕವಾಗಿ ಬ್ರಾಹ್ಮಣರನ್ನು ಕುರಿತು 'ಪುಣ್ಯಾಹಂ ಭವನ್ತೋ ಬ್ರುವನ್ತು' ಎಂದು ಹೇಳುತ್ತಾನೆ. ಇದಕ್ಕೆ ಪ್ರತಿವಚನವಾಗಿ ಬ್ರಾಹ್ಮಣರು 'ಓಂ ಪುಣ್ಯಾಹಂ' ಎಂದು ಹೇಳುತ್ತಾರೆ. ಪುನಃ ಯಜಮಾನನು ಮಂತ್ರಪೂರ್ವಕವಾಗಿ–'ಸ್ವಸ್ತಿ ಭವನ್ತೋ ಬ್ರುವನ್ತು; ಋದ್ಧಿಂ

ಅಮೃತೋತ್ಪಾದನೇ ದೈತ್ಯಾನ್ ಘ್ನತೋ ವಜ್ರಧರಸ್ಯ ಯತ್ ।
ಅದಿತಿರ್ಮಙ್ಗಲಂ ಪ್ರಾದಾತ್ತತ್ತೇ ಭವತು ಮಙ್ಗಲಮ್ ॥೩೪॥

ಅಮೃತಪ್ರಾಪ್ತಿಯ ಕಾಲದಲ್ಲಿ ದೇವತೆಗಳಿಗೂ ಮತ್ತು ಅಸುರರಿಗೂ ಯುದ್ಧವಾಗುತ್ತಿದ್ದಾಗ–ಅಸುರರನ್ನು ದಮನಮಾಡುತ್ತಿದ್ದ ಇಂದ್ರನಿಗೆ ಜಯವಾಗಲೆಂದು ಅದಿತಿಯು ಯಾವ ಮಂಗಳಾಶಾಸನವನ್ನು ಮಾಡಿ ದಳೋ ಅದೇ ಮಂಗಳಾಶಾಸನವನ್ನೇ ನಾನೂ ನಿನಗೆ ಮಾಡುತ್ತಿದ್ದೇನೆ. ಇಂದ್ರನಿಗಂದು ಪ್ರಾಪ್ತವಾದ ಸನ್ಮಂಗಳವು ನಿನಗೂ ಲಭಿಸಲಿ.

ತ್ರೀನ್ವಿಕ್ರಮಾನ್ಪ್ರಕ್ರಮತೋ ವಿಷ್ಣೋರಮಿತತೇಜಸಃ ।
ಯದಾಸೀನ್ಮಙ್ಗಲಂ ರಾಮ ತತ್ತೇ ಭವತು ಮಙ್ಗಲಮ್ ॥೩೫॥

ಅಖಂಡಭೂಮಂಡಲವನ್ನು ವ್ಯಾಪಿಸಿ ಒಂದು ಹೆಜ್ಜೆಯನ್ನೂ, ಆಕಾಶವನ್ನು ವ್ಯಾಪಿಸಿ ಮತ್ತೊಂದು ಹೆಜ್ಜೆಯನ್ನೂ ಇಟ್ಟು ಮೂರನೆಯ ಹೆಜ್ಜೆಯನ್ನು ಬಲಿಚಕ್ರವರ್ತಿಯ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ತುಳಿದ ಕಾಲದಲ್ಲಿ ಅಮಿತತೇಜಸ್ವಿಯಾದ ವಾಮನರೂಪಿಯಾದ ಮಹಾ ವಿಷ್ಣುವಿಗೆ ಯಾವ ಮಂಗಳವುಂಟಾಯಿತೋ–ಅದೇ ಮಂಗಳವು ನಿನಗೂ ಉಂಟಾಗಲಿ.

ಋತವಃ ಸಾಗರಾ ದ್ವೀಪಾ ವೇದಾ ಲೋಕಾ ದಿಶಶ್ಚ ತೇ ।
ಮಙ್ಗಲಾನಿ ಮಹಾಬಾಹೋ ದಿಶನ್ತು ಶುಭಮಙ್ಗಲಾಃ ॥೩೬॥

ಆರು ಋತುಗಳೂ, ಏಳು ಸಮುದ್ರಗಳೂ, ಏಳು ದ್ವೀಪಗಳೂ, ನಾಲ್ಕು ವೇದಗಳೂ, ಹದಿನಾಲ್ಕು ಲೋಕಗಳೂ, ಎಂಟು ದಿಕ್ಕುಗಳೂ ಶುಭಪ್ರದಗಳಾಗಿ ನಿನಗೆ ಶುಭಮಂಗಳಗಳನ್ನು ಸರ್ವದಾ ದಯಪಾಲಿಸಲಿ."*

ಭವನ್ತೋ ಬ್ರುವನ್ತು'–ಎಂದು ಹೇಳುತ್ತಾನೆ. ಇದಕ್ಕೆ ಪ್ರತಿವಚನವಾಗಿ ಬ್ರಾಹ್ಮಣರು–'ಕರ್ಮಣೇ ಸ್ವಸ್ತಿ; ಕರ್ಮ ಋಧ್ಯತಾಂ'–ಎಂದು ಅನುಕ್ರಮವಾಗಿ ಹೇಳುತ್ತಾರೆ. ಇದಕ್ಕೆ ಪುಣ್ಯಾಹವಾಚನ ಅಥವಾ ಸ್ವಸ್ತಿವಾಚನ ಎಂದು ಹೆಸರು.

ಸ್ವಸ್ತ್ಯಯನಂ : ೧) ಶುಭೋದಯವನ್ನು ಪಡೆಯುವ ಮಾರ್ಗ. ೨) ಮಂತ್ರಗಳ ಮೂಲಕ ಅರಿಷ್ಟವನ್ನು ನಿವಾರಣೆಮಾಡಿಕೊಳ್ಳುವುದು. ೩) ಅರಿಷ್ಟನಿವಾರಣಾಕರ್ಮಗಳನ್ನು [ಶಾಂತಿ-ಜಪ-ಹೋಮಗಳನ್ನು] ಮಾಡುವುದು. ೪) ಬ್ರಾಹ್ಮಣರನ್ನು ಸತ್ಕರಿಸಿದ ನಂತರ ಅವರಿಂದ ಪಡೆಯುವ ಆಶೀರ್ವಾದಗಳು.

* ೬ ಋತುಗಳು : ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ,

ಹೀಗೆ ಕೌಸಲ್ಯಾದೇವಿಯು ಮಗನಿಗೆ ಮಂಗಳಾಶಾಸನಮಾಡಿ ದೇವಪ್ರಸಾದವನ್ನು (ಮಂತ್ರಾಕ್ಷತೆಯನ್ನು) ಮಗನ ತಲೆಯಲ್ಲಿ ಹಾಕಿ ದೇವತಾರ್ಚನೆಯಾದನಂತರ ಉಳಿದ ಗಂಧಶೇಷದಿಂದಲೂ, ಪ್ರಸಾದ-ಪುಷ್ಪಗಳಿಂದಲೂ ಶ್ರೀರಾಮನನ್ನಲಂಕರಿಸಿ, ಪ್ರತ್ಯಕ್ಷಫಲವನ್ನು ನೀಡುವ ವಿಶಲ್ಯಕರಣೀ ಎಂಬ ಶುಭದಾಯಕವಾದ ಮೂಲಿಕೆಯನ್ನು ರಕ್ಷಣಾರ್ಥವಾಗಿ ಶ್ರೀರಾಮನ ಕೈಗೆ ಕಟ್ಟಿ ಮೂಲಿಕಾಧಿದೇವತಾಮಂತ್ರವನ್ನೂ ರಕ್ಷಾಬಂಧನ ಮಂತ್ರವನ್ನೂ ಜಪಿಸಿದಳು.* ಕೌಸಲ್ಯೆಯು ಸಂತೋಷಗೊಂಡವಳಂತೆ ಮಾತನ್ನೇನೋ ಆಡಿದಳು ; ಮಂಗಳಾಶಾಸನವನ್ನೂ ಮಾಡಿದಳು. ಆದರೆ ಅವಳ ಹೃದಯದಲ್ಲಿ ದುಃಖವು ತುಂಬಿಕೊಂಡಿದ್ದಿತು. ಮಾತಿನಲ್ಲಿ ರಾಮನನ್ನು 'ಹೋಗಿ ಬಾ'–ಎಂದು ಹೇಳಿದರೂ ಅವಳ ಭಾವನೆಯು ಮಾತ್ರ ಶ್ರೀರಾಮನನ್ನು ಪರಿತ್ಯಜಿಸುವುದಾಗಿರಲಿಲ್ಲ. ಯಶಸ್ವಿನಿಯಾದ ಕೌಸಲ್ಯೆಯು ಮುಂದಕ್ಕೆ ಬಗ್ಗಿ ಪುತ್ರನನ್ನು ಬಾಚಿ ತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಅಸ್ಪಷ್ಟವಾದ ಮಾತುಗಳಿಂದ ಹೇಳಿದಳು :

ಪುತ್ರ ರಾಮ ಸಿದ್ಧಾರ್ಥೋ ಗಚ್ಛ ಯಥಾಸುಖಮ್ ॥೪೦॥

"ಮಗು! ರಾಮ! ನಿನ್ನ ಇಷ್ಟಾರ್ಥವು ನೆರವೇರಲಿ ; ಸುಖವಾಗಿ ಹೋಗಿ ಬಾ.[1] ನೀನು ನೀರೋಗದೃಢಕಾಯನಾಗಿ ಸಂಕಲ್ಪದ ಸಿದ್ಧಿಯನ್ನು

---

೭ ಸಾಗರಗಳು : ಲವಣ, ಇಕ್ಷು, ಸುರಾ, ಸರ್ಪಿ, ದಧಿ, ಕ್ಷೀರ, ಶುದ್ಧಜಲ. ೭ ದ್ವೀಪಗಳು : ಜಂಬೂ, ಪ್ಲಕ್ಷ, ಕುಶ, ಕ್ರೌಂಚ, ಶಾಕ, ಶಾಲ್ಮಲೀ, ಪುಷ್ಕರ. ೪ ವೇದಗಳು : ಋಗ್ಯಜುಸ್ಸಾಮಾಥರ್ವಣ. ೧೪ ಲೋಕಗಳು : ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ, ಅತಲ, ವಿತಲ, ಸುತಲ, ತಲಾತಲ, ಮಹಾತಲ, ರಸಾತಲ, ಪಾತಾಲ. ೮ ದಿಕ್ಕುಗಳು : ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಆಗ್ನೇಯ, ನೈಋತ್ಯ, ವಾಯವ್ಯ, ಈಶಾನ್ಯ.

* ದೇವರ ಪೂಜೆಯಾದನಂತರ ಪ್ರಸಾದದ ಹೂವು ಮುಂತಾದುವಕ್ಕೆ ಶೇಷವೆಂದು ಹೇಳಬಹುದಾಗಿದೆ. ಪ್ರಸಾದನಿಜನಿರ್ಮಾಲ್ಯೇ ವನೇ ಶೇಷಾ ಚ ಕೀರ್ತಿತಾ [ವಿಶ್ವಃ] ಸಮಾಲಮ್ಭಃ = [ಗಂಧವನ್ನು] ಹಚ್ಚುವುದು. ಸಮಾಲಮ್ಭೋ ವಿಲೇಪನಂ [ಅಮರಃ] 'ವಿಶಲ್ಯಕರಣೀ' ಎಂಬುದು ಒಂದು ಮೂಲಿಕಾವಿಶೇಷ. ಇದರ ಸ್ಪರ್ಶಮಾತ್ರದಿಂದ ಸಕಲವಿಧವಾದ ಆಧಿ-ವ್ಯಾಧಿಗಳೂ, ಶಸ್ತ್ರಾಘಾತಗಳೂ ನಿವಾರಣೆಯಾಗುವುವು.

1 ಕೌಸಲ್ಯೆಯು ಈ ಪ್ರಕರಣದಲ್ಲಿ ಒಮ್ಮೆಯಾದರೂ 'ಕಾಡಿಗೆ ಹೋಗು'

ಪಡೆದು ಸುಖವಾಗಿ ಅಯೋಧ್ಯೆಗೆ ಹಿಂದಿರುಗಿ ಹಿಂದಿನ ರಾಜರ್ಷಿಗಳ ಮಾರ್ಗದಲ್ಲಿ ಸುಸ್ಥಿರನಾಗಿರುವುದನ್ನು ನಾನು ನೋಡುವೆನು. ನೀನು ಕಾಡಿಗೆ ಹೊರಟೊಡನೆಯೇ–'ನನ್ನ ಕಂದನು ಯಾವ ಕಾಡಿನಲ್ಲಿ ಪ್ರಯಾಣಮಾಡುತ್ತಿರುವನೋ? ಅವನ ಸುಕೋಮಲವಾದ ಕಾಲುಗಳಿಗೆ ಎಷ್ಟು ಮುಳ್ಳುಗಳು ಚುಚ್ಚಿವೆಯೋ? ಅವನು ಎಷ್ಟು ದುಷ್ಟಮೃಗಗಳನ್ನು ಎದುರಿಸಬೇಕಾಗುವುದೋ? ರಾತ್ರಿಯಲ್ಲಿ ಎಲ್ಲಿ ಮಲಗುವನೋ?'–ಇವೇ ಮುಂತಾಗಿ ದುಷ್ಟವಾದ ಕಲ್ಪನೆಗಳು ನನ್ನ ಮನಸ್ಸಿನಲ್ಲಿ ಹುಟ್ಟುತ್ತಲೇ ಇರುತ್ತವೆ. ನೀನು ಅಯೋಧ್ಯೆಗೆ ಆಗಮಿಸಿದ ಶುಭದಿನದಂದು ಈ ದುಷ್ಟ ಕಲ್ಪನೆಗಳೆಲ್ಲವೂ ದೂರವಾಗಿ ಪ್ರಫುಲ್ಲಗೊಂಡ ಮುಖದಿಂದ ಕೂಡಿದವಳಾಗಿ–ಆಗತಾನೇ ಉದಯಿಸಿದ ಪೂರ್ಣಚಂದ್ರನನ್ನು ನೋಡಿ ಸಂತೋಷಿಸುವಂತೆ–ವನದಿಂದ ಆಗಮಿಸಿದ ನಿನ್ನನ್ನು ನೋಡಿ ಸಂತೋಷಪಡುತ್ತೇನೆ. ನೀನು ಪಿತೃವಾಕ್ಯಪರಿಪಾಲನಾರೂಪವಾದ ವನವಾಸವನ್ನು ಮುಗಿಸಿ, ಅಯೋಧ್ಯೆಗೆ ಆಗಮಿಸಿ, ಸಾಮ್ರಾಜ್ಯಪಟ್ಟಾಭಿಷಿಕ್ತನಾಗಿ ಭದ್ರಾಸನದಲ್ಲಿ ಕುಳಿತು ರಾಜ್ಯಭಾರ ಮಾಡುವುದನ್ನು ನಾನು ನೋಡುವೆನು.

ಹೋಗಿ ಬಾ, ರಾಮ! ಹೋಗಿ ಬಾ! ವನವಾಸವು ಕಳೆದನಂತರ ರಾಜೋಚಿತವಾದ ವಸ್ತ್ರಾಭರಣಗಳಿಂದ ಸಂಪನ್ನನಾಗಿ ನನ್ನ ಮತ್ತು ನನ್ನ ಸೊಸೆಯಾದ ಸೀತೆಯ ಸಕಲವಾದ ಕಾಮನೆಗಳನ್ನೂ ನಿತ್ಯವೂ ಪೂರೈಸಿಕೊಡುವೆಯಂತೆ. ನಿನ್ನ ಕಲ್ಯಾಣಕ್ಕಾಗಿ ನಾನು ಶಿವನೇ ಮೊದಲಾದ ದೇವತೆಗಳನ್ನೂ, ಮಹರ್ಷಿಗಳನ್ನೂ, ಭೂತಗಣಗಳನ್ನೂ, ಸುರರನ್ನೂ, ಸರ್ಪಗಳನ್ನೂ ಆರಾಧಿಸಿದ್ದೇನೆ. ನನ್ನ ಪೂಜೆಯಿಂದ ಅವರೆಲ್ಲರೂ ಸುಪ್ರೀತರಾಗಿ ಬಹಳ ಕಾಲ ಅರಣ್ಯದಲ್ಲಿ ವಾಸಮಾಡಲಿರುವ ನಿನ್ನ ಹಿತದಲ್ಲಿಯೇ ಆಕಾಂಕ್ಷೆಯುಳ್ಳವರಾಗಿರಲಿ. (ಸರ್ವದಾ ನಿನಗೆ ಹಿತವನ್ನುಂಟುಮಾಡಲಿ.) ಎಲ್ಲ ದಿಕ್ಕುಗಳೂ ನಿನಗೆ ಹಿತವನ್ನುಂಟುಮಾಡಲಿ."

ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ಕೌಸಲ್ಯೆಯು ಯಥಾವಿಧಿ

ಎನ್ನುವುದಿಲ್ಲ. ' ಹೋಗಿ ಬಾ'–ಎನ್ನುತ್ತಾಳೆ. 'ಕಾಡಿನಿಂದ ಬಂದನಂತರ'–ಎನ್ನುತ್ತಾಳೆ. 'ಕಾಡಿಗೆ ಹೋಗು'–ಎಂದು ಹೇಳಲು ಅವಳಿಗೆ ಸಾಧ್ಯವಾಗುವುದೇ ಇಲ್ಲ. ಎಷ್ಟೇ ಆಗಲೀ ತಾಯಕರುಳಲ್ಲವೇ?

ಯಾಗಿ ಮಂಗಳಾಶಾಸನವನ್ನು ಪೂರೈಸಿ ರಕ್ಷಣಾರ್ಥವಾಗಿ ಶ್ರೀರಾಮನನ್ನು ಪ್ರದಕ್ಷಿಣೆಮಾಡಿದಳು.* ಪುನಃ ಪುನಃ ಶ್ರೀರಾಮನನ್ನೇ ನೋಡುತ್ತಾ ಅವನನ್ನು ಬಿಟ್ಟಿರಲಾರದೇ ಬಾಚಿ ತಬ್ಬಿಕೊಂಡಳು.

ಹೀಗೆ ಕೌಸಲ್ಯಾದೇವಿಯು ಶ್ರೀರಾಮನ ರಕ್ಷಣಾರ್ಥವಾಗಿ ಮಗನನ್ನು ಬಲಭಾಗದಿಂದ ಸುತ್ತಿ (ಪ್ರದಕ್ಷಿಣೆಮಾಡಿದನಂತರ) ಶ್ರೀರಾಮನು ತಾಯಿಯ ಮಂಗಳಾಶಾಸನದಿಂದ ಮತ್ತು ಅನುಮತಿಯಿಂದ ಉಂಟಾದ ಉಲ್ಲಾಸದ ಕಾಂತಿಯಿಂದ ವಿಜೃಂಭಿಸುತ್ತಾ ಸೀತೆಯ ಅಂತಃಪುರಕ್ಕೆ ತೆರಳಿದನು.

೨೫ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೨೬ನೆಯ ಸರ್ಗ

ಶ್ರೀರಾಮನ ವಿಮನಸ್ಕತೆಗೆ ಕಾರಣವನ್ನು ಸೀತೆಯು ಪ್ರಶ್ನಿಸಿದುದು : ಶ್ರೀರಾಮನು ತಾನು ತಂದೆಯ ಆಜ್ಞೆಯಂತೆ ಅರಣ್ಯಕ್ಕೆ ಹೊರಟಿರುವುದಾಗಿಯೂ ಸೀತಾದೇವಿಯು ಅರಮನೆ ಯಲ್ಲಿಯೇ ಇದ್ದು ಗುರುಜನರನ್ನು ಸೇವಿಸುತ್ತಾ ಭರತನಿಗೆ ವಿಧೇಯಳಾಗಿ ಇರುವಂತೆಯೂ ಹಿತೋಪದೇಶಮಾಡಿದುದು

ಅಭಿವಾದ್ಯ ತು ಕೌಸಲ್ಯಾಂ ರಾಮಃ ಸಂಪ್ರಸ್ಥಿತೋ ವನಮ್ ।
ಕೃತಸ್ವಸ್ತ್ಯಯನೋ ಮಾತ್ರಾ ಧರ್ಮಿಷ್ಠೇ ವರ್ತ್ಮನಿ ಸ್ಥಿತಃ ॥೧॥

ಕೌಸಲ್ಯಾದೇವಿಯನ್ನು ಅಭಿವಾದನಪೂರ್ವಕವಾಗಿ ನಮಸ್ಕರಿಸಿ, ಅವಳಿಂದ ಮಂಗಳಾಶಾಸನವನ್ನು ಪಡೆದು, ಧರ್ಮಿಷ್ಠರ ಮಾರ್ಗಾನುವರ್ತಿಯಾದ ಶ್ರೀರಾಮನು ಅರಣ್ಯಕ್ಕೆ ಹೊರಡಲು ಉದ್ಯುಕ್ತನಾದನು.

ಶ್ರೀರಾಮನ ದರ್ಶನಾಕಾಂಕ್ಷಿಗಳಾಗಿದ್ದ ಅನೇಕಪೌರರಿಂದ ನಿಬಿಡ

---

* ಮಗನು ತಾಯಿಗೆ ಪ್ರದಕ್ಷಿಣೆ-ನಮಸ್ಕಾರಗಳನ್ನು ಮಾಡುವುದು ಸ್ವಾಭಾವಿಕ. ಆದರೆ ಇಲ್ಲಿ ಕೌಸಲ್ಯೆಯು ರಾಮನಿಗೆ ಪ್ರದಕ್ಷಿಣೆಮಾಡಿದಳೆಂಬುದು ಸ್ಪಷ್ಟವಾಗಿದೆ. ಇದಕ್ಕೆ ಒಬ್ಬ ವ್ಯಾಖ್ಯಾನಕಾರರು ರಕ್ಷಣಾರ್ಥವಾಗಿ ಮಂತ್ರಪುನಶ್ಚರಣೆಮಾಡುತ್ತಾ ಪ್ರದಕ್ಷಿಣೆಮಾಡಿದಳೆಂದು ಹೇಳಿದ್ದಾರೆ. ಮತ್ತೊಬ್ಬರು ಮಗನು ಪ್ರಯಾಣಹೊರಟ ಕಾಲದಲ್ಲಿ ತಾಯಿಯು ಮಗನನ್ನು ಪ್ರದಕ್ಷಿಣೆಮಾಡಿದರೆ ಮಗನು ಹೊರಟ ಕಾರ್ಯವು ಸಿದ್ಧಿಯಾಗುವುದೆಂದು ಧರ್ಮಶಾಸ್ತ್ರ ಪ್ರಸಿದ್ಧವಾಗಿದೆ ಎಂದಿದ್ದಾರೆ.

ವಾಗಿದ್ದ ರಾಜಮಾರ್ಗವನ್ನು ಬೆಳಗುತ್ತಾ ಹೋಗುತ್ತಿದ್ದ ರಾಜಪುತ್ರನು ತನ್ನ ಗುಣಾತಿಶಯಗಳಿಂದ ನಾಗರಿಕರ ಮನಸ್ಸನ್ನು ಕಲುಕುತ್ತಿರುವನೋ ಎಂಬಂತೆ ಕಾಣುತ್ತಿದ್ದನು.

ಇತ್ತಲಾಗಿ ತಪಸ್ವಿನಿಯಾದ ವೈದೇಹಿಯಾದರೋ ಶ್ರೀರಾಮನ ಪಟ್ಟಾಭಿಷೇಕಕ್ಕೆ ಉಂಟಾದ ವಿಘಾತವನ್ನು ಕೇಳಿರಲಿಲ್ಲ. ಶ್ರೀರಾಮನಿಗೆ ಯೌವರಾಜ್ಯಾಭಿಷೇಕವಾಗುವುದೆಂದೇ ಅವಳ ಮನಸ್ಸಿನಲ್ಲಿ ಇನ್ನೂ ಇದ್ದಿತು. ದೇವತೆಗಳ ವಿಷಯದಲ್ಲಿ ಕೃತಜ್ಞಳಾಗಿದ್ದ, ರಾಜಧರ್ಮಗಳೆಲ್ಲವನ್ನೂ ಸಂಪೂರ್ಣವಾಗಿ ತಿಳಿದಿದ್ದ ಸೀತಾದೇವಿಯು ದೇವತೆಗಳಿಗೆ ಪೂಜೆಯನ್ನು ತಾನೇ ಯಥಾವಿಧಿಯಾಗಿ ಮಾಡಿ ಆನಂದಭರಿತಳಾಗಿ ರಾಜಪುತ್ರನನ್ನೇ ಎದುರುನೋಡುತ್ತಿದ್ದಳು. ಆನಂದತುಂದಿಲರಾದ ಜನರಿಂದ ತುಂಬಿ ಹೋಗಿದ್ದ, ಚೆನ್ನಾಗಿ ಅಲಂಕರಿಸಲ್ಪಟ್ಟಿದ್ದ ಅರಮನೆಯನ್ನು ಪ್ರವೇಶಿಸಿ ದೊಡನೆಯೇ ಶ್ರೀರಾಮನು ಅಲ್ಲಿದ್ದ ಜನರ ಉತ್ಸಾಹವನ್ನು ನೋಡಿ ನಾಚಿ ತಲೆತಗ್ಗಿಸಿದನು. ಶ್ರೀರಾಮನ ಮುಖಕಮಲವು ಪಟ್ಟಾಭಿಷೇಕದ ಸಂತಸದಿಂದ ಕೂಡಿರುವುದಂತಿರಲಿ ; ಅನುದಿನದ ಕಾಂತಿಯನ್ನೂ ಹೊಂದಿರಲಿಲ್ಲ. ಮುಖವು ಬಾಡಿದ್ದಿತು. ಶ್ರೀರಾಮನು ತಲೆತಗ್ಗಿಸಿ ನಿಂತಿದ್ದನು. ಅವನು ಅಂತಃಪುರಕ್ಕೆ ಬಂದೊಡನೆಯೇ ಸೀತೆಯು ಮೇಲೆ ದ್ದಳು. ಶೋಕಸಂತಪ್ತನಾಗಿಯೂ, ಚಿಂತೆಯಿಂದ ವ್ಯಾಕುಲಗೊಂಡ ಇಂದ್ರಿಯಗಳುಳ್ಳವನಾಗಿಯೂ ಇದ್ದ ಶ್ರೀರಾಮನನ್ನು ಭ್ರಾಂತಿಯಿಂದ ನಡುಗುತ್ತಾ ನೋಡಿದಳು. ತಾಯಿಗೂ, ತಮ್ಮನಿಗೂ ಸಮಾಧಾನವನ್ನು ಹೇಳಿದ ಧೀರನಾದ ಶ್ರೀರಾಮನು ಸೀತೆಯ ಬಳಿಗೆ ಬಂದೊಡನೆಯೇ ದುಃಖಿತನಾದನು. ತನ್ನ ಮನಸ್ಸಿನಲ್ಲಿದ್ದ ದುಃಖವನ್ನು ತಡೆದುಕೊಳ್ಳಲು ಶ್ರೀರಾಮನಿಗೆ ಸಾಧ್ಯವಾಗಲಿಲ್ಲ. ಮುಖವು ವಿವರ್ಣವಾಯಿತು. ಅಂತಹ ಸ್ಥಿತಿಯಲ್ಲಿದ್ದ ಶ್ರೀರಾಮನನ್ನು ಸೀತೆಯು ನೋಡಿದಳು.*

ಸತ್ಸಂಪ್ರದಾಯದಂತೆ ರಾಮನು ಪ್ರಯಾಣಹೊರಟ ಕಾಲದಲ್ಲಿ ರಾಮನಿಗೆ ಸುಖ ಪ್ರಯಾಣವನ್ನು ಬಯಸಿ ಕೌಸಲ್ಯೆಯು ರಾಮನ ಪ್ರದಕ್ಷಿಣೆಮಾಡಿದಳೆಂದು ಹೇಳ ಬಹುದ್ದಾಗಿದೆ. ಮೇಲಾಗಿ ಇದು ಕೇವಲ ಪ್ರದಕ್ಷಿಣೆಯೇ (ರಾಮನ ಸುತ್ತ ತಿರುಗುವುದೇ) ಹೊರತು ಪ್ರದಕ್ಷಿಣ-ನಮಸ್ಕಾರವಲ್ಲ.

* ಈ ಸಂದರ್ಭದಲ್ಲಿ ರಾಮನು ದುಃಖಿತನಾದುದೇಕೆಂಬುದಕ್ಕೆ ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ವಿಧವಾಗಿ ವ್ಯಾಖ್ಯಾನಮಾಡಿರುತ್ತಾರೆ.

ಬಾಡಿದ ಮುಖವುಳ್ಳವನಾಗಿದ್ದ, ಬೆವರಿನಿಂದ ತೋಯ್ದುಹೋಗಿದ್ದ, ಉದ್ವಿಗ್ನನಾಗಿದ್ದ ಶ್ರೀರಾಮನನ್ನು ನೋಡಿ ದುಃಖದಿಂದ ಪರಿತಪಿಸುತ್ತಾ ಸೀತೆಯು ಪ್ರಶ್ನಿಸಿದಳು : "ಕಿಮಿದಾನೀಮಿದಂ ಪ್ರಭೋ–ಪ್ರಭುವೇ! ಈ ಸಮಯದಲ್ಲಿ ಇದೇನಿದು? ಹೀಗೇಕಿರುವೆ? ಇಂದು ಬೃಹಸ್ಪತಿ ದೇವತಾತ್ಮಕವಾದ ಸಕಲಸಮೃದ್ಧಿಪ್ರಾಪಕವಾದ ಪುಷ್ಯನಕ್ಷತ್ರವಿದ್ದು ಪಟ್ಟಾಭಿಷೇಕಕ್ಕೆ ಯೋಗ್ಯದಿನವಾಗಿರುವುದೆಂದು ಪ್ರಾಜ್ಞರಾದ ಬ್ರಾಹ್ಮಣರು ಹೇಳಿದ್ದಾರೆ. ಸಂತಸದಿಂದಿರಬೇಕಾದ ಇಂದು ನೀನೇಕೆ ಖಿನ್ನಮನಸ್ಕನಾಗಿರುವೆ? ನೂರಾರು ಕಡ್ಡಿಗಳಿಂದ ಕೂಡಿ ನೀರಿನ ನೊರೆಯಂತೆ ಬಿಳುಪಾದ ಶ್ವೇತಚ್ಛತ್ರದಿಂದ ನಿನ್ನ ಸುಂದರವಾದ ಮುಖವು ಆವೃತವಾಗಿ ಶೋಭಿಸುತ್ತಿಲ್ಲವೇಕೆ? ಚಂದ್ರನಂತೆಯೂ–ರಾಜಹಂಸದಂತೆಯೂ ಪ್ರಕಾಶಮಾನವಾದ, ಚಕ್ರವರ್ತಿ ಯೋಗ್ಯವಾದ, ಪಟ್ಟಾಭಿಷೇಕಕ್ಕೆ ಅತಿಮುಖ್ಯವಸ್ತುಗಳಾದ ದಿವ್ಯಚಾಮರ ಗಳಿಂದ ಕಮಲಕ್ಕೆ ಸದೃಶವಾದ ನಿನ್ನ ಮುಖವು ಬೀಸಲ್ಪಡುತ್ತಿಲ್ಲವೇಕೆ? (ರಾಜಯೋಗ್ಯವಾದ ಛತ್ರ-ಚಾಮರಗಳಿಲ್ಲದೇ ಬಂದಿರುವೆಯಲ್ಲವೇ?) ವಾಗ್ಮಿಗಳಾದ, ಅತಿಚತುರರಾದ, ಸಂತುಷ್ಟರಾದ ಸ್ತುತಿಪಾಠಕರೂ ಮತ್ತು ವಂದಿ-ಮಾಗಧರೂ ಮಂಗಳಕರವಾದ ಸ್ತೋತ್ರಗಳಿಂದ ನಿನ್ನ ಗುಣಗಾನ ಮಾಡುತ್ತಿರುವುದು ಕಾಣುತ್ತಿಲ್ಲ. ನಿನ್ನ ಕುಂದಿರುವ ಮುಖವನ್ನು ನೋಡಿದರೆ ವೇದಪಾರಂಗತರಾದ ಬ್ರಾಹ್ಮಣರು ನಿನ್ನ ತಲೆಯ ಮೇಲೆ ಮೊಸರು-ಜೇನುತುಪ್ಪಗಳಿಂದ ಮಿಶ್ರವಾದ ಪುಣ್ಯತೀರ್ಥಗಳ ಅಭಿಷೇಕವನ್ನು

---

೧) 'ಪ್ರಿಯಾಯಾಃ ಅಗ್ರೇ ನ ಕಿಂಚಿತ್ಪುಂಸೋ ಗೋಪ್ಯಮ್' ಇತಿ ಲೋಕವ್ಯವಹಾರ ಮನುಸೃತ್ಯ–ಹೆಂಡತಿಯ ಮುಂದೆ ಪತಿಯು ಯಾವುದೊಂದು ವಿಷಯವನ್ನೂ ಗೋಪ್ಯವಾಗಿಡಕೂಡದೆಂಬ ಲೋಕವ್ಯವಹಾರದಂತೆ ರಾಮನು ತನ್ನ ಮನಸ್ಸಿನ ದುಃಖವನ್ನು ಸೀತೆಯ ಮುಂದೆ ಹೊರಪಡಿಸಿದನು. ೨) 'ಸೀತಾನಯನಯುಕ್ತ್ಯಭಾವ ಸಂಭಾವಿತ ಸೀತಾವಿಯೋಗಜನಿತಂ ಶೋಕಂ ಸೋಢುಂ ನ ಶಶಾಕ'–ಸೀತೆಯನ್ನೂ ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗಲು ಯುಕ್ತಿಯು ಯಾವುದೆಂಬುದು ತೋರದೆ ಹದಿನಾಲ್ಕು ವರ್ಷಗಳ ಕಾಲ ಸೀತೆಯನ್ನು ಬಿಟ್ಟಿರಬೇಕಾಗುವುದೆಂದು ಶೋಕಿಸಿದನು. ೩) 'ಏತಾವತ್ಪರ್ಯನ್ತಂ ಶೋಕಲೇಶಹೀನಸ್ಯ ರಾಮಸ್ಯೇದಾನೀಂ ಶೋಕಾವಿರ್ಭಾವಃ ಸೀತಾಯಾ ಭಾವಿದುಃಖಸ್ಮರಣೇನ–ಇದುವರೆಗೂ ದುಃಖಲೇಶ ವನ್ನೂ ಕಂಡರಿಯದ ರಾಮನಿಗೆ ಮುಂದೆ ಸೀತೆಗೆ ಉಂಟಾಗಬಹುದಾದ ದುಃಖ

ಮಾಡಿರುವಂತೆ ಕಾಣುತ್ತಿಲ್ಲ. ನೀನು ಪಟ್ಟಾಭಿಷಿಕ್ತನಾಗಿ ನನ್ನ ಅಂತಃಪುರಕ್ಕೆ ಬಂದಿದ್ದರೆ–ನಿನ್ನನ್ನನುಸರಿಸಿ ಅಮಾತ್ಯರೂ, ಪುರಪ್ರಮುಖರೂ, ನಾಗರಿಕರೂ ಬರುತ್ತಿದ್ದರು. ಯಾರೊಬ್ಬರೂ ನಿನ್ನೊಡನೆ ಬಂದಂತೆ ಕಾಣತ್ತಿಲ್ಲ. ಪ್ರಭುವೇ! ನೀನು ಪಟ್ಟಾಭಿಷಿಕ್ತನಾಗಿ ಅರಮನೆಯನ್ನು ಬಿಟ್ಟು ದಿವ್ಯರಥಾರೂಢನಾಗಿ ಹೊರಟೊಡನೆಯೇ ನಿನ್ನ ರಥದ ಮುಂದುಗಡೆಯಲ್ಲಿ ವೇಗಗಮನವುಳ್ಳ ನಾಲ್ಕು ಕುದುರೆಗಳಿಂದ ಕೂಡಿದ ಸ್ವರ್ಣಮಯವಾದ ಪುಷ್ಯರಥವು ಹೊರಡಬೇಕಾಗಿದ್ದಿತು. ಅಂತಹ ಉತ್ಸವಪ್ರಧಾನವಾದ ರಥವು ನಿನ್ನ ರಥದ ಮುಂಭಾಗದಲ್ಲಿ ಹೋಗುತ್ತಿರುವುದನ್ನು ನಾನು ನೋಡಲಿಲ್ಲ. ನೀನು ಅಭಿಷಿಕ್ತನಾಗಿ ಅರಮನೆಯಿಂದ ಹೊರಟೊಡನೆಯೇ ನಿನ್ನ ಮುಂದುಗಡೆ ಕಾಂತಿಯುಕ್ತವಾದ, ಪರ್ವತೋಪಮವಾದ, ಕೃಷ್ಣಮೇಘದಂತೆ ಕಪ್ಪಾದ, ಸರ್ವಲಕ್ಷಣಯುಕ್ತವಾದ, ಅಭಿಷೇಕಕಾಲದಲ್ಲಿ ನಿನ್ನಿಂದ ಪೂಜಿಸಲ್ಪಟ್ಟ ಪಟ್ಟದಾನೆಯು ಇರಬೇಕಾಗಿದ್ದಿತು. ಅದೂ ಕಾಣದಾಗಿದೆ. ಸ್ವರ್ಣಮಯವಾಗಿಯೂ, ಚಿತ್ರವಿಶಿಷ್ಟವಾಗಿಯೂ, ವೀರಪುರಸ್ಕೃತ ವಾಗಿಯೂ ಇರುವ ಭದ್ರಾಸನವನ್ನು ಪುರಸ್ಕರಿಸಿ (ರಾಜಯೋಗ್ಯವಾದ ಭದ್ರಾಸನದಲ್ಲಿ ಕುಳಿತು ಪಟಾಭಿಷಿಕ್ತನಾಗಿ) ಅನಂತರ ನೀನು ನನ್ನ ಬಳಿಗೆ ಬಂದಂತೆ ಕಾಣುತ್ತಿಲ್ಲ. ಪಟ್ಟಾಭಿಷೇಕಕ್ಕಾಗಿ ಸಕಲಸಿದ್ಧತೆಗಳೂ ನಡೆದಿರುವ

ವನ್ನು ನೆನೆದು ಶೋಕವುಂಟಾಯಿತು. 'ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ –ಇದು ರಾಮನ ಸ್ವಾಭಾವಿಕವಾದ ಗುಣವಾಗಿರುತ್ತದೆ. ಪ್ರಸಕ್ತಸಂದರ್ಭದಲ್ಲಿ ರಾಮನು ಅರಣ್ಯಕ್ಕೆ ಹೊರಡುವ ನಿರ್ಧಾರವಾಗಿದೆಯೇ ಹೊರತು ಸೀತೆಯು ಅರಣ್ಯಕ್ಕೆ ಹೊರಡುವಳೆಂಬ ನಿಶ್ಚಯವಿಲ್ಲ. ಸೀತೆಯು ಅರಣ್ಯಕ್ಕೆ ಹೋಗಬೇಕೆಂದು ಕೈಕೇಯಿಯೂ ಹೇಳಿಲ್ಲ ; ಹೇಳಲೂ ಕಾರಣವಿಲ್ಲ. ತಾನು ಅರಣ್ಯಕ್ಕೆ ಹೊರಡುವ ವಿಷಯವನ್ನು ತಿಳಿಸಿದೊಡನೆಯೇ ಸೀತೆಯು ಬಹಳ ದುಃಖಿತಳಾಗುವಳು. ತನಗಾಗಿ ಸೀತೆಯು ದುಃಖಿಸುವಳೆಂಬುದನ್ನು ನೆನೆದು ರಾಮನೂ ದುಃಖಿತನಾದನು. ಹದಿನಾಲ್ಕು ವರ್ಷಗಳ ಕಾಲ ಸೀತೆಯನ್ನಗಲಬೇಕಾಗುವುದೆಂಬ–ದುಃಖವೂ ರಾಮನ ಹೃದಯದಲ್ಲಿ ಇರುವುದು ಸ್ವಾಭಾವಿಕವಾಗಿಯೇ ಇದೆ. ಸೀತೆಯನ್ನಗಲಿರಬೇಕೆಂಬ ದುಃಖವೇ ಹೊರತು ಅರಣ್ಯಕ್ಕೆ ಹೋಗಬೇಕೆನ್ನುವ ದುಃಖವು ರಾಮನಿಗುಂಟಾಗಲಿಲ್ಲ. ತಾನು ಹದಿನಾಲ್ಕು ವರ್ಷಗಳ ಕಾಲ ಸೀತೆಯನ್ನಗಲಿರುವುದು ಮತ್ತು ತನ್ನ ಆಗಲಿಕೆಯಿಂದ ಸೀತೆಗುಂಟಾಗುವ ದುಃಖ–ಈ ಎರಡು ರಾಮನ ದುಃಖಕ್ಕೆ ಕಾರಣವೆಂದು ಹೇಳಬಹುದಾಗಿದೆ.

ಈ ಸಮಯದಲ್ಲಿ ನಿನ್ನ ಮುಖವೇಕೆ ಕುಂದಿದೆ? ನಿನ್ನ ಮುಖದಲ್ಲಿ ಹರ್ಷದ ಚಿಹ್ನೆಯೇ ಕಾಣುತ್ತಿಲ್ಲ. ಈ ವಿಧವಾದ ನಿನ್ನ ಮುಖಭಾವವು ಅಪೂರ್ವವಾದುದು ; ಹಿಂದೆಂದೂ ಕಂಡಿದ್ದಿಲ್ಲ."

ಇದೇ ಮುಂತಾಗಿ ಹೇಳಿಕೊಂಡು ಪ್ರಲಪಿಸುತ್ತಿದ್ದ ಸೀತೆಗೆ ಶ್ರೀರಾಮನು ಹೇಳಿದನು :

ಸೀತೆ ತತ್ರಭವಾಂಸ್ತಾತಃ ಪ್ರವ್ರಾಜಯತಿ ಮಾಂ ವನಮ್ ॥೧೯॥

"ಸೀತೆ! ಪೂಜ್ಯಪಾದನಾದ ತಂದೆಯು ನನ್ನನ್ನು ಅರಣ್ಯಕ್ಕೆ ಕಳುಹಿಸುತ್ತಿದ್ದಾನೆ. ಸತ್ಕುಲಪ್ರಸೂತಳಾದ, ಧರ್ಮಜ್ಞಳಾದ, ಧರ್ಮಮಾರ್ಗಾನುಸಾರಿಣಿಯಾದ ಜಾನಕಿಯೇ! ಯಾವ ಕಾರಣದಿಂದಾಗಿ ನನ್ನ ತಂದೆಯು ನನ್ನನ್ನು ಅರಣ್ಯಕ್ಕೆ ಕಳುಹಿಸಲಿರುವನೆಂಬುದನ್ನು ಹೇಳುವೆನು, ಕೇಳು:

ಸತ್ಯಪ್ರತಿಜ್ಞನಾದ ನನ್ನ ತಂದೆಯು ತಾಯಿಯಾದ ಕೈಕೇಯಿಗೆ ಹಿಂದೆ ಎರಡು ವರಗಳನ್ನು ಕೊಟ್ಟಿದ್ದನು. ರಾಜನು ನನ್ನ ಪಟ್ಟಾಭಿಷೇಕಕ್ಕೆ ಸಿದ್ಧಗೊಳಿಸಿದ್ದ ಈ ಸಮಯದಲ್ಲಿ ಕೈಕೇಯಿಯು ತನಗೆ ಹಿಂದೆ ಕೊಟ್ಟಿದ್ದ ಎರಡು ವರಗಳನ್ನೂ ಕಾರ್ಯಗತಮಾಡಿಕೊಡಬೇಕೆಂದು ತಂದೆಯನ್ನು ಪ್ರೇರಿಸಿದಳು. ಕೇಳಿದ ವರಗಳನ್ನು ನಡೆಸಿಕೊಡುವೆನೆಂದು ರಾಜನು ಶಪಥ ಮಾಡಲಾಗಿ ಆ ಶಪಥವೆಂಬ ಧರ್ಮಪಾಶದಿಂದ ಕೈಕೇಯಿಯು ತಂದೆಯನ್ನು ಬಿಗಿದು ತನ್ನ ವಶಮಾಡಿಕೊಂಡಳು. ಮೊದಲನೆಯ ವರದಂತೆ ನಾನು ಹದಿನಾಲ್ಕು ವರ್ಷಗಳ ಕಾಲ ಅರಣ್ಯದಲ್ಲಿರಬೇಕು. ತಂದೆಯ ಆಜ್ಞೆಯಂತೆ ನಿರ್ಜನವಾದ ಅರಣ್ಯಕ್ಕೆ ಹೊರಟಿರುವ ನಾನು ನಿನ್ನನ್ನು ನೋಡಲು ಬಂದೆನು.

ಸೀತೆ! ನಾನಿಲ್ಲಿಂದ ಹೊರಟುಹೋದ ಬಳಿಕ ಭರತನಿಗೆ ಪಟ್ಟಾಭಿಷೇಕವಾಗುತ್ತದೆ. ಅವನು ನಿನ್ನ ಬಳಿಗೆ ಬಂದಾಗ ಸಮಯೋಚಿತವಾದ ಮಾತುಗಳನ್ನಾಡಿ ಅವನನ್ನು ಕಳುಹಿಸಬೇಕೇ ಹೊರತು ನನ್ನ ಪ್ರಸ್ತಾಪವನ್ನು ಅವನ ಮುಂದೆ ಹೇಳಬಾರದು.

ಋದ್ಧಿಯುಕ್ತಾ ಹಿ ಪುರುಷಾ ನ ಸಹನ್ತೇ ಪರಸ್ತವಮ್ ।
ತಸ್ಮಾನ್ನ ತೇ ಗುಣಾಃ ಕಥ್ಯಾ ಭರತಸ್ಯಾಗ್ರತೋ ಮಮ ॥೨೫॥

ಐಶ್ವರ್ಯವಂತರು ತಮ್ಮ ಮುಂದೆ ಮಾಡುವ ಇತರರ ಶ್ಲಾಘನೆ ಯನ್ನು ಸಹಿಸುವುದಿಲ್ಲ. ಆದುದರಿಂದ ರಾಜಸಿಂಹಾಸನವನ್ನು ಪಡೆದು ಐಶ್ವರ್ಯಕ್ಕೆ ಸ್ವಾಮಿಯಾಗುವ ಭರತನ ಮುಂದೆ ನನ್ನ ಗುಣಕಥನವನ್ನು ಮಾಡಬೇಡ.

ನಾಪಿ ತ್ವಂ ತೇನ ಭರ್ತವ್ಯಾ ವಿಶೇಷೇಣ ಕದಾಚನ ।
ಅನುಕೂಲತಯಾ ಶಕ್ಯಂ ಸಮೀಪೇ ತ್ವಸ್ಯ ವರ್ತಿತುಮ್ ॥೨೬॥

ಭರತನು ನಿನ್ನನ್ನು ವಿಶೇಷವಾದ ರೀತಿಯಲ್ಲಿ ಪುರಸ್ಕರಿಸಿ ಪೋಷಿಸುವನೆಂದು ನಿರೀಕ್ಷಿಸಬಾರದು. ಅವನಿಗೆ ಅನುಕೂಲಳಾಗಿರುವುದರಿಂದ ಮಾತ್ರವೇ ಅವನ ಆಶ್ರಯದಲ್ಲಿರಲು ನಿನಗೆ ಸಾಧ್ಯವಾಗುವುದು.

ತಸ್ಮೈ ದತ್ತಂ ನೃಪತಿನಾ ಯೌವರಾಜ್ಯಂ ಸನಾತನಮ್ ।
ಸ ಪ್ರಸಾದ್ಯಸ್ತ್ವಯಾ ಸೀತೇ ನೃಪತಿಶ್ಚ ವಿಶೇಷತಃ ॥೨೭॥

ಪಿತಾಮಹ-ಪ್ರಪಿತಾಮಹರಿಂದ ಅನುಭೂತವಾದ ಈ ಯುವರಾಜ ಪದವಿಯನ್ನು ರಾಜನು ಭರತನಿಗೆ ಕೊಟ್ಟಿದ್ದಾನೆ. ಯುವರಾಜನಾದ ಭರತನನ್ನು ನೀನು ವಿಶೇಷವಾಗಿ ಪ್ರಸನ್ನಗೊಳಿಸಬೇಕು.

ನಾನು ಈಗಲೇ ಗುರುವಾದ ನನ್ನ ತಂದೆಯ ಪ್ರತಿಜ್ಞೆಯನ್ನು ಪರಿಪಾಲಿಸುವ ಸಲುವಾಗಿ ಅರಣ್ಯಕ್ಕೆ ಹೋಗುತ್ತೇನೆ. ನೀನು ಸ್ಥಿರಚಿತ್ತಳಾಗಿರು. ಅನಘಳೇ! ಮುನಿಗಳಿಂದ ಸಂಸೇವ್ಯಮಾನವಾದ ಅರಣ್ಯಕ್ಕೆ ನಾನು ಹೊರಟು ಹೋದನಂತರ ನೀನು ವ್ರತೋಪವಾಸನಿಷ್ಠಳಾಗಿರಬೇಕು. ಅರುಣೋದಯವಾಗುತ್ತಲೇ ಹಾಸಿಗೆಯಿಂದೆದ್ದು, ಮಡಿಯುಟ್ಟು ಯಥಾವಿಧಿಯಾಗಿ ಯಥಾಕ್ರಮವಾಗಿ ದೇವತೆಗಳಿಗೆ ಪೂಜೆಯನ್ನು ಮಾಡಿ, ಜನೇಶ್ವರನಾದ ನನ್ನ ತಂದೆಯಾದ ದಶರಥನಿಗೆ ನಮಸ್ಕಾರಮಾಡಬೇಕು. ನನ್ನ ತಾಯಿಯಾದ ಕೌಸಲ್ಯೆಯಾದರೋ ಇಳಿವಯಸ್ಸಿನವಳು. ಪುತ್ರವಿಯೋಗವಾಗುವುದೆಂಬ ಸಂತಾಪದಿಂದ ಪೀಡಿತಳಾಗಿದ್ದಾಳೆ. ಅವಳನ್ನೂ ನೀನು ಧರ್ಮೈಕದೃಷ್ಟಿಯಿಂದ ಗೌರವಿಸಬೇಕು. ನಿನ್ನ ಉಳಿದ ಚಿಕ್ಕತಾಯಿಯರನ್ನೂ ನೀನು ಅನುದಿನವೂ ನಮಸ್ಕರಿಸುತ್ತಾ ಗೌರವಿಸಬೇಕು. ಪ್ರೀತಿ, ಸೌಹಾರ್ದ

ಮತ್ತು ಪಾಲನೆಗಳಿಂದ ಅವರೂ ನನಗೆ ತಾಯಿಯ ಸಮಾನರಾಗಿರುತ್ತಾರೆ. ಭರತ-ಶತ್ರುಘ್ನರು ನನ್ನ ಪ್ರಾಣಗಳಿಗಿಂತಲೂ ಹೆಚ್ಚು ಪ್ರಿಯರಾಗಿರುತ್ತಾರೆ. ಅವರನ್ನೂ ನೀನು ವಿಶೇಷವಾಗಿ ತಮ್ಮಂದಿರಂತೆಯೂ ಮಕ್ಕಳಂತೆಯೂ ಕಾಣಬೇಕು. ಭರತನಿಗೆ ಅಪ್ರಿಯವಾದ ಕಾರ್ಯವನ್ನು ಯಾವಾಗಲೂ ಮಾಡಲೇಬಾರದು. ಏಕೆಂದರೆ : ಅವನೇ ನಮ್ಮ ರಾಜನು. ದೇಶಕ್ಕೂ ಮತ್ತು ಕುಲಕ್ಕೂ ಪ್ರಭುವೂ ಆಗುವನು.

ಆರಾಧಿತಾ ಹಿ ಶೀಲೇನ ಪ್ರಯತ್ನೈಶ್ಚೋಪಸೇವಿತಾಃ ।
ರಾಜಾನಃ ಸಂಪ್ರಸೀದನ್ತೀ ಪ್ರಕುಪ್ಯನ್ತಿ ವಿಪರ್ಯಯೇ ॥೩೫॥

ಸದ್ವೃತ್ತಿಯಿಂದಲೂ–ಆಲಸ್ಯರಹಿತವಾದ ಪ್ರಯತ್ನದಿಂದಲೂ ಆರಾಧಿಸಿದರೆ ಅಥವಾ ಸೇವಿಸಿದರೆ ರಾಜರು ಪ್ರಸನ್ನರಾಗುತ್ತಾರೆ. ಹಾಗೆ ಮಾಡದೇ ಅವರಿಗೆ ವಿರೋಧವಾದ ಕಾರ್ಯವನ್ನು ಮಾಡಿದರೆ ಕೋಪಗೊಳ್ಳುತ್ತಾರೆ.

ಔರಸಾನಪಿ ಪುತ್ರಾನ್ಹಿ ತ್ಯಜನ್ತ್ಯಹಿತಕಾರಿಣಃ ।
ಸಮರ್ಥಾನ್ಸಂಪ್ರಗೃಹ್ಣನ್ತಿ ಪರಾನಪಿ ನರಾಧಿಪಾಃ ॥೩೬॥

ಅಹಿತವನ್ನುಂಟುಮಾಡುವವರು ತಮ್ಮ ಮಕ್ಕಳೇ ಆಗಿದ್ದರೂ ರಾಜರು ಅವರನ್ನೂ ಪರಿತ್ಯಜಿಸುತ್ತಾರೆ. ಸಮರ್ಥರಾದವರನ್ನೂ, ಹಿತಕಾರಿಗಳನ್ನೂ ಅವರು ತಮ್ಮ ಬಂಧುವರ್ಗಕ್ಕೆ ಸೇರದವರಾಗಿದ್ದರೂ–ರಾಜರು ಅಂತಹವರನ್ನು ಪ್ರತಿಗ್ರಹಿಸಿ ಪುರಸ್ಕರಿಸುತ್ತಾರೆ.

ಕಲ್ಯಾಣಿ! ನನ್ನನ್ನಗಲಿದ ನೀನು ಧರ್ಮದಲ್ಲಿಯೇ ನಿರತಳಾಗಿ, ಸತ್ಯನಿಷ್ಠಳಾಗಿ, ವ್ರತಾನುಷ್ಠಾನಪರಳಾಗಿರುತ್ತಾ ರಾಜನಾದ ಭರತನನ್ನು ಅನುಸರಣೆಮಾಡಿಕೊಂಡಿರು.

ಪ್ರಿಯಳೇ! ನಾನು ಮಹಾರಣ್ಯಕ್ಕೆ ಹೋಗುತ್ತೇನೆ. ನೀನು ಇಲ್ಲಿಯೇ ವಾಸಮಾಡಿಕೊಂಡಿರಬೇಕು. ನೀನು ಯಾರೊಬ್ಬರಿಗೂ ಅಪ್ರಿಯವಾಗದಂತೆ ನಡೆದುಕೊಳ್ಳಬೇಕು. ಈ ನನ್ನ ಮಾತನ್ನು ನೀನು ನಡೆಸಿಕೊಡಬೇಕು."

೨೬ನೆಯ ಸರ್ಗವು ಮುಗಿಯಿತು.

ತನ್ನನ್ನೂ ಕಾಡಿಗೆ ಕರೆದೊಯ್ಯುವಂತೆ ಸೀತಾದೇವಿಯು ಶ್ರೀರಾಮನನ್ನು ಪ್ರಾರ್ಥಿಸಿದುದು

ಏವಮುಕ್ತಾ ತು ವೈದೇಹೀ ಪ್ರಿಯಾರ್ಹಾ ಪ್ರಿಯವಾದಿನೀ ।
ಪ್ರಣಯಾದೇವ ಸಂಕ್ರುದ್ಧಾ ಭರ್ತಾರಮಿದಮಬ್ರವೀತ್ ॥೧॥

ಶ್ರೀರಾಮನು ಹೀಗೆ ಹೇಳಿದನಂತರ ಪ್ರಿಯವಾದ ಮಾತುಗಳನ್ನು ಕೇಳಲು ಅರ್ಹಳಾದ, ಪ್ರಿಯವಾದ ಮಾತುಗಳನ್ನೇ ಆಡುವ ವೈದೇಹಿಯು ಪ್ರಣಯದಿಂದಲೇ ಕೋಪಗೊಂಡವಳಂತೆ ಗಂಡನೊಡನೆ ಹೇಳಿದಳು :

"ರಾಮಭದ್ರ! ಇದೇನು ಇಷ್ಟು ಹಗುರವಾಗಿ ಮಾತನಾಡುತ್ತಿರುವೆ? ನರಶ್ರೇಷ್ಠನೇ! ನಿನ್ನ ಮಾತನ್ನು ಕೇಳಿದರೆ ಅಪಹಾಸ್ಯಕ್ಕೆ ಈ ಮಾತುಗಳನ್ನಾಡುತ್ತಿರುವೆಯೆಂದು ನಾನು ಭಾವಿಸುತ್ತೇನೆ. ಈ ನಿನ್ನ ಮಾತುಗಳು ವೀರರಾದ, ಶಸ್ತ್ರಾಸ್ತ್ರಗಳಲ್ಲಿ ಪರಿಣತರಾದ ರಾಜಪುತ್ರರು ಹೇಳತಕ್ಕುವುಗಳಲ್ಲ. ವೀರಪತ್ನಿಯಾದ ನನಗೂ ಈ ಮಾತು ಕೇಳಲು ಕೂಡ ಅರ್ಹವಾಗಿಲ್ಲ.

ಆರ್ಯಪುತ್ರ ಪಿತಾ ಮಾತಾ ಭ್ರಾತಾ ಪುತ್ರಸ್ತಥಾ ಸ್ನುಷಾ ।
ಸ್ವಾನಿ ಪುಣ್ಯಾನಿ ಭುಞ್ಜಾನಾಃ ಸ್ವಂ ಸ್ವಂ ಭಾಗ್ಯಮುಪಾಸತೇ ॥೪॥

ಆರ್ಯಪುತ್ರನೇ! ತಂದೆ, ತಾಯಿ, ಸಹೋದರ, ಮಗ, ಸೊಸೆ–ಇವರೆಲ್ಲರೂ ತಾವು ಮಾಡಿದ ಪುಣ್ಯ-ಪಾಪಗಳ ಫಲರೂಪವಾದ ತಮ್ಮ-ತಮ್ಮ ಶುಭಾಶುಭಫಲಗಳನ್ನು ಪಡೆಯುತ್ತಾರೆ.* ಆದರೆ ಭಾರ್ಯೆಯ ವಿಷಯವು ಹಾಗಲ್ಲ.

ಭರ್ತುರ್ಭಾಗ್ಯಂ ತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ ।
ಅತಶ್ಚೈವಾಹಮಾದಿಷ್ಟಾ ವನೇ ವಸ್ತವ್ಯಮಿತ್ಯಪಿ ॥೫॥

---

* 'ಕರ್ತವ್ಯಮಾಚರನ್ಕಾರ್ಯಕರ್ತವ್ಯಮನಾಚರನ್ । ತಿಷ್ಠತಿ ಪ್ರಕೃತಾಚಾರೇ ಸ ವೈ ಆರ್ಯ ಇತಿ ಸ್ಮೃತಃ ॥' ಮಾಡಲೇಬೇಕಾದ ಕರ್ತವ್ಯವನ್ನು ನಿಷ್ಠೆಯಿಂದ ಮಾಡುತ್ತಾ ನಿಷಿದ್ಧವಾದುದನ್ನು ಮಾಡದೇ ಸದಾಚಾರ-ಶಿಷ್ಟಾಚಾರನಾಗಿ ಇರುವವನು ಆರ್ಯ. ಅಂತಹವನ ಪುತ್ರ 'ಆರ್ಯಪುತ್ರ' ಆರ್ಯಸ್ಯ = ಶ್ವಶುರಸ್ಯ ಪುತ್ರಃ 'ಮಾವನ ಮಗ' ಎಂದೂ ಅರ್ಥವಾಗುತ್ತದೆ.

ಪತ್ನಿಯಾದವಳು ಮಾತ್ರವೇ ಪತಿಯ ಭಾಗ್ಯವನ್ನು ಪಡೆಯುತ್ತಾಳೆ. ಆದುದರಿಂದ ನನ್ನ ಅತ್ತೆ-ಮಾವಂದಿರು ನನ್ನನ್ನು ಪ್ರತ್ಯೇಕವಾಗಿ ಕರೆಯಿಸಿ ಕಾಡಿಗೆ ಹೋಗುವಂತೆ ಹೇಳಬೇಕಾದ ಕಾರಣವಿಲ್ಲ. ನಿನ್ನ ಅರ್ಧಾಂಗಿಯಾದ ನನ್ನನ್ನು ಕಾಡಿಗೆ ಹೋಗಲು ಹೇಳಿದಂತೆಯೇ ಸರಿ.*

ನ ಪಿತಾ ನಾತ್ಮಜೋ ನಾತ್ಮಾ ನ ಮಾತಾ ನ ಸಖೀಜನಃ ।
ಇಹ ಪ್ರೇತ್ಯ ಚ ನಾರೀಣಾಂ ಪತಿರೇಕೋ ಗತಿಃ ಸದಾ ॥೬॥

ತಂದೆಯಾಗಲೀ, ಮಗನಾಗಲೀ, ತಾಯಿಯಾಗಲೀ, ಸಖೀಜನರಾಗಲೀ ಹೆಂಗಸಿಗೆ ರಕ್ಷಕರಾಗುವುದಿಲ್ಲ. ತಾನಾಗಿಯೇ ರಕ್ಷಿಸಿಕೊಳ್ಳಲು ಕೂಡ ಸ್ತ್ರೀಯು ಸ್ವತಂತ್ರಳಲ್ಲ. ಇಹದಲ್ಲಾಗಲೀ-ಪರದಲ್ಲಾಗಲೀ ಪತಿಯೊಬ್ಬನೇ ಸ್ತ್ರೀಯರಿಗೆ ಪರಮಾಶ್ರಯನು.

ಯದಿ ತ್ವಂ ಪ್ರಸ್ಥಿತೋ ದುರ್ಗಂ ವನಮದ್ಯೈವ ರಾಘವ ।
ಅಗ್ರತಸ್ತೇ ಗಮಿಷ್ಯಾಮಿ ಮೃದ್ನನ್ತೀ ಕುಶಕಣ್ಟಕಾನ್ ॥೭॥

ದುರ್ಗಮವಾದ ಅರಣ್ಯಕ್ಕೆ ನೀನು ಈಗಲೇ ಹೊರಡುವುದಾದರೂ–ಹಾದಿಯಲ್ಲಿರುವ ಮುಳ್ಳುಗಳನ್ನೂ ದರ್ಭೆಯನ್ನೂ ನಾಶಗೊಳಿಸಿ ನಿನ್ನ ಮಾರ್ಗವನ್ನು ಸುಗಮಗೊಳಿಸಲು–ನಿನಗಿಂತಲೂ ಮೊದಲೇ ನಾನು ಹೊರಡುತ್ತೇನೆ.

ಈರ್ಷ್ಯಾರೋಷೌ ಬಹಿಷ್ಕೃತ್ಯ ಭುಕ್ತಶೇಷಮಿವೋದಕಮ್ ।
ನಯ ಮಾಂ ವೀರ ವಿಸ್ರಬ್ಧಃ ಪಾಪಂ ಮಯಿ ನ ವಿದ್ಯತೇ ॥೮॥

---

* ಸೀತೆಯಾಡಿರುವ ಈ ಮಾತುಗಳು ಬಹುರಮ್ಯವಾಗಿವೆ. ತಂದೆ-ತಾಯಿಗಳು ಕಡುಬಡವರಾಗಿರಬಹುದು. ಮಗನು ವಿದ್ಯಾವಂತನಾಗಿ, ದೊಡ್ಡ ಅಧಿಕಾರಿಯಾದರೆ ಅವನನ್ನು ವರಿಸುವ ಪತ್ನಿಗೆ ಅತ್ತೆ-ಮಾವಂದಿರಿಗಿರುವಂತೆ ಬಡತನವಿರುವುದಿಲ್ಲ. ತನ್ನ ಗಂಡನ ಸುಖದಲ್ಲಿ ಪಾಲುಗೊಳ್ಳುವಳು. ತಂದೆ-ತಾಯಿಗಳು ಐಶ್ವರ್ಯವಂತರಾಗಿ ಮಗನು ಕಾರಣಾಂತರದಿಂದ ಕಷ್ಟವನ್ನನುಭವಿಸಬೇಕಾದಲ್ಲಿ ಆ ಮಗನ ಹೆಂಡತಿಯೂ ಸಹ ಗಂಡನ ಕಷ್ಟದಲ್ಲಿ ಪಾಲುಗೊಳ್ಳುವಳೇ ಹೊರತು ಅತ್ತೆ-ಮಾವಂದಿರ ಐಶ್ವರ್ಯವು ಇವಳಿಗೆ ಪ್ರಯೋಜನಕ್ಕೆ ಬರುವುದಿಲ್ಲ. ಆದುದರಿಂದ 'ಭರ್ತುರ್ಭಾಗ್ಯಂ ಭಾರ್ಯೈಕಾ ಪ್ರಾಪ್ನೋತಿ' ಪತ್ನಿಯಾದವಳೊಬ್ಬಳೇ ಗಂಡನ ಭಾಗ್ಯದಲ್ಲಿ ಸಮಪಾಲುಗೊಳ್ಳುತ್ತಾಳೆಂಬ ಸೀತೆಯ ಮಾತು ಹೃದಯಂಗಮವಾಗಿದೆ.

ಕುಡಿದು ಮಿಕ್ಕ ನೀರನ್ನು ತೊರೆದುಬಿಡುವಂತೆ (ಚೆಲ್ಲಿಬಿಡುವಂತೆ)–'ಇವಳು ನನ್ನ ಮಾತನ್ನು ಕೇಳದೇ ತನ್ನ ಅಧಿಕಾರವನ್ನು ನಡೆಸುತ್ತಿದ್ದಾಳಲ್ಲಾ!'–ಎಂಬ ಅಸೂಯೆ-ರೋಷಗಳನ್ನು ತೊರೆದು ವಿಶ್ವಾಸಪೂರ್ವಕವಾಗಿ ನನ್ನನ್ನು ಕಾಡಿಗೆ ಕರೆದುಕೊಂಡು ಹೋಗು. ನನ್ನಲ್ಲಿ ಯಾವ ಪಾಪವೂ ಇಲ್ಲ.*

ಪ್ರಾಸಾದಾಗ್ರೈರ್ವಿಮಾನೈರ್ವಾ ವೈಹಾಯಸಗತೇನ ವಾ ।
ಸರ್ವಾವಸ್ಥಾಗತಾ ಭರ್ತುಃ ಪಾದಚ್ಛಾಯಾ ವಿಶಿಷ್ಯತೇ ॥೯॥

ಪತಿಯಾದವನು ಅರಮನೆಯ ಉಪ್ಪರಿಗೆಯಲ್ಲಿಯೇ ಇರಲಿ ; ವಿಮಾನಗಳಲ್ಲಿ ಕುಳಿತು ಆಕಾಶದಲ್ಲಿರುವ ಉತ್ತಮವಾದ ಲೋಕಗಳಿಗೇ ಹೋಗಲಿ ; ದುರವಸ್ಥೆಯನ್ನೇ ಹೊಂದಿರಲಿ–ಸಾಧ್ವಿಗೆ ಪತಿಯ ಪಾದ ಸೇವೆಯೇ ಅತಿಶ್ರೇಷ್ಠವಾಗಿದೆ.

ಅನುಶಿಷ್ಟಾಸ್ಮಿ ಮಾತ್ರಾ ಚ ಪಿತ್ರಾ ಚ ವಿವಿಧಾಶ್ರಯಮ್ ।
ನಾಸ್ಮಿ ಸಂಪ್ರತಿವಕ್ತವ್ಯಾ ವರ್ತಿತವ್ಯಂ ಯಥಾ ಮಯಾ ॥೧೦॥

ಪ್ರಭುವೇ! ನಾನಿನ್ನೂ ಚಿಕ್ಕವಳಾಗಿದ್ದಾಗಲೇ ನನ್ನ ತಂದೆ-ತಾಯಿಯರಿಂದ-ಪತಿಶುಶ್ರೂಷೆಯನ್ನು ಹೇಗೆ ಮಾಡಬೇಕು? ಪತಿಯ ವಿಷಯದಲ್ಲಿ ಮತ್ತು ಅತ್ತೆ-ಮಾವಂದಿರ ವಿಷಯದಲ್ಲಿ ಯಾವಾಗ ಹೇಗೆ ನಡೆದುಕೊಳ್ಳಬೇಕು?–ಮುಂತಾದ ವಿಷಯಗಳ ಉಪದೇಶವನ್ನು ವಿವಿಧರೀತಿಯಲ್ಲಿ ಪಡೆ

---

* ಈ ಶ್ಲೋಕದಲ್ಲಿ ಸೀತೆಯು **ಈರ್ಷ್ಯಾರೋಷೌ** ಬಹಿಷ್ಕೃತ್ಯ–ಎನ್ನುತ್ತಾಳೆ. **ಪರಾತಿಶಯಾಕ್ಷಮಾ ಈರ್ಷ್ಯಾ** = ಇತರರ ಉಚ್ಛ್ರಾಯಸ್ಥಿತಿಯನ್ನು ನೋಡಿ ಸಹಿಸದಿರುವುದಕ್ಕೆ ಈರ್ಷ್ಯೆಯೆಂದು ಹೆಸರು.

'ಶ್ರೀರಾಮನು ಕಾಡಿಗೆ ಹೋದಾಗಲೂ ಸೀತೆಯು ಪತಿಯನನ್ನನುಸರಿಸಿ ಕಾಡಿಗೆ ಹೋಗಿ ವನವಾಸದ ಕಷ್ಟವನ್ನು ಸಹಿಸಿದಳು. ಸೀತೆಯು ಮಹಾಸಾಧ್ವೀ'–ಮುಂತಾಗಿ ಜನರು ನನ್ನ ವಿಷಯದಲ್ಲಿ ಪ್ರಶಂಸೆಮಾಡುವರೆಂದು ಅಸೂಯೆಪಡಬೇಡ. ಶ್ರೀರಾಮನ ಅಸೂಯೆಗೆ ವನವಾಸಕ್ಕೆ ಹೋಗುವ ಸೀತೆಗೆ ಲಭಿಸುವ ಯಶಸ್ಸೇ ಕಾರಣ–ಇದು ಸೀತತಾದೇವಿಯ ಅಭಿಪ್ರಾಯ. ಕೋಪಕ್ಕೆ ಕಾರಣವೆಂದರೆ ಬೇಡವೆಂದರೂ ಕಾಡಿಗೆ ಬರಲು ಹಟ ಮಾಡುವುದು–ಇದು ಶ್ರೀರಾಮನ ಕೋಪಕ್ಕೆ ಕಾರಣವಾಗುವುದೆಂದು ಸೀತಾದೇವಿಯ ಭಾವನೆ. ಆದುದರಿಂದ ಅವಳು **ಈರ್ಷ್ಯಾ ರೋಷೌ** ಬಹಿಷ್ಕೃತ್ಯ ಎನ್ನುತ್ತಾಳೆ–ಎಂಬುದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

ದಿರುತ್ತೇನೆ. ಆದುದರಿಂದ ಈಗ ನಾನು ಪತಿಯ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಯಾರಿಂದಲೂ ಕೇಳಿ ತಿಳಿಯಬೇಕಾಗಿಲ್ಲ.

ನಾನು ನಿರ್ಜನವಾದ, ನಾನಾಮೃಗಗಳಿಂದ ತುಂಬಿರುವ, ಹುಲಿ-ತೋಳ–ಇವೇ ಮೊದಲಾದ ಕ್ರೂರಮೃಗಗಳಿಂದ ಆಶ್ರಯಿಸಲ್ಪಟ್ಟಿರುವ, ಅತಿದುರ್ಗಮವಾದ ಅರಣ್ಯಕ್ಕೆ ನಿನ್ನೊಡನೆ ನಿರ್ಭಯವಾಗಿ ಪ್ರಯಾಣ ಮಾಡುವೆನು.

ಸುಖಂ ವನೇ ನಿವತ್ಸ್ಯಾಮಿ ಯಥೈವ ಭವನೇ ಪಿತುಃ ।
ಅಚಿನ್ತಯನ್ತೀ ತ್ರೀನ್ ಲೋಕಾಂಶ್ಚಿನ್ತಯನ್ತೀ ಪತಿವ್ರತಮ್ ॥೧೨॥

ತವರುಮನೆಯಲ್ಲಿ ಸುಖವಾಗಿರುವಂತೆಯೇ ನಾನು ಅರಣ್ಯದಲ್ಲಿ ಸುಖವಾಗಿರುವೆನು. ಮೂರು ಲೋಕಗಳ ಐಶ್ವರ್ಯಾದಿಗಳನ್ನೂ ಲೆಕ್ಕಿಸದೇ ಪತಿನಿಷ್ಠಾನಿಯಮವನ್ನೇ ಯಾವಾಗಲೂ ಚಿಂತಿಸುತ್ತಿರುತ್ತೇನೆ.

ಅನುದಿನವೂ ನಿನ್ನ ಶುಶ್ರೂಷೆಮಾಡುತ್ತಾ, ನಿಯತಾಹಾರಳಾಗಿ ಬ್ರಹ್ಮಚರ್ಯವ್ರತದಲ್ಲಿರುತ್ತಾ, ಪುಷ್ಪಗಳ ಮಕರಂದದಿಂದ ಸುಗಂಧಿತವಾದ ವನದಲ್ಲಿ ನಿನ್ನೊಡನೆ ರಮಿಸುತ್ತೇನೆ. ಅರಣ್ಯದಲ್ಲಿ ನನ್ನನ್ನು ಪರಿಪಾಲನೆ ಮಾಡಲು (ರಾಕ್ಷಸರಿಂದಲೂ ದುಷ್ಟಮೃಗಗಳಿಂದಲೂ ಸಂರಕ್ಷಿಸಲು) ನೀನು ಸಮರ್ಥನಾಗಿರುವೆ. ಸಕಲಪ್ರಾಣಿಗಳನ್ನೂ ಪರಿಪಾಲಿಸಲು ಸಮರ್ಥನಾಗಿ ರುವ ನಿನಗೆ ನನ್ನೊಬ್ಬಳ ರಕ್ಷಣೆಯು ಎಷ್ಟು ಮಾತ್ರದ್ದು! ಈಗ ನಾನು ನಿನ್ನ ಜೊತೆಯಲ್ಲಿ ಕಾಡಿಗೆ ಬಂದೇಬರುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ. ಮಹಾಭಾಗನೇ! ನನ್ನ ಈ ಪ್ರಯತ್ನವನ್ನು ಯಾರೂ ತಡೆಯಲಾರರು. ಅಲ್ಲಿ ಸಿಕ್ಕುವ ಕಂದ-ಮೂಲ-ಫಲಗಳನ್ನೇ ತಿಂದು ನಾನು ಜೀವಿಸುತ್ತೇನೆ. ಇದರಲ್ಲಿ ಸಂಶಯಪಡಬೇಡ. ನಿನ್ನೊಡನೆ ವಾಸವಾಗಿರುವ ನಾನು ಅದು ಬೇಕು ; ಇದು ಬೇಕು–ಎಂದು ಕೇಳುತ್ತಾ ಖಂಡಿತವಾಗಿಯೂ ನಿನಗೆ ದುಃಖ ವನ್ನುಂಟುಮಾಡುವುದಿಲ್ಲ. ನಿನ್ನ ಮುಂದೆ ನಾನು ಹೋಗುತ್ತಿರುತ್ತೇನೆ. ನೀನು ತಿಂದು ಉಳಿದ ಆಹಾರವನ್ನು ತಿನ್ನುತ್ತೇನೆ. ಧೀಮಂತನಾದ, ಒಡೆಯನಾದ ನಿನ್ನ ಜೊತೆಯಲ್ಲಿ ನದೀ-ನದ-ಸರೋವರಗಳನ್ನೂ, ಗಿರಿ-ದುರ್ಗ-ಪರ್ವತಗಳನ್ನೂ ನೋಡಲು ಬಯಸಿದ್ದೇನೆ. ಧೀರನಾದ ನಿನ್ನ ಜೊತೆ

ಯಲ್ಲಿರುವುದರಿಂದಲೇ ಸುಖಿಯಾಗುವ ನಾನು ಹಂಸ-ಕಾರಂಡವಪಕ್ಷಿಗಳಿಂದಲೂ ಕಮಲಪುಷ್ಪಗಳಿಂದಲೂ ಕೂಡಿರುವ ಸರೋವರಗಳನ್ನು ನೋಡಲು ಬಯಸುತ್ತೇನೆ. ವ್ರತಾನುಷ್ಠಾನಪರಳಾದ ನಾನು ನಿತ್ಯವೂ ಆ ಸರೋವರಗಳಲ್ಲಿ ನಿನ್ನೊಡನೆ ಸ್ನಾನಮಾಡುತ್ತೇನೆ. ರಾಘವ! ಹೀಗೆ ನಾನು ನಿನ್ನ ಜೊತೆಯಲ್ಲಿ ಯಾವಾಗಲೂ ಪರಮಾನಂದಭರಿತಳಾಗಿ ವಿಹರಿಸುತ್ತಾ ಕಾಲಕಳೆಯುತ್ತೇನೆ.

ಹೀಗೆ ನಾನು ನೂರು ಸಾವಿರ ವರ್ಷಗಳಾದರೂ ನಿನ್ನೊಡನೆ ಆನಂದದಿಂದಿರುತ್ತೇನೆ. ಇಷ್ಟೊಂದು ಕಾಲವನ್ನು ಹೇಗೆ ಕಳೆದೆನೆಂಬ ಪರಿವೆಯೇ ಇಲ್ಲದೇ ನಿನ್ನ ಜೊತೆಯಲ್ಲಿರುತ್ತೇನೆ. ಸ್ವರ್ಗವೂ ನಿನ್ನ ಜೊತೆಯಲ್ಲಿರುವಷ್ಟು ಸುಖದಾಯಕವಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ನೀನು ನನ್ನ ಜೊತೆಯಲ್ಲಿರದೇ ಸ್ವರ್ಗವಾಸವೇ ನನಗೆ ಸಿಕ್ಕಿದರೂ ಅಂತಹ ಕಾಮಧೇನು–ಕಲ್ಪವೃಕ್ಷ-ನಂದನವನಗಳಿರುವ ಸ್ವರ್ಗವಾಸವೂ ನನಗೆ ರುಚಿಸುವುದಿಲ್ಲ.

ಅನೇಕ ಮೃಗಗಳಿಂದ ವ್ಯಾಪ್ತವಾದ, ಕಪಿಗಳಿಂದಲೂ–ಆನೆಗಳಿಂದಲೂ ಕೂಡಿರುವ ದುರ್ಗಮವಾದ ಅರಣ್ಯಕ್ಕೆ ನಿನ್ನೊಡನೆ ಪ್ರಯಾಣಮಾಡುತ್ತೇನೆ. ನಾನು ನನ್ನ ತವರುಮನೆಯಲ್ಲಿರುವಷ್ಟೇ ಆನಂದದಿಂದ ನಿನ್ನ ಪಾದಸೇವೆ ಯನ್ನು ಮಾಡುತ್ತಾ ನಿಯಮನಿಷ್ಠಳಾಗಿ ಅರಣ್ಯದಲ್ಲಿ ವಾಸಮಾಡುತ್ತೇನೆ. ನಿನ್ನೊಬ್ಬನನ್ನು ಬಿಟ್ಟು ಬೇರೆ ಯಾರಲ್ಲಿಯೂ ವಿಶ್ವಾಸವಿಡದಿರುವ, ನಿನ್ನಲ್ಲಿಯೇ ಯಾವಾಗಲೂ ಅನುರಕ್ತವಾದ ಬುದ್ಧಿಯಿಂದ ಕೂಡಿರುವ, ನಿನ್ನಿಂದ ವಿಯೋಗವೇನಾದರೂ ಆದರೆ ಮರಣಹೊಂದಲು ನಿಶ್ಚಿಯಿಸಿರುವ ನನ್ನ ಪ್ರಾರ್ಥನೆಯನ್ನು ನಡೆಸಿಕೊಡು. ನನ್ನನ್ನೂ ಅರಣ್ಯಕ್ಕೆ ಕರೆದುಕೊಂಡು ಹೋಗು. ನನ್ನಿಂದ ನಿನಗೆ ಹೆಚ್ಚಿನ ಭಾರವೇನೂ ಆಗುವುದಿಲ್ಲ.”

ಧರ್ಮವತ್ಸಲೆಯಾದ ಸೀತಾದೇವಿಯು ಹೀಗೆ ಹೇಳುತ್ತಿದ್ದರೂ ನರಶ್ರೇಷ್ಠನಾದ ಶ್ರೀರಾಮನು ಸೀತೆಯಲ್ಲಿ ಅರಣ್ಯಕ್ಕೆ ಕರೆದೊಯ್ಯಲು ಇಷ್ಟಪಡಲಿಲ್ಲ. ಅವಳ ಮನಸ್ಸನ್ನು ಅರಣ್ಯವಾಸದಿಂದ ಹಿಂದಿರುಗಿಸಲು ಸಾಧಕವಾದ ಅನೇಕ ಮಾತುಗಳನ್ನೂ–ಅರಣ್ಯವಾಸದ ಕಷ್ಟಗಳನ್ನೂ ಶ್ರೀರಾಮನು ವಿವರಿಸಿ ಹೇಳಿದನು.

೨೭ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೨೮ನೆಯ ಸರ್ಗ

ಶ್ರೀರಾಮನು ವನವಾಸದ ಕಷ್ಟಗಳನ್ನು ವರ್ಣಿಸಿ ಕಾಡಿಗೆ ಬಾರದಿರುವಂತೆ ಸೀತೆಗೆ ಸಲಹೆಮಾಡಿದುದು

ಸ ಏವಂ ಬ್ರುವತೀಂ ಸೀತಾಂ ಧರ್ಮಜ್ಞಾಂ ಧರ್ಮವತ್ಸಲಃ ।
ನ ನೇತುಂ ಕುರುತೇ ಬುದ್ಧಿಂ ವನೇ ದುಃಖಾನಿ ಚಿನ್ತಯನ್ ॥೧॥

ಧರ್ಮವತ್ಸಲನಾದ ಶ್ರೀರಾಮನು ಅರಣ್ಯದಲ್ಲಿರುವ ಕಷ್ಟಗಳನ್ನು ಸಮಾಲೋಚಿಸಿ, ಕಾಡಿಗೆ ಕರೆದುಕೊಂಡು ಹೋಗಬೇಕೆಂದು ಒತ್ತಾಯ ಮಾಡಿ ಹೇಳುತ್ತಿದ್ದ, ಧರ್ಮಜ್ಞಳಾದ ಸೀತೆಯನ್ನು ಕರೆದೊಯ್ಯಲು ಮನಸ್ಸು ಮಾಡಲಿಲ್ಲ.

ಧರ್ಮಾತ್ಮನಾದ ಶ್ರೀರಾಮನು, ವಿಲಪಿಸುತ್ತಾ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ಸೀತೆಯನ್ನು ಸವಿಮಾತುಗಳಿಂದ ಸಂತೈಸುತ್ತಾ, ಅವಳ ಮನಸ್ಸನ್ನು ಹೇಗಾದರೂ ಮಾಡಿ ಅರಣ್ಯಪ್ರವಾಸದ ಬಯಕೆಯಿಂದ ಹಿಂದಿರುಗಿಸಬೇಕೆಂಬ ಆಶಯದಿಂದ ಹೇಳತೊಡಗಿದನು :

"ಸೀತೆ! ನೀನು ಮಹಾಕುಲಪ್ರಸೂತಳಾಗಿರುವೆ. ಧರ್ಮಜ್ಞಳಾಗಿರುವೆ ಮತ್ತು ಯಾವಾಗಲೂ ಧರ್ಮದಲ್ಲಿಯೇ ನಿರತಳಾಗಿರುವೆ. ನೀನು ನನ್ನ ಮನಸ್ಸಿಗೂ ಸುಖವಾಗುವಂತೆ ಇಲ್ಲಿಯೇ ಇದ್ದುಕೊಂಡು ಧರ್ಮಾಚರಣೆ ಯನ್ನು ಮಾಡು. ಅಬಲೆಯೇ! ನಾನು ಹೇಳುವ ಹಾಗೆ ಮಾಡುವುದು ನಿನಗೆ ಉಚಿತವಾಗಿದೆ. ಅರಣ್ಯವಾಸದಲ್ಲಿ ಬಹಳ ತೊಂದರೆಗಳಿವೆ. ಎಲ್ಲವನ್ನೂ ವಿವರವಾಗಿ ಹೇಳುವೆನು ; ಕೇಳು. ಅರಣ್ಯವಾಸಮಾಡಲೇಬೇಕೆಂಬ ನಿನ್ನ ಬುದ್ಧಿಯನ್ನು ಬದಲಾಯಿಸು. ಅನೇಕದೋಷಗಳಿಂದ ಕೂಡಿರುವುದರಿಂದಲೇ ಕಾಡನ್ನು ಕಾಂತಾರ (ಮಹಾರಣ್ಯ) ವೆಂದು ಹೇಳುತ್ತಾರೆ. ನಿನಗೆ ಹಿತವನ್ನುಂಟುಮಾಡುವ ಆಶಯದಿಂದಲೇ ನಾನು ನಿನಗಿದನ್ನು ಹೇಳು ತ್ತಿದ್ದೇನೆ. ಅರಣ್ಯದಲ್ಲಿ ಸದಾ ದುಃಖಪಡಬೇಕಾಗುವುದೇ ಹೊರತು ಯಾವಾಗಲೂ ಸುಖವಾಗಿರಬಹುದೆಂಬುದನ್ನು ನಾನು ಇದುವರೆಗೂ ತಿಳಿ ದಿಲ್ಲ. ಪರ್ವತಗಳ ಮೇಲಿನಿಂದ ಹರಿದುಬರುವ ನದಿಗಳ ಭೋರ್ಗರೆಯುವ ಶಬ್ದವೂ, ಗಿರಿ-ಗುಹೆಗಳಲ್ಲಿ ವಾಸಮಾಡುತ್ತಿರುವ ಸಿಂಹಗಳ ಗರ್ಜನೆಗಳೂ

ಕೇಳಲು ಅತಿಕರ್ಕಶವಾಗಿ ದುಃಖವನ್ನುಂಟುಮಾಡುತ್ತವೆ. ಈ ಕಾರಣದಿಂದ ನಾನು ಅರಣ್ಯವಾಸವು ದುಃಖದಾಯಕವೆಂದು ಹೇಳುವೆನು. ಜನಶೂನ್ಯವಾದ ಅರಣ್ಯದಲ್ಲಿ ಸಿಂಹ-ಶಾರ್ದೂಲಾದಿ ದುಷ್ಟಮೃಗಗಳು ಗುಹೆಗಳಿಂದ ಹೊರಕ್ಕೆ ಬಂದು ಸ್ವೇಚ್ಛೆಯಿಂದ ಕುಣಿದಾಡುತ್ತಾ ಸ್ವಲ್ಪವಾದರೂ ಭೀತಿ-ಶಂಕೆಗಳಿಲ್ಲದೇ ಅತ್ತಲಿತ್ತ ಓಡಾಡುತ್ತಲಿದ್ದು, ಮನುಷ್ಯರನ್ನು ಕಂಡೊಡನೆಯೇ ಕೊಲ್ಲಲು ಧಾವಿಸಿ ಮುಂದೆ ಬರುತ್ತವೆ. ಈ ಕಾರಣದಿಂದ ನಾನು ಅರಣ್ಯವಾಸವು ದುಃಖಕರವೆಂದು ಹೇಳುವೆನು.

ಅರಣ್ಯದಲ್ಲಿರುವ ಸರೋವರಗಳು ಅತಿದುರ್ಗಮವಾಗಿರುತ್ತವೆ. ಮೊಸಳೆಗಳಿಂದಲೂ, ಕೆಸರಿನಿಂದಲೂ ಕೂಡಿರುತ್ತವೆ. ಮದಿಸಿದ ಕಾಡಾನೆ ಗಳು ಆ ಸರೋವರಗಳ ಬಳಿಗೆ ಆಗಿಂದಾಗ್ಗೆ ಬರುತ್ತಲೇ ಇರುತ್ತವೆ. ಈ ಕಾರಣಗಳಿಂದ ಅರಣ್ಯವಾಸವು ದುಃಖಕರವಾದುದು. ಅರಣ್ಯದಲ್ಲಿರುವ ಮಾರ್ಗಗಳೂ ಮುಳ್ಳುಗಳನ್ನೊಳಗೊಂಡ ಬಳ್ಳಿಗಳಿಂದ ಆವೃತವಾಗಿರುತ್ತವೆ. ಕಾಡುಕೋಳಿಗಳ ಭಯಂಕರಶಬ್ದದಿಂದ ಕೂಡಿರುತ್ತವೆ. ಕೆಲವೆಡೆಗಳಲ್ಲಿ ನೀರಿಲ್ಲದ ಪ್ರದೇಶಗಳಲ್ಲಿಯೂ ಮಾರ್ಗಗಳು ಹಾದುಹೋಗುತ್ತವೆ. ಅರಣ್ಯದ ಹಾದಿಗಳೆಲ್ಲವೂ ಅತಿದುರ್ಗಮವಾದುವುಗಳು. ಈ ಕಾರಣ ದಿಂದಲೂ ಅರಣ್ಯವಾಸವು ದುಃಖಕರವಾದುದು. ಕಂದ-ಮೂಲ-ಫಲಗಳನ್ನು ಸಂಗ್ರಹಿಸಲು ಹಗಲಿನಲ್ಲಿ ಶ್ರಮಿಸುವ ಮನುಷ್ಯನು ರಾತ್ರಿಯ ವೇಳೆಯಲ್ಲಿ ದಣಿವಾರಿಸಿಕೊಳ್ಳಲು ವೃಕ್ಷಗಳಿಂದ ತಾನೇ ಉದುರಿರುವ ತರಗೆಲೆಗಳ ಹಾಸಿಗೆಯಲ್ಲಿ ಮಲಗುತ್ತಾನೆ. ಹಾಗೆಯೇ ನಾವೂ ತರಗೆಲೆಗಳ ಹಾಸಿಗೆಯಲ್ಲಿ ಮಲಗಬೇಕಾಗುತ್ತದೆ. ಆದುದರಿಂದ ವನವಾಸವು ತುಂಬಾ ದುಃಖಕರ ವಾದುದು. ನಿಗ್ರಹಿಸಿದ ಮನಸ್ಸಿನಿಂದ ಕೂಡಿರುವ ಮನುಷ್ಯನು ಹಗಲಿ ನಲ್ಲಿಯೋ ರಾತ್ರಿಯಲ್ಲಿಯೋ ವೃಕ್ಷಗಳಿಂದ ತಾನೇ ತಾನಾಗಿ ಬೀಳುವ ಹಣ್ಣುಗಳನ್ನು ಪಡೆದುಕೊಂಡು ಆದರಿಂದಲೇ ಸಂತೋಷಪಡಬೇಕಾಗುತ್ತದೆ. ಅರಣ್ಯದಲ್ಲಿ ಸಿಕ್ಕುವ ಕಂದ-ಮೂಲ-ಫಲಗಳನ್ನೂ ಯಥೇಚ್ಛವಾಗಿ ತಿನ್ನು ವಂತಿಲ್ಲ. ಈ ಕಾರಣದಿಂದಲೂ ವನವಾಸವು ದುಃಖಕರವಾದುದು. ಅರಣ್ಯ ದಲ್ಲಿರುವಾಗ ಸಾಮರ್ಥ್ಯವಿರುವಷ್ಟು ಉಪವಾಸವನ್ನೂ ಮಾಡಬೇಕಾಗು ವುದು. ಕೂದಲಿನ ಸಂಸ್ಕಾರಕ್ಕೆ (ತಲೆಬಾಚಿಕೊಳ್ಳಲು) ಅವಕಾಶವಿಲ್ಲದೇ

ಇರುವುದರಿಂದ ಜಡೆಕಟ್ಟಿದ ಕೇಶರಾಶಿಯ ಭಾರವನ್ನು ಹೊರಬೇಕಾಗುವುದು. ಒರಟಾದ ನಾರುಮಡಿಗಳನ್ನು ಉಡಬೇಕಾಗುವುದು. ಈ ಕಾರಣಗಳಿಂದ ವನವಾಸವು ಬಹಳ ಕಷ್ಟಸಾಧ್ಯವಾದುದು. ಅರಣ್ಯವಾಸ ಕಾಲದಲ್ಲಿ ನಮ್ಮ ಜೀವಿಕೆಗೇ ಇಷ್ಟು ಕಷ್ಟವಾಗಿದ್ದರೂ ನಾವು ನಿತ್ಯವಾದ ದೇವ-ಪಿತೃಗಳ ಪೂಜೆಯನ್ನು ವಿಧಿಪೂರ್ವಕವಾಗಿ ಮಾಡಲೇಬೇಕು. ಅಯಾಚಿತರಾಗಿ ಬರುವ ಅತಿಥಿಗಳನ್ನು ಸತ್ಕರಿಸುವುದೂ ನಮ್ಮ ನಿತ್ಯ ಕರ್ತವ್ಯವಾಗಿರುತ್ತದೆ. ಆಯಾಕಾಲದಲ್ಲಿ ಮಾಡಬೇಕಾದ ಕರ್ತವ್ಯಗಳನ್ನು ಪರಿಪಾಲಿಸಬೇಕೆಂಬ ನಿಯಮಾನುಷ್ಠಾನವುಳ್ಳವರು ಮೂರು ಕಾಲಗಳಲ್ಲಿಯೂ ಸ್ನಾನಮಾಡಬೇಕು. ಈ ಕಾರಣದಿಂದಲೂ ವನವಾಸವು ಅತಿದುಃಖಕರವಾದುದು. ನಾವೇ ತಂದ ಹೂಗಳಿಂದ ನಾವೇ ನಿರ್ಮಿಸಿದ ಯಜ್ಞವೇದಿಕೆಯಲ್ಲಿ ಋಷಿಪ್ರೋಕ್ತವಾದ ವಿಧಿಯಿಂದ ದೇವಯಜನಮಾಡಬೇಕು. (ಅಲ್ಲಿ ನಮಗೆ ಯಾವ ಪರಿಚಾರಕರೂ ಇರುವುದಿಲ್ಲ.) ಈ ಕಾರಣದಿಂದಲೂ ಅರಣ್ಯವಾಸವು ದುಃಖಕರವಾದುದು. ಅರಣ್ಯದಲ್ಲಿರುವವರು ಸಿಕ್ಕಿದಷ್ಟು ಆಹಾರದಿಂದಲೇ ತೃಪ್ತರಾಗಬೇಕು. ಆಹಾರನಿಯಮವುಳ್ಳವರಾಗಿರಬೇಕು. ಈ ಕಾರಣದಿಂದಲೂ ಅರಣ್ಯವಾಸವು ದುಃಖಕರವು. ಅರಣ್ಯದಲ್ಲಿ ಬಿರುಗಾಳಿಯು ಯಾವಾಗಲೂ ರಭಸದಿಂದ ಬೀಸುತ್ತಿರುತ್ತದೆ. ಗಾಢವಾದ ಕತ್ತಲೆಯಿರುತ್ತದೆ. ನಾವಪೇಕ್ಷಿಸಿದಾಗ ಕಂದ-ಮೂಲ-ಫಲಗಳು ಸಿಕ್ಕದೇ ಹಸಿವು-ಬಾಯಾರಿಕೆಗಳಿಂದ ಪರಿತಪಿಸಬೇಕಾಗುತ್ತದೆ. ಅರಣ್ಯದಲ್ಲಿ ಇವೇ ಮುಂತಾದ ಮಹಾಭಯಗಳು ಅನೇಕವಾಗಿರುತ್ತವೆ. ಆದುದರಿಂದ ವನವಾಸವು ದುಃಖಕರವಾದುದು. ಅರಣ್ಯದಲ್ಲಿ ಸರ್ಪಗಳು ಅನೇಕವಾಗಿರುತ್ತವೆ ಮತ್ತು ನಾನಾವಿಧವಾಗಿರುತ್ತವೆ. ಅವು ಯಾವಾಗಲೂ ದರ್ಪದಿಂದಲೇ ಮಾರ್ಗದಲ್ಲಿ ಸಂಚರಿಸುತ್ತಿರುತ್ತವೆ. ಈ ಕಾರಣದಿಂದಲೂ ಅರಣ್ಯವಾಸವು ದುಃಖಕರವಾದುದು. ನದಿಗಳಲ್ಲಿ ವಾಸಮಾಡುವ ಹಾವುಗಳು ನದಿಗಳಂತೆಯೇ ವಕ್ರ-ವಕ್ರವಾಗಿ ಹರಿದಾಡುತ್ತಾ ಕಾಡುದಾರಿಗಳನ್ನು ಆವರಿಸಿ ಕುಳಿತಿರುತ್ತವೆ. ಮಿಡತೆಗಳೂ, ಚೇಳುಗಳೂ, ಕಣಜಗಳೂ, ಕಾಡುನೊಣಗಳೂ, ಸೊಳ್ಳೆಗಳೂ ನಿತ್ಯವೂ ಕಾಡಿನಲ್ಲಿ ನಮ್ಮನ್ನು ಬಾಧಿಸುತ್ತಲೇ ಇರುತ್ತವೆ. ವಿಶಾಲವಾಗಿ ಹರಡಿಕೊಂಡಿರುವ ಕೊಂಬೆ

ಗಳುಳ್ಳ ಮತ್ತು ಮುಳ್ಳುಗಳಿಂದ ಕೂಡಿರುವ ವೃಕ್ಷಗಳೂ, ದರ್ಭೆ-ಹುಲ್ಲು ಮತ್ತು ನೊಜೆಗುತ್ತಿಗಳೂ ಕಾಡಿನಲ್ಲಿ ಎಲ್ಲೆಲ್ಲೂ ಹರಡಿಕೊಂಡಿರುತ್ತವೆ. ಈ ಎಲ್ಲ ಕಾರಣಗಳಿಂದಲೂ ಅರಣ್ಯವಾಸವು ದುಃಖಕರವಾದುದು. ಅರಣ್ಯದಲ್ಲಿ ವಾಸಮಾಡಲು ಇಚ್ಛಿಸುವವನು ಕೋಪ-ಲೋಭಗಳನ್ನು ಪರಿತ್ಯಜಿಸಬೇಕು. ಭಯವನ್ನುಂಟುಮಾಡುವ ದುಷ್ಟಪ್ರಾಣಿಗಳ ವಿಷಯದಲ್ಲಿಯೂ ಭಯಪಡಬಾರದು. ಆದುದರಿಂದ ಅರಣ್ಯದಲ್ಲಿ ದುಃಖವೆಂಬುದು ನಿತ್ಯ ವಾದುದು. ಮೈಥಿಲಿ! ಅರಣ್ಯಕ್ಕೆ ನನ್ನೊಡನೆ ಬರಬೇಕೆಂಬ ನಿನ್ನ ಆಶಯವನ್ನು ಸಾಕುಮಾಡು. ಅರಣ್ಯವಾಸವು ನಿನಗೆ ಕ್ಷೇಮಕರವಲ್ಲ. ನಾನು ವನವಾಸದಿಂದ ಪ್ರಾಪ್ತವಾಗಬಹುದಾದ ದುಃಖಗಳೇನೆಂಬುದನ್ನು ವಿಮರ್ಶೆ ಮಾಡಿ ನಿನಗೆ ವನವಾಸವು ಸಹ್ಯವಾಗಲಾರದೆಂಬುದನ್ನು ಇಲ್ಲಿಯೇ ಮನಗಂಡು ಹೇಳುತ್ತಿದ್ದೇನೆ. ನಿಶ್ಚಯವಾಗಿಯೂ ಅರಣ್ಯವು ಬಹಳ ದೋಷಗಳಿಂದ ಕೂಡಿದೆ."

ಹೀಗೆ ಅರಣ್ಯದಲ್ಲಿನ ಕಷ್ಟಗಳನ್ನು ಬಗೆ-ಬಗೆಯಾಗಿ ವಿವರಿಸುತ್ತಾ ಮಹಾತ್ಮನಾದ ಶ್ರೀರಾಮನು ಸೀತೆಯನ್ನು ಅರಣ್ಯಕ್ಕೆ ಕರೆದುಕೊಂಡು ಹೋಗುವ ಮನಸ್ಸುಮಾಡಲಿಲ್ಲ. ಆದರೆ ಸೀತೆಯೂ ಶ್ರೀರಾಮನ ಮಾತನ್ನು ಕೇಳಲಿಲ್ಲ. (ಅರಣ್ಯಕ್ಕೆ ಹೋಗಬೇಕೆನ್ನುವ ಇಚ್ಛೆಯನ್ನು ತ್ಯಜಿಸಲಿಲ್ಲ.) ರಾಮನ ಮಾತಿನಿಂದ ಅತ್ಯಂತ ದುಃಖಿತೆಯಾಗಿ ಶ್ರೀರಾಮನಿಗೆ ಹೇಳತೊಡಗಿದಳು.

೨೮ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೨೯ನೆಯ ಸರ್ಗ

ಸೀತಾದೇವಿಯು ತನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವುದರ ಔಚಿತ್ಯವನ್ನು ಶ್ರೀರಾಮನಿಗೆ ವಿವರಿಸಿ ಹೇಳಿದುದು

ಏತತ್ತು ವಚನಂ ಶ್ರುತ್ವಾ ಸೀತಾ ರಾಮಸ್ಯ ದುಃಖಿತಾ ।
ಪ್ರಸಕ್ತಾಶ್ರುಮುಖೀ ಮನ್ದಮಿದಂ ವಚನಮಬ್ರವೀತ್ ॥೧॥

ಶ್ರೀರಾಮನ ಮಾತುಗಳನ್ನು ಕೇಳಿ ಅತಿದುಃಖಿತಳಾದ ಸೀತಾ

ದೇವಿಯು ಕಂಬನಿದುಂಬಿದ ಮುಖವುಳ್ಳವಳಾಗಿ ರಾಮನನ್ನು ಕುರಿತು ಮೆಲ್ಲ-ಮೆಲ್ಲನೆ ಈ ಮಾತುಗಳನ್ನಾಡಿದಳು :

"ಪ್ರಭುವೇ! ಅರಣ್ಯದಲ್ಲಿ ವಾಸಮಾಡುವುದರ ವಿಷಯವಾಗಿ ನೀನು ಯಾವ-ಯಾವ ದೋಷಗಳನ್ನು ವಿವರಿಸಿ ಹೇಳಿದೆಯೋ–ಅವೆಲ್ಲವನ್ನೂ ನಿನ್ನ ಜೊತೆಯಲ್ಲಿರುವ ನನಗೆ ಸುಖಕರಗಳಾದ ಗುಣಗಳೆಂದೇ ಭಾವಿಸು. ನಾನು ನಿನ್ನ ಸ್ನೇಹದಲ್ಲಿಯೇ, ನಿನ್ನ ಅನುಸರಣೆಯಲ್ಲಿಯೇ ಆಸಕ್ತಳಾಗಿರುತ್ತೇನೆ. ಸಿಂಹಗಳೂ, ಕಾಡಾನೆಗಳೂ, ಹುಲಿಗಳೂ, ಶಾರ್ದೂಲಗಳೂ, ಎಂಟು ಕಾಲುಗಳಿರುವ ಶರಭಗಳೂ, ಕಾಡೆತ್ತುಗಳೂ, ಚಮರೀಮೃಗಗಳೂ ಮತ್ತು ಅರಣ್ಯದಲ್ಲಿ ವಾಸಮಾಡುವ ಮೃಗ-ಪಕ್ಷಿಗಳೂ ಹಿಂದೆಂದೂ ನೋಡದಿರುವ ನಿನ್ನ ದಿವ್ಯರೂಪವನ್ನು ಕಂಡು ಹಿಂದೆಸರಿದು ನಿಲ್ಲುತ್ತವೆ. 'ಭಯೇ ಸರ್ವೇ ಹಿ ಬಿಭ್ಯತಿ । ಭಯಕ್ಕೆ ಕಾರಣವಾದ ವಸ್ತುವು ಎದುರಾಗಿ ಬಂದಿತೆಂದರೆ– ಎಲ್ಲರೂ ಭಯಪಡುತ್ತಾರೆ.' ಆದುದರಿಂದ ಕಾಡಿನ ಮೃಗಗಳಿಂದ ನಮಗೆ ಯಾವ ಭಯವೂ ಇಲ್ಲ. ನನ್ನ ತಂದೆ-ತಾಯಿಗಳ ಆಜ್ಞೆಯಂತೆ ನಾನು ನಿನ್ನೊಡನೆ ಬರಲೇಬೇಕಾಗಿದೆ. ನನ್ನ ತಂದೆ-ತಾಯಿಗಳು ನನಗೆ ಯಾವಾಗಲೂ ನಿನ್ನ ಸಂಗಡವೇ ಇರುವಂತೆ ಹೇಳಿದ್ದಾರೆ. ಒಂದು ವೇಳೆ ನೀನು ಕರೆದೊಯ್ಯದಿದ್ದರೆ ನಿನ್ನ ವಿಯೋಗದಿಂದಾಗಿ ಇಲ್ಲಿಯೇ ನಾನು ಪ್ರಾಣ ಬಿಡಬೇಕಾಗುತ್ತದೆ. ನಿನ್ನ ಜೊತೆಯಲ್ಲಿರುವ ನನ್ನನ್ನು–ದೇವತೆಗಳಿಗೆ ಒಡೆಯನಾದ ಇಂದ್ರನೇ ಪ್ರತ್ಯಕ್ಷವಾಗಿ ಬಂದರೂ ತನ್ನ ಪರಾಕ್ರಮದಿಂದ ಭಯಪಡಿಸಲಾರನು.

ಪತಿಹೀನಾ ತು ಯಾ ನಾರೀ ನ ಸಾ ಶಕ್ಷ್ಯತಿ ಜೀವಿತುಮ್ ।
ಕಾಮಮೇವಂವಿಧಂ ರಾಮ ತ್ವಯಾ ಮಮ ನಿದರ್ಶಿತಮ್ ॥೭॥

ಗಂಡನಿಂದ ವಿಹೀನಳಾಗಿರುವ ಸ್ತ್ರೀಯು ಜೀವಿಸಿರಲು ಸಮರ್ಥಳಾಗುವುದಿಲ್ಲ–ಎಂಬ ವಿಷಯವನ್ನು ನೀನೇ ನನಗೆ ಬಹಳ ಚೆನ್ನಾಗಿ ಮನದಟ್ಟಾಗುವಂತೆ ಹೇಳಿರುವೆ.*

---

* ಭರತಸ್ಯ ಸಮೀಪೇ ತು ನಾಹಂ ಕಥ್ಯಃ ಕದಾಚನ । ಸರ್ಗ ೨೬. ಶ್ಲೋಕ ೨೪ ಅನುಕೂಲ ತಯಾ ಶಕ್ಯಂ ಸಮೀಪೇ ತಸ್ಯ ವರ್ತಿತುಮ್ ॥ ಶ್ಲೋ. ೨೬. ಸ ಪ್ರಸಾದ್ಯಸ್ತ್ವಯಾ ಸೀತೇ । ೨೭. ವಿಪ್ರಿಯಂ ಚ ನ ಕರ್ತವ್ಯಂ ಭರತಸ್ಯ ಕದಾಚನ ॥ ೩೪.

ಮಹಾಪ್ರಾಜ್ಞನೇ! ನನ್ನ ತಂದೆಯ ಮನೆಯಲ್ಲಿದ್ದಾಗ ನಾನು ಅರಣ್ಯದಲ್ಲಿ ವಾಸಮಾಡಬೇಕಾಗುವುದೆಂದು ಬ್ರಾಹ್ಮಣರು ಹೇಳಿದ್ದರು. ಅವರ ಮಾತು ಇಂದು ಸತ್ಯವಾಗಿ ಪರಿಣಮಿಸಿದೆ. ಅವರು ಹೇಳಿರುವಂತೆ ನನಗೆ ವನವಾಸದ ಯೋಗವಿರುವುದರಿಂದ ನೀನು ನನ್ನನ್ನು ಕರೆದುಕೊಂಡು ಹೋಗುವುದು ಅನಿವಾರ್ಯವಾಗಿದೆ. ಸಾಮುದ್ರಿಕಲಕ್ಷಣಗಳನ್ನು ತಿಳಿದ ಬ್ರಾಹ್ಮಣರಿಂದ ನನಗೆ ವನವಾಸದ ಯೋಗವಿರುವುದೆಂಬ ಮಾತನ್ನು ನಮ್ಮ ತಂದೆಯ ಮನೆಯಲ್ಲಿ ಕೇಳಿದಂದಿನಿಂದಲೂ ನಾನು ಅರಣ್ಯಕ್ಕೆ ಹೋಗಲು ಉತ್ಸಾಹಿತಳಾಗಿಯೇ ಇದ್ದೇನೆ. ಸತ್ಯನಿಷ್ಠರಾದ ಬ್ರಾಹ್ಮಣರು ಹೇಳಿರುವಂತೆ ಅರಣ್ಯಕ್ಕೆ ಹೋಗುವ ಆದೇಶವನ್ನು ನಾನು ಪಡೆಯಲೇಬೇಕಲ್ಲವೇ? ಅವರ ಮಾತಿನಂತೆ ಆದೇಶವೇನೋ ಬಂದಿದೆ. ಅದಕ್ಕೂ ಮಿಗಿಲಾಗಿ ಪತಿಯಾದ ನಿನ್ನೊಡನೆ ನಾನು ಅರಣ್ಯಕ್ಕೆ ಹೋಗಲಿದ್ದೇನೆ. ಇದನ್ನು ಬದಲಾಯಿಸುವ ಸಾಧ್ಯತೆಯೇ ಇಲ್ಲ. ನನಗೆ ಅರಣ್ಯಕ್ಕೆ ಹೋಗಬೇಕೆಂಬ ಆದೇಶವೂ ಬಂದಿದೆ. ನಿನ್ನ ಜೊತೆಯಲ್ಲಿಯೇ ನಾನು ಅರಣ್ಯಕ್ಕೆ ಹೋಗುತ್ತೇನೆ. ವನವಾಸಕ್ಕೆ ಹೋಗಬೇಕಾದ ಕಾಲವೀಗ ಸನ್ನಿಹಿತವಾಗಿದೆ. **'ಸತ್ಯವಾಗ್ಭವತು ದ್ವಿಜಃ**–'ನನಗೆ ಈ ಭವಿಷ್ಯವನ್ನು ಹೇಳಿರುವ ಬ್ರಾಹ್ಮಣನು ಸತ್ಯಭಾಷಿಯಾಗಲಿ.' ಅರಣ್ಯವಾಸದಲ್ಲಿ ಅನೇಕ ವಿಧವಾದ ಕಷ್ಟಗಳಿವೆಯೆಂಬುದು ನನಗೂ ತಿಳಿದಿದೆ. ಆದರೆ ಜಿತೇಂದ್ರಿಯರಲ್ಲದವರು ಅಂತಹ ಕಷ್ಟಗಳಿಗೆ ಭಾಗಿಗಳಾಗುತ್ತಾರೆ. ಜಿತೇಂದ್ರಿಯರಾಗಿರುವ ನಾವು ಆ ದುಃಖಗಳ ವಿಷಯವಾಗಿ ಚಿಂತಿಸಬೇಕಾಗಿಲ್ಲ. ನಾನಿನ್ನೂ ಚಿಕ್ಕವಳಾಗಿದ್ದಾಗ ತಂದೆಯ ಮನೆಯಲ್ಲಿ ಒಮ್ಮೆ ತಾಯಿಯ ಮುಂದೆ ಕುಳಿತಿದ್ದೆನು. ಆ ಸಮಯದಲ್ಲಿ ಆಗಮಿಸಿದ ಸಚ್ಚಾರಿತ್ರ್ಯವುಳ್ಳ ಒಬ್ಬ ತಾಪಸಿಯೂ ನನಗೆ ವನವಾಸದ ಯೋಗವುಂಟೆಂದು ಹೇಳಿದ್ದಳು. ಈ ಹಿಂದೆ ನಾನೂ ಹಲವಾರು ಬಾರಿ ಅರಣ್ಯಕ್ಕೆ

ರಾಜಾನಃ ಸಂಪ್ರಸೀದನ್ತಿ ಪ್ರಕುಪ್ಯನ್ತಿ ವಿಪರ್ಯಯೇ ॥ ೩೫. ಭರತಸ್ಯ ರತಾ ಧರ್ಮೇ। ೩೭. ಇತ್ಯಾದಿ ಉಪದೇಶಗಳಿಂದ ಪತಿಹೀನಳಾದವಳ ಗತಿಯೇನು? ಅವಳು ಪತಿಯನ್ನಗಲಿರಲು ಸಾಧ್ಯವೇ? ಪತಿಯ ವಿಷಯವಾಗಿ ಒಂದು ಮಾತನಾಡಲು ಕೂಡ ಸ್ವಾತಂತ್ರ್ಯವಿಲ್ಲದಿದ್ದ ಮೇಲೆ ಅವಳು ಜೀವಿಸುವ ಪರಿಯೆಂತು? ಮುಂತಾದ ಯೋಚನೆಯ ಗೀಳು ಹುಟ್ಟುವಂತೆ ಮಾಡಿ ಪತಿಯ ಹೊರತು ಸತಿಯು ಜೀವಿಸಿರಲು ಸಾಧ್ಯವಿಲ್ಲವೆಂಬುದನ್ನು ಸ್ಥಿರಪಡಿಸಿರುವೆ.

ಕರೆದುಕೊಂಡು ಹೋಗುವಂತೆ ನಿನ್ನನ್ನು ಕೇಳಿಕೊಂಡಿದ್ದೆನು. ನಿನ್ನೊಡನೆ ಅರಣ್ಯಕ್ಕೆ ಹೋಗಬೇಕೆಂಬುದು ನನ್ನ ಬಹಳ ದಿವಸಗಳ ಬಯಕೆಯೇ ಆಗಿದ್ದಿತು. ರಾಮಭದ್ರ! ನಿನಗೆ ಮಂಗಳವಾಗಲಿ. ಅರಣ್ಯಕ್ಕೆ ಹೋಗಲು ನಾನು ಹೆಚ್ಚಿನ ಉತ್ಸಾಹವುಳ್ಳವಳಾಗಿಯೇ ಇದ್ದೇನೆ. ವನವಾಸಮಾಡುವ ಶೂರನಾದ ನಿನ್ನ ಸೇವೆಮಾಡುವುದು ನನಗೆ ಬಹಳ ಇಷ್ಟವಾಗಿದೆ. ಶುದ್ಧಾತ್ಮನೇ! ಪ್ರೇಮಭಾವದಿಂದ ನಾನು ಇವೆಲ್ಲವನ್ನೂ ಹೇಳುತ್ತಿದ್ದೇನೆ. ಪತಿಯನ್ನೇ ಯಾವಾಗಲೂ ಅನುಸರಿಸುತ್ತಿರುವ ನಾನು ಕಲ್ಮಷರಹಿತಳಾಗಿದ್ದೇನೆ. 'ಭರ್ತಾ ಹಿ ಮಮ ದೈವತಂ'–'ಪತಿಯೇ ನನಗೆ ದೇವರು.'

ಪ್ರೇತ್ಯಭಾವೇಽಪಿ ಕಲ್ಯಾಣಃ ಸಂಗಮೋ ಮೇ ಸಹ ತ್ವಯಾ ॥೧೭॥

ಪರಲೋಕದಲ್ಲಾದರೂ ನಿನ್ನೊಡನೆ ಇರುವುದೇ ಸತಿಯಾದ ನನಗೆ ಮಂಗಳದಾಯಕವು.

ಈ ಸಂಬಂಧವಾಗಿ ತಪಸ್ವಿಗಳಾದ ಬ್ರಾಹ್ಮಣರು ಪುಣ್ಯತಮವಾದ ಶ್ರುತಿವಾಕ್ಯವನ್ನು ಹೀಗೆ ಹೇಳಿರುತ್ತಾರೆ :

ಇಹ ಲೋಕೇ ಚ ಪಿತೃಭಿರ್ಯಾ ಸ್ತ್ರೀ ಯಸ್ಯ ಮಹಾಮತೇ ।
ಅದ್ಭಿರ್ದತ್ತಾ ಸ್ವಧರ್ಮೇಣ ಪ್ರೇತ್ಯಭಾವೇಽಪಿ ತಸ್ಯ ಸಾ ॥೧೮॥

'ಈ ಭೂಲೋಕದಲ್ಲಿ ಕನ್ಯಾಪಿತೃಗಳು ತಮ್ಮ ಮಗಳನ್ನು ಯಾವನಿಗೆ ಧಾರೆ ಎರೆದುಕೊಡುವರೋ–ಅವನೇ ಪರಲೋಕದಲ್ಲಿಯೂ ಆ ಕನ್ಯೆಗೆ ಪತಿಯಾಗುತ್ತಾನೆ.'

ಶ್ರುತಿಗಳೇ ಹೀಗೆ ಸಾರುತ್ತಿರುವಾಗ–ಅರಣ್ಯಕ್ಕೆ ಹೋಗಬೇಕೆಂದು ನಾನೇ ಬಯಸಿರುವಾಗ–ನಿನ್ನವಳೇ ಆದ, ಸುಚರಿತ್ರಳಾದ, ಪತಿವ್ರತೆಯಾದ ನನ್ನನ್ನು ಅರಣ್ಯಕ್ಕೆ ಕರೆದುಕೊಂಡು ಹೋಗಲು ಏಕೆ ಇಷ್ಟಪಡುತ್ತಿಲ್ಲ? ಇದಕ್ಕೆ ಕಾರಣವೇನು? ಭಕ್ತಳಾಗಿರುವ, ಪತಿವ್ರತೆಯಾಗಿರುವ, ದೀನಳಾಗಿರುವ, ಸುಖ-ದುಃಖಗಳೆರಡನ್ನೂ ಸಮಾನವೆಂದು ಭಾವಿಸಿರುವ, ಪತಿಯ ಸುಖ-ದುಃಖಗಳಿಗೆ ಹೊಂದಿಕೊಂಡಿರುವ ನನ್ನನ್ನು ಅರಣ್ಯಕ್ಕೆ ಕರೆದುಕೊಂಡು ಹೋಗುವುದು ನಿನಗೆ ಯೋಗ್ಯವಾಗಿದೆ. ಹೀಗೆ ದುಃಖಪಡುತ್ತಿರುವ ನನ್ನನ್ನೇನಾದರೂ ನೀನು ಕಾಡಿಗೆ ಕರೆದುಕೊಂಡು ಹೋಗದಿದ್ದರೆ–ಪ್ರಾಣಬಿಡುವ ಸಲುವಾಗಿ ನಾನು ವಿಷವನ್ನೋ, ಅಗ್ನಿಯನ್ನೋ, ನೀರನ್ನೋ ಆಶ್ರಯಿಸುತ್ತೇನೆ."

ಹೀಗೆ ಸೀತಾದೇವಿಯು ಅನೇಕ ಪ್ರಕಾರವಾಗಿ ತನ್ನನ್ನೂ ಅರಣ್ಯಕ್ಕೆ ಕರೆದುಕೊಂಡು ಹೋಗಬೇಕೆಂದು ಶ್ರೀರಾಮನನ್ನು ಯಾಚಿಸಿದಳು. ಆದರೆ ಮಹಾಬಾಹುವಾದ ಶ್ರೀರಾಮನು ನಿರ್ಜನವಾದ ಅರಣ್ಯಕ್ಕೆ ಅವಳನ್ನು ಕರೆದೊಯ್ಯಲು ಒಪ್ಪಲಿಲ್ಲ. ಶ್ರೀರಾಮನು ತನ್ನ ಅಭಿಪ್ರಾಯವನ್ನು ಪುನಃ ಹೇಳಲಾಗಿ ಸೀತೆಯು ಚಿಂತಾಪರಳಾದಳು. ಬಿಸಿಯಾದ ಕಣ್ಣೀರಿನಿಂದ ಭೂಮಿಯನ್ನು ಸ್ನಾನಮಾಡಿಸುತ್ತಿರುವಳೋ ಎಂಬಂತೆ ಧಾರಾಕಾರವಾಗಿ ಕಣ್ಣೀರನ್ನು ಸುರಿಸುತ್ತಿದ್ದಳು. ಅರಣ್ಯಕ್ಕೆ ಹೋಗಲು ಶ್ರೀರಾಮನ ಅನುಮತಿಯನ್ನು ಹೇಗೆ ಪಡೆಯುವುದೆಂಬುದನ್ನು ಯೋಚಿಸುತ್ತಿದ್ದ, ತಾಮ್ರದಂತೆ ಕೆಂಪಾದ ಕೆಳತುಟಿಯಿಂದ ಕೂಡಿದ್ದ ಸೀತಾದೇವಿಯು ಕಾಡಿಗೆ ತನ್ನೊಡನೆ ಬರಬೇಕೆನ್ನುವ ಬುದ್ಧಿಯನ್ನು ಬದಲಾಯಿಸಲು ಜಿತೇಂದ್ರಿಯನಾದ ಶ್ರೀರಾಮನು ಬಹಳವಾಗಿ ಸಂತೈಸಿದನು.

೨೯ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೩೦ನೆಯ ಸರ್ಗ

ಸೀತಾದೇವಿಯು ಶ್ರೀರಾಮನನ್ನು ಆಕ್ಷೇಪಣೆಯೊಡನೆ ಕಾಡಿಗೆ ಕರೆದುಕೊಂಡು ಹೋಗಲು ಆಗ್ರಹಪಡಿಸಿದುದು : ಅವಳ ವಿಲಾಪವನ್ನು ನೋಡಿ ಶ್ರೀರಾಮನು ತನ್ನೊಡನೆ ಅರಣ್ಯಕ್ಕೆ ಬರಲು ಒಪ್ಪಿಗೆಯನ್ನಿತ್ತುದು : ಮಾತಾ-ಪಿತೃಗಳ ಮತ್ತು ಗುರುಜನರ ಸೇವೆಯ ಮಹತ್ತ್ವವನ್ನು ಹೇಳಿದುದು : ಅರಣ್ಯಪ್ರಯಾಣಕ್ಕೆ ಪೂರ್ವಭಾವಿಯಾಗಿ ತನ್ನಲ್ಲಿರುವ ವಸ್ತುಗಳೆಲ್ಲವನ್ನೂ ದಾನಮಾಡಿಬಿಡುವಂತೆ ಶ್ರೀರಾಮನು ಸೀತಾದೇವಿಗೆ ಹೇಳಿದುದು

ಸಾನ್ತ್ವ್ಯಮಾನಾ ತು ರಾಮೇಣ ಮೈಥಿಲೀ ಜನಕಾತ್ಮಜಾ ।
ವನವಾಸನಿಮಿತ್ತಾರ್ಥಂ ಭರ್ತಾರಮಿದಮಬ್ರವೀತ್ ॥೧॥

ಜನಕನ ಮಗಳಾದ ಸೀತೆಯನ್ನು ಶ್ರೀರಾಮನು ಬಹಳವಾಗಿ ಸಂತೈಸಿದರೂ ಅರಣ್ಯಕ್ಕೆ ಹೋಗಲೇಬೇಕೆನ್ನುವ ದೃಢತೆಯಿಂದ ಪುನಃ ಸೀತೆಯು ರಾಮನನ್ನು ಒತ್ತಾಯಪಡಿಸಿದಳು. ಪತಿಯು ತನ್ನ ಪ್ರಾರ್ಥನೆಯನ್ನು

ಅಂಗೀಕರಿಸಲಿಲ್ಲವೆಂಬ ಕೋಪದಿಂದ ಅಥವಾ ತನ್ನನ್ನು ಬಿಟ್ಟು ಕಾಡಿಗೆ ಹೋಗುವನೆಂಬ ಭಯದಿಂದ ಬಹಳವಾಗಿ ಕಂಪಿಸುತ್ತಿದ್ದ ಸೀತಾದೇವಿಯು ವಿಶಾಲಹೃದಯನಾದ ಶ್ರೀರಾಮನನ್ನು ಪ್ರಣಯಕೋಪದಿಂದಲೂ ಮತ್ತು ವೀರಪತ್ನಿಯೆಂಬ ಅಭಿಮಾನದಿಂದಲೂ ನಿಂದಿಸಲು ತೊಡಗಿದಳು.

ಕಿಂ ತ್ವಾಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ ।
ರಾಮ ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಮ್ ॥೩॥

"ನನ್ನ ತಂದೆಯಾದ ಜನಕನು ಗಂಡಸಿನ ರೂಪದಲ್ಲಿರುವ ಹೆಣ್ಣಾಗಿರುವ ನಿನ್ನನ್ನು ಅಳಿಯನನ್ನಾಗಿ ಮಾಡಿಕೊಂಡನೆಂದು ಭಾವಿಸುವುದಿಲ್ಲವೇನು?*

ಅನೃತಂ ಬತ ಲೋಕೋಽಯಮಜ್ಞಾನಾದ್ಯದ್ಧಿ ವಕ್ಷ್ಯತಿ ।
ತೇಜೋ ನಾಸ್ತಿ ಪರಂ ರಾಮೇ ತಪತೀವ ದಿವಾಕರೇ ॥೪॥

'ರಾಮೇ ಇವ ತಪತಿ ದಿವಾಕರೇ ಪರಂ ತೇಜಃ ನಾಸ್ತಿ'– 'ಶ್ರೀರಾಮನಲ್ಲಿರುವಂತೆ ಉರಿಯುತ್ತಿರುವ ಸೂರ್ಯನಲ್ಲಿ ಕೂಡ ಶ್ರೇಷ್ಠವಾದ ತೇಜಸ್ಸಿರುವುದಿಲ್ಲ'–ಎಂದು ಜನಗಳಾಡಿಕೊಳ್ಳುತ್ತಿರುವುದು ಶುದ್ಧಸುಳ್ಳು. ಅಜ್ಞಾನದಿಂದಲೇ ಜನರು ಹೀಗೆ ಹೇಳುತ್ತಿದ್ದಾರೆ. ವಸ್ತುಸ್ಥಿತಿಯೆಂದರೆ : **'ತಪತಿ ದಿವಾಕರೇ ಇವ ರಾಮೇ ಪರಂ ತೇಜಃ ನಾಸ್ತಿ'**–'ಉರಿಯುತ್ತಿರುವ ಸೂರ್ಯನಲ್ಲಿರುವ ಶ್ರೇಷ್ಠವಾದ ತೇಜಸ್ಸು ರಾಮನಲ್ಲಿರುವುದಿಲ್ಲ.'

ರಾಮಭದ್ರ! ಮನಸ್ಸಿನಲ್ಲಿ ಏನನ್ನು ಕಲ್ಪಿಸಿಕೊಂಡು ವಿಷಣ್ಣನಾಗಿರುವೆ? ನಿನಗೆ ಭಯವೆಲ್ಲಿಯದು? ಅನನ್ಯಶರಣಳಾದ, ಪತಿಪರಾಯಣೆಯಾದ ನನ್ನನ್ನು ಯಾವ ಕಾರಣದಿಂದ ಇಲ್ಲಿಯೇ ಬಿಟ್ಟುಹೋಗಬೇಕೆಂದು

---

* **ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।** ಜನಕಾದಿಗಳು ಯಜ್ಞ-ಯಾಗಾದಿ ಕರ್ಮಗಳನ್ನು ಮಾಡಿ ಸಿದ್ಧಿಯನ್ನು ಪಡೆದರು– ಎಂಬ ವಚನದಂತೆ ಜನಕನು ಕರ್ಮಠನಾಗಿದ್ದನು. ಕರ್ಮಠನಾದವನು ಪತ್ನಿಯಿಂದ ಪ್ರತ್ಯೇಕವಾಗಿರುವ ಸಾಧ್ಯತೆಯೇ ಇಲ್ಲ. ಪ್ರತಿಯೊಂದು ಕರ್ಮವನ್ನೂ ಪತ್ನಿಯೊಡನೆಯೇ ಮಾಡಬೇಕು. ಆದುದರಿಂದ ಜನಕನಿಗೆ ಪತ್ನಿಯಿಂದ ಪ್ರತ್ಯೇಕವಾಗಿರುವ ವಿಷಯವೇ ತಿಳಿಯದು. ಅರಣ್ಯದಲ್ಲಿಯೇ ಇರಲಿ, ಅರಮನೆಯಲ್ಲಿಯೇ ಇರಲಿ ಸಪತ್ನೀಕನಾಗಿರುವುದು ಜನಕನ ಸ್ವಭಾವವಾಗಿದ್ದಿತು. ಅಂತಹ ಜನಕಮಹಾರಾಜನು ತನ್ನಳಿಯನು ಪತ್ನಿಯನ್ನು ಬಿಟ್ಟು ತಾನೊಬ್ಬನೇ ಕಾಡಿಗೆ ಹೋಗಿದ್ದಾನೆಂದು ತಿಳಿದರೆ–'ಪತ್ನಿಯನ್ನು ಕಾಪಾಡ

ಬಯಸಿರುವೆ? ವೀರನೇ! ದ್ಯುಮತ್ಸೇನನ ಮಗನಾದ ಸತ್ಯವಂತನನ್ನು ಅನುಸರಿಸಿ ಯಮಾಲಯಕ್ಕೂ ಹೋದ ಸಾವಿತ್ರಿಯಂತೆಯೇ ನಾನು ನಿನ್ನ ವಶವರ್ತಿನಿಯೆಂದು ತಿಳಿ.*

ಕುಲಕಳಂಕಿನಿಯಾದವಳೊಬ್ಬಳು ಯಾವ ರೀತಿಯಲ್ಲಿ ಪತಿಯು ಜೀವಿಸಿರುವಾಗಲೇ ಉಪಪತಿಯನ್ನು ಹುಡುಕಿಕೊಂಡು ಹೊರಡುವಳೋ– ಆ ರೀತಿಯಲ್ಲಿ ನಾನಿಲ್ಲ. ನಾನು ನಿನ್ನನ್ನು ಬಿಟ್ಟು ಮನಸ್ಸಿನಿಂದಲೂ ಮತ್ತೊಬ್ಬ ನನ್ನು ಸ್ಮರಿಸಿಲ್ಲ. ಆದುದರಿಂದ ನಿನ್ನೊಡನೆ ನಾನೂ ಅರಣ್ಯಕ್ಕೆ ಬರುತ್ತೇನೆ.

ಸ್ವಯಂ ತು ಭಾರ್ಯಾಂ ಕೌಮಾರೀಂ ಚಿರಮಧ್ಯುಷಿತಾಂ ಸತೀಮ್ ।
ಶೈಲೂಷ ಇವ ಮಾಂ ರಾಮ ಪರೇಭ್ಯೋ ದಾತುಮಿಚ್ಛಸಿ ॥೮॥

ನಾನು ನಿನ್ನಿಂದ ಭರಿಸಲ್ಪಡಬೇಕಾದ ಭಾರ್ಯೆ. ಹಿಂದೆ ಬೇರೆ ಯಾರನ್ನೂ ಮದುವೆಯಾಗದೇ ನನ್ನನ್ನೇ ಮದುವೆಯಾದ ನಿನಗೆ ಪತ್ನಿಯಾಗಿ ರುವ ಕುಮಾರಿ. ಬಹಳ ಕಾಲದಿಂದಲೂ ನಿನ್ನೊಡನೆ ಸಂಸಾರಮಾಡಿದ ಸತಿಯೂ ಆಗಿದ್ದೇನೆ. ಇಂತಹ ನನ್ನನ್ನು ಹೆಂಡತಿಯಿಂದ ಜೀವನ ನಡೆಸುವ ನಟನಂತೆ–ಇತರರಿಗೆ ಒಪ್ಪಿಸಲು ಬಯಸಿರುವೆಯಾ?

ಯಸ್ಯ ಪಥ್ಯಂ ಚ ರಾಮಾತ್ಥ ಯಸ್ಯ ಚಾರ್ಥೇಽವರುಧ್ಯಸೇ ।
ತ್ವಂ ತಸ್ಯ ಭವ ವಶ್ಯಶ್ಚ ವಿಧೇಯಶ್ಚ ಸದಾನಘ ॥೯॥

ರಾಮಭದ್ರ! ಯಾವನಿಗೆ ಹಿತವನ್ನು ಈಗ ನೀನು ಬಯಸಿದೆಯೋ ಮತ್ತು ಯಾವನ ಪ್ರಯೋಜನಕ್ಕಾಗಿ ನೀನು ಯೌವರಾಜ್ಯಪದವಿಯ ಪ್ರಾಪ್ತಿಯಿಂದ ವಂಚಿತನಾದೆಯೋ–ಅಂತಹವನಿಗೆ ಬೇಕಾದರೆ ನೀನು ದಾಸ

ಲಾರದ ಇವನೆಂತಹ ಗಂಡಸು? ಇವನ ಹೊರರೂಪವನ್ನು ನೋಡಿ ಪುರುಷನೆಂಬ ಭ್ರಾಂತಿಹೊಂದಿದೆನಲ್ಲಾ! ಪುರುಷನಾಗಿದ್ದಿದ್ದರೆ ಹೆಂಡತಿಯನ್ನೆಂದಿಗೂ ಬಿಟ್ಟು ಏಕಾಕಿಯಾಗಿ ಹೋಗುತ್ತಿರಲಿಲ್ಲ. ಹೆಂಗಸಾದ್ದರಿಂದಲೇ ಇವನು ಪತ್ನಿಯನ್ನು ಬಿಟ್ಟು ಕಾಡಿಗೆ ಹೋಗಿದ್ದಾನೆ'–ಎಂದು ಭಾವಿಸುವನೆಂಬುದು ಸೀತೆಯ ಅಭಿಪ್ರಾಯವಾಗಿದೆ.

* ಪತಿಯ ಅನುಸರಣೆಯಲ್ಲಿ ಸಾವಿತ್ರಿಯು ಆದರ್ಶಸ್ತ್ರೀ. ಯಮನು ಸತ್ಯವಂತನನ್ನು ಯಮಾಲಯಕ್ಕೆ ಒಯ್ದರೂ ಅಲ್ಲಿಯೂ ಬಿಡದೇ ಸಾವಿತ್ರಿಯು ಪತಿಯನ್ನನುಸರಿಸಿ ಹೋದಳು. ಯಮನನ್ನು ಸ್ತೋತ್ರಾದಿಗಳಿಂದ ಒಲಿಸಿ ಪತಿಗೆ ದೀರ್ಘಾಯುಷ್ಯವನ್ನು ಪಡೆದು ಹಿಂದಿರುಗಿದಳು.

ನಾಗು. ವಿಧೇಯನಾಗಿರು. ನನ್ನನ್ನು ಮಾತ್ರ ಇಲ್ಲಿ ಭರತನಿಗೆ ದಾಸಿಯಾಗಿರುವಂತೆ ನಿಯೋಜಿಸಬೇಡ. ನೀನು ನನ್ನನ್ನು ಇಲ್ಲಿಯೇ ಬಿಟ್ಟು ಅರಣ್ಯಕ್ಕೆ ಹೋಗುವುದು ಯೋಗ್ಯವಲ್ಲ.

ತಪೋ ವಾ ಯದಿ ವಾರಣ್ಯಂ ಸ್ವರ್ಗೋ ವಾ ಸ್ಯಾತ್ತ್ವಯಾ ಸಹ ॥

ತಪಶ್ಚರಣೆಯಾಗಲೀ, ಅರಣ್ಯವಾಸವಾಗಲೀ, ಸ್ವರ್ಗಕ್ಕೆ ಹೋಗುವುದಾಗಲೀ–ನಿನ್ನ ಜೊತೆಯಲ್ಲೇ ಆಗಬೇಕು. ನಿನ್ನನ್ನು ಬಿಟ್ಟು ನನಗೆ ಯಾವುದೂ ಬೇಡ.

ನಿನ್ನನ್ನನುಸರಿಸಿ ಉದ್ಯಾನವನಗಳಲ್ಲಿ ಸಂಚಾರಮಾಡುವಾಗ ಮತ್ತು ನಿನ್ನೊಡನೆ ಹಂಸತೂಲಿಕಾತಲ್ಪದಲ್ಲಿ ಮಲಗಿದಾಗ–ಹೇಗೆ ನನಗೆ ಶ್ರಮವಾಗುವುದಿಲ್ಲವೋ–ಹಾಗೆಯೇ ನಿನ್ನನ್ನನುಸರಿಸಿ ನಿನ್ನ ಹಿಂದೆಯೇ ಬರುವ ನನಗೆ ಅರಣ್ಯಮಾರ್ಗದಲ್ಲಿಯೂ ಶ್ರಮವಾಗಲೀ, ಆಯಾಸವಾಗಲೀ ಇರುವುದಿಲ್ಲ. ಅರಣ್ಯದಲ್ಲಿ ನಿನ್ನೊಡನಿರುವ ನನಗೆ ದರ್ಭೆ, ನೊಜೆ, ಜಂಬುಹುಲ್ಲು, ಮುಳ್ಳುಗಳಿಂದ ಕೂಡಿದ ವೃಕ್ಷಗಳು–ಇವೆಲ್ಲದರ ಸ್ಪರ್ಶಗಳು ಹತ್ತಿಯ ಮತ್ತು ಮೆದುವಾದ ಕೃಷ್ಣಾಜಿನದ ಸ್ಪರ್ಶಸುಖವನ್ನು ಕೊಡುತ್ತವೆ. ಅವುಗಳಿಂದ ನನಗೇನೂ ಬಾಧೆಯುಂಟಾಗುವುದಿಲ್ಲ. ನಿನ್ನ ಜೊತೆಯಲ್ಲಿ ಕಾಡಿನಲ್ಲಿ ನಡೆದುಹೋಗುತ್ತಿರುವಾಗ ಬಿರುಗಾಳಿಯಿಂದ ಮೇಲೆದ್ದು ನನ್ನ ಶರೀರವನ್ನು ಆವರಿಸುವ ಧೂಳಿಯನ್ನೂ ನಾನು ಅತ್ಯುತ್ಕೃಷ್ಟವಾದ ಚಂದನದ ಧೂಳಿಯೆಂದೇ ಭಾವಿಸುತ್ತೇನೆ. ನಿನ್ನೊಡನೆ ಕಾಡಿಗೆ ಬರುವ ನಾನು ಅರಣ್ಯದ ಮಧ್ಯದಲ್ಲಿರುವ ಚಿಗುರಾದ ಮತ್ತು ಹಸಿರಾದ ಹುಲ್ಲಿನ ಹಾಸಿಗೆಯಲ್ಲಿ ಮಲಗುವ ಆ ಸುಖಕ್ಕಿಂತಲೂ ಅರಮನೆಯಲ್ಲಿ ಏಕಾಕಿನಿಯಾಗಿ ಚಿತ್ರಿತವಾದ ಕಂಬಳಿಗಳಿಂದ ಕೂಡಿದ ಹಂಸತೂಲಿಕಾತಲ್ಪದ ಮೇಲೆ ಮಲಗುವುದು ಸುಖಕರವು ಹೇಗಾದೀತು?

ಪತ್ರಂ ಮೂಲಂ ಫಲಂ ಯತ್ತ್ವಮಲ್ಪಂ ವಾ ಯದಿ ವಾ ಬಹು ।
ದಾಸ್ಯಸಿ ಸ್ವಯಮಾಹೃತ್ಯ ತನ್ಮೇಽಮೃತರಸೋಪಮಮ್ ॥೧೫॥

ಕಾಡಿನಲ್ಲಿರುವಾಗ ನೀನೇ ತಂದುಕೊಡುವ ಭೋಜನಯೋಗ್ಯವಾದ ಎಲೆ, ಗೆಡ್ಡೆ-ಗೆಣಸುಗಳು ಮತ್ತು ಫಲಗಳು ಸ್ವಲ್ಪವಾಗಿಯೇ ಇರಲಿ ;

ಹೆಚ್ಚಾಗಿಯೇ ಇರಲಿ–ಅವುಗಳ ಆಸ್ವಾದನೆಯು ನನಗೆ ಅಮೃತದ ರಸವನ್ನು ಪಾನಮಾಡಿದಷ್ಟು ಸಂತೋಷದಾಯಕವಾಗುತ್ತದೆ.

ನ ಮಾತುರ್ನ ಪಿತುಸ್ತತ್ರ ಸ್ಮರಿಷ್ಯಾಮಿ ನ ವೇಶ್ಮನಃ ।
ಆರ್ತವಾನ್ಯುಪಭುಞ್ಜಾನಾ ಪುಷ್ಪಾಣಿ ಚ ಫಲಾನಿ ಚ ॥೧೬॥

ಆಯಾ ಋತುಗಳಲ್ಲಿ ಪ್ರಾಪ್ತವಾಗುವ ಪುಷ್ಪಗಳನ್ನು ಮುಡಿದು ಕೊಳ್ಳುತ್ತಾ ಫಲಗಳನ್ನು ತಿನ್ನುತ್ತಾ ನಿನ್ನೊಡನೆ ಸಂತೋಷದಿಂದ ಕಾಲ ಕಳೆಯುವ ನಾನು–ತಂದೆಯನ್ನಾಗಲೀ, ತಾಯಿಯನ್ನಾಗಲೀ, ತವರುಮನೆ ಯನ್ನಾಗಲೀ ಖಂಡಿತವಾಗಿಯೂ ಸ್ಮರಿಸುವುದಿಲ್ಲ.

ನ ಚ ತತ್ರ ಗತಃ ಕಿಂಚಿದ್ದ್ರಷ್ಟುಮರ್ಹಸಿ ವಿಪ್ರಿಯಮ್ ।
ಮತ್ಕೃತೇ ನ ಚ ತೇ ಶೋಕೋ ನ ಭವಿಷ್ಯಾಮಿ ದುರ್ಭರಾ ॥೧೭॥

ನಾನು ನಿನಗೆ ಪ್ರಿಯವಲ್ಲದ ಯಾವುದೇ ಕಾರ್ಯಮಾಡುವುದನ್ನೂ ನೀನಲ್ಲಿ ಕಾಣಲಾರೆ. ನನ್ನ ಸಲುವಾಗಿ ನೀನು ದುಃಖಪಡುವ ಕಾರಣವಿಲ್ಲ. ಅರಣ್ಯದಲ್ಲಿ ನನ್ನ ಭರಣ-ಪೋಷಣೆಗಳಿಗೆ ನಿನಗೆ ಕಷ್ಟವಾಗುವುದಿಲ್ಲ.

ಯಸ್ತ್ವಯಾ ಸಹ ಸ ಸ್ವರ್ಗೋ ನಿರಯೋ ಯಸ್ತ್ವಯಾ ವಿನಾ ।
ಇತಿ ಜಾನನ್ಪರಾಂ ಪ್ರೀತಿಂ ಗಚ್ಛ ರಾಮ ಮಯಾ ಸಹ ॥೧೮॥

ರಾಮಭದ್ರ! ನಿನ್ನೊಡನಿರುವುದೇ ನನಗೆ ಸ್ವರ್ಗ. ನಿನ್ನನ್ನು ಬಿಟ್ಟಿರು ವುದೇ ನನಗೆ ನರಕ. ನನಗೆ ಬೇರೆ ಯಾವ ಸ್ವರ್ಗ-ನರಕಗಳೂ ಇಲ್ಲ. ಈಗ ಲಾದರೂ ನಿನ್ನ ಮೇಲೆ ನನಗಿರುವ ಶ್ರೇಷ್ಠವಾದ ಪ್ರೇಮವೆಷ್ಟೆಂಬುದನ್ನು ಮನಗಂಡು ನನ್ನ ಸಂಗಡವೇ ಅರಣ್ಯಕ್ಕೆ ಪ್ರಯಾಣಮಾಡು.

ಅಥ ಮಾಮೇವಮವ್ಯಗ್ರಾಂ ವನಂ ನೈವ ನಯಿಷ್ಯಸಿ ।
ವಿಷಮದ್ಯೈವ ಪಾಸ್ಯಾಮಿ ಮಾ ವಿಶಂ ದ್ವಿಷತಾಂ ವಶಮ್ ॥೧೯॥

ವನವಾಸದ ವಿಷಯದಲ್ಲಿ ಡೋಲಾಯಮಾನವಾದ ಮನಸ್ಸಿಲ್ಲದ ಸ್ಥಿರ ಚಿತ್ತಳಾದ ನನ್ನನ್ನು ನೀನೇನಾದರೂ ನಿನ್ನ ಜೊತೆಯಲ್ಲಿ ಕಾಡಿಗೆ ಕರೆದೊಯ್ಯ ದಿದ್ದರೆ–ಈಗಲೇ ವಿಷವನ್ನು ಕುಡಿದು ಪ್ರಾಣತ್ಯಾಗಮಾಡುತ್ತೇನೆ. ಯಾವುದೇ ಕಾರಣದಿಂದಲೂ ಶತ್ರುಗಳ ವಶಳಾಗುವುದಿಲ್ಲ. ನಿನ್ನಿಂದ

ಪರಿತ್ಯಕ್ತಳಾದ ನನಗೆ ನಿರಂತರವಾದ ವಿರಹವೇದನೆಯಿಂದ ಪ್ರಾಣವಂತೂ ಉಳಿಯುವುದಿಲ್ಲ. ಕೊರಗಿ-ಕೊರಗಿ ಎಂದಾದರೊಂದು ದಿನ ಸತ್ತುಹೋಗುತ್ತೇನೆ. ಹಾಗೆ ಸಾಯುವುದಕ್ಕಿಂತಲೂ ನಿನ್ನಿಂದ ಪರಿತ್ಯಜಿಸಲ್ಪಡುವ ನನಗೆ ಈಗಲೇ (ನಿನ್ನ ಸಮ್ಮುಖದಲ್ಲಿಯೇ ವಿಷಪಾನದ ಮೂಲಕವಾಗಿ) ಮರಣವು ಒದಗುವುದೇ ಲೇಸು. ಈ ವಿರಹಶೋಕವನ್ನು ಮುಹೂರ್ತಕಾಲವೂ ಕೂಡ ಸಹಿಸಿಕೊಳ್ಳಲು ನಾನು ಸಮರ್ಥಳಾಗಿಲ್ಲ. ಹೀಗಿರುವಾಗ ಹತ್ತು ವರ್ಷಗಳು, ಅಬ್ಬಾ! ಮತ್ತೂ ಮೂರು ವರ್ಷಗಳು, ಮೇಲೂ ಒಂದು ವರ್ಷ–ವಿರಹದುಃಖದಿಂದ ಇಷ್ಟು ವರ್ಷಗಳನ್ನು ಕಳೆಯಲು ನನ್ನಿಂದ ಸಾಧ್ಯವಾಗುವುದೇ? ಖಂಡಿತವಾಗಿಯೂ ಇಲ್ಲ."

ಹೀಗೆ ಸೀತಾದೇವಿಯು ದುಃಖದಿಂದ ಪರಿತಪಿಸುತ್ತಾ ಕಲ್ಲುಮನಸ್ಸಿನವರಿಗೂ ಕರುಣೆಯುಂಟಾಗುವ ರೀತಿಯಲ್ಲಿ ಬಿಕ್ಕಿ-ಬಿಕ್ಕಿ ಅತ್ತಳು. ಅತ್ತು-ಅತ್ತು ಆಯಾಸಗೊಂಡಳು. ಪತಿಯನ್ನು ಬಿಟ್ಟಿರಲಾರದೇ ಅವನನ್ನು ಬಿಗಿಯಾಗಿ ಅಪ್ಪಿಕೊಂಡು–'ಪ್ರಾಣೇಶ್ವರ! ನನ್ನನ್ನು ಬಿಟ್ಟು ಹೋಗಬೇಡ'–ಎಂದು ಗಟ್ಟಿಯಾಗಿ ಕೂಗಿಕೊಂಡಳು. ಶ್ರೀರಾಮನು ಹೇಳಿದ ಪ್ರತಿಯೊಂದು ವಾಕ್ಯವನ್ನೂ ಸ್ಮರಿಸುವಳು. ವಿಷಲಿಪ್ತವಾದ ಬಾಣಗಳು ಹೆಣ್ಣಾನೆಯನ್ನು ಸಂಕಟಪಡಿಸುವಂತೆ–ಆ ಮಾತುಗಳು ಸೀತೆಯನ್ನು ಸಂಕಟಪಡಿಸುತ್ತಿದ್ದುವು. ಶ್ರೀರಾಮನ ಜೊತೆಯಲ್ಲಿದ್ದ ಅಷ್ಟು ವರ್ಷಗಳಲ್ಲಿ ಸೀತೆಯು ಒಮ್ಮೆಯಾದರೂ ರೋದನ ಮಾಡಿರಲಿಲ್ಲ ; ಮಾಡುವ ಪ್ರಸಂಗವೂ ಬಂದಿರಲಿಲ್ಲ. ಅರಣಿಯನ್ನು ಕಡೆದಾಗ ಬೆಂಕಿಯನ್ನು ಹೊರಸೂಸುವಂತೆ–ಬಹುಕಾಲದಿಂದ ಸಂಚಿತ ವಾಗಿದ್ದ ಬಿಸಿಯಾದ ಕಣ್ಣೀರನ್ನು ಸೀತೆಯು ಸುರಿಸಿದಳು. ಕಮಲಪುಷ್ಪದಿಂದ ಮಕರಂದರಸವು ಧಾರಾರೂಪವಾಗಿ ಪ್ರವಹಿಸುವಂತೆ–ಕಮಲಪುಷ್ಪಕ್ಕೆ ಸಮಾನವಾದ ಸೀತೆಯ ಕಣ್ಣುಗಳಿಂದ ವಿರಹಸಂತಾಪದಿಂದ ಹುಟ್ಟಿದ, ಸ್ಫಟಿಕಶಿಲೆಗೆ ಸಮಾನವಾದ ಸ್ವಚ್ಛವಾದ ಕಣ್ಣೀರು ಪ್ರವಹಿಸಿತು. ಮೋಡದಿಂದ ಬಿಡುಗಡೆಹೊಂದಿದ್ದ ಪೂರ್ಣಚಂದ್ರನ ಕಾಂತಿಯಂತೆ–ಅತ್ಯಂತ ಶೋಭಾಯಮಾನವಾಗಿದ್ದ ವಿಶಾಲವಾದ ಕಣ್ಣುಗಳಿಂದ ಕೂಡಿದ್ದ ಸೀತೆಯ ಮುಖಕಮಲವು ಸರೋವರದಿಂದ ಹೊರತೆಗೆದ ಕಮಲವು ಸೂರ್ಯಕಿರಣಗಳ

ಶಾಖದಿಂದ ಬಾಡಿಹೋಗುವಂತೆ–ಅನವರತವಾದ ಮತ್ತು ಬಿಸಿಯಾದ ಕಣ್ಣೀರಿನ ಸುರಿಮಳೆಯಿಂದ ಬಾಡಿಹೋಯಿತು. ಬುದ್ಧಿಗೆಟ್ಟವಳಂತೆ ದುಃಖದಿಂದ ಗಟ್ಟಿಯಾಗಿ ರೋದನಮಾಡುತ್ತಿದ್ದ ಸೀತಾದೇವಿಯನ್ನು ಶ್ರೀರಾಮನು ಎರಡು ತೋಳುಗಳಿಂದಲೂ ಗಾಢವಾಗಿ ತಬ್ಬಿಕೊಂಡು ಸಂತೈಸುತ್ತಾ ಹೇಳಿದನು :

ನ ದೇವಿ ತವ ದುಃಖೇನ ಸ್ವರ್ಗಮಪ್ಯಭಿರೋಚಯೇ ।
ನ ಹಿ ಮೇಽಸ್ತಿ ಭಯಂ ಕಿಂಚಿತ್ಸ್ವಯಂಭೋರಿವ ಸರ್ವತಃ ॥೨೭॥

“ದೇವಿ! ನೀನು ದುಃಖಪಡುತ್ತಿರುವಾಗ ಸ್ವರ್ಗವೂ ನನಗೆ ಇಷ್ಟವಾಗುವುದಿಲ್ಲ. ಸಕಲಪ್ರಾಣಿಗಳ ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನಿಗೆ ಯಾವ ಪ್ರಾಣಿಗಳಿಂದಲೂ ಭಯವಿಲ್ಲದಂತೆ–ನನಗೂ ಕೂಡ ಯಾವ ಪ್ರಾಣಿಯಿಂದಲೂ ಯಾವ ವಿಧವಾದ ಭಯವೂ ಇಲ್ಲ.

ಸುಂದರಮುಖಿಯೇ! ನಿನ್ನ ಹೃದ್ಗತವಾದ ಅಭಿಪ್ರಾಯವನ್ನು ತಿಳಿಯದೇ ನಿನ್ನ ರಕ್ಷಣೆಯಲ್ಲಿ ನನಗೆ ಶಕ್ತಿಯಿದ್ದರೂ ಅರಣ್ಯವಾಸವು ನಿನಗೆ ಬೇಡವೆಂದು ಅಭಿಪ್ರಾಯಪಟ್ಟೆನು. ನನ್ನೊಡನೆ ವನವಾಸಮಾಡುವ ಸಲುವಾಗಿಯೇ ಬ್ರಹ್ಮನು ನಿನ್ನನ್ನು ಸೃಷ್ಟಿಸಿದ್ದಾನೆ. ಜಿತೇಂದ್ರಿಯನಾದವನು ತನಗೆ ಲಭಿಸುವ ಕೀರ್ತಿಯನ್ನು ತ್ಯಜಿಸಲು ಸಾಧ್ಯವಾಗಲಾರದಂತೆ–ನಿನ್ನನ್ನು ಬಿಟ್ಟುಹೋಗಲು ನನಗೂ ಶಕ್ಯವಿಲ್ಲ. ಆನೆಯ ಸೊಂಡಿಲಿನಂತೆ ಪುಷ್ಟವಾದ ಊರುಪ್ರದೇಶವುಳ್ಳವಳೇ! ಹಿಂದೆ ಸತ್ಪುರುಷರಾದ ರಾಜರ್ಷಿಗಳು ಸಪತ್ನೀಕರಾಗಿಯೇ ವಾನಪ್ರಸ್ಥಾಶ್ರಮಧರ್ಮವನ್ನು ಪರಿಪಾಲಿಸುತ್ತಿದ್ದರು. ಆ ಧರ್ಮವನ್ನೇ ನಾನೂ ಈಗ ಅನುಸರಿಸಿ ನಿನ್ನನ್ನು ಕಾಡಿಗೆ ಕರೆದೊಯ್ಯುತ್ತೇನೆ. ಪತ್ನಿಯಾದ ಸುವರ್ಚಲೆಯು ಸೂರ್ಯನನ್ನು ಅನುಸರಿಸಿ ಹೋಗುವಂತೆ–ನೀನೂ ನನ್ನನ್ನನುಸರಿಸಿ ಕಾಡಿಗೆ ಬರಬಹುದು. ಜನಕನಂದಿನಿ! ನಾನು ಅರಣ್ಯಕ್ಕೆ ಹೋಗುವುದಿಲ್ಲವೆಂಬುದು ಇಲ್ಲವೇ ಇಲ್ಲ. ಅರಣ್ಯಕ್ಕೆ ಹೋಗು ವುದು ; ಬಿಡುವುದು ನನ್ನ ಇಚ್ಛೆಗೆ ಸೇರಿಲ್ಲ. ಸತ್ಯದಿಂದ ಪುಷ್ಟವಾದ ನನ್ನ ತಂದೆಯ ಮಾತು ನನ್ನನ್ನು ಅರಣ್ಯಕ್ಕೆ ಒಯ್ಯುತ್ತಿದೆ.

ಏಷ ಧರ್ಮಸ್ತು ಸುಶ್ರೋಣಿ ಪಿತುರ್ಮಾತುಶ್ಚ ವಶ್ಯತಾ ।
ಅತಶ್ಚ ತಂ ವ್ಯತಿಕ್ರಮ್ಯ ನಾಹಂ ಜೀವಿತುಮುತ್ಸಹೇ ॥೩೨॥

ಮೈಥಿಲಿ! ತಂದೆ-ತಾಯಿಗಳಿಗೆ ವಿಧೇಯನಾಗಿರುವುದೇ ಸನಾತನ ಧರ್ಮವಾಗಿದೆ. ಆದುದರಿಂದ ತಂದೆಯ ಆಜ್ಞೆಯನ್ನು ಮೀರಿ ಜೀವಿಸಿರಲು ನಾನು ಇಷ್ಟಪಡುವುದಿಲ್ಲ.

ಸ್ವಾಧೀನಂ ಸಮತಿಕ್ರಮ್ಯ ಮಾತರಂ ಪಿತರಂ ಗುರುಮ್ ।
ಅಸ್ವಾಧೀನಂ ಕಥಂ ದೈವಂ ಪ್ರಕಾರೈರಭಿರಾಧ್ಯತೇ ॥೩೩॥

ತಾಯಿ, ತಂದೆ ಮತ್ತು ಆಚಾರ್ಯರು ಪ್ರತ್ಯಕ್ಷವಾಗಿ ಕಾಣುವ ದೇವತೆಗಳು. ಇವರೆಲ್ಲರನ್ನೂ ಅತಿಕ್ರಮಿಸಿ (ಅನಾದರಿಸಿ) ನಮ್ಮ ಸ್ವಾಧೀನಕ್ಕೆ ಸಿಕ್ಕದಿರುವ (ನಮಗೆ ಪ್ರತ್ಯಕ್ಷವಾಗಿ ಕಾಣದಿರುವ) ದೇವತೆಯನ್ನು ನಾನಾಪ್ರಕಾರಗಳಿಂದ ಹೇಗೆ ತಾನೇ ಆರಾಧಿಸಲು ಸಾಧ್ಯ?

ಯತ್ರಯಂ ತತ್ರಯೋ ಲೋಕಾಃ ಪವಿತ್ರಂ ತತ್ಸಮಂ ಭುವಿ ।
ನಾನ್ಯದಸ್ತಿ ಶುಭಾಪಾಙ್ಗೇ ತೇನೇದಮಭಿರಾಧ್ಯತೇ ॥೩೪॥

ತಾಯಿ-ತಂದೆ-ಗುರುಗಳೇ ಮೂರು ಲೋಕಗಳು. ಆದುದರಿಂದ ಮಾತಾ-ಪಿತೃ-ಗುರುಗಳನ್ನು ಆರಾಧಿಸಿದರೆ ಮೂರು ಲೋಕಗಳಲ್ಲಿರುವ ಎಲ್ಲ ದೇವತೆಗಳನ್ನೂ ಆರಾಧಿಸಿದಂತಾಗುತ್ತದೆ. ತಂದೆ-ತಾಯಿಗಳ ಸೇವೆಯು ಮೂರು ಲೋಕಗಳಲ್ಲಿರುವ ದೇವತೆಗಳ ಪೂಜೆಗೆ ಸಮಾನವಾಗಿರುತ್ತದೆ. ಆ ಮೂವರ ಸೇವೆಯು ಪರಮಪವಿತ್ರವಾದುದು. ಇದಕ್ಕಿಂತಲೂ ಪವಿತ್ರ ವಾದುದು ಬೇರೊಂದಿಲ್ಲ. ಆದುದರಿಂದಲೇ ನಾನು ಮಾತಾ-ಪಿತೃ-ಗುರು ಗಳನ್ನು ಭಕ್ತಿಯಿಂದ ಆರಾಧಿಸುತ್ತೇನೆ.*

---

* ಮಾತಾ-ಪಿತೃಗಳಲ್ಲಿ ಮೂರು ಲೋಕಗಳೂ ಅಡಕವಾಗಿರುವುದೆಂಬುದಕ್ಕೆ ನಾವಿಲ್ಲಿ ಒಂದು ಕಥೆಯನ್ನು ನಿರೂಪಿಸಬಹುದು . ಷಣ್ಮುಖ ಮತ್ತು ಗಣಪತಿ ಇಬ್ಬರಿಗೂ ಒಂದು ಪಂದ್ಯವು ಬಿದ್ದಿತು. ಮೂರು ಲೋಕಗಳನ್ನೂ ಮೊದಲು ಸುತ್ತಿ ಬರುವವರು ಯಾರೋ ಅವರೇ ಶ್ರೇಷ್ಠರೆಂದು ಇಬ್ಬರೂ ಒಪ್ಪಿಕೊಂಡು ಪಂದ್ಯ ವನ್ನು ತಮ್ಮ ತಂದೆಯಾದ ಪರಮೇಶ್ವರನ ಮುಂದೆ ಆರಂಭಿಸಿದರು. ಷಣ್ಮುಖನು ನವಿಲಿನ ಮೇಲೆ ಕುಳಿತು ಒಡನೆಯೇ ಸಾವಿರಾರು ಯೋಜನಗಳನ್ನು ಬಹುವೇಗದಿಂದ ಪ್ರಯಾಣಮಾಡಿದನು. ಮೂಷಿಕವಾಹನನಾದ ಗಣಪತಿಯು ತನ್ನ ವಾಹನವನ್ನೂ ಹತ್ತದೇ ಕುಳಿತಲ್ಲಿಯೇ ಕ್ಷಣಕಾಲ ಯೋಚಿಸಿ ಬಳಿಯಲ್ಲಿಯೇ ಉಪಸ್ಥಿತರಾಗಿದ್ದ

ನ ಸತ್ಯಂ ದಾನಮಾನೌ ವಾ ನ ಯಜ್ಞಾಶ್ಚಾಪ್ತದಕ್ಷಿಣಾಃ ।
ತಥಾ ಬಲಕರಾಃ ಸೀತೇ ಯಥಾ ಸೇವಾ ಪಿತುರ್ಹಿತಾ ॥೩೫॥

ಜನಕನಂದಿನಿ! ಸತ್ಯನಿಷ್ಠೆಯಾಗಲೀ, ದಾನಮಾಡುವುದಾಗಲೀ, ಅತಿಥಿಗಳು ಮುಂತಾದವರಿಗೆ ಮರ್ಯಾದೆಮಾಡುವುದಾಗಲೀ, ಬಹು ದಕ್ಷಿಣಾಕವಾದ ಯಜ್ಞಗಳೇ ಆಗಲೀ–ತಂದೆಗೆ ಮಾಡುವ ಹಿತಕರವಾದ ಸೇವೆಯಂತೆ ಶ್ರೇಯಸ್ಸಿಗೆ ಪುಷ್ಟಿಕರಗಳಾಗುವುದಿಲ್ಲ.

ಸ್ವರ್ಗೋ ಧನಂ ವಾ ಧಾನ್ಯಂ ವಾ ವಿದ್ಯಾ ಪುತ್ರಾಃ ಸುಖಾನಿ ಚ ।
ಗುರುವೃತ್ತ್ಯನುರೋಧೇನ ನ ಕಿಂಚಿದಪಿ ದುರ್ಲಭಮ್ ॥೩೬॥

ಮಾತಾ-ಪಿತೃ-ಗುರುಗಳ ಶುಶ್ರೂಷಾನುವರ್ತನೆಯಿಂದ ಪ್ರಪಂಚದಲ್ಲಿ ಲಭ್ಯವಾಗದೇ ಇರುವುದು ಯಾವುದೂ ಇಲ್ಲ. ಸ್ವರ್ಗ, ಧನ, ಧಾನ್ಯ, ವಿದ್ಯೆ, ಪುತ್ರರು, ಸಕಲವಿಧವಾದ ಸುಖಗಳು–ಎಲ್ಲವೂ ಮಾತಾ-ಪಿತೃ-ಗುರುಗಳಿಗೆ ಅನವರತವಾಗಿ ಮಾಡುವ ಶುಶ್ರೂಷೆಯಿಂದಲೇ ಉಂಟಾಗುತ್ತವೆ.

ದೇವಗನ್ಧರ್ವಗೋಲೋಕಾನ್ಬ್ರಹ್ಮಲೋಕಾಂಸ್ತಥಾ ನರಾಃ ।
ಪ್ರಾಪ್ನುವನ್ತಿ ಮಹಾತ್ಮಾನೋ ಮಾತಾಪಿತೃಪರಾಯಣಾಃ ॥೩೭॥

ಮಾತಾ-ಪಿತೃ-ಗುರುಗಳ ಶುಶ್ರೂಷೆಯಲ್ಲಿಯೇ ನಿರತರಾದ ಮಹಾತ್ಮರು ದೇವ-ಗಂಧರ್ವಲೋಕಗಳನ್ನೂ, ಗೋಲೋಕಗಳನ್ನೂ, ಬ್ರಹ್ಮಲೋಕಗಳನ್ನೂ ಪಡೆಯುವರು.

ಸ ಮಾಂ ಪಿತಾ ಯಥಾ ಶಾಸ್ತಿ ಸತ್ಯಧರ್ಮಪಥೇ ಸ್ಥಿತಃ ।
ತಥಾ ವರ್ತಿತುಮಿಚ್ಛಾಮಿ ಸ ಹಿ ಧರ್ಮಃ ಸನಾತನಃ ॥೩೮॥

ಪಾರ್ವತೀ-ಪರಮೇಶ್ವರರನ್ನು ಮೂರು ಬಾರಿ ಪ್ರದಕ್ಷಿಣೆಮಾಡಿ ಕುಳಿತುಬಿಟ್ಟನು. ಕೆಲಹೊತ್ತಿನಲ್ಲಿಯೇ ಷಣ್ಮುಖನು ಮೂರು ಲೋಕಗಳನ್ನು ಪ್ರದಕ್ಷಿಣೆಮಾಡಿ ಆಯಾಸಗೊಂಡು ಪರಮೇಶ್ವರನ ಬಳಿಗೆ ಬಂದನು. ಅವನು ತಾನೇ ಗೆದ್ದವನೆಂದು ನಿರ್ಧಾರಮಾಡಿಕೊಂಡಿದ್ದನು. ಗಣಪತಿಯ ಮುಖದಲ್ಲಿ ತಾನೇ ಗೆದ್ದಿರುವೆನೆಂಬ ಮಂದಹಾಸವಿತ್ತು. ಯಾರು ಗೆದ್ದರೆಂಬುದನ್ನು ಸರ್ವಜ್ಞಮೂರ್ತಿಯಾದ ಪರ ಮೇಶ್ವರನನ್ನೇ ಕೇಳಿ ತೀರ್ಮಾನಿಸಬೇಕೆಂದು ಇಬ್ಬರೂ ಒಂದು ನಿರ್ಣಯಕ್ಕೆ ಬಂದು ಪರಮೇಶ್ವರನಿಗೆ ತಮ್ಮ ಬಿನ್ನಹವನ್ನು ಹೇಳಿಕೊಂಡರು. ಪರಮೇಶ್ವರನು ನಿಷ್ಪಕ್ಷ ಪಾತದಿಂದ ತೀರ್ಮಾನಕೊಟ್ಟು ತಾಯಿ-ತಂದೆಗಳಲ್ಲಿ ಮೂರು ಲೋಕಗಳೂ ಉಪ ಸ್ಥಿತವಾಗಿರುವುದೆಂದೂ ತಾಯಿ-ತಂದೆಗಳನ್ನು ಪ್ರದಕ್ಷಿಣೆಮಾಡಿದುದರಿಂದಲೇ ಮೂರು

ಸತ್ಯಧರ್ಮಮಾರ್ಗದಲ್ಲಿರುವ ತಂದೆಯು ಹೇಗೆ ಆಜ್ಞಾಪಿಸುವನೋ–ಹಾಗೆಯೇ ನಡೆದುಕೊಳ್ಳಲು ನಾನು ಇಚ್ಛಿಸುತ್ತೇನೆ. ಇದೇ ಸನಾತನ ಧರ್ಮವಾಗಿದೆ.

'ನಾನು ಅರಣ್ಯದಲ್ಲಿ ನಿನ್ನೊಡನೆ ವಾಸಮಾಡುತ್ತೇನೆ'–ಎಂದು ಹೇಳಿ ನನ್ನನ್ನು ಅನುಸರಿಸಿ ಬರಲು ನೀನು ನಿಶ್ಚಯಿಸಿದೆಯಾದ ಕಾರಣ ನಿನ್ನನ್ನು ದಂಡಕಾರಣ್ಯಕ್ಕೆ ಒಯ್ಯಕೂಡದೆಂದು ಯೋಚಿಸಿದ್ದ ನನ್ನ ಬುದ್ಧಿಯು ಶಿಥಿಲವಾಯಿತು.

ಕಳಂಕರಹಿತವಾದ ಅವಯವಗಳುಳ್ಳವಳೇ! ಮಾದಕವಾದ ಕಣ್ಣುಗಳುಳ್ಳವಳೇ! ನನ್ನನ್ನು ಬಿಟ್ಟಿರಲು ಭಯಗೊಂಡಿರುವವಳೇ! ಜನಕನಂದಿನಿ! ದೈವದಿಂದಲೇ ನೀನು ವನವಾಸಮಾಡಲು ಸೃಷ್ಟಿಸಲ್ಪಟ್ಟಿರುವೆ. ಆದುದರಿಂದ ನನ್ನನ್ನು ಅನುಸರಿಸಿ ಅರಣ್ಯಕ್ಕೆ ನೀನು ಬರಬಹುದು. ನನ್ನೊಡನೆ ಧರ್ಮವನ್ನು ಆಚರಿಸು. ಪ್ರಿಯಳೇ! ಈ ನಿನ್ನ ದೃಢನಿಶ್ಚಯವು ನಮ್ಮ ವಂಶಕ್ಕೂ ಮತ್ತು ನಿನ್ನ ವಂಶಕ್ಕೂ ಅನುಗುಣವಾಗಿದೆ. ಗಂಡನನ್ನು ಅನುಸರಿಸಿ ಹೋಗಬೇಕೆನ್ನುವ ಸ್ತ್ರೀಯರಿಗೆ ಪರಮಶೋಭಾಯಮಾನವಾದ ಪ್ರಯತ್ನದಲ್ಲಿ ಸಫಲಳಾದೆ.

ಜನಕನಂದಿನಿ! ವನವಾಸಕ್ಕೆ ಯೋಗ್ಯವಾದ ದಾನಾದಿಕರ್ಮಗಳನ್ನು ಈಗಲೇ ಆರಂಭಿಸು. ಈಗ ನನಗೆ ನೀನಿಲ್ಲದೇ ಸ್ವರ್ಗವೂ ಇಷ್ಟವಾಗುವುದಿಲ್ಲ. ಬ್ರಾಹ್ಮಣರಿಗೆ ಯಥೇಚ್ಛವಾಗಿ ರತ್ನಗಳನ್ನು ದಾನಮಾಡು. ಯಾಚನೆ ಮಾಡುತ್ತಿರುವ ಭಿಕ್ಷುಕರಿಗೆ ಭೋಜನಮಾಡಿಸು. ಎಲ್ಲವನ್ನೂ ಬೇಗ ಮುಗಿಸಬೇಕು. ಸಾವಕಾಶವಾಗಬಾರದು. ಬ್ರಾಹ್ಮಣರಿಗೆ ರತ್ನಾಭರಣಗಳನ್ನು ದಾನಮಾಡಿದನಂತರ ಉಳಿಯುವ ಆಭರಣಗಳನ್ನೂ, ಅನರ್ಘ್ಯವಾದ

ಲೋಕಗಳನ್ನೂ ಪ್ರದಕ್ಷಿಣೆಮಾಡಿದಂತೆ ಆಗುವುದೆಂದೂ, ಗಣಪತಿಯೂ ಈ ರಹಸ್ಯವನ್ನು ತಿಳಿದು ಷಣ್ಮುಖನು ಮೂರು ಲೋಕಗಳನ್ನೂ ಪ್ರದಕ್ಷಿಣೆಮಾಡಿ ಬರುವ ಮೊದಲೇ ತಮ್ಮನ್ನು ಪ್ರದಕ್ಷಿಣೆಮಾಡಿದುದರಿಂದ ಅವನೇ ಗೆದ್ದಿದ್ದಾನೆಂದು ತೀರ್ಪುಕೊಟ್ಟನು.

ಪವಿತ್ರಂ : ಪವಿಃ = ಮಹಾಭಯರೂಪಃ ಸಂಸಾರಃ ತಸ್ಮಾತ್ ತ್ರಾಯತೇ ಇತಿ ಪವಿತ್ರಂ. ಮಹಾಭಯದಿಂದ (ಭಯರೂಪಸಂಸಾರದಿಂದ) ಕಾಪಾಡುವುದಕ್ಕೆ ಪವಿತ್ರವೆಂದು ಹೆಸರು. ಪವಿರ್ವಜ್ರಂ ಮಹಾಭಯಮ್ (ಆರ್ಯೋಕ್ತಿ)

ಮತ್ತು ಶ್ರೇಷ್ಠವಾದ ವಸ್ತ್ರಗಳನ್ನೂ, ನಾವು ಆಟವಾಡಲು ಬಳಸುತ್ತಿದ್ದ ರಮಣೀಯವಾದ ಸಾಮಾನುಗಳನ್ನೂ, ವಾಹನಗಳನ್ನೂ ಮತ್ತು ಉಪಯೋಗಿಸುತ್ತಿದ್ದ ಇತರ ಎಲ್ಲ ವಸ್ತುಗಳನ್ನೂ ನಮ್ಮ ಸೇವಕರಿಗೆ ಕೊಟ್ಟುಬಿಡು."

ಕಾಡಿಗೆ ಪ್ರಯಾಣಮಾಡುವುದು ಪತಿಗೆ ಸಮ್ಮತವಾಯಿತೆಂದು ತಿಳಿದೊಡನೆಯೇ ಸೀತಾದೇವಿಯು ಹಿರಿಹಿಗ್ಗಿ ತನ್ನ ವಸ್ತ್ರಾಭರಣಗಳೆಲ್ಲವನ್ನೂ ದಾನಮಾಡಲು ಆರಂಭಿಸಿಯೇ ಬಿಟ್ಟಳು. ಪತಿಯ ಮಾತನ್ನು ಕೇಳಿ ಸೀತೆಯು ಆನಂದಭರಿತಳಾದಳು. ಅವಳ ಮನಸ್ಸಿನ ಆಸೆಯು ಪರಿಪೂರ್ಣವಾಯಿತು. ಯಶಸ್ವಿನಿಯೂ, ಮನಸ್ವಿನಿಯೂ ಆದ ಸೀತೆಯು ಧರ್ಮಾತ್ಮರಿಗೆ ಧನ-ಕನಕ-ವಸ್ತುಗಳನ್ನೂ, ರತ್ನಾಭರಣಗಳನ್ನೂ ದಾನಮಾಡಲು ಉಪಕ್ರಮಿಸಿದಳು.

೩೦ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೩೧ನೆಯ ಸರ್ಗ

ರಾಮ-ಲಕ್ಷ್ಮಣರ ಸಂವಾದ : ಶ್ರೀರಾಮನ ಆಜ್ಞೆಯಂತೆ ಲಕ್ಷ್ಮಣನು ದಿವ್ಯಾಯುಧಗಳನ್ನು ತೆಗೆದುಕೊಂಡು ಅರಣ್ಯಪ್ರಯಾಣಕ್ಕೆ ಸಿದ್ಧನಾದುದು : ಶ್ರೀರಾಮನು ಬ್ರಾಹ್ಮಣರಿಗೆ ತನ್ನ ಐಶ್ವರ್ಯವೆಲ್ಲವನ್ನೂ ದಾನಮಾಡಲು ಲಕ್ಷ್ಮಣನಿಗೆ ಹೇಳಿದುದು

ಏವಂ ಶ್ರುತ್ವಾ ತು ಸಂವಾದಂ ಲಕ್ಷ್ಮಣಃ ಪೂರ್ವಮಾಗತಃ ।
ಬಾಷ್ಪಪರ್ಯಾಕುಲಮುಖಃ ಶೋಕಂ ಸೋಢುಮಶಕ್ನುವನ್ ॥೧॥

ಸ ಭ್ರಾತುಶ್ಚರಣೌ ಗಾಢಂ ನಿಪೀಡ್ಯ ರಘುನನ್ದನಃ ।
ಸೀತಾಮುವಾಚಾತಿಯಶಾ ರಾಘವಂ ಚ ಮಹಾವ್ರತಮ್ ॥೨॥

ಕೌಸಲ್ಯೆಯ ಅಂತಃಪುರದಿಂದ ಶ್ರೀರಾಮನ ಜೊತೆಯಲ್ಲಿ ಮೊದಲೇ ಬಂದಿದ್ದ ಲಕ್ಷ್ಮಣನು, ಪತಿ-ಪತ್ನಿಯರ ಈ ಸಂವಾದಗಳೆಲ್ಲವನ್ನೂ ಕೇಳಿ ಶೋಕವನ್ನು ಸಹಿಸಿಕೊಳ್ಳಲಾರದೇ ಕಣ್ಣೀರಿನಿಂದ ತೋಯ್ದು ಮುಖವುಳ್ಳವನಾಗಿ, ಅಣ್ಣನ ಕಾಲುಗಳನ್ನು ಭದ್ರವಾಗಿ ಹಿಡಿದು ನಮಸ್ಕರಿಸಿ, ಹದಿನಾಲ್ಕು

ವರ್ಷಗಳ ವನವಾಸವೆಂಬ ಮಹಾವ್ರತವನ್ನು ಕೈಗೊಂಡಿದ್ದ ಶ್ರೀರಾಮನಿಗೂ ಮತ್ತು ಯಶಸ್ವಿನಿಯಾದ ಸೀತೆಗೂ ಕೈಮುಗಿದು ಪ್ರಾರ್ಥಿಸಿದನು :

"ಮೃಗಗಳಿಂದಲೂ, ಆನೆಗಳಿಂದಲೂ ನಿಬಿಡವಾಗಿರುವ ಅರಣ್ಯಕ್ಕೆ ಪ್ರಯಾಣಮಾಡಲು ನೀವು ನಿಶ್ಚಯಿಸಿರುವಿರಾದರೆ–ನಿಮ್ಮನ್ನನುಸರಿಸಿ ನಾನೂ ಅರಣ್ಯಕ್ಕೆ ಬರುತ್ತೇನೆ. ಧನುಸ್ಸನ್ನು ಧರಿಸಿ ನಿಮ್ಮ ಮುಂಭಾಗದಲ್ಲಿ ಯಾವಾಗಲೂ ಇರುತ್ತೇನೆ. ಪಕ್ಷಿಗಳಿಂದಲೂ, ಮೃಗಗಳ ಸಮೂಹ ಗಳಿಂದಲೂ ಎಲ್ಲೆಡೆಗಳಲ್ಲಿಯೂ ಶಬ್ದದಿಂದ ತುಂಬಿದ ರಮ್ಯವಾದ ಅರಣ್ಯ ಗಳಲ್ಲಿ ನನ್ನ ಜೊತೆಯಲ್ಲಿ (ನನ್ನನ್ನು ಬೆಂಗಾವಲಾಗಿಟ್ಟುಕೊಂಡು) ನೀವು ಸಂಚರಿಸಬಹುದು. ನೀವಿಲ್ಲದೇ ನನಗೆ ದೇವಲೋಕವನ್ನು ಜಯಿಸುವುದೂ ಬೇಕಾಗಿಲ್ಲ. (ಸ್ವರ್ಗಸುಖವೂ ಬೇಕಾಗಿಲ್ಲ.) ದೇವತ್ವವೂ ಬೇಕಾಗಿಲ್ಲ. ಲೋಕಗಳಲ್ಲಿರುವ ಐಶ್ವರ್ಯವನ್ನೂ ನಾನು ಅಪೇಕ್ಷಿಸುವುದಿಲ್ಲ. ಅನವರತವಾಗಿ ನಿಮ್ಮ ಜೊತೆಯಲ್ಲಿರುವುದೊಂದೇ ನನ್ನ ಅಪೇಕ್ಷೆಯಾಗಿದೆ."

ಅಣ್ಣನೊಡನೆ ಅರಣ್ಯಕ್ಕೆ ಹೋಗಲು ನಿಶ್ಚಯಿಸಿದ ಸೌಮಿತ್ರಿಯು ಹೀಗೆ ಹೇಳುತ್ತಿದ್ದರೂ ಶ್ರೀರಾಮನು ಯುಕ್ತಿಯುಕ್ತವಾದ ಅನೇಕ ಸಾಂತ್ವವಚನ ಗಳಿಂದ ಲಕ್ಷ್ಮಣನು ತನ್ನೊಡನೆ ಬರುವುದನ್ನು ನಿಷೇಧಿಸಿದನು. ಆದರೆ ಲಕ್ಷ್ಮಣನು ಆಧೀರನಾಗಲಿಲ್ಲ. ಪುನಃ ರಾಮನೊಡನೆ ಹೇಳಿದನು :

ಅನುಜ್ಞಾತಶ್ಚ ಭವತಾ ಪೂರ್ವಮೇವ ಯದಸ್ಮ್ಯಹಮ್ ।
ಕಿಮಿದಾನೀಂ ಪುನರಿದಂ ಕ್ರಿಯತೇ ಮೇ ನಿವಾರಣಮ್ ॥೭॥

"ಅಣ್ಣ! ನಿನ್ನೊಡನೆ ಕಾಡಿಗೆ ಬರಲು ಈ ಹಿಂದೆಯೇ ನಿನ್ನಿಂದ ಒಪ್ಪಿಗೆಯನ್ನು ಪಡೆದಿರುತ್ತೇನೆ. ಇದೇನೀಗ ನನ್ನನ್ನು ಬರಕೂಡದೆಂದು ಹೇಳುತ್ತಿರುವೆ?* ನಿನ್ನ ಜೊತೆಯಲ್ಲಿ ಕಾಡಿಗೆ ಬರಲು ಬಯಸಿರುವ ನನಗೆ ತಡೆಯನ್ನೇಕೆ ಮಾಡುತ್ತಿರುವೆ? ಇದಕ್ಕೆ ಕಾರಣವನ್ನು ತಿಳಿಯಬಯಸು

---

* ಉಪಕ್ಲೃಪ್ತಂ ಚ ಯತ್ಕಿಂಚಿದಭಿಷೇಕಾರ್ಥಮದ್ಯ ಮೇ । ಸರ್ವಂ ವಿಸರ್ಜಯ ಕ್ಷಿಪ್ರಂ ಕುರು ಕಾರ್ಯಂ ನಿರತ್ಯಯಮ್ ॥ (ಸರ್ಗ ೨೨ ಶ್ಲೋಕ ೪) ತಸ್ಮಾದಪರಿ ತಾಪಃ ಸನ್ (ಸರ್ಗ ೨೨ ಶ್ಲೋಕ ೨೬) ಈ ಎರಡು ಶ್ಲೋಕಗಳಲ್ಲಿ ರಾಮನು ನೇರ ವಾಗಿ ಲಕ್ಷ್ಮಣನನ್ನು ಕುರಿತು ಲಕ್ಷ್ಮಣನೂ ತನ್ನ ಜೊತೆಯಲ್ಲಿ ಅರಣ್ಯಕ್ಕೆ ಬರಬಹು ದೆಂಬ ಅಭಿಪ್ರಾಯವನ್ನು ಸೂಚಿಸಿದ್ದಾನೆ. ಭ್ರಾತೃಪುತ್ರಸಮೌ ಚಾಪಿ (ಸರ್ಗ ೨೬

ತ್ತೇನೆ. ಮೊದಲು ಅನುಮತಿಯನ್ನಿತ್ತು ಈಗ ಬರುವುದು ಬೇಡವೆಂದು ಹೇಳುತ್ತಿರುವುದನ್ನು ನೋಡಿದರೆ–'ನಾನೇನಾದರೂ ಅಪರಾಧಮಾಡಿರುವೆನೇ'–ಎಂಬ ಸಂಶಯವುಂಟಾಗಿದೆ."

ಬಳಿಕ ಮಹಾತೇಜಸ್ವಿಯಾದ, ಲಕ್ಷ್ಮಣಾಗ್ರಜನಾದ ಶ್ರೀರಾಮನು ಧೀರನಾದ, ತನಗಿಂತಲೂ ಮೊದಲೇ ಕಾಡಿಗೆ ಹೊರಡಲು ಸಿದ್ಧನಾಗಿ ನಿಂತು ತನ್ನನ್ನೂ ಅರಣ್ಯಕ್ಕೆ ಕರೆದುಕೊಂಡು ಹೋಗಬೇಕೆಂದು ಯಾಚಿಸುತ್ತಾ ಕೈಮುಗಿದು ನಿಂತಿದ್ದ ಲಕ್ಷ್ಮಣನಿಗೆ ಹೇಳಿದನು :

ಸ್ನಿಗ್ಧೋ ಧರ್ಮರತೋ ವೀರಃ ಸತತಂ ಸತ್ಪಥೇ ಸ್ಥಿತಃ ।
ಪ್ರಿಯಃ ಪ್ರಾಣಸಮೋ ವಶ್ಯೋ ಭ್ರಾತಾ ಚಾಪಿ ಸಖಾ ಚ ಮೇ ॥

"ಲಕ್ಷ್ಮಣ! ನನ್ನ ವಿಷಯದಲ್ಲಿ ನೀನು ಅತ್ಯಂತ ಸ್ನೇಹಯುಕ್ತನಾಗಿರುವೆ. ಧರ್ಮನಿರತನಾಗಿರುವೆ. ವೀರನಾಗಿಯೂ ಇರುವೆ. ಸರ್ವಕಾಲಗಳಲ್ಲಿಯೂ ಸತ್ಪುರುಷರಿಂದ ಅನುಸರಿಸಲ್ಪಟ್ಟಿರುವ ಧರ್ಮಮಾರ್ಗದಲ್ಲಿಯೇ ನಡೆಯುವೆ. ನನಗಂತೂ ನೀನು ಪ್ರಾಣಪ್ರಿಯನು. ಪ್ರಾಣಗಳಿಗೆ ಸಮಾನನು. ವಿಧೇಯನು. ತಮ್ಮನೂ ಸ್ನೇಹಿತನೂ ಆಗಿರುವೆ. ನಾನು ಹೇಳುವುದನ್ನು ಲಾಲಿಸು.

ಈಗ ನೀನೂ ನನ್ನೊಡನೆ ಕಾಡಿಗೆ ಬಂದುಬಿಟ್ಟರೆ–ನಮ್ಮ ತಾಯಂದಿರಾದ ಕೌಸಲ್ಯಾ-ಸುಮಿತ್ರೆಯರನ್ನು ಭರಿಸಿ ಪೋಷಿಸುವವರು ಯಾರಿದ್ದಾರೆ? ಪರ್ಜನ್ಯನು ಭೂಮಿಗೆ ಯಥೇಚ್ಛವಾಗಿ ಮಳೆಯನ್ನು ಸುರಿಸುವಂತೆ– ಪ್ರಜೆಗಳ ಇಷ್ಟಾರ್ಥಗಳೆಲ್ಲವನ್ನೂ ಯಾವ ನರಪತಿಯಾದ ದಶರಥನು ನೆರವೇರಿಸುತ್ತಿದ್ದನೋ–ಮಹಾತೇಜಸ್ವಿಯಾದ ಆ ನಮ್ಮ ರಾಜನಿಂದು ಕೈಕೇಯಿಯ ಕಾಮಪಾಶದಿಂದ ಬಂಧಿಸಲ್ಪಟ್ಟಿದ್ದಾನೆ. ಆದುದರಿಂದ ರಾಜನು ನಮ್ಮ ತಾಯಿಯರ ಯೋಗ-ಕ್ಷೇಮಗಳನ್ನು ನೋಡಿಕೊಳ್ಳುವನೆಂಬ ವಿಶ್ವಾಸ

ಶ್ಲೋಕ ೩೩) ಸೀತೆಯೊಡನೆ ಹೇಳಿದ ಈ ಶ್ಲೋಕದಲ್ಲಿ ಭರತ-ಶತ್ರುಘ್ನರ ವಿಷಯವಾಗಿ ರಾಮನು ಹೇಳಿದ್ದಾನೆಯೇ ಹೊರತು ಲಕ್ಷ್ಮಣನ ವಿಷಯವಾಗಿ ಹೇಳಲಿಲ್ಲವಾದ್ದರಿಂದ ಲಕ್ಷ್ಮಣನೂ ತನ್ನ ಜೊತೆಯಲ್ಲಿಯೇ ಅರಣ್ಯಕ್ಕೆ ಬರುತ್ತಾನೆಂಬ ಅಭಿಪ್ರಾಯವನ್ನು ರಾಮನು ಹೊಂದಿದ್ದನೆಂದು ಹೇಳಬಹುದಾಗಿದೆ. ಈ ಹಿನ್ನೆಲೆಯಲ್ಲಿಯೇ ಲಕ್ಷ್ಮಣನು ಮೇಲಿನ ಮಾತನ್ನು ಹೇಳಿರುತ್ತಾನೆ.

ವನ್ನಿಡಲು ಸಾಧ್ಯವಾಗುವುದಿಲ್ಲ. ಅಶ್ವಪತಿಯ ಮಗಳಾದ ಆ ಕೈಕೇಯಿಯಾದರೋ ಈ ರಾಜ್ಯವನ್ನು ತನ್ನ ವಶಪಡಿಸಿಕೊಂಡು ದುಃಖದಿಂದ ಪರಿತಪ್ತರಾದ ತನ್ನ ಸವತಿಯರಿಗೆ ಒಳ್ಳೆಯದನ್ನು ಖಂಡಿತವಾಗಿಯೂ ಮಾಡುವದಿಲ್ಲ. ಕೈಕೇಯಿಯಿಂದ ರಾಜ್ಯವನ್ನು ಪಡೆಯುವ ಭರತನು ಕೈಕೇಯಿಯ ನಿಯಂತ್ರಣದಲ್ಲಿಯೇ ಇರುವವನಾದುದರಿಂದ ಬಹುದುಃಖಿತರಾದ ಕೌಸಲ್ಯೆಯನ್ನಾಗಲೀ ಸುಮಿತ್ರೆಯನ್ನಾಗಲೀ ಪೋಷಿಸಲಾರನು. ಆದುದರಿಂದ ಆರ್ಯೆಯಾದ ಕೌಸಲ್ಯಾದೇವಿಯನ್ನು ರಾಜನ ಅನುಮತಿಯನ್ನು ಪಡೆದಾಗಲೀ–ನೀನೇ ಮಾಡಿದ ಸಂಪಾದನೆಯಿಂದಾಗಲೀ ಭರಿಸಿ ಪೋಷಿಸು. ನಾನು ಹೇಳಿದ ಈ ಮಾತುಗಳ ಗೂಢಾರ್ಥವನ್ನು ಗ್ರಹಿಸಿ ಅದರಂತೆ ಕಾರ್ಯ ಮಾಡು. ಧರ್ಮಜ್ಞನೇ! ನಾನು ಹೇಳಿದಂತೆ ನೀನು ಮಾಡುವುದರಿಂದ ನನ್ನ ಮೇಲೆ ನೀನಿಟ್ಟಿರುವ ಭಕ್ತಿಯು ಚೆನ್ನಾಗಿ ಬೆಳಕಿಗೆ ಬರುತ್ತದೆ. ಮಾತಾ-ಪಿತೃ-ಗುರುಗಳ ಪೂಜೆಮಾಡುವುದರಿಂದ (ಶುಶ್ರೂಷೆಮಾಡುವುದರಿಂದ) ಎಣೆಯಿಲ್ಲದ ಮತ್ತು ಮಹತ್ತರವಾದ ಪುಣ್ಯವೂ ಲಭಿಸುತ್ತದೆ. ಸೌಮಿತ್ರೇ! ನನಗಾಗಿ ನೀನು ಇಲ್ಲಿಯೇ ಇದ್ದು ಗುರುಜನರ ಶುಶ್ರೂಷೆ ಯನ್ನು ಮಾಡಿಕೊಂಡಿರು. ನೀನು ಹಾಗೆ ಮಾಡದಿದ್ದರೆ ನಮ್ಮನ್ನಗಲಿದ ನಮ್ಮ ತಾಯಿಯರಿಗೆ ಸುಖವೆಂಬುದೇ ಇರುವುದಿಲ್ಲ."

ಶ್ರೀರಾಮನು ಹೀಗೆ ಹೇಳಲು–ವಾಕ್ಯಗಳನ್ನೂ ಯುಕ್ತಿಗಳನ್ನೂ ಜೋಡಿಸಿ ಹೇಳುವುದರಲ್ಲಿ ನಿಪುಣನಾದ ಲಕ್ಷ್ಮಣನು ಯುಕ್ತಿಯುಕ್ತವಾದ ಮಾತುಗಳನ್ನಾಡುವುದರಲ್ಲಿ ಅತಿಚತುರನಾದ ಶ್ರೀರಾಮನಿಗೆ ಮೃದುವಾದ ಈ ಮಾತನ್ನು ಹೇಳಿದನು :

"ಅಣ್ಣ! ನಿನ್ನ ಪ್ರಭಾವದಿಂದಲೇ (ನಿನ್ನ ಸಂಬಂಧವಾದ ಭಯ-ಭಕ್ತಿಗಳಿಂದಲೇ) ಭರತನು ಕೌಸಲ್ಯೆಯನ್ನೂ ಮತ್ತು ಸುಮಿತ್ರೆಯನ್ನೂ ಪ್ರಯತ್ನಪೂರ್ವಕವಾಗಿ ಸತ್ಕರಿಸುತ್ತಾನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಒಂದು ವೇಳೆ ಭರತನು ಉತ್ತಮವಾದ ಈ ರಾಜ್ಯವನ್ನು ಪಡೆದು ದುರ್ಮಾರ್ಗಪ್ರವೃತ್ತನಾಗಿ ದುರ್ಬುದ್ಧಿಯಿಂದ ಗರ್ವಿಷ್ಠನಾಗಿ ನಮ್ಮ ತಾಯಂದಿರನ್ನು ರಕ್ಷಿಸದೆಯೇ ಹೋದರೆ, ಅನಾದರಣೆಮಾಡಿದರೆ–ಆ ಕೂಡಲೇ ನಾನು ದುರ್ಮತಿಯಾದ, ಕ್ರೂರನಾದ ಆ ಭರತನನ್ನು ಸಂಹರಿಸಿ

ಬಿಡುತ್ತೇನೆ. ಅವನ ಬಂಧುಗಳೆಲ್ಲರೂ ಎದುರಾಗಿ ಬಂದರೂ, ಅವನ ಪಕ್ಷ ವನ್ನು ಬೆಂಬಲಿಸಿ ಮೂರು ಲೋಕಗಳೇ ಎದುರಾಗಿ ಬಂದರೂ–ಎಲ್ಲರನ್ನೂ ಕ್ಷಣಮಾತ್ರದಲ್ಲಿ ಧ್ವಂಸಮಾಡುತ್ತೇನೆ. ಅಲ್ಲದೇ ಕೌಸಲ್ಯಾದೇವಿಯು ನನ್ನಂತಹ ಸಾವಿರ ಮಂದಿಯನ್ನಾದರೂ ಭರಿಸಿ-ಪೋಷಿಸಲು ಸಮರ್ಥಳು. ಅವಳನ್ನು ಆಶ್ರಯಿಸಿ ಜೀವಿಕೆಯನ್ನು ನಡೆಸುತ್ತಿರುವ ಗ್ರಾಮಗಳೇ ಸಾವಿರಾರು ಸಂಖ್ಯೆಯಲ್ಲಿವೆ. ಹೀಗಿರುವಾಗ ಅವಳನ್ನು ಯಾರಾದರೂ ಪೋಷಿಸಬೇಕೇ? ಕೌಸಲ್ಯೆಯು ತನ್ನ ಭರಣ-ಪೋಷಣೆಗಳಲ್ಲಿಯೂ, ನನ್ನ ತಾಯಿಯಾದ ಸುಮಿತ್ರೆಯ ಭರಣ-ಪೋಷಣೆಗಳಲ್ಲಿಯೂ, ನನ್ನಂತಹ ಸಾವಿರಾರು ಮಂದಿ ಯನ್ನು ಪೋಷಿಸುವುದರಲ್ಲಿಯೂ ಸಮರ್ಥಳಾಗಿದ್ದಾಳೆ. ಆದುದರಿಂದ ನಮ್ಮ ತಾಯಿಯರ ಭರಣ-ಪೋಷಣೆಗಳ ವಿಷಯವಾಗಿ ನಾವು ಯೋಚಿಸಬೇಕಾ ಗಿಯೇ ಇಲ್ಲ. ರಾಮಭದ್ರ! ನೀನು ನನ್ನನ್ನು ಅನುಚರನನ್ನಾಗಿ (ಸೇವಕನನ್ನಾಗಿ) ಮಾಡಿಕೊ. ಹೀಗೆ ನನ್ನನ್ನು ಸೇವಕನನ್ನಾಗಿ ಪರಿಗ್ರಹಿಸುವುದು ಧರ್ಮವಿರುದ್ಧವಲ್ಲ. ನಿನ್ನ ಕೈಂಕರ್ಯದಿಂದಾಗಿ ನಾನೂ ಕೃತಾರ್ಥನಾಗುವೆನು. ನಿನಗೂ ನನ್ನಿಂದ ಸ್ವಲ್ಪವಾದರೂ ಪ್ರಯೋಜನವುಂಟು. ಗುದ್ದಲಿ ಮತ್ತು ಮಂಕರಿಗಳೊಡನೆ ಧನುರ್ಬಾಣಗಳನ್ನು ತೆಗೆದುಕೊಂಡು, ನಿನಗೆ ಹಾದಿಯನ್ನು ತೋರಿಸುತ್ತಾ ನಿನ್ನ ಮುಂದೆ ಹೋಗುತ್ತಿರುತ್ತೇನೆ. ಕಾಡಿನಲ್ಲಿರುವ ನಿನಗೆ ಅನುದಿನವೂ ಕಂದ-ಮೂಲಗಳನ್ನೂ, ಹಣ್ಣುಗಳನ್ನೂ ತಂದುಕೊಡುತ್ತೇನೆ. ಅರಣ್ಯದಲ್ಲಿ ಸುಲಭವಾಗಿ ಸಿಕ್ಕುವ, ತಪಸ್ವಿಗಳಿಗೆ ಭೋಜನಯೋಗ್ಯವಾದ ಇತರ ವಸ್ತುಗಳನ್ನೂ ತರುತ್ತೇನೆ. ನೀನು ನಿಶ್ಚಿಂತನಾಗಿ ವೈದೇಹಿಯೊಡನೆ ಪರ್ವತದ ತಪ್ಪಲುಪ್ರದೇಶಗಳಲ್ಲಿ ವಿಹರಿಸು. ನೀನು ಎಚ್ಚರಗೊಂಡಿರುವಾಗಲೂ (ಹಗಲಿನಲ್ಲಿಯೂ), ಮಲಗಿರುವಾಗಲೂ (ರಾತ್ರಿಯಲ್ಲಿಯೂ) ನಾನೇ ಎಲ್ಲ ಕಾರ್ಯಗಳನ್ನೂ ಮಾಡುತ್ತೇನೆ."

ಶ್ರೀರಾಮನು ಲಕ್ಷ್ಮಣನ ಆ ಮಾತಿನಿಂದ ಸುಪ್ರೀತನಾಗಿ ಹೇಳಿದನು :

ವ್ರಜಾಪೃಚ್ಛಸ್ವ ಸೌಮಿತ್ರೇ ಸರ್ವಮೇವ ಸುಹೃಜ್ಜನಮ್ ॥೨೮॥

"ಲಕ್ಷ್ಮಣ! ನನ್ನ ಜೊತೆಯಲ್ಲಿ ಬರಲು ನಿನಗೆ ಅನುಮತಿಯನ್ನಿತ್ತಿ ದ್ದೇನೆ. ಈಗಲೇ ಹೊರಡು. ಅರಣ್ಯಕ್ಕೆ ಪ್ರಯಾಣಮಾಡಲು ಎಲ್ಲ ಗೆಳೆಯರ

ಅನುಮತಿಯನ್ನು ಪಡೆದುಕೊಂಡು ಬಾ. ಜನಕರಾಜನು ಮಾಡಿದ ಮಹಾ ಯಜ್ಞದ ಸಮಯದಲ್ಲಿ ಸುಪ್ರೀತಿನಾದ ವರುಣನು ತಾನಾಗಿಯೇ ಬಂದು ಜನಕರಾಜನಿಗೆ ಭಯಂಕರವಾದ ಎರಡು ಧನುಸ್ಸುಗಳನ್ನೂ, ಅಭೇದ್ಯವಾದ ಎರಡು ಕವಚಗಳನ್ನೂ, ದಿವ್ಯವಾದ ಅಕ್ಷಯವಾದ ಬಾಣಗಳಿರುವ ಎರಡು ಬತ್ತಳಿಕೆಗಳನ್ನೂ, ಸೂರ್ಯನ ಕಿರಣಗಳಂತೆ ಥಳ-ಥಳಿಸುವ ಮತ್ತು ಚಿನ್ನದ ಹಿಡಿಯಿಂದ ಕೂಡಿರುವ ಎರಡು ಖಡ್ಗಗಳನ್ನೂ ಕೊಟ್ಟಿದ್ದನು. ಅವೆಲ್ಲವನ್ನೂ ಜನಕನು ನನಗೆ ವಿವಾಹಸಮಯದಲ್ಲಿ ಬಳುವಳಿಯಾಗಿ ಕೊಟ್ಟನು. ಆ ಎಲ್ಲ ಆಯುಧಗಳನ್ನೂ ನಾನು ವಿಧಿವತ್ತಾಗಿ ಪೂಜಿಸಿ ಆಚಾರ್ಯರಾದ ವಸಿಷ್ಠರ ಮನೆಯಲ್ಲಿ ಇಟ್ಟಿರುವೆನು. ಆ ಆಯುಧಗಳೆಲ್ಲವನ್ನೂ ನೀನೀಗಲೇ ತೆಗೆದುಕೊಂಡು ಬರಬೇಕು."*

ಶ್ರೀರಾಮನು ಹೇಳಿದಂತೆ ಲಕ್ಷ್ಮಣನು ಸ್ನೇಹಿತರನ್ನು ಬರಮಾಡಿ ಕೊಂಡು ಅವರಿಗೆ ತಾನು ಶ್ರೀರಾಮನೊಡನೆ ಅರಣ್ಯಕ್ಕೆ ಹೋಗುವ ವಿಷಯವನ್ನು ತಿಳಿಸಿ, ಗುರುಗಳಾದ ವಸಿಷ್ಠರ ಮನೆಗೆ ಹೋಗಿ ಅಲ್ಲಿದ್ದ ಆಯುಧಗಳೆಲ್ಲವನ್ನೂ ತೆಗೆದುಕೊಂಡು ಶ್ರೀರಾಮನ ಬಳಿಗೆ ಬಂದನು. ಅನುದಿನವೂ ರಾಜಶ್ರೇಷ್ಠರಿಂದ ಪೂಜೆಗೊಳ್ಳುತ್ತಾ ಪುಷ್ಪಮಾಲಿಕೆಗಳಿಂದ ಸಮಲಂಕೃತವಾಗಿದ್ದ ದಿವ್ಯವಾದ ಎಲ್ಲ ಆಯುಧಗಳನ್ನೂ ಲಕ್ಷ್ಮಣನು ಶ್ರೀರಾಮನಿಗೆ ತೋರಿಸಿದನು. ಹಾಗೆ ಬಂದ ಲಕ್ಷ್ಮಣನನ್ನು ನೋಡಿ ಪರಮ ಪ್ರೀತನಾದ ಜಿತೇಂದ್ರಿಯನಾದ ಶ್ರೀರಾಮನು ತಮ್ಮನಿಗೆ ಹೇಳಿದನು : "ಲಕ್ಷ್ಮಣ! ನಿನ್ನನ್ನು ನೋಡಲು ಬಯಸಿದ ವೇಳೆಗೆ ಸರಿಯಾಗಿ ನೀನು ಬಂದಿರುವೆ. ನನ್ನ ಸಕಲೈಶ್ವರ್ಯಗಳನ್ನೂ ನಿನ್ನೊಡನೆ ಬ್ರಾಹ್ಮಣರಿಗೂ-

---

* ಬಾಲಕಾಂಡದಲ್ಲಿ ಜನಕನು ಅಳಿಯನಿಗೆ ಧನುಸ್ಸುಗಳನ್ನೂ, ಖಡ್ಗಗಳನ್ನೂ ಕೊಟ್ಟ ಪ್ರಕರಣವಿಲ್ಲದಿದ್ದರೂ ಕೆಲವು ಸಂದರ್ಭಗಳಲ್ಲಿ ಕಥೆಯು ಮುಂದುವರಿದಾಗ ಹಿಂದಿನದನ್ನು ಪ್ರಸ್ತಾಪಮಾಡುವ ಸಂದರ್ಭಗಳು ಶ್ರೀಮದ್ವಾಲ್ಮೀಕಿರಾಮಾಯಣ ದಲ್ಲಿ ಕೆಲವೆಡೆಗಳಲ್ಲಿ ಬರುತ್ತವೆ. ಹೀಗೆಯೇ ಬಾಲಕಾಂಡದಲ್ಲಿ ಹೇಳದಿರುವ ಒಂದಂಶವು ಸುಂದರಕಾಂಡದಲ್ಲಿ ಅನುವಾದಮಾಡಲ್ಪಟ್ಟಿದೆ. ಮಣಿರತ್ನಮಿದಂ ದತ್ತಂ ವೈದೇಹ್ಯಾಃ ಶ್ವಶುರೇಣ ಮೇ । ವಧೂಕಾಲೇ ತಥಾ ಬದ್ಧಮಧಿಕಂ ಮೂರ್ಧ್ನಿ ಶೋಭತೇ ॥ ವಿವಾಹಕಾಲದಲ್ಲಿ ನನ್ನ ಮಾವನಿಂದ (ಜನಕರಾಜನಿಂದ) ಸೀತೆಗೆ ಕೊಡಲ್ಪಟ್ಟು ಯಾವಾಗಲೂ ತಲೆಯಲ್ಲಿ ಧರಿಸಲ್ಪಟ್ಟಿರುವ ಈ ಚೂಡಾಮಣಿಯು

ತಪಸ್ವಿಗಳಿಗೂ ದಾನಮಾಡಲು ಬಯಸಿದ್ದೇನೆ. ಗುರುಗಳಲ್ಲಿ ವಿದ್ಯಾಭ್ಯಾಸ ಕ್ಕಾಗಿ ಬಂದು ಗುರುಶುಶ್ರೂಷೆಮಾಡುತ್ತಾ ಗುರುಗಳಲ್ಲಿಯೇ ಅನನ್ಯಭಕ್ತಿ ಯುಳ್ಳವರಾಗಿರುವ ಬ್ರಾಹ್ಮಣಶ್ರೇಷ್ಠರಿಗೂ ಮತ್ತು ನನ್ನ ಅವಲಂಬನೆ ಯಿಂದಲೇ ಜೀವನವನ್ನು ನಡೆಸುತ್ತಿರುವ ಎಲ್ಲ ಭೃತ್ಯವರ್ಗದವರಿಗೂ ನನ್ನ ಅಪಾರವಾದ ಸಂಪತ್ತನ್ನು ದಾನಮಾಡಲು ಬಯಸಿದ್ದೇನೆ. ದ್ವಿಜಶ್ರೇಷ್ಠನಾದ, ವಸಿಷ್ಠರ ಮಗನಾದ, ಪೂಜ್ಯನಾದ ಸುಯಜ್ಞನನ್ನು ಒಡನೆಯೇ ಕರೆದುಕೊಂಡು ಬಾ. ಶಿಷ್ಟರಾದ ಎಲ್ಲ ಬ್ರಾಹ್ಮಣರನ್ನೂ ಸತ್ಕರಿಸಿ ಅವರೆಲ್ಲರ ಆಶೀರ್ವಾದಗಳನ್ನೂ ಪಡೆದು ನಿನ್ನೊಡನೆಯೇ ಅರಣ್ಯಕ್ಕೆ ಪ್ರಯಾಣ ಮಾಡುತ್ತೇನೆ."

ಇ೧ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ಇ೨ನೆಯ ಸರ್ಗ

ಸೀತಾಸಹಿತನಾದ ಶ್ರೀರಾಮನು ವಸಿಷ್ಠಪುತ್ರನಾದ ಸುಯಜ್ಞನನ್ನು ಕರೆಸಿ ಅವನಿಗೂ ಅವನ ಪತ್ನಿಗೂ ಬಹುಮೂಲ್ಯವಾದ ಆಭರಣಗಳನ್ನೂ, ರತ್ನಗಳನ್ನೂ, ಧನವನ್ನೂ ದಾನಮಾಡಿದುದು : ಲಕ್ಷ್ಮಣಸಹಿತನಾಗಿ ಬ್ರಾಹ್ಮಣರಿಗೂ, ಬ್ರಹ್ಮಚಾರಿಗಳಿಗೂ, ಸೇವಕರಿಗೂ, ತ್ರಿಜಟಬ್ರಾಹ್ಮಣನಿಗೂ ಮತ್ತು ಸುಹೃದರಿಗೂ ತನ್ನ ಐಶ್ವರ್ಯವೆಲ್ಲವನ್ನೂ ಹಂಚಿಕೊಟ್ಟುದು

ತತಃ ಶಾಸನಮಾಜ್ಞಾಯ ಭ್ರಾತುಃ ಪ್ರಿಯಕರಂ ಹಿತಮ್ ।
ಗತ್ವಾ ಸ ಪ್ರವಿವೇಶಾಶು ಸುಯಜ್ಞಸ್ಯ ನಿವೇಶನಮ್ ॥೧॥

ಬಳಿಕ ಲಕ್ಷ್ಮಣನು ಪ್ರಿಯಕರವೂ, ಶುಭಕರವೂ, ಹಿತಕರವೂ ಆದ

ಹೆಚ್ಚಾಗಿ ಶೋಭಿಸುತ್ತದೆ. ಅರಣ್ಯಕಾಂಡದಲ್ಲಿ ಇಲ್ಲದಿರುವ ಮತ್ತೊಂದು ವೃತ್ತಾಂತವೂ ಸುಂದರಕಾಂಡದಲ್ಲಿ ಅನುವಾದಿತವಾಗಿದೆ. **ಸ್ವಪಿತ್ರಾ ಚ ಪರಿತ್ಯಕ್ತಃ ಸುರೈಶ್ಚ ಸಮಹರ್ಷಿಭಿಃ। ತ್ರೀನ್ ಲೋಕಾನ್ಸಂಪರಿಕ್ರಮ್ಯ ತಮೇವ ಶರಣಂ ಗತಃ॥** ಇಂದ್ರಪುತ್ರನಾದ ಕಾಕಾಸುರನು ತಂದೆಯಿಂದಲೂ, ದೇವತೆಗಳಿಂದಲೂ, ಮಹರ್ಷಿ ಗಳಿಂದಲೂ ಬಿಡಲ್ಪಟ್ಟವನಾಗಿ ಮೂರು ಲೋಕಗಳನ್ನೂ ಸುತ್ತಿ ಕೊನೆಗೆ ಶ್ರೀರಾಮನನ್ನೇ ಶರಣುಹೊಂದಿದನು.

ಅಣ್ಣನ ಆಜ್ಞೆಯನ್ನು ಅಂಗೀಕರಿಸಿ ಒಡನೆಯೇ ಹೊರಟು, ಸುಯಜ್ಞನ ಮನೆಗೆ ಹೋಗಿ ಅಗ್ನಿಹೋತ್ರಶಾಲೆಯಲ್ಲಿದ್ದ ಸುಯಜ್ಞನನ್ನು ಅಭಿನಂದಿಸಿ ಹೇಳಿದನು :

"ಮಿತ್ರನೇ! ದುಷ್ಕರವಾದ ಕಾರ್ಯವನ್ನು ಮಾಡಲಿರುವ ಶ್ರೀರಾಮನ ಮನೆಗೆ ಆಗಮಿಸಿ ಅಲ್ಲಿನ ಸನ್ನಿವೇಶವನ್ನು ನೋಡು."

ಲಕ್ಷ್ಮಣನ ಮಾತನ್ನು ಕೇಳಿ ಸುಯಜ್ಞನು ಸಂಧ್ಯೋಪಾಸನೆಯನ್ನು ಬೇಗ ಮುಗಿಸಿ ರಮ್ಯವಾದ, ಸಕಲೈಶ್ವರ್ಯಗಳಿಂದಲೂ ಸಮೃದ್ಧವಾದ ಶ್ರೀರಾಮನ ಅರಮನೆಗೆ ಸೌಮಿತ್ರಿಯೊಡನೆ ಬಂದನು. ಲಕ್ಷ್ಮಣನ ಜೊತೆ ಯಲ್ಲಿ ಆಗಮಿಸಿದ, ವೇದ-ವೇದಾಂಗಪಾರಂಗತನಾದ–ಆಜ್ಯಾಹುತಿಗಳಿಂದ ಸಂಪೂಜಿತನಾಗಿ ಹೋಮಮಾಡಲ್ಪಟ್ಟ ಅಗ್ನಿಯಂತೆ–ಮಹಾತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ ಸುಯಜ್ಞನನ್ನು ಕಂಡೊಡನೆಯೇ ಶ್ರೀರಾಮನು ಸೀತಾ ಸಮೇತನಾಗಿ ಕೈಮುಗಿದುಕೊಂಡು ಅವನನ್ನು ಇದುರ್ಗೊಳ್ಳಲು ಹೋದನು. ಆದರಪೂರ್ವಕವಾಗಿ ಸುಯಜ್ಞನನ್ನು ಒಳಕ್ಕೆ ಕರೆತಂದು ಆಸನದಲ್ಲಿ ಕುಳ್ಳಿ ರಿಸಿ–ಸುವರ್ಣಮಯವಾದ ಮತ್ತು ಶ್ರೇಷ್ಠವಾದ ಭುಜಕೀರ್ತಿಗಳಿಂದಲೂ, ಶುಭಕರವಾದ ಕುಂಡಲಗಳಿಂದಲೂ, ಚಿನ್ನದ ಸೂತ್ರದಲ್ಲಿ ಪೋಣಿಸಿರುವ ಮಣಿಗಳಿಂದಲೂ, ಕೇಯೂರಗಳಿಂದಲೂ, ಕಡಗಗಳಿಂದಲೂ, ಇತರ ಹಲವು ಬಗೆಯ ರತ್ನಗಳಿಂದಲೂ ಶ್ರೀರಾಮನು ಸುಯಜ್ಞನನ್ನು ಸಂಪೂಜಿ ಸಿದನು. ಸುಯಜ್ಞನಿಗೆ ಇವೆಲ್ಲವನ್ನೂ ದಾನವಾಗಿ ಕೊಟ್ಟನಂತರ ಶ್ರೀರಾಮನು ಸೀತೆಯಿಂದ ಪ್ರಚೋದಿತನಾಗಿ ಸುಯಜ್ಞನಿಗೆ ಹೇಳಿದನು :

"ಸೌಮ್ಯನೇ! ನಿನ್ನ ಪತ್ನಿಗಾಗಿ ಸೀತೆಯ ಈ ಹೇಮಸೂತ್ರವನ್ನೂ ರತ್ನಹಾರವನ್ನೂ ಸ್ವೀಕರಿಸು. ಸೀತೆಯು ಈ ಸ್ವರ್ಣಮಯವಾದ ತನ್ನ ಒಡ್ಯಾಣವನ್ನೂ ನಿನ್ನ ಪತ್ನಿಗೆ ಕೊಡಲು ಬಯಸಿದ್ದಾಳೆ.

ಅರಣ್ಯಕ್ಕೆ ನನ್ನೊಡನೆ ಹೊರಡಲಿರುವ ಇವಳು ನಿನ್ನ ಪತ್ನಿಗಾಗಿ ಚಿತ್ರಿತವಾದ ತನ್ನ ತೋಳ್ಬಳೆಗಳನ್ನೂ ಶುಭಪ್ರದವಾದ ಕೇಯೂರಗಳನ್ನೂ ದಾನಮಾಡುತ್ತಾಳೆ. ಇವೆಲ್ಲವನ್ನೂ ನೀನು ಸ್ವೀಕರಿಸು. ಶ್ರೇಷ್ಠವಾದ ಹಾಸಿಗೆಯಿಂದ ಕೂಡಿರುವ ನಾನಾರತ್ನಗಳ ಗುಚ್ಛಗಳಿಂದ ಸಮಲಂಕೃತ

ವಾಗಿರುವ ಮಂಚವನ್ನೂ ನಿನಗೆ ದಾನವಾಗಿ ಕೊಡಲು ಬಯಸುತ್ತಿದ್ದಾಳೆ. ಶತ್ರುಂಜಯವೆಂಬ ಸುಪ್ರಸಿದ್ಧವಾದ ಆನೆಯನ್ನು ನನ್ನ ಸೋದರಮಾವನು ನನಗೆ ಪಾರಿತೋಷಿಕವಾಗಿ ಕೊಟ್ಟಿದ್ದನು. ಅದನ್ನೇ ನಾನು ನಿನಗೆ ಒಂದು ಸಾವಿರ ಆನೆಗಳೊಡನೆ (ಸುವರ್ಣನಾಣ್ಯಗಳೊಡನೆ) ದಾನಮಾಡುವೆನು." ಶ್ರೀರಾಮನಿಂದ ಹೀಗೆ ಪ್ರಾರ್ಥಿತನಾದ ಸುಯಜ್ಞನು ಅವೆಲ್ಲವನ್ನೂ ಸ್ವೀಕರಿಸಿ ಸೀತಾ-ರಾಮ-ಲಕ್ಷ್ಮಣರಿಗೆ ಶುಭಾವಹವಾದ ಆಶೀರ್ವಾದಗಳನ್ನು ಮಾಡಿದನು.

ಬಳಿಕ ಶ್ರೀರಾಮನು ಏಕಾಗ್ರಚಿತ್ತನಾದ, ಪ್ರಿಯನಾದ, ಪ್ರೀತಿಯ ಮಾತುಗಳನ್ನಾಡುವ ಸೌಮಿತ್ರಿಗೆ–ಬ್ರಹ್ಮನು ಇಂದ್ರನಿಗೆ ಅನುಶಾಸನ ಮಾಡುವಂತೆ–ಆಜ್ಞೆಮಾಡಿದನು :

"ಲಕ್ಷ್ಮಣ! ಅಗಸ್ತ್ಯರನ್ನೂ, ಕೌಶಿಕರನ್ನೂ ಆಹ್ವಾನಿಸಿ ಸತ್ಕರಿಸು. ಅವರಿಬ್ಬರೂ ಮಹಾಮಹಿಮರು ; ಬ್ರಾಹ್ಮಣಶ್ರೇಷ್ಠರು. ಸಸಿಯನ್ನು ನೀರಿನಿಂದ ಸಿಂಪಡಿಸುವಂತೆ–ಆ ಬ್ರಾಹ್ಮಣೋತ್ತಮರಿಗೆ ರತ್ನರಾಶಿಯಿಂದಲೇ ಅಭಿಷೇಕಮಾಡು.* ಮಹಾಬಾಹುವೇ! ಆ ಇಬ್ಬರು ದ್ವಿಜಶ್ರೇಷ್ಠರನ್ನೂ ಸಾವಿರಾರು ಗೋವುಗಳಿಂದಲೂ, ಲಕ್ಷ-ಲಕ್ಷ ಸುವರ್ಣನಾಣ್ಯಗಳಿಂದಲೂ, ಬೆಳ್ಳಿಯ ನಾಣ್ಯಗಳಿಂದಲೂ, ಅಮೂಲ್ಯವಾದ ಶ್ರೇಷ್ಠವಾದ ಮಣಿ ಗಳಿಂದಲೂ ತೃಪ್ತಿಪಡಿಸು.

ತೈತ್ತಿರೀಯಶಾಖಾಧ್ಯಾಯಿಗಳಿಗೆ[1] ಆಚಾರ್ಯನೂ, ವೇದ-ವೇದಾಂಗ ಪಾರಂಗತನೂ, ಪಂಡಿತನೂ, ಪ್ರತಿಗ್ರಹಕ್ಕೆ ಯೋಗ್ಯನೂ ಆಗಿರುವ ನನ್ನ

---

* ಸಸಿಗೆ ನೀರು ಹಾಕಿ ಪೋಷಿಸಿದರೆ ಒಂದಕ್ಕೆ ಸಾವಿರವಾಗಿ ಫಲನೀಡುವಂತೆ ಮಹಾಮಹಿಮರಾದ ಬ್ರಾಹ್ಮಣರಿಗೆ ಮಾಡಿದ ದಾನವು ಒಂದಕ್ಕೆ ಸಾವಿರಪಾಲು ಹೆಚ್ಚಾಗಿ ಫಲನೀಡುವುದು.

೧ ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕು ವೇದಗಳಲ್ಲಿ ಪ್ರತಿಯೊಂದು ವೇದಕ್ಕೂ ನಾನಾಶಾಖೆಗಳಿವೆ. ಯಜುರ್ವೇದದಲ್ಲಿ ಕೃಷ್ಣಯಜುರ್ವೇದ ಮತ್ತು ಶುಕ್ಲ ಯಜುರ್ವೇದಗಳೆಂಬ ಎರಡು ವಿಭಾಗಗಳಿವೆ. ಈ ಎರಡು ವಿಭಾಗಗಳಲ್ಲಿಯೂ ಒಂದೊಂದು ವಿಭಾಗಕ್ಕೂ ನಾನಾಶಾಖೆಗಳಿವೆ. ಒಟ್ಟು ಯಜುರ್ವೇದದಲ್ಲಿ ನೂರೊಂದು ಶಾಖೆಗಳಿವೆಯೆಂದು ಹೇಳುತ್ತಾರೆ. ಕೃಷ್ಣಯಜುರ್ವೇದದ ಈ ಶಾಖೆಗಳಲ್ಲಿ

ತಾಯಿಯ ಆಚಾರ್ಯನನ್ನೂ ಸತ್ಕರಿಸು. ಆ ಆಚಾರ್ಯನು ನಮ್ಮ ತಾಯಿಯಾದ ಕೌಸಲ್ಯೆಯ ಹಿತದಲ್ಲಿಯೇ ನಿರತನಾಗಿ ಅವಳಿಗೆ ಆಶೀರ್ವಾದಗಳಿಂದ ಮಂಗಳಾಶಾಸನಮಾಡುತ್ತಾ ಅವಳ ಸಮೀಪದಲ್ಲಿಯೇ ಇರುವನು. ಆ ಬ್ರಾಹ್ಮಣನಿಗೆ ಪ್ರಯಾಣಯೋಗ್ಯವಾದ ಗಾಡಿಯನ್ನೂ, ನೂರಾರು ದಾಸಿಯರನ್ನೂ, ರೇಷ್ಮೆವಸ್ತ್ರಗಳನ್ನೂ ತೃಪ್ತಿಯಾಗುವವರೆಗೂ ದಾನವಾಗಿ ಕೊಡು. ಸಚಿವಶ್ರೇಷ್ಠನಾದ ಸೂತನಾದ ಚಿತ್ರರಥನು ನಮ್ಮ ಮನೆಯಲ್ಲಿಯೇ ಬಹುಕಾಲದಿಂದಲೂ ಸೇವೆಮಾಡಿಕೊಂಡಿರುವನು. ಅವನನ್ನು ಅನರ್ಘವಾದ ಆಭರಣಗಳಿಂದಲೂ, ವಸ್ತ್ರಗಳಿಂದಲೂ, ಧನದಿಂದಲೂ, ಆಡು-ಕುರಿಗಳಿಂದಲೂ, ಸಾವಿರಾರು ಗೋವುಗಳಿಂದಲೂ ತೃಪ್ತಿಗೊಳಿಸು. ನನ್ನ ಸಹಪಾಠಿಗಳಾದ, ಕಠ-ಕಾಲಾಪಶಾಖಾಧ್ಯಾಯಿಗಳಾದ, ಪಾಲಾಶದಂಡಧಾರಿಗಳಾದ ಬ್ರಹ್ಮಚಾರಿಗಳು ಅನೇಕರಿದ್ದಾರೆ. ಅವರೆಲ್ಲರೂ ಸರ್ವದಾ ಸ್ವಾಧ್ಯಾಯದಲ್ಲಿಯೇ ನಿರತರಾಗಿದ್ದು ಬೇರಾವ ಕಾರ್ಯವನ್ನೂ ಮಾಡುವುದಿಲ್ಲ. ಅವರು ತಮ್ಮ ಉದರಂಭರಣಕ್ಕೆ ಯಾವ ಕಾರ್ಯವನ್ನೂ ಮಾಡದೇ ಸೋಮಾರಿಗಳಂತಿದ್ದು ಭೋಜನಕ್ಕಾಗಿ ಮೃಷ್ಟಾನ್ನವನ್ನೇ ಅಪೇಕ್ಷಿಸುವರಾದರೂ–'ತಪೋ ಹಿ ಸ್ವಾಧ್ಯಾಯಃ'–'ಸದಾ ಅಧ್ಯಯನಮಾಡುತ್ತಿರುವುದೇ ತಪಸ್ಸು'–ಎಂಬ ಶ್ರುತಿವಾಕ್ಯಕ್ಕೆ ಅನುಸಾರವಾಗಿ ಸರ್ವದಾ ಅಧ್ಯಯನ ನಿರತರಾಗಿರುವ ಆ ಬ್ರಹ್ಮಚಾರಿಗಳನ್ನು ಮಹಾತ್ಮರೂ ಸಮ್ಮಾನಿಸುತ್ತಾರೆ. ಅವರಿಗೆ ರತ್ನಗಳನ್ನು ತುಂಬಿದ ಎಂಭತ್ತು ಗಾಡಿಗಳನ್ನು ದಾನಮಾಡು. ಭತ್ತವನ್ನು ತುಂಬಿದ ಒಂದು ಸಾವಿರ ಬಂಡಿಗಳನ್ನೂ, ವಿಶೇಷಧಾನ್ಯಗಳನ್ನು ತುಂಬಿದ ಎರಡು ನೂರು ಬಂಡಿಗಳನ್ನೂ ದಾನಮಾಡು. (ಹೇರುತುಂಬಿದ ಬಂಡಿಗಳನ್ನು ಎಳೆಯಲು ಸಾಮರ್ಥ್ಯವಿರುವ ಒಂದು ಸಾವಿರ ಎತ್ತುಗಳನ್ನೂ, ಸಂಚಾರದ ಗಾಡಿಗಳನ್ನು ಎಳೆಯುವ ಇನ್ನೂರು ಹೋರಿಗಳನ್ನೂ ಕೊಡು.) ಹಾಲು, ಮೊಸರು ಮತ್ತು ತುಪ್ಪಗಳಿಗಾಗಿ ಒಂದು ಸಾವಿರ ಗೋವುಗಳನ್ನು ದಾನವಾಗಿ ಕೊಡು.

ತೈತ್ತಿರೀಯಶಾಖೆ ಎಂಬುದೊಂದು. ತೈತ್ತಿರೀಯಶಾಖೆಗೆ ಸಂಬಂಧಿಸಿದ ಸಂಹಿತೆ-ಬ್ರಾಹ್ಮಣ-ಆರಣ್ಯಕಗಳಿಗೆ ತೈತ್ತಿರೀಯಸಂಹಿತೆ, ತೈತ್ತಿರೀಯಬ್ರಾಹ್ಮಣ, ತೈತ್ತಿರೀಯ ಆರಣ್ಯಕಗಳೆಂದು ಹೆಸರು.

ಆ ಬ್ರಹ್ಮಚಾರಿಗಳೇ ಅಲ್ಲದೇ ಕೌಸಲ್ಯಾದೇವಿಯ ಆಶ್ರಯದಲ್ಲಿ ಇಂತಹ ಬ್ರಹ್ಮಚಾರಿಗಳ ಒಂದು ಮಹಾಸಂಘವೇ ಇರುವುದು. ಅವರೆಲ್ಲರಿಗೂ ಪ್ರತ್ಯೇಕ-ಪ್ರತ್ಯೇಕವಾಗಿ ಒಂದೊಂದು ಸಾವಿರ ಹಸುಗಳನ್ನು ದಾನವಾಗಿ ಕೊಡು. ಗೃಹಸ್ಥಬ್ರಾಹ್ಮಣರಿಗೂ ಮತ್ತು ಬ್ರಹ್ಮಚಾರಿಗಳಿಗೂ ನಾನು ಕೊಡುವ ದಕ್ಷಿಣೆಯನ್ನು ನೋಡಿ ನಮ್ಮ ತಾಯಿಯಾದ ಕೌಸಲ್ಯಾದೇವಿಯೂ ಸಂತೋಷಪಡುವ ರೀತಿಯಲ್ಲಿ ಎಲ್ಲ ಬ್ರಾಹ್ಮಣರನ್ನೂ ಸತ್ಕರಿಸಿ ಯಥೇಚ್ಛವಾಗಿ ದಾನಗಳನ್ನು ಕೊಡು."

ಶ್ರೀರಾಮನು ಹೀಗೆ ನಿರ್ದೇಶಿಸಲು—ಪುರುಷಸಿಂಹನಾದ ಲಕ್ಷ್ಮಣನು ತಾನೇ ಸಮಸ್ತವಾದ ದಾನವಸ್ತುಗಳನ್ನೂ ಸಿದ್ಧಪಡಿಸಿಕೊಂಡು ಶ್ರೀರಾಮನು ಹೇಳಿದ ರೀತಿಯಲ್ಲಿ ಧನಕ್ಕೆ ಅಧಿಪತಿಯಾದ ಕುಬೇರನಂತೆ ಧನ-ಕನಕ-ವಸ್ತು-ವಾಹನಗಳನ್ನು ಬ್ರಾಹ್ಮಣಶ್ರೇಷ್ಠರಿಗೆ ದಾನಮಾಡಿದನು. ಒಬ್ಬೊಬ್ಬ ಆಶ್ರಿತನಿಗೂ ಅಪಾರವಾದ ದ್ರವ್ಯವನ್ನು ದಾನಮಾಡಿದನಂತರ ಕಣ್ಣೀರು ಸುರಿಸುತ್ತಾ ಸುತ್ತಲೂ ನಿಂತಿದ್ದ ಆಶ್ರಿತಜನರನ್ನು ಕುರಿತು ಶ್ರೀರಾಮನು ಹೇಳಿದನು :

"ಪ್ರಿಯಬಂಧುಗಳೇ! ದುಃಖಿಸಬೇಡಿರಿ. ನಾವು ಹೊರಟುಹೋದ ನಂತರವೂ ನೀವು ನನ್ನ ಮನೆಯನ್ನಾಗಲೀ, ಲಕ್ಷ್ಮಣನ ಮನೆಯನ್ನಾಗಲೀ ಜನಶೂನ್ಯವನ್ನಾಗಿ ಮಾಡುವ ಕಾರಣವಿಲ್ಲ. ನಾವು ಪುನಃ ಅಯೋಧ್ಯೆಗೆ ಬರುವವರೆಗೂ ಪ್ರತಿಯೊಬ್ಬರೂ ಸರದಿಯ ಪ್ರಕಾರ ಈ ಮನೆಗಳಲ್ಲಿದ್ದು ಕೊಂಡು ರಕ್ಷಿಸಬೇಕು."

ಶ್ರೀರಾಮನು ದುಃಖಿತರಾಗಿದ್ದ ತನ್ನ ಆಶ್ರಿತಜನರಿಗೆ ಹೀಗೆ ಹೇಳಿ, ತನ್ನ ಸಮೀಪದಲ್ಲಿದ್ದ ಕೋಶಾಧಿಕಾರಿಗೆ ತನ್ನ ಧನವೆಲ್ಲವನ್ನೂ ತರುವಂತೆ ಆಜ್ಞಾಪಿಸಿದನು. ಶ್ರೀರಾಮನ ಆಶ್ರಿತಜನರೆಲ್ಲರೂ ಭಂಡಾರದಲ್ಲಿದ್ದ ಶ್ರೀರಾಮನ ಐಶ್ವರ್ಯವೆಲ್ಲವನ್ನೂ ತಂದು ರಾಶಿ-ರಾಶಿಯಾಗಿ ಸುರಿದರು. ನಿಶ್ಚಯವಾಗಿಯೂ ಆ ಧನದ ರಾಶಿಯು ಬಹಳ ದೊಡ್ಡದಾಗಿದ್ದಿತು. ನೋಡಲು ಆಕರ್ಷಕವಾಗಿಯೂ ಇದ್ದಿತು. ಪುರುಷವ್ಯಾಘ್ರನಾದ ಶ್ರೀರಾಮನು ಅಪಾರವಾದ ಆ ಧನವನ್ನು ಲಕ್ಷ್ಮಣನೊಡನೆ ಬ್ರಾಹ್ಮಣರಿಗೂ, ಬಾಲಕರಿಗೂ, ವೃದ್ಧರಿಗೂ, ದೀನರಿಗೂ ಯಥೇಚ್ಛವಾಗಿ ದಾನಮಾಡಿದನು.

ಅದೇ ಸಮಯದಲ್ಲಿ ಹತ್ತಿರದ ಕಾಡೊಂದರಲ್ಲಿ ಪಿಂಗಲವರ್ಣದ, ಗರ್ಗವಂಶೀಯನಾದ, ಅಗೆಯುವ ವೃತ್ತಿಯಿಂದಲೇ (ಉಂಛವೃತ್ತಿಯಿಂದಲೇ) ಜೀವಿಸುತ್ತಾ, ನಿತ್ಯವೂ ಕೊಡಲಿಯನ್ನೂ ಗುದ್ದಲಿಯನ್ನೂ–ಹಣ್ಣುಗಳನ್ನು ಕೀಳಲು ಕೊಕ್ಕೆಯಿರುವ ದಂಡವನ್ನೂ ಹಿಡಿದು ತಿರುಗಾಡುತ್ತಿದ್ದ ತ್ರಿಜಟನೆಂಬ ದಟ್ಟದರಿದ್ರನಾದ ಬ್ರಾಹ್ಮಣನಿದ್ದನು. ದಾರಿದ್ರ್ಯದಿಂದ ಪೀಡಿತಳಾಗಿದ್ದ, ತರುಣಿಯಾದ, ಆ ಮುದುಕನ ಪತ್ನಿಯು ಸಣ್ಣವಯಸ್ಸಿನ ಮಕ್ಕಳೊಡನೆ ವೃದ್ಧಪತಿಯ ಬಳಿಗೆ ಬಂದು ಹೇಳಿದಳು :

ಅಪಾಸ್ಯ ಫಾಲಂ ಕುದ್ದಾಲಂ ಕರುಷ್ವ ವಚನಂ ಮಮ ।
ರಾಮಂ ದರ್ಶಯ ಧರ್ಮಜ್ಞಂ ಯದಿ ಕಿಂಚಿದವಾಪ್ಸ್ಯಸಿ ॥೩೧॥

"ಪತಿದೇವನೇ! ನೀನು ಹಿಡಿದಿರುವ ಗುದ್ದಲಿಯನ್ನೂ, ಪಿಕಾಸಿಯನ್ನೂ ಬದಿಗಿಟ್ಟು ನಾನು ಹೇಳಿದಂತೆ ಮಾಡು. ನೀನು ಈಗಲೇ ಹೋಗಿ ಧರ್ಮಜ್ಞನಾದ ಶ್ರೀರಾಮನನ್ನು ನೋಡು. ಅವನಿಂದ ಏನಾದರೂ ನಿನಗೆ ಸಿಕ್ಕಬಹುದು."

ಪತ್ನಿಯ ಮಾತನ್ನು ಕೇಳಿ ತ್ರಿಜಟನು ಹೊದೆಯಲಾರದಷ್ಟು ಜೀರ್ಣವಾಗಿರುವ ವಸ್ತ್ರವೊಂದನ್ನು ಹೆಗಲಮೇಲೆ ಹಾಕಿಕೊಂಡು ಶ್ರೀರಾಮನ ಅರಮನೆಯ ಮಾರ್ಗವನ್ನು ಹಿಡಿದು ಹೊರಟನು. ಮಹರ್ಷಿಗಳಾದ ಭೃಗು ಮತ್ತು ಅಂಗಿರಸರ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿದ್ದ, ಜನಸಮೂಹದ ಮಧ್ಯದಲ್ಲಿ ಹೋಗುತ್ತಿದ್ದ ತ್ರಿಜಟನನ್ನು ಶ್ರೀರಾಮನ ಅರಮನೆಯ ಐದನೆಯ ಪ್ರಾಕಾರದವರೆಗೂ ಯಾರೂ ತಡೆಯಲಿಲ್ಲ. ಶ್ರೀರಾಮನನ್ನು ಸಂಧಿಸಿ ತ್ರಿಜಟನು ಹೇಳಿದನು :

"ಮಹಾಯಶೋವಂತನಾದ ರಾಜಪುತ್ರನೇ! ನಾನು ದರಿದ್ರನು. ನನಗೆ ಬಹುಮಂದಿ ಮಕ್ಕಳಿದ್ದಾರೆ. ಅರಣ್ಯದಲ್ಲಿ ಭೂಮಿಯನ್ನು ಅಗೆದು ಅಲ್ಲಿ ಸಿಕ್ಕುವ ಗೆಡ್ಡೆ-ಗೆಣಸುಗಳಿಂದ (ಉಂಛವೃತ್ತಿಯಿಂದ) ಜೀವನವನ್ನು ನಿರ್ವಹಿಸುತ್ತಿದ್ದೇನೆ. ನನ್ನ ಅವಸ್ಥೆಯನ್ನು ಗಮನಿಸು. ನನ್ನ ಮೇಲೂ ನಿನ್ನ ಕಟಾಕ್ಷವೀಕ್ಷಣವಿರಲಿ."

ತ್ರಿಜಟನ ಮಾತನ್ನು ಕೇಳಿ ಶ್ರೀರಾಮನು ಪರಿಹಾಸಪೂರ್ವಕವಾಗಿ ಹೇಳಿದನು :

"ಮಹಾಮುನಿಯೇ! ನನ್ನಲ್ಲಿರುವ ಬಹುಸಂಖ್ಯೆಯ ಗೋವುಗಳಲ್ಲಿ ಒಂದು ಸಾವಿರ ಗೋವುಗಳನ್ನೇ ನಾನು ಇನ್ನೂ ದಾನವಾಗಿ ಕೊಟ್ಟಿಲ್ಲ. ನಿನ್ನ

ಕೈಯ್ಯಲ್ಲಿರುವ ದಂಡವನ್ನು ಎಲ್ಲಿಯವರೆಗೆ ಎಸೆಯುವೆಯೋ–ಅಲ್ಲಿಯ ವರೆಗೂ ಇರುವ ಗೋವುಗಳನ್ನು ನಿನಗೆ ದಾನವಾಗಿ ಕೊಡುವೆನು."

ಶ್ರೀರಾಮನು ಹೀಗೆ ಹೇಳಿದೊಡನೆಯೇ ತ್ರಿಜಟನು ಕಕ್ಕಾಬಿಕ್ಕಿ ಯಾದನು. ಶ್ರೀರಾಮನ ಇಂಗಿತವನ್ನರಿತು ಆತನು ಉತ್ತರೀಯವನ್ನು

ಸೊಂಟಕ್ಕೆ ಬಿಗಿದು ಕೈಯ್ಯಲ್ಲಿದ್ದ ದಂಡವನ್ನು ಗರ-ಗರನೆ ನಾಲ್ಕರು ಬಾರಿ ತಿರುಗಿಸಿ ಬಲವನ್ನೆಲ್ಲಾ ಬಿಟ್ಟು ವೇಗದಿಂದ ಎಸೆದನು. ಬ್ರಾಹ್ಮಣನು ಎಸೆದ ಆ ದಂಡವು ಸರಯೂನದಿಯ ದಂಡೆಯನ್ನು ದಾಟಿ ಹಲವಾರು ಸಾವಿರ ಗೋವುಗಳಿಂದ ತುಂಬಿದ್ದ ಗೋಮಾಳದಲ್ಲಿ ಎತ್ತಿನ ಸಮೀಪದಲ್ಲಿ ಬಿದ್ದಿತು. ಒಡನೆಯೇ ಧರ್ಮಾತ್ಮನಾದ ಶ್ರೀರಾಮನು ತ್ರಿಜಟನನ್ನು ಆಲಿಂಗಿಸಿ ಸರಯೂನದಿಯ ತೀರಪ್ರದೇಶದವರೆಗಿದ್ದ ಗೋವುಗಳನ್ನು ಗೋಪಾಲಕ ರೊಡನೆ ತ್ರಿಜಟದ ಆಶ್ರಮಕ್ಕೆ ಕಳುಹಿಸಿಕೊಟ್ಟನು. ಮಹರ್ಷಿಯನ್ನು ಸವಿಮಾತುಗಳಿಂದ ಸಂತೈಸುತ್ತಾ ಶ್ರೀರಾಮನು ಹೇಳಿದನು :

ಮನ್ಯುರ್ನ ಖಲು ಕರ್ತವ್ಯಃ ಪರಿಹಾಸೋ ಹ್ಯಯಂ ಮಮ ॥೪೦॥

"ಬ್ರಾಹ್ಮಣೋತ್ತಮನೇ! ನಿನ್ನ ಶಕ್ತಿಯನ್ನು ಪರೀಕ್ಷಿಸಿದೆನೆಂದು ಕೋಪಿಸಿಕೊಳ್ಳಬೇಡ. ಕೇವಲ ವಿನೋದಕ್ಕಾಗಿ ನಾನು ಹೀಗೆ ಮಾಡಿದೆನು. ವೃದ್ಧನಾದ ನಿನ್ನಲ್ಲಿ ನಿರತಿಶಯವಾದ ಬಲವು ಎಷ್ಟಿರುವುದೆಂಬುದನ್ನು ತಿಳಿಯುವ ಕುತೂಹಲದಿಂದ ದಂಡವನ್ನು ಎಸೆಯಲು ಹೀಗೆ ಪ್ರಚೋದಿಸಿದೆನು. ನೀನು ಈ ಗೋಧನವನ್ನು ಸ್ವೀಕರಿಸಲು. ಇನ್ನೇನನ್ನಾದರೂ ನನ್ನಿಂದ ಪಡೆಯುವ ಅಪೇಕ್ಷೆಯಿದ್ದಲ್ಲಿ ಅದನ್ನೂ ತಿಳಿಸು. ಮಹರ್ಷಿಯೇ! ನಾನು ಸತ್ಯವಾಗಿ ಹೇಳುತ್ತಿದ್ದೇನೆ. ನನ್ನಲ್ಲಿರುವ ವಸ್ತುಗಳನ್ನು ಪಡೆದು ಕೊಳ್ಳುವುದರಲ್ಲಿ ನೀನು ಸಂಕೋಚಪಡಬೇಕಾಗಿಲ್ಲ. ನನ್ನ ಐಶ್ವರ್ಯವೆಲ್ಲವೂ ಬ್ರಾಹ್ಮಣರ ಸಲುವಾಗಿಯೇ ಇದೆ. ನಾನು ಸಂಪಾದಿಸಿರುವ ಈ ಐಶ್ವರ್ಯವನ್ನು ಸತ್ಪಾತ್ರರಾದ ನಿಮ್ಮಂತಹವರಲ್ಲಿ ಯಥಾಶಾಸ್ತ್ರವಾಗಿ ನಿವೇದನೆಮಾಡುವುದರಿಂದ ನನಗೆ ಅಪಾರವಾದ ಯಶಸ್ಸು ಲಭಿಸುತ್ತದೆ."

ಭಾರ್ಯಾಸಮೇತನಾದ ತ್ರಿಜಟಮಹಾಮುನಿಯು ಗೋವುಗಳ ಸಮೂಹವನ್ನು ದಾನವಾಗಿ ಪಡೆದು, ಅದರಿಂದಲೇ ಅಮಿತವಾದ ಆನಂದ ವನ್ನು ಹೊಂದಿ–ಯಶಸ್ಸು, ಬಲ, ಪ್ರೀತಿ, ಕೀರ್ತಿ ಮತ್ತು ಸುಖಗಳು ಅಭಿವೃದ್ಧಿಹೊಂದಲೆಂದು ಆಶೀರ್ವಾದಗಳನ್ನು ಮಾಡುವುದರ ಮೂಲಕ ಶ್ರೀರಾಮನ ಮಾತಿಗೆ ಉತ್ತರವನ್ನಿತ್ತನು. ಯಥಾಯೋಗ್ಯವಾಗಿ ಸಮ್ಮಾನ ವನ್ನು ಪಡೆದವರ ಶುಭೋದಯಕರವಾದ ಮಾತುಗಳಿಂದ ಪ್ರಚೋದಿತನಾದ

ಶ್ರೀರಾಮನು ತುಂಬಿದ ಮನಸ್ಸಿನಿಂದ, ಧರ್ಮದಿಂದಲೂ ಪರಾಕ್ರಮದಿಂದಲೂ ಸಂಪಾದಿಸಲ್ಪಟ್ಟಿದ್ದ ಮಹಾಧನರಾಶಿಯನ್ನು ಸಜ್ಜನರಿಗೆ ಯಥೇಚ್ಛವಾಗಿ ದಾನಮಾಡಿದನು. ಆ ಸಮಯದಲ್ಲಿ ಅಲ್ಲಿ ನೆರೆದಿದ್ದ ಬ್ರಾಹ್ಮಣರಲ್ಲಿಯೇ ಆಗಲೀ, ಸುಹೃದಯರಲ್ಲಿಯೇ ಆಗಲೀ, ದರಿದ್ರರಲ್ಲಿಯೇ ಆಗಲೀ, ಭಿಕ್ಷುಕರಲ್ಲಿಯೇ ಆಗಲೀ–ಯಥಾಯೋಗ್ಯವಾದ ಸಮ್ಮಾನ, ದಾನ ಮತ್ತು ಸತ್ಕಾರ-ಸಂಭ್ರಮಗಳಿಂದ ತೃಪ್ತಿಯನ್ನು ಪಡೆಯುವವನು ಯಾವೊಬ್ಬನೂ ಇರಲಿಲ್ಲ. ಶ್ರೀರಾಮನು ಸಕಲರನ್ನೂ ಗೌರವಿಸಿ ಸತ್ಕರಿಸಿ ಯಥಾಯೋಗ್ಯವಾಗಿ ಬಹುಮಾನಗಳನ್ನೂ, ದಾನಗಳನ್ನೂ ಕೊಟ್ಟನು.

೩೨ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೩೩ನೆಯ ಸರ್ಗ

ಸೀತಾ-ರಾಮ-ಲಕ್ಷ್ಮಣರು ಶೋಕಾಕುಲರಾದ ನಗರವಾಸಿಗಳ ನಾನಾಪ್ರಕಾರವಾದ ಸಂಭಾಷಣೆಗಳನ್ನು ಕೇಳುತ್ತಾ ದಶರಥನನ್ನು ನೋಡಲು ಕೈಕೇಯಿಯ ಅಂತಃಪುರಕ್ಕೆ ಹೋದುದು

ದತ್ವಾ ತು ಸಹ ವೈದೇಹ್ಯಾ ಬ್ರಾಹ್ಮಣೇಭ್ಯೋ ಧನಂ ಬಹು ।
ಜಗ್ಮತುಃ ಪಿತರಂ ದ್ರಷ್ಟುಂ ಸೀತಯಾ ಸಹ ರಾಘವೌ ॥೧॥

ರಾಮ-ಲಕ್ಷ್ಮಣರು ಸೀತೆಯೊಡನೆ ಬ್ರಾಹ್ಮಣರಿಗೆ ಅಪಾರವಾದ ಧನವನ್ನು ದಾನಮಾಡಿದನಂತರ ತಂದೆಯನ್ನು ನೋಡಲು ಸೀತೆಯೊಡನೆ ದಶರಥನ ಅರಮನೆಗೆ ಹೊರಟರು.

ಕಣ್ಣುಗಳನ್ನು ಕೋರೈಸುವ ಕಾಂತಿಯಿಂದ ಕೂಡಿದ್ದ, ರಾಮ- ಲಕ್ಷ್ಮಣರು ಧರಿಸಿದ್ದ ಆಯುಧಗಳು–ಸೀತಾದೇವಿಯಿಂದ ಪೂಜಿಸಲ್ಪಟ್ಟು ಹೂಮಾಲೆಗಳಿಂದ ಅಲಂಕರಿಸಲ್ಪಟ್ಟು ಕಂಗೊಳಿಸುತ್ತಿದ್ದುವು. ಸೀತಾ-ರಾಮ-ಲಕ್ಷ್ಮಣರು ರಾಜಮಾರ್ಗದಲ್ಲಿ ದಶರಥನ ಅರಮನೆಗೆ ಅಭಿಮುಖವಾಗಿ ನಡೆದುಹೋಗುತ್ತಿದ್ದಾಗ ಅಯೋಧ್ಯಾಪಟ್ಟಣದ ಶ್ರೀಮಂತರಾದ ಜನರು ಧನಿಕರ ಮನೆಗಳನ್ನೂ, ದೇವಮಂದಿರಗಳನ್ನೂ, ಏಳು ಅಂತಸ್ತಿನ ಉಪ್ಪರಿಗೆಯ ಮನೆಗಳನ್ನೂ ಹತ್ತಿ ವಿಷಣ್ಣವದನರಾಗಿ ಅವರನ್ನು ನೋಡುತ್ತಿದ್ದರು. ಅವರು ಹೋಗುತ್ತಿದ್ದ ದಾರಿಯು ಜನನಿಬಿಡವಾಗಿದ್ದುದರಿಂದ ಶೀಘ್ರವಾಗಿ

ನಡೆದುಹೋಗುವ ಸಾಧ್ಯತೆಯೂ ಇರಲಿಲ್ಲ. ಆದುದರಿಂದಲೇ ದೈನ್ಯದಿಂದ ಕೂಡಿದ್ದ ಜನರೆಲ್ಲರೂ ಪ್ರಾಸಾದಗಳನ್ನು ಹತ್ತಿ ಶ್ರೀರಾಮನನ್ನು ನೋಡುತ್ತಿದ್ದರು. ತಮ್ಮನೊಡನೆಯೂ ಭಾರ್ಯೆಯೊಡನೆಯೂ ಶ್ರೀರಾಮನು ದಶರಥನ ಅರಮನೆಗೆ ಕಾಲ್ನಡಿಗೆಯಲ್ಲಿಯೇ ಹೋಗುತ್ತಿರುವುದನ್ನು ಕಂಡು ಶೋಕದಿಂದ ಕುಗ್ಗಿಹೋದ, ಉದಾಸೀನವಾದ ಮನಸ್ಸುಳ್ಳ ಜನರು ತಮ್ಮ-ತಮ್ಮಲ್ಲಿಯೇ ನಾನಾವಿಧವಾದ ಮಾತನಾಡಿಕೊಳ್ಳುತ್ತಿದ್ದರು.

"ಹಿಂದೆ ರಾಜಮಾರ್ಗದಲ್ಲಿ ರಥಾರೂಢನಾಗಿ ಹೋಗುತ್ತಿದ್ದ ಯಾವ ಶ್ರೀರಾಮನನ್ನು ದೊಡ್ಡದಾದ ಚತುರಂಗಬಲವು ಅನುಸರಿಸಿ ಹೋಗುತ್ತಿದ್ದಿತೋ–ಅಂತಹ ಸೀತಾಸಮೇತನಾದ ಏಕಾಕಿಯಾದ ರಾಮನನ್ನಿಂದು ಲಕ್ಷ್ಮಣನು ಮಾತ್ರವೇ ಅನುಸರಿಸಿ ಹೋಗುತ್ತಿದ್ದಾನೆ.

ಶ್ರೀರಾಮನು ಅಧಿಕಾರ-ಐಶ್ವರ್ಯಗಳ ಸಾರವನ್ನು ಚೆನ್ನಾಗಿ ಅನುಭವಿಸಿದ್ದನು. ಕೇಳಿದವರ ಇಷ್ಟಾರ್ಥಗಳನ್ನು ನೆರವೇರಿಸಿಕೊಡುತ್ತಿದ್ದನು. ಆದರೂ ಪಿತೃಶುಶ್ರೂಷಾಧರ್ಮವನ್ನು ಗೌರವಿಸುವ ಕಾರಣದಿಂದ ತಂದೆಯಾಡಿದ ಮಾತನ್ನು ಸುಳ್ಳುಮಾಡಲು ಇಚ್ಛಿಸಲಿಲ್ಲ. ಯಾವಳು ಈ ಹಿಂದೆ ಭೂಮಿಯಲ್ಲಿರುವ ಪ್ರಾಣಿಗಳಿಂದಾಗಲೀ–ಆಕಾಶಗಾಮಿಗಳಾದ ವಿದ್ಯಾಧರರಿಂದಾಗಲೀ ನೋಡಲು ಅಶಕ್ಯಳಾಗಿದ್ದಳೋ, ಅನವರತವೂ ಅಂತಃಪುರದಲ್ಲಿಯೇ ಸುಖವಾಗಿರುತ್ತಿದ್ದಳೋ, ಯಾರ ಕಣ್ಣಿಗೂ ಬೀಳುತ್ತಿರಲಿಲ್ಲವೋ–ಅಂತಹ ಸೀತೆಯನ್ನಿಂದು ರಾಜಮಾರ್ಗದಲ್ಲಿರುವ ಸಕಲಪ್ರಜೆಗಳೂ ನೋಡುತ್ತಿದ್ದಾರೆ. ಸುವಾಸನೆಯ ಪುಡಿಯನ್ನು ಹಚ್ಚಿಕೊಳ್ಳಲು ಮತ್ತು ಕಸ್ತೂರೀ-ಚಂದನಾದಿಗಳ ಅನುಲೇಪನಕ್ಕೆ ಯೋಗ್ಯಳಾದ ಸೀತಾದೇವಿಯ ಮುಖವನ್ನು ಮಳೆ-ಚಳಿ-ಬಿಸಿಲುಗಳು ಬಹಳ ಬೇಗ ಕುಂದಿಸುತ್ತವೆ. ನಿಶ್ಚಯವಾಗಿಯೂ ಈಗ ದಶರಥನು ಭೂತಹಿಡಿದವನಂತೆ ಮಾತನ್ನಾಡುತ್ತಿದ್ದಾನೆ. ಹಾಗಿಲ್ಲದಿದ್ದರೆ ಪ್ರಿಯಪುತ್ರನಾದ ಶ್ರೀರಾಮನನ್ನು ಎಂದಿಗೂ ಕಾಡಿಗೆ ಕಳುಹಿಸುತ್ತಿರಲಿಲ್ಲ.

ನಿರ್ಗುಣಸ್ಯಾಪಿ ಪುತ್ರಸ್ಯ ಕಥಂ ಸ್ಯಾದ್ವಿಪ್ರವಾಸನಮ್ ।
ಕಿಂ ಪುನರ್ಯಸ್ಯ ಲೋಕೋಽಯಂ ಜಿತೋ ವೃತ್ತೇನ ಕೇವಲಮ್ ॥

ಮಗನು ಗುಣಶಾಲಿಯಾಗಿರದೇ ಇದ್ದರೂ ತಂದೆಯಾದವನು ಮಗನನ್ನು ಹೇಗೆತಾನೇ ಅರಣ್ಯಕ್ಕೆ ಕಳುಹಿಸಿಯಾನು? ಹೀಗಿರುವಾಗ ಯಾವನು ತನ್ನ ಸದ್ವೃತ್ತಿಯಿಂದಲೇ ಈ ಲೋಕವನ್ನು (ಜನರ ಮನಸ್ಸನ್ನು) ಜಯಿಸಿರುವನೋ ಅಂತಹವನ ವಿಷಯದಲ್ಲಿ ಹೇಳಬೇಕಾದುದೇನಿದೆ? (ದುಷ್ಟನಾದ ಮಗನನ್ನೇ ತಂದೆಯಾದವನು ಹೊರಗಟ್ಟುವುದಿಲ್ಲ. ಹೀಗಿದ್ದಾಗ ಸುಪುತ್ರನನ್ನು ಯಾವ ತಂದೆಯಾದರೂ ಕಾಡಿಗೆ ಕಳುಹಿಸುವನೇ?)

ಆನೃಶಂಸ್ಯಮನುಕ್ರೋಶಃ ಶ್ರುತಂ ಶೀಲಂ ದಮಃ ಶಮಃ ।
ರಾಘವಂ ಶೋಭಯನ್ತ್ಯೇತೇ ಷಡ್ಗುಣಾಃ ಪುರುಷರ್ಷಭಮ್ ॥೧೨॥

ಅಹಿಂಸೆ, ದಯೆ, ಶಾಸ್ತ್ರಾಧ್ಯಯನ, ಸೌಶೀಲ್ಯ (ಸೌಜನ್ಯ), ಶಮ-ದಮಗಳೆಂಬ–ಈ ಆರು ಗುಣಗಳು ಪುರುಷಶ್ರೇಷ್ಠನಾದ ಶ್ರೀರಾಮನನ್ನು ಅಲಂಕರಿಸಿವೆ.*

ಷಾಡ್ಗುಣ್ಯಪರಿಪೂರ್ಣನಾಗಿರುವ ಶ್ರೀರಾಮನಿಗೆ ತೊಂದರೆಯಾಗಿರುವ ಕಾರಣ ಅವನ ಆಸರೆಯಿಂದ ಜೀವಿಸಿರುವ ಪ್ರಜೆಗಳು–ಬೇಸಿಗೆಯಲ್ಲಿ ನೀರು ಬತ್ತಿಹೋದಾಗ ಜಲಚರಪ್ರಾಣಿಗಳು ತೊಂದರೆಗೆ ಗುರಿಯಾಗುವಂತೆ–ಅತ್ಯಂತ ಪೀಡಿತರಾಗಿದ್ದಾರೆ.

ಪೀಡಯಾ ಪೀಡಿತಂ ಸರ್ವಂ ಜಗದಸ್ಯ ಜಗತ್ಪತೇಃ ।
ಮೂಲಸ್ಯೇವೋಪಘಾತೇನ ವೃಕ್ಷಃ ಪುಷ್ಪಫಲೋಪಗಃ ॥೧೪॥

ಬುಡವನ್ನು ಕತ್ತರಿಸುವುದರಿಂದ ಫಲ-ಪುಷ್ಪಗಳಿಂದ ತುಂಬಿರುವ ವೃಕ್ಷಕ್ಕೆ ಪೀಡೆಯುಂಟಾಗುವಂತೆ–ಜಗತ್ಪತಿಯಾದ ಶ್ರೀರಾಮನಿಗೆ ಪೀಡೆಯುಂಟಾದುದರಿಂದ ಸಕಲಜಗತ್ತಿಗೇ ಪೀಡೆಯುಂಟಾಗಿದೆ.

ಮೂಲಂ ಹ್ಯೇಷ ಮನುಷ್ಯಾಣಾಂ ಧರ್ಮಸಾರೋ ಮಹಾದ್ಯುತಿಃ ।
ಪುಷ್ಪಂ ಫಲಂ ಚ ಪತ್ರಂ ಚ ಶಾಖಾಶ್ಚಾಸ್ಯೇತರೇ ಜನಾಃ ॥೧೫॥

---

* ಶಮಶ್ಚಿತ್ತಪ್ರಶಾನ್ತಿಃಸ್ಯಾದ್ದಮ ಇನ್ದ್ರಿಯನಿಗ್ರಹಃ ॥" "ನಿಗ್ರಹೋ ಬಾಹ್ಯವೃತ್ತೀನಾಂ ದಮ ಇತ್ಯಭಿಧೀಯತೇ ॥" "ಕುತ್ಸಿತಾತ್ಕರ್ಮಣೋ ವಿಪ್ರಯಚ್ಛ ಚಿತ್ತ ನಿವಾರಣಂ ಸ ಕೀರ್ತಿತೋ ದಮ ಇತಿ"..... ಚಿತ್ತಶಾಂತಿಗೆ ಶಮವೆಂದೂ, ಹೊರಗಿನ ಇಂದ್ರಿಯಗಳ ನಿಗ್ರಹಕ್ಕೆ ದಮವೆಂದೂ ಹೆಸರು. ಕುತ್ಸಿತಕರ್ಮಗಳಿಂದ ಮನಸ್ಸನ್ನು ಹಿಂದಕ್ಕೆ ಸೆಳೆದುಕೊಳ್ಳುವುದಕ್ಕೂ ದಮವೆಂದು ಹೇಳಲ್ಪಟ್ಟಿದೆ.

ಶ್ರೀರಾಮನು ಮನುಷ್ಯರೆಂಬ ಮಹಾವೃಕ್ಷಕ್ಕೆ ಬೇರಿನಂತಿರುವವನು. ಧರ್ಮವೇ ಸಾರವಾಗಿರುವವನು. ಮಹಾಕಾಂತಿಯಿಂದ ಕೂಡಿರುವವನು. ನಾವೆಲ್ಲರೂ ಪುಷ್ಪರೂಪದಲ್ಲಿಯೂ, ಫಲರೂಪದಲ್ಲಿಯೂ, ಎಲೆಗಳ ರೂಪ ದಲ್ಲಿಯೂ, ರೆಂಬೆಗಳ ರೂಪದಲ್ಲಿಯೂ ಇರುವೆವು. ಈಗ ನಾವೆಲ್ಲರೂ ಪತ್ನೀಸಮೇತರಾಗಿಯೂ, ಬಂಧು-ಮಿತ್ರರ ಸಮೇತರಾಗಿಯೂ, ಲಕ್ಷ್ಮಣ ನಂತೆಯೇ ಬಹಳ ಬೇಗ ಶ್ರೀರಾಮನು ಯಾವ ಮಾರ್ಗವನ್ನು ಹಿಡಿದು ಹೋಗುತ್ತಿರುವನೋ–ಅದೇ ಮಾರ್ಗವನ್ನೇ ಹಿಡಿದು ಹೋಗೋಣ. ಕ್ರೀಡಾ ಯೋಗ್ಯವಾದ ಉದ್ಯಾನವನಗಳನ್ನೂ, ಭೂಮಿ-ಕಾಣೆಗಳನ್ನೂ, ಮನೆ ಗಳನ್ನೂ ಪರಿತ್ಯಜಿಸಿ, ಶ್ರೀರಾಮನ ಸುಖ-ದುಃಖಗಳಲ್ಲಿ ಸಹಭಾಗಿಗಳಾಗಿ ಧಾರ್ಮಿಕನಾದ ಅವನನ್ನೇ ಅನುಸರಿಸಿ ಹೋಗೋಣ. ನಾವಿಲ್ಲಿಂದ ಹೋಗು ವಾಗ ನಮ್ಮ ಮನೆಗಳಲ್ಲಿರುವ ನಿಕ್ಷೇಪಗಳನ್ನು ತೆಗೆದುಕೊಂಡು ಹೋಗೋಣ. ಮನೆಗಳ ಅಂಗಳಗಳನ್ನು ನಾಶಮಾಡೋಣ. ಅಂಗಳಗಳಲ್ಲಿ ರುವ ಗೋವುಗಳನ್ನೂ, ಧಾನ್ಯಗಳನ್ನೂ ಜೊತೆಯಲ್ಲೇ ಒಯ್ಯೋಣ. ಹೀಗೆ ಮಾಡಿದರೆ ನಮ್ಮ ಮನೆಗಳು ಸಾರವಿಲ್ಲದ (ಸಂಪದ್ರಹಿತವಾದ) ಮನೆಗಳಾಗಿ ಉಳಿಯುತ್ತವೆ. ನಾವು ಹೊರಟುಹೋದೆವೆಂದರೆ ಈ ಮನೆಗಳಲ್ಲಿ ಕಸವನ್ನು ಗುಡಿಸುವವರಿಲ್ಲದೇ ಧೂಳುಮುಚ್ಚಿಕೊಳ್ಳುತ್ತದೆ. ಇಂತಹ ನಮ್ಮ ಮನೆಗಳಲ್ಲಿ ದೇವತಾಸಾನ್ನಿಧ್ಯವೂ ಇರುವುದಿಲ್ಲ. ಇಲಿಗಳೂ, ಹೆಗ್ಗಣಗಳೂ ನಿರ್ಭಯ ವಾಗಿ ಓಡಾಡುತ್ತಿರುತ್ತವೆ. ಮನೆಗಳು ಇಲಿಯ ಬಿಲಗಳಿಂದಲೂ ಹಾವುಗಳ ಹುತ್ತಗಳಿಂದಲೂ ಸಮಾವೃತವಾಗುತ್ತವೆ. ಬೀದಿಯ ಬಾಗಿಲುಗಳಿಗೆ ನೀರು ಚುಮುಕಿಸುವವರೂ ಇರುವುದಿಲ್ಲ. ಅಗ್ನಿಹೋತ್ರಸಂಬಂಧವಾದ ಹೊಗೆಯೂ ಇರುವುದಿಲ್ಲ.

ಪುಣ್ಯಾಹಾದಿಗಳಾಗಲೀ ಸಮ್ಮಾರ್ಜನಾದಿಗಳಾಗಲೀ ಈ ಮನೆಗಳಲ್ಲಿ ನಡೆಯಲಾರವು. ಬಲಿಹರಣವಾಗಲೀ, ಯಜ್ಞವಾಗಲೀ, ಮಂತ್ರಪೂರ್ವಕ ವಾದ ಹೋಮಗಳಾಗಲೀ, ಜಪ-ತಪಾದಿಗಳಾಗಲೀ ಯಾವುದೂ ಆ ಮನೆ ಗಳಲ್ಲಿ ನಡೆಯುವುದಿಲ್ಲ. ಕ್ಷಾಮ-ಡಾಮರಗಳ ಕಾಲದಲ್ಲಿ ಪಾಳುಬೀಳುವ ಮನೆಗಳಂತೆಯೇ ಕಾಣುವ, ನಾಲ್ಕಾರು ಒಡೆದ ಪಾತ್ರೆಗಳಿರುವ, ನಾವು

ತೊರೆದುಹೋದ ಈ ಮನೆಗಳನ್ನು ಕೈಕೇಯಿಯು ತನ್ನದನ್ನಾಗಿ ಮಾಡಿಕೊಳ್ಳಲಿ.

ವನಂ ನಗರಮೇವಾಸ್ತು ಯೇನ ಗಚ್ಛತಿ ರಾಘವಃ ।
ಅಸ್ಮಾಭಿಶ್ಚ ಪರಿತ್ಯಕ್ತಂ ಪುರಂ ಸಂಪದ್ಯತಾಂ ವನಮ್ ॥೨೨॥

ಯಾವ ವನಕ್ಕೆ ರಾಘವನು ಹೋಗುತ್ತಿರುವನೋ–ಆ ವನವೇ ನಗರವಾಗಲಿ. ನಮ್ಮೆಲ್ಲರಿಂದಲೂ ತ್ಯಜಿಸಲ್ಪಡುವ ಈ ಅಯೋಧ್ಯಾಪಟ್ಟಣವು ಅರಣ್ಯವಾಗಿ ಪರಿಣಮಿಸಲಿ. ನಾವೆಲ್ಲರೂ ಶ್ರೀರಾಮನ ಜೊತೆಯಲ್ಲಿ ಅರಣ್ಯಕ್ಕೆ ಹೋದೊಡನೆಯೇ ನಮ್ಮನ್ನು ಕಂಡು ಭಯಪಟ್ಟು ಸರ್ಪವೇ ಮೊದಲಾದ ವಿಷಜಂತುಗಳು ಬಿಲಗಳನ್ನು ಬಿಟ್ಟು ಓಡಿಹೋಗುತ್ತವೆ. ಜಿಂಕೆಯೇ ಮೊದಲಾದ ಮೃಗಗಳೂ ಮತ್ತು ಪಕ್ಷಿಗಳೂ ಪರ್ವತದ ತಪ್ಪಲುಗಳನ್ನು ಬಿಟ್ಟು ಓಡಿಹೋಗುತ್ತವೆ. ಕಾಡಿನಲ್ಲಿರುವ ಸರ್ಪ- ಮೃಗ-ಪಕ್ಷಿ-ವ್ಯಾಘ್ರಾದಿಗಳು ಈಗಿರುವ ತಮ್ಮ ವಾಸಸ್ಥಳಗಳನ್ನು ತ್ಯಜಿಸಿ ನಾವು ಬಿಟ್ಟು ಹೋಗಲಿರುವ ಈ ಅಯೋಧ್ಯೆಗೆ ಬಂದು ಸೇರಿಕೊಳ್ಳಲಿ. ತೃಣ-ಮಾಂಸ-ಫಲಗಳನ್ನು ತಿನ್ನುವ ಹುಲಿ, ಜಿಂಕೆ, ಕಾಗೆ ಮೊದಲಾದ ಮೃಗ-ಪಕ್ಷಿಗಳನ್ನು ಒಳಗೊಂಡ ಈ ದೇಶವನ್ನು ಪುತ್ರ-ಮಿತ್ರ-ಬಂಧುಗಳ ಸಮೇತಳಾಗಿ ಕೈಕೇಯಿಯು ಪಡೆಯಲಿ. ನಾವೆಲ್ಲರೂ ಶ್ರೀರಾಮನೊಡನೆ ಅರಣ್ಯದಲ್ಲಿ ಸುಖವಾಗಿರೋಣ."

ಹಲವಾರು ಜನರು ಆಡಿಕೊಳ್ಳುತ್ತಿದ್ದ ನಾನಾಪ್ರಕಾರವಾದ ಮಾತುಗಳನ್ನು ಶ್ರೀರಾಮನು ಕೇಳುತ್ತಿದ್ದರೂ ಅವನ ಮನಸ್ಸು ವಿಕಾರಗೊಳ್ಳಲಿಲ್ಲ. ಮದಿಸಿದ ಆನೆಯಂತೆ ಪರಾಕ್ರಮವುಳ್ಳ ಧರ್ಮಾತ್ಮನಾದ ಶ್ರೀರಾಮನು ಕೈಲಾಸಶಿಖರಕ್ಕೆ ಸಮಾನವಾಗಿದ್ದ ತಂದೆಯ ಅರಮನೆಗೆ ಬಹಳ ದೂರದಿಂದ ನಡೆದೇ ಬಂದನು. ರಾಜನ ಅರಮನೆಯನ್ನು ಪ್ರವೇಶಿಸುತ್ತಲೇ ವಿನೀತನೂ, ವೀರಪುರುಷನೂ, ದೀನನೂ ಆಗಿದ್ದ ಸುಮಂತ್ರನು ಸಮೀಪದಲ್ಲಿಯೇ ನಿಂತಿರುವುದನ್ನು ಶ್ರೀರಾಮನು ನೋಡಿದನು. ತನಗಾಗಿ ಸಂಕಟಪಡುತ್ತಿದ್ದ ಜನರನ್ನು ದಾರಿಯುದ್ದಕ್ಕೂ ನೋಡುತ್ತಾ ಬಂದರೂ ಶ್ರೀರಾಮನು ದುಃಖವಿಲ್ಲದವನಂತೆಯೇ ಕಾಣುತ್ತಿದ್ದನು. ಅವನ ಮುಖದಲ್ಲಿ ಸ್ವಲ್ಪವಾದರೂ ಸಂಕಟದ ಅನುಭವವಿರಲಿಲ್ಲ. ನಗುಮುಖದಿಂದಲೇ ಇದ್ದನು.

ತಂದೆಯ ಆಜ್ಞೆಯನ್ನು ಯಥಾವತ್ತಾಗಿ ಪರಿಪಾಲಿಸಬೇಕೆಂದು ಇಚ್ಛಿಸಿದ್ದ ಶ್ರೀರಾಮನು ಅವನನ್ನು ನೋಡುವ ಸಲುವಾಗಿ ರಾಜನ ಅರಮನೆಗೆ ಹೋದನು. ಇಕ್ಷ್ವಾಕುವಂಶಪ್ರದೀಪನಾದ ಮಹಾತ್ಮನಾದ ಶ್ರೀರಾಮನು ದುಃಖದ ಪ್ರತಿರೂಪದಂತಿದ್ದ ಬಾಗಿಲಿನ ಬಳಿ ನಿಂತಿದ್ದ ಸುಮಂತ್ರನನ್ನು ಮೊದಲು ನೋಡಿ, ತನ್ನ ಆಗಮನದ ವಿಷಯವನ್ನು ತಂದೆಗೆ ತಿಳಿಸುವಂತೆ ಹೇಳುವ ಸಲುವಾಗಿ ಅಲ್ಲಿಯೇ ನಿಂತುಕೊಂಡನು.

ಧರ್ಮಪ್ರಿಯನಾದ ಶ್ರೀರಾಮನು ತಂದೆಯ ಆಜ್ಞೆಯಂತೆ ಅರಣ್ಯಕ್ಕೆ ಹೋಗಲು ದೃಢನಿಶ್ಚಯವನ್ನು ಮಾಡಿದ್ದನು. ಸುಮಂತ್ರನನ್ನು ನೋಡಿ **'ನಿವೇದಯಸ್ವಾಗಮನಂ ನೃಪಾಯ ಮೇ'**–'ನಾನು ಬಂದಿರುವ ವಿಷಯವನ್ನು ರಾಜನಿಗೆ ನಿವೇದಿಸು'–ಎಂದು ಹೇಳಿದನು.

ಳಿಳಿನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ಳಿಳನೆಯ ಸರ್ಗ

ಶ್ರೀರಾಮನು ಸೀತಾ-ಲಕ್ಷ್ಮಣಸಮೇತನಾಗಿ ರಾಜನ ಬಳಿಗೆ ಹೋಗಿ ಅರಣ್ಯಕ್ಕೆ ಹೊರಡಲು ಅನುಮತಿಯನ್ನು ಬೇಡಿದುದು : ರಾಜನ ಶೋಕ ಮತ್ತು ಮೂರ್ಛೆ : ಶ್ರೀರಾಮನ ಸಾಂತ್ವನ : ರಾಜನು ಶ್ರೀರಾಮನನ್ನು ಗಾಢವಾಗಿ ಆಲಿಂಗಿಸಿಕೊಂಡು ಪುನಃ ಮೂರ್ಛೆಹೋದುದು

ತತಃ ಕಮಲಪತ್ರಾಕ್ಷಃ ಶ್ಯಾಮೋ ನಿರುಪಮೋ ಮಹಾನ್ ।
ಉವಾಚ ರಾಮಸ್ತಂ ಸೂತಂ ಪಿತುರಾಖ್ಯಾಹಿ ಮಾಮಿತಿ ॥೧॥

ತಾವರೆಯ ಎಸಳುಗಳಂತಿದ್ದ ಕಣ್ಣುಗಳಿಂದ ಕೂಡಿ ಶ್ಯಾಮಲವರ್ಣದಿಂದ ಕಂಗೊಳಿಸುತ್ತಾ ಅನುಪಮಗುಣವಿಶಿಷ್ಟನಾಗಿದ್ದ, ಮಹಾತ್ಮನಾದ ಶ್ರೀರಾಮನು ತನ್ನ ಆಗಮನದ ವಾರ್ತೆಯನ್ನು ತಂದೆಗೆ ತಿಳಿಸುವಂತೆ ಸುಮಂತ್ರನಿಗೆ ಹೇಳಿದನು. ಶ್ರೀರಾಮನಿಂದ ಪ್ರೇರಿಸಲ್ಪಟ್ಟ ಸುಮಂತ್ರನು ಅಂತಃಪುರವನ್ನು ಪ್ರವೇಶಿಸಿ ಪುತ್ರವಿಯೋಗದ ಸಂತಾಪದಿಂದ ವ್ಯಾಕುಲಗೊಂಡ ಇಂದ್ರಿಯಗಳುಳ್ಳವನಾಗಿದ್ದ, ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದ ರಾಜನನ್ನು ನೋಡಿದನು.

ಉಪರಕ್ತಮಿವಾದಿತ್ಯಂ ಭಸ್ಮಚ್ಛನ್ನಮಿವಾನಲಮ್ ।
ತಟಾಕಮಿವ ನಿಸ್ತೋಯಮಪಶ್ಯಜ್ಜಗತೀಪತಿಮ್ ॥೩॥

ರಾಹುಗ್ರಸ್ತನಾದ ಸೂರ್ಯನಂತೆಯೂ, ಬೂದಿಮುಚ್ಚಿದ ಕೆಂಡ ದಂತೆಯೂ, ನೀರಿಲ್ಲದ ಕೊಳದಂತೆಯೂ ತೇಜಸ್ಸಿನಿಂದ ರಹಿತನಾಗಿದ್ದ ದಶರಥನನ್ನು ಸುಮಂತ್ರನು ನೋಡಿದನು.

ಮಹಾಪ್ರಾಜ್ಞನಾದ ಸುಮಂತ್ರನು–ರಾಮನನ್ನೇ ಕುರಿತು ದುಃಖಿಸುತ್ತಾ, ಬಹಳವಾಗಿ ವ್ಯಾಕುಲಗೊಂಡ ಮನಸ್ಸುಳ್ಳವನಾಗಿದ್ದ ರಾಜನನ್ನು ನೋಡಿ ಕೈಮುಗಿದುಕೊಂಡು ಅವನ ಸಮೀಪಕ್ಕೆ ಹೋದನು. 'ದಶರಥ ಮಹಾರಾಜನಿಗೆ ಜಯವಾಗಲಿ'–ಎಂಬ ಜಯಬೋಧಕವಾಕ್ಯಗಳಿಂದ ರಾಜನನ್ನು ಪ್ರೋತ್ಸಾಹಿಸುತ್ತಾ ಸೂತನು ಭೀತ-ಭೀತನಾಗಿ ಮೆಲ್ಲ-ಮೆಲ್ಲನೆ ಹೇಳಿದನು :

"ಪ್ರಭುವೇ! ನೀನು ಕ್ಷಣ-ಕ್ಷಣಕ್ಕೂ ನೆನೆಸಿಕೊಳ್ಳುತ್ತಿರುವ ಪುರುಷ ವ್ಯಾಘ್ರನಾದ, ನಿನ್ನ ಪ್ರಿಯಪುತ್ರನಾದ ಶ್ರೀರಾಮನು–ಬ್ರಾಹ್ಮಣರಿಗೂ ಮತ್ತು ಆಶ್ರಿತರಿಗೂ ತನ್ನ ಐಶ್ವರ್ಯವೆಲ್ಲವನ್ನೂ ಹಂಚಿಕೊಟ್ಟು ನಿನ್ನ ಅಂತಃಪುರದ ಬಾಗಿಲಿನಲ್ಲಿ ನಿಂತಿದ್ದಾನೆ. ಅರಣ್ಯಕ್ಕೆ ಹೋಗಲು ಎಲ್ಲ ಸ್ನೇಹಿತರ ಅನುಮತಿ ಯನ್ನೂ ಪಡೆದು ಈಗ ನಿನ್ನನ್ನು ಕಾಣಲು ಬಂದಿರುತ್ತಾನೆ. ಸತ್ಯಪರಾಕ್ರಮ ನಾದ ಶ್ರೀರಾಮನು ನಿನ್ನನ್ನು ಸಂದರ್ಶಿಸಲಿ. ಅವನೀಗ ಅರಣ್ಯಕ್ಕೆ ಪ್ರಯಾಣಮಾಡುತ್ತಿದ್ದಾನೆ. ಕಿರಣಗಳಿಂದ ಕೂಡಿರುವ ಸೂರ್ಯನಂತೆ ಸಮಸ್ತವಾದ ರಾಜಗುಣಗಳಿಂದಲೂ ಕೂಡಿರುವ ನಿನ್ನ ಸುಪುತ್ರನನ್ನು ನೋಡು."

ಸುಮಂತ್ರನ ಮಾತನ್ನು ಕೇಳಿ ಸತ್ಯವಾದಿಯೂ, ಧರ್ಮಾತ್ಮನೂ, ಗಾಂಭೀರ್ಯದಲ್ಲಿ ಸಮುದ್ರಪ್ರಾಯನೂ, ಆಕಾಶದಂತೆ, ನಿಷ್ಕಳಂಕನೂ ಆದ ದಶರಥನು ಸುಮಂತ್ರನಿಗೆ ಹೇಳಿದನು :

"ಸುಮಂತ್ರ! ಈ ನನ್ನ ಅರಮನೆಯಲ್ಲಿ ನನ್ನ ಪತ್ನಿಯರು ಎಷ್ಟು ಮಂದಿ ಇರುವರೋ–ಅವರೆಲ್ಲರನ್ನೂ ಈ ಕೂಡಲೇ ಇಲ್ಲಿಗೆ ಕರೆದುಕೊಂಡು ಬಾ. ಆ ಎಲ್ಲ ನನ್ನ ಪತ್ನಿಯರೊಡನೆ ನಾನು ಧಾರ್ಮಿಕನಾದ ನನ್ನ ಮಗನನ್ನು ನೋಡಲು ಇಚ್ಛಿಸಿದ್ದೇನೆ."

ಒಡನೆಯೇ ಸುಮಂತ್ರನು ಕೈಕೇಯಿಯ ಅಂತಃಪುರದಿಂದ ಹೊರಕ್ಕೆ ಹೋಗಿ ದಶರಥನ ಭಾರ್ಯೆಯರಿಗೆ ಹೇಳಿದನು :

ಆರ್ಯೋ ಹ್ವಯತಿ ವೋ ರಾಜಾ ಗಮ್ಯತಾಂ ತತ್ರ ಮಾ ಚಿರಮ್ ॥

"ಆರ್ಯನಾದ ದಶರಥರಾಜನು ನಿಮ್ಮೆಲ್ಲರನ್ನೂ ಕೈಕೇಯಿಯ ಅಂತಃಪುರಕ್ಕೆ ಬರಲು ಹೇಳಿದ್ದಾನೆ. ಒಡನೆಯೇ ನೀವೆಲ್ಲರೂ ಅಲ್ಲಿಗೇ ಹೋಗಿರಿ."

ದಶರಥನ ಆಜ್ಞೆಯಂತೆ ಸುಮಂತ್ರನಿಂದ ಹೀಗೆ ಸಂಬೋಧಿತರಾದ ರಾಜಪತ್ನಿಯರು ಗಂಡನ ಆಜ್ಞೆಯನ್ನು ತಿಳಿದವರಾಗಿ ಅವನಿದ್ದ ಭವನಕ್ಕೆ ತೆರಳಿದರು. ಕೆಂಪಾದ ಕಣ್ಣುಗಳಿಂದ ಕೂಡಿದ್ದ, ವ್ರತನಿಷ್ಠರಾದ ಮುನ್ನೂರ ಐವತ್ತು ಮಂದಿ ರಾಜಮಹಿಷಿಯರು ಕೌಸಲ್ಯಾದೇವಿಯನ್ನು ಸುತ್ತುಗಟ್ಟಿಕೊಂಡು ಮೆಲ್ಲ-ಮೆಲ್ಲನೆ ರಾಜಭವನಕ್ಕೆ ಹೋದರು. ತನ್ನ ಮಡದಿಯರೆಲ್ಲರೂ ಬಂದುದನ್ನು ನೋಡಿ ದಶರಥನು ರಾಮನನ್ನು ಕರೆತರುವಂತೆ ಸುಮಂತ್ರನಿಗೆ ಹೇಳಿದನು. ಒಡನೆಯೇ ಸುಮಂತ್ರನು ರಾಮ-ಲಕ್ಷ್ಮಣ-ಸೀತೆಯರನ್ನು ದಶರಥರಾಜನ ಬಳಿಗೆ ಕರೆದೊಯ್ದನು. ಪತ್ನಿಯರಿಂದ ಪರಿವೃತನಾಗಿದ್ದ, ಆರ್ತನಾಗಿದ್ದ ದಶರಥನು ಕೈಮುಗಿದುಕೊಂಡು ತನ್ನ ಬಳಿಗೆ ಬರುತ್ತಿದ್ದ ಪುತ್ರನನ್ನು ದೂರದಿಂದಲೇ ನೋಡಿ, ಆಸನದಿಂದ ಮೇಲೆದ್ದು ನಿಂತನು. ಶ್ರೀರಾಮನನ್ನು ನೋಡಿದೊಡನೆಯೇ ರಾಜನು ಮಗನನ್ನು ಬಾಚಿತಬ್ಬಿಕೊಳ್ಳಬೇಕೆಂಬ ಆಶಯದಿಂದ ರಾಮನಿಗೆ ಅಭಿಮುಖವಾಗಿ ಓಡಿದನು. ಆದರೆ ರಾಮನ ಬಳಿಗೆ ಹೋಗಲಾರದೇ ದುಃಖಪೀಡಿತನಾದ ಆತನು ಮೂರ್ಛಿತನಾಗಿ ನೆಲದ ಮೇಲೆ ಬಿದ್ದುಬಿಟ್ಟನು. ಹಾಗೆ ಶೋಕಯುಕ್ತನಾಗಿ, ಅತಿಶಯವಾದ ದುಃಖದಿಂದ ಮೂರ್ಛಿತನಾಗಿ ಕೆಳಗೆ ಬಿದ್ದಿದ್ದ ರಾಜನ ಬಳಿಗೆ ರಾಮನೂ–ಮಹಾರಥನಾದ ಲಕ್ಷ್ಮಣನೂ ಧಾವಿಸಿದರು. 'ಹಾ ರಾಮ! ಹಾ ರಾಮ!' ಎಂದು ಎರಡು ಕೈಗಳನ್ನೂ ಮೇಲೆತ್ತಿ ಕೂಗಿಕೊಳ್ಳುತ್ತಿದ್ದ ಶಬ್ದವು ಸಾವಿರಾರು ಸ್ತ್ರೀಯರ ಕೈಬಳೆಗಳ ಮತ್ತು ಒಡವೆಗಳ ಶಬ್ದಗಳಿಂದಲೂ ಸಮ್ಮಿಶ್ರವಾಗಿ ಆ ರಾಜಭವನದಲ್ಲಿ ವ್ಯಾಪಿಸಿತು. ರಾಮ-ಲಕ್ಷ್ಮಣರು ನೆಲದ ಮೇಲೆ ಬಿದ್ದಿದ್ದ ರಾಜನನ್ನು ತಬ್ಬಿಕೊಂಡು ಮೇಲೆತ್ತಿ–ಸೀತೆಯೊಡನೆ ದುಃಖದಿಂದ ಕಣ್ಣೀರುಸುರಿಸುತ್ತಾ–

ಮೆಲ್ಲ-ಮೆಲ್ಲನೆ ರಾಜನನ್ನು ಮಂಚದ ಮೇಲೆ ಕುಳ್ಳಿರಿಸಿದರು. ಒಂದು ಮುಹೂರ್ತವು ಕಳೆದ ನಂತರ ಎಚ್ಚರಗೊಂಡ, ಶೋಕಸಮುದ್ರದಲ್ಲಿ ಮುಳುಗಿಹೋಗಿದ್ದ ದಶರಥನಿಗೆ ಶ್ರೀರಾಮನು ಕೈಮುಗಿದುಕೊಂಡು ಹೇಳಿದನು:

ಆಪೃಚ್ಛೇ ತ್ವಾಂ ಮಹಾರಾಜ ಸರ್ವೇಷಾಮೀಶ್ವರೋಽಸಿ ನಃ ।
ಪ್ರಸ್ಥಿತಂ ದಣ್ಡಕಾರಣ್ಯಂ ಪಶ್ಯ ತ್ವಂ ಕುಶಲೇನ ಮಾಮ್ ॥೨೨॥

"ಮಹಾರಾಜ! ನೀನು ನಮ್ಮೆಲ್ಲರಿಗೂ ಸ್ವಾಮಿಯಾಗಿರುವೆ. ಆದುದರಿಂದ ನಿನ್ನ ಅನುಮತಿಯನ್ನು ಕೇಳಲು ಬಂದಿರುವೆನು. ದಂಡಕಾರಣ್ಯಕ್ಕೆ ಹೊರಟಿರುವ ನನ್ನನ್ನು ಶುಭದೃಷ್ಟಿಯಿಂದ ನೋಡು.

ನನ್ನ ಜೊತೆಯಲ್ಲಿ ಬರಲು ಲಕ್ಷ್ಮಣನಿಗೂ ಅನುಮತಿಯನ್ನು ಕೊಡು. ಸೀತೆಯೂ ಕೂಡ ನನ್ನ ಜೊತೆಯಲ್ಲಿ ಕಾಡಿಗೆ ಬರುತ್ತಾಳೆ. ವಾಸ್ತವವಾಗಿ ಅನೇಕ ಕಾರಣಗಳನ್ನು ಹೇಳಿ ಅರಣ್ಯಕ್ಕೆ ಬರಬಾರದೆಂದು ತಡೆದರೂ ಇಬ್ಬರೂ ನನ್ನನ್ನು ಬಿಟ್ಟು ಇಲ್ಲಿರಲು ಇಚ್ಛಿಸುತ್ತಿಲ್ಲ. ಬ್ರಹ್ಮನು ತನ್ನ ಮಕ್ಕಳಾದ ಸನಕ-ಸನಂದನಾದಿಗಳನ್ನು ಅನುಗ್ರಹಿಸಿ ಅನುಮತಿಯನ್ನಿತ್ತು ತಪಶ್ಚರಣೆ ಮಾಡಲು ಕಳುಹಿಸಿಕೊಟ್ಟಂತೆ–ನೀನೂ ಕೂಡ ಶೋಕವನ್ನು ಪರಿತ್ಯಜಿಸಿ ನಾವೆಲ್ಲರೂ ಅರಣ್ಯಕ್ಕೆ ಹೋಗಲು ಅನುಮತಿಸು."

ಶ್ರೀರಾಮನು ಹೀಗೆ ಹೇಳಿ ಅರಣ್ಯಕ್ಕೆ ಪ್ರಯಾಣಮಾಡಲು ತಂದೆಯ ಅನುಮತಿಯನ್ನು ಏಕಾಗ್ರಚಿತ್ತನಾಗಿ ನಿರೀಕ್ಷಿಸುತ್ತಿದ್ದಾಗ–ರಾಜನದನ್ನು ಗಮನಿಸಿ ಶ್ರೀರಾಮನಿಗೆ ಹೇಳಿದನು :

ಅಹಂ ರಾಘವ ಕೈಕೇಯ್ಯಾ ವರದಾನೇನ ಮೋಹಿತಃ ।
ಅಯೋಧ್ಯಾಯಾಸ್ತ್ವಮೇವಾದ್ಯ ಭವ ರಾಜಾ ನಿಗೃಹ್ಯ ಮಾಮ್ ॥

"ರಾಘವ! ನಾನು ಕೈಕೇಯಿಗೆ ಕೊಟ್ಟ ವರದಾನದಿಂದ ವಂಚಿತನಾದೆನು. (ರಾಜನಾಗಿರಲು ನಾನು ಅನರ್ಹನು.) ಈಗಲೇ ನನ್ನನ್ನು ಬಂಧಿಸಿ ಅಯೋಧ್ಯೆಗೆ ರಾಜನಾಗು."

ರಾಜನು ಹೀಗೆ ಹೇಳಲು–ಧರ್ಮಾತ್ಮರಲ್ಲಿ ಶ್ರೇಷ್ಠನಾದ, ವಾಕ್ಯವಿಶಾರದನಾದ ಶ್ರೀರಾಮನು ಕೈಮುಗಿದುಕೊಂಡು ತಂದೆಗೆ ಹೇಳಿದನು :

ಭವಾನ್ವರ್ಷಸಹಸ್ರಾಯ ಪೃಥಿವ್ಯಾ ನೃಪತೇ ಪತಿಃ ।
ಅಹಂ ತ್ವರಣ್ಯೇ ವತ್ಸ್ಯಾಮಿ ನ ಮೇ ಕಾರ್ಯಂ ತ್ವಯಾನೃತಮ್ ॥

"ಮಹಾರಾಜ! ನೀನು ಇನ್ನೂ ಒಂದು ಸಾವಿರ ವರ್ಷಗಳವರೆಗೆ ಈ ಜಗತ್ತಿಗೆ ಒಡೆಯನಾಗಿರು. ನಾನು ಕಾಡಿನಲ್ಲೇ ಇರುತ್ತೇನೆ. ನಿನ್ನ ಮಾತನ್ನು ಸುಳ್ಳನ್ನಾಗಿಸುವುದು ನನ್ನ ಕರ್ತವ್ಯವಲ್ಲ.

ನವ ಪಞ್ಚ ಚ ವರ್ಷಾಣಿ ವನವಾಸೇ ವಿಹೃತ್ಯ ತೇ ।
ಪುನಃ ಪಾದೌ ಗ್ರಹೀಷ್ಯಾಮಿ ಪ್ರತಿಜ್ಞಾನ್ತೇ ನರಾಧಿಪ ॥೨೯॥

ನರಾಧಿಪನೇ! ಹದಿನಾಲ್ಕು ವರ್ಷಗಳು ಅರಣ್ಯದಲ್ಲಿ ವಿಹರಿಸುತ್ತಿದ್ದು ಪ್ರತಿಜ್ಞೆಯು ಪೂರ್ಣವಾದೊಡನೆಯೇ ಪುನಃ ಅಯೋಧ್ಯೆಗೆ ಬಂದು ನಿನ್ನ ಪಾದಗಳನ್ನು ಮುಟ್ಟಿ ನಮಸ್ಕರಿಸುತ್ತೇನೆ."

ಸತ್ಯಪಾಶದಿಂದ ಬದ್ಧನಾಗಿ, ಆರ್ತನಾಗಿ, ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸುವಂತೆ ಕೈಕೇಯಿಯಿಂದ ರಹಸ್ಯದಲ್ಲಿ ಪ್ರಚೋದಿತನಾದ ರಾಜನು ರೋದನಮಾಡುತ್ತಾ ರಾಮನಿಗೆ ಹೇಳಿದನು :

ಶ್ರೇಯಸೇ ವೃದ್ಧಯೇ ತಾತ ಪುನರಾಗಮನಾಯ ಚ ।
ಗಚ್ಛಸ್ವಾರಿಷ್ಟಮವ್ಯಗ್ರಃ ಪನ್ಥಾನಮಕುತೋಭಯಮ್ ॥೩೦॥

"ಮಗು! ಪಾರಲೌಕಿಕವಾದ ಫಲವನ್ನು ಪಡೆಯುವುದಕ್ಕೂ, ಐಹಿಕವಾದ ಅಭಿವೃದ್ಧಿಯನ್ನು ಹೊಂದುವುದಕ್ಕೂ, ಪುನಃ ಅಯೋಧ್ಯೆಗೆ ಹಿಂದಿರುಗುವುದಕ್ಕೂ ಏಕಾಗ್ರಚಿತ್ತನಾಗಿ ಅರಣ್ಯಕ್ಕೆ ಪ್ರಯಾಣಮಾಡು. ನಿನಗೆ ಶುಭವಾಗಲಿ. ಮಾರ್ಗವು ದುಷ್ಟಜಂತುಗಳ ಭಯದಿಂದ ರಹಿತವಾಗಲಿ.

ಸತ್ಯಸ್ವಭಾವದವನಾದ, ಧರ್ಮದಲ್ಲಿಯೇ ನಿಯತವಾದ ಬುದ್ಧಿಯುಳ್ಳ ನಿನ್ನ ಬುದ್ಧಿಯನ್ನು ವನವಾಸಗಮನನಿಶ್ಚಯದಿಂದ ಹಿಂದಿರುಗಿಸಲು ಶಕ್ಯವಿಲ್ಲ. ಆದರೆ ಈ ರಾತ್ರಿಯಲ್ಲಿ ಮಾತ್ರ ಸರ್ವಥಾ ಪ್ರಯಾಣ ಮಾಡಬೇಡ.

ಏಕಾಹದರ್ಶನೇನಾಪಿ ಸಾಧು ತಾವಚ್ಚರಾಮ್ಯಹಮ್ ॥೩೩॥

ನಿನ್ನನ್ನು ನೋಡಿಕೊಂಡಿರುವುದರಿಂದ ಈ ಒಂದು ದಿನವನ್ನಾದರೂ ನಾನು ಸುಖವಾಗಿ ಕಳೆಯುತ್ತೇನೆ. ನಿನ್ನ ತಾಯಿಯನ್ನೂ ಮತ್ತು

ನನ್ನನ್ನೂ ನೋಡಿಕೊಂಡು ಈ ರಾತ್ರಿಯನ್ನು ಇಲ್ಲಿಯೇ ಕಳೆ. ಇಂದು ರಾತ್ರಿ ಅಪೇಕ್ಷಿತವಾದ ಎಲ್ಲ ಕಾಮನೆಗಳನ್ನೂ ಈಡೇರಿಸಿಕೊಂಡು ನಾಳೆ ಪ್ರಾತಃಕಾಲವೇ ಅರಣ್ಯಕ್ಕೆ ಪ್ರಯಾಣಮಾಡಬಹುದಾಗಿದೆ. ರಾಘವ! ನನಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಸರ್ವಥಾ ದುಷ್ಕರವಾದ ಕಾರ್ಯವನ್ನು ನೀನು ಮಾಡುತ್ತಿರುವೆ. ನಿನಗೆ ಪ್ರಿಯವಾದವರೆಲ್ಲವನ್ನೂ ಪರಿತ್ಯಜಿಸಿ ನಿರ್ಜನವಾದ ಅರಣ್ಯಕ್ಕೆ ಹೋಗುತ್ತಿರುವೆ.

ನ ಚೈತನ್ಮೇ ಪ್ರಿಯಂ ಪುತ್ರ ಶಪೇ ಸತ್ಯೇನ ರಾಘವ ।
ಛನ್ನಯಾ ಚಲಿತಸ್ತ್ವಸ್ಮಿ ಸ್ತ್ರಿಯಾ ಛನ್ನಾಗ್ನಿಕಲ್ಪಯಾ ॥೩೬॥

ಮಗು! ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನೀನು ಅರಣ್ಯಕ್ಕೆ ಹೋಗುವುದು ನನಗೆ ಸರ್ವಥಾ ಇಷ್ಟವಿಲ್ಲ. ಗೂಢವಾದ ಕೆಟ್ಟ ಅಭಿಪ್ರಾಯವನ್ನು ಹೊಂದಿದ್ದ, ಬೂದಿಮುಚ್ಚಿದ ಕೆಂಡದಿಂತಿರುವ ಈ ಹೆಂಗಸು ನನ್ನ ಸಂಕಲ್ಪವನ್ನು ಚಂಚಲಗೊಳಿಸಿದಳು. ಕುಲಾಚಾರವಿನಾಶಿನಿಯಾದ ಯಾವ ಕೈಕೇಯಿಯಿಂದ ನಾನು ವಂಚಿತನಾದೆನೋ–ಅವಳಿಂದಲೇ ನೀನು ಪ್ರಚೋದಿತನಾಗಿ ಅವಳ ಕುಟಿಲಯೋಜನೆಯನ್ನು ನೆರವೇರಿಸುವ ಇಚ್ಛೆಯಿಂದಿರುವೆ. ಸದ್ಗುಣಪರಿಪೂರ್ಣನಾದ ನೀನು ಹೀಗೆ ನಿಶ್ಚಯಿಸಿರುವುದರಲ್ಲಿ ಹೆಚ್ಚಿನ ಆಶ್ಚರ್ಯವೇನಿಲ್ಲ. ಜ್ಯೇಷ್ಠಪುತ್ರನಾಗಿರುವ ನೀನು ನಿನ್ನ ತಂದೆಯನ್ನು ಸುಳ್ಳುಗಾರನಲ್ಲವೆಂದು ಮಾಡಲು ಬಯಸಿರುವೆ."

ಆರ್ತನಾದ ತಂದೆಯು ಹೇಳಿದ ಮಾತುಗಳನ್ನು ಕೇಳಿ ದೀನನಾದ ರಾಮನು ಲಕ್ಷ್ಮಣನ ಜೊತೆಯಲ್ಲಿ ತಂದೆಗೆ ಹೇಳಿದನು :

"ಮಹಾರಾಜ! ಈಗ ನಾನು ಇಲ್ಲಿ ಯಾವ ಗುಣವಿಶಿಷ್ಟವಾದ ಅಭಿಮತವಾದ ಪದಾರ್ಥಗಳನ್ನು (ಮೃಷ್ಟಾನ್ನಾದಿಗಳನ್ನು) ಪಡೆಯುವೆನೋ ಅವನ್ನು ನಾಳೆ ಕಾಡಿನಲ್ಲಿ ನನಗೆ ಕೊಡಲು ಯಾರು ಬರುತ್ತಾರೆ? ಆದುದರಿಂದ ನನಗೆ ಯಾವ ವಿಧವಾದ ಕಾಮೋಪಭೋಗಗಳ ಅಪೇಕ್ಷೆಯೂ ಇಲ್ಲ. ಎಲ್ಲ ಕಾಮನೆಗಳಿಗಿಂತಲೂ ಮಿಗಿಲಾಗಿ ಈಗಲೇ ನಾನು ಇಲ್ಲಿಂದ ಹೊರಡಲು ಬಯಸುತ್ತೇನೆ.*

---

* ಒಬ್ಬ ವ್ಯಾಖ್ಯಾನಕಾರರು 'ಗುಣಾನ್' ಎಂಬುದಕ್ಕೆ ಸದ್ಗುಣಗಳೆಂದು ಅರ್ಥಮಾಡಿ

ಅನೇಕ ರಾಷ್ಟ್ರಗಳಿಂದಲೂ, ಅನೇಕಪ್ರಜೆಗಳಿಂದಲೂ ಸಂಪನ್ನವಾಗಿರುವ, ಧನ-ಧಾನ್ಯಸಮೃದ್ಧವಾಗಿರುವ ಮತ್ತು ನನ್ನಿಂದ ಪರಿತ್ಯಕ್ತವಾಗುವ ಈ ಸಾಮ್ರಾಜ್ಯವನ್ನು ಭರತನಿಗೆ ವಹಿಸಿಕೊಡು. ವನವಾಸಕ್ಕೆ ಹೋಗ ಬೇಕೆಂದು ನಿಶ್ಚಿತವಾಗಿರುವ ನನ್ನ ಬುದ್ಧಿಯು ಖಂಡಿತವಾಗಿಯೂ ಬದಲಾಗದು. ವರದನೇ! ಹಿಂದೆ ಯುದ್ಧದ ಸಮಯದಲ್ಲಿ ನೀನು ಕೈಕೇಯಿಗಿತ್ತ ವರವನ್ನು ಯಥಾವತ್ತಾಗಿ ಅವಳಿಗೆ ಕೊಟ್ಟುಬಿಡು. ಇದರಿಂದ ನೀನು ಸಂಪೂರ್ಣವಾಗಿ ಸತ್ಯಸ್ವರೂಪನೇ ಆಗುವೆ. ನಾನಾದರೋ ನಿನ್ನ ನಿರ್ದೇಶವನ್ನು ಯಥಾವತ್ತಾಗಿ ಪರಿಪಾಲಿಸುತ್ತಾ ವನವಾಸಿಗಳೊಡನೆ ಹದಿನಾಲ್ಕು ವರ್ಷಗಳ ಕಾಲ ವಾಸಮಾಡಿಕೊಂಡಿರುತ್ತೇನೆ. ಯಾವುದನ್ನೂ ವಿಮರ್ಶೆಮಾಡಬೇಕಾದ ಅಗತ್ಯವಿಲ್ಲ. ಕೈಕೇಯಿಗೆ ಕೊಟ್ಟಿರುವ ವರದಂತೆ ಭರತನಿಗೆ ರಾಜ್ಯವನ್ನು ವಹಿಸಿಕೊಡು. ನಾನು ಮನಸ್ಸಿನಲ್ಲಿ ಯಾವುದೇ ಹೆಚ್ಚಿನ ಸುಖವನ್ನಾಗಲೀ, ಅನುರಾಗವನ್ನಾಗಲೀ ಬಯಸಿ ಈ ರಾಜ್ಯವನ್ನು ಅಪೇಕ್ಷಿಸಲಿಲ್ಲ. ಆದರೆ ನಿನ್ನ ಆಜ್ಞೆಯನ್ನು ಯಥಾವತ್ತಾಗಿ ಪಾಲಿಸಲೆಂದೇ ಅಭಿಷೇಕಕ್ಕೆ ಒಪ್ಪಿಕೊಂಡೆನು. ನಿನ್ನ ದುಃಖವು ದೂರವಾಗಲಿ. ಕಣ್ಣೀರಿನಿಂದಲೇ ಸ್ನಾನಮಾಡಬೇಡ.

ನ ಹಿ ಕ್ಷುಭ್ಯತಿ ದುರ್ಧರ್ಷಃ ಸಮುದ್ರಃ ಸರಿತಾಂ ಪತಿಃ ॥೪೬॥

ದುರ್ಧರ್ಷನಾದ, ನದಿಗಳಿಗೆ ಒಡೆಯನಾದ ಸಮುದ್ರರಾಜನು ಯಾವುದೇ ಸಮಯದಲ್ಲಿಯೂ ಕ್ಷೋಭೆಗೊಳ್ಳುವುದಿಲ್ಲ. ಅವನಂತೆಯೇ ನೀನೂ ಗಾಂಭೀರ್ಯದಿಂದಿರು.

ತಾತ! ನಿನ್ನ ಸಮಕ್ಷದಲ್ಲಿಯೇ ನಾನು ಸತ್ಯದ ಮೇಲೆ ಮತ್ತು ನಾನು ಗಳಿಸಿರುವ ಪುಣ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಾನು ರಾಜ್ಯ

ಹೀಗೆ ವಿವರಣೆಮಾಡಿರುತ್ತಾರೆ. "ಈಗಲೇ ಹೊರಡುವುದರಿಂದ ನಾನು ಯಾವ 'ಸತ್ಯಭಾಷೀ' 'ಪಿತೃವಾಕ್ಯಪರಿಪಾಲಕ' ಮುಂತಾದ ಗುಣಗಳನ್ನು ಪಡೆಯುವೆನೋ ಆ ಗುಣಗಳನ್ನು ನಾಳೆ ಯಾವನು ಕೊಡುತ್ತಾನೆ? ನಾಳೆ ಹೊರಡುವುದರಿಂದ ನನಗೆ ಹೇಗೆ ಆ ಗುಣಗಳು ಪ್ರಾಪ್ತವಾಗುತ್ತವೆ? ಆದುದರಿಂದ ಈ ರಾತ್ರಿಯಲ್ಲಿ ಇಲ್ಲಿದ್ದು ಮೃಷ್ಟಾನ್ನಭೋಜನಾದಿ ಕಾಮನೆಗಳನ್ನು ಪೂರೈಸಿಕೊಳ್ಳುವುದಕ್ಕಿಂತಲೂ ಈಗಲೇ ಇಲ್ಲಿಂದ ಹೊರಡಲು ಇಷ್ಟಪಡುತ್ತೇನೆ."

ವನ್ನೂ ಬಯಸುವುದಿಲ್ಲ. ಸುಖವನ್ನೂ ಬಯಸುವುದಿಲ್ಲ. ಸೀತೆಯನ್ನೂ ಬಯಸುವುದಿಲ್ಲ. ಇನ್ನೂ ಹೇಳುವುದಾದರೆ ನನ್ನ ಜೀವಿತವೂ ನನಗೆ ಬೇಕಾಗಿಲ್ಲ. ನೀನು ಸತ್ಯಪ್ರತಿಜ್ಞನಾಗಬೇಕು. ಅನೃತಭಾಷಿಯಾಗಬಾರದು. ಇದೊಂದನ್ನೇ ನಾನು ಬಯಸುತ್ತೇನೆ. ತಂದೆಯೇ! ಇನ್ನು ಮುಂದೆ ಒಂದು ಕ್ಷಣವಾದರೂ ಅಯೋಧ್ಯೆಯಲ್ಲಿರಲು ನನಗೆ ಸಾಧ್ಯವಿಲ್ಲ. ಇನ್ನಾದರೂ ನೀನು ಶೋಕಪಡಬೇಡ. ನನ್ನ ಬುದ್ಧಿಯು ವನವಾಸದಿಂದ ವಿಚಲಿತವಾಗುವುದಿಲ್ಲ. ಕೈಕೇಯಿಯು ನನ್ನನ್ನು ಸಂಬೋಧಿಸಿ–'ರಾಘವ! ಅರಣ್ಯಕ್ಕೆ ಹೋಗು'–ಎಂದು ಯಾಚಿಸಿದಳು. ನಾನವಳಿಗೆ–'ಹೋಗುವೆನು, ತಾಯೇ!' ಎಂದು ಪ್ರತಿವಚನವನ್ನಿತ್ತಿದ್ದೇನೆ. ಆ ಸತ್ಯವಚನವನ್ನು ನಾನೀಗ ಪಾಲಿಸುತ್ತಿದ್ದೇನೆ. ದೇವ! ಇನ್ನು ನನ್ನನ್ನು ನೋಡಬೇಕೆಂದು ಉತ್ಕಂಠಿತನಾಗಬೇಡ.* ಜಿಂಕೆಗಳಿಂದ ವ್ಯಾಪ್ತವಾದ, ನಾನಾವಿಧವಾದ ಪಕ್ಷಿಗಳ ಮಧುರಧ್ವನಿಗಳಿಂದ ನಿನಾದಿತವಾದ ಅರಣ್ಯದಲ್ಲಿ ನಾವು ವಿಹರಿಸುತ್ತಿರುತ್ತೇವೆ.

ಪಿತಾ ಹಿ ದೈವತಂ ತಾತ ದೇವತಾನಾಮಪಿ ಸ್ಮೃತಮ್ ।
ತಸ್ಮಾದ್ದೈವತಮಿತ್ಯೇವ ಕರಿಷ್ಯಾಮಿ ಪಿತುರ್ವಚಃ ॥೫೨॥

ತಂದೆಯೆಂಬುವನು (ಮನುಷ್ಯರಿಗೆ ಮಾತ್ರವಲ್ಲದೇ) ದೇವತೆಗಳಿಗೂ ದೇವತೆ–ಎಂದು ಶಾಸ್ತ್ರಗಳು ಹೇಳುತ್ತವೆ. ಆದುದರಿಂದಲೇ ನಾನು ತಂದೆಯನ್ನು ಪ್ರತ್ಯಕ್ಷದೇವತೆಯೆಂದೇ ಭಾವಿಸಿ ಅವನ ಮಾತನ್ನು ನಡೆಸಿಕೊಡುತ್ತೇನೆ.

ಹದಿನಾಲ್ಕು ವರ್ಷಗಳು ಕಳೆದೊಡನೆಯೇ ಪುನಃ ಅಯೋಧ್ಯೆಗೆ ಆಗಮಿಸುವ ನನ್ನನ್ನು ನೀನು ಕಾಣುವೆ. ಆದುದರಿಂದ ಈ ಸಂತಾಪವನ್ನು

---

* ಉತ್ಕಣ್ಠಾ = ಇಷ್ಟವಾದ ವಸ್ತುವನ್ನು ಹೊಂದುವ ಆಸೆ ; ಪ್ರಿಯವಸ್ತುವನ್ನು ಪಡೆಯುವ ತವಕ. ಸರ್ವೇನ್ದ್ರಿಯಸುಖಾಸ್ವಾದೋ ಯತ್ರಾಸ್ತೀತ್ಯಭಿಮನ್ಯತೇ । ತತ್ಪ್ರಾಪ್ತೀಚ್ಛಾಂ ಸಸಙ್ಕಲ್ಪಾಮುತ್ಕಣ್ಠಾಂ ಕವಯೋ ವಿದುಃ ॥ ಯಾವ ವಸ್ತುವನ್ನು ಹೊಂದಲು ಅಥವಾ ಅನುಭವಿಸಲು ಎಲ್ಲ ಇಂದ್ರಿಯಗಳಿಗೂ ಆಸಕ್ತಿಯಿರುವುದೋ ಆ ವಸ್ತುವನ್ನು ಹೊಂದಲೇಬೇಕೆಂಬ ಸಂಕಲ್ಪದಿಂದ ಕೂಡಿದ ಇಚ್ಛೆಗೆ ಉತ್ಕಂಠೆಯೆಂದು ಹೆಸರು.

ಪರಿತ್ಯಜಿಸು. ಇಲ್ಲಿ ಎಲ್ಲರೂ ಕಣ್ಣೀರಿಡುತ್ತಿದ್ದಾರೆ. ಇವರೆಲ್ಲರಿಗೂ ಸಮಾಧಾನವನ್ನು ಹೇಳಿ ಇವರು ಕಣ್ಣೀರಿಡುವುದನ್ನು ನಿಲ್ಲಿಸಬೇಕಾಗಿರುವ ನೀನೇ ಹೀಗೆ ಮನೋವಿಕಾರವನ್ನೇಕೆ ಹೊಂದಿರುವೆ? ನಾನು ಬಿಟ್ಟುಹೋಗುವ ರಾಷ್ಟ್ರಗಳಿಂದಲೂ–ಪತ್ತನಗಳಿಂದಲೂ ಯುಕ್ತವಾದ ಭೂಮಂಡಲವನ್ನು ಭರತನಿಗೆ ವಹಿಸಿಕೊಡು. ನಾನು ಮಾತ್ರ ನಿನ್ನ ನಿರ್ದೇಶನವನ್ನು ಪರಿಪಾಲನೆ ಮಾಡುತ್ತಾ ಬಹಳ ಕಾಲದವರೆಗೆ ವಾಸಮಾಡಿಕೊಂಡಿರಲು ಅರಣ್ಯಕ್ಕೆ ಪ್ರಯಾಣಮಾಡುತ್ತೇನೆ. ಪರ್ವತ-ಗಿರಿ-ದುರ್ಗಗಳಿಂದಲೂ, ಪಟ್ಟಣ ಗಳಿಂದಲೂ, ಅರಣ್ಯಗಳಿಂದಲೂ, ಮಂಗಳವಾದ ಮತ್ತು ಸುಭದ್ರವಾದ ಎಲ್ಲೆಗಳಿಂದಲೂ ಕೂಡಿರುವ, ನನ್ನಿಂದ ಪರಿತ್ಯಕ್ತವಾದ ಈ ಭೂಮಂಡಲ ವನ್ನು ಭರತನು ಆಳಲಿ. ನೀನು ಕೈಕೇಯಿಗೆ ಹೇಳಿದಂತೆಯೇ ಎಲ್ಲವೂ ನಡೆಯಲಿ. ಶಿಷ್ಟಸಮ್ಮತವಾದ ಪಿತೃವಾಕ್ಯಪರಿಪಾಲನೆಯಲ್ಲಿ ನನ್ನ ಮನಸ್ಸು ಹೇಗೆ ನೆಲೆಸಿರುವುದೋ–ಹಾಗೆ ಭೋಗ್ಯವಸ್ತುಗಳಲ್ಲಾಗಲೀ, ಪ್ರಿಯವೆನಿಸಿದ ವಸ್ತುಗಳಲ್ಲಾಗಲೀ ನೆನೆಸಿಲ್ಲ. ಆದುದರಿಂದ ನನ್ನ ಬಗೆಗೆ ದುಃಖಪಡಬೇಡ. ನಿಷ್ಪಾಪನೇ! ನಾನೀಗ ಬಾಧಾರಹಿತವಾದ ರಾಜ್ಯವನ್ನಾಗಲೀ, ಸಮಸ್ತ ಕಾಮೋಪಭೋಗಗಳನ್ನಾಗಲೀ, ಸುಖವನ್ನಾಗಲೀ, ಸೀತೆಯನ್ನಾಗಲೀ, ನನ್ನ ಜೀವಿತವನ್ನೇ ಆಗಲೀ–ನಿನ್ನನ್ನು ಸುಳ್ಳುಗಾರನನ್ನಾಗಿಸಿ ಪಡೆಯಲು ಇಚ್ಛಿಸು ವುದಿಲ್ಲ. ನಿನ್ನ ವ್ರತವು ಸತ್ಯವ್ರತವಾಗಲಿ. ನೀನಾಡಿರುವ ಮಾತು ಸತ್ಯವಾಗಲಿ. ಅರಣ್ಯದಲ್ಲಿ ಸಿಕ್ಕುವ ಕಂದ-ಮೂಲ-ಫಲಗಳನ್ನು ತಿನ್ನುತ್ತಾ ಪರ್ವತಗಳನ್ನೂ, ನದಿಗಳನ್ನೂ, ಸರೋವರಗಳನ್ನೂ ಸಂದರ್ಶಿಸುತ್ತಾ ಕಾಲಕಳೆಯುತ್ತೇನೆ. ವಿಚಿತ್ರವಾದ ಮರ-ಗಿಡ-ಬಳ್ಳಿಗಳಿರುವ ಅರಣ್ಯವನ್ನು ಪ್ರವೇಶಿಸಿದೊಡನೆಯೇ ನಾನು ಸುಖಿಯಾಗುತ್ತೇನೆ. ನಿನ್ನ ಮನಸ್ಸಿಗೂ ನೆಮ್ಮದಿಯುಂಟಾಗಲಿ."

ಹೀಗೆ ಶ್ರೀರಾಮನು ಸಮಾಧಾನಗೊಳಿಸಿದರೂ ರಾಜನಿಗೆ ಇನ್ನೂ ಹೆಚ್ಚಿನ ದುಃಖವಾಯಿತೇ ಹೊರತು ಸಮಾಧಾನವಾಗಲಿಲ್ಲ. ವ್ಯಸನಪಡುತ್ತಾ ಶೋಕ-ದುಃಖಗಳಿಂದ ಪರಿತಪಿಸುತ್ತಾ ಮಗನನ್ನೊಮ್ಮೆ ಬಾಚಿತಬ್ಬಿಕೊಂಡು ಉದ್ವಿಗ್ನನಾಗಿ ಹಾಗೆಯೇ ಮೂರ್ಛೆಹೊಂದಿ ಕೆಳಗೆ ಬಿದ್ದನು. ಕೈ-ಕಾಲು ಗಳನ್ನೂ ಅಲುಗಾಡಿಸದೇ ಬಹಳ ಹೊತ್ತಿನವರೆಗೂ ಹಾಗೆಯೇ ಇದ್ದನು. ಎಷ್ಟು ಹೊತ್ತಾದರೂ ರಾಜನು ಎಚ್ಚರಗೊಳ್ಳದಿದ್ದುದನ್ನು ಕಂಡು-ಕ್ರೂರ

ಹೃದಯಳಾದ ಕೈಕೇಯಿಯನ್ನು ಬಿಟ್ಟು–ಉಳಿದ ಪತ್ನಿಯರೆಲ್ಲರೂ ಒಟ್ಟಿಗೆ ಗಟ್ಟಿಯಾಗಿ ಗೋಳಾಡತೊಡಗಿದರು. ಅವರ ದುಃಖವನ್ನು ನೋಡಿ ಸಹಿಸ ಲಾರದೇ ಸುಮಂತ್ರನೂ ರೋದನಮಾಡುತ್ತಾ ಮೂರ್ಛೆಹೋದನು. ಅರಮನೆಯೆಲ್ಲವೂ ಹಾಹಾಕಾರದಿಂದ ತುಂಬಿಹೋಯಿತು.

ಇ೪ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ಇ೫ನೆಯ ಸರ್ಗ

ಸುಮಂತ್ರನಿಂದ ಕೈಕೇಯಿಯ ನಿಂದನೆ : ಕೈಕೇಯಿಯ ತಿರಸ್ಕಾರ

ತತೋ ನಿರ್ಧೂಯ ಸಹಸಾ ಶಿರೋ ನಿಃಶ್ವಸ್ಯ ಚಾಸಕೃತ್ ।
ಪಾಣಿಂ ಪಾಣೌ ವಿನಿಷ್ಪಿಷ್ಯ ದನ್ತಾನ್ಕಟಕಟಾಯ್ಯ ಚ ॥೧॥

ಲೋಚನೇ ಕೋಪಸಂರಕ್ತೇ ವರ್ಣಂ ಪೂರ್ವೋಚಿತಂ ಜಹತ್ ।
ಕೋಪಾಭಿಭೂತಃ ಸಹಸಾ ಸಂತಾಪಮಶುಭಂ ಗತಃ ॥೨॥

(ಸ್ವಲ್ಪ ಹೊತ್ತಿನನಂತರ ಸುಮಂತ್ರನು ಎಚ್ಚರಗೊಂಡನು. ದಶರಥನ ಪತ್ನಿಯರ ಮತ್ತು ದಶರಥನ ಗೋಳನ್ನು ನೋಡಿ ಸುಮಂತ್ರನಿಗೆ ಸಹಿಸಿ ಕೊಳ್ಳಲು ಸಾಧ್ಯವಾಗಲಿಲ್ಲ. ಕ್ರುದ್ಧನಾದನು.) ತನ್ನ ತಲೆಯನ್ನು ವೇಗವಾಗಿ ಅಲುಗಾಡಿಸಿದನು. ದೀರ್ಘವಾಗಿ ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಿದ್ದನು. ಕೈ-ಕೈ ಹಿಸುಕಿಕೊಂಡನು. ಕಟ-ಕಟನೆ ಹಲ್ಲುಕಡಿದನು. ಕಣ್ಣುಗಳು ಕೆಂಪಾದುವು. ಮೈಬಣ್ಣವೇ ಬದಲಾಯಿಸಿತು. ಕೋಪಾವಿಷ್ಟವಾದ ಸುಮಂತ್ರನು ತೀವ್ರವಾದ ಪರಿತಾಪವನ್ನು ಹೊಂದಿದನು. ಕೈಕೇಯಿಯ ವಿಷಯವಾಗಿ ದಶರಥನಿಗೆ ಆ ಸಮಯದಲ್ಲಿದ್ದ ಚಿತ್ತವೃತ್ತಿಯನ್ನು ಸಮೀಕ್ಷಿಸಿದನು. (ರಾಜನಿಗೆ ಕೈಕೇಯಿಯ ವಿಷಯವಾಗಿ ಅಸಮಾಧಾನ ವಿರದಿದ್ದರೆ ಅವಳನ್ನು ಕುರಿತು ಕಠಿನೋಕ್ತಿಗಳನ್ನಾಡಲೂ ಯಾರಿಗೂ ಸಾಧ್ಯ ವಾಗುತ್ತಿರಲಿಲ್ಲ.) ರಾಜನಿಗೆ ಕೈಕೇಯಿಯ ವಿಷಯದಲ್ಲಿ ಪ್ರೀತಿಯು ಉಳಿದಿಲ್ಲ ವೆಂಬುದನ್ನು ತಿಳಿದನಂತರವೇ ಸುಮಂತ್ರನು ನಿಶ್ಚಿತವಾದ ವಾಗ್ಬಾಣಗಳಿಂದ ಕೈಕೇಯಿಯ ಹೃದಯವನ್ನು ಕಂಪನಗೊಳಿಸುತ್ತಿರುವನೋ ಎಂಬಂತೆ

ಮಾತನಾಡಿದನು. ಉಪಮಾನರಹಿತಗಳಾದ, ಶೀಘ್ರಗಾಮಿಗಳಾದ, ವಜ್ರಾಯುಧರೂಪಗಳಾದ ವಾಕ್ಯಗಳೆಂಬ ಬಾಣಗಳಿಂದ ಕೈಕೇಯಿಯ ಸಮಸ್ತವಾದ ಮರ್ಮಸ್ಥಳಗಳನ್ನೂ ಕತ್ತರಿಸುತ್ತಿರುವನೋ ಎಂಬಂತೆ ಮಾತನಾಡಿದನು :

ಯಸ್ಯಾಸ್ತವ ಪತಿಸ್ತ್ಯಕ್ತೋ ರಾಜಾ ದಶರಥಃ ಸ್ವಯಮ್ ।
ಭರ್ತಾ ಸರ್ವಸ್ಯ ಜಗತಃ ಸ್ಥಾವರಸ್ಯ ಚರಸ್ಯ ಚ ।
ನ ಹ್ಯಕಾರ್ಯತಮಂ ಕಿಂಚಿತ್ತವ ದೇವೀಹ ವಿದ್ಯತೇ ॥೫॥

"ದೇವಿ! ಚರಾಚರಾತ್ಮಕವಾದ ಸಮಸ್ತಜಗತ್ತಿಗೂ ಒಡೆಯನೂ ಮತ್ತು ಪತಿಯೂ ಆದ ದಶರಥನನ್ನೇ ನೀನು ಪರಿತ್ಯಜಿಸಿದೆ. ಇದಕ್ಕಿಂತಲೂ ಹೆಚ್ಚಿನ ದುಷ್ಕಾರ್ಯವು ಬೇರೆ ಯಾವುದೂ ಇಲ್ಲ.

ಪತಿಘ್ನೀಂ ತ್ವಾಮಹಂ ಮನ್ಯೇ ಕುಲಘ್ನೀಮಪಿ ಚಾನ್ತತಃ ।
ಯನ್ಮಹೇನ್ದ್ರಮಿವಾಜಯ್ಯಂ ದುಷ್ಪ್ರಕಮ್ಪ್ಯಮಿವಾಚಲಮ್ ।
ಮಹೋದಧಿಮಿವಾಕ್ಷೋಭ್ಯಂ ಸಂತಾಪಯಸಿ ಕರ್ಮಭಿಃ ॥೬॥

ನೀನು ಪತಿಯ ಸಂಹಾರಕಳೆಂದೂ–ಇದರ ಪರಿಣಾಮವಾಗಿ ಕುಲವಿನಾಶಕಳೇ ಆಗುವೆಯೆಂದೂ ನಾನು ಭಾವಿಸುತ್ತೇನೆ. ಏಕೆಂದರೆ : ಮಹೇಂದ್ರನಂತೆ ಶತ್ರುಗಳಿಂದ ಅಜೇಯನಾಗಿರುವ, ಪರ್ವತದಂತೆ ಯಾರಿಂದಲೂ ಅಲುಗಾಡಿಸಲೂ ಅಸಾಧ್ಯನಾದ, ಮಹೋದಧಿಯಂತೆ ಅಕ್ಷೋಭ್ಯನಾದ ದಶರಥನನ್ನು ನಿನ್ನ ಕುತ್ಸಿತಕರ್ಮಗಳಿಂದ ಸಂತಾಪಗೊಳಿಸುತ್ತಿರುವೆ.

ಮಾವಮಂಸ್ಥಾ ದಶರಥಂ ಭರ್ತಾರಂ ವರದಂ ಪತಿಮ್ ।
ಭರ್ತುರಿಚ್ಛಾ ಹಿ ನಾರೀಣಾಂ ಪುತ್ರಕೋಟ್ಯಾ ವಿಶಿಷ್ಯತೇ ॥೭॥

ನಿನ್ನ ಪೋಷಕನಾದ, ವರದನಾದ ಮತ್ತು ಪತಿಯಾದ ದಶರಥನನ್ನು ಅನಾದರಣೆಮಾಡಬೇಡ. ಕೋಟಿ ಮಕ್ಕಳ ಇಚ್ಛೆಯನ್ನು ಪೂರೈಸುವುದಕ್ಕಿಂತಲೂ ಪತಿಯ ಇಚ್ಛೆಯನ್ನು ಪೂರೈಸುವುದು ಸ್ತ್ರೀಯರಿಗೆ ಅತಿಶಯವಾದುದು.

ರಾಜನ ಅವಸನಾನಂತರ ವಯಸ್ಸಿನ ಕ್ರಮವನ್ನು ಮೀರದೇ (ಜ್ಯೇಷ್ಠಾನುಕ್ರಮದಲ್ಲಿ) ಮಕ್ಕಳು ರಾಜ್ಯವನ್ನು ಪಡೆಯುತ್ತಾರೆ. ಇದು

ಅನಾದಿಕಾಲದಿಂದಲೂ ಬೆಳೆದುಬಂದಿರುವ ಸಂಪ್ರದಾಯವಾಗಿದೆ. ಆದರೆ ಇಕ್ಷ್ವಾಕುಕುಲನಾಥನಾದ ದಶರಥನ ವಿಷಯದಲ್ಲಿ ಈ ಕ್ರಮವನ್ನು ಲೋಪ ಗೊಳಿಸಲು ಇಚ್ಛಿಸಿರುವೆ.

ನಿನ್ನ ಮಗನೇ ರಾಜನಾಗಲಿ ; ಭರತನೇ ಈ ಜಗತ್ತನ್ನು ಪರಿಪಾಲಿಸಲಿ. ಶ್ರೀರಾಮನು ಹೋಗುವೆಡೆಗೇ ನಾವೆಲ್ಲರೂ ಹೊರಟುಹೋಗುತ್ತೇವೆ. ನಿನ್ನದು ಬ್ರಾಹ್ಮಣರು ವಾಸಿಸಲು ಯೋಗ್ಯವಾದ ರಾಜ್ಯವಾಗುವುದಿಲ್ಲ. ಅಂತಹ ಮರ್ಯಾದಾತೀತವಾದ ಕಾರ್ಯವನ್ನೀಗ ನೀನು ಮಾಡುತ್ತಿರುವೆ. ಶ್ರೀರಾಮನಿಂದ ಸಂಸೇವಿತವಾದ ಮಾರ್ಗವನ್ನೇ ಹಿಡಿದು ನಾವೆಲ್ಲರೂ ಹೊರಟುಹೋಗುತ್ತೇವೆ. ಬ್ರಾಹ್ಮಣರಿಂದಲೂ, ಬಂಧುಗಳಿಂದಲೂ, ಸತ್ಪುರುಷರಿಂದಲೂ ಪರಿತ್ಯಕ್ತಳಾದ ನೀನು ರಾಜ್ಯಲಾಭದಿಂದ ಯಾವ ಸಂತೋಷವನ್ನು ಪಡೆಯುವೆ? ಅಂತಹ ಮರ್ಯಾದೆಗೆಟ್ಟ ಕಾರ್ಯವನ್ನು ನೀನು ಮಾಡಲು ಇಚ್ಛಿಸಿರುವೆ. ಮರ್ಯಾದಾತೀತವಾದ ಆಚರಣೆಯುಳ್ಳ ನಿನ್ನ ವೃತ್ತಿಯಿಂದ ಈ ಭೂಮಿಯಿನ್ನೂ ಬಿರಿದುಹೋಗದಿರುವುದಕ್ಕೆ ನಾನು ಆಶ್ಚರ್ಯಪಡುತ್ತಿದ್ದೇನೆ. ಶ್ರೀರಾಮನನ್ನು ಕಾಡಿಗೆ ಕಳುಹಿಸುವುದರಲ್ಲಿ ಕಟಿಬದ್ಧಳಾಗಿರುವ ನಿನ್ನನ್ನು ಪ್ರಜ್ವಲಿಸುತ್ತಿರುವ, ಭಯಂಕರವಾಗಿ ಕಾಣುವ, ಮಹಾಬ್ರಹ್ಮರ್ಷಿಗಳ ವಾಗ್ದಂಡಗಳೂ ಹಿಂಸಿಸುತ್ತಿಲ್ಲವಲ್ಲವೇ? (ವಸಿಷ್ಠಾದಿ ಬ್ರಹ್ಮರ್ಷಿಗಳೂ ನಿನ್ನನ್ನು ಶಪಿಸುತ್ತಿಲ್ಲ.) ಇದು ನನಗೆ ಆಶ್ಚರ್ಯವನ್ನುಂಟು ಮಾಡಿದೆ.

ಆಮ್ರಂ ಛಿತ್ವಾ ಕುಠಾರೇಣ ನಿಮ್ಬಂ ಪರಿಚರೇತ್ತು ಯಃ ।
ಯಶ್ಚೈನಂ ಪಯಸಾ ಸಿಞ್ಚೇನ್ನೈವಾಸ್ಯ ಮಧುರೋ ಭವೇತ್ ॥

ಮಾವಿನ ಮರವನ್ನು ಕೊಡಲಿಯಿಂದ ಕಡಿದು ಅದರ ಸ್ಥಳದಲ್ಲಿ ಬೇವಿನ ಸಸಿಯನ್ನು ನೆಟ್ಟು ಬೆಳೆಸಿದವನಿಗೆ ಯಾವ ಫಲವು ಲಭಿಸುವುದೋ– ಅದೇ ಫಲವೇ ನಮ್ಮರಾಜನಿಗೂ ಲಭಿಸಿದೆ. ಬೇವಿನ ಮರಕ್ಕೆ ಅನುದಿನವೂ ಹಾಲನ್ನೇ ಹಾಕಿ ಪೋಷಿಸಿದರೂ ಅದರ ಎಲೆಗಳು ಹೇಗೆ ಮಧುರವಾಗುವುದಿಲ್ಲವೋ, ಕಹಿಯಾಗಿಯೇ ಇರುತ್ತವೆಯೋ–ಹಾಗೆಯೇ ರಾಜನು ನಿನ್ನನ್ನು ಲಾಲಿಸಿ, ಪ್ರೀತಿಸಿ, ಪೋಷಿಸಿದರೂ ನಿನ್ನಲ್ಲಿರುವ ಸ್ವಾಭಾವಿಕವಾದ ದುರ್ಗುಣವನ್ನು ತೊಡೆದುಹಾಕಲು ಅವನಿಗೆ ಸಾಧ್ಯವಾಗಲಿಲ್ಲ.

ಆಭಿಜಾತ್ಯಂ ಹಿ ತೇ ಮನ್ಯೇ ಯಥಾ ಮಾತುಸ್ತಥೈವ ಚ ।
ನ ಹಿ ನಿಮ್ಬಾತ್ಸ್ರವೇತ್ ಕ್ಷೌದ್ರಂ ಲೋಕೇ ನಿಗದಿತಂ ವಚಃ ॥೧೬॥

ನಿನ್ನ ತಾಯಿಯಂತೆಯೇ ನೀನೂ ವರ್ತಿಸುತ್ತಿರುವುದರಿಂದ ಈ ನಿನ್ನ ದುಷ್ಟಸ್ವಭಾವವು ಕುಲಕ್ರಮವಾಗಿ ಬಂದಿರುವುದೆಂದೇ ಭಾವಿಸುತ್ತೇನೆ. ಬೇವಿನ ಹಣ್ಣಿನಿಂದ ಜೇನುತುಪ್ಪವು ಸುರಿಯುವುದಿಲ್ಲವೆಂಬ ಗಾದೆಯು ಲೋಕದಲ್ಲಿ ಪ್ರಸಿದ್ಧವಾಗಿದೆ.

ನಿನ್ನ ತಾಯಿಯ ಮೊಂಡುತನದ ವೃತ್ತಾಂತವನ್ನು ನಾವೂ ಕೇಳಿದ್ದೇವೆ. ನಿನ್ನ ತಂದೆಗೆ ವರದನಾದ ಸಾಧುವೊಬ್ಬನು ಉತ್ತಮೋತ್ತಮವಾದ ವರವೊಂದನ್ನು ಅನುಗ್ರಹಿಸಿಕೊಟ್ಟನು. ಆ ವರದಾನದ ಫಲವಾಗಿ ಆತನು ಪ್ರಪಂಚದಲ್ಲಿರುವ ಸಕಲಪ್ರಾಣಿಗಳ ಭಾಷೆಯನ್ನೂ ತಿಳಿದುಕೊಂಡನು. ಅಡ್ಡವಾಗಿ ಹರಿದಾಡುವ ಇರುವೆಯೇ ಮುಂತಾದ ಪ್ರಾಣಿಗಳ ಭಾಷೆಯೂ ಅವನಿಗೆ ಅರ್ಥವಾಗುತ್ತಿದ್ದಿತು. ಒಂದು ದಿನ ಮಹಾತೇಜಸ್ವಿಯಾದ ರಾಜನು ಹಾಸಿಗೆಯಲ್ಲಿ ಮಲಗಿದ್ದಾಗ ಮಂಚದ ಕೆಳಗೆ ಹರಿದುಹೋಗುತ್ತಿದ್ದ ಪ್ರಾಣಿಗಳ (ಇರುವೆಗಳ) ಕೂಗನ್ನು ಕೇಳಿ ಅದರ ಅರ್ಥವನ್ನು ಗ್ರಹಿಸಿ ಪಕ-ಪಕನೆ ನಕ್ಕನು. ಅದೇ ಹಾಸಿಗೆಯ ಮೇಲೆ ರಾಜನ ಪಕ್ಕದಲ್ಲಿಯೇ ಮಲಗಿದ್ದ ನಿನ್ನ ತಾಯಿಯು–ನಿನ್ನ ತಂದೆಯು ಇದ್ದಕ್ಕಿದ್ದಂತೆಯೇ ನಕ್ಕುದನ್ನು ಕಂಡು, ತನ್ನನ್ನೇ ನೋಡಿ ಅಪಹಾಸ್ಯಮಾಡುತ್ತಿರುವನೆಂದು ಭಾವಿಸಿ, ಸಾವನ್ನು ಬಯಸುತ್ತಿರುವಳೋ ಎಂಬಂತೆ ಕೋಪಗೊಂಡು ಗಂಡನಿಗೆ ಹೇಳಿದಳು : "ಹಾಸಂ ತೇ ನೃಪತೇ ಸೌಮ್ಯ ಜಿಜ್ಞಾಸಾಮಿ'–'ಸೌಮ್ಯನೇ! ನಿನ್ನ ನಗುವಿಗೆ ಕಾರಣವನ್ನು ತಿಳಿಯಲು ಬಯುಸುತ್ತೇನೆ.'

ಅದಕ್ಕೆ ಉತ್ತರವಾಗಿ ರಾಜನು ಹೇಳಿದನು :

"ದೇವಿ! ಶಂಸಾಮಿ ತೇ ಯದಿ-ತತೋ ಮೇ ಮರಣಂ ಸದ್ಯೋ ಭವಿಷ್ಯತಿ । ನಿನಗೇನಾದರೂ ನಾನು ಈ ವಿಷಯವನ್ನು ಹೇಳಿಬಿಟ್ಟರೆ ನನಗೆ ಒಡನೆಯೇ ಮರಣವು ಸಂಭವಿಸುತ್ತದೆ."

ಅದಕ್ಕೆ ನಿಮ್ಮ ತಾಯಿಯು ಹೇಳಿದಳಂತೆ :

ಶಂಸ ಮೇ ಜೀವ ವಾ ಮಾ ವಾ ನ ಮಾಮುಪಹಸಿಷ್ಯಸಿ ॥೨೨॥

"ನೀನು ಬದುಕಿಯಾದರೂ ಬದುಕು. ಸತ್ತಾದರೂ ಸಾಯಿ. ಅದು ನನಗೆ ಮುಖ್ಯವಲ್ಲ. ನನ್ನನ್ನು ನೋಡಿ ನೀನು ಅಪಹಾಸ್ಯಮಾಡಿಲ್ಲವೆಂದು ನನಗೆ ಮನವರಿಕೆಯಾಗಬೇಕು. ಇದು ಮುಖ್ಯ."

ತನ್ನ ಪ್ರೇಯಸಿಯು ಹೀಗೆ ಹೇಳಲು ಮುಂದೇನು ಮಾಡಬೇಕೆಂಬು ದನ್ನು ತಿಳಿಯದೇ ಕೇಕಯರಾಜನು ತನಗೆ ವರವನ್ನಿತ್ತ ಸಾಧುವಿಗೆ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ತಿಳಿಸಿದನು. ವರದನಾದ ಸಾಧುವು ರಾಜ ನಿಗೆ ಆ ಸಮಯಕ್ಕೆ ಯೋಗ್ಯವಾದ ಈ ಸಲಹೆಯನ್ನಿತ್ತನು.

ಮ್ರಿಯತಾಂ ಧ್ವಂಸತಾಂ ವೇಯಂ ಮಾ ಕೃಥಾಸ್ತ್ವಂ ಮಹೀಪತೇ ॥

"ಮಹಾರಾಜ! ನಿನ್ನ ಪತ್ನಿಯು ಸತ್ತಾದರೂ ಹೋಗಲಿ ; ಧ್ವಂಸವಾಗಿ ಯಾದರೂ ಹೋಗಲಿ. ಈ ರಹಸ್ಯವನ್ನು ಮಾತ್ರ ಅವಳಿಗೆ ಹೇಳಬೇಡ."

ಸಾಧುವಿನ ಆ ಮಾತನ್ನು ಕೇಳಿ ನಿನ್ನ ತಂದೆಯು ಪ್ರಸನ್ನಚಿತ್ತನಾಗಿ ನಿನ್ನ ತಾಯಿಯನ್ನೇ ಪರಿತ್ಯಜಿಸಿ ಕುಬೇರನಂತೆ ನೆಮ್ಮದಿಯಿಂದಿದ್ದನು.

ನಿನ್ನ ತಾಯಿಯು ಮಾಡಿದಂತೆಯೇ ಪಾಪಿಷ್ಠಳಾದ ನೀನೂ ಕೂಡ ಮೋಹವಶಳಾಗಿ, ದುರ್ಜನರ ಮಾರ್ಗದಲ್ಲಿ ಪ್ರವೃತ್ತಳಾಗಿ ರಾಜನನ್ನು ಪಾಪ ಕರ್ಮದಲ್ಲಿ ತೊಡಗುವಂತೆ ಮಾಡಲು ಹೊರಟಿರುವೆ.

ಸತ್ಯಶ್ಚಾದ್ಯ ಪ್ರವಾದೋಽಯಂ ಲೌಕಿಕಃ ಪ್ರತಿಭಾತಿ ಮಾ ।
ಪಿತೃನ್ಸಮನುಜಾಯನ್ತೇ ನರಾ ಮಾತರಮಙ್ಗನಾಃ ॥೨೭॥

ತಂದೆಯನ್ನು ಹೋಲಿಕೊಂಡು ಗಂಡುಮಕ್ಕಳೂ ತಾಯಿಯನ್ನು ಹೋಲಿಕೊಂಡು ಹೆಣ್ಣುಮಕ್ಕಳೂ ಹುಟ್ಟುವರೆಂಬ ಗಾದೆಯು ಸತ್ಯವೆಂದು ಈಗ ನನಗೆ ಭಾಸವಾಗುತ್ತಿದೆ.

ದೇವಿ! ನೀನೂ ನಿನ್ನ ತಾಯಿಯಂತಾಗಬೇಡ. ರಾಜನು ಹೇಳಿದು ದನ್ನು ಅಂಗೀಕರಿಸು. ಪತಿಯ ಇಚ್ಛೆಯನ್ನೇ ಗೌರವಿಸು. ಈ ನಮ್ಮ ಪ್ರಜೆ ಗಳಿಗೂ ಶರಣ್ಯಳಾಗು. ಪಾಪಿಷ್ಠರ ಪ್ರೋತ್ಸಾಹಕ್ಕೆ ನೀನು ಕಿವಿಗೊಡಬೇಡ. ದೇವರಾಜನಂತೆ ಮಹಾತಪಸ್ವಿಯಾದ, ಲೋಕಕ್ಕೇ ಒಡೆಯನಾದ ನಿನ್ನ ಪತಿ ಯನ್ನು ಅಧರ್ಮದಲ್ಲಿ ತೊಡಗಿಸಬೇಡ. ತಾನು ಪ್ರತಿಜ್ಞೆಮಾಡಿಕೊಟ್ಟಿರುವ

ವರಗಳನ್ನು ರಾಜನೆಂದಿಗೂ ಸುಳ್ಳುಮಾಡುವುದಿಲ್ಲ. ರಾಜೀವಲೋಚನ ನಾದ, ಶ್ರೀಮಂತನಾದ ರಾಜನು–ಈ ವರಗಳನ್ನು ಬಿಟ್ಟು ಬೇರೆ ಯಾವ ವರಗಳನ್ನು ಕೇಳಿದರೂ ಸಂತೋಷದಿಂದ ನಡೆಸಿಕೊಡುತ್ತಾನೆ.

ಹಿರಿಯನಾದ, ಉದಾರಿಯಾದ, ಸದಾಚಾರಸಂಪನ್ನನಾದ, ದುಷ್ಟ ಶಿಕ್ಷಣ-ಶಿಷ್ಟಪರಿಪಾಲನವೆಂಬ ಕ್ಷಾತ್ರಧರ್ಮವಾದ ಸ್ವಧರ್ಮದಲ್ಲಿ ನಿರತನಾಗಿ ರುವ, ಸಕಲಜೀವಕೋಟಿಗೂ ರಕ್ಷಕನಾದ, ಬಲಿಷ್ಠನಾದ ಶ್ರೀರಾಮನು ಪಟ್ಟಾಭಿಷಿಕ್ತನಾಗಲಿ. ಒಂದು ವೇಳೆ ಶ್ರೀರಾಮನು ತನ್ನ ತಂದೆಯನ್ನಗಲಿ ಅರಣ್ಯಕ್ಕೆ ಹೋದನಾದರೆ–'ಸನ್ಮಾರ್ಗಪ್ರವರ್ತಕನಾದ ಶ್ರೀರಾಮನನ್ನು ದುಷ್ಟೆಯಾದ ಕೈಕೇಯಿಯು ಅರಣ್ಯಕ್ಕೆ ಕಳುಹಿಸಿದಳು'–ಎಂಬ ದೊಡ್ಡ ಅಪವಾದವು ಲೋಕದಲ್ಲೆಲ್ಲಾ ಹರಡುತ್ತದೆ. ಆದುದರಿಂದ ಕೋಸಲರಾಜ್ಯ ವನ್ನು ಶ್ರೀರಾಮನು ಪರಿಪಾಲಿಸಲಿ. ಶ್ರೀರಾಮನ ವಿಷಯದಲ್ಲಿ ನಿನ್ನ ಮನಸ್ಸಿನಲ್ಲಿ ಹುಟ್ಟಿರುವ ಬೇಗೆಯು ಶಾಂತವಾಗಲಿ. ಈ ಪಟ್ಟಣವನ್ನಾಳಲು ಶ್ರೀರಾಮನ ಹೊರತಾಗಿ ಬೇರೆ ಯಾರೂ ಸಮರ್ಥರಲ್ಲ. ಶ್ರೀರಾಮನು ಯುವರಾಜಪದವಿಯನ್ನಂಗೀಕರಿಸಿದರೆ–ಮಹಾಧನುಷ್ಮಂತನಾದ ದಶರಥನು ತನ್ನ ಪೂರ್ವಜರ ಆಚರಣೆಯನ್ನು ಸ್ಮರಿಸಿ ವಾನಪ್ರಸ್ಥಾಶ್ರಮವನ್ನು ಕೈಗೊಂಡು ಅರಣ್ಯಕ್ಕೆ ಹೋಗುತ್ತಾನೆ."

ಹೀಗೆ ಸುಮಂತ್ರನು ತುಂಬಿದ ಆ ಸಭೆಯಲ್ಲಿ ಕೈಜೋಡಿಸಿಕೊಂಡು ಸಾಂತ್ವನಪೂರ್ವಕವಾದ ಮಾತುಗಳಿಂದಲೂ, ತೀಕ್ಷ್ಣವಾದ ಮಾತು ಗಳಿಂದಲೂ ಕೈಕೇಯಿಯ ಮನಸ್ಸನ್ನು ಕ್ಷೋಭೆಗೊಳಿಸಲು ಪ್ರಯತ್ನಿಸಿದನು. ಆದರೆ ಸುಮಂತ್ರನ ಆ ಮಾತುಗಳಿಂದ ಕೈಕೇಯಿಯು ಸ್ವಲ್ಪವಾದರೂ ಕಳವಳಗೊಳ್ಳಲಿಲ್ಲ. ಸಂತಾಪಪಡಲೂ ಇಲ್ಲ. ಅವಳ ಮುಖದಲ್ಲಿ ಯಾವು ದೊಂದು ವಿಕಾರವೂ ಕಾಣಬರಲಿಲ್ಲ.*

ಮೂವತ್ತೈದನೆಯ ಸರ್ಗವು ಮುಗಿಯಿತು.

---

* ಈ ಮೂವತ್ತೈದನೆಯ ಸರ್ಗ ಮತ್ತು ಹಿಂದಿನ ಸರ್ಗದಲ್ಲಿ ರಾಜನೂ ಮತ್ತು ಸುಮಂತ್ರನೂ ಮೂರ್ಛಿತರಾದರೆಂಬುದನ್ನು ಹೇಳುವ ೬೦-೬೧ನೆಯ ಶ್ಲೋಕಗಳು ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿರುವ ಪುಸ್ತಕದಲ್ಲಿಲ್ಲ.

ದಶರಥರಾಜನು ಶ್ರೀರಾಮನೊಡನೆ ಸೈನ್ಯವನ್ನೂ, ಭಂಡಾರವನ್ನೂ ಕಳುಹಿಸಲು ಸುಮಂತ್ರನಿಗೆ ಆದೇಶವಿತ್ತುದು : ಕೈಕೇಯಿಯ ವಿರೋಧ : ಸಿದ್ಧಾರ್ಥನು ಕೈಕೇಯಿಯನ್ನು ಸಮಾಧಾನ ಗೊಳಿಸಿದುದು : ದಶರಥನು ಶ್ರೀರಾಮನೊಡನೆ ತಾನೂ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದುದು

ತತಃ ಸುಮನ್ತ್ರಮೈಕ್ಷ್ವಾಕಃ ಪೀಡಿತೋಽತ್ರ ಪ್ರತಿಜ್ಞಯಾ ।
ಸಬಾಷ್ಪಮತಿನಿಃಶ್ವಸ್ಯ ಜಗಾದೇದಂ ಪುನಃ ಪುನಃ ॥೧॥

ವರದಾನಪ್ರತಿಜ್ಞೆಯಿಂದ ಪೀಡಿತನಾದ ಇಕ್ಷ್ವಾಕುವಂಶಸಂಭೂತನಾದ ದಶರಥರಾಜನು ಕಂಬನಿಗೆರೆಯುತ್ತಾ ಕ್ಷಣ-ಕ್ಷಣಕ್ಕೂ ನಿಟ್ಟುಸಿರುಬಿಡುತ್ತಾ ಸುಮಂತ್ರನೊಡನೆ ಹೇಳಿದನು :

“ಸೂತ! ನವರತ್ನಗಳಿಂದ ಪರಿಪೂರ್ಣವಾದ, ರಥ-ಆನೆ-ಕುದುರೆ-ಪದಾತಿಗಳೆಂಬ ನಾಲ್ಕು ಬಗೆಯ ಬಲದಿಂದ ಕೂಡಿರುವ ಸೈನ್ಯವು ಶ್ರೀರಾಮನನ್ನನುಸರಿಸಿ ಪ್ರಯಾಣಮಾಡಲು ಸಂನದ್ಧವಾಗುವಂತೆ ಈ ಕೂಡಲೇ ಆಜ್ಞೆಯನ್ನು ಹೊರಡಿಸು.

ಚಿತ್ತಾಕರ್ಷಕವಾದ ರೂಪಿನಿಂದಲೇ ಜೀವಿಸುವ ಮಧುರಭಾಷಿಣಿಯರಾದ ವೇಶ್ಯೆಯರೂ, ಐಶ್ವರ್ಯವಂತರಾದ ವರ್ತಕರೂ ಸರ್ವತ್ರವ್ಯಾಪ್ತರಾಗಿ ಕುಮಾರನಾದ ಶ್ರೀರಾಮನ ಹಿಂದೆ ಹೋಗುವ ಸೈನ್ಯವನ್ನು ಶೋಭಾಯಮಾನಗೊಳಿಸಲಿ. ಯಾರು ಶ್ರೀರಾಮನನ್ನು ಆಶ್ರಯಿಸಿಕೊಂಡು ಜೀವಿಸುತ್ತಿರುವರೋ ಮತ್ತು ಯಾರೊಡನೆ ಶ್ರೀರಾಮನು ವೀರ್ಯ ಪ್ರದರ್ಶನ ಮಾಡುತ್ತಾ ಕ್ರೀಡಿಸುವನೋ–ಅವರೆಲ್ಲರಿಗೂ ಬಹುವಿಧವಾದ ಸುವರ್ಣ-ರತ್ನ-ವಸ್ತ್ರಾದಿಗಳನ್ನಿತ್ತು ಎಲ್ಲರನ್ನೂ ಸೈನ್ಯದ ಜೊತೆಯಲ್ಲಿಯೇ ಪ್ರಯಾಣ ಮಾಡುವಂತೆ ನಿಯೋಜಿಸು. ಮುಖ್ಯ-ಮುಖ್ಯವಾದ ಆಯುಧಗಳನ್ನು ಕಳುಹಿಸು. ನಗರಪ್ರಮುಖರೂ ರಾಮನೊಡನೆ ಪ್ರಯಾಣಮಾಡಲಿ. ಸಾಮಗ್ರಿಗಳನ್ನೊಳಗೊಂಡ ಬಂಡಿಗಳೂ ರಾಮನನ್ನು ಹಿಂಬಾಲಿಸಲಿ. ಅರಣ್ಯಮಾರ್ಗವನ್ನು ತೋರಿಸುವ ಮತ್ತು ಅರಣ್ಯದ ಅನುಭವವಿರುವ

ವ್ಯಾಧರೂ ಕಾಕುತ್ಸ್ಥನನ್ನು ಅನುಸರಿಸಿ ಪ್ರಯಾಣಮಾಡಲಿ. ಶ್ರೀರಾಮನು ಸೈನ್ಯಸಮೇತನಾಗಿಯೂ ಪರಿವಾರಸಮೇತನಾಗಿಯೂ ಅರಣ್ಯಕ್ಕೆ ಹೋಗಿ ಅಲ್ಲಿ ಜಿಂಕೆಯೇ ಮುಂತಾದ ಸಾಧುಪ್ರಾಣಿಗಳನ್ನೂ, ಆನೆ-ಸಿಂಹ-ಹುಲಿ– ಇವೇ ಮೊದಲಾದ ದುಷ್ಟಪ್ರಾಣಿಗಳನ್ನೂ ಬೇಟೆಯಾಡುತ್ತಾ, ವ್ಯಾಧರು ತಂದುಕೊಡುವ ಕಾಡುಜೇನಿನ ರುಚಿಯನ್ನು ಸವಿಯುತ್ತಾ, ವಿಧ-ವಿಧವಾದ ನದೀ-ನದ-ಸರೋವರಗಳ ಸೊಬಗನ್ನು ವೀಕ್ಷಿಸುತ್ತಾ ಈ ರಾಜ್ಯದ ಸುಖವನ್ನು ಸ್ಮರಿಸದಂತಾಗಲಿ. ನನ್ನದೇ ಆಗಿರುವ ಧಾನ್ಯದ ಉಗ್ರಾಣವೂ–ಖಜಾನೆಯೂ ಬಂಡಿಗಳ ಮೂಲಕವಾಗಿ ನಿರ್ಜನವಾದ ಅರಣ್ಯದಲ್ಲಿ ವಾಸ ಮಾಡಲಿರುವ ಶ್ರೀರಾಮನನ್ನು ಅನುಸರಿಸಿಹೋಗಲಿ. ಪುಣ್ಯಕ್ಷೇತ್ರಗಳಲ್ಲಿ ಯಜ್ಞಮಾಡುತ್ತಲೂ, ಯಥೋಕ್ತವಾದ ದಕ್ಷಿಣೆಗಳನ್ನು ಋತ್ವಿಜರಿಗೆ ಕೊಡುತ್ತಲೂ, ಮಹರ್ಷಿಗಳೊಡನೆ ವಿಚಾರವಿನಿಮಯಮಾಡುತ್ತಲೂ ಶ್ರೀರಾಮನು ಅರಣ್ಯದಲ್ಲಿ ಸುಖವಾಗಿರುವನು. ಮಹಾಬಾಹುವಾದ ಭರತನಾದರೋ ಜನರಿಂದಲೂ, ಐಶ್ವರ್ಯದಿಂದಲೂ ರಹಿತವಾದ ಈ ಅಯೋಧ್ಯೆಯನ್ನು ಆಳುವನು. ಶ್ರೀಮಂತನಾದ ರಾಮನು ಸಕಲಭೋಗ್ಯ ವಸ್ತುಗಳೊಡನೆ ಅರಣ್ಯಕ್ಕೆ ಹೋಗಲಿ.”

ದಶರಥನು ಹೀಗೆ ಆಜ್ಞೆಮಾಡುತ್ತಿರಲು ಕೈಕೇಯಿಗೆ ಭಯವುಂಟಾಯಿತು. ಮುಖವು ಬಾಡಿಹೋಯಿತು. ಬಾಯಿಂದ ಮಾತೇ ಹೊರಡದಾಯಿತು. ಖಿನ್ನಳಾದ, ಭಯಗ್ರಸ್ತಳಾದ, ಬಾಡಿಹೋದ ಮುಖವುಳ್ಳವಳಾಗಿದ್ದ ಆಕೆಯು ರಾಜನಿಗೆ ಎದುರಾಗಿ ನಿಂತು ಈ ಮಾತನ್ನು ಹೇಳಿದಳು:

ರಾಜ್ಯಂ ಗತಜನಂ ಸಾಧೋ ಪೀತಮಣ್ಡಾಂ ಸುರಾಮಿವ ।
ನಿರಾಸ್ವಾದ್ಯತಮಂ ಶೂನ್ಯಂ ಭರತೋ ನಾಭಿಪತ್ಸ್ಯತೇ ॥೧೨॥

“ಸಾರವನ್ನು ಹೀರಿದನಂತರ ಉಳಿಯುವ, ಆಸ್ವಾದಿಸಲು ಯೋಗ್ಯವಲ್ಲದ ನೀರಸವಾದ ಸುರೆಯಂತೆ–ಜನರೆಲ್ಲರೂ ಹೊರಟುಹೋದ ಬಳಿಕ ಭೋಗ್ಯವಸ್ತುಗಳಿಲ್ಲದ, ಶೂನ್ಯವಾದ ಅಯೋಧ್ಯಾಪಟ್ಟಣವು ಭರತನಿಗೆ ಬೇಡ.”*

---

* ಇಲ್ಲಿ ಕೊಟ್ಟಿರುವ ಹೆಂಡದ ದೃಷ್ಟಾಂತವು ಹೃದಯಂಗಮವಾಗಿದೆ. ‘ಸಾಧೋ!’ ಎಂಬ ಸಂಬೋಧನೆಯೂ ಮತ್ತು ಹೆಂಡದ ದೃಷ್ಟಾಂತವೂ ಕೈಕೇಯಿಯ ಮನಸ್ಸಿನ ದುಗುಡವನ್ನು

ಕೈಕೇಯಿಯು ನಾಚಿಕೆಯಿಲ್ಲದೇ ಇಂತಹ ಅತಿದಾರುಣವಾದ ಮಾತನ್ನು ಆಡುತ್ತಿರಲಾಗಿ ಆ ವಿಶಾಲನೇತ್ರೆಯನ್ನು ಕುರಿತು ದಶರಥರಾಜನು ಹೇಳಿದನು:

"ಶ್ರೀರಾಮನಿಗೆ ವನವಾಸ-ಭರತನಿಗೆ ಪಟ್ಟಾಭಿಷೇಕಗಳೆಂಬ ದುಸ್ಸಹವಾದ ಭಾರವನ್ನು ಹೊರಿಸಿ ಆ ಭಾರವನ್ನು ನಾನು ಬಹಳ ಕಷ್ಟದಿಂದ ಹೊತ್ತು ಮುಂದುವರಿಯುತ್ತಿರುವ ಈ ಸಮಯದಲ್ಲಿಯೂ ನೀನು ನನ್ನನ್ನು ವಾಗ್ಬಾಣಗಳಿಂದ ಏಕೆ ಹಿಂಸಿಸುತ್ತಿರುವೆ? ಅನಾರ್ಯಳೇ! ನಿನಗಿತ್ತ ವರದಂತೆ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸುವ ಕಾರ್ಯವು ಆರಂಭವಾಗಿದೆ. ಆದರೆ ವರವನ್ನು ಕೇಳಿದ ಸಮಯದಲ್ಲಿ ರಾಮನೊಡನೆ ಯಾರೂ ಹೋಗಕೂಡದೆಂದು ನೀನೇಕೆ ಆಗಲೇ ಪ್ರತಿರೋಧಿಸಲಿಲ್ಲ?"

ದಶರಥನು ಕ್ರುದ್ಧನಾಗಿ ಹೇಳಿದ ಮಾತನ್ನು ಕೇಳಿ ಕೈಕೇಯಿಯು ಇಮ್ಮಡಿಯಾಗಿ ಕೋಪಗೊಂಡು ರಾಜನಿಗೆ ಹೇಳಿದಳು :

"ನಿನ್ನ ವಂಶದಲ್ಲಿಯೇ ಸಗರಚಕ್ರವರ್ತಿಯು ಅಸಮಂಜನೆಂಬ ಹೆಸರಿನಿಂದ ಖ್ಯಾತನಾಗಿದ್ದ ತನ್ನ ಹಿರಿಯ ಮಗನೊಬ್ಬನನ್ನೇ ಅರಣ್ಯಕ್ಕೆ ಕಳುಹಿಸಿದನು. ಹಾಗೆಯೇ ರಾಮನು ಏಕಾಕಿಯಾಗಿ ಅರಣ್ಯಕ್ಕೆ ಹೋಗುವುದು ಯೋಗ್ಯವಾಗಿದೆ."

ಅಸಂಗತವಾದ ಮತ್ತು ಅಪ್ರಾಸಂಗಿಕವಾದ ಆ ಮಾತನ್ನು ಹೇಳಿದೊಡನೆಯೇ ರಾಜನು ಕೇಕೇಯಿಯ ಮಾತನ್ನು ಧಿಕ್ಕರಿಸಿದನು. ಎಲ್ಲ ಜನರೂ ಅವಳ ಮಾತನ್ನು ಕೇಳಿ ನಾಚಿಕೆಗೊಂಡರು. ಆದರೆ ಕೈಕೇಯಿಯು ರಾಜನು ಧಿಕ್ಕರಿಸಿದುದನ್ನಾಗಲೀ ಜನರು ತನ್ನ ಮಾತನ್ನು ಕೇಳಿ ನಾಚಿಕೆ ಪಟ್ಟುದನ್ನಾಗಲೀ ಪರಿಗಣಿಸಲಿಲ್ಲ. ಆಗ ಅಲ್ಲಿಯೇ ಕುಳಿತ್ತಿದ್ದ, ವೃದ್ಧನಾದ,

---

ಬಹಳ ಸ್ಪಷ್ಟವಾಗಿ ಕಾಣಿಸಿದೆ. ಮೊಸರಿನ ಸಾರಕ್ಕೆ 'ಮಣ್ಡಃ' –ಎಂದು ಹೆಸರು. ಹತ್ತಾರು ದಿನಗಳ ಹಿಂದಿನ ಹುಳಿಮಜ್ಜಿಗೆಯ ವಾಸನೆಯಿಂದ ಕೂಡಿರುವ ಹೆಂಡವು ಬಹುಸಾರಯುಕ್ತವಾದುದೆಂದು ಹೆಂಡಕುಡಿಯುವವರಿಂದ ಪರಿಗ್ರಾಹ್ಯವಾಗಿದೆ. ಸಾರವನ್ನೇ ತೆಗೆದುಬಿಟ್ಟರೆ ಆ ಹೆಂಡವು ನಿಸ್ಸಾರವೂ, ನಿರಾಸ್ವಾದ್ಯವೂ ಆಗುತ್ತದೆ. ಹೆಂಡವೆಂಬ ಹೆಸರಿನ ನೀರು ಮಾತ್ರ ಉಳಿಯುತ್ತದೆ. ಅದರಂತಾಗುವ ಈ ಕೋಸಲದೇಶವನ್ನು ಭರತನು ಆಳಲಾರನು– ಎಂಬುದು ಕೈಕೇಯಿಯ ಅಭಿಪ್ರಾಯವಾಗಿದೆ.

ಅಕುಟಿಲನಾದ, ರಾಜನಿಗೆ ಬಹಳ ಪ್ರಿಯನಾದ ಸಿದ್ಧಾರ್ಥನೆಂಬ ಹೆಸರಿನ ಮಹಾಮಂತ್ರಿಯು ಕೇಕೇಯಿಗೆ ಹೇಳಿದನು :

"ಕೈಕೇಯಿ! ಅಸಮಂಜನಿಗೂ-ಶ್ರೀರಾಮನಿಗೂ ಯಾವ ಹೋಲಿಕೆ ಯಿದೆ? ದುರ್ಮತಿಯಾದ ಅಸಮಂಜನು ಬೀದಿಯಲ್ಲಾಡುತ್ತಿದ್ದ ಮಕ್ಕಳ ನ್ನೆತ್ತಿಕೊಂಡು ಹೋಗಿ ಸರಯೂನದಿಯಲ್ಲಿ ಎಸೆದು ಆದರಿಂದಲೇ ಆನಂದಿ ಸುತ್ತಿದ್ದನು. ರಾಜಕುಮಾರನ ಆ ಕ್ರೂರವರ್ತನೆಯನ್ನು ಕಂಡು ಕ್ರುದ್ಧರಾದ ನಾಗರಿಕರು-'ಅಸಮಞ್ಜಂ ವೃಣೀಷ್ವೈಕಮಸ್ಮಾನ್ವಾ ರಾಷ್ಟ್ರವರ್ಧನ ॥ 'ರಾಷ್ಟ್ರವರ್ಧನನೇ! ನೀನು ನಿನ್ನ ರಾಜ್ಯದಲ್ಲಿ ಅಸಮಂಜನೊಬ್ಬನನ್ನಾದರೂ ಇಟ್ಟುಕೊಳ್ಳಬಹುದು. ನಮ್ಮನ್ನಾದರೂ ಇಟ್ಟುಕೊಳ್ಳಬಹುದು. ಪ್ರಜೆಗಳು ಮತ್ತು ಅಸಮಂಜ-ಒಟ್ಟಾಗಿರಲಂತೂ ಸಾಧ್ಯವಾಗುವುದಿಲ್ಲ'-ಎಂದು ಹೇಳಿದರು.

ಪ್ರಜೆಗಳ ಆ ಮಾತನ್ನು ಕೇಳಿ ಸಗರನು ಯಾವ ಕಾರಣದಿಂದ ನಿಮಗೆ ಈ ಭಯವುಂಟಾಗಿರುವುದೆಂದು ಅವರನ್ನು ಪ್ರಶ್ನಿಸಿದನು. ಪ್ರಜೆಗಳೂ ಅವನ ಮಾತಿಗೆ ಯಥಾವತ್ತಾಗಿ ಉತ್ತರಿಸಿದರು :

ಕ್ರೀಡತಸ್ತ್ವೇಷ ನಃ ಪುತ್ರಾನ್ಬಾಲಾನುದ್ಭ್ರಾನ್ತಚೇತನಃ।
ಸರಯ್ವಾಂ ಪ್ರಕ್ಷಿಪನ್ಮೌರ್ಖ್ಯಾದತುಲಾಂ ಪ್ರೀತಿಮಶ್ನುತೇ ॥೨೨॥

"ಸ್ಥಿಮಿತಬುದ್ಧಿಯಿಲ್ಲದ ಈ ನಿನ್ನ ಮಗನು ನಮ್ಮ ಮಕ್ಕಳು ಆಟ ವಾಡುತ್ತಾ ನಲಿಯುತ್ತಿರುವಾಗ-ಅವರನ್ನು ಒಬ್ಬೊಬ್ಬರನ್ನಾಗಿ ಎತ್ತಿಕೊಂಡು ಮೂರ್ಖತನದಿಂದ ಸರಯೂನದಿಯಲ್ಲಿ ಹಾಕಿಬಿಡುತ್ತಾನೆ. ಅವರು ಮುಳುಗುವುದನ್ನು ನೋಡುತ್ತಾ ಬಹಳ ಸಂತೋಷಪಡುತ್ತಾನೆ."

ರಾಜನು ಪ್ರಜೆಗಳ ಮಾತನ್ನು ಕೇಳಿ ಅವರೆಲ್ಲರಿಗೂ ಪ್ರಿಯವನ್ನುಂಟು ಮಾಡುವ ಇಚ್ಛೆಯಿಂದ ಪ್ರಜೆಗಳಿಗೆ ಅಹಿತನಾದ ತನ್ನ ಮಗನನ್ನು ಪರಿ ತ್ಯಾಗಮಾಡಿದನು. 'ಅಸಮಂಜನನ್ನು ಪತ್ನಿಯೊಡನೆ ರಥದಲ್ಲಿ ಕುಳ್ಳಿರಿಸಿ ಜೀವಿಕೆಗೆ ಬೇಕಾದ ಉಪಕರಣಗಳೊಡನೆ ಹೊರಗಟ್ಟಿರಿ. ಬದುಕಿರುವ ವರೆಗೂ ಅರಣ್ಯದಲ್ಲಿಯೇ ವಾಸಮಾಡಿಕೊಂಡಿರಲಿ'-ಎಂದು ಸೇವಕರಿಗೆ ಆಜ್ಞೆಮಾಡಿದನು.

ಅಸಮಂಜನಾದರೋ ಹೀಗೆ ರಾಜ್ಯದಿಂದ ಹೊರದೂಡಲ್ಪಟ್ಟವನಾಗಿ ಗುದ್ದಲಿ-ಮಂಕರಿಗಳನ್ನು ಹಿಡಿದುಕೊಂಡು ಆಹಾರಕ್ಕಾಗಿ ಗಿರಿ-ದುರ್ಗಗಳಲ್ಲಿ ಅಲೆದಾಡುತ್ತಿದ್ದನು. ಪಾಪಕರ್ಮಮಾಡಿದವನಂತೆ ಅವನು ದಿಕ್ಕು-ದಿಕ್ಕುಗಳಲ್ಲಿಯೂ ಸಂಚರಿಸುತ್ತಿದ್ದನು. ಹೀಗೆ ಅಲೆದಾಡುತ್ತಾ ತನ್ನ ಪೂರ್ಣ ಜೀವನವನ್ನೂ ಅವನು ಅರಣ್ಯದಲ್ಲಿಯೇ ಕಳೆದನು.

ಕೈಕೇಯಿ! ಸುಧಾರ್ಮಿಕನಾದ ಸಗರನು ಪಾಪಕಾರ್ಯಮಾಡಿದ ಕಾರಣದಿಂದಾಗಿ ಮಗನನ್ನು ಅರಣ್ಯಕ್ಕೆ ಕಳುಹಿಸಿದನು. ಆದರೆ ಶ್ರೀರಾಮನು ಅರಣ್ಯಕ್ಕೆ ಕಳುಹಿಸುವಂತಹ ಯಾವ ಪಾಪಕಾರ್ಯವನ್ನು ಮಾಡಿದ್ದಾನೆ? ರಾಘವನಲ್ಲಿ ಒಂದು ದುರ್ಗುಣವನ್ನಾದರೂ ನಾವು ಕಾಣೆವು. ಶಶಾಂಕನಲ್ಲಿ ಕಲ್ಮಷವು ಹೇಗಿಲ್ಲವೋ–ಹಾಗೆಯೇ ಶ್ರೀರಾಮನಲ್ಲಿ ಯಾವ ದೋಷವೂ ಇಲ್ಲ. ದೇವಿ! ಒಂದು ವೇಳೆ ನೀನು ಶ್ರೀರಾಮನಲ್ಲಿ ಯಾವುದಾದರೂ ದೋಷವನ್ನು ಕಂಡಿರುವೆಯಾದರೆ ಅದನ್ನಾದರೂ ಈಗಲೇ ಯಥಾವತ್ತಾಗಿ ಹೇಳು. ಹಾಗೇನಾದರೂ ದೋಷವಿರುವುದಾದಲ್ಲಿ ಶ್ರೀರಾಮನನ್ನು ಅರಣ್ಯಕ್ಕೆ ಧಾರಾಳವಾಗಿ ಕಳುಹಿಸು.

ಅದುಷ್ಟಸ್ಯ ಹಿ ಸಂತ್ಯಾಗಃ ಸತ್ಪಥೇ ನಿರತಸ್ಯ ಚ ।
ನಿರ್ದಹೇದಪಿ ಶಕ್ರಸ್ಯ ದ್ಯುತಿಂ ಧರ್ಮನಿರೋಧನಾತ್ ॥೨೯॥

ಸನ್ಮಾರ್ಗದಲ್ಲಿ ನಿರತನಾಗಿರುವ ಸತ್ಪುರುಷನ ಪರಿತ್ಯಾಗವು–ಧರ್ಮಕ್ಕೆ ಪ್ರತಿಬಂಧಕವಾದ ಕಾರ್ಯವಾಗುವುದರಿಂದ–ಇಂದ್ರನ ಕಾಂತಿಯನ್ನೂ ದಹಿಸಿಬಿಡುತ್ತದೆ. ಶ್ರೀರಾಮನ ರಾಜ್ಯಶ್ರೀಯನ್ನು ಹಾಳುಮಾಡುವ ಪ್ರಯತ್ನವನ್ನು ಇನ್ನಾದರೂ ನಿಲ್ಲಿಸು. ಲೋಕಾಪವಾದದಿಂದಲೂ ನಿನ್ನನ್ನು ರಕ್ಷಿಸಿಕೊಳ್ಳುವ ಅಗತ್ಯವಿದೆ.”

ಮಹಾಮಂತ್ರಿಯಾದ ಸಿದ್ಧಾರ್ಥನ ಆ ಮಾತನ್ನು ಕೇಳಿಯೂ ಕೈಕೇಯಿಯ ಮನಸ್ಸು ಸ್ವಲ್ಪವಾದರೂ ಬದಲಾಯಿಸದೇ ಇರುವುದನ್ನು ಗಮನಿಸಿ ಬಹಳ ಬಳಲಿದ ಧ್ವನಿಯಿಂದ ಕೂಡಿದ್ದ ರಾಜನು ಶೋಕದಿಂದ ಗದ್ಗದಿತವಾದ ಮಾತಿನಿಂದ ಕೈಕೇಯಿಗೆ ಹೇಳಿದನು :

ಏತದ್ವಚೋ ನೇಚ್ಛಸಿ ಪಾಪವೃತ್ತೇ
ಹಿತಂ ನ ಜಾನಾಸಿ ಮಮಾತ್ಮನೋ ವಾ ।
ಆಸ್ಥಾಯ ಮಾರ್ಗಂ ಕೃಪಣಂ ಕುಚೇಷ್ಟಾ
ಚೇಷ್ಟಾ ಹಿ ತೇ ಸಾಧುಪಥಾದಪೇತಾ ॥೩೨॥

"ಪಾಪಾಚಾರಳೇ! ಈ ಮಹಾಮಂತ್ರಿಯ ಮಾತನ್ನೂ ನೀನು ಕೇಳುವ ಇಚ್ಛೆಯುಳ್ಳವಳಾಗಿಲ್ಲ. ನನಗೆ ಹಿತಕರವಾದುದು ಯಾವುದೆಂಬುದನ್ನಾಗಲೀ, ನಿನಗೆ ಹಿತಕರವಾದುದು ಯಾವುದೆಂಬುದನ್ನಾಗಲೀ–ನೀನು ತಿಳಿದಿಲ್ಲ. ಕುತ್ಸಿತವಾದ ಕಾರ್ಯವನ್ನು ಮಾಡುತ್ತಿರುವ ನೀನು ಕ್ಷುದ್ರವಾದ ಮಾರ್ಗವನ್ನು ಅವಲಂಬಿಸಿರುವೆ. ನಿನ್ನ ಈ ಕಾರ್ಯವು ಸತ್ಪುರುಷರ ಮಾರ್ಗದಿಂದ ಅತಿದೂರವಾಗಿದೆ.

ರಾಜ್ಯವನ್ನೂ, ಸುಖವನ್ನೂ, ಧನವನ್ನೂ ಪರಿತ್ಯಜಿಸಿ ನಾನೀಗಲೇ ರಾಮನ ಹಿಂದೆಯೇ ಕಾಡಿಗೆ ಹೋಗುತ್ತೇನೆ. ರಾಜನಾದ ಭರತನೊಡನೆ ನೀನು ಈ ರಾಜ್ಯದ ಸುಖೋಪಭೋಗಗಳನ್ನು ಬಹಳ ಕಾಲದವರೆಗೂ ಅನುಭವಿಸಿಕೊಂಡಿರು."

ಮೂವತ್ತಾರನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೩೭ನೆಯ ಸರ್ಗ

ಸೀತಾ-ರಾಮ-ಲಕ್ಷ್ಮಣರು ನಾರುಮಡಿಯನ್ನುಟ್ಟುದು : ಸೀತೆಯು ನಾರುಮಡಿಯನ್ನುಟ್ಟಿದ್ದಕ್ಕೆ ರಾಣೀವಾಸದವರ ದುಃಖ : ವಸಿಷ್ಠರು ಕೈಕೇಯಿಯನ್ನು ನಿಂದಿಸುತ್ತಾ ಸೀತಾದೇವಿಯು ನಾರುಮಡಿಯನ್ನುಡುವುದು ಅನುಚಿತವೆಂದು ಹೇಳಿದುದು

ಮಹಾಮಾತ್ರವಚಃ ಶ್ರುತ್ವಾ ರಾಮೋ ದಶರಥಂ ತದಾ ।
ಅಭ್ಯಭಾಷತ ವಾಕ್ಯಂ ತು ವಿನಯಜ್ಞೋ ವಿನೀತವತ್ ॥೧॥

ಮಹಾಮಂತ್ರಿಯಾದ ಸಿದ್ಧಾರ್ಥನ ಮಾತನ್ನು ಕೇಳಿ ವಿನಯಜ್ಞನಾದ ಶ್ರೀರಾಮನು ವಿನಯಶಾಲಿಯಂತೆ ವಿನಮ್ರವಾಗಿ ತಂದೆಗೆ ಹೇಳಿದನು :

ತ್ಯಕ್ತಭೋಗಸ್ಯ ಮೇ ರಾಜನ್ವನೇ ವನ್ಯೇನ ಜೀವತಃ ।
ಕಿಂ ಕಾರ್ಯಮನುಯಾತ್ರೇಣ ತ್ಯಕ್ತಸಙ್ಗಸ್ಯ ಸರ್ವತಃ ॥೨॥

"ಮಹಾರಾಜ! ಸಕಲಸುಖೋಪಭೋಗಗಳನ್ನೂ ತ್ಯಜಿಸಿಯೇ ಇಲ್ಲಿಂದ ಹೊರಟಿರುವ, ಅರಣ್ಯದಲ್ಲಿ ಸಿಕ್ಕುವ ಗೆಡ್ಡೆ-ಗೆಣಸುಗಳಿಂದಲೇ ಜೀವನಮಾಡುವ, ಸರ್ವಸಂಗಪರಿತ್ಯಾಗಮಾಡಿರುವ ನನಗೆ ನನ್ನನ್ನನುಸರಿಸಿ ಬರುವ ಚತುರಂಗಬಲದಿಂದಾಗಲೀ, ಧನ-ಕನಕ-ವಸ್ತು-ವಾಹನಗಳಿಂದಾಗಲೀ ಯಾವ ಪ್ರಯೋಜನವಿದೆ?

ಯೋ ಹಿ ದತ್ತ್ವಾ ದ್ವಿಪಶ್ರೇಷ್ಠಂ ಕಕ್ಷ್ಯಾಯಾಂ ಕುರುತೇ ಮನಃ ।
ರಜ್ಜುಸ್ನೇಹೇನ ಕಿಂ ತಸ್ಯ ತ್ಯಜತಃ ಕುಞ್ಜರೋತ್ತಮಮ್ ॥೩॥

ಶ್ರೇಷ್ಠವಾದ ಆನೆಯನ್ನೇ ಕೊಟ್ಟನಂತರ ಅದನ್ನು ಕಟ್ಟುವ ಹಗ್ಗಕ್ಕೆ ಯಾವನು ತಾನೇ ಅಪೇಕ್ಷಿಪಡುತ್ತಾನೆ? ಶ್ರೇಷ್ಠವಾದ ಆನೆಯನ್ನೇ ಕೊಟ್ಟವನಿಗೆ ಅದನ್ನು ಕಟ್ಟುವ ಹಗ್ಗದ ಮೇಲೆ ಪ್ರೀತಿಯಿಡುವುದರಿಂದ ಯಾವ ಪ್ರಯೋಜನವಿದೆ? ಹಾಗೆಯೇ ಸಾಮ್ರಾಜ್ಯಲಕ್ಷ್ಮಿಯನ್ನೇ ತ್ಯಜಿಸಿ ಹೊರಟಿರುವ ನನಗೆ ಈ ಸೈನ್ಯವು ಏಕೆ ಬೇಕು? ಇವುಗಳ ಮೇಲೆ ನನಗೆ ಯಾವ ವಿಧವಾದ ಆಸಕ್ತಿಯೂ ಇಲ್ಲ. ರಾಜ್ಯಕ್ಕೆ ಸಂಬಂಧಿಸಿದ ಈ ಎಲ್ಲ ವಸ್ತು-ವಾಹನಗಳನ್ನೂ ಭರತನು ಪಡೆದುಕೊಳ್ಳಲು ನನ್ನ ಅನುಮತಿಯಿದೆ. ನನಗೆ ಈಗ ಬೇಕಾಗಿರುವ ನಾರುಮಡಿಯನ್ನು ಸೇವಕರು ತರಲಿ. ಹದಿನಾಲ್ಕು ವರ್ಷಗಳು ಅರಣ್ಯದಲ್ಲಿ ವಾಸಮಾಡಲಿರುವ ನನಗೆ ಗುದ್ದಲಿ-ಮಂಕರಿಗಳನ್ನು ತನ್ನಿರಿ."

ಶ್ರೀರಾಮನು ಹೀಗೆ ಹೇಳಿದೊಡನೆಯೇ ಆ ಜನಸಮೂಹದಲ್ಲಿ ಕೈಕೇಯಿಯು ಸ್ವಲ್ಪವೂ ನಾಚಿಕೆಯೇ ಇಲ್ಲದವಳಾಗಿ ನಾರುಮಡಿಯನ್ನು ತಾನೇ ತಂದು ಶ್ರೀರಾಮನಿಗೆ ಉಡಲು ಹೇಳಿ ಕೊಟ್ಟಳು. ಪುರುಷಶ್ರೇಷ್ಠನಾದ ಶ್ರೀರಾಮನು ಕೈಕೇಯಿಯಿಂದ ನಾರುಬಟ್ಟೆಗಳನ್ನು ಪಡೆದುಕೊಂಡು ತಾನುಟ್ಟಿದ್ದ ಬಹುಮೂಲ್ಯವಾದ ಸೂಕ್ಷ್ಮವಸ್ತ್ರಗಳನ್ನು ಬಿಚ್ಚಿಟ್ಟು ಮುನಿ ಯೋಗ್ಯವಾದ ನಾರುಮಡಿಯನ್ನು ಉಟ್ಟುಕೊಂಡನು. 'ಅಯ್ಯೋ! ಎಂತಹ ವಿಪರ್ಯಾಸವಿದು!' ಎಂದು ಎಲ್ಲರೂ ಹೇಳುತ್ತಿರಲು ಲಕ್ಷ್ಮಣನು ಕೂಡ ತಾನುಟ್ಟಿದ್ದ ಬಹುಮೂಲ್ಯವಾದ ವಸ್ತ್ರಗಳನ್ನು ಅಲ್ಲಿಯೇ ಬಿಚ್ಚಿಟ್ಟು ತಂದೆಯ ಎದುರಿನಲ್ಲಿಯೇ ತಾಪಸರಿಗೆ ಯೋಗ್ಯವಾದ ನಾರುಮಡಿಯನ್ನುಟ್ಟನು.

ಯಾವಾಗಲೂ ರೇಷ್ಮೆಯ ವಸ್ತ್ರವನ್ನೇ ಉಡುತ್ತಿದ್ದ ಸೀತಾದೇವಿಯು–ಹೆಣ್ಣು ಜಿಂಕೆಯು ಬಲೆಯನ್ನು ನೋಡಿ ಭಯಪಡುವಂತೆ–ತನಗಾಗಿ ಕೈಕೇಯಿಯು ಸಿದ್ಧಪಡಿಸಿದ್ದ ನಾರುಬಟ್ಟೆಯನ್ನು ನೋಡಿ ಭಯಗೊಂಡಳು. ಶುಭಲಕ್ಷಣ ಸಂಪನ್ನೆಯಾದ ಜಾನಕಿಯು ದುಃಖಿತವಾದ ಮನಸ್ಸಿನಿಂದ ಕೂಡಿದವಳಾಗಿ ನಾಚಿಕೆಪಟ್ಟುಕೊಳ್ಳುತ್ತಾ ದರ್ಭೆಯಿಂದಲೂ, ನಾರಿನಿಂದಲೂ ನಿರ್ಮಿತವಾದ ಬಟ್ಟೆಗಳನ್ನು ಕೈಕೇಯಿಯಿಂದ ತೆಗೆದುಕೊಂಡಳು. ಧರ್ಮಜ್ಞಳಾದ, ಧರ್ಮ ದರ್ಶಿನಿಯಾದ ಸೀತೆಯು ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವಳಾಗಿ ಗಂಧರ್ವರಾಜನಿಗೆ ಸಮಾನನಾದ ಪತಿಯೊಡನೆ ಹೇಳಿದಳು :

"ಆರ್ಯಪುತ್ರ! ಅರಣ್ಯವಾಸಿಗಳಾದ ಋಷಿಪತ್ನಿಯರು ಈ ನಾರುಮಡಿಯನ್ನು ಹೇಗುಡುವರು?"

ಹೀಗೆ ಹೇಳಿ ನಾರುಮಡಿಯನ್ನು ಉಡುವುದರಲ್ಲಿ ಕುಶಲತೆಯಿಲ್ಲದ ಸೀತಾದೇವಿಯು ಭ್ರಾಂತಳಾದಳು. ಎಷ್ಟೇ ಪ್ರಯತ್ನಿಸಿದರೂ ಅದನ್ನು ಉಡಲು ಸಾಧ್ಯವಾಗದಿದ್ದ ಕಾರಣ ಒಂದು ವಸ್ತ್ರವನ್ನು ಕುತ್ತಿಗೆಗೆ ಕಟ್ಟಿಕೊಂಡು ಮತ್ತೊಂದನ್ನು ಕೈಯಲ್ಲೇ ಹಿಡಿದುಕೊಂಡು ಸ್ತಬ್ಧಳಾಗಿ ನಾಚಿಕೆಯಿಂದ ನಿಂತುಬಿಟ್ಟಳು. ಧರ್ಮಾತ್ಮರಲ್ಲಿ ಶ್ರೇಷ್ಠನಾದ ಶ್ರೀರಾಮನು ಸೀತಾದೇವಿಯ ಆ ಪರಿಸ್ಥಿತಿಯನ್ನು ನೋಡಿ ಒಡನೆಯೇ ಅವಳ ಬಳಿಗೆ ಹೋಗಿ ಕೈಯಲ್ಲಿ ಹಿಡಿದಿದ್ದ ನಾರುಮಡಿಯನ್ನು ಸೀತೆಯು ಉಟ್ಟಿದ್ದ ರೇಷ್ಮೆಯ ವಸ್ತ್ರದ ಮೇಲೆಯೇ ಬಿಗಿದು ಕಟ್ಟಿದನು. ಶ್ರೀರಾಮನು ನಾರುಬಟ್ಟೆಯನ್ನು ಸೀತಾದೇವಿಯ ಸೊಂಟಕ್ಕೆ ಬಿಗಿಯುತ್ತಿರುವುದನ್ನು ನೋಡಿ ಅಂತಃಪುರ ದಲ್ಲಿದ್ದ ಸ್ತ್ರೀಯರೆಲ್ಲರೂ ಕಂಬನಿಗರೆಯುತ್ತಾ ಅತ್ಯಂತ ಖೇದದಿಂದ ಕೂಡಿದವರಾಗಿ ಮಹಾತೇಜಸ್ವಿಯಾದ ಶ್ರೀರಾಮನಿಗೆ ಹೇಳಿದರು : "ತಂದೆಯ ಆಜ್ಞೆಗೆ ಅನುಸಾರವಾಗಿ ಅರಣ್ಯಕ್ಕೆ ಹೋಗಲಿರುವ ನಿನ್ನ ಜೊತೆಯಲ್ಲಿ ಸೀತಾದೇವಿಯೂ ಅರಣ್ಯಕ್ಕೆ ಹೋಗಬೇಕೆಂದು ಆಜ್ಞೆಯಾಗಿ ರುವುದಿಲ್ಲ. ನಿನ್ನನ್ನು ನಾವು ಪುನಃ ನೋಡುವವರೆಗೆ ಇವಳನ್ನಾದರೂ ನಾವು ನೋಡಿಕೊಂಡಿರುತ್ತೇವೆ. ಈ ನಮ್ಮ ಆಶಯವು ಫಲಿಸುವಂತಾಗಲಿ. ಲಕ್ಷ್ಮಣನೊಡನೆ ನೀನು ಅರಣ್ಯಕ್ಕೆ ಹೋಗು. ಸೀತೆಯು ಇಲ್ಲಿಯೇ ಇರಲಿ.

ಕಲ್ಯಾಣಮಯಿಯಾದ ಇವಳು ತಾಪಸಿಯಂತೆ ಅರಣ್ಯದಲ್ಲಿರಲು ಖಂಡಿತವಾಗಿಯೂ ಅರ್ಹಳಲ್ಲ.



ವತ್ಸ! ನಮ್ಮ ಈ ಒಂದು ಪ್ರಾರ್ಥನೆಯನ್ನಾದರೂ ನಡೆಸಿಕೊಡು. ಸೀತೆಯು ಇಲ್ಲಿಯೇ ಇರಲಿ. ನಿತ್ಯವೂ ಧರ್ಮದಲ್ಲಿಯೇ ನಿಷ್ಠೆಯುಳ್ಳ ನೀನಂತೂ ಇಲ್ಲಿರಲು ಈಗ ಇಚ್ಛಿಪಡುತ್ತಿಲ್ಲ. ಆದುದರಿಂದ ಸೀತೆಯಾದರೂ ನಮ್ಮ ಜೊತೆಯಲ್ಲಿರಲಿ."

ಅಂತಃಪುರದ ಸ್ತ್ರೀಯರ ಈ ವಿಧವಾದ ಮಾತುಗಳನ್ನು ಕೇಳುತ್ತಿದ್ದರೂ ಶ್ರೀರಾಮನು ತನಗೆ ಅನುರೂಪವಾದ ಸೌಶೀಲ್ಯಾದಿ ಗುಣಗಳಿಂದ ಸಂಪನ್ನೆಯಾಗಿದ್ದ ಸೀತೆಗೆ ನಾರುಮಡಿಯನ್ನು ಉಡಿಸಿಯೇಬಿಟ್ಟನು. ಶ್ರೀರಾಮನು ಸೀತಾದೇವಿಗೆ ವಲ್ಕಲವನ್ನು ಉಡಿಸಿದ ದೃಶ್ಯವನ್ನು ನೋಡಿ

ಬಹಳ ದುಃಖಿತರಾದ, ಗುರುಗಳಾದ ವಸಿಷ್ಠರು ಕಣ್ಣೀರಿಡುತ್ತಾ ನಾರುಮಡಿಯನ್ನುಡದಂತೆ ಸೀತಾದೇವಿಗೆ ಹೇಳಿ, ಕೈಕೇಯಿಗೆ ಹೇಳಿದರು :

ಅತಿಪ್ರವೃತ್ತೇ ದುರ್ಮೇಧೇ ಕೈಕೇಯಿ ಕುಲಪಾಂಸನಿ ।
ವಞ್ಚಯಿತ್ವಾ ತು ರಾಜಾನಂ ನ ಪ್ರಮಾಣೇಽವತಿಷ್ಠಸೇ ॥೨೨॥

"ಎಲ್ಲೆಮೀರಿ ನಡೆಯುವವಳೇ! ದುಷ್ಟಬುದ್ಧಿಯವಳೇ! ಕುಲಕಂಟಕಳೇ! ಕೈಕೇಯಿ! ರಾಜನನ್ನು ವಂಚಿಸಿ ವರಗಳನ್ನು ಪಡೆದುದೇ ಅಲ್ಲದೇ ಆ ವರಗಳ ಮರ್ಯಾದೆಯನ್ನೂ ಮೀರಿ ಇನ್ನೂ ಹೆಚ್ಚಿನದನ್ನು ಅಪೇಕ್ಷಿಸುತ್ತಿರುವೆ. ಇದು ಸರಿಯಲ್ಲ.

ನಡತೆಗೆಟ್ಟವಳೇ! ಸೀತೆಯು ಕಾಡಿಗೆ ಹೋಗಬೇಕಾದ ಪ್ರಮೇಯ ವಿಲ್ಲ. ಅವಳು ಇಲ್ಲಿಯೇ ಇದ್ದು ಸಿಂಹಾಸನಾರೂಢಳಾಗಿ ಶ್ರೀರಾಮನ ಕಾರ್ಯವನ್ನು (ರಾಜ್ಯಪಾಲನೆಯನ್ನು) ನಿರ್ವಹಿಸುತ್ತಾಳೆ.

ಆತ್ಮಾ ಹಿ ದಾರಾಃ ಸರ್ವೇಷಾಂ ದಾರಸಂಗ್ರಹವರ್ತಿನಾಮ್ ।
ಆತ್ಮೇಯಮಿತಿ ರಾಮಸ್ಯ ಪಾಲಯಿಷ್ಯತಿ ಮೇದಿನೀಮ್ ॥೨೪॥

ಗೃಹಸ್ಥಾಶ್ರಮಿಗಳೆಲ್ಲರಿಗೂ ಪತ್ನಿಯೇ ಆತ್ಮಸ್ವರೂಪಳು. ಆದುದರಿಂದ ಸೀತಾದೇವಿಯು ಶ್ರೀರಾಮನ ಆತ್ಮಸ್ವರೂಪಳು. ಈ ಕಾರಣದಿಂದ ರಾಮನಿಗೆ ಪ್ರತಿನಿಧಿಯಾಗಿ ಸೀತೆಯೇ ಈಗ ರಾಜ್ಯವಾಳುತ್ತಾಳೆ.*

ಒಂದು ವೇಳೆ ವೈದೇಹಿಯು ಶ್ರೀರಾಮನೊಡನೆ ಅರಣ್ಯಕ್ಕೆ ಹೊರಟುಹೋದರೆ ನಾವೆಲ್ಲರೂ ಅವಳನ್ನು ಅನುಸರಿಸಿ ಹೊರಟುಹೋಗುತ್ತೇವೆ. ಅಷ್ಟು ಮಾತ್ರವಲ್ಲ. ಅಯೋಧ್ಯೆಗೆ ಅಯೋಧ್ಯೆಯೇ ರಾಮನ ಹಿಂದೆ ಹೊರಟುಹೋಗುತ್ತದೆ. ಪತ್ನೀಸಮೇತನಾದ ಶ್ರೀರಾಮನಿರುವೆಡೆಗೆ ಅಂತಃಪುರರಕ್ಷಕರೂ, ರಾಷ್ಟ್ರದ ಎಲ್ಲೆಯನ್ನು ರಕ್ಷಿಸುವ ದಂಡನಾಯಕರೂ ಹೊರಟುಹೋಗುತ್ತಾರೆ. ದಾಸ-ದಾಸಿಯರು, ಧನ-ಧಾನ್ಯಸಮೃದ್ಧವಾದ ರಾಷ್ಟ್ರ, ಚತುರಂಗಬಲಯುಕ್ತವಾದ ಈ ಅಯೋಧ್ಯಾಪಟ್ಟಣ–ಎಲ್ಲವೂ ಶ್ರೀರಾಮನನ್ನೇ ಅನುಸರಿಸಿ ಕಾಡಿಗೆ ಹೊರಟುಹೋಗುತ್ತದೆ. 'ಯಾರು

---

* ಅರ್ಧೋ ವಾ ಏಷ ಆತ್ಮನೋ ಯತ್ಪತ್ನೀ = ಪತ್ನಿಯು ಪತಿಯ ಆತ್ಮನ ಅರ್ಧಭಾಗವಾಗಿರುವವಳು ಎಂಬ ಶ್ರುತಿವಚನವಿದೆ.

ಎಲ್ಲಾದರೂ ಹೋಗಲಿ ; ನನ್ನ ಮಗ ಭರತನಿಗೆ ಪಟ್ಟಾಭಿಷೇಕವಾದರೆ ಸಾಕು' ಎಂದು ನೀನು ಭಾವಿಸಿರಬಹುದು.

ಭರತಶ್ಚ ಸಶತ್ರುಘ್ನಶ್ಚೀರವಾಸಾ ವನೇಚರಃ ।
ವನೇ ವಸನ್ತಂ ಕಾಕುತ್ಸ್ಥಮನುವತ್ಸ್ಯತಿ ಪೂರ್ವಜಮ್ ॥೨೮॥

ಭರತನೂ ಶತ್ರುಘ್ನನೊಡಗೂಡಿ, ನಾರುಮಡಿಯನ್ನುಟ್ಟು ವನಚರ ನಾಗಿ ಅರಣ್ಯದಲ್ಲಿ ವಾಸಮಾಡುತ್ತಿರುವ ಅಣ್ಣನನ್ನೇ ಅನುಸರಿಸಿ ಕಾಡಿ ನಲ್ಲಿಯೇ ವಾಸಮಾಡುತ್ತಾನೆ. ಅನಂತರ ಶೂನ್ಯವಾದ, ನಿರ್ಜನವಾದ (ಅರಣ್ಯಸದೃಶ್ಯವಾದ) ಈ ಪೃಥ್ವಿಯನ್ನು ದುರಾಚಾರಳಾದ, ಪ್ರಜೆಗಳಿಗೆ ಅಹಿತವನ್ನುಂಟುಮಾಡುವುದರಲ್ಲಿಯೇ ಸ್ಥಿರವಾದ ಬುದ್ಧಿಯುಳ್ಳ ನೀನು ಮರಗಳೊಡನೆ ಏಕಾಕಿಯಾಗಿ ಆಳುವೆಯಂತೆ.

ನ ಹಿ ತದ್ಭವಿತಾ ರಾಷ್ಟ್ರಂ ಯತ್ರ ರಾಮೋ ನ ಭೂಪತಿಃ ।
ತದ್ವನಂ ಭವಿತಾ ರಾಷ್ಟ್ರಂ ಯತ್ರ ರಾಮೋ ನಿವತ್ಸ್ಯತಿ ॥೨೯॥

ಯಾವ ರಾಷ್ಟ್ರದಲ್ಲಿ ಶ್ರೀರಾಮನು ಭೂಪತಿಯಾಗಿ ಇರುವುದಿಲ್ಲವೋ ಅದು ರಾಷ್ಟವಾಗಿ ಉಳಿಯುವುದಿಲ್ಲ. (ಅರಣ್ಯಕ್ಕೆ ಸಮಾನವಾಗುತ್ತದೆ) ಶ್ರೀರಾಮನು ಯಾವ ಅರಣ್ಯದಲ್ಲಿ ವಾಸಮಾಡುವನೋ ಅದೇ ರಾಷ್ಟ್ರ ವಾಗುತ್ತದೆ.

ನ ಹ್ಯದತ್ತಾಂ ಮಹೀಂ ಪಿತ್ರಾ ಭರತಃ ಶಾಸ್ತುಮಿಚ್ಛತಿ ।
ತ್ವಯಿ ವಾ ಪುತ್ರವದ್ವಸ್ತುಂ ಯದಿ ಜಾತೋ ಮಹೀಪತೇಃ ॥೩೦॥

ನಿಜವಾಗಿಯೂ ಭರತನು ರಾಜನಿಗೆ ಹುಟ್ಟಿದವನೇ ಆಗಿದ್ದರೆ ತಂದೆಯು ಪ್ರೀತಿಪೂರ್ವಕವಾಗಿ ಕೊಡದಿರುವ ರಾಜ್ಯವನ್ನು ಆಳಲು ಖಂಡಿತವಾಗಿಯೂ ಇಚ್ಛಿಸುವುದಿಲ್ಲ. ನಿನ್ನೊಡನೆ ಮಗನಂತಿರಲು ಕೂಡ ಅವನು ಇಚ್ಛಿಸಲಾರನು.

ಯದ್ಯಪಿ ತ್ವಂ ಕ್ಷಿತಿತಲಾದ್ಗಗನಂ ಚೋತ್ಪತಿಷ್ಯಸಿ ।
ಪಿತೃವಂಶಚರಿತ್ರಜ್ಞಃ ಸೋಽನ್ಯಥಾ ನ ಕರಿಷ್ಯತಿ ॥೩೧॥

ನೀನೇನೋ ನಿನ್ನ ಮಗನನ್ನು ಒಪ್ಪಿಸಲು ಭೂಮಿಯಿಂದ ಆಕಾಶಕ್ಕೆ

ನೆಗೆದಾಡಬಹುದು. ನೀನು ತಿಪ್ಪರಲಾಗವನ್ನೇ ಹಾಕಿದರೂ ಪಿತೃವಂಶದ ಸಚ್ಚರಿತ್ರೆಯನ್ನು ಚೆನ್ನಾಗಿ ಬಲ್ಲ ಭರತನು ನಾನು ಹೇಳಿದಂತೆ ಮಾಡುವನೇ ಹೊರತು ನಿನ್ನ ಬಯಕೆಯಂತೆ ನಡೆದುಕೊಳ್ಳುವುದಿಲ್ಲ.

ಪುತ್ರಪ್ರಿಯಳಾದ ನೀನು ನಿಜವಾಗಿಯೂ ನಿನ್ನ ಮಗನಿಗೆ ಅಪ್ರಿಯ ಕಾರ್ಯವನ್ನೇ ಮಾಡಿರುವೆ. ಲೋಕೇ ಹಿ ನ ಸ ವಿದ್ಯೇತ ಯೋ ನ ರಾಮಮನುವ್ರತಃ । ಶ್ರೀರಾಮನನ್ನು ಅನುಸರಿಸಿ ನಡೆಯದಿರುವವನು ಈ ಲೋಕದಲ್ಲಿಯೇ ಯಾವನೊಬ್ಬನೂ ಇರುವುದಿಲ್ಲ.

ಕೈಕೇಯಿ! ಪಶುಗಳೂ, ಮೃಗಗಳೂ, ಸರ್ಪಗಳೂ, ಪಕ್ಷಿಗಳೂ ಶ್ರೀರಾಮನನ್ನು ಅನುಸರಿಸಿ ಹೋಗುವುದನ್ನೂ–ವೃಕ್ಷಗಳೂ ಶ್ರೀರಾಮನ ಕಡೆಗೇ ವಾಲುವುದನ್ನೂ ನೀನು ಈಗಲೇ ಕಾಣಲಿರುವೆ.

ಆದುದರಿಂದ, ದೇವಿ! ಸೀತೆಯುಟ್ಟಿರುವ ನಾರುಮಡಿಯನ್ನು ತೆಗೆದು ಹಾಕಿ, ನಿನ್ನ ಸೊಸೆಗೆ ಉತ್ತಮವಾದ ಆಭರಣಗಳನ್ನು ಕೊಟ್ಟು ಕಳುಹಿಸು. ಸೀತೆಯೂ ನಾರುಮಡಿಯನ್ನುಡಬೇಕೆಂಬ ನಿಬಂಧನೆಯೇನೂ ಇರುವುದಿಲ್ಲ." ಹೀಗೆ ಹೇಳಿ ವಸಿಷ್ಠರು ಸೀತೆಯು ನಾರುಮಡಿಯನ್ನುಡುವುದನ್ನು ತಡೆಯುತ್ತಾ ಪುನಃ ಹೇಳಿದರು :

"ಕೇಕಯರಾಜನ ಮಗಳೇ! ನೀನು ರಾಮನೊಬ್ಬನಿಗೆ ವನವಾಸವಾಗಬೇಕೆನ್ನುವ ವರವನ್ನು ಬೇಡಿರುವೆ. ಸೀತೆಯೊಡನೆ ಹೋಗಬೇಕೆಂದೇನೂ ಕೇಳಲಿಲ್ಲ. ಆದರೆ ಸೀತೆಯು ಸ್ವೇಚ್ಛೆಯಿಂದಲೇ ಅರಣ್ಯಕ್ಕೆ ಹೋಗುತ್ತಿದ್ದಾಳೆ. ನಿತ್ಯವೂ ಅಲಂಕರಣಕ್ಕೆ ಯೋಗ್ಯಳಾದ ಈಕೆಯು ಸರ್ವಾಲಂಕಾರಭೂಷಿತೆಯಾಗಿಯೇ ರಾಘವನೊಡನೆ ಅರಣ್ಯದಲ್ಲಿ ವಾಸ ಮಾಡಲಿ. ಶ್ರೇಷ್ಠವಾದ ವಾಹನಗಳಿಂದಲೂ, ಪರಿಚಾರಕರಿಂದಲೂ, ಸಕಲವಿಧವಾದ ನಯನಮನೋಹರವಾದ ಪೀತಾಂಬರಗಳಿಂದಲೂ ಕೂಡಿದವಳಾಗಿ ರಾಜಪುತ್ರಿಯಾದ ಸೀತಾದೇವಿಯು ಶ್ರೀರಾಮನೊಡನೆ ಅರಣ್ಯಕ್ಕೆ ಹೋಗಲಿ. ರಾಜನಿಂದ ವರಪಡೆದ ಕಾಲದಲ್ಲಿ ನೀನು ಶ್ರೀರಾಮನೊಡನೆ ಸೀತೆಯೂ ಹೋಗಬೇಕೆಂಬ ವರವನ್ನೇನೂ ಪಡೆದುಕೊಳ್ಳಲಿಲ್ಲ."

ವಿಪ್ರಶ್ರೇಷ್ಠರಾದ, ಅಪ್ರತಿಮವಾದ ಪ್ರಭಾವವುಳ್ಳ, ರಾಜಗುರುಗಳಾದ ವಸಿಷ್ಠರು ಹೀಗೆ ಹೇಳುತ್ತಿದ್ದರೂ–ಪ್ರಿಯಪತಿಗೆ ಸದೃಶಳಾಗಿರಬೇಕೆಂಬ ಅಭಿಲಾಷೆಯಿಂದ ಸೀತಾದೇವಿಯು ನಾರುಮಡಿಯನ್ನುಡುವ ನಿಶ್ಚಯವನ್ನು ಬದಲಾಯಿಸಲಿಲ್ಲ.

ಇ೭ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ಇ೮ನೆಯ ಸರ್ಗ

ಸೀತೆಯು ನಾರುಮಡಿಯನ್ನುಡುವುದು ಅನುಚಿತವೆಂದು ದಶರಥನೂ ಹೇಳಿ ಕೈಕೇಯಿಯನ್ನು ನಿಂದಿಸಿದುದು : ಕೌಸಲ್ಯೆಯ ಮೇಲೆ ಕೃಪಾದೃಷ್ಟಿಯನ್ನಿಡುವಂತೆ ಶ್ರೀರಾಮನು ತಂದೆಯನ್ನು ಕೇಳಿಕೊಂಡುದು

ತಸ್ಯಾಂ ಚೀರಂ ವಸಾನಾಯಾಂ ನಾಥವತ್ಯಾಮನಾಥವತ್ ।
ಪ್ರಚುಕ್ರೋಶ ಜನಃ ಸರ್ವೋ ಧಿಕ್ ತ್ವಾಂ ದಶರಥಂ ತ್ವಿತಿ ॥೧॥

ನಾಥನಿದ್ದರೂ ಅನಾಥಳಂತೆ ನಾರುಮಡಿಯನ್ನುಡುತ್ತಿದ್ದ ಸೀತಾದೇವಿಯನ್ನು ಕಂಡು ಎಲ್ಲ ಜನರೂ–'ದಶರಥನಿಗೆ ಧಿಕ್ಕಾರ!'–ಎಂದು ಕೂಗಿಕೊಂಡರು.

ತನ್ನನ್ನು ಧಿಕ್ಕರಿಸುತ್ತಿದ್ದ ಜನರ ಆಕ್ರೋಶವನ್ನು ಕೇಳಿ ಅತಿದುಃಖಿತನಾದ ದಶರಥನು ಜೀವಿತದಲ್ಲಿಯೂ, ಧರ್ಮದಲ್ಲಿಯೂ, ಯಶಸ್ಸಿನಲ್ಲಿಯೂ ಆಸಕ್ತಿಯನ್ನೇ ಕಳೆದುಕೊಂಡನು. ಬಿಸಿಯಾಗಿ ನಿಟ್ಟುಸಿರುಬಿಡುತ್ತಾ ಭಾರ್ಯೆಗೆ ಹೇಳಿದನು :

"ಕೈಕೇಯಿ! ಕುಶ-ಚೀರವಸ್ತ್ರಗಳನ್ನುಟ್ಟು ಸೀತೆಯು ಕಾಡಿಗೆ ಹೋಗುವುದು ಖಂಡಿತವಾಗಿಯೂ ಉಚಿತವಲ್ಲ. ಸುಕುಮಾರಿಯೂ, ಬಾಲೆಯೂ, ಸುಖವನ್ನು ಅನುಭವಿಸಲು ಯೋಗ್ಯಳೂ ಆಗಿರುವ ಜಾನಕಿಯು ಅರಣ್ಯದಲ್ಲಿ ವಾಸಮಾಡುವುದು ಉಚಿತವಲ್ಲವೆಂದು ನಮ್ಮ ಗುರುಗಳಾದ ವಸಿಷ್ಠರು ಸತ್ಯವಾದ ಮಾತನ್ನೇ ಹೇಳಿರುತ್ತಾರೆ. ಇವಳು ಯಾರಿಗೆ ತಾನೇ ಸ್ವಲ್ಪವಾದರೂ ಅಪಕಾರವನ್ನು ಮಾಡಿರುವಳು? ಪಾತಿವ್ರತ್ಯವೆಂಬ ತಪಸ್ಸಿನಲ್ಲಿಯೇ ನಿರತಳಾಗಿರುವ, ರಾಜಶ್ರೇಷ್ಠನಾದ ಜನಕನ ಪುತ್ರಿಯು ನಾರು

ಮಡಿಯನ್ನುಟ್ಟು ಮೌನಧರಿಸಿರುವ ಸಂನ್ಯಾಸಿಯಂತೆ ಈ ಜನರ ಮಧ್ಯದಲ್ಲಿ ನಿಂತಿದ್ದಾಳೆ. ಇವಳು ಈ ಕೂಡಲೇ ನಾರುಮಡಿಯನ್ನು ಬಿಚ್ಚಿಹಾಕಲಿ. ಇವಳಿಗೂ ನಾರುಮಡಿಯನ್ನುಡಿಸಿ ರಾಮನೊಡನೆ ಕಾಡಿಗೆ ಕಳುಹಿಸುವೆ ನೆಂದು ನಾನು ಯಾವ ಪ್ರತಿಜ್ಞೆಯನ್ನೂ ಯಾರಿಗೂ ಮಾಡಿಕೊಟ್ಟಿಲ್ಲ. ಸರ್ವರತ್ನಗಳಿಂದಲೂ ಸಂಪನ್ನಳಾಗಿ ಸುಖದಿಂದ ತನ್ನ ಪತಿಯೊಡನೆ ಅರಣ್ಯಕ್ಕೆ ಪ್ರಯಾಣಮಾಡಲಿ.

ಬದುಕಿರಲು ಯೋಗ್ಯನಲ್ಲದ ನಾನು ನೀನು ಕೇಳಿದ ವರಗಳನ್ನು ರಾಮನಾಣೆಗೂ ನಡೆಸಿಕೊಡುವುದಾಗಿ ಹೇಳಿ ಅತಿಕ್ರೂರವಾದ ಪ್ರತಿಜ್ಞೆಯನ್ನು ಮಾಡಿಬಿಟ್ಟೆನು. ನೀನೂ ಕೂಡ ಮೂರ್ಖತೆಯಿಂದಾಗಿ ಆ ವರ ಗಳನ್ನು ಪಡೆದುಕೊಂಡೆ. ಹಾಗೆ ಮಾಡಿಕೊಟ್ಟ ಕ್ರೂರಪ್ರತಿಜ್ಞೆಯೇ ಇಂದು– ಬಿದುರಿನ ಹೂವು ಬಿದುರನ್ನೇ ನಾಶಗೊಳಿಸುವಂತೆ–ನನ್ನನ್ನೂ ದಹಿಸುತ್ತಿದೆ.*

ಪಾಪಿಷ್ಠಳೇ! ರಾಮನು ನಿನಗೆ ಅತ್ಯಲ್ಪವಾದ ಅಪಕಾರವನ್ನೇನಾದರೂ ಮಾಡಿರುವನೇ? ಅಧಮಳೇ! ಈಗ ವೈದೇಹಿಯಾದರೂ ನಿನಗೆ ಯಾವ ಅಪರಾಧಮಾಡಿರುವುದನ್ನು ಕಂಡುಕೊಂಡೆ? ಹೆಣ್ಣುಜಿಂಕೆಯಂತೆ ವಿಶಾಲಾಕ್ಷಿಯಾದ, ಮೃದುಸ್ವಭಾವದಿಂದ ಕೂಡಿರುವ, ಪತಿಸೇವೆಯೆಂಬ ತಪಸ್ಸಿನಲ್ಲಿಯೇ ಸರ್ವದಾ ನಿರತಳಾಗಿರುವ ಜನಕನ ಮಗಳು ಇಲ್ಲಿ ನಿನಗೆ ಯಾವ ಅಪಕಾರವನ್ನು ತಾನೇ ಮಾಡಿಯಾಳು? ಪಾಪಿಷ್ಠಳೇ! ಮಹಾ ಘೋರವಾದ ನರಕಪ್ರಾಪ್ತಿಗೆ ರಾಮವಿವಾಸನವೆಂಬ ದುಷ್ಕಾರ್ಯವೊಂದೇ ಸಾಕಾಗಿದೆ. ನೀನು ಪುನಃ ಪುನಃ ಮಾಡುತ್ತಿರುವ ಅತ್ಯಂತಕುತ್ಸಿತವಾದ ಸೀತಾವಿವಾಸನಾದಿ ಪಾಪಕರ್ಮಗಳಿಂದ ಯಾವ ದುಷ್ಫಲವು ಪ್ರಾಪ್ತವಾಗುವು ದೆಂಬುದೇ ತಿಳಿಯದಾಗಿದೆ. ಪಟ್ಟಾಭಿಷೇಕಕ್ಕೆ ಸಿದ್ಧನಾಗಿ ಇಲ್ಲಿಗೆ ಬಂದ ಶ್ರೀರಾಮನಿಗೆ ನಾನು ಕೇಳುತ್ತಿದ್ದಂತೆ ನೀನು ಹೇಳಿದುದಷ್ಟೇ ನನ್ನ ಪ್ರತಿಜ್ಞಾ ವಚನವಾಗಿದೆ. ಇದಕ್ಕೂ ಮೀರಿ ಯಾವ ಪ್ರತಿಜ್ಞಾವಚನವನ್ನೂ ನಾನು ನಿನಗೆ

---

* 'ವೇಣುಮಿವಾತ್ಮಪುಷ್ಪಮ್' ಬಿದುರಿನಲ್ಲಿ ಹೂವು ಬಿಡುವುದೇ ಅಪರೂಪ. ಹಲವಾರು ವರ್ಷಗಳಿಗೊಮ್ಮೆ ಹೂಬಿಡುವುದುಂಟು. ಆದರೆ ಹೂಬಿಟ್ಟೊಡನೆಯೇ ಬಿದುರು ಒಣಗಿಹೋಗುತ್ತದೆ. ಸೃಷ್ಟಿಯ ವೈಚಿತ್ರ್ಯದಲ್ಲಿ ಇದೂ ಒಂದು.

ಮಾಡಿಕೊಟ್ಟಿಲ್ಲ.[1] ನಾನು ಮಾಡಿಕೊಟ್ಟಿರುವ ಪ್ರತಿಜ್ಞಾವಚನವನ್ನು ಅತಿಕ್ರಮಿಸಿ ಸೀತಾದೇವಿಯು ನಾರುಮಡಿಯನ್ನುಟ್ಟು ಅರಣ್ಯಕ್ಕೆ ಹೋಗಬೇಕೆಂದು ಬಯಸಿರುವ ನೀನು ಈ ಪಾಪಕರ್ಮದ ಮೂಲಕವಾಗಿ ನರಕವಾಸವನ್ನೇ ಬಯಸಿರುವಂತಿದೆ."

ಇವೇ ಮುಂತಾಗಿ ಹೇಳಿಕೊಂಡು ದಶರಥರಾಜನು ಗೋಳಿಡು ತ್ತಿದ್ದನು. ಆದರೆ ದುಃಖದ ಪಾರವನ್ನು ಅವನು ಕಾಣಲಿಲ್ಲ. ಪುತ್ರವಿಯೋಗದ ದುಃಖದಲ್ಲಿಯೇ ಮುಳುಗಿಹೋಗಿದ್ದ ರಾಜನು ಮನೋರೋಗಪೀಡಿತ ನಾಗಿ ಮೂರ್ಛೆಗೊಂಡು ಕೆಳಗೆ ಬಿದ್ದನು.[2]

ಮೂರ್ಛೆ ತಿಳಿದನಂತರ ಕೈಕೇಯಿಯೊಡನೆ ಬಹುದುಃಖಿತನಾಗಿ ಮಾತನಾಡುತ್ತಿದ್ದ, ತಲೆಯನ್ನು ತಗ್ಗಿಸಿ ಕುಳಿತಿದ್ದ ದಶರಥನಿಗೆ ಅರಣ್ಯಕ್ಕೆ ಹೊರಡಲು ಸಿದ್ಧನಾಗಿ ನಿಂತಿದ್ದ ಶ್ರೀರಾಮನು ಹೇಳಿದನು :

"ಧಾರ್ಮಿಕನೇ! ಇವಳು ನನ್ನ ತಾಯಿ ; ಯಶಸ್ವಿನಿಯಾದ ಕೌಸಲ್ಯೆ. ವೃದ್ಧೆಯಾಗಿರುವಳು. ಕ್ಷುದ್ರಳಲ್ಲ. ಶೀಲಸಂಪನ್ನಳು. ಯಾವ ಕಾರಣ ದಿಂದಲೂ ನಿನ್ನನ್ನು ನಿಂದಿಸಳು. ವರದನೇ! ಇವಳೀಗ ನನ್ನಿಂದಲೂ ವಿಹೀನಳಾಗುತ್ತಾಳೆ. ಇದರಿಂದಾಗಿ, ಇವಳು ಹಿಂದೆಂದೂ ಅನುಭವಿಸದಿರದ ವ್ಯಸನವನ್ನು ಹೊಂದಿ ಶೋಕಸಾಗರದಲ್ಲಿ ಮುಳುಗಿಹೋಗಿದ್ದಾಳೆ. ಇವಳನ್ನು ಹಿಂದೆ ನೀನು ಸಮ್ಮಾನಿಸುತ್ತಿದ್ದುದಕ್ಕಿಂತಲೂ ಹೆಚ್ಚಾಗಿ ಸಮ್ಮಾನಿಸುವುದು ಯೋಗ್ಯವಾಗಿದೆ.

ನನ್ನನ್ನೇ ಯಾವಾಗಲೂ ಜ್ಞಾಪಿಸಿಕೊಳ್ಳುತ್ತಾ ಪುತ್ರಶೋಕಸಂಕಟಕ್ಕೆ ಈಡಾಗದಂತೆ ಪೂಜ್ಯನಾದ ನೀನು ಇವಳನ್ನೂ ಸಮಾದರಿಸಬೇಕು. ಹಾಗೆ ಮಾಡಿದರೆ ತಪಸ್ವಿನಿಯಾದ ಇವಳು ನಿನ್ನೊಡನೆ ಜೀವಿಸಿಯಾಳು. (ನೀನು ಉದಾಸೀನಮಾಡಿದರೆ ಇವಳು ಬದುಕಿರಲಾರಳು.)

---

[1] ರಾಜನೆದುರಿನಲ್ಲಿ ಕೈಕೇಯಿಯು ಶ್ರೀರಾಮನಿಗೆ ಹೇಳಿದ ಮಾತಿದು : ಸಪ್ತ ಸಪ್ತ ಚ ವರ್ಷಾಣಿ ದಣ್ಡಕಾರಣ್ಯಮಾಶ್ರಿತಃ । ಅಭಿಷೇಕಮಿದಂ ತ್ಯಕ್ತ್ವಾ ಜಟಾಚೀರ ಧರೋ ಭವ ॥ ಭರತಃ ಕೋಸಲಪತೇಃ ಪ್ರಶಾಸ್ತು ವಸುಧಾಮಿಮಾಮ್ ।

[2] ಈ ವಿವರಣೆಯ ೧೩ನೆಯ ಮೂಲಶ್ಲೋಕವು ಕೆಲವು ಪುಸ್ತಕಗಳಲ್ಲಿರುವುದಿಲ್ಲ. ಮುಂದಿನ ಶ್ಲೋಕವನ್ನು ಗಮನಿಸಿದರೆ ಇದು ಪ್ರಕ್ಷಿಪ್ತಶ್ಲೋಕವಾಗಿ ಕಾಣುತ್ತದೆ.

ಮಹೇಂದ್ರಸದೃಶನೇ! ಅರಣ್ಯದಲ್ಲಿರುವ ನನ್ನಲ್ಲಿಯೇ ನೆಟ್ಟ ಮನಸ್ಸುಳ್ಳವಳಾಗಿ, ಶೋಕದಿಂದ ಕೃಶಳಾಗಿ ಜೀವಿತವನ್ನೇ ತೊರೆದು ಯಮಾಲಯವನ್ನು ಸೇರದಂತೆ, ಪುತ್ರಪ್ರಿಯಳಾದ ಈ ನನ್ನ ತಾಯಿಯನ್ನು ಯಥಾಯೋಗ್ಯವಾಗಿ ಸಮ್ಮಾನಿಸಿ ಸಂತೈಸುವುದು ನಿನಗೆ ಉಚಿತವಾಗಿದೆ."

ಇಲನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೩೯ನೆಯ ಸರ್ಗ

ದಶರಥನ ವಿಲಾಪ : ರಾಜನ ಆಜ್ಞೆಯಂತೆ ಸುಮಂತ್ರನು ರಥವನ್ನು ಸಜ್ಜುಗೊಳಿಸಿದುದು : ಕೋಶಾಧ್ಯಕ್ಷನು ಬಹುಮೂಲ್ಯವಾದ ಆಭರಣಗಳನ್ನು ಸೀತೆಗೆ ಕೊಟ್ಟುದು : ಪತಿಯ ಸೇವೆಮಾಡಿಕೊಂಡಿರುವಂತೆ ಸೀತೆಗೆ ಕೌಸಲ್ಯೆಯಿಂದ ಉಪದೇಶ : ಸೀತೆಯ ಸಮ್ಮತಿ : ತಂದೆಯ ವಿಷಯದಲ್ಲಿ ದೋಷವೆಣಿಸಬಾರದೆಂದು ಶ್ರೀರಾಮನಿಂದ ತಾಯಿಗೆ ಹಿತೋಕ್ತಿ: ಶ್ರೀರಾಮನು ಇತರ ಮಾತೆಯರಿಂದಲೂ ವನವಾಸಕ್ಕೆ ಅನುಮತಿಯನ್ನು ಬೇಡಿದುದು

ರಾಮಸ್ಯ ತು ವಚಃ ಶ್ರುತ್ವಾ ಮುನಿವೇಷಧರಂ ಚ ತಮ್ ।
ಸಮೀಕ್ಷ್ಯ ಸಹ ಭಾರ್ಯಾಭೀ ರಾಜಾ ವಿಗತಚೇತನಃ ॥೧॥

ಶ್ರೀರಾಮನ ಮಾತನ್ನು ಕೇಳಿ ಮತ್ತು ಮುನಿವೇಷವನ್ನು ಧರಿಸಿದ್ದ ಅವನನ್ನು ನೋಡಿ ಪತ್ನಿಯರೊಡನಿದ್ದ ರಾಜನು ಕರ್ತವ್ಯಾಕರ್ತವ್ಯಜ್ಞಾನ ಶೂನ್ಯನಾದನು.

ದುಃಖದಿಂದ ಪರಿತಪ್ತನಾದ ರಾಜನು ರಾಘವನನ್ನು ದಿಟ್ಟಿಸಿ ನೋಡಲು ಕೂಡ ಸಮರ್ಥನಾಗಲಿಲ್ಲ. ಖೇದವಾದ ಮನಸ್ಸಿನಿಂದ ಕೂಡಿದ್ದ ಅವನು ಒಮ್ಮೆ ಶ್ರೀರಾಮನನ್ನು ಬಹುಪ್ರಯಾಸದಿಂದ ನೋಡಿದರೂ ಅವನೊಡನೆ ಮಾತನಾಡಲಂತೂ ರಾಜನಿಗೆ ಸಾಧ್ಯವಾಗಲೇ ಇಲ್ಲ. ಅಂತಹ ಸ್ಥಿತಿಯಲ್ಲಿ ರಾಜನು ಮುಹೂರ್ತಕಾಲ ಪ್ರಜ್ಞಾಹೀನನಂತೆಯೇ ಇದ್ದನು. ಬಳಿಕ ರಾಜನು ಅತ್ಯಂತದುಃಖಿತನಾಗಿ ಶ್ರೀರಾಮನನ್ನೇ ಚಿಂತಿಸುತ್ತಾ ಗೋಳಾಡಿದನು.

ಮನ್ಯೇ ಖಲು ಮಯಾ ಪೂರ್ವಂ ವಿವತ್ಸಾ ಬಹವಃ ಕೃತಾಃ ।
ಪ್ರಾಣಿನೋ ಹಿಂಸಿತಾ ವಾಪಿ ತಸ್ಮಾದಿದಮುಪಸ್ಥಿತಮ್ ॥೪॥

"ನಿಜ! ಈ ದುಃಖವು ನನಗೆ ಪ್ರಾಪ್ತವಾಗಬೇಕಾದರೆ ನಾನು ಹಿಂದಿನ ಜನ್ಮದಲ್ಲಿ ಅನೇಕಾನೇಕ ಹಸುಗಳನ್ನು ಕರುಗಳಿಂದ ಬೇರ್ಪಡಿಸಿರಬೇಕು. ಅನೇಕ ಪ್ರಾಣಿಗಳನ್ನು ಹಿಂಸಿಸಿರಬೇಕು. ಆ ಪಾಪಕಾರ್ಯದ ಫಲವಾಗಿಯೇ ಇಂದು ನನಗೆ ಈ ದುಃಸ್ಥಿತಿಯುಂಟಾಗಿದೆ.

ನ ತ್ವೇವಾನಾಗತೇ ಕಾಲೇ ದೇಹಾಚ್ಚ್ಯವತಿ ಜೀವಿತಮ್ ।
ಕೈಕೇಯ್ಯಾ ಕ್ಲಿಶ್ಯಮಾನಸ್ಯ ಮೃತ್ಯುರ್ಮಮ ನ ವಿದ್ಯತೇ ॥೫॥

ಕೈಕೇಯಿಯಿಂದ ನಾನಿಷ್ಟೊಂದು ಕ್ಲೇಶಗಳನ್ನು ಅನುಭವಿಸುತ್ತಿದ್ದರೂ ನನಗೆ ಮರಣವೇ ಇಲ್ಲವಾಗಿದೆ. ಕಾಲವು ಸನ್ನಿಹಿತವಾಗದೇ ಜೀವವು ದೇಹವನ್ನು ಬಿಟ್ಟುಹೋಗುವುದಿಲ್ಲ.

ಯಜ್ಞೇಶ್ವರನಿಗೆ ಸದೃಶನಾದ ನನ್ನ ಮಗನು ಸೂಕ್ಷ್ಮವಸ್ತ್ರವನ್ನು ಬದಿಗಿಟ್ಟು ತಪಸ್ವಿಗಳಿಗೆ ಯೋಗ್ಯವಾದ ನಾರುಮಡಿಯನ್ನುಟ್ಟು ನನ್ನೆದುರಿ ನಲ್ಲಿಯೇ ನಿಂತಿರುವುದನ್ನು ನೋಡುತ್ತಿದ್ದೇನೆ. (ಆದರೂ ನನ್ನ ಪ್ರಾಣ ಪಕ್ಷಿಯು ಹಾರಿಹೋಗುತ್ತಿಲ್ಲ.)

ವಂಚನೆಯ ಮಾರ್ಗವನ್ನಾಶ್ರಯಿಸಿ ಸ್ವಾರ್ಥಸಾಧನೆಯನ್ನು ಮಾಡಿ ಕೊಳ್ಳಲೆತ್ನಿಸಿರುವ ಕೈಕೇಯಿಯೊಬ್ಬಳಿಂದಾಗಿ ಸಕಲಪ್ರಜೆಗಳೂ ರಾಮನ ವಿರಹಕ್ಲೇಶವನ್ನು ಅನುಭವಿಸುತ್ತಿರುವರು."

ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ದಶರಥರಾಜನು ಹೀಗೆ ಹೇಳಿ 'ರಾಮ' ಎಂದು ಒಂದು ಬಾರಿ ಸಂಕಟದಿಂದ ಕೂಗಿದನು. ಮುಂದೆ ಮಾತನಾಡಲು ಅವನಿಗೆ ಸಾಧ್ಯವಾಗಲೇ ಇಲ್ಲ. 'ರಾಮ' ಎಂದೊಡನೆಯೇ ಜ್ಞಾನತಪ್ಪಿದ ರಾಜನು ಕೆಲವು ಕ್ಷಣಗಳು ಕಳೆದನಂತರ ಎಚ್ಚರಗೊಂಡು ಕಂಬನಿಗರೆಯುತ್ತಾ ಸುಮಂತ್ರನಿಗೆ ಹೇಳಿದನು :

"ಸುಮಂತ್ರ! ರಾಜರ ಪ್ರಯಾಣಕ್ಕೆ ಯೋಗ್ಯವಾದ ರಥಕ್ಕೆ ಶ್ರೇಷ್ಠ ವಾದ ಕುದುರೆಗಳನ್ನು ಹೂಡಿಕೊಂಡು ಇಲ್ಲಿಗೆ ಬಾ. ಮಹಾಭಾಗನಾದ

ಶ್ರೀರಾಮನನ್ನು ಇಲ್ಲಿಂದ ಈ ರಾಜ್ಯದ ಗಡಿಯ ಆಚೆಯವರೆಗೂ ಕರೆದುಕೊಂಡು ಹೋಗು.

ಏವಂ ಮನ್ಯೇ ಗುಣವತಾಂ ಗುಣಾನಾಂ ಫಲಮುಚ್ಯತೇ ।
ಪಿತ್ರಾ ಮಾತ್ರಾ ಚ ಯತ್ಸಾಧುರ್ವೀರೋ ನಿರ್ವಾಸ್ಯತೇ ವನಮ್ ॥

ಗುಣವಂತರ ಗುಣಗಳಿಗೆ ಸಿಕ್ಕುವ ಫಲವು ಇಂತಹುದೇ ಎಂದು ನಾನು ಭಾವಿಸುತ್ತೇನೆ. ಸತ್ಪುರುಷನನ್ನೂ, ವೀರನನ್ನೂ ತಂದೆ-ತಾಯಿಗಳೇ ಕಾಡಿಗಟ್ಟುತ್ತಾರೆ.”

ಕಾರ್ಯಗಳನ್ನು ಬಹಳ ಶೀಘ್ರವಾಗಿ ಸಾಧಿಸುವುದರಲ್ಲಿ ಸಮರ್ಥನಾದ ಸುಮಂತ್ರನು ರಾಜನ ಅಭಿಪ್ರಾಯವನ್ನು ತಿಳಿದು ಕುದುರೆಗಳಿಂದ ಸಮಲಂಕೃತವಾದ ರಥವನ್ನು ಸಿದ್ಧಪಡಿಸಿ ದಶರಥನ ಬಳಿಗೆ ಬಂದನು. ಬಳಿಕ ಅವನು ರಾಜಪುತ್ರನಾದ ಶ್ರೀರಾಮನನ್ನು ಸಮೀಪಿಸಿ ಬದ್ಧಾಂಜಲಿಯಾಗಿ, ಚಿನ್ನದ ರೇಕುಗಳಿಂದ ಸಮಲಂಕೃತವಾದ, ಶ್ರೇಷ್ಠವಾದ ರಥವು ಸಿದ್ಧವಾಗಿರುವುದೆಂದು ಶ್ರೀರಾಮನಿಗೆ ಹೇಳಿದನು. ಅನಂತರ ದಶರಥನು–ಯಾವ ದೇಶದಲ್ಲಿ, ಯಾವ ಕಾಲದಲ್ಲಿ ಧನಸಂಗ್ರಹವನ್ನು ಹೇಗೆ ಮಾಡಬೇಕೆಂಬ ರಾಜತಂತ್ರವನ್ನು ತಿಳಿದಿದ್ದ, ಕೋಶಾಗಾರದ ಯಾವ-ಯಾವ ಭಾಗಗಳಲ್ಲಿ ಯಾವ-ಯಾವ ಅನರ್ಘವಸ್ತುಗಳಿವೆಯೆಂಬುದನ್ನು ಖಚಿತವಾಗಿ ತಿಳಿದುಕೊಂಡಿದ್ದ, ಅಂತಃಶುದ್ಧಿ-ಬಹಿಃಶುದ್ಧಿಯುಳ್ಳವನಾಗಿದ್ದ ಧನಾಧ್ಯಕ್ಷನನ್ನು ಅವಸರವಾಗಿ ಕರೆಯಿಸಿ ಹೇಳಿದನು :

“ಧನಾಧ್ಯಕ್ಷನೇ! ವೈದೇಹಿಯು ಹದಿನಾಲ್ಕು ವರ್ಷಗಳವರೆಗೆ ಅರಣ್ಯದಲ್ಲಿರಬೇಕಾಗುವುದೆಂಬ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಅಷ್ಟು ವರ್ಷಗಳಿಗೆ ಸಾಕಾಗುವಷ್ಟು ಸರ್ವಶ್ರೇಷ್ಠವಾದ ಉಡಿಗೆ-ತೊಡಿಗೆಗಳನ್ನೂ, ಆಭರಣಗಳನ್ನೂ ವೈದೇಹಿಗೆ ಕೊಡುವ ಸಲುವಾಗಿ ಒಡನೆಯೇ ತೆಗೆದುಕೊಂಡು ಬಾ.”

ನರೇಂದ್ರನು ಹೀಗೆ ಹೇಳುತ್ತಲೇ ಧನಾಧ್ಯಕ್ಷನು ಕೋಶಾಗಾರಕ್ಕೆ ಹೋಗಿ ರಾಜನು ಹೇಳಿದ್ದ ವಸ್ತ್ರಾಭರಣಗಳೆಲ್ಲವನ್ನೂ ತೆಗೆಸಿಕೊಂಡು

ಬಂದು ಬಹಳ ಬೇಗ ಸೀತಾದೇವಿಗೆ ಒಪ್ಪಿಸಿದನು. ಶೋಭನವಾದ ಜನ್ಮವುಳ್ಳ (ಅಯೋನಿಜೆಯಾದ), ಪತಿಯೊಡನೆ ಅರಣ್ಯಕ್ಕೆ ಹೊರಟು ನಿಂತಿದ್ದ ವೈದೇಹಿಯು ಶುಭಲಕ್ಷಣಗಳನ್ನೊಳಗೊಂಡಿದ್ದ ತನ್ನ ಅಂಗಾಂಗಗಳನ್ನು ಚಿತ್ರ-ವಿಚಿತ್ರವಾದ ಆಭರಣಗಳಿಂದಲೂ, ಶೋಭಾಯಮಾನವಾದ ವಸ್ತ್ರಗಳಿಂದಲೂ ಅಲಂಕರಿಸಿಕೊಂಡಳು. ಪ್ರಾತಃಕಾಲದಲ್ಲಿ ಉದಯಿಸಿದ, ಪ್ರಶಸ್ತವಾದ ಕಿರಣಗಳಿಂದ ಕೂಡಿದ ಸೂರ್ಯನ ಕಾಂತಿಯು ಆಕಾಶವನ್ನು ಬೆಳಗುವಂತೆ–ಸೀತಾದೇವಿಯು ದಶರಥನಿಂದ ಕೊಡಲ್ಪಟ್ಟ ಆಭರಣಗಳಿಂದ ವಿಭೂಷಿತಳಾಗಿ ಆ ಅರಮನೆಯನ್ನೇ ಬೆಳಗಿದಳು. ಕ್ಷುದ್ರವಾದ ಕಾರ್ಯವನ್ನು ಎಂದೂ ಮಾಡದಿದ್ದ, ಪತಿಸೇವಾಪರಾಯಣೆಯಾದ ಮೈಥಿಲಿಯನ್ನು ಅತ್ತೆಯಾದ ಕೌಸಲ್ಯೆಯು ಎರಡು ತೋಳುಗಳಿಂದಲೂ ಬಾಚಿತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಹೇಳಿದಳು :

ಅಸತ್ಯಃ ಸರ್ವಲೋಕೇಽಸ್ಮಿನ್ಸತತಂ ಸತ್ಕೃತಾಃ ಪ್ರಿಯೈಃ ।
ಭರ್ತಾರಂ ನಾನುಮನ್ಯನ್ತೇ ವಿನಿಪಾತಗತಂ ಸ್ತ್ರಿಯಃ ॥೨೦॥

"ಸರ್ವಕಾಲದಲ್ಲಿಯೂ ಸತತವಾಗಿ ಪ್ರಿಯರಾದ ಗಂಡಂದಿರಿಂದ ಸತ್ಕೃತರಾದರೂ–ಕುಲಟೆಯರಾದ ಸ್ತ್ರೀಯರು ದೈವಯೋಗದಿಂದ ಸ್ಥಾನ ಭ್ರಷ್ಟನಾದ ಗಂಡನನ್ನು ಲೆಕ್ಕಿಸುವುದಿಲ್ಲ.

ಏಷ ಸ್ವಭಾವೋ ನಾರೀಣಾಮನುಭೂಯ ಪುರಾ ಸುಖಮ್ ।
ಅಲ್ಪಾಮಪ್ಯಾಪದಂ ಪ್ರಾಪ್ಯ ದುಷ್ಯನ್ತಿ ಪ್ರಜಹತ್ಯಪಿ ॥೨೧॥

ಅಸತಿಯರ ಸ್ವಭಾವವೇ ಹೀಗಿರುತ್ತದೆ. ಗಂಡನು ಅರೋಗ ದೃಢಕಾಯನಾಗಿ ಒಳ್ಳೆಯ ಪದವಿಯಲ್ಲಿರುವಾಗ ಅವನೊಡನಿದ್ದು ಸಮಾನ ಸುಖವನ್ನು ಅನುಭವಿಸುತ್ತಾರೆ. ಆದರೆ ರೋಗ-ರುಜಿನಾದಿಗಳಿಂದಲೋ ಸ್ಥಾನಭ್ರಷ್ಟತೆಯಿಂದಲೋ ಗಂಡನಿಗೆ ಸ್ವಲ್ಪವಾದರೂ ಆಪತ್ತು ಸಂಭವಿಸಿದ್ದೇ ಆದರೆ–ಒಡನೆಯೇ ಅವನನ್ನು ತಿರಸ್ಕಾರಮಾಡುತ್ತಾರೆ. ಅಷ್ಟು ಮಾತ್ರ ವಲ್ಲ; ತ್ಯಜಿಸಿಯೇ ಬಿಡುತ್ತಾರೆ.

ಅಸತ್ಯಶೀಲಾ ವಿಕೃತಾ ದುರ್ಗ್ರಾಹ್ಯಹೃದಯಾಃ ಸದಾ ।
ಯುವತ್ಯಃ ಪಾಪಸಂಕಲ್ಪಾಃ ಕ್ಷಣಮಾತ್ರಾದ್ವಿರಾಗಿಣಃ ॥೨೨॥

ಅಸತಿಯರು ಯಾವಾಗಲೂ ಸುಳ್ಳುಹೇಳುವ ಸ್ವಭಾವದವರಾಗಿರುತ್ತಾರೆ. ಪರಪುರುಷರ ಹೃದಯವನ್ನು ವಿಕಾರಗೊಳಿಸುವ ಹಾವ-ಭಾವವುಳ್ಳವರಾಗಿರುತ್ತಾರೆ. ಅವರ ಮನೋಭಾವವನ್ನು ತಿಳಿಯುವುದೂ ಬಹಳ ಕಷ್ಟ. ಅವರು ಯಾವಾಗಲೂ ಪರಪುರುಷರ ದರ್ಶನ, ಚಿತ್ತಾಕರ್ಷಣ, ಧನಾಪಹಾರ, ಸಹವಾಸ ಇವೇ ಮೊದಲಾದ ಪಾಪಕಾರ್ಯಗಳಲ್ಲಿಯೇ ನಿಯತವಾದ ಸಂಕಲ್ಪವುಳ್ಳವರಾಗಿರುತ್ತಾರೆ. ನಿಮಿಷಮಾತ್ರದಲ್ಲಿ ತಮ್ಮನ್ನು ಸೇರಿದವರೊಡನೆ ಅನುರಾಗವನ್ನೂ ತೋರೆಯುತ್ತಾರೆ.

ನ ಕುಲಂ ನ ಕೃತಂ ವಿದ್ಯಾಂ ನ ದತ್ತಂ ನಾಪಿ ಸಂಗ್ರಹಮ್ ।
ಸ್ತ್ರೀಣಾಂ ಗೃಹ್ಣಾತಿ ಹೃದಯಮನಿತ್ಯಹೃದಯಾ ಹಿ ತಾಃ ॥೨೩॥

ಸ್ತ್ರೀಯರ ಮನಸ್ಸು ಕುಲವನ್ನೂ ಎಣಿಸುವುದಿಲ್ಲ ; ಉಪಕಾರವನ್ನೂ ಎಣಿಸುವುದಿಲ್ಲ ; ವಿದ್ಯೆಯನ್ನೂ ಎಣಿಸುವುದಿಲ್ಲ ; ಉಡಿಗೆ-ತೊಡಿಗೆಗಳನ್ನೂ ಎಣಿಸುವುದಿಲ್ಲ ; ಪಾಣಿಗ್ರಹಣವನ್ನೂ ಎಣಿಸುವುದಿಲ್ಲ. ಸ್ವೇಚ್ಛೆಯಿಂದ ಮನಬಂದಂತೆ ವರ್ತಿಸುತ್ತಿರುತ್ತಾರೆ. ಈ ಕಾರಣದಿಂದಲೇ ಸ್ತ್ರೀಯರು ಅನಿತ್ಯವಾದ (ಚಂಚಲವಾದ) ಮನಸ್ಸುಳ್ಳವರು.

ಸಾಧ್ವೀನಾಂ ಹಿ ಸ್ಥಿತಾನಾಂ ತು ಶೀಲೇ ಸತ್ಯೇ ಶ್ರುತೇ ಶಮೇ ।
ಸ್ತ್ರೀಣಾಂ ಪವಿತ್ರಂ ಪರಮಂ ಪತಿರೇಕೋ ವಿಶಿಷ್ಯತೇ ॥೨೪॥

ಸೌಶೀಲ್ಯದಲ್ಲಿ, ಸತ್ಯವಚನದಲ್ಲಿ, ಗುರುಜನರ ಹಿತೋಪದೇಶಗಳ ಶ್ರವಣದಲ್ಲಿ, ಸ್ವಕುಲೋಚಿತವಾದ ಮರ್ಯಾದೆಯಲ್ಲಿ ನಿಷ್ಠರಾಗಿರತಕ್ಕ ಸಾಧ್ವಿಯರಾದ ಸ್ತ್ರೀಯರಿಗೆ ಪರಮಪವಿತ್ರವಾದುದು ಪತಿಸೇವೆಯೊಂದೇ. ಪುಣ್ಯಫಲಕ್ಕೆ ಸಾಧಕನಾದವನು ಪತಿಯೊಬ್ಬನೇ. ಸೀತೆ! ಅಸತಿಯರ ಮತ್ತು ಸಾಧ್ವಿಯರ ಲಕ್ಷಣಗಳು ಹೀಗಿರುತ್ತವೆ. ನನ್ನ ಮಗನು ಅರಣ್ಯಕ್ಕೆ ಕಳುಹಿಸಲ್ಪಟ್ಟನೆಂಬ ಕಾರಣದಿಂದ ನೀನವನನ್ನು ತಿರಸ್ಕರಿಸಬೇಡ.

ತವ ದೈವತಮಸ್ತ್ವೇಷ ನಿರ್ಧನಃ ಸಧನೋಽಪಿ ವಾ ॥೨೫॥

ನಿರ್ಧನನಾಗಿರಲಿ, ಧನಿಕನಾಗಿರಲಿ—ಇವನೇ ನಿನಗೆ ದೇವಸ್ವರೂಪನು."

ಸೀತಾದೇವಿಯು ಧರ್ಮಾರ್ಥಪ್ರಾಪ್ತಿಗೆ ಸಾಧಕಗಳಾದ, ಕೌಸಲ್ಯಾ

ದೇವಿಯ ಆ ಮಾತುಗಳನ್ನು ಅರ್ಥಮಾಡಿಕೊಂಡು ಅವಳಿಗೆ ಎದುರಾಗಿ ನಿಂತು ಕೈಮುಗಿದುಕೊಂಡು ಹೇಳಿದಳು :

"ಆರ್ಯೆಯಾದ ನೀನು ಅನುಶಾಸನಮಾಡಿದಂತೆಯೇ ನಾನು ಪಡೆದುಕೊಳ್ಳುವೆನು. ಪತಿಯ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ನಾನೂ ತಿಳಿದಿರುವೆನು. ಈ ಧರ್ಮವನ್ನು ನಾನು ನನ್ನ ತಂದೆ-ತಾಯಿಗಳಿಂದಲೇ ಕೇಳಿ ತಿಳಿದುಕೊಂಡಿರುವೆನು. ಆರ್ಯಳೇ! ಅಸತಿಯರಿಗೆ ಸಮಾನಳನ್ನಾಗಿ ನನ್ನನ್ನು ಕಾಣುವುದು ಉಚಿತವಲ್ಲ. ಚಂದ್ರನಲ್ಲಿರುವ ಪ್ರಭೆಯು ಚಂದ್ರನಿಂದ ಬೇರ್ಪಡದಂತೆ–ಪತಿವ್ರತಾಧರ್ಮವು ನನ್ನಿಂದ ಬೇರ್ಪಟ್ಟಿರುವುದಿಲ್ಲ. (ಬೇರ್ಪಡಿಸಲೂ ಸಾಧ್ಯವಾಗುವುದಿಲ್ಲ.)

ನಾತನ್ತ್ರೀ ವಾದ್ಯತೇ ವೀಣಾ ನಾಚಕ್ರೋ ವರ್ತತೇ ರಥಃ ।
ನಾಪತಿಃ ಸುಖಮೇಧೇತ ಯಾ ಸ್ಯಾದಪಿ ಶತಾತ್ಮಜಾ ॥೨೯॥

ತಂತಿಯಿಲ್ಲದ ವೀಣೆಯು ನಾದಮಾಡುವುದಿಲ್ಲ. ಚಕ್ರವಿಲ್ಲದ ರಥವು ಚಲಿಸುವುದಿಲ್ಲ. ನೂರು ಮಕ್ಕಳಿದ್ದರೂ ಪತಿಯಿಂದ ವಿಹೀನಳಾದ ಸ್ತ್ರೀಯು ಸುಖದಿಂದಿರಲಾರಳು.

ಮಿತಂ ದದಾತಿ ಹಿ ಪಿತಾ ಮಿತಂ ಮಾತಾ ಮಿತಂ ಸುತಃ
ಅಮಿತಸ್ಯ ತು ದಾತಾರಂ ಭರ್ತಾರಂ ಕಾ ನ ಪೂಜಯೇತ್ ॥೩೦॥

ತಂದೆ-ತಾಯಿ ಮತ್ತು ಮಕ್ಕಳು ಅಲ್ಪವಾದ ಸುಖವನ್ನು ಕೊಡ ಬಲ್ಲರು. ಆದರೆ ಪತಿಯು ಅಮಿತವಾದ ಸುಖವನ್ನು ಕೊಡುತ್ತಾನೆ. ಐಹಿಕ-ಆಮುಷ್ಮಿಕಸುಖಗಳೆರಡನ್ನೂ ಪತಿಯು ಕೊಡಬಲ್ಲನು. ಅಂತಹ ಅಪಾರವಾದ ಸುಖವನ್ನು ನೀಡುವ ಪತಿಯನ್ನು ಯಾರು ತಾನೇ ಪೂಜಿಸದಿರು ತ್ತಾರೆ?

ಆರ್ಯಳೇ! ಈ ರೀತಿಯಲ್ಲಿ ಪಾತಿವ್ರತ್ಯಧರ್ಮವನ್ನು ಆಚರಿಸು ತ್ತಿರುವ, ಶ್ರೇಷ್ಠರೆನಿಸಿದ ತಂದೆ-ತಾಯಿ-ಆಚಾರ್ಯರಿಂದಲೂ ಪತಿವ್ರತಾ ಧರ್ಮದ ಫಲವೆಷ್ಟೆಂಬುದನ್ನು ಕೇಳಿ ತಿಳಿದುಕೊಂಡಿರುವ ನಾನು ಪತಿಯನ್ನು ತಿರಸ್ಕಾರಮಾಡುವೆನೇ? **ಸ್ತ್ರೀಣಾಂ ಭರ್ತಾ ಹಿ ದೈವತಮ್**–ಹೆಂಗಸರಿಗೆ ಪತಿಯೇ ದೈವವೆಂಬುದನ್ನು ದೃಢವಾಗಿ ನಂಬಿರುವವಳು ನಾನು, ತಾಯೇ!"

ಹೃದಯಂಗಮವಾದ ಸೀತೆಯ ಮಾತುಗಳನ್ನು ಕೇಳಿ ಶುದ್ಧವಾದ ಅಂತಃಕರಣವುಳ್ಳ ಕೌಸಲ್ಯಾದೇವಿಯು–ದುಃಖ ಮತ್ತು ಹರ್ಷಮಿಶ್ರಿತವಾದ ಕಂಬನಿಯನ್ನು ಸುರಿಸಿದಳು. ಪರಮಧರ್ಮಾತ್ಮನಾದ ಶ್ರೀರಾಮನು ತಾಯಂದಿರ ಮಧ್ಯದಲ್ಲಿ ಎಲ್ಲರಿಂದಲೂ ಪರಮಸತ್ಕೃತಳಾಗಿ ಕುಳಿತಿದ್ದ ಕೌಸಲ್ಯಾದೇವಿಯ ಬಳಿಗೆ ಹೋಗಿ ಕೈಮುಗಿದುಕೊಂಡು ಹೇಳಿದನು :

"ಅಂಬ! ನೀನು ದುಃಖಪಡುತ್ತಲೇ ಇರಬೇಡ. ತಂದೆಯನ್ನು ಚೆನ್ನಾಗಿ ನೋಡಿಕೋ. ನನ್ನ ವನವಾಸದ ದಿವಸಗಳು ಬಹಳ ಬೇಗ ಕಳೆದು ಹೋಗುತ್ತವೆ. ನೀನು ಮಲಗಿ ಏಳುವಷ್ಟರಲ್ಲಿಯೇ ಈ ಹದಿನಾಲ್ಕು ವರ್ಷಗಳೂ ಕಳೆದುಹೋಗಿರುತ್ತವೆ. ಪಿತೃವಾಕ್ಯವನ್ನು ಪೂರ್ಣವಾಗಿ ಪರಿಪಾಲಿಸಿ ಸುಹೃದರೊಡನೆ ನಿನ್ನ ಬಳಿಗೆ ಬರುವ ನನ್ನನ್ನು ಬಹಳ ಬೇಗ ಕಾಣುವೆ."

ಸಮಯಕ್ಕೆ ತಕ್ಕುದಾದ ಸದಭಿಪ್ರಾಯವನ್ನು ಕೊಡುವ ಮಾತುಗಳನ್ನು ಶ್ರೀರಾಮನು ಕೌಸಲ್ಯೆಗೆ ಹೇಳಿ, ತನ್ನ ಮುನ್ನೂರೈವತ್ತು ಮಂದಿ ತಾಯಿಯರನ್ನೂ ಸವಿಮಾತುಗಳಿಂದ ಸಂತೈಸಬೇಕೆಂದು ಆಲೋಚಿಸಿ ಅವರ ಬಳಿಗೆ ಹೋದನು. ಕೌಸಲ್ಯಾದೇವಿಯಂತೆಯೇ ಮಗನ ವಿಯೋಗದುಃಖದಿಂದ ಪೀಡಿತರಾಗಿದ್ದ ತಾಯಂದಿರನ್ನು ಕುರಿತು ಶ್ರೀರಾಮನು ಬದ್ಧಾಂಜಲಿಯಾಗಿ ಧರ್ಮಯುಕ್ತವಾದ ಈ ಮಾತುಗಳನ್ನು ಹೇಳಿದನು :

ಸಂವಾಸಾತ್ಪರುಷಂ ಕಿಂಚಿದಜ್ಞಾನಾದ್ವಾಪಿ ಯತ್ಕೃತಮ್ ।
ತನ್ಮೇ ಸಮನುಜಾನೀತ ಸರ್ವಾಶ್ಚಾಮನ್ತ್ರಯಾಮಿ ವಃ ॥೩೮॥

"ಮಾತೆಯರೇ! ಒಟ್ಟಿಗೆ ವಾಸಮಾಡುತ್ತಿರುವ ಕಾರಣದಿಂದ (ಹೆಚ್ಚಿನ ಸಲಿಗೆಯಿಂದ) ಅಥವಾ ಅಜ್ಞಾನದ ಕಾರಣದಿಂದ ನಿಮಗೆ ಅಸಮಾಧಾನವಾಗುವ ಯಾವುದಾದರೂ ಕಾರ್ಯವನ್ನು ನಾನು ಮಾಡಿದ್ದರೆ ಅಥವಾ ಕಠಿನವಾದ ಯಾವುದಾದರೂ ಮಾತನ್ನು ಆಡಿದ್ದರೆ–ಅವೆಲ್ಲವನ್ನೂ ಕ್ಷಮಿಸಿ ನನಗೆ ವನವಾಸಕ್ಕೆ ಹೋಗಲು ಅನುಮತಿಸಬೇಕೆಂದು ನಿಮ್ಮೆಲ್ಲರನ್ನೂ ಪ್ರಾರ್ಥಿಸುತ್ತೇನೆ."

ಧರ್ಮಯುಕ್ತವಾದ ಮತ್ತು ಸಮಾಧಾನಕರವಾದ ರಾಘವನ ಆ ಮಾತನ್ನು ಅವರೆಲ್ಲರೂ ಶೋಕದಿಂದ ಪರಿತಪ್ತವಾದ ಮನಸ್ಸಿನಿಂದ ಕೇಳಿ

ದರು. ಕ್ರೌಂಚಪಕ್ಷಿಗಳ ಕಲ-ಕಲನಿನಾದದಂತೆ ದಶರಥನ ಪತ್ನಿಯರ 'ಹಾ ಪುತ್ರಕ! ಹಾ ರಾಮ!'–ಎಂಬ ಹಾಹಾಕಾರನಿನಾದವು ಎಲ್ಲೆಡೆಗಳಿಂದಲೂ ಕೇಳಿಬರುತ್ತಿದ್ದಿತು. ಹಿಂದೆ ಮೇಘಗಳ ಧ್ವನಿಯಂತಿದ್ದ ಭೇರೀ-ಮೃದಂಗಾದಿ ಮಂಗಳವಾದ್ಯಗಳಿಂದ ಮೊಳಗುತ್ತಿದ್ದ ದಶರಥನ ಅರಮನೆಯು ಅಂದು ವ್ಯಸನವನ್ನು ಹೊಂದಿ ಅತ್ಯಂತ ದುಃಖಗೊಂಡ ಪರಿಜನರ ರೋದನ-ಗೋಳಾಟಗಳಿಂದ ತುಂಬಿಹೋಯಿತು.

೩೯ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೪೦ನೆಯ ಸರ್ಗ

ಸೀತಾ-ರಾಮ-ಲಕ್ಷ್ಮಣರು ದಶರಥನಿಗೆ ಪ್ರದಕ್ಷಿಣೆಮಾಡಿ ಕೌಸಲ್ಯೆಯೇ ಮೊದಲಾದ ತಾಯಂದಿರಿಗೆ ಪ್ರಣಾಮಮಾಡಿದುದು : ಲಕ್ಷ್ಮಣನಿಗೆ ಸುಮಿತ್ರೆಯ ಉಪದೇಶ : ಸೀತಾದೇವಿಸಮೇತರಾಗಿ ರಾಮ-ಲಕ್ಷ್ಮಣರು ರಥದಲ್ಲಿ ಕುಳಿತು ಅರಣ್ಯಕ್ಕೆ ಪ್ರಯಾಣ ಹೊರಟುದು : ಪುರಜನರ, ರಾಣೀವಾಸದವರ ಮತ್ತು ದಶರಥನ ಶೋಕಾಕುಲತೆ

ಅಥ ರಾಮಶ್ಚ ಸೀತಾ ಚ ಲಕ್ಷ್ಮಣಶ್ಚ ಕೃತಾಞ್ಜಲಿಃ ।
ಉಪಸಂಗೃಹ್ಯ ರಾಜಾನಂ ಚಕ್ರುರ್ದೀನಾಃ ಪ್ರದಕ್ಷಿಣಮ್ ॥೧॥

ಬಳಿಕ ಸೀತಾ-ರಾಮ-ಲಕ್ಷ್ಮಣರು ಕೈಮುಗಿದುಕೊಂಡು ದೀನಭಾವದಿಂದ ದಶರಥನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಪ್ರದಕ್ಷಿಣೆಮಾಡಿದರು.

ಧರ್ಮಜ್ಞನಾದ ಶ್ರೀರಾಮನು ತಂದೆಯಿಂದ ಅನುಮತಿಯನ್ನು ಪಡೆದು ಸೀತಾಸಮೇತನಾಗಿ ಕಂಬನಿಗರೆಯುತ್ತಿದ್ದ ತಾಯಿಯನ್ನು ನೋಡಿ ಶೋಕಾಕುಲನಾಗಿ ಅವಳಿಗೂ ಪ್ರಣಾಮವನ್ನು ಮಾಡಿದನು. ಶ್ರೀರಾಮನನ್ನೇ ಅನುಸರಿಸಿ ಲಕ್ಷ್ಮಣನೂ ಅಣ್ಣನ ತಾಯಿಯಾದ ಕೌಸಲ್ಯೆಗೆ ಪ್ರಣಾಮಮಾಡಿದನು. ಕೂಡಲೇ ಲಕ್ಷ್ಮಣನು ತನ್ನ ತಾಯಿಯಾದ ಸುಮಿತ್ರಾದೇವಿಯ ಕಾಲುಗಳನ್ನೂ ಮುಟ್ಟಿ ನಮಿಸಿದನು. ಹಾಗೆ ನಮಸ್ಕರಿಸುತ್ತಿದ್ದ ಮಹಾಬಾಹುವಾದ ಲಕ್ಷ್ಮಣನನ್ನು ತಾಯಿಯಾದ ಸುಮಿತ್ರಾದೇವಿಯು ಹಿಡಿದೆತ್ತಿ

ನೆತ್ತಿಯನ್ನು ಆಘ್ರಾಣಿಸಿ ಮಗನಿಗೆ ಹಿತವನ್ನುಂಟುಮಾಡುವ ಆಶಯದಿಂದ ಅವನೊಡನೆ ಹೇಳಿದಳು :

ಸೃಷ್ಟಸ್ತ್ವಂ ವನವಾಸಾಯ ಸ್ವನುರಕ್ತಃ ಸುಹೃಜ್ಜನೇ ।
ರಾಮೇ ಪ್ರಮಾದಂ ಮಾ ಕಾರ್ಷೀಃ ಪುತ್ರ ಭ್ರಾತರಿ ಗಚ್ಛತಿ ॥೫॥

"ಪುತ್ರ! ಸತ್ಪುರುಷರಲ್ಲಿ ವಿಶೇಷವಾಗಿ ಅನುರಕ್ತನಾಗಿರುವ ನೀನು ವನವಾಸಕ್ಕಾಗಿಯೇ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿರುವೆ. ಶ್ರೀರಾಮನು ಸೀತಾ ಸಮೇತನಾಗಿ ಹೋಗುತ್ತಿರುವಾಗ ಅವರ ರಕ್ಷಣೆಯ ವಿಷಯದಲ್ಲಿ ಅಜಾಗರೂಕನಾಗಿರಬೇಡ.

ವ್ಯಸನೀ ವಾ ಸಮೃದ್ಧೋ ವಾ ಗತಿರೇಷ ತವಾನಘ ।
ಏಷ ಲೋಕೇ ಸತಾಂ ಧರ್ಮೋ ಯಜ್ಜ್ಯೇಷ್ಠವಶಗೋ ಭವೇತ್ ॥೬॥

ನಿಷ್ಪಾಪನೇ! ಶ್ರೀರಾಮನು ವ್ಯಸನಿಯೇ ಆಗಿರಲಿ ; ಸಮೃದ್ಧನೇ ಆಗಿರಲಿ–ಇವನೇ ನಿನಗೆ ಶರಣ್ಯನು. ಕಿರಿಯರು ಅಣ್ಣನ ಅಧೀನದಲ್ಲಿರುವುದೇ ಈ ಲೋಕದಲ್ಲಿ ಸತ್ಪುರುಷರ ಧರ್ಮವಾಗಿರುತ್ತದೆ.

ಇದಂ ಹಿ ವೃತ್ತಮುಚಿತಂ ಕುಲಸ್ಯಾಸ್ಯ ಸನಾತನಮ್ ।
ದಾನಂ ದೀಕ್ಷಾ ಚ ಯಜ್ಞೇಷು ತನುತ್ಯಾಗೋ ಮೃಧೇಷು ಚ ॥೭॥

ಜ್ಯೇಷ್ಠಾನುವರ್ತನೆಯೆಂಬ ಸನಾತನವಾದ ಈ ಆಚರಣೆಯು ನಮ್ಮ ಕುಲಧರ್ಮಕ್ಕೂ ಅನುರೂಪವಾಗಿಯೇ ಇದೆ. ದಾನಮಾಡುವುದು, ಯಜ್ಞಗಳಲ್ಲಿ ದೀಕ್ಷಿತನಾಗುವುದು ಮತ್ತು ಯುದ್ಧಗಳಲ್ಲಿ ಪ್ರಾಣತ್ಯಾಗ ಮಾಡುವುದು–ಇವೆಲ್ಲವೂ ಕ್ಷತ್ರಿಯರಿಗೆ ಧರ್ಮವಾಗಿರುವಂತೆ ಜ್ಯೇಷ್ಠಾನುವರ್ತನವೆಂಬುದೂ ಕ್ಷತ್ರಿಯರ ಧರ್ಮವೇ ಆಗಿದೆ."

ಸುಮಿತ್ರಾದೇವಿಯು ಲಕ್ಷ್ಮಣನಿಗೆ ಹೀಗೆ ಹೇಳಿ ಪ್ರಯಾಣಕ್ಕೆ ಸಿದ್ಧನಾಗಿದ್ದ ರಾಘವನನ್ನು ಕಂಡು–'ಹೋಗಿ ಬಾ, ರಾಮ! ನಿನಗೆ ಮಂಗಳ ವಾಗಲಿ'–ಎಂದು ಹರಸುತ್ತಾ ಪುನಃ ಲಕ್ಷ್ಮಣನಿಗೆ ಹೇಳಿದಳು :

ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್ ।
ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾಸುಖಮ್ ॥೯॥

"ಮಗು! ಲಕ್ಷ್ಮಣ! ಶ್ರೀರಾಮನನ್ನೇ ತಂದೆಯಾದ ದಶರಥ

ನೆಂದು ಭಾವಿಸು. ಅತ್ತಿಗೆಯಾದ, ಜನಕನ ಮಗಳಾದ ಸೀತೆಯನ್ನೇ ನಾನೆಂದು (ತಾಯಿಯೆಂದು) ಭಾವಿಸು. ಅರಣ್ಯವನ್ನೇ ಅಯೋಧ್ಯೆಯೆಂದು ತಿಳಿ. ಈ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸುಖವಾಗಿ ಪ್ರಯಾಣಮಾಡು."*

ಬಳಿಕ ವಿನೀತನಾದ, ವಿನಯಜ್ಞನಾದ ಸುಮಂತ್ರನು ಕೈಮುಗಿದು ಕೊಂಡು ಶ್ರೀರಾಮನ ಮುಂದೆ ನಿಂತು–ಸಾರಥಿಯಾದ ಮಾತಲಿಯು ಇಂದ್ರನೊಡನೆ ಮಾತನಾಡುವಂತೆ–ಶ್ರೀರಾಮನಿಗೆ ಹೇಳಿದನು :

"ಮಹಾಯಶೋವಂತನಾದ ರಾಜುಪುತ್ರನೇ! ನಿನಗೆ ಮಂಗಳ ವಾಗಲಿ. ರಥವನ್ನು ಹತ್ತು. ನೀನು ಎಲ್ಲಿಗೆ ಕರೆದೊಯ್ಯುಬೇಕೆಂದು ಆಜ್ಞಾಪಿಸುವೆಯೋ ಅಲ್ಲಿಗೇ ನಿನ್ನನ್ನು ಕರೆದೊಯ್ಯುತ್ತೇನೆ. ಕೈಕೇಯಿಯಿಂದ ಪ್ರಚೋದಿತನಾದ ನೀನು ಹದಿನಾಲ್ಕು ವರ್ಷಗಳ ವನವಾಸವನ್ನು ಇಂದಿ ನಿಂದಲೇ ಪ್ರಾರಂಭಿಸಬೇಕಾಗಿದೆ."

ಸುಮಂತ್ರನು ಹೀಗೆ ಹೇಳಿದನಂತರ ಶ್ರೀರಾಮನ ಅಭಿಪ್ರಾಯದಂತೆ ಸೀತಾದೇವಿಯು ವಸ್ತ್ರಾಭರಣಗಳಿಂದ ಸಿಂಗರಿಸಿಕೊಂಡು ಸಂತೋಷದಿಂದ ಸೂರ್ಯಸದೃಶವಾದ ರಥವನ್ನೇರಿದಳು. ಸೀತೆಯು ರಥದಲ್ಲಿ ಕುಳಿತ

---

* ಈ ಭಾವನೆಯಿಂದ ಲಕ್ಷ್ಮಣನು ರಾಮನೊಡನೆ ಅರಣ್ಯಕ್ಕೆ ಹೊರಟಲ್ಲಿ ಪ್ರತಿಜ್ಞಾತವಾದ ಕಾಲವು ಮುಗಿಯುವುದರೊಳಗಾಗಿ ಅಯೋಧ್ಯೆಗೆ ಬಂದು ತಂದೆ-ತಾಯಿಗಳನ್ನು ನೋಡಬೇಕೆಂಬ ಚಾಪಲ್ಯವು ಲಕ್ಷ್ಮಣನಿಗೆ ಇಲ್ಲದಾಗುತ್ತದೆ ಎಂಬುದು ಸುಮಿತ್ರೆಯ ಅಭಿಪ್ರಾಯವಾಗಿದೆ. ಈ ಶ್ಲೋಕಕ್ಕೆ ವ್ಯಾಖ್ಯಾನಕಾರರು ಹಲವಾರು ರೀತಿಯಲ್ಲಿ ಅರ್ಥಮಾಡಿರುತ್ತಾರೆ. ೧) ದಶತಿ = ಮತ್ಸ್ಯಕಚ್ಛಪೋರಗಾದೀನ್ ದಂಷ್ಟ್ರವ್ಯಾಪಾರ ವಿಷಯಾನ್ ಕರೋತೀತಿ ದಶಃ = ಮೀನು, ಹಾವು ಮುಂತಾದುವುಗಳನ್ನು ಹಲ್ಲಿಗೆ ವಿಷಯವನ್ನಾಗಿ ಮಾಡುವುದು (ಇವುಗಳನ್ನು ತಿನ್ನುವುದು.) ದಶ ಅರ್ಥಾತ್ ಗರುಡ. ದಶಃ ರಥಃ ಯಸ್ಯ ಸಃ –ಗರುಡನನ್ನು ರಥವಾಗಿ ಉಳ್ಳವನು ಯಾವನೋ ಅವನು–ವಿಷ್ಣು. ರಾಮನನ್ನು ವಿಷ್ಣುವೆಂದು ತಿಳಿ. ಜನಕಾತ್ಮಜಾಂ = ಸೀತೆಯನ್ನು ಮಾಂ = ಲಕ್ಷ್ಮೀ ಎಂಬುದಾಗಿ ತಿಳಿ. ಅಟವೀಂ = ವಿಷ್ಣುವಿನ ಸನ್ನಿಕರ್ಷವಿರುವ ಅರಣ್ಯವನ್ನು ಅಯೋಧ್ಯಾಂ = ಅಪರಾಜಿತಾಖ್ಯಾಂ ವೈಕುಂಠನಗರೀಂ ವಿದ್ಧಿ. ಅಪರಾಜಿತಾ ಎಂಬ ಹೆಸರಿನ ವೈಕುಂಠವೆಂದು ತಿಳಿ. ೨) ರಾಮಂ ದಶರಥಂ ಚ ವಿದ್ಧಿ = ರಾಮನ ಮತ್ತು ದಶರಥನ ತಾರತಮ್ಯವನ್ನು ತಿಳಿಯುವವನಾಗು. (ರಾಮನೇ ದಶರಥನಿಗಿಂತಲೂ ಹೆಚ್ಚಿನವನೆಂದು ವೇದ್ಯವಾಗುವುದು.)

ನಂತರ ಯಜ್ಞೇಶ್ವರನಿಗೆ ಸಮಾನವಾದ ದಿವ್ಯತೇಜಸ್ಸಿನಿಂದ ಕೂಡಿದ್ದ, ಚಿನ್ನದ ತಗಡಿನಿಂದ ಸಮಲಂಕೃತವಾಗಿದ್ದ ರಥವನ್ನು ಸಹೋದರರಾದ ರಾಮ-ಲಕ್ಷ್ಮಣರು ಒಡನೆಯೇ ಹತ್ತಿದರು. ಸೀತೆಯು ಅರಣ್ಯದಲ್ಲಿರಬೇಕಾದ ದಿವಸಗಳನ್ನು ಪರಿಗಣಿಸಿ ಅಷ್ಟು ವರ್ಷಗಳಿಗೂ ಬೇಕಾಗಬಹುದಾದಷ್ಟು ವಸ್ತ್ರಾಭರಣಗಳನ್ನು ಪತಿಯನ್ನನುಸರಿಸಿ ಪ್ರಯಾಣಹೊರಟಿದ್ದ ಸೀತಾದೇವಿಗೆ ದಶರಥನು ಕೊಟ್ಟನು. ಅದೇ ರೀತಿಯಲ್ಲಿ ಶಸ್ತ್ರಾಸ್ತ್ರಗಳನ್ನೂ, ಕವಚಗಳನ್ನೂ, ಕಠಿನವಾದ ಗುರಾಣಿಗಳನ್ನೂ ರಥದಲ್ಲಿ ಕುಳಿತಿದ್ದ ಸಹೋದರರಿಗೆ ಕೊಟ್ಟನು.

ಸೀತೆಯೂ ಸೇರಿ ಮೂವರೂ ರಥದಲ್ಲಿ ಕುಳಿತುದನ್ನು ನೋಡಿ ಸುಮಂತ್ರನು ವೇಗದಲ್ಲಿ ವಾಯುವಿಗೆ ಸಮಾನವಾದ ಗತಿಯುಳ್ಳ, ತನ್ನ ಸೂಚನೆಗೆ ಅನುಗುಣವಾಗಿ ವರ್ತಿಸುವ ಕುದುರೆಗಳನ್ನು ಹೊರಡಲು ಪ್ರಚೋದಿಸಿದನು.

ಬಹಳ ಕಾಲ ಅರಣ್ಯದಲ್ಲಿ ವಾಸಮಾಡುವ ಸಲುವಾಗಿ ಶ್ರೀರಾಮನು ಅರಣ್ಯದ ಕಡೆಗೆ ರಥದಲ್ಲಿ ಪ್ರಯಾಣಹೊರಟನಂತರ ಅಯೋಧ್ಯಾಪಟ್ಟಣದ ನಾಗರಿಕರೆಲ್ಲರೂ ಮೂರ್ಛಿತರಾದರು. ಅಶ್ವ-ಗಜ-ಪದಾತಿಸೈನ್ಯಗಳೂ

ನನ್ನ ಮತ್ತು ಸೀತೆಯ ತಾರತಮ್ಯವನ್ನು ತಿಳಿಯುವವನಾಗು. (ಗುಣದಲ್ಲಿ ನನಗಿಂತಲೂ ಸೀತೆಯೇ ಹೆಚ್ಚು ಗುಣಶಾಲಿನಿ ಎಂಬುದು ವೇದ್ಯವಾಗುವುದು.) ಅಯೋಧ್ಯೆಯ ಮತ್ತು ಅರಣ್ಯದ ತಾರತಮ್ಯವನ್ನು ಪರಿಶೀಲಿಸು. (ರಾಮನ ಸಾನ್ನಿಧ್ಯವಿರುವ ಅರಣ್ಯವೇ ಅಯೋಧ್ಯೆಗಿಂತಲೂ ಹೆಚ್ಚು ಪುಣ್ಯದಾಯಕವಾದ ಕ್ಷೇತ್ರವೆಂದು ನಿನಗೆ ಅರಿವಾಗುವುದು.) ೩) ನೀವು ಕಾಡಿಗೆ ಹೋದನಂತರ ದಶರಥಂ ರಾಮಂ = ಉಪರತಂ (ರಮು ಉಪರಮೇ) ವಿದ್ಧಿ = ದಶರಥನನ್ನು ಸತ್ತುಹೋದವನನ್ನಾಗಿ ಭಾವಿಸು. ಮಾಂ = ನನ್ನನ್ನು ಜನಕಾತ್ಮಜಾಂ, ಜನಕಸ್ಯ = ಪಿತುಃ ಆತ್ಮಜಾಂ ವಿದ್ಧಿ. ಕೈಕೇಯೀವಿವಾಸಿತತಯಾ ಪಿತೃಗೃಹವರ್ತಿನೀಂ ವಿದ್ಧಿ = ಕೈಕೇಯಿಯಿಂದ ಹೊರದೂಡಲ್ಪಟ್ಟು ತಂದೆಯ ಮನೆಗೆ ಹೋಗಿದ್ದಾಳೆಂದು ಭಾವಿಸು. ಅಯೋಧ್ಯಾಂ ಅಟವೀಂ ವಿದ್ಧಿ = ಅಯೋಧ್ಯೆಯು ಅರಣ್ಯವಾಗಿ ಪರಿವರ್ತಿತ ವಾಗುವೆಂದು ಭಾವಿಸು. ಈ ಎಲ್ಲ ಅರ್ಥಗಳಿಗಿಂತಲೂ ಮೊದಲನೆಯ ಸರಸವಾದ ಸ್ವಾಭಾವಿಕವಾದ ಅರ್ಥವೇ ಸಾಧುವಾಗಿದೆ. ಉಳಿದ ಅರ್ಥಗಳು ವ್ಯಾಖ್ಯಾನಕಾರರ ಪಾಂಡಿತ್ಯಪ್ರದರ್ಶನದ ದ್ಯೋತಕಗಳಾಗಿವೆಯೆಂಬುದು ನಮ್ಮ ಅಭಿಪ್ರಾಯವಾಗಿದೆ.

ಮೂರ್ಛೆಹೊಂದಿದುವು. ಒಂದು ಕಡೆಯಲ್ಲಿ ಉದ್ವಿಗ್ನರಾದ ಜನರು ಹಾಹಾ ಕಾರಮಾಡುತ್ತಿದ್ದರು. ರಾಮನನ್ನನುಸರಿಸಿ ಹೋಗಲು ಪ್ರಯತ್ನಿಸುತ್ತಿದ್ದ ಮದಿಸಿದ ಮತ್ತು ಕೋಪಗೊಂಡ ಆನೆಗಳು ಘೀಳಿಡುತ್ತಿದ್ದುವು. ಪರಿತಾಪದಿಂದ ಅತ್ತಲಿತ್ತ ಪರದಾಡುತ್ತಿದ್ದ ಕುದುರೆಗಳ ಹೇಷಾರವಗಳು ಎಲ್ಲೆಡೆಗಳಲ್ಲಿಯೂ



ಕೇಳಿಬರುತ್ತಿದ್ದುವು. ಹೀಗೆ ಅಯೋಧ್ಯಾಪಟ್ಟಣವೇ ಶಬ್ದದಿಂದ ತುಂಬಿಹೋಗಿದ್ದಿತು. ಬಾಲಕರಿಂದಲೂ, ವೃದ್ಧರಿಂದಲೂ ಕೂಡಿದ್ದ, ಶ್ರೀರಾಮನ ಅರಣ್ಯಗಮನದಿಂದ ಬಹಳವಾಗಿ ಸಂಕಟಗೊಂಡಿದ್ದ ಅಯೋಧ್ಯಾಪಟ್ಟಣವು–ಬಿಸಿಲಿನಿಂದ ಬಳಲಿದವನು ನೀರನ್ನರಸಿಹೋಗು ವಂತೆ–ಶ್ರೀರಾಮನನ್ನೇ ಅನುಸರಿಸಿ ಹೊರಟಿತು. ಆಬಾಲವೃದ್ಧರಾದಿಯಾಗಿ

ಅಯೋಧ್ಯಾಪಟ್ಟಣದ ಜನರೆಲ್ಲರೂ ರಥದ ಎಡ-ಬಲಪಕ್ಕಗಳಲ್ಲಿ ಮತ್ತು ಹಿಂದುಗಡೆಯಲ್ಲಿ ರಥಕ್ಕೆ ಜೋತುಬಿದ್ದು ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವರಾಗಿ–'ರಾಮ! ರಾಮ!'–ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತಾ ಸುಮಂತ್ರನಿಗೆ ಹೇಳಿದರು :

ಸಂಯಚ್ಛ ವಾಜಿನಾಂ ರಶ್ಮೀನ್ಸೂತ ಯಾಹಿ ಶನೈಃ ಶನೈಃ ।
ಮುಖಂ ದ್ರಕ್ಷ್ಯಾಮ ರಾಮಸ್ಯ ದುರ್ದರ್ಶಂ ನೋ ಭವಿಷ್ಯತಿ ॥೨೨॥

"ಸೂತ! ಕುದುರೆಗಳ ಕಡಿವಾಣಗಳನ್ನು ಎಳೆದು ಬಿಗಿಯಾಗಿ ಹಿಡಿದುಕೊ. ಮೆಲ್ಲ-ಮೆಲ್ಲಗೆ ಹೋಗು. ಶ್ರೀರಾಮನ ಮುಖವನ್ನು ನೋಡುತ್ತೇವೆ. ಮುಂದೆ ಬಹಳ ಕಾಲದವರೆಗೆ ಇವನ ಸುಂದರಮುಖಾರ ವಿಂದವು ನೋಡಲು ಲಭಿಸದು.

ನಿಶ್ಚಯವಾಗಿಯೂ ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಯ ಹೃದಯವು ಕಬ್ಬಿಣದ್ದೇ ಆಗಿರಬೇಕು. ಏಕೆಂದರೆ : ಮಗನು ಕಾಡಿಗೆ ಹೋಗುತ್ತಿದ್ದರೂ ಅವಳ ಹೃದಯವು ಒಡೆದುಹೋಗಲಿಲ್ಲವಲ್ಲವೇ? ನಿಶ್ಚಯವಾಗಿಯೂ ವೈದೇಹಿಯು ಕೃತಕೃತ್ಯಳೇ ಸರಿ. ನೆಳಲಿನಂತೆ ಪತಿಯನ್ನೇ ಅನುಸರಿಸಿ ಕಾಡಿಗೆ ಹೋಗುತ್ತಿದ್ದಾಳೆ. ಧರ್ಮದಲ್ಲಿಯೇ ನಿರತಳಾಗಿರಲು ವೈದೇಹಿಯು–ಸೂರ್ಯನ ಪ್ರಭೆಯು ಮೇರುಪರ್ವತವನ್ನು ಬಿಟ್ಟುಹೋಗ ದಂತೆ–ಪತಿಯನ್ನೆಂದಿಗೂ ಬಿಟ್ಟು ಹೋಗಳು. ಓ ಲಕ್ಷ್ಮಣ! ನೀನು ನಿಶ್ಚಯವಾಗಿಯೂ ಕೃತಾರ್ಥನಾದೆ. ಎಲ್ಲರೊಡನೆಯೂ ಪ್ರಿಯವಾದ ಮಾತುಗಳನ್ನಾಡುವ ದೇವಸದೃಶನಾದ ಶ್ರೀರಾಮನನ್ನು ನೀನು ಅನವರತವೂ ಉಪಚರಿಸುವೆಯಲ್ಲವೇ?

ಮಹತ್ಯೇಷಾ ಹಿ ತೇ ಸಿದ್ಧಿರೇಷ ಚಾಭ್ಯುದಯೋ ಮಹಾನ್ ।
ಏಷ ಸ್ವರ್ಗಸ್ಯ ಮಾರ್ಗಸ್ಯ ಯದೇನಮನುಗಚ್ಛಸಿ ॥೨೬॥

ನಿನ್ನ ಕೈಂಕರ್ಯಬುದ್ಧಿಯು ಮಹತ್ವಪೂರ್ಣವಾದುದು. ಇದರಿಂದ ನಿನಗೆ ವಿಶೇಷವಾಗಿ ಅಭ್ಯುದಯವೂ ಉಂಟಾಗುತ್ತದೆ. ಶ್ರೀರಾಮನನ್ನು ಅನುಸರಿಸಿ ಹೋಗುತ್ತಿರುವ ಈ ಮಾರ್ಗವೇ ನಿನಗೆ ಸ್ವರ್ಗದ ಮಾರ್ಗಕ್ಕೆ

ಸಾಧಕವಾಗಿಯೂ ಪರಿಣಮಿಸುತ್ತದೆ. (ಶ್ರೀರಾಮನ ಸೇವೆಯಿಂದ ನಿನಗೆ ಸ್ವರ್ಗಪ್ರಾಪ್ತಿಯಾಗುತ್ತದೆ.)"

ಹೀಗೆಲ್ಲಾ ಹೇಳಿಕೊಂಡು ಶ್ರೀರಾಮನ ರಥವನ್ನನುಸರಿಸಿ ಹೋಗು ತ್ತಿದ್ದ ಪಟ್ಟಣಿಗರು ಕಣ್ಣುಗಳಿಂದ ಧಾರಾಕಾರವಾಗಿ ಪ್ರವಹಿಸುತ್ತಿದ್ದ ಕಂಬನಿಯನ್ನು ತಡೆಯಲು ಸಮರ್ಥರಾಗಲಿಲ್ಲ. ಬಿಕ್ಕಿ-ಬಿಕ್ಕಿ ಅಳುತ್ತಲೇ ಇಕ್ಷ್ವಾಕುಕುಲನಂದನನಾದ, ಪರಮಪ್ರಿಯನಾದ ಶ್ರೀರಾಮನನ್ನು ಅನುಸರಿಸಿ ಹೋಗುತ್ತಿದ್ದರು.

ಇತ್ತಲಾಗಿ ಶ್ರೀರಾಮನ ನಿರ್ಗಮನದಿಂದ ದೀನರಾಗಿದ್ದ ಸ್ತ್ರೀಯರಿಂದ ಪರಿವೃತನಾಗಿದ್ದ, ದೀನವಾದ ಮನಸ್ಸಿನಿಂದ ಕೂಡಿದ್ದ ದಶರಥನು–"ಅಯ್ಯೋ! ನಾನು ಶ್ರೀರಾಮನನ್ನು ಬಿಟ್ಟಿರಲಾರೆನು. ಪ್ರಿಯರಾಮನ ಮುಖವನ್ನು ಮತ್ತೊಮ್ಮೆಯಾದರೂ ನೋಡುತ್ತೇನೆ"–ಎಂದು ಹೇಳುತ್ತಾ ಅರಮನೆಯಿಂದ ಹೊರಟೇಬಿಟ್ಟನು. ಮದಿಸಿದ ಸಲಗವನ್ನು ಕಟ್ಟಿಹಾಕಿರು ವಾಗ ಸುತ್ತುವರಿದು ನಿಂತ ಹೆಣ್ಣಾನೆಗಳು ಘೋರವಾಗಿ ನಿನಾದಮಾಡು ವಂತೆ–ಅಳುತ್ತಿದ್ದ ಅಂತಃಪುರದ ಸ್ತ್ರೀಯರ ಆರ್ತನಾದವು ರಾಜನ ಮುಂದು ಗಡೆಯಲ್ಲಿ ಕೇಳಿ ಬಂದಿತು. (ರಾಜನು ಅರಮನೆಯನ್ನು ಬಿಟ್ಟು ಹೊರಟೊಡ ನೆಯೇ ಅಂತಃಪುರದ ಸ್ತ್ರೀಯರು ಮುಂದೆ ಹೋಗದಂತೆ ಅವನನ್ನು ಸುತ್ತುಗಟ್ಟಿ ನಿಂತು ಗೋಳಾಡುತ್ತಿದ್ದರು.) ಶ್ರೀರಾಮನ ತಂದೆಯಾದ, ಕಕುತ್ಸ್ಥವಂಶದೀಪನಾದ, ಶ್ರೀಮಂತನಾದ ದಶರಥನು–ರಾಹುಗ್ರಸ್ತನಾದ ಪೂರ್ಣಚಂದ್ರನಂತೆ ಕಳೆಗುಂದಿದನು.

ಇತ್ತಲಾಗಿ ಬುದ್ಧಿಗೂ ಮೀರಿದ ಆತ್ಮಸ್ವರೂಪನಾದ, ಶ್ರೀಮಂತನಾದ ಶ್ರೀರಾಮನು ರಥವನ್ನು ವೇಗವಾಗಿ ಓಡಿಸುವಂತೆ ಸುಮಂತ್ರನನ್ನು ಪ್ರಚೋದಿಸಿದನು. ಶ್ರೀರಾಮನ ಆ ಮಾತನ್ನು ಕೇಳಿದೊಡನೆಯೇ ಜನರೆಲ್ಲರೂ ಸೂತನನ್ನು ಕುರಿತು–'ತಿಷ್ಠ ಸೂತ! ತಿಷ್ಠ–ಸೂತನೇ! ಕುದುರೆಗಳನ್ನು ನಿಲ್ಲಿಸು. ಮುಂದೆ ಹೋಗಬೇಡ'–ಎಂದು ಕೂಗಿಕೊಳ್ಳುತ್ತಿದ್ದರು. ಶ್ರೀರಾಮನಾದರೋ–'ಯಾಹಿ ಸೂತ! ಶೀಘ್ರಂ ಯಾಹಿ– ಸೂತನೇ! ಬೇಗ ಹೋಗು. ತಡಮಾಡಬೇಡ'–ಎಂದು ಹೇಳುತ್ತಿದ್ದನು.

ಮಾರ್ಗದಲ್ಲಿ ಹೀಗೆ ಜನರಿಂದಲೂ ಮತ್ತು ಶ್ರೀರಾಮನಿಂದಲೂ ಎರಡು ರೀತಿಯಲ್ಲಿ ಪ್ರಚೋದಿಸಲ್ಪಡುತ್ತಿದ್ದ ಸುಮಂತ್ರನಿಗೆ ರಾಮನ ಆಜ್ಞೆಯನ್ನೂ ನಡೆಸಲಾಗಲಿಲ್ಲ ; ಜನರ ಪ್ರಾರ್ಥನೆಯನ್ನೂ ನಡೆಸಲಾಗಲಿಲ್ಲ. ಮಹಾಬಾಹುವಾದ ಶ್ರೀರಾಮನು ಮುಂದೆ ಹೋಗುತ್ತಿರುವಾಗ ರಥಚಕ್ರ ಗಳಿಂದ ಹುಟ್ಟಿದ ಧೂಳಿಯು ಪುರಜನರ ಕಣ್ಣೀರಿನ ಸೇಚನೆಯಿಂದಲೇ ಉಡುಗಿಹೋಯಿತು. ಶ್ರೀರಾಘವನ ಪ್ರಯಾಣದಿಂದಾಗಿ ಅಯೋಧ್ಯಾ ಪಟ್ಟಣವು ಪ್ರಜೆಗಳ ಕಣ್ಣೀರಿನಿಂದ ತೋಯ್ದುಹೋಯಿತು. ಹಾಹಾಕಾರ ಗಳಿಂದ ತುಂಬಿಹೋಯಿತು. ಚೈತನ್ಯವೆಂಬುದೇ ಎಲ್ಲಿಯೂ ಕಾಣುತ್ತಿರಲಿಲ್ಲ. ಹೀಗೆ ಆ ಪಟ್ಟಣವು ಅತ್ಯಂತ ಪೀಡೆಗೊಳಗಾಯಿತು.

ಸರೋವರದಲ್ಲಿ ಮೀನುಗಳ ಸಂಚಲನೆಯಿಂದ ಅಲುಗಾಡಿಸಲ್ಪಟ್ಟ ತಾವರೆಯ ಹೂಗಳಿಂದ ಜಲಬಿಂದುಗಳು ತೊಟ್ಟಿಕ್ಕುವಂತೆ–ರಾಮವಿಯೋಗ ದುಃಖದಿಂದ ಉಂಟಾದ ಕಣ್ಣೀರು ಸ್ತ್ರೀಯರ ಕಣ್ಣುಗಳಿಂದ ತೊಟ್ಟಿಕ್ಕುತ್ತಿದ್ದಿತು. ಒಂದೇರೀತಿಯ ವ್ಯಾಕುಲಿತವಾದ ಮನಸ್ಸಿನಿಂದ ಕೂಡಿದ್ದ ಪಟ್ಟಣವನ್ನು ಕಂಡು ದಶರಥರಾಜನು ಬುಡವನ್ನು ಕತ್ತರಿಸಿದ ವೃಕ್ಷದಂತೆ ದೊಪ್ಪನೆ ಕೆಳಗೆ ಬಿದ್ದನು. ಮೂರ್ಛಿತನಾಗಿ ಕೆಳಗೆ ಬೀಳುತ್ತಿದ್ದ ದುಃಖಾಕುಲನಾಗಿದ್ದ ರಾಜನನ್ನು ನೋಡಿ ಶ್ರೀರಾಮನ ರಥದ ಹಿಂಬದಿಯಲ್ಲಿದ್ದ ಜನರೆಲ್ಲರೂ ಕೋಲಾಹಲಶಬ್ದಗಳನ್ನು ಮಾಡಿದರು. 'ಅಯ್ಯೋ! ರಾಜನು ಬಿದ್ದು ಹೋದನಲ್ಲಾ'–ಎಂದು ಕೂಗಿಕೊಂಡರು. 'ಹಾ ರಾಮ! ಇತ್ತಲಾಗಿ ನೋಡು. ರಾಜನು ಬಿದ್ದುಹೋಗುತ್ತಿದ್ದಾನೆ'–ಎಂದು ಕೆಲವರ ಕೂಗಿಕೊಳ್ಳುತ್ತಿದ್ದರು. 'ತಾಯಿ ಕೌಸಲ್ಯೆ! ಎಲ್ಲಿರುವೆ? ರಾಜನನ್ನು ಸಂತೈಸು'–ಎಂದು ಮತ್ತೆ ಕೆಲವರು ಕೂಗಿಕೊಳ್ಳುತ್ತಿದ್ದರು. ಅಂತಃಪುರದ ಸ್ತ್ರೀಯರೆಲ್ಲರೂ ಹೀಗೆ ಕೂಗಿಕೊಂಡು ರೋದನಮಾಡುತ್ತಿದ್ದರು. ರೋದನಮಾಡುತ್ತಿದ್ದ ಜನರನ್ನು ಹಿಂದಿರುಗಿ ನೋಡಿದ ಶ್ರೀರಾಮನು–ವಿಷಣ್ಣನೂ, ಭ್ರಾಂತನೂ ಆಗಿದ್ದ ರಾಜನೂ ಮತ್ತು ತಾಯಿಯೂ ತನ್ನನ್ನು ಹಿಂಬಾಲಿಸಿಕೊಂಡೇ ಬರುತ್ತಿರುವುದನ್ನು ನೋಡಿದನು.

ಸ ಬದ್ಧ ಇವ ಪಾಶೇನ ಕಿಶೋರೋ ಮಾತರಂ ಯಥಾ ।
ಧರ್ಮಪಾಶೇನ ಸಂಯುಕ್ತಃ ಪ್ರಕಾಶಂ ನಾಭ್ಯುದೈಕ್ಷತ ॥೪೦॥

ಹಗ್ಗದಿಂದ ಕಟ್ಟಲ್ಪಟ್ಟ ಕುದುರೆಮರಿಯು ಯಾವ ರೀತಿಯಲ್ಲಿ ತಾಯ್ಕುದುರೆಯನ್ನು ಕಂಡರೂ ಅದರ ಸಮೀಪಕ್ಕೆ ಹೋಗಲಾರದೋ– ಅದೇ ರೀತಿಯಲ್ಲಿ ಧರ್ಮಪಾಶದಿಂದ ಕಟ್ಟಲ್ಪಟ್ಟಿದ್ದ ಶ್ರೀರಾಮನೂ ಬಹಿರಂಗವಾಗಿ ತನ್ನ ತಾಯಿ-ತಂದೆಗಳ ಕಡೆಗೆ ನೋಡಲಿಲ್ಲ. (ಕಡೆಗಣ್ಣಿನಿಂದ ವೀಕ್ಷಿಸಿದನು. ಆದರೆ ಮನಸ್ಸೆಲ್ಲವೂ ಅವರಲ್ಲಿಯೇ ಲೀನವಾಗಿದ್ದಿತು.)

ಪಲ್ಲಕ್ಕಿಯಲ್ಲಿ ಕುಳಿತು ಬರಬೇಕಾಗಿದ್ದ ಕೌಸಲ್ಯಾ-ದಶರಥರು ಕಾಲ್ನಡಿಗೆಯಲ್ಲಿಯೇ ಬರುತ್ತಿದ್ದರು. ದುಃಖಪಡಲು ಯೋಗ್ಯರಾಗಿರಲಿಲ್ಲ. ಸುಖಪಡಲು ಯೋಗ್ಯರಾಗಿದ್ದರು. ಅಂತಹ ತಾಯಿ-ತಂದೆಗಳನ್ನು ನೋಡಿ ಶ್ರೀರಾಮನು ಶೀಘ್ರವಾಗಿ ಮುನ್ನಡೆಯುವಂತೆ ಸಾರಥಿಯನ್ನು ಪ್ರಚೋದಿಸಿದನು. ಪುರುಷಸಿಂಹನಾದ ಶ್ರೀರಾಮನಿಗೆ–ಅಂಕುಶದಿಂದ ಪ್ರಹರಿಸಲ್ಪಟ್ಟ ಆನೆಯಂತೆ–ತಾಯಿ-ತಂದೆಗಳ ದುಃಖಜನಕವಾದ ಪರಿಸ್ಥಿತಿಯನ್ನು ನೋಡಿ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಗೋಶಾಲೆಯಲ್ಲಿ ಕಟ್ಟಿರುವ ತನ್ನ ಕರುವಿನ ಮೇಲಿನ ವಾತ್ಸಲ್ಯದಿಂದ ತಾಯಿಹಸುವು ಯಾವ ರೀತಿಯಲ್ಲಿ ತನ್ನ ಕಂದನನ್ನು ಕಾಣುವ ಸಲುವಾಗಿ ಗೋಶಾಲೆಯ ಕಡೆಗೇ ಓಡಿಬರುವುದೋ–ಅದೇ ರೀತಿಯಲ್ಲಿ ಧರ್ಮಪಾಶದಿಂದ ಬದ್ಧನಾಗಿ ರಥದಲ್ಲಿ ಕುಳಿತಿದ್ದ ತನ್ನ ಮಗನನ್ನು ಕಾಣುವ ಸಲುವಾಗಿ ಕೌಸಲ್ಯಾದೇವಿಯು ಧಾವಿಸಿ ಬಂದಳು. ಕೌಸಲ್ಯಾದೇವಿಯು ರೋದನಮಾಡುತ್ತಾ ರಥದ ಹಿಂದೆ ಓಡಿಯೋಡಿ ಬರುತ್ತಿದ್ದಳು. 'ಹಾ ರಾಮ! ಹಾ ಸೀತೇ! ಹಾ ಲಕ್ಷ್ಮಣ! ನಿಮ್ಮನ್ನೊಮ್ಮೆ ನೋಡಿ ಹೋಗುವೆನು. ನಿಲ್ಲಿರಿ. ಅಯ್ಯೋ!'–ಎಂದು ಕೂಗಿಕೊಳ್ಳುತ್ತಿದ್ದಳು. ರಾಮ-ಲಕ್ಷ್ಮಣ-ಸೀತೆಯರ ಸಲುವಾಗಿ ಕಣ್ಣೀರು ಸುರಿಸುತ್ತಿದ್ದಳು. ನರ್ತಕಿಯಂತೆ ಅತ್ತಲಿತ್ತ ಪರಿಭ್ರಮಿಸುತ್ತಾ ಬರುತ್ತಿದ್ದ ತಾಯಿಯನ್ನು ಶ್ರೀರಾಮನೊಮ್ಮೆ ನೋಡಿದನು. ಆ ಸಮಯದಲ್ಲಿ ರಾಜನೂ ಸುಮಂತ್ರನನ್ನು ಕೂಗಿ ರಥವನ್ನು ನಿಲ್ಲಿಸುವಂತೆ ಹೇಳಿದನು. ಶ್ರೀರಾಮನು ಮಾತ್ರ–'ಯಾಹಿ ಯಾಹಿ–ಮುಂದೆ ಹೋಗು. ರಥವನ್ನು ನಿಲ್ಲಿಸಬೇಡ'–ಎಂದು ಪದೇ-ಪದೇ ಹೇಳುತ್ತಲೇ ಇದ್ದನು. ಎರಡು ಚಕ್ರಗಳ ಮಧ್ಯದಲ್ಲಿ ಸಿಕ್ಕಿಕೊಂಡವನಂತೆ–ಸಾರಥಿಯಾಗಿದ್ದ ಸುಮಂತ್ರನ

ಮನಸ್ಸು ಸಂಕಟಪಟ್ಟಿತು. ಡೋಲಾಯಮಾನವಾದ ಮನಸ್ಸಿನಿಂದ ಬಹುವಾಗಿ ಯೋಚಿಸುತ್ತಿದ್ದ ಸುಮಂತ್ರನಿಗೆ ಶ್ರೀರಾಮನು ಹೇಳಿದನು :

"ಸುಮಂತ್ರ! ನೀನೀಗ ರಥವನ್ನು ನಿಲ್ಲಿಸದೇ ಶೀಘ್ರವಾಗಿ ಮುಂದುವರಿಯುವುದೇ ಉಚಿತವಾಗಿದೆ. ನೀನು ಅರಮನೆಗೆ ಹಿಂದಿರುಗಿದನಂತರ ರಾಜನು ರಥವನ್ನೇಕೆ ನಿಲ್ಲಿಸಲಿಲ್ಲವೆಂದು ಪ್ರಶ್ನಿಸಿದರೆ–ನೀನು ಕೂಗಿದುದು ಕೇಳಿಸಲಿಲ್ಲವೆಂದು ಉತ್ತರಿಸಬಹುದು. ಹಾಗೆ ಮಾಡದೇ ರಾಜನು ಹೇಳಿದಂತೆ ನೀನು ರಥವನ್ನು ನಿಲ್ಲಿಸಿದರೆ ಕೆಟ್ಟಪರಿಣಾಮವಾಗುತ್ತದೆ. ಚಿರಂ ದುಃಖಸ್ಯ ಪಾಪಿಷ್ಠಂ–ದುಃಖದ ಚಿರಂತನತ್ವವು ಪಾಪಕ್ಕೆ ಕಾರಣವಾಗುತ್ತದೆ. (ನಾವು ದೂರವಾದರೆ ರಾಜನ ದುಃಖವೂ ಕಡಿಮೆಯಾಗಬಹುದು.)"

ಸುಮಂತ್ರನು ಶ್ರೀರಾಮನ ಮಾತಿಗೆ ಒಪ್ಪಿ ರಥದ ಹಿಂದೆ ಬರುತ್ತಿದ್ದ ಜನರನ್ನು ಹಿಂದೆ ಸರಿದು ನಿಲ್ಲುವಂತೆಯೂ, ಮುಂದೆ ಪ್ರಯಾಣಮಾಡಲು ಅನುಮತಿಸಬೇಕೆಂತಲೂ ಕೇಳಿಕೊಂಡನು. ಕಡಿವಾಣಗಳನ್ನೇ ಹಿಡಿದಿದ್ದರೂ ಮುಂದೆ-ಮುಂದೆ ಹೋಗುತ್ತಿದ್ದ ಕುದುರೆಗಳನ್ನು ಇನ್ನೂ ಶೀಘ್ರವಾಗಿ ಹೋಗುವಂತೆ ಚಪ್ಪರಿಸಿದನು. ರಥವು ಬಹುವೇಗದಿಂದ ಹೊರಟು ಹೋಗಲು ಹಿಂದುಳಿದ ರಾಜಪರಿವಾರದವರು ನಿಂತಲ್ಲಿಯೇ ಶ್ರೀರಾಮನಿಗೆ ಪ್ರದಕ್ಷಿಣೆ ಮಾಡಿ ತಮ್ಮ-ತಮ್ಮ ಮನೆಗಳಿಗೆ ಹಿಂದಿರುಗಿದರು. ಆದರೆ ಜನಸಮೂಹವು ಮನಸ್ಸಿನಿಂದಲೂ ಕಣ್ಣೀರಿನಿಂದಲೂ ಹಿಮ್ಮುಖರಾಗಲೇ ಇಲ್ಲ. (ಕಣ್ಣೀರು ಬತ್ತಲೇ ಇಲ್ಲ.) ಪುರಜನರ ಮನಸ್ಸು ಶ್ರೀರಾಮನನ್ನನು ಸರಿಸಿಯೇ ಹೊರಟುಹೋಯಿತು.

ಯಮಿಚ್ಛೇತ್ಪುನರಾಯಾಂತಂ ನೈನಂ ದೂರಮನುವ್ರಜೇತ್ ॥೫೦॥

'ಪ್ರಯಾಣಮಾಡುವ ಯಾವನನ್ನು ನಾವು ಸುಖದಿಂದ ನಮ್ಮ ಬಳಿಗೆ ಪುನಃ ಬರಲು ಅಪೇಕ್ಷಿಸುವೆವೋ–ಅಂತಹವನ ಜೊತೆಯಲ್ಲಿ ಬಹಳ ದೂರದವರೆಗೂ ಹೋಗಬಾರದು'–ಹೀಗೆ ಅಮಾತ್ಯರು ದಶರಥನಿಗೆ ಸ್ಮೃತಿ ವಾಕ್ಯವನ್ನು ಉದ್ಧರಿಸಿ ಹೇಳಿದರು. ಬೆವರಿದ ಶರೀರದಿಂದಲೂ, ವಿಷಣ್ಣವಾದ ಮುಖದಿಂದಲೂ ಕೂಡಿದ್ದ, ಬಹಳ ದುಃಖಿತನಾಗಿದ್ದ ದಶರಥನು, ಅಮಾತ್ಯರ ಸರ್ವಗುಣಗಳಿಂದ ಯುಕ್ತವಾದ ಆ ಮಾತನ್ನು ಕೇಳಿ, ಭಾರ್ಯೆ

ಯೊಡನೆ ಶ್ರೀರಾಮನು ಪ್ರಯಾಣಮಾಡಿದ ಮಾರ್ಗವನ್ನೇ ದಿಟ್ಟಿಸಿ ನೋಡುತ್ತಾ ಅಲ್ಲಿಯೇ ನಿಂತಿದ್ದನು.

೪೦ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೪೧ನೆಯ ಸರ್ಗ*

ಶ್ರೀರಾಮನ ವನಗಮನದಿಂದ ರಾಣೀವಾಸದವರು ದುಃಖಪಟ್ಟುದು : ನಗರವಾಸಿಗಳ ಶೋಕಾಕುಲತೆ

ತಸ್ಮಿಂಸ್ತು ಪುರುಷವ್ಯಾಘ್ರೇ ನಿಷ್ಕ್ರಾಮತಿ ಕೃತಾಞ್ಜಲೌ ।
ಆರ್ತಶಬ್ದೋ ಹಿ ಸಂಜಜ್ಞೇ ಸ್ತ್ರೀಣಾಮನ್ತಃಪುರೇ ಮಹಾನ್ ॥೧॥

ಪುರುಷಶ್ರೇಷ್ಠನಾದ ಶ್ರೀರಾಮನು ಕೈಮುಗಿದುಕೊಂಡು ಅಂತಃಪುರದಿಂದ ಹೊರಡುತ್ತಿರುವಾಗ ಸ್ತ್ರೀಯರ ಅಂತಃಪುರದಲ್ಲಿ ಮಹತ್ತರವಾದ ಆರ್ತನಾದವುಂಟಾಯಿತು.

“ಅಯ್ಯೋ! ಅನಾಥರಾದ ಜನರಿಗೆ, ದುರ್ಬಲರಿಗೆ, ತಪಸ್ವಿಗಳಿಗೆ ಯಾವನು ಶರಣ್ಯನೂ ರಕ್ಷಕನೂ ಆಗಿದ್ದನೋ–ಅಂತಹ ನಾಥನು ಎಲ್ಲಿಗೆ ಹೋಗುತ್ತಿದ್ದಾನೆ? ನಾವು ಯಾವಾಗಲಾದರೊಮ್ಮೆ ಅವನನ್ನು ನಿಂದಿಸಿದರೂ ಅವನು ಕೋಪಗೊಳ್ಳುತ್ತಿರಲಿಲ್ಲ. ಮತ್ತೊಬ್ಬರಿಗೆ ಕೋಪಬರುವಂತಹ ಮಾತುಗಳನ್ನೇ ಆಡುತ್ತಿರಲಿಲ್ಲ. ಯಾರಾದರೂ ಕೋಪಗೊಂಡಿದ್ದಲ್ಲಿ ಅವರನ್ನು ಪ್ರಿಯೋಕ್ತಿಗಳಿಂದ ಪ್ರಸನ್ನಗೊಳಿಸುತ್ತಿದ್ದನು. ಪ್ರತಿಯೊಬ್ಬರ ದುಃಖದಲ್ಲಿಯೂ ಸಹಭಾಗಿಯಾಗುತ್ತಿದ್ದನು. ಅಂತಹ ಸದ್ಗುಣಸಂಪನ್ನನಾದ ಶ್ರೀರಾಮನು ಎಲ್ಲಿಗೆ ಹೋಗುತ್ತಿದ್ದಾನೆ? ಮಹಾತೇಜಸ್ವಿಯಾದ ಶ್ರೀರಾಮನು

---

* ಈ ಸರ್ಗದ ಮೊದಲಲ್ಲಿರುವ ೭ ಶ್ಲೋಕಗಳು ೨೦ನೆಯ ಸರ್ಗದ ಮೊದಲಲ್ಲಿ ಸ್ವಲ್ಪ ವ್ಯತ್ಯಾಸವಾಗಿ ಬಂದಿವೆ. ಆದರೆ ಈ ಸಂದರ್ಭಕ್ಕೆ ಈ ಶ್ಲೋಕಗಳೂ ಹೊಂದಿಕೊಳ್ಳುವುದಿಲ್ಲ. ಮುಂದಿನ ಸರ್ಗದ ಮೊದಲನೆಯ ಶ್ಲೋಕವು ೪೨ನೆಯ ಸರ್ಗದ ಕಡೆಯ ಶ್ಲೋಕದಿಂದ ಅನುವರ್ತಿತವಾಗಿದೆ. ಈ ಸರ್ಗವು ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಇವರ ಪುಸ್ತಕದಲ್ಲಿಯೂ ಇದೆ. ೮ನೆಯ ಶ್ಲೋಕದಿಂದ ಮುಂದಕ್ಕೆ ಇಲ್ಲಿಯ ಸಂದರ್ಭಕ್ಕೆ ಹೊಂದಿಕೊಳ್ಳುವ ಪ್ರಕರಣವು ಬರುತ್ತದೆ. ಆದುದರಿಂದ ಮೊದಲ ೮ ಶ್ಲೋಕಗಳು ಲೇಖನದೋಷದಿಂದ ಈ ಸರ್ಗದಲ್ಲಿಯೂ ಸೇರಿರಬಹುದೆಂದು ಭಾವಿಸಬಹುದಾಗಿದೆ.

ಸ್ವಂತತಾಯಿಯಾದ ಕೌಸಲ್ಯೆಯ ವಿಷಯದಲ್ಲಿ ಹೇಗೆ ನಡೆದುಕೊಳ್ಳು ತ್ತಿದ್ದನೋ– ಹಾಗೆಯೇ ನಮ್ಮ ವಿಷಯದಲ್ಲಿಯೂ ನಡೆದುಕೊಳ್ಳುತ್ತಿದ್ದನು. ಅಂತಹ ಮಹಾತ್ಮನು ಈಗೆಲ್ಲಿಗೆ ಹೋಗುತ್ತಿದ್ದಾನೆ? ರಾಜನು ಕೈಕೇಯಿಯಿಂದ ಪೀಡಿಸಲ್ಪಟ್ಟವನಾಗಿ ರಾಮನನ್ನು ಅರಣ್ಯಕ್ಕೆ ಹೋಗುವಂತೆ ಪ್ರೇರಿಸಿದನು. ಸಕಲಜಗದ್ರಕ್ಷಕನಾದ ಶ್ರೀರಾಮನು ಎಲ್ಲಿಗೆ ಹೋಗುತ್ತಿ ದ್ದಾನೆ? ಪ್ರಪಂಚದ ಸಕಲಪ್ರಾಣಿಗಳಿಗೂ ಪರಮಪ್ರಿಯನಾದ, ಧರ್ಮಯುಕ್ತನಾದ, ಸತ್ಯವ್ರತನಾದ ಶ್ರೀರಾಮನನ್ನು ಈ ನಮ್ಮ ರಾಜನು ಅರಣ್ಯಕ್ಕೆ ಕಳುಹಿಸುತ್ತಿದ್ದಾನೆ. ನಿಶ್ಚಯವಾಗಿಯೂ ಇವನು ಬುದ್ಧಿಹೀನನಾಗಿದ್ದಾನೆ."

ಹೀಗೆ ಎಲ್ಲ ರಾಮಮಹಿಷಿಯರೂ ಕರುಗಳನ್ನು ಕಳೆದುಕೊಂಡ ಹಸು ಗಳಂತೆ ದುಃಖಪೀಡಿತರಾಗಿ ಬಿಕ್ಕಿ-ಬಿಕ್ಕಿ ಅಳುತ್ತಾ ಸಂಕಟದಿಂದ ಕೂಗಿ ಕೊಳ್ಳುತ್ತಿದ್ದರು. ಪುತ್ರಶೋಕದಿಂದ ಪರಿತಪಿಸುತ್ತಿದ್ದ ದಶರಥನೂ ಅಂತಃ ಪುರದಲ್ಲಾಗುತ್ತಿದ್ದ ಪತ್ನಿಯರ ಆರ್ತನಾದಗಳನ್ನು ಕೇಳಿ ಮತ್ತಷ್ಟು ದುಃಖಿತನಾದನು.

ನಾಗ್ನಿಹೋತ್ರಾಣ್ಯಹೂಯನ್ತ ನಾಪಚನ್ಗೃಹಮೇಧಿನಃ ।
ಅಕುರ್ವನ್ನ ಪ್ರಜಾಃ ಕಾರ್ಯಂ ಸೂರ್ಯಶ್ಚಾನ್ತರಧೀಯತ ॥೯॥

ವ್ಯಸೃಜನ್ಕಬಲಾನ್ನಾಗಾ ಗಾವೋ ವತ್ಸಾನ್ನ ಪಾಯಯನ್ ।
ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನನ್ದತ ॥೧೦॥

ತ್ರಿಶಙ್ಕುರ್ಲೋಹಿತಾಙ್ಗಶ್ಚ ಬೃಹಸ್ಪತಿಬುಧಾವಪಿ ।
ದಾರುಣಾಃ ಸೋಮಮಭ್ಯೇತ್ಯ ಗ್ರಹಾಃ ಸರ್ವೇ ವ್ಯವಸ್ಥಿತಾಃ ॥೧೧॥

ಶ್ರೀರಾಮನು ಅರಣ್ಯಕ್ಕೆ ಪ್ರಯಾಣಮಾಡಲಾಗಿ ಆಹಿತಾಗ್ನಿಗಳು ಅಗ್ನಿಹೋತ್ರಗಳನ್ನು ಮಾಡಲಿಲ್ಲ. ಗೃಹಸ್ಥರಾದವರು ಪಾಕಯಜ್ಞವನ್ನು ಮಾಡಲಿಲ್ಲ. (ಸಂಸಾರಿಗಳು ಅಡಿಗೆಮಾಡಲಿಲ್ಲ.) ಪ್ರಜೆಗಳು ತಮ್ಮ ದೈನಂದಿನಕಾರ್ಯಗಳಲ್ಲಿ ಉದಾಸೀನರಾದರು. ಸೂರ್ಯನೂ ಅಸ್ತಂಗತ ನಾದನು. ಗಜಶಾಲೆಯಲ್ಲಿದ್ದ ಆನೆಗಳು ಮುಂದಿದ್ದ ಆಹಾರವನ್ನು ಮುಟ್ಟ ಲಿಲ್ಲ. ಶ್ರೀರಾಮನನ್ನು ಆಗಲಿದ ದುಃಖದಿಂದ ಹಸುಗಳು ಕರುಗಳಿಗೆ ಹಾಲು ಣಿಸಲಿಲ್ಲ. ಆ ಸಮಯದಲ್ಲಿ ಸ್ತ್ರೀಯರು ಚೊಚ್ಚಲ ಗಂಡುಮಗುವನ್ನು ಪಡೆ

ದರೂ ಸಂತೋಷಗೊಳ್ಳಲಿಲ್ಲ. ತ್ರಿಶಂಕುವೂ*, ಕುಜನೂ, ಬೃಹಸ್ಪತಿ-ಬುಧರೂ, ಇತರ ಗ್ರಹಗಳೂ ದಾರುಣರಾಗಿ (ಕ್ರೂರವಾದ ಕಾಂತಿಯಿಂದ ಕೂಡಿದವರಾಗಿ) ಚಂದ್ರನ ಸಮೀಪದಲ್ಲಿದ್ದರು.

ನಕ್ಷತ್ರಾಣಿ ಗತಾರ್ಚೀಂಷಿ ಗ್ರಹಾಶ್ಚ ಗತತೇಜಸಃ ।
ವಿಶಾಖಾಸ್ತು ಸಧೂಮಾಶ್ಚ ನಭಸಿ ಪ್ರಚಕಾಶಿರೇ ॥೧೨॥

ಶ್ರೀರಾಮನು ವನವಾಸಕ್ಕೆ ಹೊರಟ ಕಾಲದಲ್ಲಿ ಆಕಾಶದಲ್ಲಿನ ನಕ್ಷತ್ರಗಳು ತಮ್ಮ ಸ್ವಾಭಾವಿಕವಾದ ಕಾಂತಿಯಿಂದ ವಿಹೀನವಾಗಿದ್ದುವು. ಗ್ರಹಗಳೂ ತೇಜೋಹೀನವಾಗಿದ್ದುವು. ಅವು ವಿಮಾರ್ಗದಲ್ಲಿದ್ದು ಹೊಗೆಯೊಡನೆ ಕೂಡಿ ಮಲಿನವಾಗಿ ಕಾಣಿಸುತ್ತಿದ್ದುವು.[1]

ಶ್ರೀರಾಮನು ಅರಣ್ಯಕ್ಕೆ ಹೋಗುತ್ತಿದ್ದಾಗ–ಮೇಘಗಳಿಂದ ಯುಕ್ತವಾದ ಬಿರುಗಾಳಿಯ ವೇಗದಿಂದ ಸಮುದ್ರವು ಎದ್ದೆದ್ದು ಕುಣಿಯುವಂತೆ–ಅಯೋಧ್ಯಾಪಟ್ಟಣವು ಕಂಪಿಸಿತು. ಕಾರ್ಮುಗಿಲಿನ ಆಚ್ಛಾದನೆಯಿಂದಾಗಿ ಎಲ್ಲ ದಿಕ್ಕುಗಳೂ ಕತ್ತಲಿನಿಂದ ಕವಿದುವು. ಗ್ರಹಗಳಾಗಲೀ ನಕ್ಷತ್ರಗಳಾಗಲೀ ಆಕಾಶದಲ್ಲಿ ಪ್ರಕಾಶಿಸುತ್ತಿರಲಿಲ್ಲ. ಇದ್ದಕ್ಕಿದ್ದಂತೆಯೇ ಎಲ್ಲ ಪ್ರಜೆಗಳೂ ಬಹಳ ಖಿನ್ನರಾದರು. ಆಹಾರದಲ್ಲಾಗಲೀ ವಿಹಾರದಲ್ಲಾಗಲೀ

---

* ತ್ರಿಶಂಕು ಎಂದರೆ ಶನಿಗ್ರಹ. ಹನ್ನೆರಡನೆಯ, ಎಂಟನೆಯ ಮತ್ತು ಜನ್ಮದ ಸ್ಥಾನಗಳಲ್ಲಿ ತ್ರಿಶಂಕುವಿನಂತೆ ಇರುವವನು–ಎಂದು ಕೆಲವರ ಅಭಿಪ್ರಾಯ. ತ್ರಿಶಂಕುವು ಇಕ್ಷ್ವಾಕುವಂಶದ ಒಬ್ಬ ರಾಜ. ವಿಶ್ವಾಮಿತ್ರರ ಅನುಗ್ರಹದಿಂದ ವಿಶಿಷ್ಟಸ್ವರ್ಗವನ್ನು ಪಡೆದು ನಕ್ಷತ್ರವೊಂದರ ಅಧಿದೇವತೆಯಾದನು. ತ್ರಿಶಂಕುವು ಒಂದು ನಕ್ಷತ್ರವೇ ಹೊರತು ಗ್ರಹವಲ್ಲ. ಆದರೆ ಗ್ರಹಗಳ ಮಧ್ಯದಲ್ಲಿ ಸೇರಿರುವುದರಿಂದ 'ಛತ್ರಿನ್ಯಾಯ'ದಿಂದ ಗ್ರಹವೆಂದು ಕರೆಯಲ್ಪಟ್ಟಿದೆ. ಛತ್ರಿ ಹಿಡಿದುಕೊಂಡಿರುವವರ ಮಧ್ಯದಲ್ಲಿ ಛತ್ರಿ ಹಿಡಿದುಕೊಳ್ಳದೇ ಇರುವವನೂ ಒಬ್ಬನಿದ್ದರೆ ಅವನಿಗೂ 'ಛತ್ರೀ'–'ಛತ್ರಿ ಹಿಡಿದಿರುವವನು' ಎಂಬ ವ್ಯವಹಾರವು ಬರುತ್ತದೆ. 'ಶಕ್ರಶ್ಚ ಲೋಹಿತಾಙ್ಗಶ್ಚ' ಎಂಬ ಪಾಠಾಂತರವೂ ಇದೆ. ಇಲ್ಲಿ ತ್ರಿಶಂಕುವಿನ ಪ್ರಶ್ನೆಯೇ ಬರುವುದಿಲ್ಲ.

[1] ವಿಶಾಖಾಃ : ಎಂಬುದಕ್ಕೆ ವಿಶಾಖಾನಕ್ಷತ್ರಗಳು–ಎಂದೂ ಅರ್ಥಮಾಡಿರುತ್ತಾರೆ. **ತದಿನ್ದ್ರಾಗ್ನೀಕೃಣುತಾಂ ತದ್ವಿಶಾಖೇ ।** ಎಂಬ ಶ್ರುತಿವಚನದಂತೆ ಇಂದ್ರಾಗ್ನೀ ದೇವತಾಕವಾದ ಇದು ದ್ವಿವಚನದಲ್ಲಿಯೇ ಇರಬೇಕು. ಆದುದರಿಂದ ಇಲ್ಲಿರುವ ವಿಶಾಖಾಃ ಎಂಬುದು ನಕ್ಷತ್ರವಾಚಕವಲ್ಲ.

ಯಾರಿಗೂ ಆಸಕ್ತಿಯೇ ಇರಲಿಲ್ಲ. ಅಯೋಧ್ಯಾಪಟ್ಟಣದಲ್ಲಿ ಶೋಕ ಪರಂಪರೆಯಿಂದ* ಸಂತಪ್ತವಾಗಿದ್ದ ಜನಸಮೂಹವು ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಾ ದಶರಥನನ್ನು ನಿಂದಿಸುತ್ತಿದ್ದಿತು. ರಾಜಮಾರ್ಗದಲ್ಲಿ ಸಂಚರಿಸುತ್ತಿದ್ದ ಎಲ್ಲ ಪ್ರಜೆಗಳೂ ಕಂಬನಿದುಂಬಿದ ಮುಖವುಳ್ಳವರಾಗಿ ದ್ದರು. ಸಂತುಷ್ಟವಾದ ಮುಖಭಾವವನ್ನು ಹೊಂದಿದ್ದ ಒಬ್ಬನಾದರೂ ಆ ರಾಜಮಾರ್ಗದಲ್ಲಿ ಕಾಣಲಿಲ್ಲ. ಸಮಸ್ತರೂ ಶೋಕಸಾಗರದಲ್ಲಿ ಮುಳುಗಿ ಹೋಗಿದ್ದರು.

ನ ವಾತಿ ಪವನಃ ಶೀತೋ ನ ಶಶೀ ಸೌಮ್ಯದರ್ಶನಃ ।
ನ ಸೂರ್ಯಸ್ತಪತೇ ಲೋಕಂ ಸರ್ವಂ ಪರ್ಯಾಕುಲಂ ಜಗತ್ ॥೧೮॥

ವಾಯುವು ಶೀತಳವಾಗಿ ಬೀಸುತ್ತಿರಲಿಲ್ಲ. ಚಂದ್ರನು ಸೌಮ್ಯನಾಗಿ ಆಹ್ಲಾದಕರನಾಗಿರಲಿಲ್ಲ. ಸೂರ್ಯನು ತೇಜಸ್ಸಿನಿಂದ ಪ್ರಪಂಚವನ್ನು ಬೆಳಗು ತ್ತಿರಲಿಲ್ಲ. ಹೀಗೆ ಜಗತ್ತಿನಲ್ಲಿ ಎಲ್ಲವೂ ಅಸ್ತವ್ಯಸ್ತವಾಯಿತು.

ಅನರ್ಥಿನಃ ಸುತಾಃ ಸ್ತ್ರೀಣಾಂ ಭರ್ತಾರೋ ಭ್ರಾತರಸ್ತಥಾ ।
ಸರ್ವೇ ಸರ್ವಂ ಪರಿತ್ಯಜ್ಯ ರಾಮಮೇವಾನ್ವಚಿನ್ತಯನ್ ॥೧೯॥

ಶ್ರೀರಾಮನ ನಿರ್ಗಮನವಾದ ಬಳಿಕ ಅಯೋಧ್ಯೆಯಲ್ಲಿದ್ದ ಯಾರಿಗೂ ಏನೂ ಬೇಕಾಗಿರಲಿಲ್ಲ. ಮಕ್ಕಳು ಸ್ತನ್ಯವನ್ನು ಪಾನಮಾಡಲು ತಾಯಿಯರನ್ನು ಅಪೇಕ್ಷಿಸುತ್ತಿರಲಿಲ್ಲ. ಪತ್ನಿಯರು ಪತಿಯ ಸೇವೆಯನ್ನು ಮಾಡುತ್ತಿರಲಿಲ್ಲ. ಅಣ್ಣಂದಿರು ತಮ್ಮಂದಿರ ಯೋಗ-ಕ್ಷೇಮಗಳನ್ನಾಗಲೀ, ತಮ್ಮಂದಿರು ಅಣ್ಣಂದಿರ ಸೇವೆಯನ್ನಾಗಲೀ ಮಾಡಲು ಹೋಗುತ್ತಿರಲಿಲ್ಲ. ಸರ್ವರೂ ಸರ್ವವನ್ನೂ ಪರಿತ್ಯಜಿಸಿ ಶ್ರೀರಾಮನನ್ನೇ ನಿರಂತರವಾಗಿ ಚಿಂತಿಸುತ್ತಿದ್ದರು.

ಶ್ರೀರಾಮನ ಗೆಳೆಯರೆಲ್ಲರೂ ಬುದ್ಧಿಗೆಟ್ಟವರಾದರು. ಅವನ ವಿಯೋಗ

---

* ಶೋಕಪರ್ಯಾಯವೆಂಬುದಕ್ಕೆ 'ಶೋಕಗಳ ಪರಂಪರೆ' ಎಂದು ಅರ್ಥಮಾಡ ಬಹುದಾಗಿದೆ. ಶ್ರೀರಾಮನಿಗೆ ಪಟ್ಟಾಭಿಷೇಕಮಾಡದಿರುವುದು ಮೊದಲನೆಯ ಶೋಕದ ಕಾರಣವಾಗುತ್ತದೆ. ಅವನನ್ನು ರಾಜನು ಅರಣ್ಯಕ್ಕೆ ಕಳುಹಿಸಿದುದು ಎರಡನೆಯದು. ರಾಜಕುಮಾರನು ಚೀರವನ್ನು ಧರಿಸಿದ್ದು ಮೂರನೆಯದು. ಅವನ ಜೊತೆಯಲ್ಲಿ ಲಕ್ಷ್ಮಣ-ಸೀತೆಯರೂ ಹೊರಟಿದ್ದು ನಾಲ್ಕನೆಯದು. ಈ ರೀತಿಯಲ್ಲಿ ಇದನ್ನು ಶೋಕಪರಂಪರೆಯೆಂದು ಹೇಳಬಹುದಾಗಿದೆ.

ದಿಂದುಂಟಾದ ಶೋಕದ ಭಾರದಿಂದ ಸಮಾಕ್ರಾಂತರಾಗಿದ್ದ ಅವರು ಹಲವಾರು ದಿವಸಗಳವರೆಗೆ ನಿದ್ದೆಯನ್ನೇ ಮಾಡಲಿಲ್ಲ. ತ್ರೈಲೋಕ್ಯಾಧಿಪತಿಯಾದ ಇಂದ್ರನಿಂದ ರಹಿತವಾದ ಪರ್ವತಸಹಿತವಾದ ಭೂಮಿಯು (ಮಳೆ-ಬೆಳೆಗಳಿಲ್ಲದೇ) ಭಯದಿಂದಲೂ ಶೋಕದಿಂದಲೂ ಪೀಡಿಸಲ್ಪಟ್ಟು ಘೋರ ಶಬ್ದಮಾಡುತ್ತಾ ಹೇಗೆ ಕಂಪಿಸುವುದೋ–ಅದೇ ರೀತಿಯಲ್ಲಿ ಮಹಾತ್ಮನಾದ ಶ್ರೀರಾಮನಿಂದ ರಹಿತವಾದ ಗಜಾಶ್ವ-ಪದಾತಿಸೈನ್ಯಗಳಿಂದ ಕೂಡಿರುವ ಅಯೋಧ್ಯೆಯು ಕಂಪಿಸಿತು ಮತ್ತು ಘೋರವಾದ ಧ್ವನಿಯನ್ನೂ ಮಾಡಿತು.

ಳ೧ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೪೨ನೆಯ ಸರ್ಗ

ದಶರಥರಾಜನು ಮೂರ್ಛಿತನಾಗಿ ಬಿದ್ದುದು : ಶ್ರೀರಾಮನಿಗಾಗಿ ವಿಲಪಿಸಿದುದು : ಕೈಕೇಯಿಯನ್ನು ತನ್ನ ಬಳಿಗೆ ಬರಲು ವಿರೋಧಿಸಿದುದು : ಕೌಸಲ್ಯೆಯ ಸಹಾಯದಿಂದ ಅವಳ ಅಂತಃಪುರಕ್ಕೆ ಹೋದುದು : ಅಲ್ಲಿಯೂ ಶ್ರೀರಾಮನ ಸಲುವಾಗಿ ದುಃಖಿಸಿದುದು

ಯಾವತ್ತು ನಿರ್ಯತಸ್ತಸ್ಯ ರಜೋರೂಪಮದೃಶ್ಯತ ।
ನೈವೇಕ್ಷ್ವಾಕುವರಸ್ತಾವತ್ಸಂಜಹಾರಾತ್ಮಚಕ್ಷುಷೀ ॥೧॥

ಅರಣ್ಯಾಭಿಮುಖವಾಗಿ ಹೋಗುತ್ತಿದ್ದ ಶ್ರೀರಾಮನ ರಥದ ಕಡೆಗೇ ನೆಟ್ಟದೃಷ್ಟಿಯಿಟ್ಟು ನಿಂತಿದ್ದ ರಾಜನು ರಥದ ಚಲನೆಯಿಂದ ಮೇಲೇಳುತ್ತಿದ್ದ ಧೂಳಿಯು ಕಾಣುವವರೆಗೂ ತನ್ನ ದೃಷ್ಟಿಯನ್ನು ಹಿಂದಕ್ಕೆ ತೆಗೆದುಕೊಳ್ಳಲೇ ಇಲ್ಲ. ಎಲ್ಲಿಯವರೆಗೆ ರಾಜನು ತನ್ನ ಪ್ರಿಯನಾದ ಮತ್ತು ಪರಮಧಾರ್ಮಿಕನಾದ ಪುತ್ರನನ್ನು ಕಾಣುತ್ತಿದ್ದನೋ–ಅಲ್ಲಿಯವರೆಗೂ ಭೂಮಿಯ ಮೇಲಿದ್ದ ಅವನ ಶರೀರವು ಮಗನನ್ನು ನೋಡಲು ವೃದ್ಧಿಹೊಂದುತ್ತಲೇ ಇದ್ದಿತು. (ಎದ್ದೆದ್ದು ನಿಂತು ನೋಡುತ್ತಿದ್ದನು.) ಯಾವಾಗ ರಥಚಕ್ರದಿಂದ ಹುಟ್ಟುತ್ತಿದ್ದ ಧೂಳಿಯು ದಶರಥನಿಗೆ ಕಾಣಲಿಲ್ಲವೋ–ಆಗ ರಾಜನು ಪರಮದುಃಖಿತನಾಗಿ ವಿಷಣ್ಣನಾಗಿ ಭೂಮಿಯಲ್ಲಿ ಬಿದ್ದನು. ರಾಜನು ಕೆಳಕ್ಕೆ ಬಿದ್ದೊಡನೆಯೇ ಪಕ್ಕದಲ್ಲಿಯೇ ನಿಂತಿದ್ದ ಕೌಸಲ್ಯಾದೇವಿಯು

ಮೇಲಕ್ಕೆತ್ತುವ ಸಲುವಾಗಿ ರಾಜನ ಬಲತೋಳನ್ನು ಹಿಡಿದುಕೊಂಡಳು. ಭರತನಿಗೆ ಪರಮಪ್ರಿಯಳಾದ ಕೈಕೇಯಿಯು ರಾಜನ ಎಡತೋಳನ್ನು ಹಿಡಿದುಕೊಂಡಳು.

ಕೈಕೇಯಿಯು ತನ್ನ ಎಡತೋಳನ್ನು ಹಿಡಿದು ನಿಂತಿರುವುದನ್ನು ನೋಡಿ ನೀತಿಸಂಪನ್ನನಾದ, ಸದಾಚಾರಸಂಪನ್ನನಾದ, ಪರಮಧಾರ್ಮಿಕ ನಾದ ರಾಜನು ವ್ಯಥೆಗೊಂಡು ಕೈಕೇಯಿಗೆ ಹೇಳಿದನು :

ಕೈಕೇಯಿ ಮಾ ಮಮಾಙ್ಗಾನಿ ಸ್ಪ್ರಾಕ್ಷೀಸ್ತ್ವಂ ದುಷ್ಟಚಾರಿಣಿ ।
ನ ಹಿ ತ್ವಾಂ ದ್ರಷ್ಟುಮಿಚ್ಛಾಮಿ ನ ಭಾರ್ಯಾ ನ ಚ ಬಾನ್ಧವೀ ॥೬॥

"ಪಾಪಿಷ್ಠಳೇ! ದೂರಸರಿದು ನಿಲ್ಲು. ನನ್ನ ಅವಯವಗಳನ್ನು ಮುಟ್ಟಬೇಡ. ನಿನ್ನನ್ನು ನೋಡಲು ಕೂಡ ನನಗೆ ಇಷ್ಟವಿಲ್ಲ. ಇನ್ನು ಮೇಲೆ ನೀನು ನನಗೆ ಭಾರ್ಯೆಯೂ ಅಲ್ಲ ; ಬಂಧುವೂ ಅಲ್ಲ.

ಯೇ ಚ ತ್ವಾಮನುಜೀವನ್ತಿ ನಾಹಂ ತೇಷಾಂ ನ ತೇ ಮಮ ।
ಕೇವಲಾರ್ಥಪರಾಂ ಹಿ ತ್ವಾಂ ತ್ಯಕ್ತಧರ್ಮಾಂ ತ್ಯಜಾಮ್ಯಹಮ್ ॥೭॥

ನಿನ್ನನ್ನು ಆಶ್ರಯಿಸಿಕೊಂಡು ಯಾರು ಜೀವಿಸುತ್ತಿರುವರೋ– ಅವರಿಗೂ ನಾನು ರಾಜನಲ್ಲ. ಅವರು ನನ್ನ ಪರಿವಾರಕ್ಕೆ ಸೇರಿದವರೂ ಆಗುವುದಿಲ್ಲ. ಕೇವಲ ಅರ್ಥಪರಳಾದ, ಸನಾತನಧರ್ಮವನ್ನು ಸಂಪೂರ್ಣ ವಾಗಿ ತ್ಯಜಿಸಿರುವ ನಿನ್ನನ್ನು ಪರಿತ್ಯಜಿಸುತ್ತೇನೆ.

ಅಗೃಹ್ಣಾಂ ಯಚ್ಚ ತೇ ಪಾಣಿಮಗ್ನಿಂ ಪರ್ಯಣಯಂ ಚ ಯತ್ ।
ಅನುಜಾನಾಮಿ ತತ್ಸರ್ವಮಸ್ಮಿನ್ ಲೋಕೇ ಪರತ್ರ ಚ ॥೮॥

ದುಷ್ಟಹೃದಯಳೇ! ನಿನ್ನ ಪಾಣಿಗ್ರಹಣ, ಆ ಸಮಯದಲ್ಲಿ ಮಾಡಿದ ಅಗ್ನಿಪ್ರದಕ್ಷಿಣೆ–ಎಲ್ಲವನ್ನೂ ಪರಿತ್ಯಜಿಸುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಉಂಟಾಗಿರುವ ಫಲಗಳನ್ನು ಈ ಲೋಕದಲ್ಲಿಯೂ ಪರಿತ್ಯಜಿಸಿದ್ದೇನೆ. ಪರಲೋಕದಲ್ಲಿಯೂ ಪರಿತ್ಯಜಿಸಿದ್ದೇನೆ.*

---

* ಪಾಣಿಗ್ರಹಣದಿಂದ ಲೋಕದಲ್ಲಿ ಪ್ರಾಪ್ತವಾದ ಫಲವೆಂದರೆ ಪುತ್ರಪ್ರಾಪ್ತಿ. ಆಮುಷ್ಮಿಕಫಲವನ್ನು ಕೊಡತಕ್ಕುವುಗಳು. ಪತ್ನಿಯೊಡನೆ ಮಾಡಿದ ಅಗ್ನಿಹೋತ್ರಾದಿಗಳು.

ಭರತಶ್ಚೇತ್ಪ್ರತೀತಃ ಸ್ಯಾದ್ರಾಜ್ಯಂ ಪ್ರಾಪ್ಯೈದಮವ್ಯಯಮ್ ।
ಯನ್ಮೇ ಸ ದದ್ಯಾತ್ಪಿತ್ರರ್ಥಂ ಮಾಂ ಮಾ ತದ್ದತ್ತಮಾಗಮತ್ ॥೯॥

ನಿರ್ಬಾಧಿತವಾದ ಈ ರಾಜ್ಯವನ್ನು ಪಡೆದು ಭರತನೇನಾದರೂ ಸಂತುಷ್ಟನಾಗುವುದಾದರೆ–ನನ್ನ ಮರಣಾನಂತರದಲ್ಲಿ ಅವನು ತಂದೆಗಾಗಿ ಮಾಡಲಿರುವ ಶ್ರಾದ್ಧ-ತರ್ಪಣಗಳು ನನಗೆ ಸೇರದಿರಲಿ.”

ರಾಜನು ಕೈಕೇಯಿಯೊಡನೆ ಹೀಗೆ ಹೇಳಿದನಂತರ ಶೋಕಪೀಡಿತ ಳಾದ ಕೌಸಲ್ಯಾದೇವಿಯು, ನೆಲದ ಮೇಲೆ ಬಿದ್ದು ಧೂಳಿನಿಂದ ಆಚ್ಛಾದಿತ ನಾಗಿದ್ದ ರಾಜನನ್ನು ಹಿಡಿದೆಬ್ಬಿಸಿ ತನ್ನ ಅಂತಃಪುರಕ್ಕೆ ಕರೆದೊಯ್ದಳು. ನಿರ್ದೋಷಿಯಾದ ಬ್ರಾಹ್ಮಣನನ್ನು ಸ್ವೇಚ್ಛೆಯಿಂದಲೇ ಕೊಂದು ಅನಂತರ ಸಂಕಟಪಡುವಂತೆ–ಅಗ್ನಿಯೆಂದು ತಿಳಿದೂ ಅದನ್ನು ಮುಟ್ಟಿ ಅನಂತರದಲ್ಲಿ ಅದರ ಯಾತನೆಯನ್ನು ತಾಳಲಾರದೇ ದುಃಖಿಸುವಂತೆ–ರಾಜನು ಶ್ರೀರಾಮ ನನ್ನು ಕಾಡಿಗೆ ಕಳುಹಿಸಿದುದಕ್ಕಾಗಿ ಸಂಕಟಪಟ್ಟನು. ಬಾರಿ-ಬಾರಿಗೂ ಹಿಂದಿ ರುಗಿ ಶ್ರೀರಾಮನ ರಥವು ಹೋದ ಮಾರ್ಗವನ್ನೇ ದಿಟ್ಟಿಸಿನೋಡುತ್ತಿ ದ್ದಂತೆಲ್ಲಾ ರಾಜನ ಹೃದಯವು ಸಂಕಟದಿಂದ ಬಹಳವಾಗಿ ಪರಿತಪಿಸು ತ್ತಿದ್ದಿತು. ರಾಹುಗ್ರಸ್ತನಾದ ಚಂದ್ರನಂತೆ ನಿಸ್ತೇಜನಾದನು.

ದಶರಥನು ಮಗನನ್ನು ಬಾರಿ-ಬಾರಿಗೂ ಸ್ಮರಿಸಿಕೊಂಡು ಗೋಳಾಡು ತ್ತಿದ್ದನು. ‘ಅಯ್ಯೋ! ನನ್ನ ಮಗನು ಈ ವೇಳೆಗೆ ಅಯೋಧ್ಯಾಪಟ್ಟಣದ ಗಡಿಯನ್ನು ದಾಟಿಬಿಟ್ಟಿರಬಹುದಲ್ಲವೇ?’–ಎಂದು ಭಾವಿಸಿಕೊಳ್ಳುತ್ತಿದ್ದನು. ‘ಆ ಮಹಾತ್ಮನನ್ನು ಹೊತ್ತ ದಿವ್ಯರಥವನ್ನು ಎಳೆಯುತ್ತಿರುವ ಕುದುರೆಗಳ ಹೆಜ್ಜೆಗುರುತುಗಳು ಮಾತ್ರ ಹಾದಿಯಲ್ಲಿ ಕಾಣುತ್ತಿವೆ. ಆದರೆ ಮಹಾತ್ಮನಾದ ಶ್ರೀರಾಮನು ಕಾಣುತ್ತಿಲ್ಲವಲ್ಲಾ!’–ಎಂದು ಹೇಳಿಕೊಂಡು ಗೋಳಾಡು ವನು. “ಯಾವ ನನ್ನ ಸುತೋತ್ತಮನು ಅರಮನೆಯಲ್ಲಿ ಚಂದನವನ್ನು ಪೂಸಿಕೊಂಡು, ಬೀಸಣಿಗೆಯನ್ನು ಹಿಡಿದಿರುವ ಶ್ರೇಷ್ಠಸ್ತ್ರೀಯರಿಂದ ಸೇವಿಸಲ್ಪಡುತ್ತಾ ಸುಖಕರವಾದ ತಲೆದಿಂಬಿನಿಂದ ಕೂಡಿದ ಹಂಸತೂಲಿಕೆ ಯಲ್ಲಿ ಮಲಗುತ್ತಿದ್ದನೋ–ಅವನಿಂದು ಕಾಡಿನಲ್ಲಿ ಯಾವುದೋ ಒಂದು ಮರದ ಬುಡವನ್ನಾಶ್ರಯಿಸಿ ಕಟ್ಟಿಗೆಯನ್ನೋ ಕಲ್ಲನ್ನೋ ತಲೆದಿಂಬಾಗಿಟ್ಟು

ಕೊಂಡು ಮಲಗಿದ್ದಾನೆ. ಅರಮನೆಯಲ್ಲಿದ್ದಾಗ ವಂದಿ-ಮಾಗಧರು ಸುಮಧುರವಾದ ಗಾಯನದಿಂದ ಸುಪ್ರಭಾತವನ್ನು ಹಾಡಿ ರಾಮನನ್ನು ಎಚ್ಚರಗೊಳಿಸುತ್ತಿದ್ದರು. ಆದರೆ ಈಗ ಗಜರಾಜನು ನೀರಿನ ಪ್ರವಾಹದಲ್ಲಿ ಬಿದ್ದು ಹೊರಳಾಡಿ ಕೆಸರಿನಿಂದ ಲಿಪ್ತನಾಗಿ ಸ್ವೇಚ್ಛೆಯಿಂದ ಹೊರಬರುವಂತೆ–ಕಲ್ಲನ್ನೇ ತಲೆದಿಂಬಾಗಿಟ್ಟುಕೊಂಡು ಮಲಗಿದ ದೀನನಾದ ರಾಮನು ನೆಲದ ಮೇಲಿನ ಧೂಳಿಯಿಂದ ಆವೃತನಾಗಿ ಬೆಳಗಾಗುತ್ತಲೇ ತಾನಾಗಿಯೇ ಎಚ್ಚರಗೊಳ್ಳುತ್ತಾನೆ. ಬೆಳಗಾಗುತ್ತಲೇ ಮೇಲೆದ್ದು ಅನಾಥನಂತೆ ಕಾಡಿನಲ್ಲಿ ಹೋಗುತ್ತಿರುವ ಸಕಲಲೋಕನಾಥನಾದ, ದೀರ್ಘಬಾಹುವಾದ ಶ್ರೀರಾಮ ನನ್ನು ಅರಣ್ಯದಲ್ಲಿರುವ ಮನುಷ್ಯರು ದಿಟ್ಟಿಸಿನೋಡುತ್ತಾರೆ. ಮಹಾತ್ಮನಾದ ಜನಕನ ಪ್ರಿಯಪುತ್ರಿಯಾದ, ಸರ್ವದಾ ಸುಖವಾಗಿರಲು ಅರ್ಹಳಾದ ಸೀತೆಯು ಹಾದಿಗಳಲ್ಲಿರುವ ಮುಳ್ಳುಗಿಡಗಳ ಮೇಲೆ ಕಾಲುಗಳನ್ನಿಟ್ಟು ಯಾತನೆಯನ್ನನುಭವಿಸುತ್ತಾ ಅರಣ್ಯಕ್ಕೆ ಹೋಗುತ್ತಿರುತ್ತಾಳೆ. ಅರಣ್ಯಗಳ ಸ್ವರೂಪವು ಸೀತೆಗೆ ತಿಳಿಯದು. ಗಂಭೀರವಾದ ಮತ್ತು ರೋಮಾಂಚನ ವನ್ನುಂಟುಮಾಡುವ ಮಾಂಸಾಹಾರಿಗಳಾದ ಕ್ರೂರಪ್ರಾಣಿಗಳ ಗರ್ಜನೆಯನ್ನು ಕೇಳಿದೊಡನೆಯೇ ನಿಶ್ಚಯವಾಗಿಯೂ ಸೀತೆಯು ಭಯಪಡುತ್ತಾಳೆ. ಅಯ್ಯೋ! ನಾನಿದನ್ನು ಹೇಗೆ ಸಹಿಸಲಿ! ಕೈಕೇಯಿ! ನಿನ್ನ ಆಸೆಯನ್ನು ತೀರಿಸಿಕೋ. ವಿಧವೆಯಾಗಿ ಈ ರಾಜ್ಯವನ್ನಾಳು. ಪುರುಷಸಿಂಹನಾದ ಶ್ರೀರಾಮನು ಇಲ್ಲದೇ ನಾನು ಖಂಡಿತವಾಗಿಯೂ ಜೀವಿಸಿರಲಾರೆನು.”

ಹೀಗೆ ರಾಜನು ಗೋಳಾಡುತ್ತಾ ಜನಸಮೂಹದಿಂದ ಪರಿವೃತ ನಾಗಿ–ಮರಣದ ವಾರ್ತೆಯನ್ನು ಕೇಳಿ ಸ್ನಾನಮಾಡಿದವನಂತೆ–ಕಲ್ಮಷ ಯುಕ್ತವಾಗಿದ್ದ (ದುಃಖದಿಂದ ಸಮಾಕ್ರಾಂತವಾಗಿದ್ದ) ರಮ್ಯವಾದ ಅರಮನೆ ಯನ್ನು ಪ್ರವೇಶಿಸಿದನು.

ಅಯೋಧ್ಯಾಪಟ್ಟಣದ ಚೌಕಗಳೂ ಮನೆಗಳೂ ಶೂನ್ಯವಾಗಿದ್ದುವು. ದೇವಾಗಾರಗಳೂ, ಅಂಗಡಿಗಳೂ ಮುಚ್ಚಿದ್ದುವು. ಬಳಲಿದ, ದುರ್ಬಲ ರಾದ ಮತ್ತು ದುಃಖಪೀಡಿತರಾದ ಜನರಿಂದ ಅಯೋಧ್ಯಾಪಟ್ಟಣವು ತುಂಬಿದ್ದಿತು. ಬೀದಿಗಳಲ್ಲಿ ಒಬ್ಬಿಬ್ಬರು ಓಡಾಡುತ್ತಿದ್ದರು. ಅಂತಹ ಸ್ಥಿತಿಯಲ್ಲಿದ್ದ ಅಯೋಧ್ಯಾಪಟ್ಟಣವನ್ನು ನೋಡಿ ಶ್ರೀರಾಮನನ್ನೇ

ಬಾರಿ-ಬಾರಿಗೂ ಚಿಂತಿಸುತ್ತಾ ಗೋಳಾಡುತ್ತಾ–ಸೂರ್ಯನು ಪಶ್ಚಿಮ ಸಮುದ್ರವನ್ನು ಸೇರುವಂತೆ–ದಶರಥನು ತನ್ನ ಅರಮನೆಯನ್ನು ಪ್ರವೇಶಿಸಿದನು. ಗರುಡನಿಂದ ಸರ್ಪಗಳು ಅಪಹೃತವಾಗಿ ನಿರ್ಭಯವಾಗಿಯೂ ಶಾಂತವಾಗಿಯೂ ಇರುವ ಮಡುವಿನಂತಿದ್ದ–ಸೀತಾ-ರಾಮ-ಲಕ್ಷ್ಮಣರಿಂದ ರಹಿತವಾಗಿದ್ದ ಅರಮನೆಯನ್ನು ದಶರಥನು ಪ್ರವೇಶಿಸಿದನು.* ಬಳಿಕ ದಶರಥನು ಬಿಕ್ಕಿ-ಬಿಕ್ಕಿ ಅಳುತ್ತಾ ಗದ್ಗದಸ್ವರದಿಂದ ಮೃದುವಾದ, ಸ್ಪಷ್ಟಾರ್ಥವಿಲ್ಲದ, ದೈನ್ಯತೆಯಿಂದ ಕೂಡಿದ ಕೇಳಿಸಿಯೂ ಕೇಳಿಸದಂತಹ ಧ್ವನಿಯಿಂದ ಹೇಳಿದನು :

"ದ್ವಾರಪಾಲಕರೇ! ನನ್ನನ್ನೀಗಲೇ ಕೌಸಲ್ಯಾದೇವಿಯ ಅಂತಃಪುರಕ್ಕೆ ಕರೆದುಕೊಂಡು ಹೋಗಿರಿ. ನನ್ನ ಮನಸ್ಸಿಗೆ ಬೇರೆಲ್ಲೂ ಸಮಾಧಾನವು ಸಿಕ್ಕಲಾರದು."

ಅತ್ಯಂತವಿನೀತನಾದವನು ಮಾತನಾಡುವಂತೆ ಮಾತನಾಡುತ್ತಿದ್ದ ರಾಜನನ್ನು ದ್ವಾರದರ್ಶಿಗಳು ಕೌಸಲ್ಯಾದೇವಿಯ ಅಂತಃಪುರದಲ್ಲಿ ಬಿಟ್ಟರು. ಕೌಸಲ್ಯೆಯ ಅಂತಃಪುರವನ್ನು ಪ್ರವೇಶಿಸಿದ ರಾಜನಿಗೆ ಅಲ್ಲಿದ್ದ ಹಂಸ ತೂಲಿಕಾತಲ್ಪದಲ್ಲಿ ಮಲಗಿದರೂ ಮನಸ್ಸು ಸ್ವಾಸ್ಥ್ಯದಿಂದ ಇರಲಿಲ್ಲ. ಚಂಚಲವಾಗಿದ್ದಿತು. ಇಬ್ಬರು ಮಕ್ಕಳಿಂದಲೂ ಮತ್ತು ಸೊಸೆಯಿಂದಲೂ ವಿಹೀನವಾಗಿದ್ದ ಕೌಸಲ್ಯಾದೇವಿಯ ಅಂತಃಪುರವು ಚಂದ್ರನಿಲ್ಲದ ಆಕಾಶದಂತೆ

---

* **ಸುಪರ್ಣೇನ ಹೃತೋರಗಂ** ಎಂಬ ಉಪಮಾನಕೊಟ್ಟಿರುವ ವಾಲ್ಮೀಕಿಗಳ ಆಶಯವೇನಿರಬಹುದೆಂಬುದರ ವಿಷಯವಾಗಿ ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ರೀತಿಯಲ್ಲಿ ಅಭಿಪ್ರಾಯವನ್ನು ಸೂಚಿಸಿದ್ದಾರೆ. ೧) **ಸುಪರ್ಣೇನ ಹೃತೋರಗಂ ಮಹಾಹ್ರದಮಿವ ಇತಿ ರಿಪೂಣಾಂ ನಿರ್ಭಯಪ್ರದೇಶದ್ಯೋತಕಂ** = ಗರುಡನಿಂದ ಅಪಹೃತವಾದ ಹಾವುಗಳುಳ್ಳ ಮಡುವಿಗೆ ಯಾವ ರೀತಿಯಲ್ಲಿ ನಿರ್ಭಯವಾಗಿ ಪ್ರವೇಶಿ ಸುವ ಸಾಧ್ಯತೆಯಿದೆಯೋ ಅದೇ ರೀತಿಯಲ್ಲಿ ರಾಮನಿಲ್ಲದ ಅಯೋಧ್ಯಾಪಟ್ಟಣವೂ ಸಹ ಶತ್ರುಗಳಿಂದ ಅತಿಸುಲಭವಾಗಿ ಪ್ರವೇಶಿಸಲು ಸಾಧ್ಯವಾಗುವಂತಾಯಿತು. ೨) **ಸುಪರ್ಣೇನ = ಗರುಡೇನ ಹೃತೋರಗಂ = ಹೃತಾಃ ಉರಗಾಃ ಯಸ್ಮಾತ್ ತತ್ ಅತ ಏವ ಅಕ್ಷೋಭ್ಯಂ ಕ್ಷೋಭಾಕಾರಣಂ ಮಹಾಹ್ರದಮಿವ** = ಗರುಡನು ಹಾವುಗಳನ್ನು ಅಪಹರಿಸಿದ್ದರಿಂದಲೇ ಕ್ಷೋಭೆಗೆ ಕಾರಣವಾದ ಮಡುವಿನಂತಿದ್ದ ಅರಮನೆಯನ್ನು ಪ್ರವೇಶಿಸಿದನು.

ಕಾಂತಿಹೀನವಾಗಿ ಕಂಡಿತು. ಕಾಂತಿಹೀನವಾಗಿದ್ದ ಅಲ್ಲಿನ ವಾತಾವರಣವನ್ನು ಕಂಡು ವೀರ್ಯವಂತನಾದ ಮಹಾರಾಜನು ತನ್ನ ತೋಳಗಳೆರಡನ್ನೂ ಮೇಲೆತ್ತಿ–'ಹಾ ರಾಮ! ನಮ್ಮಿಬ್ಬರನ್ನೂ ಬಿಟ್ಟುಹೋದೆಯಲ್ಲವೇ! ಅಯ್ಯೋ!' –ಎಂದು ಗಟ್ಟಿಯಾಗಿ ಕೂಗಿಕೊಂಡನು.

ಸುಖಿತಾ ಬತ ತಂ ಕಾಲಂ ಜೀವಿಷ್ಯನ್ತಿ ನರೋತ್ತಮಾಃ ।
ಪರಿಷ್ವಜನ್ತೋ ಯೇ ರಾಮಂ ದ್ರಕ್ಷ್ಯನ್ತಿ ಪುನರಾಗತಮ್ ॥೩೨॥

"ಶ್ರೀರಾಮನು ಪುನಃ ಅಯೋಧ್ಯೆಗೆ ಬರುವವರೆಗೂ ಯಾವ ಪುರುಷ ಶ್ರೇಷ್ಠರು ಜೀವಿಸಿರುವರೋ ಮತ್ತು ಅಯೋಧ್ಯೆಗೆ ಆಗಮಿಸಿದ ಶ್ರೀರಾಮನನ್ನು ಆಲಿಂಗಿಸಿಕೊಂಡು ನೋಡುವರೋ–ಅವರೇ ಪರಮಸುಖಿಗಳು."

ಪ್ರಳಯಕಾಲದ ರಾತ್ರಿಯಂತಹ (ಸರ್ವವಿನಾಶಕರವಾದ) ರಾತ್ರಿಯು ಪ್ರಾಪ್ತವಾಗಲಾಗಿ ಅರ್ಧರಾತ್ರಿಯಲ್ಲಿ ದಶರಥನು ಕೌಸಲ್ಯೆಗೆ ಈ ಮಾತನ್ನು ಹೇಳಿದನು :

ರಾಮಂ ಮೇಽನುಗತಾ ದೃಷ್ಟಿರದ್ಯಾಪಿ ನ ನಿವರ್ತತೇ ।
ನ ತ್ವಾಂ ಪಶ್ಯಾಮಿ ಕೌಸಲ್ಯೇ ಸಾಧು ಮಾಂ ಪಾಣಿನಾ ಸ್ಪೃಶ ॥೩೪॥

"ಕೌಸಲ್ಯೆ! ರಾಮನನ್ನೇ ಹಿಂಬಾಲಿಸಿಹೋಗಿರುವ ನನ್ನ ದೃಷ್ಟಿಯು ಇನ್ನೂ ಹಿಂದಿರುಗಲೇ ಇಲ್ಲ. ಈಗ ಶ್ರೀರಾಮನ ಹೊರತಾಗಿ ನನಗೆ ಮತ್ತೇನೂ ಕಾಣುತ್ತಲೇ ಇಲ್ಲ. ನಿನ್ನನ್ನೂ ನಾನು ಕಾಣುತ್ತಿಲ್ಲ. ಶ್ರೀರಾಮನ ಮೈದಡವಿ ಆದರಿಸಿದ ಕೈಗಳಿಂದ ನನ್ನನ್ನು ಸ್ಪರ್ಶಿಸು."

ಹಾಸಿಗೆಯ ಮೇಲೆ ಮಲಗಿ ಶ್ರೀರಾಮನೊಬ್ಬನನ್ನೇ ಅನವರತವಾಗಿ ಚಿಂತಿಸುತ್ತಿದ್ದ ರಾಜನನ್ನು ನೋಡಿ ಕೌಸಲ್ಯಾದೇವಿಯು ಆರ್ತಭಾವದಿಂದ ಕೂಡಿದವಳಾಗಿ ಪತಿಯ ಪಕ್ಕದಲ್ಲೇ ಕುಳಿತು ಗೋಳಾಡಿದಳು.

ಳ೨ನೆಯ ಸರ್ಗವು ಮುಗಿಯಿತು.

ಕೌಸಲ್ಯಾದೇವಿಯ ವಿಲಾಪ

ತತಃ ಸಮೀಕ್ಷ್ಯ ಶಯನೇ ಸನ್ನಂ ಶೋಕೇನ ಪಾರ್ಥಿವಮ್ ।
ಕೌಸಲ್ಯಾ ಪುತ್ರಶೋಕಾರ್ತಾ ತಮುವಾಚ ಮಹೀಪತಿಮ್ ॥೧॥

ಬಳಿಕ ಶೋಕದಿಂದ ಖಿನ್ನನಾಗಿ ಹಾಸಿಗೆಯಲ್ಲಿ ಮಲಗಿದ್ದ ದಶರಥ ನನ್ನು ನೋಡಿ ಪುತ್ರವಿಯೋಗದುಃಖದಿಂದ ಪೀಡಿತಳಾಗಿದ್ದ ಕೌಸಲ್ಯಾ ದೇವಿಯು ರಾಜನಿಗೆ ಹೇಳಿದಳು :

"ವಕ್ರವಾದ ಗಮನವುಳ್ಳ ವಿಷಸರ್ಪದಂತೆ ಕುಟಿಲತೆಯಿಂದ ಕೂಡಿರುವ ಈ ಕೈಕೇಯಿಯು ಕೌಟಿಲ್ಯರೂಪವಾದ ವಿಷವನ್ನು ಶ್ರೀರಾಮನಲ್ಲಿ ಪ್ರಯೋಗಿಸಿ ಪೊರೆಬಿಟ್ಟ ಹೆಣ್ಣುಹಾವಿನಂತೆ ನಿಶ್ಚಿಂತಳಾಗಿ ನಲಿದಾಡುತ್ತಿರು ವಳು. ಭರತನ ಪಟ್ಟಾಭಿಷೇಕದಲ್ಲಿಯೇ ಏಕಾಗ್ರಚಿತ್ತಳಾದ, ಅದೃಷ್ಟವಂತ ಳಾದ ಕೈಕೇಯಿಯು ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಿ ಮನಸ್ಸಿನ ಇಚ್ಛೆಯನ್ನು ಪೂರ್ಣಗೊಳಿಸಿಕೊಂಡು ಮನೆಯೊಳಗೆ ಸೇರಿಕೊಂಡಿರುವ ಕೆಟ್ಟ ವಿಷಸರ್ಪದಂತೆ ನನ್ನನ್ನು ಪುನಃ ಪುನಃ ಭಯಪಡಿಸುತ್ತಿದ್ದಾಳೆ. ನನ್ನ ಮಗನಾದ ಶ್ರೀರಾಮನನ್ನು ಭರತನಿಗೆ ದಾಸನನ್ನಾಗಿ ಕೊಟ್ಟುಬಿಟ್ಟಿದ್ದರೂ ಅದು ವನ ವಾಸಕ್ಕಿಂತಲೂ ಇಷ್ಟತಮವಾಗುತ್ತಿತ್ತು. ಆಗ ಅವನು ಈ ನಗರದಲ್ಲಿ ಭಿಕ್ಷೆ ಯನ್ನಾದರೂ ಮಾಡಿಕೊಂಡು ನನ್ನ ಮನೆಯಲ್ಲಿರುತ್ತಿದ್ದನು. ಆಹಿತಾಗ್ನಿಯು ಪರ್ವಕಾಲದಲ್ಲಿ ದೇವತೆಗಳಿಗೆ ಕೊಡಬೇಕಾದ ಹವಿರ್ಭಾಗವನ್ನು ರಾಕ್ಷಸರಿಗೆ ಕೊಡುವಂತೆ–ಕೈಕೇಯಿಯ ಇಚ್ಛೆಯಂತೆ ಶ್ರೀರಾಮನನ್ನು ಸ್ಥಾನಭ್ರಷ್ಟನನ್ನಾಗಿ ಮಾಡಿ ರಾಜ್ಯವನ್ನು ಕೈಕೇಯಿಗರ್ಪಿಸಿದೆ. ಗಜರಾಜನಂತೆ ಮಂದಗಮನವುಳ್ಳ, ವೀರನಾದ, ಮಹಾಬಾಹುವಾದ, ಧನುರ್ಧರನಾದ ರಾಮನು ಸೀತಾ-ಲಕ್ಷ್ಮಣರೊಡನೆ ಕಾಡಿಗೆ ಹೋಗುವುದಂತೂ ನಿಶ್ಚಯ. ಕೈಕೇಯಿಯ ಆಜ್ಞೆಯಂತೆ ವನವಾಸದ ದುಃಖಗಳೇನೆಂಬುದನ್ನೇ ಅರಿಯದ ಸೀತಾ-ರಾಮ-ಲಕ್ಷ್ಮಣರನ್ನು ಕಾಡಿಗೆ ಅಟ್ಟಿಬಿಟ್ಟೆ. ಅಲ್ಲಿ ಅವರಿಗೆ ಯಾವ ದುರವಸ್ಥೆಯು ಕಾದಿರುವುದೋ ತಿಳಿಯದು. ತಾರುಣ್ಯದಲ್ಲಿರುವ ಅವರಿಂದು ಶ್ರೇಷ್ಠವಸ್ತುಗಳಿಂದ ವಂಚಿತರೂ, ನಿರ್ಧನರೂ ಆಗಿರುತ್ತಾರೆ.

ಸುಖವನ್ನನುಭವಿಸಬೇಕಾಗಿದ್ದ ಕಾಲದಲ್ಲಿ ಅವರನ್ನು ಅರಣ್ಯಕ್ಕೆ ಅಟ್ಟಿಬಿಟ್ಟೆ. ನಿಸ್ಸಹಾಯಕರಾದ ಅವರು ಕಾಡಿನಲ್ಲಿ ಸಿಕ್ಕುವ ಗೆಡ್ಡೆ-ಗೆಣಸುಗಳನ್ನೂ, ಹಣ್ಣುಗಳನ್ನೂ ತಿಂದುಕೊಂಡು ಹದಿನಾಲ್ಕು ವರ್ಷಗಳ ಕಾಲ ಹೇಗೆತಾನೇ ಜೀವಿಸಿರುವರು? ನನ್ನ ಶೋಕವಿನಾಶಕವಾದ ಆ ಶುಭದಿನವು ಇಂದೇ ಬಂದೀತೇ? ಸೀತಾ-ಲಕ್ಷ್ಮಣರೊಡನೆ ರಾಘವನನ್ನು ನಾನು ಇಲ್ಲಿಯೇ ಕಾಣುವೆನೇ? ಮಲಗಿ ಎದ್ದು ಬಂದವರಂತೆ ವೀರರಾದ ರಾಮ-ಲಕ್ಷ್ಮಣರು ಸೀತಾಸಮೇತರಾಗಿ ಯಾವಾಗ ಅಯೋಧ್ಯೆಗೆ ಬರುವರೋ–ಆಗ ಅಯೋಧ್ಯಾಪಟ್ಟಣವೇ ಯಶಸ್ಸಿನಿಂದ ಕೂಡಿದುದಾಗುತ್ತದೆ. ಪ್ರಜೆಗಳೆಲ್ಲರೂ ಆನಂದಸಾಗರದಲ್ಲಿ ಮುಳುಗಿಹೋಗುತ್ತಾರೆ. ಪಟ್ಟಣವು ತಳಿರು-ತೋರಣ ಗಳಿಂದಲೂ, ಧ್ವಜ-ಪತಾಕೆಗಳಿಂದಲೂ ಅಲಂಕೃತವಾಗುತ್ತದೆ. ಪರ್ವಕಾಲವು ಬಂದೊಡನೆಯೇ ಸಮುದ್ರವು ಉಕ್ಕಿಬರುವಂತೆ–ಅರಣ್ಯದಿಂದ ಆಗಮಿಸುವ ಪುರುಷಸಿಂಹರನ್ನು ನೋಡಿ ಈ ಅಯೋಧ್ಯಾಪಟ್ಟಣವು ಯಾವಾಗ ಆನಂದದಿಂದ ಉಬ್ಬಿಹೋಗುತ್ತದೆ? ಹಸುವನ್ನನುಸರಿಸಿ ಹೋರಿಯು ಬರುವಂತೆ–ಸೀತಾಪುರಸ್ಸರನಾಗಿ ರಥದಲ್ಲಿ ಕುಳಿತು ಮಹಾಬಾಹುವಾದ ಮತ್ತು ವೀರನಾದ ಶ್ರೀರಾಮನು ಯಾವಾಗ ಅಯೋಧ್ಯಾಪಟ್ಟಣವನ್ನು ಪ್ರವೇಶಿಸುತ್ತಾನೆ? ಅರಣ್ಯವಾಸವನ್ನು ಮುಗಿಸಿ ಅಯೋಧ್ಯಾಪಟ್ಟಣವನ್ನು ಪ್ರವೇಶಿಸುವ ನನ್ನ ಮಕ್ಕಳಿಗೆ ರಾಜಮಾರ್ಗದಲ್ಲಿ ಸಾವಿರಾರು ಜನರು ಯಾವಾಗ ಶುಭಪ್ರದವಾದ ಅಕ್ಷತೆಗಳನ್ನು ಎರಚುತ್ತಾರೆ? ಶುಭಕುಂಡಲ ಗಳನ್ನು ಧರಿಸಿ ಶ್ರೇಷ್ಠವಾದ ಧನುಸ್ಸನ್ನೂ-ಕತ್ತಿಯನ್ನೂ ಹಿಡಿದು ಶಿಖರಗಳಿಂದ ಕೂಡಿದ ಪರ್ವತಗಳಂತೆ ಅಟ್ಟಹಾಸದಿಂದ ಅಯೋಧ್ಯೆಯನ್ನು ಪ್ರವೇಶಿಸುವ ನನ್ನ ಕಂದಗಳನ್ನು ನಾನೆಂದು ಕಾಣುವೆನು? ಶ್ರೀರಾಮನು ಅರಣ್ಯದಿಂದ ಆಗಮಿಸುವನೆಂಬ ಶುಭವಾರ್ತೆಯನ್ನು ತಿಳಿದು ಹೃಷ್ಟರಾದ ಬ್ರಾಹ್ಮಣ ಕನ್ಯೆಯರು ಫಲ-ಪುಷ್ಪಗಳನ್ನು ಎಲ್ಲರಿಗೂ ಹಂಚುತ್ತಾ ನಗರ ಪ್ರದಕ್ಷಿಣೆ ಯನ್ನು ಯಾವಾಗ ಮಾಡುತ್ತಾರೆ? ಪರಿಣತವಾದ ಬುದ್ಧಿಯುಳ್ಳ, ವಯಸ್ಸಿನಲ್ಲಿ ದೇವತೆಗಳಂತೆ ನಿತ್ಯಯುವಕನಾದ, ಧರ್ಮಾತ್ಮನಾದ ಶ್ರೀರಾಮನು–(ಸುವೃಷ್ಟಿಯು ಪ್ರಪಂಚವನ್ನು ಆಹ್ಲಾದಗೊಳಿಸುವಂತೆ)–

ಮೂರು ವರ್ಷದ ಬಾಲಕನಂತೆ ಯಾವಾಗ ಇಲ್ಲಿಗೆ ಬಂದು ನಮ್ಮೆಲ್ಲರನ್ನೂ ಆಹ್ಲಾದಗೊಳಿಸುವನು?

ಹಿಂದಿನ ಜನ್ಮದಲ್ಲಿ ಕ್ಷುದ್ರೆಯಾದ ನಾನು ಸ್ತನ್ಯಪಾನಮಾಡುವ ಇಚ್ಛೆಯಿಂದ ಕರುಗಳು ಹಸುಗಳ ಬಳಿಗೆ ಹೋದಾಗ ಆ ಹಸುಗಳ ಕೆಚ್ಚಲನ್ನೇ ಕತ್ತರಿಸಿರುವೆನೆಂಬುದರಲ್ಲಿ ಸಂಶಯವೇ ಇಲ್ಲ. ಇಲ್ಲದಿದ್ದರೆ ಇಂತಹ ದಾರುಣವಾದ ಪುತ್ರವಿಯೋಗಶೋಕಕ್ಕೆ ನಾನು ಈಡಾಗುತ್ತಿರಲಿಲ್ಲ.

ಸಿಂಹವು ಹಸುವಿನೊಡನಿರುವ ಕರುವನ್ನು ತಿಂದು ಆ ಹಸುವನ್ನು ಕರುವಿನಿಂದ ವಿಹೀನವನ್ನಾಗಿ ಮಾಡುವಂತೆ–ನಾನಿಂದು ಪುತ್ರನಿಂದ ವಿಹೀನಳಾಗಿದ್ದೇನೆ. ಹಾಲಿನ ಆಸೆಯಿಂದಾಗಿ ಹಾಲುಕುಡಿಯುತ್ತಿರುವ ಎಳೆಗರುವನ್ನು ಬಲಾತ್ಕಾರಪೂರ್ವಕವಾಗಿ ಹಸುವಿನಿಂದ ಬೇರ್ಪಡಿಸುವಂತೆ ಕೈಕೇಯಿಯು ಶ್ರೀರಾಮನನ್ನು ನನ್ನಿಂದ ಬಲಾತ್ಕಾರಪೂರ್ವಕವಾಗಿ ಬೇರ್ಪಡಿಸಿದ್ದಾಳೆ. ಸಕಲಕಲ್ಯಾಣಗುಣಸಂಪನ್ನನಾದ, ಸರ್ವಶಾಸ್ತ್ರವಿಶಾರದ ನಾದ ಶ್ರೀರಾಮನಿಲ್ಲದೇ ಏಕಮಾತ್ರಪುತ್ರಳಾದ ನಾನು ಖಂಡಿತವಾಗಿಯೂ ಜೀವಿಸಿರಲಾರೆನು. ಮಹಾಬಾಹುವಾದ, ಮಹಾಬಲನಾದ, ಪರಮಪ್ರಿಯ ನಾದ ಮಗನನ್ನು ನೋಡದಿರುವ ನನಗೆ ಜೀವಿತದಲ್ಲಿ ಸ್ವಲ್ಪವಾದರೂ ಆಸಕ್ತಿಯೂ ಇಲ್ಲ; ಅವನನ್ನು ಬಿಟ್ಟು ಜೀವಿಸಿರಲು ಸಾಮರ್ಥ್ಯವೂ ಇಲ್ಲ. ಗ್ರೀಷ್ಮರ್ತುವಿನಲ್ಲಿ ಭಗವಂತನಾದ ಸೂರ್ಯನು ತನ್ನ ಅತಿತೀಕ್ಷ್ಣವಾದ ಕಿರಣಗಳಿಂದ ಈ ಪ್ರಪಂಚವನ್ನು ದಹಿಸಿಬಿಡುವಂತೆ–ಪುತ್ರವಿಯೋಗ ಶೋಕದಿಂದ ಹುಟ್ಟಿರುವ ಹೆಚ್ಚು ಅಹಿತಕರವಾದ ಶೋಕಾಗ್ನಿಯು ನನ್ನನ್ನೀಗ ದಹಿಸುತ್ತಿದೆ."

೪೩ನೆಯ ಸರ್ಗವು ಮುಗಿಯಿತು.

ಸುಮಿತ್ರೆಯು ಕೌಸಲ್ಯೆಗೆ ಸಮಾಧಾನಹೇಳಿದುದು

ವಿಲಪನ್ತೀಂ ತಥಾ ತಾಂ ತು ಕೌಸಲ್ಯಾಂ ಪ್ರಮದೋತ್ತಮಾಮ್ ।
ಇದಂ ಧರ್ಮೇ ಸ್ಥಿತಾ ಧರ್ಮ್ಯಂ ಸುಮಿತ್ರಾ ವಾಕ್ಯಮಬ್ರವೀತ್ ॥೧॥

ಹೀಗೆ ಹೇಳಿಕೊಂಡು ಗೋಳಾಡುತ್ತಿದ್ದ ನಾರೀಶ್ರೇಷ್ಠಳಾದ ಕೌಸಲ್ಯಾ

ದೇವಿಗೆ ಧರ್ಮದಲ್ಲಿಯೇ ಸುಸ್ಥಿರಳಾಗಿದ್ದ ಸುಮಿತ್ರಾದೇವಿಯು ಧರ್ಮಕ್ಕನು ಗುಣವಾದ ಈ ಮಾತನ್ನು ಹೇಳಿದಳು :

"ಆರ್ಯಳೇ! ನಿನ್ನ ಮಗನು ಸಕಲಸದ್ಗುಣಪರಿಪೂರ್ಣನು. ಪುರುಷೋತ್ತಮನು. ಈ ರೀತಿಯಾಗಿ ವಿಲಾಪಮಾಡುವುದರಿಂದಾಗಲೀ–ದೈನ್ಯದಿಂದ ಗೋಳಾಡುವುದರಿಂದಾಗಲೀ ಪ್ರಯೋಜನವೇನಿದೆ? ಮಹಾಬಲಿಷ್ಠನಾದ ನಿನ್ನ ಮಗನು ಮಹಾತ್ಮನಾದ ತನ್ನ ತಂದೆಯನ್ನು ಸತ್ಯವಾದಿಯನ್ನಾಗಿ ಮಾಡಲು ರಾಜ್ಯವನ್ನು ಪರಿತ್ಯಜಿಸಿ ಕಾಡಿಗೆ ಹೋಗಿದ್ದಾನೆ. ಶಿಷ್ಟರಿಂದ ಆಚರಿಸಲ್ಪಡುವ, ಆಮುಷ್ಮಿಕಫಲಪ್ರಾಪಕವಾದ, ಶ್ರೇಷ್ಠವಾದ ತಂದೆಯ ಆಜ್ಞೆಯನ್ನು ಪರಿಪಾಲಿಸುವ ಧರ್ಮದಲ್ಲಿ ಸುಸ್ಥಿರನಾಗಿರುವ ರಾಮನ ವಿಷಯದಲ್ಲಿ ಹೀಗೆ ಎಂದಿಗೂ ದುಃಖಿಸಬಾರದು.

ಸರ್ವಪ್ರಾಣಿಗಳ ವಿಷಯದಲ್ಲಿಯೂ ದಯಾಪೂರ್ಣನಾಗಿರುವ ಪಾಪರಹಿತನಾದ ಲಕ್ಷ್ಮಣನು ಶ್ರೀರಾಮನ ವಿಷಯದಲ್ಲಿ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುತ್ತಾನೆ. ತಂದೆಯೆಂದೇ ಭಾವಿಸಿ ಶ್ರೀರಾಮನ ಶುಶ್ರೂಷೆಯನ್ನು ಮಾಡುತ್ತಾನೆ. ಅಣ್ಣನ ವಿಷಯದಲ್ಲಿ ಹೀಗಿರುವುದು ಮಹಾತ್ಮನಾದ ಲಕ್ಷ್ಮಣನಿಗೂ ಲಾಭದಾಯಕವೇ ಆಗುತ್ತದೆ. (ಶ್ರೇಯಸ್ಸಿಗೆ ಕಾರಣವಾಗುತ್ತದೆ.)* ಸುಖಪಡಲು ಯೋಗ್ಯಳಾದ ವೈದೇಹಿಯು ಅರಣ್ಯವಾಸದಲ್ಲಿರುವ ದುಃಖವನ್ನು ತಿಳಿದಿದ್ದರೂ ಪತಿವ್ರತಾಧರ್ಮವನ್ನಾಶ್ರಯಿಸಿ ಧರ್ಮಾತ್ಮನಾದ ನಿನ್ನ ಮಗನನ್ನು ಅನುಸರಿಸಿ ಕಾಡಿಗೆ ಹೋಗಿದ್ದಾಳೆ.

ಕೀರ್ತಿಭೂತಾಂ ಪತಾಕಾಂ ಯೋ ಲೋಕೇ ಭ್ರಮಯತಿ ಪ್ರಭುಃ ।
ಧರ್ಮಸತ್ಯವ್ರತಧನಃ ಕಿಂ ನ ಪ್ರಾಪ್ತಸ್ತವಾತ್ಮಜಃ ॥೭॥

---

* ದಯಾವಾನ್ಸರ್ವಭೂತೇಷು–ಎಂದು ಹಿಂದೆ ರಾಮನಿಗೆ ವಿಶೇಷಣವನ್ನು ಹೇಳಿರುವಂತೆಯೇ ಲಕ್ಷ್ಮಣನಿಗೂ ವಾಲ್ಮೀಕಿಗಳು ಈ ವಿಶೇಷಣವನ್ನೇ ಬಳಸಿರುವುದನ್ನು ಪುಷ್ಟೀಕರಿಸುತ್ತಾ ಒಬ್ಬ ವ್ಯಾಖ್ಯಾನಕಾರರು ಹೀಗೆ ಹೇಳಿದ್ದಾರೆ : ಸಮಾನಶೀಲವ್ಯಸನೇಷು–ಮೈತ್ರೀ-ಗುಣ-ಶೀಲಗಳಲ್ಲಿಯೂ, ಸುಖ-ದುಃಖಗಳಲ್ಲಿಯೂ, ಚಿಂತೆಯಲ್ಲಿಯೂ ಸಮಾನತೆ ಇದ್ದರೆ ಮಾತ್ರವೇ ಮೈತ್ರಿಯು ಬೆಳೆಯುವುದೆಂದು ಹೇಳಿದ್ದಾರೆ. ಆದುದರಿಂದ ರಾಮನಲ್ಲಿದ್ದ ಅನೇಕಸದ್ಗುಣಗಳು ಲಕ್ಷ್ಮಣನಲ್ಲಿಯೂ ಇದ್ದುದರಿಂದಲೇ ಒಬ್ಬರು ಮತ್ತೊಬ್ಬರನ್ನು ಬಿಟ್ಟು ಎಲ್ಲಿಯೂ ಹೋಗುತ್ತಿರಲಿಲ್ಲ. ಕಾಡಿಗೂ ಸಹ ಲಕ್ಷ್ಮಣನು ರಾಮನನ್ನನುಸರಿಸಿಯೇ ಹೋದನು.

ಪಿತೃವಾಕ್ಯಪರಿಪಾಲನೆಯೆಂಬ ಧರ್ಮಸಮ್ಮತವಾದ ಈ ಕಾರ್ಯವನ್ನು ಮಾಡಿ ಲೋಕದಲ್ಲಿ ಕೀರ್ತಿಪತಾಕೆಯನ್ನು ಹಾರಿಸಿಬಿಟ್ಟಿರುವ, ಸತ್ಯ-ಧರ್ಮ ಮತ್ತು ವ್ರತಾನುಷ್ಠಾನಗಳೇ ಐಶ್ವರ್ಯರೂಪದಲ್ಲಿರುವ ಪ್ರಭುವಾದ ಶ್ರೀರಾಮನು ಪಡೆಯದಿರುವ ವಸ್ತುವಾದರೂ ಯಾವುದಿದೆ? ಸಾಧಿಸದಿರುವ ಕಾರ್ಯವಾದರೂ ಯಾವುದಿದೆ?

ವ್ಯಕ್ತಂ ರಾಮಸ್ಯ ವಿಜ್ಞಾಯ ಶೌಚಂ ಮಾಹಾತ್ಮ್ಯಮುತ್ತಮಮ್ ।
ನ ಗಾತ್ರಮಂಶುಭಿಃ ಸೂರ್ಯಃ ಸಂತಾಪಯಿತುಮರ್ಹತಿ ॥೮॥

ಶ್ರೀರಾಮನಲ್ಲಿ ಸ್ಪಷ್ಟವಾಗಿ ಕಾಣುವ ಪರಿಶುದ್ಧತೆಯನ್ನೂ ಮತ್ತು ಅವನ ಉತ್ತಮೋತ್ತಮವಾದ ಮಹಿಮೆಯನ್ನೂ ತಿಳಿಯುವ ಸೂರ್ಯನು ನಿನ್ನ ಮಗನ ಶರೀರವನ್ನು ಪ್ರಖರವಾದ ಕಿರಣಗಳಿಂದ ನಿಶ್ಚಯವಾಗಿಯೂ ಪರಿತಾಪಪಡಿಸುವುದಿಲ್ಲ.

ಶಿವಃ ಸರ್ವೇಷು ಕಾಲೇಷು ಕಾನನೇಭ್ಯೋ ವಿನಿಃಸೃತಃ ।
ರಾಘವಂ ಯುಕ್ತಶೀತೋಷ್ಣಃ ಸೇವಿಷ್ಯತಿ ಸುಖೋಽನಿಲಃ ॥೯॥

ಅರಣ್ಯದಲ್ಲಿ ಬೀಸುವ ಶುಭಕರನಾದ ವಾಯುದೇವನೂ ಸರ್ವಕಾಲ ಗಳಲ್ಲಿಯೂ, ಕಾಡುಗಳಲ್ಲಿರುವ ನದೀ-ನದ-ಸರೋವರಗಳ ಮೇಲೆಯೂ, ವೃಕ್ಷಗಳಲ್ಲಿರುವ ಫಲ-ಪುಷ್ಪಗಳ ಮೇಲೆಯೂ ಬೀಸುತ್ತಾ–ಶೀತೋಷ್ಣಗಳನ್ನು ಸಮವಾಗಿ ಮಾಡಿಕೊಂಡು ಬಹಳ ಹಿತಕರವಾದ ರೀತಿಯಲ್ಲಿ ಶ್ರೀರಾಮನನ್ನು ಸೇವಿಸುತ್ತಾನೆ.

ಶಯಾನಮನಘಂ ರಾತ್ರೌ ಪಿತೇವಾಭಿಪರಿಷ್ವಜನ್ ।
ಸ್ವಕರೈಃ ಸಂಸ್ಪೃಶನ್ ಶೀತೈಶ್ಚನ್ದ್ರಮಾ ಹ್ಲಾದಯಿಷ್ಯತಿ ॥೧೦॥

ರಾತ್ರಿಯಲ್ಲಿ ಶ್ರೀರಾಮನು ಮಲಗಿರುವಾಗ ಶೀತಾಂಶುವಾದ ಚಂದ್ರನು–ತಂದೆಯಾದವನು ತೊಡೆಯ ಮೇಲೆ ಮಲಗಿರುವ ಕಂದನನ್ನು ಮೈದಡವಿ ಆಲಿಂಗಿಸುವ ರೀತಿಯಲ್ಲಿ–ಶೀತಲವಾದ ಮತ್ತು ಹಿತಕರವಾದ ಕಿರಣಗಳೆಂಬ ಕೈಗಳ ಮೂಲಕವಾಗಿ ಸ್ಪರ್ಶಿಸುತ್ತಾ ಶ್ರೀರಾಮನಿಗೆ ಆಹ್ಲಾದ ವನ್ನುಂಟುಮಾಡುತ್ತಾನೆ.

ದದೌ ಚಾಸ್ತ್ರಾಣಿ ದಿವ್ಯಾನಿ ಯಸ್ಮೈ ಬ್ರಹ್ಮಾ ಮಹೌಜಸೇ ।
ದಾನವೇನ್ದ್ರಂ ಹತಂ ದೃಷ್ಟ್ವಾ ತಿಮಿಧ್ವಜಸುತಂ ರಣೇ ॥೧೧॥

ಸ ಶೂರಃ ಪುರುಷವ್ಯಾಘ್ರಃ ಸ್ವಬಾಹುಬಲಮಾಶ್ರಿತಃ ।
ಅಸಂತ್ರಸ್ತೋಽಪ್ಯರಣ್ಯಸ್ಥೋ ವೇಶ್ಮನೀವ ನಿವತ್ಸ್ಯತಿ ॥೧೨॥

ರಾಮನು ಲಕ್ಷ್ಮಣನ ಸಮೇತನಾಗಿ ತಿಮಿಧ್ವಜನ ಮಗನೊಡನೆ ಯುದ್ಧಕ್ಕೆ ಹೋಗಿದ್ದಾಗ–ಶ್ರೀರಾಮನಿಗೂ ತಿಮಿಧ್ವಜನ ಮಗನಿಗೂ ನಡೆದ ಘೋರವಾದ ಯುದ್ಧದಲ್ಲಿ ಶ್ರೀರಾಮನು ತಿಮಿಧ್ವಜನ ಮಗನನ್ನು ಸಂಹರಿಸಿದನು. ದೇವತೆಗಳ ಶತ್ರುವಾದ ದಾನವೇಂದ್ರನು ಹತನಾದುದನ್ನು ಕಂಡು ಬ್ರಹ್ಮನು ಮಹಾತೇಜಸ್ವಿಯಾದ ಶ್ರೀರಾಮನಿಗೆ ಅನೇಕ ದಿವ್ಯಾಸ್ತ್ರಗಳನ್ನು ದಯಪಾಲಿಸಿದನು. ಅಂತಹ ಶೂರನಾದ, ಪುರುಷಸಿಂಹನಾದ ಶ್ರೀರಾಮನು ತನ್ನ ಬಾಹುಬಲವನ್ನಾಶ್ರಯಿಸಿ ಭಯರಹಿತನಾಗಿ ಮನೆಯಲ್ಲಿ ವಾಸಮಾಡುವಂತೆಯೇ ಅರಣ್ಯದಲ್ಲೂ ಇರುತ್ತಾನೆ.* ಯಾವನ ಬಾಣದೆದುರಾಗಿ ಬಂದ ಶತ್ರುಗಳೆಲ್ಲರೂ ಸಂಪೂರ್ಣವಾಗಿ ವಿನಾಶಹೊಂದುವರೋ–ಅಂತಹವನ ಆಡಳಿತಕ್ಕೆ ಈ ಭೂಮಿಯು ಒಳಪಡದಿರಲು ಹೇಗೆತಾನೇ ಸಾಧ್ಯವಾದಿತು? ಸರ್ವಲಕ್ಷಣಯುಕ್ತವಾದ ಶರೀರಕಾಂತಿ, ಅಜೇಯನಾದ ಶತ್ರುವನ್ನೂ ಜಯಿಸುವ ಶೌರ್ಯ, ಒಳ್ಳೆಯ ಸ್ವಭಾವ–ಇವೇ ಮುಂತಾದ ಕಲ್ಯಾಣಗುಣಗಳಿರುವ ಶ್ರೀರಾಮನು ಶೀಘ್ರವಾಗಿ ಅರಣ್ಯವಾಸವನ್ನು ಮುಗಿಸಿ ರಾಜ್ಯವನ್ನು ಪಡೆದುಕೊಳ್ಳುತ್ತಾನೆ.

---

* ಈ ಶ್ಲೋಕವು ಸ್ವಲ್ಪವಿವಾದಕ್ಕೆಡೆಕೊಟ್ಟಿದೆ. ಹಿಂದಿನ ಕಥೆಯಂತೆ ಶ್ರೀರಾಮನು ದಿವ್ಯಾಸ್ತ್ರಗಳನ್ನು ಬ್ರಹ್ಮರ್ಷಿಯಾದ ವಿಶ್ವಾಮಿತ್ರರಿಂದ ಪಡೆದನು. ಈ ಶ್ಲೋಕದಲ್ಲಿರುವ ಬ್ರಹ್ಮಾ ಎಂಬ ಪದಕ್ಕೆ ಬ್ರಹ್ಮಸದೃಶರಾದ ಅಥವಾ ಬ್ರಹ್ಮನಂತೆ ಸೃಷ್ಟಿಮಾಡುವ ಸಾಮರ್ಥ್ಯವಿರುವ ವಿಶ್ವಾಮಿತ್ರರೆಂದು ಅರ್ಥಮಾಡಬಹುದು. ಆದರೆ **ತಿಮಿಧ್ವಜಸುತಂ ರಣೇ ಹತಂ ದೃಷ್ಟ್ವಾ**–ಎಂಬುದಕ್ಕೆ ಸಮನ್ವಯವನ್ನು ಮಾಡುವುದು ಸ್ವಲ್ಪ ಕಷ್ಟವಾಗುವುದು. ತಿಮಿಧ್ವಜಸುತನೆಂದರೆ **ತಿಮಿಧ್ವಜ ಏವ ಶಮ್ಬರಃ** ಎಂಬ ಒಬ್ಬರ ವ್ಯಾಖ್ಯಾನದಂತೆ **ತಿಮಿಧ್ವಜಸುತನ** = ಶಂಬರಾಸುರನ ಮಗನಾದ ಸುಬಾಹುವು ಯುದ್ಧದಲ್ಲಿ ರಾಮನಿಂದ ಹತನಾದುದನ್ನು ಕಂಡು ಎಂದು ಅರ್ಥಮಾಡಬಹುದಾಗಿದೆ. ಆದರೆ ಕಥಾಭಾಗವು ಈ ರೀತಿಯಾಗಿರುವುದಿಲ್ಲ. ವಿಶ್ವಾಮಿತ್ರರು ದಿವ್ಯಾಸ್ತ್ರಗಳನ್ನು ಉಪದೇಶಿಸಿದ ನಂತರವೇ ರಾಮನು ಸುಬಾಹುವನ್ನು ಕೊಲ್ಲುತ್ತಾನೆ. ಮತ್ತೊಬ್ಬ ವ್ಯಾಖ್ಯಾನಕಾರರು ವಿಶ್ವಾಮಿತ್ರಪ್ರಸಂಗ ವನ್ನೇ ಬಿಟ್ಟು ಕಥಾಂತರವನ್ನು ಉಲ್ಲೇಖಿಸಿದ್ದಾರೆ. ಅದು ಪ್ರಸಂಗಕ್ಕೆ ಹೊಂದಿಕೊಳ್ಳುತ್ತದೆ.

ಸೂರ್ಯಸ್ಯಾಪಿ ಭವೇತ್ಸೂರ್ಯೋ ಹ್ಯಗ್ನೇರಗ್ನಿಃ ಪ್ರಭೋಃ ಪ್ರಭುಃ ।
ಶ್ರಿಯಃ ಶ್ರೀಶ್ಚ ಭವೇದಗ್ರ್ಯಾ ಕೀರ್ತಿಃ ಕೀರ್ತ್ಯಾಃ ಕ್ಷಮಾಕ್ಷಮಾ ॥

ದೈವತಂ ದೈವತಾನಾಂ ಚ ಭೂತಾನಾಂ ಭೂತಸತ್ತಮಃ ।
ತಸ್ಯ ಕೇ ಹ್ಯಗುಣಾ ದೇವಿ ರಾಷ್ಟ್ರೇ ವಾಪ್ಯಥ ವಾ ಪುರೇ ॥೧೬॥

ದೇವಿ! ಇವನ ಮಹಿಮೆಯು ಅದ್ಭುತವಾದುದು. ಇವನು ಸೂರ್ಯನಿಗೂ ಸೂರ್ಯನಾಗಿ ಅಗ್ನಿಗೂ ಅಗ್ನಿಯಾಗಿದ್ದಾನೆ. ಈಶ್ವರ (ಇಂದ್ರ)ನಿಗೂ ಮಹೇಶ್ವರನಾಗಿದ್ದಾನೆ. ಶ್ರೀದೇವಿಗೆ ಶ್ರೀಪ್ರದನು. ಶ್ರೇಷ್ಠವಾದ ಕೀರ್ತಿಗೂ ಕೀರ್ತಿಪ್ರದನು. ಕ್ಷಮೆಗೂ ಕ್ಷಮೆಯಾದವನು. ದೇವತೆಗಳಿಗೂ ಸದಾ ದೇವತೆಯು. ಪ್ರಾಣಿಗಳಲ್ಲಿ ಶ್ರೇಷ್ಠತಮನಾದವನು. ರಾಷ್ಟ್ರಕ್ಕಾಗಲೀ ನಗರಕ್ಕಾಗಲೀ ಸಂಬಂಧಪಟ್ಟ ಯಾವ ಅವಗುಣವು ತಾನೇ ಅವನಲ್ಲಿದೆ?*

---

* ಹೋಲಿಕೆ : **ತಮೀಶ್ವರಾಣಾಂ ಪರಮಂ ಮಹೇಶ್ವರಮ್ । ತಂ ದೇವತಾನಾಂ ಪರಮಂ ಚ ದೈವತಮ್ ॥** (ಶ್ವೇತಾಶ್ವತರ.)

ವೈಜಯನ್ತಮಿತಿ ಖ್ಯಾತಂ ಪುರಂ ಯತ್ರ ತಿಮಿಧ್ವಜಃ । ಸ ಶಮ್ಬರ ಇತಿ ಖ್ಯಾತಃ ಶತಮಾಯೋ ಮಹಾಸುರಃ ॥ ಈ ಶ್ಲೋಕವು ದಶರಥನು ದೇವತೆಗಳ ಸಹಾಯಾರ್ಥವಾಗಿ ಶಂಬರಾಸುರನೊಡನೆ ಯುದ್ಧಕ್ಕೆ ಹೋದ ಪ್ರಕರಣದಲ್ಲಿ ಬರುತ್ತದೆ. ಈ ಶ್ಲೋಕದಿಂದ ತಿಮಿಧ್ವಜನೇ ಶಂಬರಾಸುರನೆಂಬುದು ಸ್ಪಷ್ಟವಾಗುತ್ತದೆ. ಹಿಂದೊಮ್ಮೆ ಲಕ್ಷ್ಮಣಸಮೇತನಾಗಿ ರಾಮನು ದಂಡಕಾರಣ್ಯದಲ್ಲಿದ್ದ ವೈಜಯಂತಪುರವನ್ನು ಆಕ್ರಮಿಸಿ ತನ್ನ ತಂದೆಯ ವಿರೋಧಿಯಾದ ಶಂಬರಾಸುರನ ಮಗನನ್ನು ಯುದ್ಧದಲ್ಲಿ ಸಂಹರಿಸಿದನು. ಅದನ್ನು ನೋಡಿ ಬ್ರಹ್ಮನು ರಾಮನಿಗೆ ಅನೇಕ ದಿವ್ಯಾಸ್ತ್ರಗಳನ್ನು ದಯಪಾಲಿಸಿದನು. ಆದರೆ ಶಂಬರಾಸುರಸುತನ ಸಂಹಾರದಿಂದ ಬ್ರಹ್ಮನು ಪ್ರೀತನಾಗಿ ದಿವ್ಯಾಸ್ತ್ರಗಳನ್ನು ದಯಪಾಲಿಸಿದ್ದರೆ ಆ ಪ್ರಕರಣವನ್ನು ವಾಲ್ಮೀಕಿಗಳು ಹಿಂದೆ ಏಕೆ ಹೇಳಲಿಲ್ಲ? ವಿಶ್ವಾಮಿತ್ರರಿಂದ ಅಸ್ತ್ರವಿದ್ಯೆಯನ್ನು ಪಡೆಯುವುದಕ್ಕೆ ಮೊದಲೇ ಶ್ರೀರಾಮನು ಧನುರ್ವಿದ್ಯೆಯಲ್ಲಿ ನಿಪುಣನಾಗಿದ್ದನು. **ಧನುರ್ವೇದೇ ಚ ನಿರತಃ ಪಿತೃಶುಶ್ರೂಷಣೇ ರತಃ ॥** ವಿಶ್ವಾಮಿತ್ರರು ಅನಂತರ ಅವನಿಗೆ ಅನೇಕ ವಿಶೇಷಾಸ್ತ್ರಗಳನ್ನು ಅನುಗ್ರಹಿಸಿದರು. ಇದಾದ ಮೇಲೆ ಬ್ರಹ್ಮದೇವರೂ ಕೆಲವು ವಿಶೇಷಾಸ್ತ್ರಗಳನ್ನು ಮೇಲ್ಕಂಡ ಕಾಲವಿಶೇಷದಲ್ಲಿ ಅವನಿಗೆ ಅನುಗ್ರಹಿಸಿದ್ದರೆ ಅದರಲ್ಲಿ ಆಚ್ಚರಿಯಿಲ್ಲ. ಯುದ್ಧಕಾಂಡ ೯೧ನೆಯ ಸರ್ಗದಲ್ಲಿ ಲಕ್ಷ್ಮಣನು

ಶ್ರೀರಾಮನು ಭೂದೇವಿ-ಸೀತಾದೇವಿ-ಶ್ರೀದೇವಿಗಳಿಂದ ಕೂಡಿದವನಾಗಿ ಅಯೋಧ್ಯೆಗೆ ಆಗಮಿಸಿ ಈ ಮೂವರೊಡನೆ ರಾಜ್ಯಸಿಂಹಾಸನದಲ್ಲಿ ಕುಳಿತು ಬಹಳ ಬೇಗ ಪಟ್ಟಾಭಿಷಿಕ್ತನಾಗುತ್ತಾನೆ. ಅಯೋಧ್ಯೆಯ ಜನರೆಲ್ಲರೂ ಕಾಡಿಗೆ ಹೊರಟಿದ್ದ ಶ್ರೀರಾಮನನ್ನು ನೋಡಿ ಶೋಕವೇಗಪೀಡಿತರಾಗಿ ದುಃಖದಿಂದ ಹುಟ್ಟಿದ ಕಣ್ಣೀರನ್ನು ಸುರಿಸುತ್ತಿದ್ದರು. ದರ್ಭೆಯಿಂದಲೂ ಮತ್ತು ನಾರಿನಿಂದಲೂ ಮಾಡಿದ ಬಟ್ಟೆಯನ್ನುಟ್ಟು ಅರಣ್ಯಕ್ಕೆ ಹೋಗುತ್ತಿದ್ದ, ಯುದ್ಧದಲ್ಲಿ ಪರಾಜಯವೆಂಬುದನ್ನೇ ಕಾಣದ ಶ್ರೀರಾಮನನ್ನು ರಾಜ್ಯಲಕ್ಷ್ಮಿಯು ಸೀತೆಯ ರೂಪದಲ್ಲಿ ಅನುಸರಿಸಿ ಹೋಗಿದ್ದಾಳೆ. ಅಂತಹವನಿಗೆ ದೊರಕದಿರುವುದು ಯಾವುದಿದೆ? ಧನುರ್ಧಾರಿಗಳಲ್ಲಿ ಶ್ರೇಷ್ಠನಾದ, ಬಾಣಗಳನ್ನೂ–ಅಸ್ತ್ರಗಳನ್ನೂ ಧರಿಸಿರುವ ಲಕ್ಷ್ಮಣನು ತಾನಾಗಿಯೇ ಯಾವನ ಮುಂದೆ ನಡೆದುಹೋಗುವನೋ–ಅಂತಹ ಶ್ರೀರಾಮನಿಗೆ ಯಾವುದು ತಾನೇ ಲಭಿಸದಿರುವುದು? ದೇವಿ! ವನವಾಸವನ್ನು ಮುಗಿಸಿ ಬರುವ ಶ್ರೀರಾಮನನ್ನು ನೀನು ಕಾಣುವೆ. ಈ ಮಾತನ್ನು ನಾನು

ಇಂದ್ರಜಿತುವಿನ ಮೇಲೆ–ತನಗೆ ಕುಬೇರನು ಸ್ವಪ್ನದಲ್ಲಿ ದಯಪಾಲಿಸಿದ್ದ ಅಸ್ತ್ರವಿಶೇಷವನ್ನು ಪ್ರಯೋಗಿಸಿದುದಾಗಿ ಹೇಳುತ್ತಾನೆ. ಲಕ್ಷ್ಮಣನಿಗೆ ಕುಬೇರನು ಅಸ್ತ್ರವನ್ನು ಅನುಗ್ರಹಿಸಿದ್ದ ಪ್ರಕರಣವು ಈ ಹಿಂದೆ ಎಲ್ಲೂ ವರ್ಣಿತವಾಗಿಲ್ಲ. ಆದರೂ ಈ ಘಟನೆಯು ನಡೆದಿತ್ತೆಂಬುದಕ್ಕೆ ಯುದ್ಧಕಾಂಡದ ಮೇಲ್ಕಂಡ ಶ್ಲೋಕವು ಪ್ರಮಾಣವಾಗಿದೆ. ಎಂದರೆ ಸ್ಪಷ್ಟವಾಗಿ ಹಿಂದೆ ಹೇಳದಿದ್ದರೂ ಇಲ್ಲಿ ಉಲ್ಲೇಖಿತವಾಗಿರುವುದರಿಂದ ಅದು ಹಿಂದೆ ನಡೆಯಿತೆಂದು ಊಹಿಸಬೇಕಾಗುತ್ತದೆ. ಉದಾ : ಸುಂದರಕಾಂಡದಲ್ಲಿ ಸೀತೆಯು ಆಂಜನೇಯನೊಡನೆ ಹೇಳಿಕಳುಹಿಸುವ ಕಾಕಾಸುರನ ವೃತ್ತಾಂತ ; ಅರಣ್ಯಕಾಂಡದಲ್ಲಿ ಈ ಪ್ರಸಂಗವನ್ನು ವಾಲ್ಮೀಕಿಗಳು ಹೇಳಿಲ್ಲ. ಆದರೂ ಸುಂದರಕಾಂಡದಲ್ಲಿ ಸೀತೆಯು ಅದನ್ನು ತಿಳಿಸುವುದರಿಂದ ಘಟನೆಯು ಹಿಂದೆ ನಡೆದಿತ್ತು ಎಂದು ಊಹಿಸಬೇಕಾಗುತ್ತದೆ.

ಇದಲ್ಲದೆ ಶ್ರೀರಾಮನು ತಿಮಿಧ್ವಜನ ಪುತ್ರನಾದ ದಾನವನನ್ನು ಸಂಹರಿಸಿದ ಕಥೆಯು '**ಯದಾ ವ್ರಜತಿ ಸಂಗ್ರಾಮಂ ಗ್ರಾಮಾರ್ಥೇ ನಗರಸ್ಯ ವಾ । ಗತ್ವಾ ಸೌಮಿತ್ರಿಸಹಿತೋ ನಾವಿಜಿತ್ಯ ನಿವರ್ತತೇ ॥**' (ಅಯೋಧ್ಯಾ ಸರ್ಗ ೩೧) ಎಂದು ಪ್ರಜಾಮುಖ್ಯರು ಮಾಡುವ ಶ್ರೀರಾಮಪರಾಕ್ರಮವರ್ಣನೆಯು ಶ್ಲೋಕದಲ್ಲಿ ಸೂಚಿತವಾಗಿದೆ.

ಒಮ್ಮೆ ಶ್ರೀರಾಮನು ದಂಡಕಾರಣ್ಯಕ್ಕೆ ಹೋಗಿ ವೈಜಯಂತ ಎಂಬ ನಗರಕ್ಕೆ ಮುತ್ತಿಗೆ

ಸತ್ಯವಾಗಿ ಹೇಳುತ್ತಿದ್ದೇನೆ. ಇನ್ನಾದರೂ ನೀನು ಶೋಕ-ಮೋಹಗಳನ್ನು ಪರಿತ್ಯಜಿಸು. ತನ್ನ ತಲೆಯಿಂದ ಈ ನಿನ್ನ ಚರಣಕಮಲಗಳನ್ನು ಮುಟ್ಟಿ ನಮಸ್ಕರಿಸಲಿರುವ ಉದಯಿಸಿದ ಚಂದ್ರನಂತೆ ಚಾರುದರ್ಶನನಾದ ನಿನ್ನ ಮಗನನ್ನು ಪುನಃ ಕಾಣುವೆ. ಅಯೋಧ್ಯೆಯನ್ನು ಪುನಃ ಪ್ರವೇಶಮಾಡಿ ಮಹಾಸಂಪದ್ಯುಕ್ತನಾಗಿ ಪಟ್ಟಾಭಿಷಿಕ್ತನಾಗುವ ಶ್ರೀರಾಮನನ್ನು ನೋಡಿ ಆನಂದಾಶ್ರುಗಳನ್ನು ಎರಡು ಕಣ್ಣುಗಳಿಂದಲೂ ಸುರಿಸಿಲಿರುವೆ. ದೇವಿ! ಶ್ರೀರಾಮನ ವಿಷಯದಲ್ಲಿ ದುಃಖ-ಶೋಕಗಳೆರಡನ್ನೂ ಸಾಕುಮಾಡು. ಶ್ರೀರಾಮನಲ್ಲಿ ಅಮಂಗಳಕರವಾದ ಯಾವ ಲಕ್ಷಣವೂ ಇರುವುದಿಲ್ಲ. ಸೀತಾ-ಲಕ್ಷ್ಮಣರಿಂದ ಯುಕ್ತನಾದ ನಿನ್ನ ಮಗನನ್ನು ಬಹಳ ಬೇಗ ಕಾಣುವೆ. ಪಾಪರಹಿತಳೇ! ಶ್ರೀರಾಮನ ವಿಯೋಗದಿಂದ ದುಃಖಸಾಗರದಲ್ಲಿ ಮುಳುಗಿರುವ ಎಲ್ಲ ಜನರನ್ನೂ ನೀನೇ ಸಂತೈಸಬೇಕಾಗಿದೆ. ಹೀಗಿರುವಾಗ ನೀನೇ ಇಂದು ಮನಸ್ಸಿನಲ್ಲಿ ಕ್ಷೋಭೆಗೊಳ್ಳುತ್ತಿರುವೆಯೇಕೆ? ಶ್ರೀರಾಘವ ನನ್ನೇ ಮಗನನ್ನಾಗಿ ಪಡೆದಿರುವ ನೀನು ಶೋಕಪಡುವುದು ಖಂಡಿತ ವಾಗಿಯೂ ಉಚಿತವಲ್ಲ.

ನ ಹಿ ರಾಮಾತ್ಪರೋ ಲೋಕೇ ವಿದ್ಯತೇ ಸತ್ಪಥೇ ಸ್ಥಿತಃ ॥೨೬॥

ಸನ್ಮಾರ್ಗದಲ್ಲಿಯೇ ಇರುವವರಲ್ಲಿ ಶ್ರೀರಾಮನಿಗಿಂತಲೂ ಶ್ರೇಷ್ಠನಾದವನು ಈ ಲೋಕದಲ್ಲಿಯೇ ಮತ್ತೊಬ್ಬನಿಲ್ಲ.

ಹಾಕಿ ಅಲ್ಲಿದ್ದ ದಶರಥನ ಶತ್ರುವಾದ ಶಂಬರಾಸುರನ ಮಗನನ್ನು ಸಂಹಾರಮಾಡಿದನು. ಇದರಿಂದ ಸಂತುಷ್ಟನಾದ ಬ್ರಹ್ಮನು ಶ್ರೀರಾಮನಿಗೆ ಅನೇಕ ದಿವ್ಯಾಸ್ತ್ರಗಳನ್ನು ಅನುಗ್ರಹಿಸಿದನು–ಎಂಬುದು ಸೂಚಿತವಾದ ಘಟನೆಯ ವಿವರಣೆ. ಒಬ್ಬ ವ್ಯಾಖ್ಯಾನಕಾರರು ಈ ಶ್ಲೋಕಕ್ಕೆ ಬೇರೆಯ ರೀತಿ ವ್ಯಾಖ್ಯಾನಮಾಡಿರುತ್ತಾರೆ : **ದಾನವೇನ್ದ್ರಂ ಹ ತಂ ದೃಷ್ಟ್ವಾ ತಿಮಿಧ್ವಜಸುತಂ ರಣೇ ।** ಅತಿಪ್ರಬಲನಾದ ತಿಮಿಧ್ವಜನ ಅಥವಾ ಶಂಬರಾಸುರನ ಮಗನಾದ ಸುಬಾಹುವನ್ನು ಯುದ್ಧರಂಗದಲ್ಲಿ ತಿಳಿದು (ಸುಬಾಹುವು ಯುದ್ಧಕ್ಕೆ ಬರುತ್ತಾನೆಂಬುದನ್ನು ತಿಳಿದು) ವಿಶ್ವಾಮಿತ್ರನು ಸಕಲದಿವ್ಯಾಸ್ತ್ರಗಳನ್ನೂ ಮಹಾತೇಜಸ್ವಿಯಾದ ರಾಮನಿಗೆ ಹ = ಹರ್ಷೇಣ ಸಂತೋಷದಿಂದ ಕೊಟ್ಟನು. ಈ ವ್ಯಾಖ್ಯಾನಕಾರರು ಹತಂ ಎಂಬ ಪದವನ್ನು ಹ ತಂ ಎಂದು ಪ್ರತ್ಯೇಕಿಸಿ ಅರ್ಥಮಾಡಿರುತ್ತಾರೆ. ಹೀಗೆ ಅರ್ಥಮಾಡುವುದಾದರೆ ಸುಬಾಹುವಿನ ತಂದೆಗೂ ತಿಮಿಧ್ವಜನೆಂದು ಹೆಸರಿತ್ತು ಎಂದು ನಿರ್ಧರಿಸಬೇಕಾಗುತ್ತದೆ.'

ಅರಣ್ಯದಿಂದ ಆಗಮಿಸಿ ಸ್ನೇಹಿತರ ಸಮೇತನಾಗಿ ಅಭಿವಾದನಮಾಡ ಲಿರುವ ಪ್ರಿಯಸುತನನ್ನು ಕಂಡು ನೀನು–ಮೇಘಪಂಕ್ತಿಯು ವರ್ಷಾಕಾಲ ದಲ್ಲಿ ಮಳೆಗರೆಯುವಂತೆ–ಆನಂದಾಶ್ರುಗಳನ್ನು ಸುರಿಸುವೆ. ವರದನಾದ ನಿನ್ನ ಮಗನು ಬಹಳ ಬೇಗ ಅರಣ್ಯವಾಸವನ್ನು ಮುಗಿಸಿ ಅಯೋಧ್ಯೆಗೆ ಬಂದು ಮೃದುವಾಗಿಯೂ ಪುಷ್ಟವಾಗಿಯೂ ಇರುವ ತನ್ನ ಎರಡು ಕೈಗಳಿಂದ ನಿನ್ನೆರಡು ಪಾದಗಳನ್ನು ಒತ್ತಿ ಶುಶ್ರೂಷೆಮಾಡುತ್ತಾನೆ. ಅಭಿವಾದನಮಾಡಿ ನಮಸ್ಕರಿಸುವ, ಶೂರನಾದ, ಸುಹೃತ್ಸಮೇತನಾದ ಮಗನನ್ನು–ಮೇಘಗಳ ಸಾಲು ಪರ್ವತವನ್ನು ಜಲಧಾರೆಗಳಿಂದ ಸೇಚನಮಾಡುವಂತೆ–ಆನಂದ ಬಾಷ್ಪಗಳಿಂದ ಸಂಪ್ರೋಕ್ಷಿಸುವೆ."

ಉಪಚಾರದ (ಸಮಾಧಾನಕಾರಕವಾದ) ಮಾತುಗಳ ಜೋಡಣೆಯಲ್ಲಿ ಅತಿಕುಶಲಳಾದ, ನಿರ್ದುಷ್ಟಳಾದ ಸುಮಿತ್ರಾದೇವಿಯು ಇಂತಹ ಅನೇಕವಿಧ ವಾದ ಪ್ರಿಯವಾಕ್ಯಗಳಿಂದ ಕೌಸಲ್ಯೆಯನ್ನು ಸಮಾಧಾನಪಡಿಸಿ ವಿರಮಿಸಿದಳು.

ಲಕ್ಷ್ಮಣನ ತಾಯಿಯಾದ ಸುಮಿತ್ರಾದೇವಿಯ ಆ ಮಾತುಗಳನ್ನು ಕೇಳಿ ದಶರಥನ ಪಟ್ಟಮಹಿಷಿಯಾದ ಶ್ರೀರಾಮನ ತಾಯಿಯ ಹೃದಯದಲ್ಲಿಡಗಿದ್ದ ಶೋಕವು–ಶರದೃತುವಿನಲ್ಲಿ ಕಾಣಿಸಿಕೊಳ್ಳುವ ಅಲ್ಪವಾದ ನೀರುಳ್ಳ ಮೇಘದಂತೆ–ಬಹಳ ಬೇಗ ವಿನಾಶಹೊಂದಿತು.

ನಳನೆಯ ಸರ್ಗವು ಮುಗಿಯಿತು.

ದಶರಥ-ಭರತರ ವಿಷಯದಲ್ಲಿ ಪ್ರೇಮಭಾವದಿಂದಿರುವಂತೆ ಶ್ರೀರಾಮನು ತನ್ನನ್ನನುಸರಿಸಿ ಬರುತ್ತಿದ್ದ ಪ್ರಜೆಗಳಿಗೆ ಹೇಳಿ ಅಯೋಧ್ಯೆಗೆ ಹಿಂದಿರುಗುವಂತೆ ಹೇಳಿದುದು : ವೃದ್ಧಬ್ರಾಹ್ಮಣರು ಶ್ರೀರಾಮನನ್ನು ಅಯೋಧ್ಯೆಗೆ ಹಿಂದಿರುಗುವಂತೆ ಆಗ್ರಹಪಡಿಸಿದುದು : ಅವರೆಲ್ಲರೊಡನೆ ಶ್ರೀರಾಮನು ತಮಸಾ ನದಿಯ ತೀರಕ್ಕೆ ಹೋದುದು

ಅನುರಕ್ತಾ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ಅನುಜಗ್ಮುಃ ಪ್ರಯಾಂತಂ ತಂ ವನವಾಸಾಯ ಮಾನವಾಃ ॥೧॥

ಇತ್ತಲಾಗಿ ಅರಣ್ಯಕ್ಕೆ ಪ್ರಯಾಣಮಾಡುತ್ತಿದ್ದ ಸತ್ಯಪರಾಕ್ರಮನಾದ, ಮಹಾತ್ಮನಾದ ಶ್ರೀರಾಮನನ್ನೇ ಅನುಸರಿಸಿ ಅವನಲ್ಲಿಯೇ ಹೆಚ್ಚು ಅನುರಾಗ ವಿದ್ದ ಅಯೋಧ್ಯಾಪುರವಾಸಿಗಳೂ ಹೋಗುತ್ತಿದ್ದರು.

ದಶರಥನನ್ನೂ ಮತ್ತು ಸುಹೃದರನ್ನೂ ಅಮಾತ್ಯರು ಬಲಾತ್ಕಾರ ಪೂರ್ವಕವಾಗಿ ಹಿಂದಿರುಗಿಸಿದರೂ–ಶ್ರೀರಾಮನ ರಥದ ಹಿಂದೆ ಹೋಗುತ್ತಿದ್ದ ಪುರಜನರು ಹಿಂದಿರುಗಲೇ ಇಲ್ಲ. ಅಯೋಧ್ಯಾನಗರವಾಸಿಗಳಾಗಿದ್ದ ಪ್ರಜೆಗಳಿಗೆ ಮಹಾಯಶೋವಂತನಾದ ಮತ್ತು ಗುಣಸಂಪನ್ನನಾದ ಶ್ರೀರಾಮನು ಪೂರ್ಣಚಂದ್ರನಂತೆ ಅತ್ಯಂತಪ್ರಿಯನಾಗಿದ್ದನು. ಹಿಂದಿರುಗು ವಂತೆ ಅಥವಾ ತಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವಂತೆ ಪ್ರಜೆಗಳು ಬಹಳವಾಗಿ ಪ್ರಾರ್ಥಿಸುತ್ತಿದ್ದರೂ–ಶ್ರೀರಾಮನು ತಂದೆಯನ್ನು ಸತ್ಯವಂತನನ್ನಾಗಿ ಮಾಡಲು ಅರಣ್ಯಕ್ಕೇ ಹೋಗಲು ನಿಶ್ಚಯಿಸಿ, ತನ್ನನ್ನನು ಸರಿಸಿ ಬರುತ್ತಿದ್ದ ಪ್ರಜೆಗಳನ್ನು ಕಣ್ಣುಗಳಿಂದಲೇ ಹೀರಿಕೊಳ್ಳುತ್ತಿರುವನೋ ಎಂಬಂತೆ ಸ್ನೇಹಪೂರಿತವಾದ ದೃಷ್ಟಿಯಿಂದ ನೋಡುತ್ತಾ, ತನ್ನ ಮಕ್ಕಳನ್ನು ಮಾತನಾಡಿಸುವಂತೆಯೇ ಪ್ರಜೆಗಳನ್ನೂ ಮಾತನಾಡಿಸುತ್ತಾ ಹೇಳಿದನು :

"ಪ್ರಜೆಗಳೇ! ಅಯೋಧ್ಯಾಪುರವಾಸಿಗಳಾದ ನಿಮಗೆ ನನ್ನಲ್ಲಿ ಯಾವ ವಿಧವಾದ ಪ್ರೀತಿಯಿರುವುದೋ, ಗೌರವವಿರುವುದೋ–ಅದೇ ಪ್ರೀತಿ-ಗೌರವಗಳನ್ನು ನನ್ನ ಸಂತೋಷಕ್ಕಾಗಿ ಭರತನಲ್ಲಿರಿಸಿರಿ. ಕೈಕೇಯಿಯ ಆನಂದ

ವರ್ಧನನಾದ ಕಲ್ಯಾಣಚರಿತ್ರನಾದ ಭರತನು ಯಥಾವತ್ತಾಗಿ ಈಗಿನಂತೆಯೇ ನಿಮಗೆ ಪ್ರಿಯವೂ* ಮತ್ತು ಹಿತವೂ ಆದ ಕಾರ್ಯವನ್ನೇ ಮಾಡುತ್ತಾನೆ. ಭರತನು ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಐಹಿಕ ಮತ್ತು ಪಾರಲೌಕಿಕ ಜ್ಞಾನಗಳಲ್ಲಿ ವೃದ್ಧನಾಗಿದ್ದಾನೆ. ಮೃದುತ್ವ ಮತ್ತು ಪರಾಕ್ರಮ–ಈ ಎರಡು ಗುಣಗಳೂ ಅವನಲ್ಲಿವೆ. ಅವನು ನಿಮಗೆ ಅನುರೂಪನಾದ ರಾಜನಾಗಿದ್ದು ನಿಮ್ಮ ಭಯವೆಲ್ಲವನ್ನೂ ಹೋಗಲಾಡಿಸುತ್ತಾನೆ. ರಾಜಗುಣಗಳಿಂದ ಯುಕ್ತನಾಗಿರುವ ಭರತನನ್ನು ತಂದೆಯು ಯುವರಾಜನನ್ನಾಗಿ ನಿಯಮಿಸಿದ್ದಾನೆ. ನಾನು, ನೀವು ಮತ್ತು ಲಕ್ಷ್ಮಣ-ಶತ್ರುಘ್ನರೂ–ಎಲ್ಲರೂ ರಾಜಾಜ್ಞೆಯನ್ನು ಪರಿಪಾಲಿಸಲೇಬೇಕು. ನಾನು ಅರಣ್ಯಕ್ಕೆ ಹೊರಟು ಹೋದನಂತರ ಮಹಾರಾಜನು ಯಾವುದೇ ಕಾರಣದಿಂದಲೂ ಸಂತಾಪಪಡದಂತೆ ನೀವು ನಡೆದುಕೊಳ್ಳಬೇಕು. ನನ್ನ ಸಂತೋಷಕ್ಕಾಗಿ ನೀವು ಈ ಕಾರ್ಯವನ್ನು ಮಾಡಬೇಕಾಗಿದೆ.”

ಯಥಾ ಯಥಾ ದಾಶರಥಿರ್ಧರ್ಮ ಏವ ಸ್ಥಿತೋಽಭವತ್ ।
ತಥಾ ತಥಾ ಪ್ರಕೃತಯೋ ರಾಮಂ ಪತಿಮಕಾಮಯನ್ ॥೧೧॥

ಶ್ರೀರಾಮನು ಧರ್ಮವನ್ನೇ ಆಶ್ರಯಿಸಿ ಪ್ರಜೆಗಳನ್ನು ಸಮಾಧಾನಗೊಳಿಸಿದಷ್ಟೂ ಪ್ರಜೆಗಳು ಕೂಡ ಶ್ರೀರಾಮನೇ ತಮಗೆ ರಾಜನಾಗಬೇಕೆಂದು ಹಂಬಲಿಸತೊಡಗಿದರು. (ಶ್ರೀರಾಮನ ಧರ್ಮತತ್ಪರತೆಯು ಅವನೇ ತಮ್ಮ ರಾಜನಾಗಬೇಕೆಂಬ ಪ್ರಜೆಗಳ ಮನಸ್ಸನ್ನು ಹೆಚ್ಚು-ಹೆಚ್ಚಾಗಿ ದೃಢಗೊಳಿಸಿತು.) ಕಣ್ಣೀರಿನಿಂದ ತುಂಬಿದ ಮುಖವುಳ್ಳವರಾಗಿದ್ದ, ಅತ್ಯಂತದೀನ

---

* ಪ್ರಿಯವಾಗಿರುವ ಕಾರ್ಯವು ಹಿತವಾದ ಕಾರ್ಯವಲ್ಲವಾಗಿರಬಹುದು. ಅಪ್ರಿಯವಾದ ಕಾರ್ಯವೂ ಹಿತವಾಗಿರಬಹುದು. ರೋಗಿಗೆ ಔಷಧವು ಪ್ರಿಯವಲ್ಲ. ಆದರೆ ಅದರಿಂದ ಹಿತವುಂಟಾಗುತ್ತದೆ. ನೆಲ್ಲಿಕಾಯಿಯನ್ನು ತಿಂದು ನೀರುಕುಡಿಯುವುದು ಬಹುಪ್ರಿಯಕರ, ಬಹುರುಚಿಕರ. ಆದರೆ ಅದರಿಂದ ಹಿತವುಂಟಾಗುವುದಿಲ್ಲ. ಜ್ವರದ ಉತ್ಪಾದನೆಯಾಗುತ್ತದೆ. ಧೂಮಪಾನವು ತಾತ್ಕಾಲಿಕವಾಗಿ ಪ್ರಿಯವೆನಿಸಿದರೂ ಪರಿಣಾಮದಲ್ಲಿ ಅದು ಹಿತಕಾರಿಯಲ್ಲ. ಆದುದರಿಂದ ಪ್ರಿಯವಾದುದು ಹಿತವಾದುದಲ್ಲವಾಗಿರಬಹುದು. ಹಿತವಾದುದು ಪ್ರಿಯವಾದುದಾಗಿಲ್ಲದಿರಬಹುದು. ಭರತನು ಮಾತ್ರ ಪ್ರಜೆಗಳಿಗೆ ಪ್ರಿಯವಾಗಿಯೂ ಮತ್ತು ಹಿತವಾಗಿಯೂ ಇರುವ ಕಾರ್ಯವನ್ನೇ ಮಾಡುತ್ತಾನೆಂಬುದು ರಾಮನ ಅಭಿಪ್ರಾಯ.

ರಾಗಿದ್ದ ಅಯೋಧ್ಯಾಪುರವಾಸಿಗಳನ್ನು ಶ್ರೀರಾಮನು ಲಕ್ಷ್ಮಣನೊಡನೆ ಸದ್ಗುಣಗಳೆಂಬ ಹಗ್ಗದಿಂದ ಕಟ್ಟಿ ಎಳೆಯುತ್ತಿರುವನೋ ಎಂಬಂತೆ ಭಾಸವಾಗುತ್ತಿದ್ದಿತು.

ಆ ಜನಸಮೂಹದ ಮಧ್ಯದಲ್ಲಿ ಜ್ಞಾನವೃದ್ಧರೂ, ವಯೋವೃದ್ಧರೂ ಮತ್ತು ಮಹಾತೇಜಸ್ವಿಗಳೂ ಆಗಿದ್ದ ಬ್ರಾಹ್ಮಣರು ವಯೋಧರ್ಮದಿಂದ ನಡುಗುತ್ತಿದ್ದ ತಲೆಗಳಿಂದ ಕೂಡಿದವರಾಗಿ ಶ್ರೀರಾಮನ ರಥಕ್ಕೆ ಬಹಳ ದೂರದಲ್ಲಿಯೇ ನಿಂತು ಹೇಳಿದರು :

ವಹನ್ತೋ ಜವನಾ ರಾಮಂ ಭೋ ಭೋ ಜಾತ್ಯಾಸ್ತುರಙ್ಗಮಾಃ ।
ನಿವರ್ತಧ್ವಂ ನ ಗನ್ತವ್ಯಂ ಹಿತಾ ಭವತ ಭರ್ತರಿ ॥೧೪॥

"ಶ್ರೀರಾಮನನ್ನು ಹೊತ್ತು ಬಹುವೇಗದಿಂದ ಅರಣ್ಯದ ಕಡೆಗೆ ಓಡುತ್ತಿರುವ ಉತ್ತಮಜಾತಿಯ ಕುದುರೆಗಳೇ! ನಾವು ಹೇಳುವುದನ್ನು ಆಲಿಸಿ ಕೇಳಿರಿ. ನೀವು ಈ ಕೂಡಲೇ ಅಯೋಧ್ಯಾಪಟ್ಟಣದ ಕಡೆಗೆ ಹಿಂದಿರುಗಿರಿ, ಮುಂದೆ ಪ್ರಯಾಣಮಾಡಬೇಡಿರಿ. ಸ್ವಾಮಿಯಾದ ಶ್ರೀರಾಮ ಚಂದ್ರನಿಗೆ ಹಿತವಾಗುವಂತೆ ವರ್ತಿಸಿರಿ.

ಕರ್ಣವನ್ತಿ ಹಿ ಭೂತಾನಿ ವಿಶೇಷೇಣ ತರುಙ್ಗಮಾಃ ।
ಯೂಯಂ ತಸ್ಮಾನ್ನಿವರ್ತಧ್ವಂ ಯಾಚನಾಂ ಪ್ರತಿವೇದಿತಾಃ ॥೧೫॥

ಪ್ರಪಂಚದಲ್ಲಿರುವ ಸಕಲಪ್ರಾಣಿಗಳಿಗೂ ಶಬ್ದಗಳನ್ನು ಗ್ರಹಿಸುವ ಕಿವಿಗಳಿರುತ್ತವೆ. ಅದರಲ್ಲಿಯೂ ಕುದುರೆಗಳಿಗೆ ವಿಶೇಷವಾಗಿ ಶಬ್ದಗ್ರಹಣ ಶಕ್ತಿಯುಳ್ಳ ಕಿವಿಗಳಿರುತ್ತವೆಯೆಂದು ಕೇಳಿದ್ದೇವೆ. ಆದುದರಿಂದ ನಮ್ಮ ಯಾಚನೆಯನ್ನು ಆಲಿಸಿ ಕೇಳಿ ಈ ಕೂಡಲೇ ಅಯೋಧ್ಯೆಗೆ ಹಿಂದಿರುಗಿರಿ.

ಧರ್ಮತಃ ಸ ವಿಶುದ್ಧಾತ್ಮಾ ವೀರಃ ಶುಭದೃಢವ್ರತಃ ।
ಉಪವಾಹ್ಯಸ್ತು ವೋ ಭರ್ತಾ ನಾಪವಾಹ್ಯಃ ಪುರಾದ್ವನಮ್ ॥೧೬॥

ಧರ್ಮದ ಕಾರಣದಿಂದಲೂ ನೀವು ಇವನನ್ನು ಅರಣ್ಯಕ್ಕೊಯ್ಯ ಬಾರದು. ಏಕೆಂದರೆ : ಶ್ರೀರಾಮನು ಪರಿಶುದ್ಧವಾದ ಮನಸ್ಸುಳ್ಳವನು. ವೀರನು. ಶುಭಪ್ರದನು. ದೃಢವ್ರತನು. ಇಂತಹ ಸಕಲಗುಣಪರಿಪೂರ್ಣ ನಾದ ನಿಮ್ಮ ಸ್ವಾಮಿಯನ್ನು ಪಟ್ಟಣಕ್ಕೆ ಕರೆತರುವುದು ನಿಮ್ಮಂತಹ ಉತ್ತಮ

ಜಾತಿಯ ಕುದುರೆಗಳಿಗೆ ಯೋಗ್ಯವಾಗಿರುವುದೇ ಹೊರತು ಪಟ್ಟಣದಿಂದ ಅರಣ್ಯಕ್ಕೊಯ್ಯುವುದು ಖಂಡಿತವಾಗಿಯೂ ಸರಿಯಲ್ಲ."

ಹೀಗೆ ಆರ್ತರಾಗಿ ಪ್ರಲಪಿಸುತ್ತಿದ್ದ ವೃದ್ಧಬ್ರಾಹ್ಮಣರನ್ನು ಕಂಡು ದಯಾರ್ದ್ರಹೃದಯನಾದ ಶ್ರೀರಾಮನು ಒಡನೆಯೇ ರಥದಿಂದಿಳಿದನು. ಅರಣ್ಯಕ್ಕೆ ಹೋಗುವುದರಲ್ಲಿಯೇ ಹೆಚ್ಚಿನ ಆಸಕ್ತಿಯಿದ್ದ ಶ್ರೀರಾಮನು ಸೀತಾ-ಲಕ್ಷ್ಮಣರೊಡನೆ ಕಾಲ್ನಡಿಗೆಯಲ್ಲಿಯೇ ಮೆಲ್ಲ-ಮೆಲ್ಲನೆ ಹೆಜ್ಜೆಗಳನ್ನಿಡುತ್ತಾ ಅರಣ್ಯಾಭಿಮುಖವಾಗಿ ಹೊರಟನು. ಸಚ್ಚಾರಿತ್ರ್ಯಪ್ರೇಮಿಯಾದ, ದಯಾರ್ದ್ರವಾದ ಕಣ್ಣುಗಳಿಂದ ಕೂಡಿದ್ದ ಶ್ರೀರಾಮನಿಗೆ, ರಥದಲ್ಲಿಯೇ ಕುಳಿತು ಕಾಲ್ನಡಿಗೆಯಲ್ಲಿ ತನ್ನನ್ನು ಅನುಸರಿಸಿ ಬರುತ್ತಿದ್ದ, ವೃದ್ಧಬ್ರಾಹ್ಮಣರನ್ನು ಬಿಟ್ಟುಹೋಗಲು ಮನಸ್ಸಾಗಲಿಲ್ಲ. ಸೀತಾ-ಲಕ್ಷ್ಮಣರೊಡನೆ ಅರಣ್ಯಾಭಿಮುಖವಾಗಿಯೇ ನಡೆದುಹೋಗುತ್ತಿದ್ದ ಶ್ರೀರಾಮನನ್ನು ಕಂಡು ಭ್ರಾಂತಚಿತ್ತರಾದ ವೃದ್ಧಬ್ರಾಹ್ಮಣರು ಅತ್ಯಂತಸಂತಾಪದಿಂದ ಹೇಳಿದರು :

"ಅಖಂಡವಾದ ಈ ಬ್ರಾಹ್ಮಣಸಮೂಹವು ಬ್ರಾಹ್ಮಣಹಿತೈಷಿಯಾದ ನಿನ್ನನ್ನು ಅನುಸರಿಸಿ ಹೋಗುತ್ತಿದೆ. ಬ್ರಾಹ್ಮಣರ ಹೆಗಲಮೇಲಿರುವ ದಕ್ಷಿಣಾಗ್ನಿ-ಗಾರ್ಹಪತ್ಯ-ಆಹವನೀಯಗಳೆಂಬ ಅಗ್ನಿಗಳೂ ನಿನ್ನನ್ನೇ ಅನುಸರಿಸಿಬರುತ್ತಿವೆ. ವಾಜಪೇಯಯಾಗಾನುಷ್ಠಾನದಿಂದ ಉಪಲಬ್ಧವಾದ, ಶರತ್ಕಾಲದ ಮೋಡದಂತೆ ಬಿಳುಪಾಗಿರುವ ನಮ್ಮ ಶ್ವೇತಚ್ಛತ್ರಗಳೂ, ನಿನ್ನನ್ನು ಅನುಸರಿಸಿ ಬರುತ್ತಿರುವುದನ್ನು ನೋಡು.* ಸಾರ್ವಭೌಮಪದವಿಯು ಆಕಸ್ಮಿಕವಾಗಿ ತಪ್ಪಿಹೋಗಿ ಶ್ವೇತಚ್ಛತ್ರವನ್ನು ಪಡೆಯದೇ ಸೂರ್ಯನ ತೀಕ್ಷ್ಣವಾದ ಕಿರಣಗಳಿಂದ ಸಂತಾಪಪಡುತ್ತಿರುವ ನಿನಗೆ ವಾಜಪೇಯ ಯಾಗದಿಂದ ಲಭಿಸಿರುವ ನಮ್ಮ ಈ ಶ್ವೇತಚ್ಛತ್ರಗಳಿಂದಲೇ ನೆಳಲನ್ನುಂಟು ಮಾಡುತ್ತೇವೆ. ಈ ಹಿಂದೆ ಯಾವ ನಮ್ಮ ಬುದ್ಧಿಯು ವೇದಮಂತ್ರಗಳಲ್ಲಿಯೇ (ವೇದಮಂತ್ರಯುಕ್ತವಾದ ಕರ್ಮಗಳಲ್ಲಿಯೇ) ನಿಯತವಾಗಿ

---

* ಶ್ರೌತಪ್ರಯೋಗದಲ್ಲಿ ವಾಜಪೇಯಯಾಗಮಾಡಿದವರು ಶ್ವೇತಚ್ಛತ್ರಧಾರಣೆ ಮಾಡಬೇಕೆಂಬ ವಿಧಿಯಿದೆಯೆಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಯಾವಜ್ಜೀವಂ ನ ಕಞ್ಚನ ಪ್ರತ್ಯವರೋಹೇತ್ । ಬೃಹಸ್ಪತಿಸವೇನ ವಾ ಪ್ರತ್ಯವರೋಹಣೀಯೇನ ಯಜೇತ । ಶ್ವೇತಚ್ಛತ್ರೀ ಭವತೀತಿ ವಿಜ್ಞಾಯತೇ ॥

ದ್ದಿತೋ ಆ ಬುದ್ಧಿಯೀಗ ನಿನ್ನ ಸಲುವಾಗಿ ವನವಾಸವನ್ನು ಅನುಸರಿಸುತ್ತಿದೆ. ನಮಗೆ ಐಶ್ವರ್ಯರೂಪವಾಗಿರುವ ಶ್ರೇಷ್ಠವಾದ ವೇದಗಳು ನಮ್ಮ ಹೃದಯದಲ್ಲಿಯೇ ಅಡಗಿವೆ. (ಹೃದ್ಗತವಾಗಿದೆ.) ನಮ್ಮ ಭಾರ್ಯೆಯರು ತಮ್ಮ ಸಚ್ಚಾರಿತ್ರ್ಯದಿಂದಲೇ ತಮ್ಮನ್ನು ರಕ್ಷಿಸಿಕೊಂಡು ಮನೆಗಳಲ್ಲೇ ಇರುತ್ತಾರೆ. ರಾಮಚಂದ್ರ! ನಿನ್ನನ್ನುಸರಿಸಿಕೊಂಡಿರುವುದರಲ್ಲಿ ನಮ್ಮ ಮನಸ್ಸು ದೃಢವಾಗಿದೆ. ಈ ವಿಷಯದಲ್ಲಿ ಪುನಃ ಪರಿಶೀಲಿಸಬೇಕಾದ ಅಗತ್ಯವೇ ಇಲ್ಲ. ಧರ್ಮಮೂರ್ತಿಯಾದ ನೀನೇ ಬ್ರಾಹ್ಮಣರ ಆಜ್ಞಾಪರಿಪಾಲನರೂಪವಾದ ಧರ್ಮವನ್ನು ಉಪೇಕ್ಷೆಮಾಡಿದಲ್ಲಿ ಬೇರೆ ಯಾವ ಪ್ರಾಣಿಯು ತಾನೇ ಧರ್ಮಮಾರ್ಗದಲ್ಲಿರುತ್ತದೆ?[1] ನಿಶ್ಚಲವಾದ ಧರ್ಮಾನುಷ್ಠಾನವುಳ್ಳವನೇ! ಹಂಸಪಕ್ಷಿಯಂತೆ ಬಿಳುಪಾದ (ನರೆತ) ಕೂದಲುಗಳಿಂದ ಕೂಡಿರುವ ನಾವು ಧೂಳಿನಿಂದ ಧೂಸರಿತರಾಗಿ ಈ ತಲೆಗಳಿಂದ ಭೂಮಿಯನ್ನು ಮುಟ್ಟಿ ನಿನ್ನನ್ನು ಯಾಚಿಸುತ್ತೇವೆ. ಅಯೋಧ್ಯೆಗೆ ಹಿಂದಿರುಗು.[2]

ಇಲ್ಲಿಗೆ ಆಗಮಿಸಿರುವ ಅನೇಕ ಬ್ರಾಹ್ಮಣರು ಯಜ್ಞಗಳನ್ನು ಆರಂಭಿಸಿರುತ್ತಾರೆ. ಅವರು ಆರಂಭಿಸಿರುವ ಯಜ್ಞದ ಪರಿಸಮಾಪ್ತಿಯು ನಿನ್ನ ಪುನರಾಗಮನವನ್ನೇ ಅವಲಂಬಿಸಿದೆ. ರಾಮ! ಸಕಲಪ್ರಜೆಗಳೂ, ಸಕಲ ಪ್ರಾಣಿಗಳೂ ನೀನು ಹಿಂದಿರುಗುವಂತೆ ಅಥವಾ ನಿನ್ನ ಜೊತೆಯಲ್ಲಿ ಬರಲು

---

[1] ವೃದ್ಧಬ್ರಾಹ್ಮಣರು ಶ್ರೀರಾಮನನ್ನು ತಾವು ಹಿಂಬಾಲಿಸುತ್ತೇವೆಂದು ಹೇಳಿದರೂ ಶ್ರೀರಾಮನು ಅಯೋಧ್ಯೆಗೆ ಹಿಂದಿರುಗಬೇಕೆಂಬುದೇ ಅವರಿಗೆ ಅಭಿಮತವಾದ ವಿಷಯ. ಆದುದರಿಂದ ಹೀಗೂ ಅರ್ಥಮಾಡಬಹುದು : 'ನೀನು ಹಿಂದಿರುಗಬೇಕೆಂಬುದೇ ನಮ್ಮ ನಿಶ್ಚಿತವಾದ ಬುದ್ಧಿಯಾಗಿದೆ. ನೀನು ಕಾಡಿಗೆ ಹೋಗಬೇಕೆಂದು ನಿಶ್ಚಯಿಸಬೇಡ. ಬ್ರಾಹ್ಮಣರ ಮಾತನ್ನು ಗೌರವಿಸಬೇಕೆಂಬ ಧರ್ಮವನ್ನು ನೀನು ಗಮನಿಸದಿದ್ದರೆ ನಮ್ಮ ಧರ್ಮವನ್ನು ರಕ್ಷಿಸುವವರು ಯಾರಿದ್ದಾರೆ?'

[2] ವಾಜಪೇಯಯಾಗವನ್ನು ಮಾಡಿದ ವೃದ್ಧಬ್ರಾಹ್ಮಣರು ರಾಜಕುಮಾರನಾದ ಶ್ರೀರಾಮನಿಗೆ ನಮಸ್ಕಾರಮಾಡಬಹುದೇ? ಅಥವಾ ಮಾಡಿದರೇ?–ಎಂಬುದಕ್ಕೆ ಉತ್ತರವಾಗಿ ಒಬ್ಬ ವ್ಯಾಖ್ಯಾನಕಾರರು ಭಗವದವತಾರದೃಷ್ಟಿಯಿಂದಲೂ ಮತ್ತು ರಾಜನು ವಿಷ್ಣುವಿನ ಅಂಶಸಂಭೂತನಾಗಿರುವುದರಿಂದಲೂ ದೋಷವಿಲ್ಲವೆಂದೂ, ಮತ್ತೊಬ್ಬ ವ್ಯಾಖ್ಯಾನಕಾರರು ರಾಮನ ವಿರಹವೇದನೆಯನ್ನು ತಾಳಲಾರದೇ ಬಹಳ

ಯಾಚಿಸುತ್ತಿರುವಾಗ–ಆ ನಿನ್ನ ಭಕ್ತರಲ್ಲಿ ಪ್ರೀತಿಯನ್ನೂ ಅಗಾಧಸ್ನೇಹವನ್ನೂ ತೋರುವುದೂ ಮತ್ತು ಅವರ ಪ್ರಾರ್ಥನೆಯನ್ನು ನಡೆಸಿಕೊಡುವುದೂ ನಿನಗೆ ಉಚಿತವಾಗಿದೆ. ಇಲ್ಲಿರುವ ವೃಕ್ಷಗಳೂ ನಿನ್ನೊಡನೆ ಬಂದುಬಿಡುತ್ತಿದ್ದುವು. ಬೇರುಗಳಿರುವುದರಿಂದ ಅವುಗಳ ವೇಗವು ಕುಂಠಿತವಾಗಿ ನಿನ್ನೊಡನೆ ಬರಲು ಅಸಮರ್ಥಗಳಾಗಿವೆ. ವಾಯುವೇಗದ ನೆಪದಿಂದ ರೆಂಬೆಗಳನ್ನು ಮೇಲಕ್ಕೆ ಹಾರಿಸುತ್ತಾ–'ರಾಮ! ರಾಮ!' ಎಂದು ಕೂಗಿ ಕೊಳ್ಳುತ್ತಿವೆಯೋ ಎಂಬಂತೆ ಕಾಣುತ್ತಿದೆ. ಇತ್ತ ನೋಡು, ರಾಮಭದ್ರ! ಈ ಪಕ್ಷಿಗಳು ಆಹಾರಕ್ಕಾಗಿ ಸಂಚಾರವನ್ನೂ ಮಾಡದೇ, ಅತ್ತಲಿತ್ತ ಚಲಿಸದೇ ಮರದ ಒಂದು ಮೂಲೆಯಲ್ಲಿ ಕುಳಿತು ಸರ್ವಪ್ರಾಣಿಗಳ ವಿಷಯದಲ್ಲಿಯೂ ಅತ್ಯಂತ ದಯಾಪರನಾಗಿರುವ ನಿನ್ನ ಹಿಂದಿರುಗುವಿಕೆಯನ್ನೇ ದೈನ್ಯದಿಂದ ಪ್ರಾರ್ಥಿಸುತ್ತಿವೆ."

ಹೀಗೆ ಶ್ರೀರಾಮನ ಹಿಂದಿರುಗುವಿಕೆಯಲ್ಲಿ ಆಸಕ್ತರಾಗಿ ಗೋಳಾಡುತ್ತಿದ್ದ ಆ ಬ್ರಾಹ್ಮಣರ ಪ್ರಾರ್ಥಾನಾನುಸಾರವಾಗಿ ಶ್ರೀರಾಮನನ್ನು ತಡೆ ಯಲೋ ಎಂಬಂತೇ ರಥಕ್ಕೆ ಅಡ್ಡಲಾಗಿ ತಮಸಾನದಿಯು ಕಂಡಿತು. ಬಳಿಕ ಸುಮಂತ್ರನು ರಥವನ್ನು ನಿಲ್ಲಿಸಿ, ಬಳಲಿದ್ದ ಕುದುರೆಗಳನ್ನು ರಥದಿಂದ ಬಿಚ್ಚಿ ಅಡ್ಡಾಡಿಸಿ, ನದಿಯ ಕಡೆಗೆ ಕರೆದುಕೊಂಡು ಹೋಗಿ ನೀರುಕುಡಿಸಿ, ಸ್ನಾನ ಮಾಡಿಸಿ, ಅನಂತರ ನದಿಯ ತೀರದಲ್ಲಿಯೇ ಅವುಗಳನ್ನು ಹುಲ್ಲು ಮೇಯಲು ಬಿಟ್ಟನು.

ಳಜನೆಯ ಸರ್ಗವು ಮುಗಿಯಿತು.

ಸಂಕಟಪಡುತ್ತಾ ಹೀಗೆ ಹೇಳಿದರೆಂದೂ ಅರ್ಥಮಾಡುತ್ತಾರೆ. ಮತ್ತೊಬ್ಬ ವ್ಯಾಖ್ಯಾನ ಕಾರರು ಹೀಗೂ ಅರ್ಥಮಾಡಿದ್ದಾರೆ : ಹಂಸಶುಕ್ಲಶಿರೋರುಹೈಃ ಶಿರೋಭಿಃ ಮಹೀ ಪತನಪಾಂಸುಲೈಃ ಯಾಚಿತೋಽಪಿ ನೋ ನಿವರ್ತಸ್ವ = ವಯೋವೃದ್ಧರಾದ ಅಮಾತ್ಯ ರಿಂದ ನಮ್ಮನ್ನು ಅಯೋಧ್ಯೆಗೆ ಹಿಂದಿರುಗಿಸುವಂತೆ ಪ್ರಾರ್ಥಿತನಾದರೂ ನೀನು ನಮ್ಮನ್ನು ಹಿಂದಕ್ಕೆ ಕಳುಹಿಸಬೇಡ. 'ನೋ'–ಎಂಬ ಪದಕ್ಕೆ ನಿಷೇಧಾರ್ಥಮಾಡಿದ್ದಾರೆ.

ಸೀತಾ-ಲಕ್ಷ್ಮಣರೊಡನೆ ಶ್ರೀರಾಮನು ತಮಸಾನದಿಯ ತೀರದಲ್ಲಿ ಬಿಡಾರಮಾಡಿದುದು : ತಂದೆ-ತಾಯಿಗಳ ಮತ್ತು ಅಯೋಧ್ಯೆಯ ವಿಷಯವಾಗಿ ಚಿಂತಿಸಿದುದು : ಅಯೋಧ್ಯಾವಾಸಿಗಳು ಮಲಗಿರುವಾಗ ಅವರನ್ನು ಬಿಟ್ಟು ಕಾಡಿಗೆ ಪ್ರಯಾಣಮಾಡಿದುದು

ತತಸ್ತು ತಮಸಾತೀರಂ ರಮ್ಯಮಾಶ್ರಿತ್ಯ ರಾಘವಃ ।
ಸೀತಾಮುದ್ವೀಕ್ಷ್ಯ ಸೌಮಿತ್ರಿಮಿದಂ ವಚನಮಬ್ರವೀತ್ ॥೧॥

ರಾಘವನು ರಮ್ಯವಾಗಿದ್ದ ತಮಸಾನದಿಯ ತೀರವನ್ನು ಸೇರಿದನಂತರ ಸೀತೆಯನ್ನೊಮ್ಮೆ ನೋಡಿ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ಅರಣ್ಯಕ್ಕೆ ಹೊರಟಿರುವ ನಮಗೆ ಇದು ಮೊದಲನೆಯ ರಾತ್ರಿಯಾಗಿದೆ. ನಿನಗೆ ಮಂಗಳವಾಗಲಿ. ನಿರ್ಜನವಾದ ಈ ಅರಣ್ಯವನ್ನು ನೋಡಿ ನೀನು ತವಕಪಡುವ ಕಾರಣವಿಲ್ಲ. ಗೂಡುಗಳನ್ನು ಸೇರಿಕೊಳ್ಳುತ್ತಿರುವ ಮೃಗ-ಪಕ್ಷಿಗಳಿಂದ ತುಂಬಿಹೋಗಿರುವ ಅರಣ್ಯಗಳು ನಮ್ಮ ಸುತ್ತಲೂ ರೋದನಮಾಡುತ್ತಿವೆಯೋ ಎಂಬಂತೆ ಕಾಣುತ್ತಿವೆ. ಲಕ್ಷ್ಮಣ! ಪುರುಷರಿಂದಲೂ ಸ್ತ್ರೀಯರಿಂದಲೂ ಕೂಡಿರುವ ನಮ್ಮ ತಂದೆಯ ರಾಜಧಾನಿಯಾದ ಅಯೋಧ್ಯಾಪಟ್ಟಣವು ಅರಣ್ಯಕ್ಕೆ ಹೊರಟಿರುವ ನಮ್ಮ ಸಲುವಾಗಿ ದುಃಖಿಸುತ್ತಿದೆ. ಇದರಲ್ಲಿ ಸಂಶಯವೇ ಇಲ್ಲ. ಅಯೋಧ್ಯೆಯ ಪ್ರಜೆಗಳು ಅನೇಕ ಸದ್ಗುಣಗಳಿಂದ ಸಂಪನ್ನನಾಗಿರುವ ನಮ್ಮ ರಾಜನನ್ನು ಬಹಳವಾಗಿ ಪ್ರೀತಿಸುತ್ತಾರೆ. ಹಾಗೆಯೇ ನನ್ನನ್ನೂ, ನಿನ್ನನ್ನೂ ಮತ್ತು ಭರತ-ಶತ್ರುಘ್ನರನ್ನೂ ನಮ್ಮ ಪ್ರಜೆಗಳು ಬಹಳ ಅಕ್ಕರೆಯಿಂದ ಕಾಣುತ್ತಾರೆ. ನಮ್ಮ ತಂದೆಯನ್ನೂ ಮತ್ತು ಯಶಸ್ವಿನಿಯಾದ ತಾಯಿಯನ್ನೂ ನೆನೆದು ನಾನು ಬಹಳ ದುಃಖಿಸುತ್ತೇನೆ. ಅವರು ನಮ್ಮನ್ನು ಬಾರಿ-ಬಾರಿಗೂ ನೆನೆಯುತ್ತಾ ಅತ್ತು-ಅತ್ತು ಕಣ್ಣುಗಳನ್ನೆಲ್ಲಿ ಕಳೆದುಕೊಂಡುಬಿಡುವರೋ ಎಂದು ನಾನು ದುಃಖಿಸುತ್ತಿದ್ದೇನೆ.* ಆದರೆ ಅಷ್ಟಕ್ಕೆ ಅವಕಾಶವಿರಲಾರದು. ನಮ್ಮ ತಮ್ಮನಾದ

---

* ತನಗಾಗಿ ತಂದೆ-ತಾಯಿಗಳು (ದಶರಥ-ಕೌಸಲ್ಯೆಯರು) ಎಷ್ಟು ದುಃಖಿಸುವರೆಂಬುದನ್ನು ಅರಿಯದ ಹಸುಳೆಗೂ ಅರ್ಥವಾಗುವ ರೀತಿಯಲ್ಲಿ ರಾಮನಲ್ಲಿ ಹೇಳಿದ್ದಾನೆ.

ಭರತನು ಧರ್ಮಾತ್ಮನಲ್ಲವೇ! ತಂದೆಯನ್ನೂ ತಾಯಿಯನ್ನೂ ಅವನು ಧರ್ಮಾರ್ಥ-ಕಾಮಸಹಿತವಾದ ಮಾತುಗಳಿಂದ ಸಂತೈಸುತ್ತಾನೆ.

ಭರತಸ್ಯಾನೃಶಂಸತ್ವಂ ವಿಚಿನ್ತ್ಯಾಹಂ ಪುನಃ ಪುನಃ ।
ನಾನುಶೋಚಾಮಿ ಪಿತರಂ ಮಾತರಂ ಚಾಪಿ ಲಕ್ಷ್ಮಣ ॥೮॥

ಭರತನಲ್ಲಿರುವ ದಯಾಪರತೆಯನ್ನು ಪುನಃ ಪುನಃ ಸ್ಮರಿಸಿಕೊಳ್ಳುತ್ತಿರುವ ನಾನು ತಂದೆಯನ್ನು ಕುರಿತಾಗಲೀ ತಾಯಿಯನ್ನು ಕುರಿತಾಗಲೀ ಹೆಚ್ಚು ದುಃಖಿಸುವುದಿಲ್ಲ.

ಲಕ್ಷ್ಮಣ! ನೀನು ನನ್ನೊಡನೆ ಬಂದು ಒಂದು ಮುಖ್ಯವಾದ ಕಾರ್ಯವನ್ನು ಆಗಮಾಡಿಕೊಟ್ಟಿರುವೆ. ನೀನು ಬರದಿದ್ದರೆ ವೈದೇಹಿಯ ರಕ್ಷಣೆಗಾಗಿ ಸಹಾಯವನ್ನು ಪಡೆಯಲು ಯಾರನ್ನಾದರೂ ಹುಡುಕಬೇಕಾಗಿದ್ದಿತು. ಸೌಮಿತ್ರೇ! ನಾನು ನೀರನ್ನು ಮಾತ್ರ ಕುಡಿದು ಈ ರಾತ್ರಿಯನ್ನು ಕಳೆಯಬೇಕೆಂದಿರುತ್ತೇನೆ. ಕಾಡಿನ ಹಲವು ಬಗೆಯ ಗೆಡ್ಡೆ-ಗೆಣಸುಗಳು ಸಿಕ್ಕುವುದಾಗಿದ್ದರೂ ನನಗೆ ಉಪವಾಸದಿಂದಲೇ ಈ ರಾತ್ರಿಯನ್ನು ಕಳೆಯುವುದು ಉಚಿತವಾಗಿ ತೋರುತ್ತದೆ."

ಶ್ರೀರಾಮನು ಲಕ್ಷ್ಮಣನಿಗೆ ಹೀಗೆ ಹೇಳಿ ಕುದುರೆಗಳ ವಿಷಯದಲ್ಲಿ ಜಾಗರೂಕನಾಗಿರುವಂತೆ ಸುಮಂತ್ರನಿಗೆ ಹೇಳಿದನು.

ಸೂರ್ಯನು ಅಸ್ತಂಗತನಾಗಲಾಗಿ ಸುಮಂತ್ರನು ಶ್ರೀರಾಮನ ಮಾತಿನಂತೆಯೇ ಕುದುರೆಗಳನ್ನು ಕಟ್ಟಿ, ಅವುಗಳ ಮುಂದೆ ಯಥೇಚ್ಛವಾಗಿ ಹುಲ್ಲುಹಾಕಿ, ತನ್ನ ಮುಂದಿನ ಕಾರ್ಯದಲ್ಲಿ ತೊಡಗಿದನು. ಸುಮಂತ್ರನು

ಮಗುವು ಅಳುತ್ತಿದ್ದರೆ ತಾಯಿಯಾದವಳು–ಅತ್ತು ಅತ್ತು ಕಣ್ಣುಗಳನ್ನು ನೀಗಿಕೊಳ್ಳಬೇಡ–ಎಂದು ಹೇಳುವ ನಾಣ್ಣುಡಿಯು ಇಂದೂ ಬಳಕೆಯಲ್ಲಿದೆ. ಮೇಲಾಗಿ ಬಹಳ ಅತ್ತವರ ಕಣ್ಣುಗಳು ಊದಿಕೊಂಡು ಯಾತನೆಕೊಡುವುದನ್ನೂ ನಾವು ಕೇಳಿದ್ದೇವೆ, ಕಂಡಿದ್ದೇವೆ. ಹೀಗಿರುವುದರಿಂದ ತಂದೆ-ತಾಯಿಗಳು ತನ್ನನ್ನು ಬಾರಿ-ಬಾರಿಗೂ ನೆನೆದು ಗೋಳಿಡುತ್ತಾ ತಮ್ಮ ಕಣ್ಣುಗಳನ್ನು ಕಳೆದುಕೊಂಡು ಅಂಧರಾಗಿಬಿಡುವರೆಂದು ರಾಮನು ಸಂಕಟಪಟ್ಟುದು ಸಹಜವಾಗಿಯೇ ಇದೆ.

ಮಂಗಳಕರಳಾದ ಸಂಧ್ಯಾದೇವಿಯನ್ನು ಉಪಾಸನೆಮಾಡಿ ರಾತ್ರಿಯಾದು ದನ್ನು ಮನಗಂಡು ಲಕ್ಷ್ಮಣನೊಡನೆ ಶ್ರೀರಾಮನಿಗೆ ಮಲಗಲು ಹಾಸಿಗೆ ಯನ್ನು ಸಿದ್ಧಮಾಡಿಕೊಟ್ಟನು. ತಮಸಾನದಿಯ ತೀರದಲ್ಲಿ ಸುಮಂತ್ರನು ಲಕ್ಷ್ಮಣನೊಡಗೂಡಿ ಮರದ ಚಿಗುರೆಲೆಗಳಿಂದ ನಿರ್ಮಿಸಿದ್ದ ಆ ಹಾಸಿಗೆಯಲ್ಲಿ ಶ್ರೀರಾಮನು ಸೀತಾದೇವಿಯೊಡನೆ ಪವಡಿಸಿದನು.

ಬಹಳವಾಗಿ ಬಳಲಿದ್ದ ಶ್ರೀರಾಮನು ಭಾರ್ಯೆಯೊಡನೆ ಸುಖವಾಗಿ ನಿದ್ರಿಸುತ್ತಿರುವುದನ್ನು ನೋಡಿ ಲಕ್ಷ್ಮಣನು ಸಮೀಪದಲ್ಲಿದ್ದ ಸುಮಂತ್ರನಿಗೆ ರಾಮನ ನಾನಾವಿಧವಾದ ಸದ್ಗುಣಗಳನ್ನು ಹೇಳಲು ಉಪಕ್ರಮಿಸಿದನು. ತಮಸಾನದಿಯ ತೀರದಲ್ಲಿ ಸೂತನಿಗೆ ಲಕ್ಷ್ಮಣನು ಶ್ರೀರಾಮನ ಗುಣಗಳನ್ನು ವರ್ಣಿಸಿ ಹೇಳುತ್ತಿದ್ದಂತೆಯೇ ಸೂರ್ಯನು ಉದಯಿಸುವ ಸೂಚನೆಗಳು ಕಂಡುಬಂದುವು.* ಹೀಗೆ ಆ ರಾತ್ರಿಯನ್ನು ಲಕ್ಷ್ಮಣನು ಜಾಗರಣೆಯಿಂದಲೇ ಕಳೆದನು. ಗೋಕುಲದಿಂದ ಆವೃತವಾಗಿದ್ದ ತಮಸಾನದಿಯ ತೀರಕ್ಕೆ ಸ್ವಲ್ಪದೂರದಲ್ಲಿ ಶ್ರೀರಾಮನು ತನ್ನನ್ನು ಅನುಸರಿಸಿ ಬಂದಿದ್ದ ಪ್ರಜೆಗಳೊಡನೆ ಆ ರಾತ್ರಿಯಲ್ಲಿ ವಾಸವಾಗಿದ್ದನು. ಮಹಾತೇಜಸ್ವಿಯಾದ ಶ್ರೀರಾಮನು ಬ್ರಾಹ್ಮೀಮುಹೂರ್ತದಲ್ಲೆದ್ದು ಸುತ್ತಲೂ ಮಲಗಿದ್ದ ಪ್ರಜೆಗಳನ್ನು ನೋಡಿ ಪುಣ್ಯಲಕ್ಷಣಯುಕ್ತನಾದ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ತಮ್ಮ ಮನೆಗಳ ವಿಷಯದಲ್ಲಿಯೂ ನಿರಾಸಕ್ತರಾಗಿ ನಮ್ಮಲ್ಲಿಯೇ ಹೆಚ್ಚಿನ ಪ್ರೀತಿಯಿಂದ ನಮ್ಮನ್ನನುಸರಿಸಿ ಬಂದು ಮರಗಳ ಬುಡದಲ್ಲಿ ಮಲಗಿ ನಿದ್ರಿಸುತ್ತಿರುವ ಈ ನಮ್ಮ ಪ್ರಜೆಗಳನ್ನು ನೋಡು. ನಮ್ಮನ್ನು ಹಿಂದಕ್ಕೆ ಕರೆದುಕೊಂಡು ಹೋಗುವುದರಲ್ಲಿ ಇವರು ಸ್ಥಿರಪ್ರತಿಜ್ಞರಾಗಿರುತ್ತಾರೆ. ಈ ನಮ್ಮ ಪ್ರಜೆಗಳು ಪ್ರಾಣಗಳನ್ನಾದರೂ ಬಿಟ್ಟಾರು. ಆದರೆ ತಮ್ಮ ದೃಢನಿಶ್ಚಯವನ್ನು ಮಾತ್ರ ಕೈಬಿಡರು. ಆದುದರಿಂದ ಇವರು ಮಲಗಿರುವಾಗಲೇ ನಾವು ರಥವನ್ನೇರಿ ಭಯರಹಿತ

* ಪ್ರಜೆಗಳು ಇನ್ನೂ ಮಲಗಿರುವುದರಿಂದಲೂ, ಮುಂದೆ ಶ್ರೀರಾಮನು ಬೆಳಗಾಗುವುದರೊಳಗಾಗಿಯೇ ಬಹುದೂರ ಪ್ರಯಾಣಮಾಡಿದನೆಂದು ಹೇಳಿರುವುದ ರಿಂದಲೂ ಇಲ್ಲಿರುವ ಉದಿತಃ–ಎಂಬ ಪದಕ್ಕೆ ಸೂರ್ಯನು ಉದಯಿಸುವ ಸೂಚನೆಗಳು ತೋರಿದುವು–ಎಂದು ಅರ್ಥಮಾಡುವುದು ಸಾಧು.

ವಾದ ಈ ಮಾರ್ಗದಲ್ಲಿ ಶೀಘ್ರವಾಗಿ ಪ್ರಯಾಣಮಾಡೋಣ. ನನ್ನಲ್ಲಿಯೇ ಅನುರಕ್ತರಾಗಿರುವ ಅಯೋಧ್ಯಾಪುರವಾಸಿಗಳಾದ ಇವರು ಮರಗಳ ಅಡಿಯಲ್ಲಿ ಪುನಃ ಮಲಗುವಂತಾಗಬಾರದು.

ಪೌರಾ ಹ್ಯಾತ್ಮಕೃತಾದ್ದುಃಖಾದ್ವಿಪ್ರಮೋಕ್ಷ್ಯಾ ನೃಪಾತ್ಮಜೈಃ ।
ನ ತು ಖಲ್ವಾತ್ಮನಾ ಯೋಜ್ಯಾ ದುಃಖೇನ ಪುರವಾಸಿನಃ ॥೨೩॥

ರಾಜಕುಮಾರರು ಪಟ್ಟಣಿಗರನ್ನು ದೈವಿಕವಾದ (ಕ್ಷಾಮ-ಡಾಮರಾದಿಗಳ) ಅಥವಾ ತಾವಾಗಿಯೇ ಉಂಟುಮಾಡಿಕೊಂಡ (ರೋಗ-ರುಜಿನಾದಿಗಳ) ದುಃಖಗಳಿಂದ ಪಾರುಮಾಡಬೇಕು. ಆದರೆ ದೈವಯೋಗದಿಂದ ರಾಜನಿಗೇ ದುಃಖವುಂಟಾದಲ್ಲಿ ಆ ದುಃಖವನ್ನು ಪ್ರಜೆಗಳಿಗೆ ಹಂಚಬಾರದು. ತಾನೊಬ್ಬನೇ ಅನುಭವಿಸಬೇಕು."*

ಶ್ರೀರಾಮನ ಈ ಮಾತನ್ನು ಕೇಳಿ ಲಕ್ಷ್ಮಣನು ಸಾಕ್ಷಾತ್ ಧರ್ಮಮೂರ್ತಿಯಂತೆಯೇ ಇದ್ದ ರಾಮನಿಗೆ ಹೇಳಿದನು :

ರೋಚತೇ ಮೇ ತಥಾ ಪ್ರಾಜ್ಞ ಕ್ಷಿಪ್ರಮಾರುಹ್ಯತಾಮಿತಿ ॥೨೪॥

"ಪ್ರಾಜ್ಞನೇ! ನನಗೂ ಅದೇ ಉಚಿತವಾಗಿ ಕಾಣುತ್ತದೆ. ಕೂಡಲೇ ರಥವನ್ನು ಹತ್ತು."

ಬಳಿಕ ಶ್ರೀರಾಮನು ಸುಮಂತ್ರನಿಗೆ–"ಸುಮಂತ್ರ! ಕುದುರೆಗಳನ್ನು

---

* ದೇಶದಲ್ಲಿ ಯಾವ ವಿಧವಾದ ಕಷ್ಟಗಳು ಪ್ರಜೆಗಳಿಗೊದಗಿದರೂ ಅದರ ನಿವಾರಣೆಗೆ ರಾಜನು ಬಾಧ್ಯನಾಗುತ್ತಾನೆ. ಕಷ್ಟಗಳು ದೈವಿಕವಾಗಿದ್ದಾಗ್ಯೂ (ಮಳೆಯಿಲ್ಲದೆ ಕ್ಷಾಮ-ಡಾಮರಾದಿಗಳು ತಲೆದೋರಿದ ಕಾಲದಲ್ಲಿಯೂ ಸಹ) ದೈವವನ್ನು ನಾನಾವಿಧವಾದ ಪ್ರಕ್ರಿಯೆಗಳಿಂದ ಸಂತೃಪ್ತಿಗೊಳಿಸಿ ಕ್ಷಾಮವನ್ನು ಹೋಗಲಾಡಿಸಿ ಪ್ರಜೆಗಳ ಕಷ್ಟನಿವಾರಣೆ ಮಾಡುವುದು ರಾಜನ ಮುಖ್ಯಕರ್ತವ್ಯವಾಗಿರುತ್ತದೆ. ಆದರೆ ತನಗೇನಾದರೂ ಕಷ್ಟವು ಒದಗಿದ್ದಲ್ಲಿ ರಾಜನಾದವನು ಪ್ರೆಜೆಗಳಿಗೆ ತನ್ನ ಕಷ್ಟವನ್ನು ಹಂಚಬಾರದು. ಪ್ರಜೆಗಳೂ ತನ್ನೊಡನೆ ಕಷ್ಟಪಡುವಂತೆ ಮಾಡಬಾರದು. ಈ ಉದಾತ್ತವಾದ ರಾಜನೀತಿಯು ಭಾರತದ ಅನೇಕ ಪ್ರಾಚೀನರಾಜರಿಂದ ಅನುಸರಿಸಲ್ಪಡುತ್ತಿದ್ದಿತು. ಆತ್ಮ ಎಂಬುದಕ್ಕೆ ದೈವವೆಂದು ಅರ್ಥಮಾಡಿದರೆ ಈ ಶ್ಲೋಕಕ್ಕೆ ಇಷ್ಟು ವಿವರವಾದ ಅರ್ಥವನ್ನು ಹೇಳಬಹುದಾಗಿದೆ.

ಶೀಘ್ರವಾಗಿ ರಥಕ್ಕೆ ಹೂಡು. ಇಲ್ಲಿಂದ ಮುಂದೆ ಶೀಘ್ರವಾಗಿ ಹೋಗು. ಯಾವ ಆತಂಕವೂ ಇಲ್ಲದೇ ಕಾಡಿಗೆ ಹೋಗುತ್ತೇನೆ"–ಎಂದು ತಿಳಿಸಿದನು.

ಒಡನೆಯೇ ಸೂತನು ತ್ವರೆಯಿಂದ ರಥಕ್ಕೆ ಕುದುರೆಗಳನ್ನು ಕಟ್ಟಿ ಪ್ರಯಾಣಕ್ಕೆ ಸಜ್ಜುಗೊಳಿಸಿ ಕೈಮುಗಿದುಕೊಂಡು ರಾಘವನಿಗೆ ಹೇಳಿದನು :

"ಮಹಾಬಾಹುವೇ! ರಥಿಗಳಲ್ಲಿ ಶ್ರೇಷ್ಠನಾದವನೇ! ರಥಕ್ಕೆ ಕುದುರೆಗಳನ್ನು ಕಟ್ಟಿ ರಥವನ್ನು ಪ್ರಯಾಣಕ್ಕೆ ಸಜ್ಜುಗೊಳಿಸಲಾಗಿದೆ. ಸೀತಾ-ಲಕ್ಷ್ಮಣರೊಡನೆ ಶೀಘ್ರವಾಗಿ ರಥದಲ್ಲಿ ಕುಳಿತುಕೊ."

ಶ್ರೀರಾಮನು ಸುಮಂತ್ರನ ಮಾತಿನಂತೆ ಸೀತಾ-ಲಕ್ಷ್ಮಣರೊಡನೆ ರಥದಲ್ಲಿ ಕುಳಿತು ರಭಸದಿಂದ ಪ್ರವಹಿಸುತ್ತಿದ್ದ, ಸುಳಿಗಳಿಂದ ಯುಕ್ತವಾಗಿದ್ದ ತಮಸಾನದಿಯನ್ನು ದಾಟಿದನು.

ಹೀಗೆ ತಮಸಾನದಿಯನ್ನು ದಾಟಿದನಂತರ ಶ್ರೀಮಂತನಾದ, ಮಹಾಬಾಹುವಾದ ಶ್ರೀರಾಮನು ರಥದಿಂದಿಳಿದು ಮಂಗಳಕರವಾಗಿಯೂ, ಮುಳ್ಳುಗಳಿಲ್ಲದೆಯೂ, ಪೀಡಾರಹಿತವಾಗಿಯೂ, ದುಷ್ಟಪ್ರಾಣಿಗಳ ಭಯದಿಂದ ಭಯಪಡುವವರಿಗೆ ಅಭಯಪ್ರದವಾಗಿಯೂ ಇದ್ದ ಹೆದ್ದಾರಿಯನ್ನು ಸೇರಿದನು.

ತನ್ನನ್ನು ಅನುಸರಿಸಿ ಬಂದಿರುವ ಪಟ್ಟಣಿಗರಿಗೆ ಭ್ರಾಂತಿಯನ್ನುಂಟುಮಾಡುವ ಸಲುವಾಗಿ ಶ್ರೀರಾಮನು ಸುಮಂತ್ರನಿಗೆ ಹೇಳಿದನು :

"ಸಾರಥಿಯೇ! ನೀನು ರಥದಲ್ಲಿ ಕುಳಿತು ಉತ್ತರಾಭಿಮುಖವಾಗಿ ಪ್ರಯಾಣಮಾಡು. ಮುಹೂರ್ತಕಾಲ ಉತ್ತರದಿಕ್ಕಿನೆಡೆಗೆ ಶೀಘ್ರವಾಗಿ ಪ್ರಯಾಣಮಾಡಿ ಅನಂತರ ರಥವನ್ನು ಹಿಂದಕ್ಕೆ ತಿರುಗಿಸಿಕೊಂಡು ಬಾ. ಪಟ್ಟಣಿಗರು ನಾನು ಯಾವ ಕಡೆಗೆ ಹೋಗಿರುವೆನೆಂಬುದನ್ನು ತಿಳಿಯಲು ಸಾಧ್ಯವಾಗದಂತೆ ಅವರಿಗೆ ಭ್ರಾಂತಿಯುಂಟಾಗುವ ರೀತಿಯಲ್ಲಿ ರಥವನ್ನು ಜಾಗರೂಕನಾಗಿ ನಡೆಸಿಕೊಂಡು ಬಾ."

ಶ್ರೀರಾಮನ ಮಾತನ್ನು ಕೇಳಿ ಸೂತನು ಹಾಗೆಯೇ ಮಾಡಿದನು. ನಾನಾದಿಕ್ಕುಗಳಲ್ಲಿ ಅಸ್ತವ್ಯಸ್ತವಾಗಿ ರಥವನ್ನು ತಿರುಗಾಡಿಸಿ ಶ್ರೀರಾಮನಿದ್ದಲ್ಲಿಗೆ ಹಿಂದಿರುಗಿ ಬಂದು ಬಿನ್ನವಿಸಿದನು.

ಸೀತಾಸಮೇತರಾದ, ರಘುವಂಶವರ್ಧನರಾದ ರಾಮ-ಲಕ್ಷ್ಮಣರು ಸುಮಂತ್ರನು ತಂದ ರಥದಲ್ಲಿ ಸೀತೆಯೊಡನೆ ಉಪಸ್ಥಿತರಾದರು. ಬಳಿಕ ಸುಮಂತ್ರನು ತಪೋವನದ ಮಾರ್ಗದಲ್ಲಿ ಹೋಗಲು ಕುದುರೆಗಳನ್ನು ಪ್ರಚೋದಿಸಿದನು. ಶಕುನಶಾಸ್ತ್ರದಲ್ಲಿ ಪರಿಣತನಾಗಿದ್ದ ಸುಮಂತ್ರನು ಪ್ರಯಾಣಕಾಲದಲ್ಲಿ ಮಂಗಳದ ನಿಮಿತ್ತವಾಗಿ ರಥವನ್ನು ಉತ್ತರದಿಕ್ಕಿಗೆ ಅಭಿಮುಖವಾಗಿ ನಿಲ್ಲಿಸಿದನು. ಮಹಾರಥನಾದ ಶ್ರೀರಾಮನು ಸುಮಂತ್ರ ನೊಡನೆಯೂ ಸೀತಾ-ಲಕ್ಷ್ಮಣರೊಡನೆಯೂ ರಥದಲ್ಲಿ ಕುಳಿತು ಅರಣ್ಯಕ್ಕೆ ಪ್ರಯಾಣಮಾಡಿದನು.

ಳ೬ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೪೭ನೆಯ ಸರ್ಗ

ಬೆಳಗಾದೊಡನೆಯೇ ಪಟ್ಟಣಿಗರು ಎಚ್ಚರಗೊಂಡು ಶ್ರೀರಾಮನಿಲ್ಲದುದಕ್ಕಾಗಿ ವಿಲಪಿಸಿದುದು : ಎಲ್ಲೂ ಶ್ರೀರಾಮನನ್ನು ಕಾಣದೇ ನಿರಾಶರಾಗಿ ಪಟ್ಟಣಕ್ಕೆ ಹಿಂದಿರುಗಿದುದು

ಪ್ರಭಾತಾಯಾಂ ತು ಶರ್ವರ್ಯಾಂ ಪೌರಾಸ್ತೇ ರಾಘವಂ ವಿನಾ ।
ಶೋಕೋಪಹತನಿಶ್ಚೇಷ್ಟಾ ಬಭೂವುರ್ಹತಚೇತಸಃ ॥೧॥

ರಾತ್ರಿಯು ಕಳೆದು ಬೆಳಗಾಗಲಾಗಿ ನಿದ್ರೆಯಿಂದ ಎಚ್ಚೆತ್ತ ಅಯೋಧ್ಯಾ ಪುರವಾಸಿಗಳು, ಪ್ರಿಯನಾದ ಶ್ರೀರಾಮನನ್ನು ಕಾಣದೇ ಶೋಕಪೀಡಿತರಾಗಿ ಮುಂದೇನು ಮಾಡಬೇಕೆಂದು ತೋರದೇ ನಿಶ್ಚೇಷ್ಟರೂ ಬುದ್ಧಿಗೆಟ್ಟವರೂ ಆದರು.

ಶೋಕದಿಂದ ಹುಟ್ಟಿದ ಕಣ್ಣೀರಿನಿಂದ ವ್ಯಾಪ್ತರಾಗಿದ್ದ ಪೌರರು ಎಲ್ಲ ಕಡೆಗಳಲ್ಲೂ ನೋಡಿದರು. ಶ್ರೀರಾಮನಿಗೆ ಸಂಬಂಧಿಸಿದಂತೆ ಯಾವ ಕುರುಹನ್ನೂ ಅವರು ಕಾಣಲಿಲ್ಲ. ಅದರಿಂದಾಗಿ ಅವರು ಬಹಳ ದುಃಖಿತರಾದರು. ಶ್ರೀಮಂತನಾದ ಶ್ರೀರಾಮನಿಂದ ರಹಿತರಾಗಿದ್ದ, ಒಳ್ಳೆಯ ಮನಸ್ಸಿನ ಆ ಪಟ್ಟಣಿಗರು ವಿಷಾದದಿಂದ ಪೀಡಿತವಾದ ಮುಖವುಳ್ಳವರಾಗಿ, ಅತ್ಯಂತದೀನರಾಗಿ ಕರುಣಾಜನಕವಾದ ಮಾತುಗಳನ್ನು ತಮ್ಮ-ತಮ್ಮಲ್ಲಿಯೇ ಆಡಿಕೊಳ್ಳುತ್ತಿದ್ದರು :

"ಯಾವ ನಿದ್ರೆಯಿಂದ ನಾವು ಅಪಹೃತವಾದ ಬುದ್ಧಿಯುಳ್ಳವರಾಗಿ ವಿಶಾಲಾಕ್ಷನಾದ, ಮಹಾಭುಜನಾದ ಶ್ರೀರಾಮನನ್ನು ಈಗ ಕಾಣುತ್ತಿಲ್ಲವೋ–ಅಂತಹ ನಿದ್ರೆಗೆ ಧಿಕ್ಕಾರವಿರಲಿ. ಸತ್ಯಪ್ರಿಯನಾದ, ಮಹಾಬಾಹುವಾದ ಶ್ರೀರಾಮನು ತನ್ನಲ್ಲಿಯೇ ಅನುರಕ್ತರಾಗಿರುವ ಭಕ್ತಜನರನ್ನು ಪರಿತ್ಯಜಿಸಿ ಹೇಗೆ ಕಾಡಿಗೆ ಹೊರಟುಹೋದನು? ತಂದೆಯು ಮಕ್ಕಳನ್ನು ಕಾಪಾಡುವಂತೆ ಯಾವನು ನಮ್ಮನ್ನು ಪರಿಪಾಲಿಸುತ್ತಿದ್ದನೋ–ಅಂತಹ ರಘು ಕುಲತಿಲಕನಾದ ಶ್ರೀರಾಮನು ನಮ್ಮನ್ನು ಬಿಟ್ಟು ಹೇಗೆ ಕಾಡಿಗೆ ಹೋದನು? ಶ್ರೀರಾಮನಿಂದ ರಹಿತರಾಗಿರುವ ನಮಗೆ ಜೀವಿತವಾದರೂ ಏಕೆ ಬೇಕು? ಇಲ್ಲಿಯೇ ಪ್ರಾಯೋಪವೇಶದಿಂದ ಪ್ರಾಣಗಳನ್ನು ತೊರೆಯೋಣ ಅಥವಾ ಮಹಾಪ್ರಸ್ಥಾನದ* ದೀಕ್ಷೆಯನ್ನು ಕೈಗೊಂಡಾದರೂ ಉತ್ತರದಿಕ್ಕಿಗೆ ಪ್ರಯಾಣಮಾಡೋಣ. ಈ ಕಾಡಿನಲ್ಲಿ ಚೆನ್ನಾಗಿ ಒಣಗಿದ ದೊಡ್ಡ-ದೊಡ್ಡ ಸೌದೆಯ ತುಂಡುಗಳು ಬೇಕಾದಷ್ಟು ಸಿಕ್ಕುತ್ತವೆ. ಅವೆಲ್ಲವನ್ನೂ ರಾಶಿಹಾಕಿ ದೊಡ್ಡದಾದೊಂದು ಚಿತೆಯನ್ನು ನಿರ್ಮಿಸಿ ಅದನ್ನು ಹೊತ್ತಿಸಿ ನಾವೆಲ್ಲರೂ ಏಕಕಾಲದಲ್ಲಿ ಬೆಂಕಿಯಲ್ಲಿ ಬಿದ್ದು ಪ್ರಾಣತ್ಯಾಗಮಾಡೋಣ.

ಒಂದು ವೇಳೆ ನಾವು ಅಯೋಧ್ಯೆಗೆ ಮರಳಿದರೆ ಶ್ರೀರಾಮನೆಲ್ಲೆಂದು ಕಾತರದಿಂದ ಕೇಳುವ ಜನರಿಗೆ–'ಮಹಾಬಾಹುವಾದ, ಅಸೂಯಾರಹಿತನಾದ, ಪ್ರಿಯಭಾಷಿಯಾದ ಶ್ರೀರಾಮನನ್ನು ನಾವೆಲ್ಲರೂ ಸೇರಿ ಅರಣ್ಯಕ್ಕೆ ಕಳುಹಿಸಿಕೊಟ್ಟೆವು'–ಎಂದು ಹೇಳಲು ಸಾಧ್ಯವಾಗುವುದೇ? ರಾಘವನಿಲ್ಲದೇ ನಾವೇನಾದರೂ ಅಯೋಧ್ಯೆಯನ್ನು ಪ್ರವೇಶಿಸಿದರೆ ನಿಶ್ಚಯವಾಗಿಯೂ ಅಯೋಧ್ಯಾನಗರವೇ ದೀನಭಾವವನ್ನು ಹೊಂದುತ್ತದೆ. ಸ್ತ್ರೀ-ಬಾಲ-ವೃದ್ಧರಾದಿಯಾಗಿ ಸಮಸ್ತಪ್ರಜಾಸ್ತೋಮವೂ ಆನಂದರಹಿತವಾಗುತ್ತದೆ. ನಿತ್ಯವೂ ಆ ಮಹಾನುಭಾವನ ಜೊತೆಯಲ್ಲಿಯೇ ಇರಬೇಕೆಂದು ದೃಢವಾಗಿ ಸಂಕಲ್ಪಿಸಿ ನಾವು ಈ ವೀರನ ಜೊತೆಯಲ್ಲಿ ಹೊರಟೆವು. ಅವನಿಂದ ವಿಹೀನರಾಗಿರುವ

---

* ಮಹಾಪ್ರಸ್ಥಾನಂ : ಪ್ರಾಣಪರಿತ್ಯಾಗಮಾಡಲು ಸಂಕಲ್ಪಿಸಿ ಉತ್ತರದಿಕ್ಕಿನಲ್ಲಿರುವ ಹಿಮಾಲಯದ ಕಡೆಗೆ ಹೊರಟುಹೋಗುವುದಕ್ಕೆ ಮಹಾಪ್ರಸ್ಥಾನವೆಂದು ಹೆಸರು.

ನಾವಿಂದು ಪುನಃ ಆ ಅಯೋಧ್ಯಾಪಟ್ಟಣವನ್ನು ನೋಡುವುದಾದರೂ ಹೇಗೆ?"

ಇವೇ ಮುಂತಾಗಿ ಹಲವಾರು ವಿಧವಾದ ಮಾತುಗಳನ್ನಾಡಿಕೊಂಡು ಕೈಗಳನ್ನೆತ್ತಿಕೊಂಡು ದುಃಖಪೀಡಿತರಾಗಿದ್ದ ಪೌರರು–ಕರುಗಳನ್ನು ಕಳೆದು ಕೊಂಡ ಹಸುಗಳಂತೆ–ಗೋಳಾಡುತ್ತಿದ್ದರು.

ಸ್ವಲ್ಪಹೊತ್ತಿನನಂತರ ಹಿರಿಯರೊಬ್ಬರ ಸಲಹೆಗೆ ಅನುಸಾರವಾಗಿ ಪುರಜನರು ಶ್ರೀರಾಮನ ರಥದ ಜಾಡನ್ನೇ ಹಿಡಿದು ಸ್ವಲ್ಪ ದೂರದವರೆಗೆ ಹೋದರು. ಹಾಗೆ ಹೋದನಂತರ ರಥಚಕ್ರಗಳ ಜಾಡು ಅಳಿಸಿಹೋಗಿ ತ್ತಾದುದರಿಂದ ಹತಾಶರಾಗಿ ಪುನಃ ದುಃಖದಲ್ಲಿ ಮುಳುಗಿದರು. ರಥಚಕ್ರಗಳ ಜಾಡು ಅಳಿಸಿಹೋಗಿದ್ದುದರಿಂದ ಒಳ್ಳೆಯ ಮನಸ್ಸಿನ ಆ ಪೌರರು ಮುಂದೆ ಪ್ರಯಾಣಮಾಡಲು ಸಾಧ್ಯವಾಗದೇ ಹೊರಟಿದ್ದ ಸ್ಥಳಕ್ಕೇ ಹಿಂದಿರುಗಿದರು.

ಕಿಮಿದಂ ಕಿಂ ಕರಿಷ್ಯಾಮೋ ದೈವೇನೋಪಹತಾ ಇತಿ ॥೧೪॥

"ಇದೇನಿದು ಹೀಗಾಯಿತು? ನಮ್ಮ ಪ್ರಯತ್ನಗಳೆಲ್ಲವೂ ವ್ಯರ್ಥ ವಾಗುತ್ತಿರುವುವಲ್ಲವೇ? ಮುಂದೆ ನಾವೇನು ಮಾಡೋಣ? ದೈವವೇ ನಮ್ಮನ್ನು ಶ್ರೀರಾಮನ ಹಿಂದೆ ಹೋಗದಿರಲು ತಡೆದು ನಿಲ್ಲಿಸಿದೆ."

ಹೀಗೆ ನಿಶ್ಚಯಿಸಿದ, ಬಹಳವಾಗಿ ಬಳಲಿದ್ದ ಪೌರರು ಬಂದ ಮಾರ್ಗ ವನ್ನೇ ಹಿಡಿದು ವ್ಯಥಿತರಾದ ಸಜ್ಜನರಿಂದ ಕೂಡಿದ್ದ ಅಯೋಧ್ಯಾ ಪಟ್ಟಣಕ್ಕೆ ಹಿಂದಿರುಗಿದರು. ಕಾಂತಿಹೀನವಾಗಿದ್ದ ಅಯೋಧ್ಯೆಯನ್ನು ಕಂಡು ಶ್ರೀರಾಮನಿಲ್ಲದ ದುಃಖದಿಂದ ಖಿನ್ನವಾದ ಮನಸ್ಸಿನಿಂದ ಕೂಡಿದ್ದ ಪಟ್ಟಣಿ ಗರು ಶೋಕಪೀಡಿತವಾಗಿದ್ದ ಕಣ್ಣುಗಳಿಂದ ಕಣ್ಣೀರನ್ನು ಧಾರಾಕಾರವಾಗಿ ಸುರಿಸಿದರು. ಗರುಡನಿಂದ ಉದ್ಧೃತವಾದ ಹಾವುಗಳುಳ್ಳ ಅಥವಾ ಮೀನುಗಳುಳ್ಳ ಮಡುವಿನಂತೆ (ಹಾವು [ಮೀನು] ಗಳಿಲ್ಲದ ಮಡುವಿನಂತೆ) ಶ್ರೀರಾಮನಿಂದ ರಹಿತವಾಗಿರುವ ಅಯೋಧ್ಯಾಪಟ್ಟಣವು ಶೋಭಿಸು ತ್ತಿರಲಿಲ್ಲ.*

---

* ಪನ್ನಗಶಬ್ದಕ್ಕೆ ಹಾವೆಂಬುದು ರೂಢಾರ್ಥವಾಗಿದ್ದರೂ ಸಹ ಪದ್ಭ್ಯಾಂ ನ ಗಚ್ಛತಿ ಇತಿ ಪನ್ನಗಃ = ಕಾಲುಗಳಿಂದ ನಡೆಯದೇ ಇರುವುದು 'ಪನ್ನಗ' ಎಂಬ

ಚನ್ದ್ರಹೀನಮಿವಾಕಾಶಂ ತೋಯಹೀನಮಿವಾರ್ಣವಮ್ ।
ಅಪಶ್ಯನ್ನಿಹತಾನನ್ದಂ ನಗರಂ ತೇ ವಿಚೇತಸಃ ॥೧೮॥

ದುಃಖಗೊಂಡ ಮನಸ್ಸಿನಿಂದ ಕೂಡಿದ್ದ ಪೌರರು–ಚಂದ್ರನಿಲ್ಲದ ಆಕಾಶದಂತೆಯೂ, ನೀರಿಲ್ಲದ ಸಮುದ್ರದಂತೆಯೂ ಕಾಣುತ್ತಿದ್ದ–ಆನಂದ ರಹಿತವಾದ ಅಯೋಧ್ಯಾಪಟ್ಟಣವನ್ನು ನೋಡಿದರು.

ಶ್ರೀರಾಮನ ವಿರಹದಿಂದುಂಟಾದ ದುಃಖದಿಂದ ಪರಿತಪ್ತರಾಗಿದ್ದ ಪೌರರು ಶೋಕಿಸುತ್ತಲೇ ಮಹಾಮೌಲ್ಯದ ಮಹಾನಿವೇಶನಗಳನ್ನು ಪ್ರವೇಶಿಸಿದರು. ಹರ್ಷರಹಿತರಾಗಿದ್ದ ಅವರಿಗೆ, ತಮಗೆ ಎದುರಾಗಿ ಬರುತ್ತಿರುವರು ಸ್ವಜನರೇ ಅಥವಾ ಬೇರೆಯವರೇ–ಎಂಬುದೂ ತಿಳಿಯದೇ ಹೋಯಿತು. ಮನಸ್ಸೆಲ್ಲವೂ ಶ್ರೀರಾಮನಲ್ಲಿಯೇ ನೆಟ್ಟುಹೋಗಿದ್ದುದರಿಂದ ಹೊರ ಪ್ರಪಂಚದ ಅರಿವೇ ಅವರಿಗಿರಲಿಲ್ಲ.

ಳ೭ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೪೮ನೆಯ ಸರ್ಗ

ನಗರವಾಸಿನಿಯರಾದ ಸ್ತ್ರೀಯರ ವಿಲಾಪ

ತೇಷಾಮೇವಂ ವಿಷಣ್ಣಾನಾಂ ಪೀಡಿತಾನಾಮತೀವ ಚ ।
ಬಾಷ್ಪವಿಪ್ಲುತನೇತ್ರಾಣಾಂ ಸಶೋಕಾನಾಂ ಮುಮೂರ್ಷಯಾ ॥೧॥

ಅನುಗಮ್ಯ ನಿವೃತ್ತಾನಾಂ ರಾಮಂ ನಗರವಾಸಿನಾಮ್ ।
ಉದ್ಗತಾನೀವ ಸತ್ತ್ವಾನಿ ಬಭೂವುರಮನಸ್ವಿನಾಮ್ ॥೨॥

ಹೀಗೆ ಬಹಳ ವಿಷಣ್ಣರಾಗಿದ್ದ, ಶ್ರೀರಾಮನ ವಿರಹದುಃಖದಿಂದ ಅತಿ ಪೀಡಿತರಾಗಿದ್ದ, ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ, ಶೋಕಯುಕ್ತ

ವ್ಯುತ್ಪತ್ತಿಯಂತೆ ಮೀನೂ ಆಗಬಹುದಾಗಿದೆ. ನದಿಗಳಲ್ಲಿ ಮೀನುಗಳು ಅತ್ತಲಿತ್ತ ಓಡಾಡುವುದನ್ನು ನೋಡಲು ಬಲುಚೆಂದ. ಅಂತಹ ಸೊಗಸಾದ ಮೀನುಗಳನ್ನು ಪಕ್ಷಿಗಳು ಎತ್ತಿಕೊಂಡು ಹೋಗುವುದನ್ನೂ ನಾವೂ ನೋಡಿದ್ದೇವೆ. 'ಕಣ್ಣುಗಳಿಗೆ ಅಂದವಾಗಿ ಕಾಣುವ ಮೀನುಗಳಿಲ್ಲದ ನದಿಯು ಎಷ್ಟು ಕಾಂತಿಹೀನವಾಗಿರುವುದೋ ಅದೇ ರೀತಿಯಲ್ಲಿ ಜಗದಾನಂದಕಂದನಾದ ರಾಮನಿಲ್ಲದ ಅಯೋಧ್ಯೆಯೂ ಕಾಂತಿಹೀನವಾಗಿದ್ದಿತು'–ಎಂದೂ ಅರ್ಥಮಾಡಬಹುದಾಗಿದೆ.

ರಾಗಿದ್ದ, ಶ್ರೀರಾಮನನ್ನು ಅನುಸರಿಸಿ ಹೋಗಿ ಕೃತಕೃತ್ಯರಾಗದೇ ಹಿಂದಿರು ಗಿದ್ದ, ಬದುಕಿರಲು ಇಚ್ಛೆಯೇ ಇಲ್ಲದೆ ಪ್ರಾಣತೊರೆಯಬೇಕೆಂದು ಬಯಸಿದ್ದ, ಯಾವ ಕಾರ್ಯವನ್ನೂ ಮಾಡುವ ಮನಸ್ಸಿಲ್ಲದೇ ಎಲ್ಲದರಲ್ಲಿಯೂ ಜುಗುಪ್ಸೆಹೊಂದಿದ್ದ ಅಯೋಧ್ಯಾನಗರವಾಸಿಗಳು ಪ್ರಾಣಗಳಿಂದ ವಿಹೀನ ರಾದವರಂತೆಯೇ ಕಾಣುತ್ತಿದ್ದರು. (ಜೀವಚ್ಛವಗಳಂತಿದ್ದರು.) ಶ್ರೀರಾಮನನ್ನು ಕಾಣದೇ ಹತಾಶರಾಗಿ ಅಯೋಧ್ಯೆಗೆ ಬಂದ ಪಟ್ಟಣಿಗರು ತಮ್ಮ-ತಮ್ಮ ಮನೆಗಳಿಗೆ ಹೋಗಿ ಮಡದಿ-ಮಕ್ಕಳೊಡನೆ ಶ್ರೀರಾಮನ ಸಲುವಾಗಿ ಕಣ್ಣೀರಿಟ್ಟರು. ಕಣ್ಣೀರಿನಿಂದಲೇ ಅವರ ಮುಖಗಳು ತೋಯ್ದುಹೋದುವು.

ಆ ಸಮಯದಲ್ಲಿ ಯಾರೊಬ್ಬರಲ್ಲಿಯೂ ಮುಖವಿಕಾಸರೂಪವಾದ ಹರ್ಷವಾಗಲೀ, ಅಂತಃಕರಣದ ಆನಂದವಾಗಲೀ–ಇರಲಿಲ್ಲ. ವರ್ತಕರು ತಮ್ಮ ಅಂಗಡಿಗಳನ್ನು ತೆರೆಯಲಿಲ್ಲ. ತೆರೆದಿದ್ದ ಅಂಗಡಿಗಳೂ ಕೊಳ್ಳುವವರೇ ಇಲ್ಲದೆ ಕಾಂತಿಹೀನವಾಗಿದ್ದುವು. ಗೃಹಸ್ಥರಾದವರು ನಿತ್ಯಕರ್ಮಗಳಾದ ಅಗ್ನಿಹೋತ್ರ–ವೈಶ್ವದೇವಾದಿಗಳಿಗಾಗಿ ಅನ್ನವನ್ನು ಸಿದ್ಧಮಾಡಿಕೊಳ್ಳಲಿಲ್ಲ. ಎಲ್ಲರಿಗೂ ಯಾವುದೂ ಬೇಡವಾಗಿದ್ದಿತು.

ನಷ್ಟಂ ದೃಷ್ಟ್ವಾ ನಾಭ್ಯನನ್ದನ್ವಿಪುಲಂ ವಾ ಧನಾಗಮಮ್ ।
ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನನ್ದತ ॥೫॥

ಕಳೆದುಹೋಗಿದ್ದ ಪದಾರ್ಥವು ಸಿಕ್ಕಿದರೂ, ಅಪಾರಧನವು ಲಭಿಸಿ ದರೂ ಅಯೋಧ್ಯಾವಾಸಿಗಳಿಗೆ ಸಂತೋಷವಾಗಲಿಲ್ಲ. ಮೊದಲ ಮಗುವು ಗಂಡೇ ಆಗಿದ್ದರೂ ಅದರಿಂದ ತಾಯಿಗೆ ಸಂತೋಷವಾಗಲಿಲ್ಲ.

ಎಲ್ಲ ಮನೆಗಳಲ್ಲಿಯೂ ಹೆಂಗಸರು ರೋದನಮಾಡುತ್ತಿದ್ದರು. ರಾಮನನ್ನು ಕರೆತರದೇ ಮನೆಗೆ ಬಂದ ಪತಿಗಳನ್ನು–ಮಾವಟಿಗನು ಅಂಕುಶದಿಂದ ಆನೆಯ ಕುಂಭಸ್ಥಳಕ್ಕೆ ಚುಚ್ಚುವಂತೆ–ಕಠಿನವಾದ ಮಾತು ಗಳಿಂದ ಇರಿಯುತ್ತಿದ್ದರು.

ಕಿಂ ನು ತೇಷಾಂ ಗೃಹೈಃ ಕಾರ್ಯಂ ಕಿಂ ದಾರೈಃ ಕಿಂ ಧನೇನ ವಾ ।
ಪುತ್ರೈರ್ವಾ ಕಿಂ ಸುಖೈರ್ವಾಪಿ ಯೇ ನ ಪಶ್ಯನ್ತಿ ರಾಘವಮ್ ॥೭॥

"ಜಗದಾನಂದಕಂದನಾದ ರಾಘವನನ್ನು ಯಾರು ನೋಡಲಿಲ್ಲವೋ

ಅವರಿಗೆ ಮನೆಯಲ್ಲಿ ಕೆಲಸವೇನಿದೆ? ಶ್ರೀರಾಮನನ್ನು ಕಾಣದವರಿಗೆ ಹೆಂಡತಿಯೇಕೆ? ಮಕ್ಕಳೇಕೆ? ಐಶ್ವರ್ಯವೇಕೆ? ಸುಖಗಳಾದರೂ ಏಕೆ ಬೇಕು? ಶ್ರೀರಾಮನ ಸೇವೆಯನ್ನು ಮಾಡುತ್ತಾ ಸೀತೆಯೊಡನಿರುವ ಅವನನ್ನು ಅನುಸರಿಸಿಹೋಗುತ್ತಿರುವ ಲಕ್ಷ್ಮಣನೊಬ್ಬನೇ ಈ ಲೋಕದಲ್ಲಿ ಸತ್ಪುರುಷನು. ಶ್ರೀರಾಮನು ಸ್ನಾನಮಾಡುವ ನದಿಗಳೇ ಮತ್ತು ಕಮಲ ಪುಷ್ಪಗಳಿರುವ ಸರೋವರಗಳೇ ನಿಶ್ಚಯವಾಗಿಯೂ ಪುಣ್ಯಮಾಡಿವೆ. ರಮ್ಯವಾದ ವೃಕ್ಷರಾಜಿಗಳಿಂದ ಕೂಡಿರುವ ಅರಣ್ಯಗಳೂ, ನದಿಗಳೂ, ನೀರಿನಿಂದ ತುಂಬಿದ ಪ್ರದೇಶಗಳೂ, ಪರ್ವತದ ತಪ್ಪಲುಪ್ರದೇಶಗಳೂ ಶ್ರೀರಾಮನನ್ನು ಶೋಭಾಯಮಾನಗೊಳಿಸುತ್ತವೆ. ಶ್ರೀರಾಮನು ಕಾಡಿಗೇ ಹೋಗಲಿ ; ಪರ್ವತಕ್ಕೇ ಹೋಗಲಿ–ಪ್ರಿಯನಾದ ಅತಿಥಿಯಂತೆ ತಮ್ಮಲ್ಲಿಗೆ ಬರುವ ಶ್ರೀರಾಮನನ್ನು ಅಚೇತನಗಳಾದ ಅವುಗಳು ಕೂಡ ಸತ್ಕರಿಸದೇ ಇರಲಾರವು. ವಿಚಿತ್ರವಾದ ಹೂಗಳನ್ನು ಮುಡಿದಿರುವ, ಪುಷ್ಪಗುಚ್ಛಗಳನ್ನು ಧರಿಸಿರುವ, ಝೇಂಕರಿಸುವ ದುಂಬಿಗಳಿಂದ ಆವೃತವಾಗಿರುವ ವೃಕ್ಷಗಳು ತಮ್ಮ ಸೊಬಗನ್ನು ತೋರಿಸುತ್ತಾ ಶ್ರೀರಾಮನನ್ನು ಉಲ್ಲಾಸಗೊಳಿಸುತ್ತವೆ. ಪರ್ವತಗಳು ಕೂಡ ತಮ್ಮಲ್ಲಿಗೆ ಆಗಮಿಸುವ ಅತಿಥಿಯಾದ ಶ್ರೀರಾಮನಿಗೆ ಆದರದಿಂದ ಅಕಾಲದಲ್ಲಿಯೂ ಶ್ರೇಷ್ಠವಾದ ಫಲ-ಪುಷ್ಪಗಳಿಂದ ತುಂಬಿರುವ ವೃಕ್ಷಗಳನ್ನು ತೋರಿಸುತ್ತಾ ಅವನನ್ನು ಉಲ್ಲಾಸಗೊಳಿಸುತ್ತವೆ. ಪರ್ವತಗಳು ಶ್ರೀರಾಮನ ಸತ್ಕಾರದ ಸಲುವಾಗಿ ಶುದ್ಧವಾದ ನೀರನ್ನು ಚಿಲುಮೆಗಳ ಮೂಲಕವಾಗಿ ಹರಿಸುತ್ತವೆ. ವಿಚಿತ್ರವಾಗಿ ಹರಿಯುವ ನಯನಮನೋಹರವಾದ ಗಿರಿನದಿಗಳನ್ನು ಶ್ರೀರಾಮನಿಗೆ ತೋರಿಸುತ್ತವೆ. ಪರ್ವತದ ತುದಿಯಲ್ಲಿರುವ ವೃಕ್ಷಗಳು ತಂಪಾದ ನೆಳಲಿನಿಂದ ಶ್ರೀರಾಮನಿಗೆ ವಿಶ್ರಾಂತಿಸುಖವನ್ನು ನೀಡುತ್ತವೆ.

ಯತ್ರ ರಾಮೋ ಭಯಂ ನಾತ್ರ ನಾಸ್ತಿ ತತ್ರ ಪರಾಭವಃ ॥೧೫॥

ಶ್ರೀರಾಮನೆಲ್ಲಿರುವನೋ ಅಲ್ಲಿ ಭಯವೂ ಇಲ್ಲ ; ಪರಾಜಯವೂ ಇಲ್ಲ.

ದಶರಥನ ಮಗನಾದ, ಮಹಾಬಾಹುವಾದ ಶ್ರೀರಾಮನು ಮಹಾ

ಶೂರನು. ನಾವೆಲ್ಲರೂ ಈಗಲೇ ವೇಗವಾಗಿ ಹೊರಟು ಅವನು ನಮ್ಮಿಂದ ಇನ್ನೂ ಹೆಚ್ಚಿನ ದೂರಕ್ಕೆ ಹೋಗುವುದರೊಳಗಾಗಿ ಅವನನ್ನು ಸೇರೋಣ.

ಪಾದಚ್ಛಾಯಾ ಸುಖಾ ಭರ್ತುಸ್ತಾದೃಶಸ್ಯ ಮಹಾತ್ಮನಃ ।
ಸ ಹಿ ನಾಥೋ ಜನಸ್ಯಾಸ್ಯ ಸ ಗತಿಃ ಸ ಪರಾಯಣಮ್ ॥೧೭॥

ಅಂತಹ ಮಹಾತ್ಮನಾದ, ಲೋಕೈಕಸ್ವಾಮಿಯಾದ ಶ್ರೀರಾಮನ ಪಾದಗಳ ಸೇವೆಯೇ ನಮಗೆ ಪರಮಗತಿಯು ಮತ್ತು ಪರಮಾಶ್ರಯವು. ಈ ಎಲ್ಲ ಜನರಿಗೂ ಅವನೇ ಒಡೆಯನು. ನಾವು ಸೀತೆಯ ಸೇವೆಯನ್ನು ಮಾಡುತ್ತೇವೆ. ನೀವೆಲ್ಲರೂ ಶ್ರೀರಾಮನ ಸೇವೆಯನ್ನು ಮಾಡಿರಿ"–ಹೀಗೆ ಶ್ರೀರಾಮನ ವಿಯೋಗದಿಂದ ಅತಿದುಃಖಿತರಾದ ಅಯೋಧ್ಯಾಪಟ್ಟಣದ ಸ್ತ್ರೀಯರು ತಮ್ಮ ಪತಿಗಳಿಗೆ ಹೇಳಿದರು.

"ಶ್ರೀರಾಮನು ಅರಣ್ಯದಲ್ಲಿ ನಿಮ್ಮ ಯೋಗ-ಕ್ಷೇಮಗಳನ್ನು* ನೋಡಿಕೊಳ್ಳುತ್ತಾನೆ. ಸೀತಾದೇವಿಯು ನಮ್ಮ ಯೋಗ-ಕ್ಷೇಮಗಳ ವ್ಯವಸ್ಥೆಯನ್ನು ಮಾಡುತ್ತಾಳೆ. ಸತ್ಪುರುಷರ ವಾಸಕ್ಕೆ ಅಯೋಗ್ಯವಾದ, ಉದ್ವಿಗ್ನರಾದ ಜನರಿಂದ ಕೂಡಿರುವ, ಮನಸ್ಸಿಗೆ ಬೇಡವಾದ, ನಿಶ್ಚೇತನವಾಗಿರುವಂತೆ ಕಾಣುತ್ತಿರುವ, ಶ್ರೀರಾಮನಿಲ್ಲದ ಈ ಅಯೋಧ್ಯೆಯಲ್ಲಿ ಯಾರು ತಾನೇ ಸಂತೋಷಿಸುವರು? ಕೈಕೇಯಿಗೇ ರಾಜ್ಯದ ಒಡೆತನವು ಸಿಕ್ಕುವುದಾದರೆ–ಒಡೆಯರೇ ಇಲ್ಲದ ದೇಶದಂತೆ ಈ ರಾಜ್ಯವು ಅಧರ್ಮಯುಕ್ತವಾದ ರಾಜ್ಯವಾಗುತ್ತದೆ. ಅಂತಹ ಅಧರ್ಮಯುಕ್ತವಾದ ರಾಜ್ಯದಲ್ಲಿ ನಾವು ಜೀವಿಸಿದ್ದೇನು ಪ್ರಯೋಜನ? ಇಲ್ಲಿ ನಮ್ಮ ಜೀವನವೇ ವ್ಯರ್ಥವೆಂದಮೇಲೆ ಮಕ್ಕಳಿಂದಾಗಲೀ, ಐಶ್ವರ್ಯದಿಂದಾಗಲಿ ನಮಗೇನಾಗಬೇಕಾಗಿದೆ?

* ಅಲಭ್ಯಲಾಭೋ ಯೋಗಃ ಸ್ಯಾತ್ ಕ್ಷೇಮೋ ಲಬ್ಧಸ್ಯ ಪಾಲನಮ್ = ಸಿಕ್ಕದೇ ಇರುವುದನ್ನು ಪಡೆಯುವುದಕ್ಕೆ ಯೋಗವೆಂದೂ, ಹಾಗೆ ಸಿಕ್ಕಿದುದನ್ನು ರಕ್ಷಿಸಿಕೊಳ್ಳುವುದಕ್ಕೆ ಕ್ಷೇಮವೆಂದೂ ಹೆಸರು. ಇದನ್ನನುಸರಿಸಿ ಒಬ್ಬ ವ್ಯಾಖ್ಯಾನಕಾರರು ಸಂದರ್ಭಕ್ಕನುಸಾರವಾಗಿ ಹೀಗೆ ವ್ಯಾಖ್ಯಾನಮಾಡಿರುತ್ತಾರೆ : ಯೋಗಂ = ಅಲಭ್ಯೋಚ್ಛಿಷ್ಟಪುಷ್ಪಫಲಾದಿಲಾಭಂ = ಭಕ್ತರಲ್ಲದವರಿಗೆ ದುರ್ಲಭವಾದ, ರಾಮನು ಉಪಭುಂಜಿಸಿ ಉಚ್ಛಿಷ್ಟವಾಗುಳಿದ ಪುಷ್ಪ-ಫಲಾದಿಗಳ ಪ್ರಾಪ್ತಿ. ಕ್ಷೇಮಂ = ಪೂರ್ವಲಬ್ಧ ಸೇವಾಧಿಕಾರಪಾಲನಂ–ಹಿಂದೆ ಪಡೆದ ಸೇವೆಮಾಡುವ ಅಧಿಕಾರವನ್ನು ಪರಿಪಾಲಿಸವುದು.

ಯಯಾ ಪುತ್ರಶ್ಚ ಭರ್ತಾ ಚ ತ್ಯಕ್ತಾವೈಶ್ವರ್ಯಕಾರಣಾತ್ ।
ಕಂ ಸಾ ಪರಿಹರೇದನ್ಯಂ ಕೈಕೇಯೀ ಕುಲಪಾಂಸನೀ ॥೨೨॥

ಯಾವಳು ಐಶ್ವರ್ಯದ ಲೋಭದಿಂದಾಗಿ ಪುತ್ರನನ್ನೂ ಪತಿಯನ್ನೂ ಪರಿತ್ಯಜಿಸಿದಳೋ-ಅಂತಹ ಕುಲಕಳಂಕಿನಿಯಾದ ಕೈಕೇಯಿಯು ಯಾರನ್ನು ತಾನೇ ಬಿಟ್ಟಾಳು!

ಕೈಕೇಯ್ಯಾ ನ ವಯಂ ರಾಜ್ಯೇ ಭೃತಕಾ ನಿವಸೇಮ ಹಿ ।
ಜೀವನ್ತ್ಯಾ ಜಾತು ಜೀವನ್ತ್ಯಃ ಪುತ್ರೈರಪಿ ಶಪಾಮಹೇ ॥೨೩॥

ಕೈಕೇಯಿಯು ಜೀವಿಸಿರುವವರೆಗೂ ಈ ರಾಜ್ಯದಲ್ಲಿ ನಾವು ಅವಳಿಂದ ವೇತನವನ್ನು ಪಡೆದು ಕೂಲಿಯಾಳುಗಳಂತೆ ಜೀವನನಡೆಸಲು ಇಚ್ಛಿಸುವುದಿಲ್ಲ. ಈ ಮಾತನ್ನು ನಾವು ಮಕ್ಕಳ ಮೇಲೆ ಆಣೆಯಿಟ್ಟು ಪ್ರತಿಜ್ಞೆಮಾಡಿ ಹೇಳುತ್ತೇವೆ. ನಿರ್ದಯಳಾದ ಯಾವ ಕೈಕೇಯಿಯು ಚಕ್ರವರ್ತಿಯ ಮಗನಾದ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಿಬಿಟ್ಟಳೋ-ಅಂತಹ ದುಷ್ಟಚಿತ್ರಳಾದ, ಅಧರ್ಮಿಷ್ಠಳಾದ ಕೈಕೇಯಿಯನ್ನು ಆಶ್ರಯಿಸಿ ಯಾರು ತಾನೇ ಸುಖವಾಗಿ ಈ ರಾಜ್ಯದಲ್ಲಿ ಜೀವಿಸಬಲ್ಲರು? ಕೈಕೇಯಿಯ ಕಾರಣದಿಂದಾಗಿ ಈ ರಾಜ್ಯವು ಉಪದ್ರವಗಳಿಗೆ ಈಡಾಗುತ್ತದೆ. ಆಶ್ರಯ ರಹಿತವಾಗುತ್ತದೆ. ಅನಾಯಕವಾಗುತ್ತದೆ. ಇವೆಲ್ಲದರ ಪರಿಣಾಮವಾಗಿ ವಿನಾಶಹೊಂದುತ್ತದೆ. ಶ್ರೀರಾಮನು ಅರಣ್ಯಕ್ಕೆ ಹೊರಟುಹೋಗಲಾಗಿ ದಶರಥನು ಹೆಚ್ಚುಕಾಲ ಜೀವಿಸಿರುವುದಿಲ್ಲ. ಅವನು ಮೃತನಾದನೆಂದರೆ ಈ ರಾಜ್ಯವು ವಿನಾಶಹೊಂದುವುದಂತೂ ನಿಶ್ಚಯ.

ಶ್ರೀರಾಮನನ್ನು ಅನುಸರಿಸಿ ಹೋಗಲಾಗದೇ ಹಿಂದಕ್ಕೆ ಬಂದಿರುವ, ಪುಣ್ಯಹೀನರಾದ, ದುರ್ಗತಿಯನ್ನು ಹೊಂದಿರುವ ನೀವು ನಮ್ಮೊಡನೆ ರಾಘವನ ಬಳಿಗೆ ಹೋಗಲು ಪುನಃ ಪ್ರಯತ್ನಿಸಿರಿ ಅಥವಾ ಈ ದುಷ್ಟಚಾರಿಣಿಯಾದ ಕೈಕೇಯಿಯ ಹೆಸರೂ ಕೇಳದಿರುವ ರಾಜ್ಯಕ್ಕಾದರೂ ಹೊರಟುಹೋಗಿರಿ. ಎರಡೂ ಸಾಧ್ಯವಿಲ್ಲವೆನ್ನುವುದಾದರೆ ವಿಷವನ್ನಾದರೂ ಕುಡಿದು ಪ್ರಾಣತೊರೆಯಿರಿ. ಪಾಪಿಷ್ಠೆಯ ರಾಜ್ಯದಲ್ಲಿ ಮಾತ್ರ ಇರುವುದು ಬೇಡ. ವರಪ್ರದಾನವೆಂಬ ಸುಳ್ಳುಕತೆಯನ್ನು ಹೆಣೆದು ಸೀತಾ-ಲಕ್ಷ್ಮಣರೊಡನೆ

ಶ್ರೀರಾಮನನ್ನು ಅರಣ್ಯಕ್ಕೆ ಅಟ್ಟಿಯಾಯಿತು. ಈಗ ಕಟುಕನಿಗೆ ಪಶುಗಳನ್ನು ಒಪ್ಪಿಸುವಂತೆ ನಮ್ಮನ್ನು ಭರತನಿಗೆ ಒಪ್ಪಿಸಿಕೊಡಲಾಗಿದೆ.

ಶ್ರೀರಾಮನು ಪೂರ್ಣಚಂದ್ರನಂತೆ ಮುಖವುಳ್ಳವನು. ಶ್ಯಾಮಲ ವರ್ಣದವನು. ಗುಪ್ತವಾಗಿರುವ ಹೆಗಲುಗಳ ಸಂಧಿಪ್ರದೇಶವುಳ್ಳವನು. ಶತ್ರು ಗಳನ್ನು ದಮನಮಾಡುವವನು. ನೀಳವಾದ ತೋಳುಗಳುಳ್ಳವನು. ಕಮಲಾಕ್ಷನು. ಲಕ್ಷ್ಮಣನಿಗಿಂತಲೂ ಮೊದಲು ಹುಟ್ಟಿದವನು. ಬೇರೆಯವರು ತನ್ನನ್ನು ಮೊದಲು ಮಾತನಾಡಿಸಬೇಕೆಂಬ ಬಿಗುಮಾನವಿಲ್ಲ. ಎಲ್ಲರೊಡ ನೆಯೂ ತಾನೇ ಮೊದಲು ಮಾತನಾಡುವವನು. ಜೇನುತುಪ್ಪದಂತೆ ಮಧುರವಾದ ಮಾತುಗಳನ್ನಾಡುವವನು. ಸತ್ಯವಾದಿಯು. ಮಹಾ ಬಲಿಷ್ಠನು. ಆದರೂ ಸೌಮ್ಯಸ್ವಭಾವದವನು. ಲೋಕಕ್ಕೆ ಚಂದ್ರನ ದರ್ಶನವು ಹೇಗೆ ಪ್ರಿಯವೋ–ಹಾಗೆಯೇ ಶ್ರೀರಾಮನ ದರ್ಶನವು ಪ್ರಜೆಗಳಿಗೆ ಬಹಳ ಪ್ರಿಯವಾಗಿದ್ದಿತು. ಪುರುಷಸಿಂಹನಾದ ಶ್ರೀರಾಮನು ನಿಶ್ಚಯವಾಗಿಯೂ ಮದಿಸಿದ ಆನೆಯಂತೆ ಬಲವುಳ್ಳವನು. ಅಂತಹ ಮಹಾರಥನಾದ ಶ್ರೀರಾಮ ನೀಗ ಅರಣ್ಯದ ಸುತ್ತಲೂ ಸಂಚರಿಸುತ್ತಾ ಅದನ್ನು ಶೋಭಾಯಮಾನವನ್ನಾಗಿ ಮಾಡುತ್ತಾನೆ. ಅಂತಹ ಪರಮಪುರುಷನನ್ನು ಬಿಟ್ಟು ನಾವು ಜೀವಿಸಿ ರಲು ಹೇಗೆತಾನೇ ಸಾಧ್ಯವಾದೀತು?"

ಹೀಗೆ ಅಯೋಧ್ಯಾಪಟ್ಟಣದ ಸ್ತ್ರೀಯರು ಶ್ರೀರಾಮನ ಗುಣಗಾನ ಮಾಡುತ್ತಾ ಗೋಳಾಡುತ್ತಿದ್ದರು. ಮನೆಯಲ್ಲಿ ಯಾರಿಗಾದರೂ ಮೃತ್ಯು ಭೀತಿಯು ಸನ್ನಿಹಿತವಾದಾಗ ಮನೆಯವರೆಲ್ಲರೂ ಯಾವ ರೀತಿಯಲ್ಲಿ ಗಗನಕ್ಕೆ ಮುಟ್ಟುವಂತೆ ಚೀತ್ಕಾರಮಾಡುತ್ತಾ ಗೋಳಾಡುವರೋ–ಅದೇ ರೀತಿಯಲ್ಲಿ ದುಃಖತಪ್ತರಾದ ನಗರಸ್ತ್ರೀಯರು ಗಟ್ಟಿಯಾಗಿ ಅಳುತ್ತಿದ್ದರು. ಹೀಗೆ ಅಯೋಧ್ಯಾಪಟ್ಟಣದ ಮನೆಗಳಲ್ಲಿ ಸ್ತ್ರೀಯರು ವಿಲಾಪಮಾಡುತ್ತಿರುವಾಗಲೇ ಸೂರ್ಯನೂ ಮುಳುಗಿದನು ; ರಾತ್ರಿಯಾಯಿತು.

ಸಾಯಂಕಾಲವಾದೊಡನೆಯೇ ಶ್ರೋತ್ರಿಯರ ಮನೆಗಳಲ್ಲಿ ನಡೆಯ ಬೇಕಾಗಿದ್ದ ಔಪಾಸನಾದಿಗಳೊಂದೂ ನಡೆಯಲಿಲ್ಲ. ಪುರಾಣ-ಪ್ರವಚನಗಳಾ ಗಲೀ ವೇದಾಧ್ಯಯನಗಳಾಗಲೀ ನಡೆಯಲಿಲ್ಲ. ಕತ್ತಲೆಯಿಂದ ಬಳಿಯಲ್ಪ

ಟ್ಟಂತೆ ಅಂದು ಆ ಅಯೋಧ್ಯಾಪಟ್ಟಣವು ಕಾಣಿಸಿತು. ರಾತ್ರಿಯ ವೇಳೆಯಲ್ಲಿ ದೀಪದ ಸಾಲುಗಳಿಂದ ಬೆಳಗುತ್ತಿದ್ದ ವ್ಯಾಪಾರಿಗಳ ಅಂಗಡಿಗಳೆಲ್ಲವೂ ಮುಚ್ಚಿದ್ದುವು. ಸಂತೋಷವೆಂಬುದು ನಷ್ಟವಾಗಿಹೋಗಿದ್ದಿತು. ಶ್ರೀರಾಮನಿಲ್ಲದಿದ್ದುದರಿಂದ ಆಶ್ರಯರಹಿತವಾಗಿದ್ದಿತು. ಹೀಗೆ ಅಯೋಧ್ಯೆಯು ನಕ್ಷತ್ರಗಳಿಲ್ಲದ ಆಕಾಶದಂತೆ ಕಾಂತಿಹೀನವಾಗಿದ್ದಿತು.

ತಮ್ಮ ಮಕ್ಕಳಾಗಲೀ ಸಹೋದರರಾಗಲೀ ಅರಣ್ಯಕ್ಕೆ ಹೋದರೆ ಎಷ್ಟು ದುಃಖವಾಗುವುದೋ ಅದಕ್ಕಿಂತಲೂ ಹೆಚ್ಚಿನ ದುಃಖವನ್ನು ಶ್ರೀರಾಮನ ನಿಮಿತ್ತವಾಗಿ ಅಯೋಧ್ಯಾಪಟ್ಟಣದ ಸ್ತ್ರೀಯರು ಅನುಭವಿಸಿದರು. ಶ್ರೀರಾಮನ ವಿಯೋಗದುಃಖದಿಂದ ದೀನರಾಗಿದ್ದ ಅವರು ಅತ್ತು-ಅತ್ತು ಗೋಳಾಡಿ ಬುದ್ಧಿಯನ್ನೇ ಕೆಡಿಸಿಕೊಂಡರು. ಸ್ವಂತ ಮಕ್ಕಳಿಗಿಂತಲೂ ಅವರಿಗೆ ಶ್ರೀರಾಮನೇ ಅಧಿಕಪ್ರಿಯನಾಗಿದ್ದನು. ಶ್ರೀರಾಮನಿಲ್ಲದ ಅಯೋಧ್ಯೆಯಲ್ಲಿ ನೃತ್ಯ- ವಾದನ-ಗೀತೋತ್ಸವಗಳೆಲ್ಲವೂ ನಿಂತು ಪ್ರಶಾಂತವಾಗಿದ್ದಿತು. ಎಲ್ಲಿಯೂ ಹರ್ಷವೆಂಬುದೇ ಇರಲಿಲ್ಲ. ಅಂಗಡಿಗಳೆಲ್ಲವೂ ಮುಚ್ಚಿದ್ದುವು. ಆ ಸಮಯದಲ್ಲಿ ಅಯೋಧ್ಯೆಯು ಬತ್ತಿಹೋದ ನೀರುಳ್ಳ ಸಮುದ್ರದಂತೆಯೇ ಕಾಣುತ್ತಿದ್ದಿತು.

೪೮ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೪೯ನೆಯ ಸರ್ಗ

ಶ್ರೀರಾಮನು ಕೋಸಲದೇಶವನ್ನು ದಾಟಿ ಮುಂದೆ ವೇದಶ್ರುತಿ, ಗೋಮತೀ ಮತ್ತು ಸ್ಯಂದಿಕಾನದಿಗಳನ್ನು ದಾಟಿದುದು

ರಾಮೋऽಪಿ ರಾತ್ರಿಶೇಷೇಣ ತೇನೈವ ಮಹದನ್ತರಮ್ ।
ಜಗಾಮ ಪುರುಷವ್ಯಾಘ್ರಃ ಪಿತುರಾಜ್ಞಾಮನುಸ್ಮರನ್ ॥೧॥

ಅತ್ತಲಾಗಿ ಪುರುಷಸಿಂಹನಾದ ಶ್ರೀರಾಮನು ತಂದೆಯ ಆಜ್ಞೆಯನ್ನು ಸ್ಮರಿಸುತ್ತಾ ರಾತ್ರಿಯ ಉಳಿದ ಭಾಗದಲ್ಲಿ ಬಹಳ ದೂರ ಪ್ರಯಾಣ ಮಾಡಿದನು.

ಹೀಗೆಯೇ ಶ್ರೀರಾಮನು ಮುಂದೆ-ಮುಂದೆ ಪ್ರಯಾಣಮಾಡುತ್ತಿರಲು ಮಂಗಳಕರವಾದ ಆ ರಾತ್ರಿಯು ಕಳೆದುಹೋಯಿತು. ಬೆಳಗಾದೊಡನೆಯೇ ಪ್ರಾತಃಸಂಧ್ಯಾದೇವಿಯನ್ನು ಉಪಸನೆಮಾಡಿ ಪುನಃ ಪ್ರಯಾಣಮಾಡುತ್ತಾ ಉತ್ತರಕೋಸಲದ ದಕ್ಷಿಣದ ಎಲ್ಲೆಯ ಬಳಿಗೆ ಹೋದನು.

ಉತ್ತಮವಾದ ಕುದುರೆಗಳಿಂದ ಎಳೆಯಲ್ಪಡುತ್ತಿದ್ದ ರಥದಲ್ಲಿ ಶೀಘ್ರ ವಾಗಿ ಹೋಗುತ್ತಿದ್ದರೂ ಬಹಳ ನಿಧಾನವಾಗಿ ಹೋಗುತ್ತಿರುವವನಂತೆ ಶ್ರೀರಾಮನು–ಎಲ್ಲೆಯವರೆಗೂ ಭೂಮಿಯನ್ನು ಉತ್ತು ಬೀಜಬಿತ್ತಲು ಹಸನಾಗಿ ಮಾಡಿದ್ದ ಅನೇಕ ಗ್ರಾಮಗಳನ್ನೂ, ಪುಷ್ಪಭರಿತವಾಗಿದ್ದ ಅರಣ್ಯ ಗಳನ್ನೂ ನೋಡುತ್ತಾ, ಹಳ್ಳಿಗಳಲ್ಲಿಯೂ–ಊರುಗಳಲ್ಲಿಯೂ ಜನರು ಆಡು ತ್ತಿದ್ದ ಮಾತುಗಳನ್ನು ಕೇಳುತ್ತಾ ಪ್ರಯಾಣಮಾಡುತ್ತಿದ್ದನು.

ಶ್ರೀರಾಮನು ರಥದಲ್ಲಿ ಕುಳಿತು ಹೋಗುತ್ತಿದ್ದಾಗ ಜನರು ಹೀಗೆ ಮಾತನಾಡಿಕೊಳ್ಳುತ್ತಿದ್ದರು :

"ಕಾಮಾಸಕ್ತನಾದ ದಶರಥನಿಗೆ ಧಿಕ್ಕಾರವಿರಲಿ. ಅಯ್ಯೋ! ಪಾಪ ಕರ್ಮನಿರತಳಾದ, ಲೋಕಮರ್ಯಾದೆಯನ್ನೇ ತ್ಯಜಿಸಿರುವ, ಘಾತಕಿಯಾದ, ದಯಾರಹಿತಳಾದ ಕೈಕೇಯಿಯು ಮಹಾಕ್ರೂರವಾದ ಕಾರ್ಯವನ್ನು ಮಾಡಲು ತೊಡಗಿದ್ದಾಳೆ. ಮಹಾಪ್ರಾಜ್ಞನಾದ, ಜಿತೇಂದ್ರಿಯನಾದ, ದಯಾಪರನಾದ ಇಂತಹ ರಾಜಪುತ್ರನನ್ನು ಅರಣ್ಯವಾಸಕ್ಕೆ ಕಳುಹಿಸುತ್ತಿದ್ದಾಳೆ. ಮಹಾಭಾಗಳಾದ, ಹುಟ್ಟಿದಾಗಿನಿಂದಲೂ ಸುಖದಲ್ಲಿಯೇ ಬೆಳೆದಿರುವ ಸೀತಾ ದೇವಿಯು ಅರಣ್ಯದ ದುಃಖಗಳನ್ನು ಹೇಗೆತಾನೇ ಸಹಿಸುವಳು? ಅಯ್ಯೋ! ರಾಜನಾದ ದಶರಥನು ಮಗನ ವಿಷಯದಲ್ಲಿ ಸ್ನೇಹರಹಿತನಾಗಿದ್ದಾನೆ. ಪ್ರಜೆಗಳ ವಿಷಯದಲ್ಲಿ ಯಾವ ಅಪರಾಧವನ್ನೂ ಮಾಡದಿರುವ, ಪ್ರಜೆಗಳ ದೃಷ್ಟಿಯಿಂದ ತಪ್ಪಿತಸ್ಥನಲ್ಲದ ಶ್ರೀರಾಮನನ್ನು ಪರಿತ್ಯಾಗಮಾಡಲು ಬಯಸಿದ್ದಾನೆ."

ಗ್ರಾಮಗಳಲ್ಲಿಯೂ–ಹಳ್ಳಿಗಳಲ್ಲಿಯೂ ವಾಸಮಾಡುತ್ತಿದ್ದ ಜನರ ಈ ರೀತಿಯ ಮಾತುಗಳನ್ನು ಕೇಳುತ್ತಾ ವೀರನಾದ, ಕೋಸಲೇಶ್ವರನಾದ ಶ್ರೀರಾಮನು ಕೋಸಲದೇಶವನ್ನು ದಾಟಿ ಮುಂದೆ ಪ್ರಯಾಣಮಾಡಿದನು.

ಮಂಗಳಕರವಾದ ನೀರಿನ ಪ್ರವಾಹದಿಂದ ಕೂಡಿದ್ದ 'ವೇದಶ್ರುತಿ' ಎಂಬ ನದಿಯನ್ನೂ ದಾಟಿ ಅಗಸ್ತ್ಯರಿಂದ ಸಂಸೇವ್ಯಮಾನವಾದ ದಕ್ಷಿಣದಿಕ್ಕಿನ ಕಡೆಗೆ ಶ್ರೀರಾಮನು ಹೊರಟನು. ದಕ್ಷಿಣದಿಕ್ಕಿನ ಹಾದಿಯಲ್ಲಿಯೇ ಬಹಳ ಹೊತ್ತು ಪ್ರಯಾಣಮಾಡಿ ಮಂಗಳಕರವಾದ ನೀರಿನಿಂದಲೂ, ಗೋವುಗಳಿಂದ ವ್ಯಾಪ್ತವಾದ ತೀರಪ್ರದೇಶಗಳಿಂದಲೂ ಕೂಡಿದ್ದ, ಗಂಗಾನದಿಯೊಡನೆ ಸೇರಿ ಸಮುದ್ರಕ್ಕೆ ಹೋಗುವ ಗೋಮತೀನದಿಯನ್ನು ದಾಟಿದನು. ಬಳಿಕ ಶ್ರೀರಾಮನು ಶೀಘ್ರಗಾಮಿಗಳಾದ ಕುದುರೆಗಳಿಂದ ಎಳೆಯಲ್ಪಡುತ್ತಿದ್ದ ರಥದಲ್ಲಿ ಕುಳಿತು ಪ್ರಯಾಣಮಾಡುತ್ತಾ ನವಿಲು ಮತ್ತು ಹಂಸಪಕ್ಷಿಗಳ ನಿನಾದದಿಂದ ವ್ಯಾಪ್ತವಾಗಿದ್ದ ಸ್ಯಂದಿಕಾ ಎಂಬ ನದಿಯನ್ನು ದಾಟಿದನು.

ಹಿಂದೆ ಮನುಚಕ್ರವರ್ತಿಯಿಂದ ಇಕ್ಷ್ವಾಕುಮಹಾರಾಜನಿಗೆ ಕೊಡಲ್ಪಟ್ಟಿದ್ದ, ಧನ-ಧಾನ್ಯಸಮೃದ್ಧವಾಗಿದ್ದ, ಅನೇಕರಾಷ್ಟ್ರಗಳಿಂದ ಸಮಾವೃತವಾಗಿದ್ದ ಕೋಸಲರಾಜ್ಯವನ್ನು ಶ್ರೀರಾಮನು ವೈದೇಹಿಗೆ ತೋರಿಸಿದನು. ಮದಿಸಿದ ಹಂಸದ ಧ್ವನಿಗೆ ಸದೃಶವಾದ ಧ್ವನಿಯಿಂದ ಕೂಡಿದ್ದ, ಶ್ರೀಮಂತನಾದ, ಪುರುಷಶ್ರೇಷ್ಠನಾದ ಶ್ರೀರಾಮನು ಸಾರಥಿಯಾದ ಸುಮಂತ್ರನನ್ನು 'ಸೂತ!' ಎಂದೇ ಸಂಬೋಧಿಸಿ ನಾಲ್ಕಾರು ಬಾರಿ ಕೂಗಿ ಹೇಳಿದನು :

"ಸೂತ! ನಾನು ಅರಣ್ಯದಿಂದ ಹಿಂದಿರುಗಿ ಬಂದು ನನ್ನ ತಂದೆ-ತಾಯಿಗಳೊಡನೆ ಸರಯೂನದಿಯ ತೀರದಲ್ಲಿರುವ ಪುಷ್ಪಭರಿತವಾದ ಉದ್ಯಾನವನದಲ್ಲಿ ಮೃಗಗಳನ್ನು ಬೇಟೆಯಾಡುತ್ತಾ ಯಾವಾಗ ಸಂಚರಿಸುವೆನು? ಈ ಲೋಕದಲ್ಲಿ ರಾಜರ್ಷಿಗಳು ವಿಹಾರಾರ್ಥವಾಗಿ ಅರಣ್ಯದಲ್ಲಿ ಬೇಟೆಯಾಡಬೇಕೆಂಬುದು ನಿಯತವಾಗಿದೆ. ಧನುರ್ಧಾರಿಗಳಾದ ಮನುಷ್ಯರಿಂದ ಅಪೇಕ್ಷಿತವಾದ, ಹಿಂದಿನ ಕಾಲದಿಂದಲೂ ಅಂಗೀಕರಿಸಲ್ಪಟ್ಟಿರುವ ಈ ಬೇಟೆಯ ವಿನೋದವನ್ನು ನಾನು ಹೆಚ್ಚು ಅಪೇಕ್ಷಿಸುವುದಿಲ್ಲ. ಅರಣ್ಯದಿಂದ ಹಿಂದಿರುಗಿ ಬಂದನಂತರ ಸರಯೂನದಿಯ ತೀರದಲ್ಲಿರುವ ಸುಂದರವಾದ ಉಪವನದಲ್ಲಿ ಸ್ವಲ್ಪಕಾಲ ಮಾತ್ರ ಕ್ರೂರಮೃಗಗಳನ್ನು ಬೇಟೆಯಾಡುವ ಅಪೇಕ್ಷೆಯಿದೆ. ರಾಜರ್ಷಿಗಳಿಗೂ ಸಮ್ಮತವಾಗಿರುವ ಈ ಬೇಟೆಯಾಟವು ಈ ಲೋಕದಲ್ಲಿ ಎಲ್ಲ ರಾಜರಿಗೂ ಅತ್ಯಂತಪ್ರಿಯವಾಗಿದೆ."

ಹೀಗೆ ಇಕ್ಷ್ವಾಕುವಂಶಜನಾದ ಶ್ರೀರಾಮನು ಸರಯೂನದಿಯ ತೀರದ ವನದಲ್ಲಿ ಬೇಟೆಯಾಡಬೇಕೆನ್ನುವ ತನ್ನ ಅಭಿಲಾಷೆಯನ್ನು ಸುಮಂತ್ರನಿಗೆ ಮಧುರವಾದ ಮಾತುಗಳಿಂದ ವ್ಯಕ್ತಪಡಿಸುತ್ತಾ ಪ್ರಯಾಣಮಾಡಿದನು.

ಳ೯ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೫೦ನೆಯ ಸರ್ಗ

ಮಾರ್ಗದಲ್ಲಿ ಶ್ರೀರಾಮನು ಅರಣ್ಯವಾಸದ ಅನುಮತಿಗಾಗಿ ಅಯೋಧ್ಯಾಪಟ್ಟಣದ ಅಧಿವೇವತೆಯನ್ನು ಪ್ರಾರ್ಥಿಸಿದುದು : ಶೃಂಗಬೇರಪುರದ ಸಮೀಪದಲ್ಲಿದ್ದ ಗಂಗಾನದಿಯ ತೀರದಲ್ಲಿ ಇಳಿದುಕೊಂಡುದು : ನಿಷಾದರಾಜನ ಸತ್ಕಾರ

ವಿಶಾಲಾನ್ಕೋಸಲಾನ್ರಮ್ಯಾನ್ಯಾತ್ವಾ ಲಕ್ಷ್ಮಣಪೂರ್ವಜಃ ।
ಅಯೋಧ್ಯಾಭಿಮುಖೋ ಧೀಮಾನ್ಪ್ರಾಞ್ಜಲಿರ್ವಾಕ್ಯಮಬ್ರವೀತ್ ॥

ಲಕ್ಷ್ಮಣನ ಅಣ್ಣನಾದ ಶ್ರೀರಾಮನು ರಮಣೀಯವಾಗಿಯೂ ವಿಶಾಲವಾಗಿಯೂ ಇದ್ದ ದಕ್ಷಿಣಕೋಸಲದೇಶದ ಗಡಿಯನ್ನು ದಾಟಿ, ಅಯೋಧ್ಯೆಗೆ ಅಭಿಮುಖವಾಗಿ ನಿಂತು ಕೈಮುಗಿದುಕೊಂಡು ಹೇಳಿದನು :

ಆಪೃಚ್ಛೇ ತ್ವಾಂ ಪುರಿಶ್ರೇಷ್ಠೇ ಕಾಕುತ್ಸ್ಥಪರಿಪಾಲಿತೇ ।
ದೈವತಾನಿ ಚ ಯಾನಿ ತ್ವಾಂ ಪಾಲಯನ್ತ್ಯಾವಸನ್ತಿ ಚ ॥೨॥

ನಿವೃತ್ತವನವಾಸಸ್ತ್ವಾಮನೃಣೋ ಜಗತೀಪತೇಃ ।
ಪುನರ್ದ್ರಕ್ಷ್ಯಾಮಿ ಮಾತ್ರಾ ಚ ಪಿತ್ರಾ ಚ ಸಹ ಸಂಗತಃ ॥೩॥

“ಕಕುತ್ಸ್ಥವಂಶದ ರಾಜರಿಂದ ಪರಿಪಾಲಿತಳಾದ, ಜಗತ್ತಿನಲ್ಲಿರುವ ಸಕಲನಗರಗಳಿಗೂ ಶ್ರೇಷ್ಠಳಾದ ಅಯೋಧ್ಯಾನಗರದ ಅಧಿದೇವತೆಯೇ! ಅರಣ್ಯವಾಸಕ್ಕೆ ನಿನ್ನ ಅನುಮತಿಯನ್ನು ಪ್ರಾರ್ಥಿಸುತ್ತಿದ್ದೇನೆ. ನಿನ್ನನ್ನು ಪಾಲಿಸುತ್ತಿರುವ ಮತ್ತು ನಿನ್ನಲ್ಲಿ ವಾಸಮಾಡುತ್ತಿರುವ ದೇವತೆಗಳ ಅನುಮತಿಯನ್ನೂ ಪ್ರಾರ್ಥಿಸುತ್ತಿದ್ದೇನೆ. ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ದಶರಥರಾಜನ ಋಣದಿಂದ ಮುಕ್ತನಾಗಿ (ಪಿತೃವಾಕ್ಯವನ್ನು ಪರಿಪಾಲಿಸಿ) ತಂದೆಯಿಂದಲೂ, ತಾಯಿಯಿಂದಲೂ ಕೂಡಿ ನಿನ್ನನ್ನು ಪುನಃ ಸಂದರ್ಶಿಸುತ್ತೇನೆ.”

ಬಳಿಕ ಶ್ರೀರಾಮನು–ರಕ್ತದಂತೆ ಕೆಂಪಾದ ಕಣ್ಣುಗಳಿಂದಲೂ, ಕಣ್ಣೀರಿನಿಂದ ತೋಯಿಸಲ್ಪಟ್ಟ ಮುಖದಿಂದಲೂ, ದೀನಭಾವದಿಂದಲೂ ಕೂಡಿ, ತೋಳನ್ನು ಮೇಲೆತ್ತಿ ತನ್ನನ್ನು ನೋಡಲು ಬಂದಿದ್ದ ಹಳ್ಳಿಯ ಜನರಿಗೆ ಹೇಳಿದನು :

"ಪ್ರಜೆಗಳೇ! ನೀವು ನನ್ನ ವಿಷಯದಲ್ಲಿ ಆದರವನ್ನೂ, ದಯೆಯನ್ನೂ ಯಥಾಯೋಗ್ಯವಾಗಿ ತೋರಿರುವಿರಿ. ಚಿರಕಾಲ ದುಃಖಿಸುತ್ತಿರುವುದು ಒಳ್ಳೆಯದಲ್ಲ. ಗೃಹಕೃತ್ಯದ ನಿರ್ವಹಣೆಗಾಗಿ ಕೆಲಸಮಾಡಲು ಹೋಗಿರಿ."

ಶ್ರೀರಾಮನ ಮಾತುಗಳನ್ನು ಕೇಳಿ ಹಳ್ಳಿಗರು ಮಹಾತ್ಮನಾದ ಅವನನ್ನು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸಿ, ರಾಮವಿಯೋಗದುಃಖವನ್ನು ತಾಳಲಾರದೇ ಗಟ್ಟಿಯಾಗಿ ಅಳುತ್ತಾ ಅಲ್ಲಲ್ಲಿಯೇ ನಿಂತುಕೊಂಡರು. ಶ್ರೀರಾಮನನ್ನು ಎಷ್ಟು ನೋಡಿದರೂ ತೃಪ್ತರಾಗದೇ ಅವನಲ್ಲಿಯೇ ನೆಟ್ಟ ದೃಷ್ಟಿಯುಳ್ಳವರಾಗಿ ಗೋಳಿಡುತ್ತಾ ನಿಂತಿದ್ದ ಹಳ್ಳಿಗರ ದೃಷ್ಟಿಪಥದಿಂದ–ರಾತ್ರಿಯು ಆರಂಭವಾಗುತ್ತಲೇ ಸೂರ್ಯನು ಕಣ್ಮರೆಯಾಗುವಂತೆ–ಶ್ರೀರಾಮನು ಮರೆಯಾದನು. ಶ್ರೀರಾಮನ ರಥವು ಬಹಳ ದೂರಕ್ಕೆ ಹೊರಟುಹೋಯಿತು. ಧನ-ಧಾನ್ಯಸಮೃದ್ಧವಾಗಿದ್ದ, ದಾನಿಗಳಾಗಿಯೂ–ಶೀಲವಂತರಾಗಿಯೂ ಇರುವ ಜನಸಮೂಹದಿಂದ ಭರಿತವಾಗಿದ್ದ, ಮಂಗಳಕರವಾಗಿದ್ದ, ಭಯರಹಿತವಾಗಿದ್ದ, ಬಹುರಮ್ಯವಾಗಿದ್ದ, ದೇವಾಧಿಷ್ಠಿತವಾದ ವೃಕ್ಷಗಳಿಂದಲೂ–ಯಜ್ಞಸ್ತಂಭಗಳಿಂದಲೂ ಸಮಾವೃತವಾಗಿದ್ದ, ಮಾವು-ಹಲಸು ಇವೇ ಮುಂತಾದ ಫಲವೃಕ್ಷಗಳಿಂದ ಕೂಡಿದ ವನಗಳಿಂದಲೂ ಶೋಭಾಯಮಾನವಾಗಿದ್ದ, ಅತಿರಮಣೀಯವಾದ ಜಲಾಶಯಗಳಿಂದ ಯುಕ್ತವಾಗಿದ್ದ, ತುಷ್ಟರಾಗಿಯೂ–ಪುಷ್ಟರಾಗಿಯೂ ಇದ್ದ ಜನರಿಂದ ಸಂಪನ್ನವಾಗಿದ್ದ, ಗೋಸಮೂಹಗಳಿಂದ ಸೇವಿಸಲ್ಪಡುತ್ತಿದ್ದ, ನರೇಂದ್ರರಿಂದ ಪ್ರತ್ಯೇಕ-ಪ್ರತ್ಯೇಕವಾಗಿ ಪಟ್ಟಣ-ಜನಪದ-ಗ್ರಾಮಗಳಾಗಿ ವಿಭಾಗಿಸಲ್ಪಟ್ಟು ರಕ್ಷಿಸಲ್ಪಡುತ್ತಿದ್ದ, ಅನವರತವಾದ ವೇದಗಳ ಘೋಷಗಳಿಂದ ಪ್ರತಿಧ್ವನಿಸುತ್ತಿದ್ದ ಕೋಸಲದೇಶವನ್ನು ಪುರುಷಸಿಂಹನಾದ ಶ್ರೀರಾಮನು ದಾಟಿದನು.

ಕೋಸಲದೇಶವನ್ನು ಬಿಟ್ಟು ಅರಣ್ಯಕ್ಕೆ ಹೋಗುವ ಮಧ್ಯಮಾರ್ಗದಲ್ಲಿ ಧೃತಿಮಂತರಲ್ಲಿ ಶ್ರೇಷ್ಠನಾದ ಶ್ರೀರಾಮನು ಸಂತೋಷಭರಿತವಾಗಿಯೂ, ಪೈರುಪಚ್ಚೆಗಳಿಂದ ಕಂಗೊಳಿಸುತ್ತಲೂ, ರಮ್ಯವಾದ ಉದ್ಯಾನವನಗಳಿಂದ ಸಮಾವೃತವಾಗಿಯೂ ಇದ್ದ–ಅನೇಕಸಾಮಂತರಾಜರಿಂದ ಪರಿಪಾಲಿಸಲ್ಪಡುತ್ತಿದ್ದ ರಾಜ್ಯಗಳ ಸೊಬಗನ್ನು ನೋಡುತ್ತಾ ಪ್ರಯಾಣಮಾಡಿದನು. ಹಾಗೆ ಪ್ರಯಾಣಮಾಡುತ್ತಿದ್ದ ಆ ಮಾರ್ಗದಲ್ಲಿ ಶ್ರೀರಾಮನು ಸ್ವರ್ಗ-ಮರ್ತ್ಯ-ಪಾತಾಳ–ಈ ಮೂರು ಲೋಕಗಳಲ್ಲಿಯೂ ಪ್ರವಹಿಸುವ ದೇವಲೋಕ ಸಂಭೂತಳಾದ, ಮಂಗಳಕರವಾದ ತೀರ್ಥದಿಂದ ಕೂಡಿರುವ, ಪಾಚಿಯಿಲ್ಲದ, ಋಷಿ-ಮಹರ್ಷಿಗಳಿಂದ ಸಂಸೇವಿತವಾದ, ಮಹಾಪುಣ್ಯವತಿಯಾದ ಗಂಗಾನದಿಯನ್ನು ನೋಡಿದನು. ಅತಿಸಮೀಪದಲ್ಲಿಯೇ ಧರ್ಮಸಂಪದ್ಯುಕ್ತವಾದ ಆಶ್ರಮಗಳಿಂದ ಸಮಲಂಕೃತವಾಗಿದ್ದ, ವಿಹಾರಕಾಲದಲ್ಲಿ ಆನಂದತುಂದಿಲರಾದ ಅಪ್ಸರೆಯರಿಂದ ಸೇವಿಸಲ್ಪಡುತ್ತಿದ್ದ, ಮಡುವುಗಳಿಂದ ಪೂರ್ಣವಾಗಿದ್ದ ಮಂಗಳಕರವಾದ ಗಂಗಾನದಿಯನ್ನು ಶ್ರೀರಾಮನು ಸಂದರ್ಶಿಸಿದನು. ದೇವ-ದಾನವ-ಗಂಧರ್ವ-ಕಿನ್ನರರ ಉಪಸ್ಥಿತಿಯಿಂದ ಶೋಭಾಯಮಾನವಾಗಿ ಕಾಣುತ್ತಿದ್ದ, ನಾಗಕನ್ಯೆಯರಿಂದಲೂ–ಗಂಧರ್ವರ ಪತ್ನಿಯರಿಂದಲೂ ಸೇವಿಸಲ್ಪಡುತ್ತಿದ್ದ ಯಾವಾಗಲೂ ಶುಭದಾಯಕಳಾದ ಗಂಗಾನದಿಯನ್ನು ಶ್ರೀರಾಮನು ಸಂದರ್ಶಿಸಿದನು. ದೇವಕ್ರೀಡಾಯೋಗ್ಯವಾದ ನೂರಾರು ಕ್ರೀಡಾಪರ್ವತಗಳಿಂದಲೂ, ನೂರಾರು ದೇವತೆಗಳ ಉದ್ಯಾನವನಗಳಿಂದಲೂ ಸಮಲಂಕೃತವಾಗಿದ್ದ, ದೇವತೆಗಳ ಸಲುವಾಗಿಯೇ ಆಕಾಶದಲ್ಲಿ ಪ್ರವಹಿಸುವ, ದೇವಭೋಗ್ಯವಾದ ಕಮಲಗಳಿಂದ ಕೂಡಿದ್ದ ತ್ರಿಲೋಕಪ್ರಸಿದ್ಧಳಾದ ಗಂಗಾನದಿಯನ್ನು ಶ್ರೀರಾಮನು ನೋಡಿದನು. ಶುಭಜಲವನ್ನು ಅಟ್ಟಹಾಸದಿಂದ ತೀರಕ್ಕೆ ಅಪ್ಪಳಿಸುತ್ತಾ ಒಮ್ಮೆ ಅತ್ಯುಗ್ರಳಾಗಿರುವಂತೆಯೂ–ಮತ್ತೊಮ್ಮೆ ನೊರೆಯಿಂದ ಕೂಡಿದವಳಾಗಿ ಮಂದಹಾಸದಿಂದ ನಗುತ್ತಿರುವಂತೆಯೂ–ಇಕ್ಕಟ್ಟಾದ ಪ್ರದೇಶದಲ್ಲಿ ವಕ್ರವಾಗಿ ಹರಿಯುತ್ತಾ ಸ್ತ್ರೀಯರ ಜಡೆಗಳಂತೆಯೂ ಪ್ರವಹಿಸುತ್ತಿದ್ದ, ಸುಳಿಗಳಿಂದ ಸುಶೋಭಿತಳಾಗಿದ್ದ ಗಂಗಾನದಿಯನ್ನು ಶ್ರೀರಾಮನು ನೋಡಿದನು. ಕೆಲವೆಡೆಗಳಲ್ಲಿ ಗಂಭೀರವಾಗಿಯೂ, ಕೆಲವೆಡೆಗಳಲ್ಲಿ ಅತ್ಯಂತವೇಗವಾಗಿಯೂ, ಕೆಲವೆಡೆಗಳಲ್ಲಿ ಮೃದಂಗ

ವಾದ್ಯಗಳ ಧ್ವನಿಯಂತೆ ಧ್ವನಿಮಾಡುತ್ತಲೂ, ಕೆಲವೆಡೆಗಳಲ್ಲಿ ಭಯಂಕರವಾಗಿ ಶಬ್ದಮಾಡುತ್ತಲೂ ಪ್ರವಹಿಸುತ್ತಿದ್ದ ಗಂಗಾದೇವಿಯನ್ನು ಶ್ರೀರಾಮನು ನೋಡಿದನು. ದೇವತೆಗಳ ಸಮೂಹದಿಂದ ಸ್ನಾನಮಾಡಲ್ಪಟ್ಟ ಶುಭಜಲವನ್ನು ಹೊಂದಿರುವ, ನಿರ್ಮಲವಾದ ಕನ್ನೈದಿಲೆಗಳಿಂದ ಪರಿಶೋಭಿಸುತ್ತಿರುವ, ಕೆಲವೆಡೆಗಳಲ್ಲಿ ಸಂಪೂರ್ಣವಾಗಿ ಮಳಲಿನಿಂದಲೇ ತುಂಬಿಹೋಗಿರುವ, ಕೆಲವೆಡೆಗಳಲ್ಲಿ ಪರಿಶುದ್ಧವಾದ ಮಳಲಿನಿಂದ ಶೋಭಾಯಮಾನವಾಗಿ ಕಾಣುತ್ತಿರುವ ದಿವ್ಯವಾದ ಗಂಗಾನದಿಯನ್ನು ಶ್ರೀರಾಮನು ನೋಡಿದನು. ಹಂಸ-ಸಾರಸಗಳೇ ಮುಂತಾದ ಪಕ್ಷಿಗಳ ನಿನಾದದಿಂದ ಕೂಡಿರುವ, ಚಕ್ರ ವಾಕಪಕ್ಷಿಗಳ ಮಧುರಧ್ವನಿಯಿಂದ ಕೂಡಿರುವ, ಮದಿಸಿದ ಇನ್ನೂ ಅನೇಕ ಪಕ್ಷಿಗಳ ಧ್ವನಿಯಿಂದ ಶಬ್ದಾಯಮಾನವಾದ ಗಂಗಾನದಿಯನ್ನು ಶ್ರೀರಾಮನು ನೋಡಿದನು. ಕೆಲವೆಡೆಗಳಲ್ಲಿ ತೀರಪ್ರದೇಶದಲ್ಲಿ ಬೆಳೆದ ವೃಕ್ಷಗಳ ಮಾಲೆ ಯಿಂದ ಸಮಲಂಕೃತಳಾಗಿದ್ದ, ಕೆಲವೆಡೆಗಳಲ್ಲಿ ಅರಳಿದ ಕನ್ನೈದಿಲೆಗಳಿಂದ ಶೋಭಾಯಮಾನವಾಗಿ ಕಾಣುತ್ತಿದ್ದ, ಕೆಲವೆಡೆಗಳಲ್ಲಿ ತಾವರೆಹೂಗಳ ಸಮೂಹಗಳಿಂದ ಕೆಂದಾವರೆಗಳ ಸಮೂಹದಿಂದ ಪರಿಶೋಭಿಸುತ್ತಿದ್ದ, ಕೆಲವೆಡೆಗಳಲ್ಲಿ ಹೂವಿನ ಮೊಗ್ಗುಗಳಿಂದ ಸಮಲಂಕೃತಳಾಗಿದ್ದ, ನಾನಾವಿಧ ವಾದ ಪುಷ್ಪಗಳ ಧೂಳಿಯಿಂದ ವ್ಯಾಪ್ತಳಾದ, ಮದಿಸಿದ ಸ್ತ್ರೀಯಂತೆಯೇ ಕಾಣುತ್ತಿದ್ದ ಗಂಗಾನದಿಯನ್ನು ಶ್ರೀರಾಮನು ನೋಡಿದನು. ತನ್ನಲ್ಲಿ ಸ್ನಾನ ಮಾಡುವ ಕೋಟಿ-ಕೋಟಿ ಜನರ ಪಾಪರಾಶಿಗಳನ್ನು ಹೋಗಲಾಡಿಸುವ ಸಾಮರ್ಥ್ಯವುಳ್ಳ, ನಿರ್ಮಲವಾದ ಸ್ಫಟಿಕಶಿಲೆಯಂತೆ ಸ್ವಚ್ಛವಾದ ನೀರಿನಿಂದ ಕೂಡಿರುವ, ಮದಿಸಿದ ಮತ್ತು ಶ್ರೇಷ್ಠವಾದ ದಿಗ್ಗಜಗಳಿಂದಲೂ–ಕಾಡಾನೆ ಗಳಿಂದಲೂ–ದೇವರಾಜನ ವಾಹನವಾದ ಐರಾವತಜಾತಿಯ ಆನೆ ಗಳಿಂದಲೂ ನಿನಾದಿತವಾದ, ಅರಣ್ಯಗಳಿಂದ ಆವೃತವಾದ ತೀರಪ್ರದೇಶವುಳ್ಳ ಗಂಗಾನದಿಯನ್ನು ಶ್ರೀರಾಮನು ನೋಡಿದನು. ನಾನಾವಿಧವಾದ ಫಲಭರಿತ ವಾದ ವೃಕ್ಷಗಳಿಂದಲೂ–ಪುಷ್ಪಭರಿತವಾದ ಲತೆಗಳಿಂದಲೂ–ಚಿಗುರೆಲೆಗಳಿದ್ದ ವೃಕ್ಷಗಳಿಂದಲೂ–ಲತಾಗುಲ್ಮಗಳಿಂದಲೂ ಆವೃತವಾಗಿದ್ದ, ಪಕ್ಷಿಗಳಿಂದ ವ್ಯಾಪ್ತವಾಗಿದ್ದ, ಶ್ರೇಷ್ಠವಾದ ಆಭರಣಗಳನ್ನು ಪ್ರಯತ್ನಪೂರ್ವಕವಾಗಿ

ತೊಟ್ಟಿರುವ ಭಾಮಿನಿಯಂತೆ ಪರಿಶೋಭಿಸುತ್ತಿದ್ದ ಗಂಗಾನದಿಯನ್ನು ಶ್ರೀರಾಮನು ನೋಡಿದನು. ವಿಷ್ಣುವಿನ ಪಾದದಿಂದ ಹುಟ್ಟಿದ, ದಿವ್ಯಳಾದ, ಪಾಪರಹಿತಳಾದ, ಮಿಂದವರ ಪಾಪಗಳನ್ನು ವಿನಾಶಗೊಳಿಸುವ ಗಂಗಾನದಿಯನ್ನು ಶ್ರೀರಾಮನು ನೋಡಿದನು.

ನೀರುಕಪಿಗಳಿಂದಲೂ, ಮೊಸಳೆಗಳಿಂದಲೂ, ಹಲವಾರು ಬಗೆಯ ಹಾವುಗಳಿಂದಲೂ ಸೇವಿಸಲ್ಪಡುತ್ತಿದ್ದ, ಭಗೀರಥನ ತಪಃಪ್ರಭಾವದಿಂದ ಶಂಕರನ ಜಟಾಜೂಟದಿಂದ (ಗಂಟುಹಾಕಿದ ಜಟೆಗಳ ಸಮೂಹದಿಂದ) ಹೊರಬಂದ ಪರಮಪಾವನೆಯಾದ ಗಂಗಾನದಿಯನ್ನು ಶ್ರೀರಾಮನು ನೋಡಿದನು. ಸಮುದ್ರರಾಜನ ಪತ್ನಿಯಾದ, ಸಾರಸ-ಕ್ರೌಂಚಪಕ್ಷಿಗಳಿಂದ ನಿನಾದಿತಳಾದ ಗಂಗಾನದಿಯನ್ನು ಶ್ರೀರಾಮನು ಶೃಂಗಬೇರಪುರದ ಕಡೆಗೆ ಹೋಗುತ್ತಿದ್ದಾಗ ಹಾದಿಯಲ್ಲಿ ನೋಡಿದನು. ಮೇಲಿಂದ ಮೇಲೆ ಬರುತ್ತಿದ್ದ ಅಲೆಗಳಿಂದಲೂ–ಸುಳಿಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದ ಪರಮಪವಿತ್ರವಾದ ಗಂಗಾನದಿಯನ್ನು* ನೋಡಿ ಮಹಾರಥನಾದ ಶ್ರೀರಾಮನು ಸುಮಂತ್ರನಿಗೆ ಹೇಳಿದನು :

"ಸುಮಂತ್ರ! ಇಂದು ಇಲ್ಲಿಯೇ ತಂಗೋಣ. ಈ ನದಿಯ ಸಮೀಪದಲ್ಲಿಯೇ ಬಹುಪುಷ್ಪಗಳಿಂದಲೂ, ಚಿಗುರೆಲೆಗಳಿಂದಲೂ ಕೂಡಿರುವ ಹೆಚ್ಚು ದೊಡ್ಡದಾದ ಇಂಗಳದ[1] ಮರವಿದೆ. ಆದುದರಿಂದ ನಾವಿಲ್ಲಿಯೇ ವಿಶ್ರಮಿಸಿಕೊಳ್ಳೋಣ. ದೇವ-ದಾನವ-ಗಂಧರ್ವರಿಂದಲೂ, ಮೃಗ-ಪಕ್ಷಿಗಳಿಂದಲೂ, ಮಾನವರಿಂದಲೂ ಸಮ್ಮಾನ್ಯವಾದ ನೀರಿನಿಂದ ಕೂಡಿರುವ, ಮಂಗಳ

---

* ಎಲ್ಲ ಕಾಲಗಳಲ್ಲಿಯೂ ಗಂಗೆಯು ಪವಿತ್ರಳು ಎಂಬುದನ್ನು ಮಹಾಭಾರತದಲ್ಲಿ ಸಮರ್ಥಿಸಿದ್ದಾರೆ. 'ಭುಕ್ತ್ವಾ ವಾ ಯದಿ ವಾಭುಕ್ತ್ವಾ ರಾತ್ರೌ ವಾ ಯದಿ ವಾ ದಿವಾ । ನ ಕಾಲನಿಯಮಃ ಕಶ್ಚಿದ್ಗಙ್ಗಾಂ ಪ್ರಾಪ್ಯ ಸರಿದ್ವರಾಮ್ ॥' ಊಟಮಾಡಿರಲಿ, ಉಪವಾಸದಿಂದಿರಲಿ, ಹಗಲಿನಲ್ಲಿಯಾಗಲೀ, ರಾತ್ರಿಯಲ್ಲಾಗಲೀ-ಗಂಗಾನದಿಯ ಬಳಿಗೆ ಬಂದ ಯಾತ್ರಿಕರು ಸ್ನಾನಾದಿಗಳನ್ನು ಮಾಡುವುದಕ್ಕೆ ಕಾಲನಿಯಮವಿಲ್ಲ.

[1] ಇಙ್ಗುದೀವೃಕ್ಷಃ = ಇಂಗಳದ ಮರ ಅಥವಾ ಗಾರೇಮರ. ಇಙ್ಗಂ = ರೋಗವನ್ನು, ದ್ಯತಿ = ನಾಶಗೊಳಿಸುತ್ತದೆ. (ದೋ-ಅವಖಂಡನೇ) ಈ ಮರಕ್ಕೆ ಅನೇಕ ರೋಗಗಳನ್ನು ಹೋಗಲಾಡಿಸುವ ಸಾಮರ್ಥ್ಯವಿರುವುದರಿಂದಲೇ ಇದಕ್ಕೆ ಇಙ್ಗುದೀವೃಕ್ಷವೆಂದು ಹೆಸರು ಬಂದಿದೆ. ಇಙ್ಗುದೀ ತಾಪಸತರುಃ (ಅಮರಃ)

ದಾಯಕವಾದ, ಎಲ್ಲ ನದಿಗಳೂ, ಶ್ರೇಷ್ಠವಾದ ಗಂಗಾನದಿಯನ್ನು ಸಂದರ್ಶಿಸೋಣ."

ರಾಘವನ ಮಾತುಗಳನ್ನು ಕೇಳಿ ಲಕ್ಷ್ಮಣ-ಸುಮಂತ್ರರು ಹಾಗೆಯೇ ಆಗಲೆಂದು ಹೇಳಿ ರಥದಲ್ಲಿದ್ದ ಸೀತಾ-ರಾಮರೊಡನೆ ಇಂಗಳಮರದ ಬಳಿಗೆ ಹೋದರು. ಇಕ್ಷ್ವಾಕುಕುಲನಂದನನಾದ ಶ್ರೀರಾಮನು ಬಹುರಮ್ಯವಾಗಿದ್ದ ಇಂಗಳಮರದ ಸಮೀಪದಲ್ಲಿ ಸೀತಾ-ಲಕ್ಷ್ಮಣರೊಡನೆ ರಥದಿಂದಿಳಿದನು. ಸುಮಂತ್ರನೂ ರಥದಿಂದಿಳಿದು ಕುದುರೆಗಳನ್ನು ಬಿಚ್ಚಿ ವೃಕ್ಷಮೂಲದಲ್ಲಿ ನಿಂತಿದ್ದ ಶ್ರೀರಾಮನ ಬಳಿಯಲ್ಲಿ ಬದ್ಧಾಂಜಲಿಯಾಗಿ ನಿಂತುಕೊಂಡನು.

ತತ್ರ ರಾಜಾ ಗುಹೋ ನಾಮ ರಾಮಸ್ಯಾತ್ಮಸಮಃ ಸಖಾ ।
ನಿಷಾದಜಾತ್ಯೋ ಬಲವಾನ್ಸ್ಥಪತಿಶ್ಚೇತಿ ವಿಶ್ರುತಃ ॥೩೩॥

ಶೃಂಗಬೇರಪುರದಲ್ಲಿ–ಶ್ರೀರಾಮನಿಗೆ ಪ್ರಾಣಸಮಾನನಾದ, ಪ್ರಿಯಸಖನಾದ, ಮಹಾಬಲಿಷ್ಠನಾದ, ನಿಷಾದಜಾತಿಯ ನಿಷಾದರಿಗೆ ಅಧಿಪತಿಯಾದ ಗುಹನೆಂಬ ಹೆಸರಿನಿಂದ ವಿಖ್ಯಾತನಾದ ರಾಜನಿದ್ದನು.* ಅವನು ಪುರುಷವ್ಯಾಘ್ರನಾದ ಶ್ರೀರಾಮನು ತನ್ನ ದೇಶಕ್ಕೆ ಆಗಮಿಸಿರುವನೆಂಬುದನ್ನು ಕೇಳಿ ವೃದ್ಧರಿಂದಲೂ, ಅಮಾತ್ಯರಿಂದಲೂ, ಜ್ಞಾತಿ-ಬಾಂಧವರಿಂದಲೂ ಪರಿವೃತನಾಗಿ ಶ್ರೀರಾಮನ ಬಳಿಗೆ ಆಗಮಿಸಿದನು. ಪ್ರಿಯಸಖನಾದ ಗುಹನು

---

* 'ರಾಮಸ್ಯ ಆತ್ಮಸಮಃ ಸಖಾ' ಗುಹನನ್ನು ಕುರಿತು ಹೇಳಿರುವ ಈ ಗುಣವಾಚಕಗಳು ಸ್ವಲ್ಪ ಜಿಜ್ಞಾಸೆಗಳಿಗೆ ಕಾರಣವಾಗಿದೆ. ಕೀಳುಜಾತಿಯವನೊಬ್ಬನು ರಾಮನಿಗೆ ಆತ್ಮಸಮನಾಗುವನೇ? 'ಹೀನಪ್ರೇಷ್ಯಂ ಹೀನಸಖ್ಯಂ ಹೀನಗೇಹನಿವೇಶನಮ್' ನೀಚಜಾತಿಯವರ ಸೇವೆಯೂ, ಸ್ನೇಹವೂ, ಅವರ ಮನೆಯಲ್ಲಿ ವಾಸವೂ ಉಪಪಾತಕಗಳೆನಿಸಿಕೊಳ್ಳುತ್ತವೆ–ಎಂಬ ಧರ್ಮಶಾಸ್ತ್ರದ ಉಕ್ತಿಯಂತೆ ಹೀನಜಾತಿಯವನೊಡನೆ ಸ್ನೇಹಬೆಳೆಸುವುದು ಉಪಪಾತಕವೆನಿಸುವುದು. ಧರ್ಮಾತ್ಮನಾದ ರಾಮನು ಹೀಗೆ ಮಾಡುವನೇ? ಇದಕ್ಕೆ ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ವಿಧವಾಗಿ ಸಮಾಧಾನಹೇಳುತ್ತಾರೆ. ೧) ತದ್ವಿಪ್ರವಿಷಯಂ = ಧರ್ಮಶಾಸ್ತ್ರದ ಉಕ್ತಿಯು ಬ್ರಾಹ್ಮಣರಿಗೆ ; ಕ್ಷತ್ರಿಯರಿಗಲ್ಲ. ೨) 'ರಾಜ್ಞಾಂ ಆಟವಿಕಬಲೇನ ಪ್ರಯೋಜನ ವತ್ವಾತ್ । ಷಡ್ವಿಧ ಬಲಸಂಗ್ರಹಸ್ಯ ರಾಜಧರ್ಮತ್ವಾಚ್ಚ ॥' ರಾಜರಿಗೆ ಅರಣ್ಯದಲ್ಲಿರುವ ಬೇಡರ ಸೈನ್ಯಗಳಿಂದಲೂ ಪ್ರಯೋಜನವಿರುವುದರಿಂದ ಮತ್ತು ಆರು ರೀತಿಯ ಬಲಸಂಗ್ರಹಮಾಡುವುದು ರಾಜಧರ್ಮವಾಗಿರುವುದರಿಂದ ರಾಮನು ಅಥವಾ ದಶರಥನು ಗುಹನ ಮೈತ್ರಿಯನ್ನು ಬೆಳೆಸಿದನು. ರಾಜಧರ್ಮಾನುಸಾರವಾಗಿ ಹೀಗೆ

ಪರಿವಾರಸಮೇತವಾಗಿ ತನ್ನನ್ನು ಕಾಣಲು ಬರುತ್ತಿರುವುದನ್ನು ಶ್ರೀರಾಮನು ದೂರದಿಂದಲೇ ನೋಡಿ, ಲಕ್ಷ್ಮಣನೊಡನೆ ತಾನೂ ಸ್ವಲ್ಪಮುಂದೆ ಹೋಗಿ ಗುಹನನ್ನು ಸಂಧಿಸಿದನು. ನಾರುಮಡಿಯನ್ನುಟ್ಟು ಬಂದಿರುವ ಶ್ರೀರಾಮ ನನ್ನು ನೋಡಿ ಗುಹನು ದುಃಖಿತನಾಗಿ ಶ್ರೀರಾಮನನ್ನು ಗಾಢವಾಗಿ ಆಲಿಂಗಿಸಿಕೊಂಡು ಹೇಳಿದನು :

ಯಥಾಯೋಧ್ಯಾ ತಥೇಯಂ ತೇ ರಾಮ ಕಿಂ ಕರವಾಣಿ ತೇ ॥೩೬॥

"ನಿನಗೆ ಅಯೋಧ್ಯೆಯು ಹೇಗೋ ಈ ಶೃಂಗಬೇರಪುರವೂ ಹಾಗೆಯೇ. ಕೋಸಲದೇಶವು ನಿನ್ನದಾಗಿರುವಂತೆ ಈ ರಾಜ್ಯವೂ ನಿನ್ನದೇ ಆಗಿರುವುದು. ಈಗ ನಾನು ನಿನಗಾಗಿ ಏನು ಮಾಡಬೇಕೆಂಬುದನ್ನು ಆಜ್ಞಾಪಿಸು. ಮಹಾಬಾಹುವೇ! ಇಂತಹ ಸಕಲಸದ್ಗುಣಸಂಪನ್ನನಾದ, ಪುರುಷಶ್ರೇಷ್ಠನಾದ, ಧರ್ಮಪ್ರಿಯನಾದ ಅತಿಥಿಯನ್ನು ಮಹಾಪುಣ್ಯವಿಶೇಷದಿಂದ ನಾನು ಪಡೆದೆನಲ್ಲದೇ ಮತ್ತಾರು ತಾನೇ ಪಡೆಯುವರು?"

ಹೀಗೆ ಹೇಳಿ ಗುಹನು ನಾನಾವಿಧವಾದ ಷಡ್ರಸೋಪೇತವಾದ ಭಕ್ಷ್ಯ-ಭೋಜ್ಯಾದಿಗಳನ್ನು ತರಿಸಿ, ಅರ್ಘ್ಯಪಾದ್ಯಾದಿಗಳನ್ನಿತ್ತು ಕೈಮುಗಿದುಕೊಂಡು ಹೇಳಿದನು :

ಮಾಡುವುದು ದೋಷವೆನಿಸುವುದಿಲ್ಲ. ೩) **'ನಿಷಾದಾನಾಂ ಭಗವದವತಾರಭೂತ- ಪೃಥುರಾಜಜನಕಬ್ರಾಹ್ಮಣಮಥಿತವೇನಶರೀರೋದ್ಭವತ್ವೇನ ಕ್ಷತ್ರಿಯತ್ವಾತ್'** ಪರಮಾತ್ಮನ ಅಂಶದಿಂದ ಹುಟ್ಟಿದ ಪೃಥುರಾಜನ ತಂದೆಯಾದ ವೇನರಾಜನ ಶರೀರವನ್ನು ಬ್ರಾಹ್ಮಣರು ಕಡೆದಾಗ ಪೃಥುವಿನೊಡನೆ ಹುಟ್ಟಿದ ನಿಷಾದರು ಕ್ಷತ್ರಿಯರಾದುದರಿಂದ (ನಿಷಾದರು ವೇನ ಶರೀರದಿಂದ ಉದ್ಭೂತರಾದ್ದರಿಂದ) ಇವರು ಕ್ಷತ್ರಿಯರೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಈ ಕಾರಣದಿಂದಲೇ **'ನಿಷಾದಸ್ಥಪತಿಂ ಯಾಜಯೇತ್'** ಎಂಬ ಶ್ರುತ್ಯನುಸಾರವಾಗಿ ನಿಷಾದನು ರಾಮನ ಭೋಜನಾರ್ಥವಾಗಿ ತಂದ ಆಹಾರವೂ ದೋಷಯುಕ್ತವಾಗುವುದಿಲ್ಲ. ಆದರೆ ಧರ್ಮಶಾಸ್ತ್ರದಲ್ಲಿ ಹೀನಜಾತಿಪ್ರಕರಣದಲ್ಲಿ ನಿಷಾದಜಾತಿಯನ್ನೂ ಸೇರಿಸಿರುವುದಕ್ಕೆ ಸಮಾಧಾನಹೇಳುತ್ತಾ ನಿಷಾದ ವಿಲೋಮಜರು ಹೀನಜಾತಿಯವರೆಂದು ಇಟ್ಟುಕೊಳ್ಳಬೇಕೆಂದು ಈ ವ್ಯಾಖ್ಯಾಕಾರರು ಹೇಳಿದ್ದಾರೆ. ೪) **'ನಿಷಾದಸ್ಥಪತಿಂ ಯಾಜಯೇತ್'** ಎಂಬ ವ್ಯಾಕ್ಯಾನುಸಾರವಾಗಿ ನಿಷಾದಸ್ಥಪತಿಗೆ ಯಜ್ಞಸಂಬಂಧವನ್ನು ಹೇಳಿರುವುದರಿಂದ ರಾಮನು ಗುಹನೊಡನೆ ಮೈತ್ರಿಯನ್ನು ಬೆಳೆಸಿದ್ದು ಅನುಚಿತವೆಂದು ಹೇಳಲಾಗುವುದಿಲ್ಲ.

ಸ್ವಾಗತಂ ತೇ ಮಹಾಬಾಹೋ ತವೇಯಮಖಿಲಾ ಮಹೀ ।
ವಯಂ ಪ್ರೇಷ್ಯಾ ಭವಾನ್ಭರ್ತಾ ಸಾಧು ರಾಜ್ಯಂ ಪ್ರಶಾಧಿ ನಃ ॥೩೮॥

“ಮಹಾಬಾಹುವೇ! ನಿನಗೆ ಸ್ವಾಗತವನ್ನು ಬಯಸುತ್ತೇನೆ. ಈ ಎಲ್ಲ

ಮೇಲಾಗಿ ಗುಹನು ಮಹಾಭಕ್ತನಾದುದರಿಂದ ಜಾತಿಯ ವಿವೇಚನೆಯನ್ನೇ ಮಾಡಬೇಕಾಗಿಲ್ಲ. **‘ನ ಶೂದ್ರಾ ಭಗವದ್ಭಕ್ತಾ ವಿಪ್ರಾ ಭಾಗವತಾಃ ಸ್ಮೃತಾಃ । ಸರ್ವ ವರ್ಣೇಷು ತೇ ಶೂದ್ರಾ ಯೇ ಹ್ಯಭಕ್ತಾ ಜನಾರ್ದನೇ॥’** ಯಾರು ಭಗವಂತನ ಭಕ್ತರೋ ಅವರೇ ಎಲ್ಲ ವರ್ಣಗಳಲ್ಲಿಯೂ ವಿಪ್ರರು ; ಯಾರು ಭಗವದ್ಭಕ್ತರಲ್ಲವೋ ಅವರೇ ಶೂದ್ರರು. **‘ರಾಮಸ್ಯಾತ್ಮಸಮಃ ಸಖಾ’** ಎಂದು ವಾಲ್ಮೀಕಿಗಳು ಹೇಳಿರುವುದಕ್ಕೆ ಕಡೆಯಲ್ಲಿ ಹೇಳಿರುವ ಈ ವ್ಯಾಖ್ಯಾನವೇ ಬಹಳ ಸಮಂಜಸವಾಗಿದೆ. ಗುಹನು ಭಗವದ್ಭಕ್ತನಾದುದರಿಂದಲೂ ಮತ್ತು ರಾಮನಂತೆಯೇ ಸದ್ಗುಣಸಂಪನ್ನನಾದುದರಿಂದಲೂ ರಾಮನ ಮೈತ್ರಿಗೆ ಸತ್ಪಾತ್ರನಾಗಿರುತ್ತಾನೆ. ಹೀನನಾತಿಯವನೊಡನೆ ಮೈತ್ರಿಯನ್ನು ಬೆಳೆಸುವುದು ಉಪಪಾತಕವೆನಿಸುವುದೆಂದು ಧರ್ಮಶಾಸ್ತ್ರದಲ್ಲಿ ಹೇಳಿದ್ದರೂ ಸಹ ಗುಹನು ರಾಜ ನಾಗಿರುವುದರಿಂದ ಜಾತಿಯ ಪ್ರಶ್ನೆಯು ಇಲ್ಲಿ ಉದ್ಭವಿಸುವುದಿಲ್ಲ. **‘ನಾ ವಿಷ್ಣುಃ ಪೃಥಿವೀಪತಿಃ’** ಎಂಬ ವಚನದಂತೆ ನಿಷಾದರಾಜನೂ ವಿಷ್ಣುವಿನ ಅಂಶದಿಂದ ಕೂಡಿದವನಾಗಿದ್ದಾನೆ. ಈ ಎರಡು ಕಾರಣಗಳಿಂದ ರಾಮನು ಗುಹನೊಡನೆ ಮಾಡಿದ ಮೈತ್ರಿಯು ಯಾವ ವಿಧದಲ್ಲಿಯೂ ದೋಷಾವಹವಲ್ಲ. **‘ಸ್ಥಪತಿಃ ಪುನಃ ಸ್ಥಾಪತ್ಯೇಽಧಿಪತೌ ತಕ್ಷಣಿ’** (ವೈಜಯನ್ತೀ)

ಭೂಮಿಯೂ ನಿನ್ನದೇ ಆಗಿರುವುದು. ನಾವೆಲ್ಲರೂ ನಿನ್ನ ಸೇವಕರಾಗಿದ್ದೇವೆ. ನೀನೇ ನಮ್ಮ ಪ್ರಭುವು. ನಮ್ಮ ಈ ರಾಜ್ಯವನ್ನು ಇನ್ನು ಮುಂದೆ ನೀನೇ ಪರಿಪಾಲಿಸು.

ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯ-ಪಾನೀಯಗಳು ನಿನಗಾಗಿ ಸಿದ್ಧ ವಾಗಿವೆ. ಪವಡಿಸಲು ಹಂಸತೂಲಿಕಾತಲ್ಪಗಳೂ ಸಿದ್ಧವಾಗಿವೆ. ಕುದುರೆಗಳಿಗೆ ಆಹಾರಸಾಮಾಗ್ರಿಗಳೂ ಸಿದ್ಧವಾಗಿವೆ.''

ಹೀಗೆ ಹೇಳಿದ ಗುಹನಿಗೆ ಶ್ರೀರಾಮನು ಯಥೋಚಿತವಾಗಿ ಉತ್ತರಿ ಸಿದನು :

“ಮಿತ್ರನೇ! ನೀನು ಕಾಲ್ನಡಿಗೆಯಲ್ಲಿ ಪರಿವಾರಸಮೇತನಾಗಿ ನನ್ನನ್ನು ಕಾಣಲು ಬಂದಿರುವುದರಿಂದಲೂ, ನಮ್ಮ ಮೇಲೆ ನಿನಗಿರುವ ಪ್ರೇಮಾತಿ ಶಯವನ್ನು ತೋರಿದುದರಿಂದಲೂ–ನಾವು ನಿನ್ನಿಂದ ಬಹುಮಾನಿತ ರಾಗಿದ್ದೇವೆ ಮತ್ತು ಬಹಳ ಸಂತುಷ್ಟರೂ ಆಗಿದ್ದೇವೆ'' ಹೀಗೆ ಹೇಳುತ್ತಾ ಶ್ರೀರಾಮನು ತನ್ನ ಪುಷ್ಟವಾಗಿದ್ದ ತೋಳುಗಳಿಂದ ಗುಹನನ್ನು ಬಾಚಿ ತಬ್ಬಿಕೊಂಡು ಪುನಃ ಹೇಳಿದನು :

“ಗುಹ! ಆರೋಗ್ಯದೃಢಕಾಯನಾಗಿಯೂ, ಬಂಧು-ಬಾಂಧವರೊಡ ಗೂಡಿಯೂ ಆಗಮಿಸಿರುವ ನಿನ್ನನ್ನಿಂದು ಭಾಗ್ಯವಿಶೇಷದಿಂದ ಕಾಣುತ್ತಿದ್ದೇನೆ. ರಾಜ್ಯದಲ್ಲಿ ಕಾಲ-ಕಾಲಕ್ಕೆ ಮಳೆ-ಬೆಳೆಗಳಾಗುತ್ತಾ ನಿನ್ನ ಪ್ರಜೆಗಳು ಕುಶಲಿ ಗಳಾಗಿರುವರಲ್ಲವೇ? ನಿನ್ನ ಮಿತ್ರರೂ ಕುಶಲಿಗಳಾಗಿರುವರಲ್ಲವೇ? ನಿನ್ನ ಕೋಶದಲ್ಲಿ ಸಂಪತ್ತಿನ ಸಮೃದ್ಧಿಯಿರುವುದಲ್ಲವೇ? ನೀನು ಪ್ರೀತಿಪೂರ್ವಕ ವಾಗಿ ಸಿದ್ಧಗೊಳಿಸಿರುವ ಭಕ್ಷ್ಯ-ಭೋಜ್ಯಾದಿಗಳನ್ನು ನಾನು ಅಂಗೀಕರಿಸಿ ದ್ದೇನೆ. ಆದರೆ ಅವನ್ನು ನಾನು ಪ್ರತಿಗ್ರಹಿಸಲಾರೆನು. ನೀನು ನೋಡುತ್ತಿರು ವಂತೆಯೇ ನಾನು ದರ್ಭೆ, ನಾರು ಮತ್ತು ಕೃಷ್ಣಾಜಿನಗಳಿಂದ ಸಿದ್ಧವಾದ ಬಟ್ಟೆಯನ್ನು ಉಟ್ಟಿದ್ದೇನೆ. ತಂದೆಯ ಆಜ್ಞೆಯನ್ನು ಪರಿಪಾಲಿಸುವ ಧರ್ಮ ದಲ್ಲಿ ನಿಯುಕ್ತನಾಗಿರುವ ನಾನು ಕಂದ-ಮೂಲ-ಫಲಗಳನ್ನು ಮಾತ್ರವೇ ತಿನ್ನುತ್ತೇನೆ. ಈಗ ನಾನು ಅರಣ್ಯದಲ್ಲಿ ಸಂಚರಿಸುವ ತಾಪಸನೆಂದು ತಿಳಿ. ಈಗ ನಾನು ನಿನ್ನಿಂದ ಕುದುರೆಗಳಿಗೆ ಬೇಕಾದ ಆಹಾರವನ್ನು ಮಾತ್ರವೇ ಯಾಚಿಸುತ್ತೇನೆ. ಅದೊಂದುಳಿದು ಬೇರಾವ ವಸ್ತುವೂ ನನಗೆ ಬೇಕಾಗಿಲ್ಲ.

ಅಶ್ವಗ್ರಾಸಪ್ರದಾನದಿಂದಲೇ ನಾನು ನಿನ್ನಿಂದ ಚೆನ್ನಾಗಿ ಪೂಜಿಸಲ್ಪಟ್ಟವನಾಗುತ್ತೇನೆ. ನನ್ನ ತಂದೆಯಾದ ದಶರಥನಿಗೆ ಈ ಕುದುರೆಗಳೆಂದರೆ ಅತಿಶಯವಾದ ಪ್ರೀತಿ. ಆದುದರಿಂದ ಈ ಕುದುರೆಗಳಿಗೆ ಆಹಾರವನ್ನು ಒದಗಿಸುವುದರಿಂದಲೇ ನಾನು ತೃಪ್ತಿಹೊಂದುತ್ತೇನೆ.”

ಶ್ರೀರಾಮನು ಹೀಗೆ ಹೇಳುತ್ತಲೇ ಗುಹನು ಸೇವಕರನ್ನು ಕರೆದು ಕುದುರೆಗಳಿಗೆ ಯಥೇಚ್ಛವಾಗಿ ಹುಲ್ಲನ್ನೂ ನೀರನ್ನೂ ಒದಗಿಸುವಂತೆ ಆಜ್ಞೆ ಮಾಡಿದನು.*

ಅನಂತರ ಶ್ರೀರಾಮನು ನಾರುಮಡಿಯನ್ನು ಉತ್ತರೀಯವನ್ನಾಗಿ ಹೊದೆದು ಸಾಯಂಸಂಧ್ಯೋಪಾಸನೆಯನ್ನು ಮಾಡಿ ಲಕ್ಷ್ಮಣನು ತಂದ ತೀರ್ಥವನ್ನೇ ಆಹಾರರೂಪವಾಗಿ ಸೇವನೆಮಾಡಿದನು. ಭಾರ್ಯೆಯಾದ ಸೀತೆಯೊಡನೆ ಭೂಮಿಯ ಮೇಲೆ ಹಾಸಿದ್ದ ಎಲೆಯ ಹಾಸಿಗೆಯಲ್ಲಿ ಮಲಗಲು ಹೊರಟಿದ್ದ ಶ್ರೀರಾಮನ ಕಾಲುಗಳನ್ನು ಲಕ್ಷ್ಮಣನು ತೊಳೆದನು. ಬಳಿಕ ಶ್ರೀರಾಮನು ಆಚಮನಮಾಡಿ ಆ ಪರ್ಣತಲ್ಪದಲ್ಲಿ ಸೀತೆಯೊಡನೆ ಮಲಗಿದನು. ಲಕ್ಷ್ಮಣನು ಸಮೀಪದಲ್ಲಿದ್ದ ಮರದ ಬಳಿಗೆ ಹೋಗಿ ಅದರ ಕೆಳಗಡೆ ಧನುಸ್ಸನ್ನು ಹಿಡಿದು ನಿಂತನು. ಧನುರ್ಧರನಾದ ನಿಷಾದರಾಜನೂ, ಸೂತನಾದ ಸುಮಂತ್ರನೊಡನೆ ಲಕ್ಷ್ಮಣನ ಬಳಿಗೆ ಬಂದು ಶ್ರೀರಾಮನ ಗುಣ

---

* ರಾಮಾಯಣದಲ್ಲಿ ಬಂದಿರುವ ಈ ಪ್ರಕರಣವು ಬಹಳ ಮಹತ್ತ್ವಪೂರಿತವಾದುದು. ರಾಜ್ಯ-ಕೋಶಗಳನ್ನೇ ಗುಹನು ರಾಮನಿಗೆ ಅರ್ಪಿಸಲು ಬಂದರೂ—ಪರಂಧಾಮನಾದ ಶ್ರೀರಾಮನು ಸ್ವೀಕರಿಸದೇ ಕುದುರೆಗಳಿಗೆ ಬೇಕಾದ ಹುಲ್ಲನ್ನು ಮಾತ್ರವೇ ಪರಮಾದರದಿಂದ ಸ್ವೀಕರಿಸಿ ಪರಮತುಷ್ಟನಾದನು. ಕುದುರೆಗಳಿಗೆ ಬೇರೆಡೆಯಲ್ಲಿ ಹುಲ್ಲು ಸಿಕ್ಕದೇ ಇರಲಿಲ್ಲ. ಅಥವಾ ಗುಹನು ಬಂದು ಕುದುರೆಗಳಿಗೆ ಹುಲ್ಲನ್ನೊದಗಿಸುವನೆಂಬ ಆಶಯವೂ ರಾಮನಿಗಿರಲಿಲ್ಲ. ಹುಲ್ಲನ್ನಾದರೂ ಸ್ವೀಕರಿಸಿ ಗುಹನಿಗೆ ಸಂತೋಷವನ್ನುಂಟುಮಾಡಬೇಕೆಂಬುದೇ ರಾಮನ ಆಶಯವಾಗಿತ್ತು. ಅದಕ್ಕೆ ಅನುಗುಣವಾಗಿ ಗುಹನೂ ತೃಣಸಮರ್ಪಣದಿಂದಲೇ ಆತ್ಮತೃಪ್ತಿಯನ್ನು ಹೊಂದಿದನು. ಆದುದರಿಂದ ಪರಮಾತ್ಮನಿಗೆ ಬೇಕಾದುದು ನಿಶ್ಚಲಭಕ್ತಿಯೇ ಹೊರತು ಆಡಂಬರದ ಪೂಜೆಯಲ್ಲವೆಂಬುದನ್ನು ಈ ಪ್ರಕರಣದಿಂದ ಬಹುಸ್ಪಷ್ಟವಾಗಿ ತಿಳಿಯಬಹುದಾಗಿದೆ.

ಕಥನಗಳನ್ನು ಮಾಡುತ್ತಾ ಜಾಗರೂಕತೆಯಿಂದ ಶ್ರೀರಾಮನನ್ನು ರಕ್ಷಿಸುತ್ತಿದ್ದನು.

ತರಗೆಲೆಗಳ ಹಾಸಿಗೆಯ ಮೇಲೆ ಮಲಗಿದ್ದ, ಯಶೋವಂತನಾದ,



ಏಕಾಗ್ರಚಿತ್ತನಾದ, ಮಹಾತ್ಮನಾದ, ದುಃಖವೆಂಬುದನ್ನೇ ಎಂದೂ ಕಾಣದಿದ್ದ, ಸುಖಪಡಲು ಯೋಗ್ಯನಾದ ದಶರಥನ ಪುತ್ರನಿಗೆ ಆ ರಾತ್ರಿಯು ನಿಧಾನವಾಗಿ ಕಳೆಯಿತು.*

ಽ೦ನೆಯ ಸರ್ಗವು ಮುಗಿಯಿತು.

---

* ನಿದ್ರೆಯು ಬಾರದಿದ್ದರೆ ರಾತ್ರಿಯು ಬಹು ದೀರ್ಘವಾಗಿರುವಂತೆಯೂ, ನಿದ್ರೆಯು ಬಂದರೆ ಬಹಳ ಬೇಗ ಕಳೆದಂತೆಯೂ ಭಾಸವಾಗುತ್ತದೆ.

ಗುಹನೊಡನೆ ಲಕ್ಷ್ಮಣನ ವಿಲಾಪ

ತಂ ಜಾಗ್ರತಮದಮ್ಭೇನ ಭ್ರಾತುರರ್ಥಾಯ ಲಕ್ಷ್ಮಣಮ್ ।
ಗುಹಃ ಸಂತಾಪಸಂತಪ್ತೋ ರಾಘವಂ ವಾಕ್ಯಮಬ್ರವೀತ್ ॥೧॥

ಅಣ್ಣನಾದ ಶ್ರೀರಾಮನ ರಕ್ಷಣೆಗಾಗಿ ಸ್ವಾಭಿಮಾನವನ್ನು ತೊರೆದು ಸಹಜವಾದ ವಿಶ್ವಾಸದಿಂದ ಜಾಗ್ರತನಾಗಿ ನಿಂತಿದ್ದ ಲಕ್ಷ್ಮಣನನ್ನು ನೋಡಿ ಸಂತಾಪದಿಂದ ಸಂತಪ್ತನಾಗಿದ್ದ ಗುಹನು ಹೇಳಿದನು :

“ರಾಜಪುತ್ರ! ಲಕ್ಷ್ಮಣ! ಸುಖಾವಹವಾದ ಈ ತರಗೆಲೆಗಳ ಹಾಸಿ ಗೆಯು ನಿನಗಾಗಿ ಸಿದ್ಧವಾಗಿದೆ. ನೀನೂ ಈ ಹಾಸಿಗೆಯಲ್ಲಿ ಸುಖದಿಂದ ವಿಶ್ರಮಿಸಿಕೊಳ್ಳಬಹುದು. ಕ್ಲೇಶಕರವಾದ ಈ ಪಹರೆಯ ಕಾರ್ಯಮಾಡಲು ಸದಾ ಅರಣ್ಯದಲ್ಲಿಯೇ ಇರುವ ಈ ಜನರು (ಬೇಡರು) ಯೋಗ್ಯರಾಗಿರು ವರು. ನೀನು ರಾಜಪುತ್ರನಾಗಿರುವುದರಿಂದ ಸುಖಪಡಲು ಯೋಗ್ಯನಾಗಿ ರುವೆ. ಈ ವಿಧವಾದ ಕಷ್ಟವನ್ನು ನೀನೆಂದೂ ಅನುಭವಿಸಿದವನಲ್ಲ. ಶ್ರೀರಾಮನ ರಕ್ಷಣಾರ್ಥವಾಗಿ ನಾನಿಂದು ಈ ರಾತ್ರಿಯನ್ನು ಜಾಗರಣೆಯಿಂದ ಕಳೆಯುತ್ತೇನೆ. ಲಕ್ಷ್ಮಣ! ನನಗೆ ಈ ಪ್ರಪಂಚದಲ್ಲಿಯೇ ಶ್ರೀರಾಮನಿಗಿಂತಲೂ ಪ್ರಿಯರಾದವರು ಮತ್ತಾರೂ ಇರುವುದಿಲ್ಲ. ಈ ಮಾತನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ. ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ. ಇವನ ಅನುಗ್ರಹದಿಂದಲೇ ನಾನು ಲೋಕದಲ್ಲಿ ಮಹತ್ತರವಾದ ಯಶಸ್ಸನ್ನು ಅಪೇಕ್ಷಿಸಿದ್ದೇನೆ. ಅಪಾರವಾದ ಧರ್ಮವನ್ನೂ ಇವನ ಸೇವೆಯಿಂದಲೇ ಪಡೆಯಲು ಬಯಸಿದ್ದೇನೆ. ಪುಷ್ಕಳವಾದ ಐಶ್ವರ್ಯವೂ ಇವನ ಅನುಗ್ರಹ ದಿಂದಲೇ ನನಗೆ ಲಭಿಸಬೇಕಾಗಿದೆ. ಆದುದರಿಂದ ಪ್ರಿಯತಮೆಯಾದ ಸೀತೆ ಯೊಡನೆ ಮಲಗಿರುವ ಶ್ರೀರಾಮನನ್ನು ನಾನು ಧನುರ್ಧಾರಿಯಾಗಿ ನನ್ನ ಜ್ಞಾತಿ-ಬಾಂಧವರೊಡನೆ ಸರ್ವಪ್ರಕಾರದಿಂದಲೂ ರಕ್ಷಿಸುತ್ತೇನೆ. ಈ ಅರಣ್ಯದಲ್ಲಿ ಸರ್ವದಾ ಸಂಚಾರಮಾಡುತ್ತಿರುವ ನನಗೆ ತಿಳಿಯದಿರುವ ಪ್ರದೇಶವೇ ಇಲ್ಲ. ಅತ್ಯಂತ ಬಲಿಷ್ಠವಾದ ಚತುರಂಗಬಲವೇ ಬಂದರೂ ನಾವದನ್ನು ಪರಾಜಯಗೊಳಿಸುತ್ತೇವೆ.”

ಅದಕ್ಕೆ ಲಕ್ಷ್ಮಣನು ಹೇಳಿದನು :

“ನಿಷಾದರಾಜನೇ! ಅನಘನೇ! ಧರ್ಮೈಕದೃಷ್ಟಿಯುಳ್ಳ ನಿನ್ನಿಂದ ಸಂರಕ್ಷಿಸಲ್ಪಡುವ ನಾವು ಈ ಅರಣ್ಯದಲ್ಲಿ ಭಯಪಡುವ ಕಾರಣವಿಲ್ಲ. ಭಯದ ಕಾರಣದಿಂದ ನಾನು ರಾಮನಿಗೆ ಕಾವಲಾಗಿ ನಿಂತಿಲ್ಲ.

ಕಥಂ ದಾಶರಥೌ ಭೂಮೌ ಶಯಾನೇ ಸಹ ಸೀತಯಾ ।
ಶಕ್ಯಾ ನಿದ್ರಾ ಮಯಾ ಲಬ್ಧುಂ ಜೀವಿತಂ ವಾ ಸುಖಾನಿ ವಾ ॥೯॥

ದಶರಥರಾಜನ ಮಗನಾದ ಶ್ರೀರಾಮನು ರಾಜಕುಮಾರಿಯಾದ ಸೀತೆಯೊಡನೆ ಒರಟಾದ ತರಗೆಲೆಗಳ ಹಾಸಿಗೆಯಲ್ಲಿ ಮಲಗಿರುವಾಗ ನಾನು ಹೇಗೆ ನಿದ್ರೆಮಾಡಲಿ? ಹೇಗೆ ಸುಖಪಡಲಿ? ಹೇಗೆ ಜೀವಿಸಲಿ?

ದೇವಾಸುರರೆಲ್ಲರೂ ಒಟ್ಟಾಗಿ ಬಂದು ಯುದ್ಧಮಾಡಿದರೂ ಯಾವ ನಮ್ಮ ಶ್ರೀರಾಮನನ್ನು ಪರಾಜಯಗೊಳಿಸಲು ಸಾಧ್ಯವಿಲ್ಲವೋ–ಅಂತಹ ಮಹಾಪರಾಕ್ರಮಿಯು ರಾಜಕುಮಾರಿಯಾದ ಸೀತೆಯೊಡನೆ ಹುಲ್ಲಿನ ಹಾಸಿಗೆಯ ಮೇಲೆ ಸುಖವಾಗಿ ಮಲಗಿರುವುದನ್ನಾದರೂ ನೋಡು. ಯಾವ ರಾಮನು ನಮ್ಮ ತಂದೆಯು ಮಾಡಿದ ಮಂತ್ರಪುನಶ್ಚರಣೆಗಳಿಂದಲೂ, ತಪಸ್ಸಿನಿಂದಲೂ, ವಿಧ-ವಿಧವಾದ ಯಜ್ಞಗಳನ್ನು ಮಾಡಿದ ಪರಿಶ್ರಮ ದಿಂದಲೂ ಮಗನಾಗಿ ಹುಟ್ಟಿದನೋ–ಅಂತಹ ಶ್ರೀರಾಮನೊಬ್ಬನೇ ನಮ್ಮ ತಂದೆಗೆ ಸದೃಶವಾದ ಲಕ್ಷಣಗಳುಳ್ಳವನು ಮತ್ತು ಬಹಳ ಇಷ್ಟನಾದವನು. ಅಂತಹವನಿಂದು ಈ ಹುಲ್ಲಿನ ಹಾಸಿಗೆಯಲ್ಲಿ ಮಲಗಿದ್ದಾನೆ. ಶ್ರೀರಾಮನು ಅಯೋಧ್ಯೆಯಿಂದ ಹೊರಟುಬಂದಿರುವುದರಿಂದ ನಮ್ಮ ತಂದೆಯು ಹೆಚ್ಚು ಕಾಲ ಜೀವಿಸಿರಲಾರನು. ಇದರಿಂದಾಗಿ ಭೂದೇವಿಯು ಬಹಳ ಬೇಗ ವಿಧವೆಯಾಗುವುದು ನಿಜ. ರಾಮನು ಅರಣ್ಯಕ್ಕೆ ಪ್ರಯಾಣಮಾಡಲಾಗಿ ಅಂತಃಪುರದ ಸ್ತ್ರೀಯರು ಗಟ್ಟಿಯಾಗಿ ಬಹಳ ಹೊತ್ತಿನವರೆಗೂ ಗೋಳಾಡು ತ್ತಿದ್ದು ಆಯಾಸದಿಂದ ಅಳುವನ್ನು ನಿಲ್ಲಿಸಿರುವರು. ಈ ಕಾರಣದಿಂದ ಶ್ರೀರಾಮನ ಅರಮನೆಯು ಈ ವೇಳೆಗೆ ನಿಶ್ಶಬ್ದವಾಗಿರಬಹುದೆಂದು ಭಾವಿಸುತ್ತೇನೆ. ಕೌಸಲ್ಯೆ, ದಶರಥ ಮತ್ತು ನಮ್ಮ ತಾಯಿ ಸುಮಿತ್ರೆ–ಇವರು ಇದುವರೆಗೂ ಜೀವಿಸಿರುವರೆಂದು ನಾನು ಭಾವಿಸುವುದಿಲ್ಲ. ಒಂದು ವೇಳೆ

ಜೀವಿಸಿದ್ದರೂ ಈ ರಾತ್ರಿಯು ಕಳೆಯುವವರೆಗೆ ಬದುಕಿರಬಹುದು. ಶತ್ರುಘ್ನನನ್ನಾದರೂ ನೋಡಿಕೊಂಡು ನನ್ನ ತಾಯಿಯಾದರೂ ಜೀವಿಸಿದ್ದಾಳು. ಆದರೆ ಏಕಮಾತ್ರಪುತ್ರನಾದ ಶ್ರೀರಾಮನ ವಿಯೋಗದುಃಖವನ್ನು ಸಹಿಸಲಾರದೇ ವೀರಮಾತೆಯಾದ ಕೌಸಲ್ಯೆಯಂತೂ ಪ್ರಾಣತೊರೆಯುವುದರಲ್ಲಿ ಸಂಶಯವೇ ಇಲ್ಲ. ರಾಜನಲ್ಲಿಯೇ ಅನುರಕ್ತರಾದ ಜನರಿಂದ ವ್ಯಾಪ್ತವಾಗಿದ್ದ, ಸುಖವಾಗಿದ್ದ ಮತ್ತು ಸಕಲಪ್ರಜೆಗಳಿಗೂ ಸಂತೋಷವನ್ನುಂಟುಮಾಡುತ್ತಿದ್ದ ಆ ಅಯೋಧ್ಯಾಪಟ್ಟಣವು ಶ್ರೀರಾಮನ ವಿಯೋಗ ವ್ಯಸನದಿಂದಲೂ, ರಾಜನ ಮರಣವ್ಯಸನದಿಂದಲೂ ವಿನಾಶಹೊಂದುತ್ತದೆ. ಮಹಾತ್ಮನಾದ ಮತ್ತು ಅತ್ಯಂತಪ್ರಿಯನಾದ ಜ್ಯೇಷ್ಠಪುತ್ರನನ್ನು ಕಾಣದ ರಾಜನ ಶರೀರವನ್ನು ಅವನ ಪ್ರಾಣಗಳು ಹೇಗೆತಾನೇ ಧರಿಸಿರುತ್ತವೆ? ರಾಜನು ಮರಣಹೊಂದಿದರೆ ಅವನ ಹಿಂದೆಯೇ ಕೌಸಲ್ಯೆಯೂ ಪ್ರಾಣ ತ್ಯಾಗಮಾಡುತ್ತಾಳೆ. ಅವಳ ಹಿಂದೆಯೇ ನನ್ನ ತಾಯಿಯಾದ ಸುಮಿತ್ರೆಯೂ ಮರಣವನ್ನಪ್ಪುತ್ತಾಳೆ. ಶ್ರೀರಾಮನಿಗೆ ರಾಜ್ಯಭಾರವನ್ನು ವಹಿಸಿಕೊಡಲಾಗದೇ, ಮನೋರಥವು ಕೈಗೂಡದೇ ನಮ್ಮ ತಂದೆಯು– 'ಅತಿಕ್ರಾನ್ತಮತಿಕ್ರಾನ್ತಂ–ಅಯ್ಯೋ! ಕಳೆದುಹೋಯಿತು ; ರಾಮನಿಗೆ ಪಟ್ಟಾಭಿಷೇಕವಾಗಬೇಕಾಗಿದ್ದ ಸುದಿನವು ಕಳೆದುಹೋಯಿತು'–ಎಂಬ ಕೊರಗಿನಲ್ಲಿಯೇ ಸತ್ತುಹೋಗುತ್ತಾನೆ. ಅಂತಹ ಕಾಲವೇನಾದರೂ ಸನ್ನಿಹಿತವಾದರೆ ಪೂರ್ವಯೋಜನೆಯ ಪ್ರಕಾರ ಅರ್ಥಸಿದ್ಧಿಯನ್ನು ಪಡೆದವರು (ಭರತಾದಿಗಳು) ಮರಣಹೊಂದಿದ ನಮ್ಮ ತಂದೆಯನ್ನು ಪ್ರೇತಕಾರ್ಯಗಳಿಂದ ಸಂಸ್ಕಾರಮಾಡುತ್ತಾರೆ. ಇದರ ಪರಿಣಾಮವಾಗಿ ಅವರು ರಾಜ್ಯವನ್ನು ಪಡೆದು ನಾಲ್ಕು ಬೀದಿಗಳು ಸೇರುವ ರಮ್ಯವಾದ ಚೌಕಗಳಿಂದಲೂ, ಒಂದೇ ಸಮನಾಗಿರುವ ಮತ್ತು ನೇರವಾಗಿರುವ ಹೆದ್ದಾರಿಗಳಿಂದಲೂ, ಧನಿಕರ ಭವ್ಯಸದನಗಳಿಂದಲೂ, ದೇವತೆಗಳ ಮತ್ತು ರಾಜರ ಪ್ರಾಸಾದಗಳಿಂದಲೂ, ಶ್ರೇಷ್ಠರಾದ ವೇಶ್ಯೆಯರಿಂದಲೂ, ರಥಗಳಿಂದಲೂ, ಕುದುರೆಗಳಿಂದಲೂ ಮತ್ತು ಆನೆಗಳಿಂದಲೂ, ಮಂಗಳವಾದ್ಯಗಳ ನಿನಾದದಿಂದಲೂ, ಸರ್ವತ್ರ ವ್ಯಾಪ್ತವಾಗಿರುವ ಮಂಗಳಕಾರ್ಯಗಳಿಂದಲೂ, ಹೃಷ್ಟರಾಗಿಯೂ–ಪುಷ್ಟರಾಗಿಯೂ ಇರುವ ಜನಸ್ತೋಮದಿಂದಲೂ, ಉಪವನಗಳಿಂದಲೂ,

ಸಾಮಾಜಿಕವಾದ ಅನೇಕ ಉತ್ಸವಸಮಾರಂಭಗಳಿಂದಲೂ ಸಂಪನ್ನವಾಗಿರುವ ಆ ನನ್ನ ತಂದೆಯ ರಾಜಧಾನಿಯಾದ ಅಯೋಧ್ಯಾಪಟ್ಟಣದಲ್ಲಿ ಸುಖಿಗಳಾಗಿ ಸಂಚರಿಸುತ್ತಾರೆ.

ಗುಹ! ಇದಕ್ಕೆ ಬದಲಾಗಿ ಅಷ್ಟು ಕಾಲದವರೆಗೂ ಪುತ್ರವಿಯೋಗದ ದುಃಖವನ್ನು ಸಹಿಸಿಕೊಂಡು ರಾಜನು ಬದುಕಿರುವನೇ? ನಾವಾದರೂ ಅರಣ್ಯದಿಂದ ಹಿಂದಿರುಗಿ ಬಂದು ಮಹಾತ್ಮನಾದ, ಸುವ್ರತನಾದ, ಕುಶಲಿಯಾದ ದಶರಥನನ್ನು ಪುನಃ ಕಾಣುವೆವೇ? ಸತ್ಯಪ್ರತಿಜ್ಞನಾದ ಶ್ರೀರಾಮನೊಡನೆ ನಾವು ವನವಾಸವನ್ನು ಮುಗಿಸಿಕೊಂಡು ಈ ಅಯೋಧ್ಯಾಪಟ್ಟಣವನ್ನು ಪುನಃ ಪ್ರವೇಶಿಸುವೆವೇ?"

ದುಃಖಪೀಡಿತನಾಗಿದ್ದ ಮಹಾತ್ಮನಾದ ಲಕ್ಷ್ಮಣನಿಗೆ–ದುಃಖದ ಆಧಿಕ್ಯದಿಂದ ಗುಹನೊಡನೆ ಹೀಗೆ ವಿಲಪಿಸುತ್ತಿರುವಾಗಲೇ–ಆ ರಾತ್ರಿಯು ಕಳೆದೇಹೋಯಿತು. ನರೇಂದ್ರಪುತ್ರನಾದ, ಪ್ರಜೆಗಳಿಗೆ ಹಿತನಾದ ಲಕ್ಷ್ಮಣನು ಸತ್ಯವಾದ ಮಾತುಗಳನ್ನು ಹೇಳುತ್ತಿರುವಾಗ ದಶರಥನಲ್ಲಿ ಮತ್ತು ಶ್ರೀರಾಮನಲ್ಲಿ ಅಪಾರವಾದ ಸ್ನೇಹವನ್ನು ಹೊಂದಿದ್ದ ಗುಹನು ಮಹಾವ್ಯಸನ ದಿಂದ ಪೀಡಿತನಾಗಿ–ಜ್ವರದಿಂದ ಪರಿತಪಿಸುತ್ತಿರುವ ಆನೆಯು ಕಣ್ಣೀರನ್ನು ಸುರಿಸುವಂತೆ–ಕಂಬನಿಗರೆದನು.

೫೧ನೆಯ ಸರ್ಗವು ಮುಗಿಯಿತು.

೨ನೆಯ ಸಂಪುಟವು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಓಂ ತತ್ಸತ್

ಪರಿಶಿಷ್ಟ

(ಒಂದನೇ ಸಂಪುಟದಿಂದ ಮುಂದುವರಿದಿದೆ.)

ಶ್ರೀರಂಗಸದ್ಗುರವೇ ನಮಃ

ಪಾಯಸದ ಪ್ರಕರಣ

ಆದಿಕಾವ್ಯವಾದ ಶ್ರೀಮದ್ರಾಮಾಯಣದ ಬಾಲಕಾಂಡದಲ್ಲಿ ಶ್ರೀರಾಮಾವತಾರಕ್ಕೆ ಹಿನ್ನೆಲೆಯಾಗಿ–'ಪಾಯಸಪ್ರದಾನ'–ಎಂಬ ವಿಶಿಷ್ಟ ವಾದ ಪ್ರಸಂಗ ಬರುತ್ತದೆ. ಈ ಪ್ರಕರಣವು ವಿದ್ವಾಂಸರಿಗೆ ಒಂದು ಸಮಸ್ಯೆಯಾಗಿದೆ. ಅದರ ಬಗೆಗೆ ತಮಗೆ ಸಾಧ್ಯವಾದಷ್ಟು ಕೂಲಂಕಷವಾಗಿ ವಿಚಾರಮಾಡಿ ಅವರು ತಮ್ಮ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಅವುಗಳನ್ನು ಇಲ್ಲಿ ಸಂಕ್ಷೇಪವಾಗಿ ವಿಮರ್ಶಿಸಿ ವಿಚಾರಮಥನದ ಫಲಿತಾಂಶವನ್ನು ಮುಂದಿಡಲು ಪ್ರಯತ್ನಿಸಲಾಗಿದೆ.

೧) ಪಾಯಸದ ಪ್ರದಾನ : ಅದರ ಸಂದರ್ಭ

ಪಾಯಸಪ್ರದಾನ ಎಂದರೆ ಪಾಯಸವನ್ನು ವಿತರಣೆಮಾಡುವುದು–ವಿಶೇಷದೃಷ್ಟಿಯಿಂದ ಕೊಡುವುದು. ಅದನ್ನು ಹಾಗೆ ಕೊಟ್ಟವರು ಯಾರು? ತೆಗೆದುಕೊಂಡವರು ಯಾರು? ಯಾವ ಸಂದರ್ಭದಲ್ಲಿ ಈ ಘಟನೆ ನಡೆಯಿತು? ಎಂಬುದನ್ನು ಮೊದಲು ತಿಳಿಯಬೇಕು. ಕಥಾಭಾಗವು ಪ್ರಸಿದ್ಧ ವಾಗಿದ್ದರೂ ಪ್ರಕೃತಕ್ಕೆ ಸಂಬಂಧಪಟ್ಟಂತೆ ಆ ವಿಷಯಗಳನ್ನೂ ಇಲ್ಲಿ ಸ್ಮರಿಸ ಬೇಕಾಗುತ್ತದೆ.

ದಶರಥಮಹಾರಾಜನ ಪ್ರಾರ್ಥನೆಯಂತೆ ಮಹರ್ಷಿಗಳಾದ ಋಷ್ಯಶೃಂಗರು ರಾಜನು ಮಾಡಿದ ಅಶ್ವಮೇಧಮಹಾಯಜ್ಞದ ಕೊನೆ ಯಲ್ಲಿ–'ಅವನಿಗೆ ಸತ್ಪುತ್ರರು ಹುಟ್ಟಲಿ' –ಎಂಬ ಆಶಂಸನೆಯಿಂದ 'ಪುತ್ರೇಷ್ಟಿ' ಎಂಬ ಹೋಮವನ್ನು ಮಾಡುತ್ತಾರೆ. ಆಗ ಯಜ್ಞದಲ್ಲಿ ಹವಿರ್ಭಾಗಗಳನ್ನು ಸ್ವೀಕರಿಸಲು ಅಲ್ಲಿ ನೆರೆದಿದ್ದ ದೇವತೆಗಳು ಮಹಾವಿಷ್ಣುವನ್ನು ಶರಣುಹೊಂದಿ–'ನೀನೇ ಈ ಮಹಾರಾಜನಿಗೆ ಅವನ ಮೂವರು ಪತ್ನಿಯರಲ್ಲಿ ನಾಲ್ಕು ಪುತ್ರರ ರೂಪದಲ್ಲಿ ಅವತಾರಮಾಡಬೇಕು. ಬ್ರಹ್ಮದೇವರ ವರದಿಂದ ಕೊಬ್ಬಿ ಲೋಕಕಂಟಕನಾಗಿರುವ ಲಂಕೇಶ ರಾಕ್ಷಸಾಧಿಪತಿ ರಾವಣನನ್ನು ಸಂಹರಿಸಿ ನಮ್ಮನ್ನು ಕಾಪಾಡಬೇಕು'–ಎಂದು

ಪ್ರಾರ್ಥಿಸುತ್ತಾರೆ. ಭಗವಂತನು 'ಹಾಗೆಯೇ ಆಗಲಿ'–ಎಂದು ಅವರಿಗೆ ಅಭಯನೀಡಿ ಅಂತರ್ಧಾನಹೊಂದುತ್ತಾನೆ.

ಆಗ ಆ ಯಜ್ಞದ ಅಗ್ನಿಯಿಂದ ಒಂದು ಪರಮಾದ್ಭುತವಾದ ದಿವ್ಯ ಭೂತವು ಎದ್ದು ಬರುತ್ತದೆ. ಅದರ ಕೈಯಲ್ಲಿ ದಿವ್ಯಪಾಯಸದಿಂದ ಕೂಡಿದ ಒಂದು ಸ್ವರ್ಣಪಾತ್ರೆ ಇರುತ್ತದೆ. ಅದು 'ಧನ್ಯವೂ ಆರೋಗ್ಯವರ್ಧನವೂ ಆದ ದಿವ್ಯಪಾಯಸವನ್ನು ತೆಗೆದುಕೊಂಡು ಇದನ್ನು ನಿನ್ನ ಪತ್ನಿಯರಿಗೆ ಕೊಡು. ಇದರ ಸೇವನೆಯಿಂದ ಅವರು ಯೋಗ್ಯರಾದ ಪುತ್ರರನ್ನು ಪಡೆಯುತ್ತಾರೆ'–ಎಂದು ಹೇಳಿ ಅವನಿಗೆ ದೇವತಾಪ್ರಸಾದವನ್ನಿತ್ತು ಮಾಯಹೊಂದುತ್ತದೆ.

ಇದಂ ತು ನೃಪಶಾರ್ದೂಲ ಪಾಯಸಂ ದೇವನಿರ್ಮಿತಮ್ ।
ಪ್ರಜಾಕರಂ ಗೃಹಾಣ ತ್ವಂ ಧನ್ಯಮಾರೋಗ್ಯವರ್ಧನಮ್ ।
ಭಾರ್ಯಾಣಾಮನುರೂಪಾಣಾಮಶ್ನಿತೇತಿ ಪ್ರಯಚ್ಛ ವೈ ।
ತಾಸು ತ್ವಂ ಲಪ್ಸ್ಯಸೇ ಪುತ್ರಾನ್ ಯದರ್ಥಂ ಯಜಸೇ ನೃಪ ॥

ಅಂತೆಯೇ ದಶರಥನು ಆ ಸಂತೋಷಸಮಾಚಾರವನ್ನು ತನ್ನ ಮಹಿಷಿಯರಿಗೆ ತಿಳಿಸಿ ಅವರಿಗೆ ಆ ಪಾಯಸವನ್ನು ವಿತರಣೆಮಾಡುತ್ತಾನೆ. ಅವರು ಗರ್ಭವನ್ನು ಧರಿಸಿ ಸಕಾಲದಲ್ಲಿ ಮಹಾವಿಷ್ಣುವಿನ ಅಂಶಸಂಭೂತ ರಾದ ಪುತ್ರರನ್ನು ಪಡೆಯುತ್ತಾರೆ. ಅವರೇ ಶ್ರೀರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರು–ಎಂದು ಶ್ರೀಮದ್ರಾಮಾಯಣವು ಹೇಳುತ್ತದೆ.

ಇಲ್ಲಿ ಉದ್ಭವಿಸುವ ಪ್ರಶ್ನೆಗಳು ಎರಡು. ಪಾಯಸವನ್ನು ಸೇವಿಸುವು ದಕ್ಕೂ ಪುತ್ರೋತ್ಪತ್ತಿಗೂ ಏನು ಸಂಬಂಧ? ಎಂಬುದು ಒಂದು. ಪಾಯಸದ ವಿತರಣೆಯ ವಿಭಾಗ ಹೇಗೆ? ಅದು ಪುತ್ರರ ವಿಶಿಷ್ಟವಾದ ಮಹಿಮೆಗೆ ಕಾರಣವಾಯಿತೇ? ಎಂಬುದು ಮತ್ತೊಂದು.

೨) ಪಾಯಸಪ್ರದಾನ ಮತ್ತು ಪುತ್ರೋತ್ಪತ್ತಿ–ಇವುಗಳ ಸಂಬಂಧ

ಲೋಕದಲ್ಲಿ ನಾವು ಗಮನಿಸಿರುವಂತೆ ಸಂತಾನವನ್ನು ಮುಂದು ವರಿಸಿಕೊಳ್ಳುವ ಇಷ್ಟವೂ ಮತ್ತು ಯೋಗ್ಯತೆಯೂ ಸಾಮಾನ್ಯವಾಗಿ ಎಲ್ಲ ಜೀವಿಗಳಲ್ಲಿಯೂ ಕಂಡುಬರುತ್ತದೆ. ತಂದೆ-ತಾಯಿಗಳ ಶುಕ್ಲ-ಶೋಣಿತಗಳ ಸಂಯೋಗದಿಂದ ಗರ್ಭವು ಉತ್ಪತ್ತಿಯಾಗಿ ಅನುಕೂಲಸನ್ನಿವೇಶದಲ್ಲಿ

ಬೆಳೆಯುತ್ತದೆಯೆಂದು ಶಾಸ್ತ್ರವನ್ನು ಬಲ್ಲವರು ಹೇಳುತ್ತಾರೆ. ಇದು ವೈಜ್ಞಾನಿಕವಾದ ಸತ್ಯ. ಪಾಯಸದ ಸ್ವೀಕರಣೆಯ ಪಾತ್ರ ಇಲ್ಲಿ ಏನೂ ಇರುವುದಿಲ್ಲ. ಹಾಗೆಯೇ ವ್ರತಗಳ ಆಚರಣೆಯಿಂದ ಸಂತಾನಲಾಭವಾಗುತ್ತದೆಯೆಂಬುದನ್ನೂ ಒಂದು ಅಂಧವಿಶ್ವಾಸ ಎಂದು ಕೆಲವರು ಹೇಳುತ್ತಾರೆ.

ಆದರೆ ಮೇಲೆ ಹೇಳಿರುವುದು ಸಾಮಾನ್ಯನಿಯಮವಾದರೂ ದೇವತಾ ಶಕ್ತಿಗಳ ವಿಶೇಷಸಂಕಲ್ಪಶಕ್ತಿಯಿಂದ ಇತರ ರೀತಿಗಳಲ್ಲಿಯೂ ಕೆಲವೊಮ್ಮೆ ಸೃಷ್ಟಿಯು ಆಗುವುದು ಸಾಧ್ಯ–ಎಂಬುದನ್ನು ನಾವು ವೇದ-ಪುರಾಣ-ಇತಿಹಾಸಗಳಲ್ಲಿ ನೋಡುತ್ತೇವೆ. ಯಜುರ್ವೇದದ ಆರಣ್ಯಕದಲ್ಲಿ ಬರುವ ವೈಖಾನಸ ಮತ್ತು ವಾಲಖಿಲ್ಯರ[1] ಸೃಷ್ಟಿಯು ಈ ರೀತಿಯಲ್ಲಿ ವಿಚಿತ್ರವಾಗಿದೆ. ಸನಕಾದಿಗಳು ಬ್ರಹ್ಮದೇವರ ಮಾನಸಪುತ್ರರು.[2] ನಾರದರು ಬ್ರಹ್ಮದೇವರ ತೊಡೆಯಿಂದಲೂ–ದಕ್ಷಪ್ರಜಾಪತಿಯು ಅವರ ಅಂಗುಷ್ಠದಿಂದಲೂ[3] ಹುಟ್ಟಿದರೆಂಬ ಹೇಳಿಕೆಗಳನ್ನು ಶ್ರೀಮದ್ಭಾಗವತದಲ್ಲಿ ನೋಡುತ್ತೇವೆ. ವೇನ ಎಂಬುವನ ತೊಡೆಯನ್ನು ಕಡೆದಾಗ ನಿಷಾದನೂ[4] ಹಸ್ತವನ್ನು ಕಡೆದಾಗ ಪೃಥು ಮತ್ತು ಅರ್ಚಿ[5] ಎಂಬುವರೂ ಜನಿಸಿದರು ಎಂದೂ ಈ ಗ್ರಂಥವು ಹೇಳುತ್ತದೆ. ಜಾಂಬವಂತನು ಬ್ರಹ್ಮದೇವರ ಮುಖದಿಂದ[6] ಹುಟ್ಟಿದನು ಎಂದು ಶ್ರೀಮದ್ರಾಮಾಯಣವು ಹೇಳುತ್ತದೆ. ಮಿಥುನಧರ್ಮದಿಂದ ಪ್ರಜೆಗಳು ಹುಟ್ಟುವ ಸಾಮಾನ್ಯವಾದ ವಿಧಾನವನ್ನು ದಕ್ಷಪ್ರಜಾಪತಿಯು[7] ಪ್ರಾರಂಭಿಸಿದನು ಎಂದು ಹೇಳುತ್ತವೆ. ಇತಿಹಾಸ - ಪುರಾಣಗಳು

---

[1] ಯೇ ನಖಾಃ ತೇ ವೈಖಾನಸಾಃ । ಯೇ ವಾಲಾಃ ತೇ ವಾಲಖಿಲ್ಯಾಃ ॥
ತೈ. ಆ. I-91

[2] ಮನಸಾನ್ಯಾನ್ ಸಮಾಸೃಜತ್ ಸನಕಂ ಚ ಸನನ್ದಂ ಚ ಸನಾತನಮಥಾತ್ಮಭೂಃ ।
ಸನತ್ಕುಮಾರಂ ಚ ಮುನೀನ್ ನಿಷ್ಕ್ರಿಯಾನೂರ್ಧ್ವರೇತಸಃ ॥ ಭಾಗವತ III 2/4

[3] ಉತ್ಸಙ್ಗಾನ್ನಾರದೋ ಜಜ್ಞೇ ದಕ್ಷೋಽಙ್ಗುಷ್ಠಾತ್ ಸ್ವಯಮ್ಭುವಃ
ಭಾಗವತ III 2-23

[4] ಮಮಂಥುರೂರುಂ ತರಸಾ ತತ್ರಾಸೀದ್ಬಾಹುಕೋ ನರಃ । ಭಾಗ IV 1-43

[5] ಬಾಹುಭ್ಯಾಂ ಮಥ್ಯಮಾನಾಭ್ಯಾಂ ಮಿಥುನಂ ಸಮಪದ್ಯತ ॥ ಭಾಗ IV 15-1

[6] ಜೃಮ್ಭಮಾಣಸ್ಯ ಸಹಸಾ ಮಮ ವಕ್ತ್ರಾದಜಾಯತ ॥ ರಾಮಾ. ಬಾಲ. 17-7

[7] ತ್ವತ್ತೋಽಧಸ್ತಾತ್ ಪ್ರಜಾಃ ಸರ್ವಾಃ ಮಿಥುನೀಭೂಯ ಮಾಯಯಾ
ಭಾಗ VI 4 -53

ಮುಂತಾದುವು ಹೇಳುವ ಈ ವಿಚಿತ್ರವಾದ ಸೃಷ್ಟಿಯ ಪ್ರಕ್ರಿಯೆಯು ನಮಗೆ ಅರ್ಥವಾಗುವುದಿಲ್ಲ–ಎಂದಷ್ಟು ಹೇಳಬಹುದೇ ಹೊರತು ಅದು ಅಸಂಭವ, ಅಸಾಧ್ಯ ಎಂದು ಹೇಳಲಾಗುವುದಿಲ್ಲ.

ಸಂತಾನದ ಉತ್ಪತ್ತಿಯಾಗುವುದು ಕೆಲವು ಶಕ್ತಿಗಳ ವಿಶಿಷ್ಟವಾದ ಸೇರುವಿಕೆಯಿಂದ. ಅವು ಕುರುಡುಶಕ್ತಿಗಳಲ್ಲ ; ಜಡದ್ರವ್ಯಗಳಲ್ಲ ; ಚೇತನ ಗಳು. ಅವುಗಳನ್ನು ದೇವತೆಗಳು ಎಂದು ಕರೆಯುತ್ತಾರೆ. ಅವುಗಳು ಜೀವಿಗಳ ಕ್ಷೇತ್ರ (ದೇಹ) ಗಳಲ್ಲಿ ಅನುಪ್ರವೇಶವನ್ನು ಮಾಡಿರದೇ ಇದ್ದರೆ ಅಥವಾ ಮಾಡದೇ ಇದ್ದರೆ ಸಂತಾನರೂಪವಾದ ಸೃಷ್ಟಿಯ ವಿಕಾಸವು ಸಾಧ್ಯವಾಗು ವುದಿಲ್ಲ. ಆ ಚೈತನ್ಯಶಕ್ತಿಗಳು ತಮ್ಮ ಸಂಕಲ್ಪದಿಂದ ಮಿಥುನಧರ್ಮದಿಂದ ಭಿನ್ನವಾದ ಬೇರೆ ಕೆಲವು ಯೋಗಗಳಿಂದಲೂ ಸಂತಾನವನ್ನುಂಟುಮಾಡ ಬಹುದು. ಆದರೆ ಇಂತಹ ಯೋಗವು ಉಂಟಾಗುವುದಕ್ಕೆ ವಿಶೇಷವಾದ ಪ್ರಯತ್ನವು ಆವಶ್ಯಕ. ಆದುದರಿಂದ ವಿಶೇಷಸಂದರ್ಭಗಳಲ್ಲಿ ಮಾತ್ರವೇ ಅವು ಅಂತಹ ವಿಚಿತ್ರಯೋಗಗಳನ್ನು ಉಂಟುಮಾಡುತ್ತವೆ. ಅವುಗಳನ್ನು ಸಾಮಾನ್ಯನಿಯಮಕ್ಕೆ ಅಪವಾದಗಳು ಎಂದು ಕರೆಯಬಹುದು.

ಗರ್ಭವನ್ನು ಉಂಟುಮಾಡುವುದಕ್ಕೆ ದೇವತಾಶಕ್ತಿಗಳ ಆವಶ್ಯಕತೆ ಯಿರುವುದರಿಂದಲೇ ವೇದಗಳಲ್ಲಿ–'ಗರ್ಭಂ ದೇಹಿ ಸಿನೀವಾಲಿ, ಗರ್ಭಂ ದೇಹಿ ಸರಸ್ವತಿ'–'ಓ ಸಿನೀವಾಲಿಯೇ! ಗರ್ಭವನ್ನು ಧರಿಸಿ ಪೋಷಿಸು, ಓ ಸರಸ್ವತಿಯೇ! ಗರ್ಭವನ್ನು ಧರಿಸಿ ಪೋಷಿಸು.' ಇತ್ಯಾದಿ ಅರ್ಥದ ಪ್ರಾರ್ಥನೆಗಳನ್ನು ಕೇಳುತ್ತೇವೆ. ಈ ಪ್ರಾರ್ಥನೆಯನ್ನು ಮಾಡದೇ ಇದ್ದರೂ ಸಂತಾನಗಳು ಉಂಟಾಗುತ್ತವೆಯಲ್ಲಾ? ಎಂದು ಕೇಳಬಹುದು. ಆದರೆ ಮೇಲ್ಕಂಡ ಪ್ರಾರ್ಥನೆಯನ್ನು ಮಾಡಿದಾಗ ಕಾರಣಸಹಿತವಾಗಿ ಕಾರ್ಯವನ್ನು ತೆಗೆದುಕೊಂಡ ವಿವೇಕವು ಪ್ರಕಟವಾಗುತ್ತದೆ ಮತ್ತು ಸಂತಾನಕ್ಕೆ ದೇವತೆಗಳ ವಿಶೇಷವಾದ ಆಶೀರ್ವಾದವು ಲಭಿಸುತ್ತದೆ.

'ದೇವತೆಗಳಿಗೇ ಆದರೂ ಪ್ರಕೃತಿನಿಯಮವನ್ನು ಮೀರಿ ಮಿಥುನ ಧರ್ಮವಿಲ್ಲದೇ ಸೃಷ್ಟಿಯನ್ನು ಮಾಡಲು ಸಾಧ್ಯವೇ?'–ಎಂದು ಪ್ರಶ್ನೆ ಮಾಡಿದಾಗ– 'ಆ ಶಕ್ತಿಗಳಿಗೆ ಅಸಾಧ್ಯವೆಂಬುದೇ ಯಾವುದೂ ಇಲ್ಲ'–ಎಂದು ಮಹಾಗುರುಗಳು ಅಪ್ಪಣೆಕೊಡಿಸಿದ್ದರು.

"ಈ ಪಾಯಸವನ್ನು ಅಥವಾ ಚರುವನ್ನು ಸೇವಿಸು. ಈ ಕ್ಷೀರವನ್ನು ಅಥವಾ ಫಲವನ್ನು ಸೇವಿಸು. ನಿನಗೆ ಒಳ್ಳೆಯ ಸಂತಾನವು ಉಂಟಾಗುತ್ತದೆ"–ಎಂದು ಆಶೀರ್ವಾದಪೂರ್ವಕವಾಗಿ ದೇವತೆಗಳು ಅಥವಾ ಸಿದ್ಧಪುರುಷರು ಪ್ರಸಾದವನ್ನು ಕೊಟ್ಟರು–ಎಂದು ಪುರಾಣಗಳಲ್ಲಿ ಕೇಳುತ್ತೇವೆ. ಈ ದ್ರವ್ಯಗಳು ಸಂತಾನದ ಉತ್ಪತ್ತಿಗೆ ಹೇಗೆ ಕಾರಣವಾಗುತ್ತವೆ–ಎಂಬುದನ್ನು ಎರಡು ರೀತಿಗಳಲ್ಲಿ ವಿಶ್ಲೇಷಣೆ ಮಾಡಬಹುದು.

೧) ಸಂತತಿಗೆ ಕಾರಣಗಳಾದ ದೇವತಾಶಕ್ತಿಗಳು ತಾವೇ ಆ ದ್ರವ್ಯಗಳ ಮೂಲಕ ಗರ್ಭವನ್ನು ಪ್ರವೇಶಿಸಬಹುದು.

೨) ಶ್ರೇಷ್ಠವಾದ ಸಂತಾನವನ್ನು ಧರಿಸುವುದಕ್ಕೋಸ್ಕರ ಕ್ಷೇತ್ರವನ್ನು ಆ ದ್ರವ್ಯಗಳು ಶುದ್ಧಿಪಡಿಸಬಹುದು. ದಶರಥನು ತನ್ನ ಪತ್ನಿಯರಿಗೆ ಕೊಟ್ಟ ದೇವತಾಪ್ರಸಾದರೂಪವಾದ ಪಾಯಸದ್ರವ್ಯವು ಈ ಎರಡು ವಿಧಾನಗಳಲ್ಲಿ ಯಾವುದರ ಮೂಲಕ ಫಲಪ್ರದವಾಯಿತು ಎಂಬುದನ್ನು ವಿಚಾರ ಮಾಡಬೇಕು.

೧) ಪಾಯಸವೇ ಮಹಾವಿಷ್ಣು.

ಇದಕ್ಕೆ ಆಧಾರವಾಗಿ ತತ್ತ್ವಸಂಗ್ರಹರಾಮಾಯಣದಲ್ಲಿ ಹೀಗೆ ಹೇಳಿದೆ :

ತೇನ ಸಂಪೂಜಿತಃ ಶ್ರೀದೋ ವರದೋ ಹೃಷ್ಟಮಾನಸಃ ।
ಸವ್ಯಾಂಗಸ್ಥಶ್ರಿಯಾ ಸಾರ್ಧಂ ಶಙ್ಖಚಕ್ರಾಭಯಾಙ್ಕಿತಃ ॥೭೬॥

ಶ್ರೀವತ್ಸಕೌಸ್ತುಭೋರಸ್ಕೋ ವನಮಾಲಾವಿರಾಜಿತಃ ।
ಶುದ್ಧಜಾಮ್ಬೂನದಪ್ರಖ್ಯಃ ಸರ್ವಾಭರಣಭೂಷಿತಃ ॥೭೭॥

ಪೀತಾಮ್ಬರಧರಃ ಸ್ರಗ್ವೀ ಚತುರ್ಬಾಹುರುದಾರಧೀಃ ।
ತಸ್ಮಿನ್ನಾವಿರಭೂದಗ್ನೌ ಯಜ್ಞೇ ನಾರಾಯಣಃ ಸ್ವಯಮ್ ॥೭೮॥

ಯಾಗದಿಂದ ಪೂಜಿತನಾಗಿ, ಎಲ್ಲ ವಿಧವಾದ ಮಂಗಳಗಳನ್ನು ಕೊಡುವವನೂ, ವರದನೂ ಆದ ಶ್ರೀಮನ್ನಾರಾಯಣನು ಸಂತುಷ್ಟಹೃದಯನಾಗಿ ಯಜ್ಞಕುಂಡದ ಮಧ್ಯದಿಂದ ಆವಿರ್ಭವಿಸಿದನು. ಅವನ ಎಡಭಾಗದಲ್ಲಿ ಪಾಯಸವನ್ನು ಹಿಡಿದು ಲಕ್ಷ್ಮಿಯಿದ್ದಳು. ಅವನ ಹೃದಯದಲ್ಲಿ ಶ್ರೀವತ್ಸವೆಂಬ

ಚಿಹ್ನೆಯೂ, ಕೌಸ್ತುಭಮಣಿಯೂ, ವನಮಾಲೆಯೂ ವಿರಾಜಿಸುತ್ತಿದ್ದುವು. ಚತುರ್ಭುಜಗಳಲ್ಲಿ ಶಂಖ-ಚಕ್ರ-ಗದೆ ಮತ್ತು ಅಭಯಮುದ್ರೆಗಳನ್ನು ಹೊಂದಿದ್ದ ಪೀತಾಂಬರಧಾರಿಯಾಗಿದ್ದ, ಶ್ರೀಹರಿಯು–

ತ್ವದಾತ್ಮಜಃ ಸಮಾಸಾದ್ಯ ಕರಿಷ್ಯೇ ಗಾಮರಕ್ಷಸಾಮ್ ।

"ನಿನ್ನ ಮಗನಾಗಿ ಹುಟ್ಟಿ ಭೂಮಿಯನ್ನು ರಾಕ್ಷಸರಹಿತವನ್ನಾಗಿ ಮಾಡುವೆನು"–ಎಂದು ಹೇಳಿ–

ಲಕ್ಷ್ಮೀಹಸ್ತಸ್ಥಿತಂ ಶುಭ್ರಂ ಪಾರ್ಥಿವಾಯ ದದೌ ಹರಿಃ ॥

ಲಕ್ಷ್ಮಿಯ ಕೈಯಲ್ಲಿದ್ದ ಶುಭ್ರವಾದ ಪಾಯಸದ ಪಾತ್ರೆಯನ್ನು ಹರಿಯು ದಶರಥನಿಗೆ ಕೊಟ್ಟನು.

ಹೀಗೆ ಕೆಲವು ವಿದ್ವಾಂಸರ ಅಭಿಪ್ರಾಯದಂತೆ ಪ್ರಾಜಾಪತ್ಯಪುರುಷನು ದಶರಥಮಹಾರಾಜನಿಗೆ ಅನುಗ್ರಹಮಾಡಿಕೊಟ್ಟ ದಿವ್ಯಪಾಯಸವು ಸಾಕ್ಷಾತ್ ಮಹಾವಿಷ್ಣುಸ್ವರೂಪವೇ ಆಗಿತ್ತು. ಆ ಪಾಯಸದ ಪಾತ್ರೆಯನ್ನು ಧರಿಸಿಬಂದ ಮಹಾಭೂತವೂ ಕೂಡ ಮಹಾವಿಷ್ಣುವೇ. ಬ್ರಹ್ಮಸ್ವರೂಪವಾದ ಆ ಪಾಯಸವನ್ನು ಧರಿಸುವ ಶಕ್ತಿ ಪರಬ್ರಹ್ಮಸ್ವರೂಪನಾದ ಮಹಾವಿಷ್ಣುವಿಗೆ ಮಾತ್ರವೇ ಉಂಟು. ಅವನನ್ನು ಬಿಟ್ಟು ಬೇರೆ ಯಾರಿಗೂ ಇಲ್ಲ. ಇದರಂತೆ ಶ್ರೀರಾಮಾದಿಗಳ ಜನನಕ್ಕೆ ದಿವ್ಯಪಾಯಸವೇ ಉಪಾದಾನಕಾರಣ. ಮಹಾಭಾರತದ ಕಥೆಯಲ್ಲಿ ಪಾಂಡವರು ಹೇಗೆ ಮಂತ್ರವೀರ್ಯದಿಂದ ಆಹ್ವಾನಿಸಲ್ಪಟ್ಟ ಇಂದ್ರಾದಿದೇವತೆಗಳಿಂದ ಜನಿಸಿದರೋ–ಹಾಗೆಯೇ ಶ್ರೀರಾಮಾದಿಗಳು ಯಜ್ಞದ ಫಲವಾಗಿ ದೊರೆತ ದಿವ್ಯಪಾಯಸದ ಪ್ರಭಾವದಿಂದಲೇ ಅವತಾರಹೊಂದಿದರು.

ಇದಲ್ಲದೇ ಪಾಯಸವನ್ನು ಸ್ವೀಕರಿಸಿದೊಡನೆಯೇ ಸಾರ್ವಭೌಮನ ಮಹಿಷಿಯರು ಗರ್ಭವನ್ನು ಧರಿಸಿದರು.

ತತಸ್ತು ತಾಃ ಪ್ರಾಶ್ಯ ತದುತ್ತಮಸ್ತ್ರಿಯಃ
ಮಹೀಪತೇರುತ್ತಮಪಾಯಸಂ ಪೃಥಕ್ ।
ಹುತಾಶನಾದಿತ್ಯಸಮಾನತೇಜಸೋಽ
ಚಿರೇಣ ಗರ್ಭಾನ್ ಪ್ರತಿಪೇದಿರೇ ತದಾ ॥

ಎಂದು ರಾಮಾಯಣದಲ್ಲಿ ಸ್ಪಷ್ಟವಾಗಿ ಹೇಳಿದೆ. ಆದುದರಿಂದ ಆ ಪಾಯಸವೇ ಶ್ರೀರಾಮಾದಿಗಳ ರೂಪವನ್ನು ತಾಳಿತು.

'ಜಗತ್ತಿಗೇ ಕಾರಣನಾಗಿರುವ ಪರಬ್ರಹ್ಮಪುರುಷೋತ್ತಮ, ಸಾಕ್ಷಾನ್ಮಹಾವಿಷ್ಣುವಿಗೆ ಮುಖ್ಯವಾದ ಅರ್ಥದಲ್ಲಿ ಮತ್ತೊಬ್ಬನು ತಂದೆ ಯಾಗುವುದು ಸಾಧ್ಯವೇ ಇಲ್ಲ. ಮನುಷ್ಯನ ವೀರ್ಯದಿಂದ ಭಗವಂತನು ಜನಿಸಿದನೆಂದು ಭಾವಿಸುವುದೂ ಕೂಡ ಭಗವಂತನಲ್ಲಿ ಅಪಚಾರವೇ ಆಗುತ್ತದೆ. ಭಗವಂತನ ದಿವ್ಯಮಂಗಳವಿಗ್ರಹವು ಅಪ್ರಾಕೃತವಾದುದು. ಅದು ಶುಕ್ರ-ಶೋಣಿತಗಳ ಪರಿಣಾಮವಾಗಿ ಉಂಟಾಗುವುದಿಲ್ಲ. ಪಂಚಭೂತಗಳ ಯೋಗದಿಂದಾದುದಲ್ಲ. ವಾಸ್ತವವಾಗಿ ಪಾಯಸವು ಭಗವಂತನ ಜ್ಞಾನ-ಬಲ-ಐಶ್ವರ್ಯ-ವೀರ್ಯಶಕ್ತಿಗಳಿಂದ ಕೂಡಿದ ಸ್ವರೂಪವೇ ಆಗಿದೆ. ಅದರ ಬೆಳವಣಿಗೆಯಾಗುವುದು ಅನ್ನ-ಪಾನಾದಿಗಳಿಂದಲ್ಲ, ಭಗವಂತನ ಸಂಕಲ್ಪ ದಿಂದಲೇ–ಎಂದು ವಿದ್ವಾಂಸರೊಬ್ಬರು ತಮ್ಮ ಅಭಿಪ್ರಾಯವನ್ನು ಸಮರ್ಥಿ ಸುತ್ತಾರೆ.

"ರಾಮಾದಿಮೂರ್ತಯಶ್ಚ ಪಾಯಸಪರಿಣಾಮಾಃ, ನ ತು ಶುಕ್ರ–ಶೋಣಿತಪರಿಣಾಮಾಃ ತತ್ಪ್ರಾಶನಾನಂತರಂ ಗರ್ಭಧಾರಣ ವಚನಾತ್ ।" "ನ ಭೂತಸಂಘಸಂಸ್ಥಾನೋ ದೇಹೋಽಸ್ಯ ಪರ ಮಾತ್ಮನಃ" ಇತ್ಯಾದಿ ಸ್ಮರಣಾತ್, ಪಾಯಸಂ ಚ ಭಗವತಃ ಷಾಡ್ಗುಣ್ಯವಿಗ್ರಹ ಏವ ತದ್ವೃದ್ಧಿಶ್ಚ ನ ಅನ್ನಪಾನಾದಿಕೃತಾ, ಕಿಂ ತು ಇಚ್ಛಾಕೃತಾ"–ಎಂದು ಗೋವಿಂದರಾಜೀಯವ್ಯಾಖ್ಯಾನವು ಹೇಳುತ್ತದೆ.

೨) ಮೇಲ್ಕಂಡ ವಾದದ ಪರಿಶೀಲನೆ :

ಮೇಲೆ ಹೇಳಿರುವ ವಾದವು ಭಗವಂತನ ಸ್ವರೂಪವು ಮತ್ತು ದಿವ್ಯ ಮಂಗಳವಿಗ್ರಹವು ಅವತಾರದೆಶೆಯಲ್ಲಿಯೂ ಕೂಡ ಅಪ್ರಾಕೃತವಾದುದು ಎಂಬ ತತ್ತ್ವವನ್ನು ಎತ್ತಿ ಹೇಳುತ್ತದೆ. ಭಕ್ತಿಯಿಂದ ಅದನ್ನು ಶುಭಾಲಂಬನವೆಂದು ಧ್ಯಾನಮಾಡುವುದಕ್ಕೂ ಸಹಾಯಮಾಡುತ್ತದೆ. ಈ ಭಕ್ತಿಭಾವವು ಶ್ರೇಷ್ಠ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ದಶರಥಸಾರ್ವಭೌಮನ ಶರೀರದ ಸ್ಪರ್ಶಮಾಡದೆಯೇ ತನ್ನನ್ನು

ಮನುಷ್ಯಶಿಶುರೂಪದಲ್ಲಿ ಪ್ರಕಟಪಡಿಸಿಕೊಳ್ಳುವ ಶಕ್ತಿಯು ಭಗವಂತನಿಗೆ ಉಂಟು–ಎಂಬುದನ್ನು ನಾವು ನಿರಾಕರಿಸುವುದಿಲ್ಲ. ಆದರೆ ಪಾಯಸವೊಂದೇ ಶ್ರೀರಾಮಾದಿಗಳ ಅವತಾರಕ್ಕೆ ನಿಜವಾದ ಕಾರಣ. ದಶರಥನ ದೇಹವು ಅದರಲ್ಲಿ ಯಾವ ಪಾತ್ರವನ್ನೂ ವಹಿಸಿರಲಿಲ್ಲ–ಎಂದು ವಾದಮಾಡುವುದು ವಾಲ್ಮೀಕಿಮಹರ್ಷಿಗಳ ಸಾಹಿತ್ಯಕ್ಕೆ ವಿರುದ್ಧವಾದ ಅಭಿಪ್ರಾಯವಾಗುತ್ತದೆ. ಏಕೆಂದರೆ :

1) ವೃದ್ಧನಾದ ದಶರಥಮಹಾರಾಜನು ತನ್ನ ಆತ್ಮಜನಾದ ಶ್ರೀರಾಮನನ್ನು ಕಣ್ಣುಗಳಿಗೆ ಹಬ್ಬವಾಗುವಂತೆ ನೋಡುತ್ತಲೇ ಇದ್ದ. ಹಾಗೆ ಶ್ರೀರಾಮನನ್ನು ನೋಡುತ್ತಿರುವಾಗ ಅವನಿಗೆ–ಅಲಂಕಾರಮಾಡಿಕೊಂಡಿ ರುವ ತನ್ನ ಪ್ರತಿಬಿಂಬವನ್ನೇ ಕನ್ನಡಿಯಲ್ಲಿ ನೋಡಿಕೊಂಡಂತೆ ಸಂತೋಷ ವಾಗುತ್ತಿತ್ತು–ಎಂಬ ಹೇಳಿಕೆಯನ್ನು ಅಯೋಧ್ಯಾಕಾಂಡದಲ್ಲಿ ನೋಡುತ್ತೇವೆ.

ತಂ ಪಶ್ಯಮಾನೋ ನೃಪತಿಃ ತುತೋಷ ಪ್ರಿಯಮಾತ್ಮಜಮ್ ।
ಅಲಂಕೃತಮಿವಾತ್ಮಾನಂ ಆದರ್ಶತಲಸಂಸ್ಥಿತಮ್ ॥

ಲವ-ಕುಶರು ಶ್ರೀರಾಮನ ದೇಹದ ಪ್ರತಿಬಿಂಬಗಳಂತೆ ಇದ್ದರು.

'ಬಿಂಬಾದಿವೋದ್ಧೃತೌ ಬಿಂಬೌ ರಾಮದೇಹಾತ್ತಥಾಪರೌ' ಅದರಂತೆಯೇ ಶ್ರೀರಾಮನೂ ತನ್ನ ತಂದೆಯ ಪ್ರತಿರೂಪದಂತೆ ಇದ್ದನು–ಎಂದು ನಾವು ಭಾವಿಸುವುದೇ ಸಹಜವಾಗಿದೆ. ಎರಡು ಕಡೆಗಳಲ್ಲಿಯೂ ತಂದೆಗೂ ಮತ್ತು ಅವನ ಔರಸಪುತ್ರರಿಗೂ ಇರುವ ಸಹಜವಾದ ಸಾಮ್ಯವನ್ನೇ ನಾವು ಗಮನಿಸುತ್ತೇವೆ.

* "ರಾಮಸ್ಯ ಮುಖನಾಸಿಕಾಚರಣಾದಿಸರ್ವಾವಯವೇನ ಪಿತೃ ಸರೂಪತ್ವಂ ಆವೇದಿತಂ."

ದಶರಥನಿಗೂ ಶ್ರೀರಾಮನಿಗೂ ದೇಹಸಾಮ್ಯವು ಮಾತ್ರವಲ್ಲದೇ ಗುಣಗಳಲ್ಲೂ ಸಾಮ್ಯವಿತ್ತು ಎಂದು ವಾಲ್ಮೀಕಿಗಳು ಹೇಳುತ್ತಾರೆ.

* **ಭೂಮಾವನುಪಮಃ ಸೂನುಃ ಗುಣೈರ್ದಶರಥೋಪಮಃ'**

2) 'ಶ್ರೀ ಲಕ್ಷ್ಮಣನ ರೂಪ-ಗುಣಗಳೂ ಕೂಡ ದಶರಥನ ಶ್ರೇಷ್ಠ

---

* ಶ್ರೀರಾಮಾಯಣಭೂಷಣ * ರಾಮಾಯಣ-ಅಯೋಧ್ಯಾಕಾಂಡ (1-9)

ವಾದ ರೂಪ ಗುಣಗಳನ್ನು ಹೋಲುತ್ತಿತ್ತು'–ಎಂಬ ಹೇಳಿಕೆಯನ್ನೂ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನೋಡುತ್ತೇವೆ. ಅದು ಸೀತಾದೇವಿಯು ಹೇಳುವ ಮಾತು. 'ರಾಜಪುತ್ರಃ ಪಿತುಃ ಶ್ರೇಷ್ಠಃ ಸದೃಶಃ ಶ್ವಶುರಸ್ಯ ಮೇ'–ಸುಂದರಕಾಂಡ 38 (61)

3) ತಾನು ದಶರಥನಿಂದ ಹುಟ್ಟಿದವನು ಎಂಬ ಮಾತನ್ನು [**ಕಥಂ ದಶರಥಾಜ್ಜಾತಃ**] ಎಂದು ಶ್ರೀರಾಮನು ಸನ್ಮಾನಪೂರ್ವಕವಾಗಿ ಹೇಳಿಕೊಳ್ಳುತ್ತಾನೆ.

ಆದ್ದರಿಂದ ಶ್ರೀರಾಮ-ಲಕ್ಷ್ಮಣಾದಿಗಳು ದಶರಥನ ಗುಣ-ರೂಪ ಗಳನ್ನು ಹೊಂದಿದ್ದು ಅವನ ಔರಸಪುತ್ರರೇ ಆಗಿದ್ದರು–ಎಂಬುದಕ್ಕೆ ಶ್ರೀಮದ್ರಾಮಾಯಣದಲ್ಲಿಯೇ ಪುಷ್ಕಳವಾದ ಪ್ರಮಾಣಗಳಿವೆ.

4) ಶ್ರೀಮದ್ಭಾಗವತದಲ್ಲಿ ಶ್ರೀಕೃಷ್ಣಾವತಾರವನ್ನು ವರ್ಣಿಸುವಾಗ ಮಹರ್ಷಿಗಳು ಮಹಾವಿಷ್ಣುವಿನ ಅಂಶವು ವಸುದೇವನನ್ನು ಪ್ರವೇಶಿಸಿ ಅವನ ಮೂಲಕ ದೇವಕಿಯ ಗರ್ಭವನ್ನು ಪ್ರವೇಶಿಸಿತು–ಎಂದು ಹೇಳುತ್ತಾರೆ.

ಆವಿವೇಶಾಂಶಭಾಗೇನ ಮನ ಆನಕದುಂದುಭೇಃ ।
ತತೋ ಜಗನ್ಮಂಗಲಮಚ್ಯುತಾಂಶಂ ಸಮಾಹಿತಂ ಶೂರಸುತೇನ
ದೇವೀ (ಶ್ರೀಮದ್ಭಾಗವತ-೧೦-೨-೧೬ ಮತ್ತು ೧೮ ಶ್ಲೋ.)

ಇದೇ ರೀತಿಯಲ್ಲಿ ಶ್ರೀರಾಮಾವತಾರಸಂದರ್ಭದಲ್ಲಿಯೂ ಭಗ ವಂತನ ತೇಜಸ್ಸು ದಶರಥನನ್ನೂ ಮತ್ತು ಆತನ ಪತ್ನಿಯರನ್ನೂ ಪ್ರವೇಶಿಸಿ ಶ್ರೀರಾಮಾದಿಗಳ ರೂಪದಲ್ಲಿ ತನ್ನನ್ನು ಪ್ರಕಟಪಡಿಸಿಕೊಂಡಿತು–ಎಂದು ತಿಳಿಯಬೇಕಾದುದು ಸಹಜವಾಗಿದೆ.

ಶ್ರೀರಾಮಾದಿಗಳಿಗೆ ದಶರಥನ ಶರೀರಸಂಬಂಧವನ್ನು ಹೇಳಿದರೆ ಅವರ ಅಪ್ರಾಕೃತಸ್ವರೂಪಕ್ಕೆ ವಿರೋಧವೇನೂ ಆಗುವುದಿಲ್ಲ. ಏಕೆಂದರೆ : ಭಗವಂತನು ತನ್ನ ಸ್ವಂತ ಇಚ್ಛೆಯಿಂದಲೇ ಮಹಾತ್ಮನಾದ ದಶರಥನನ್ನು ತಂದೆಯನ್ನಾಗಿ ಆರಿಸಿಕೊಂಡಿದ್ದಾನೆ.

ಪಿತರಂ ರೋಚಯಾಮಾಸ ತದಾ ದಶರಥಂ ನೃಪ ।
ಮಾನುಷೇ ಚಿನ್ತಯಾಮಾಸ ಜನ್ಮಭೂಮಿಮಥಾತ್ಮನಃ ॥

(ಬಾಲಕಾಂಡ-ಸರ್ಗ-೧೫)

ಹಾಗೆಯೇ ಆತನಲ್ಲಿ ಪ್ರವೇಶಮಾಡಿದಾಗ ಆತನ ರೂಪ-ಗುಣ ಗಳನ್ನೂ ಅಲಂಕಾರವಾಗಿ ತನ್ನ ಇಷ್ಟದಿಂದಲೇ ಅವನು ಸ್ವೀಕರಿಸಿದ್ದಾನೆ– ಅಪ್ರಾಕೃತಸ್ವರೂಪವೇ ಪ್ರಾಕೃತದಲ್ಲಿ ತನ್ನನ್ನು ವಿಸ್ತಾರಪಡಿಸಿಕೊಂಡಿದೆ. ಹುಟ್ಟಿನ ಸಂಬಂಧವಾದ ಗುಣ-ದೋಷಗಳು ಅವನ ಸ್ವರೂಪಕ್ಕೆ ಅಂಟುವುದಿಲ್ಲ.

ಅಜಾಯಮಾನೋ ಬಹುಧಾ ವಿಜಾಯತೇ–ಎಂದು ಶ್ರುತಿಯು ವರ್ಣಿಸುವ ಪರಾತ್ಪರಸ್ವರೂಪನು ಅವನು–

ಆದರೆ ಹೀಗೆ ಹೇಳಿದರೆ ಎರಡು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

1) ಮಹಾವಿಷ್ಣುವು ದಶರಥನ ಮತ್ತು ಆತನ ಮಹಿಷಿಯರ ಸಂಬಂಧದಿಂದಲೇ ತನ್ನ ಅವತಾರವನ್ನು ಪ್ರಕಟಪಡಿಸಿಕೊಂಡಿದ್ದರೆ ಅದರಲ್ಲಿ ಪಾಯಸದ ಸ್ಥಾನವೇನು?

2) ಶ್ರೀರಾಮಾದಿಗಳ ಜನನಕ್ಕೆ ದಿವ್ಯಪಾಯಸವು ಕಾರಣವಾಗಿರದಿದ್ದರೆ ಪಾಯಸವನ್ನು ಸ್ವೀಕರಿಸಿದನಂತರವೇ ಕೌಸಲ್ಯಾದಿಗಳು ಗರ್ಭವನ್ನು ಧರಿಸಿದರು ಎಂದು ವಾಲ್ಮೀಕಿಗಳು ಏಕೆ ಹೇಳುತ್ತಾರೆ? ಆ ಪಾಯಸವು 'ಪ್ರಜಾಕರ'ವಾದದ್ದು ಎಂದು ಪ್ರಾಜಾಪತ್ಯಪುರುಷನು ಸ್ಪಷ್ಟವಾಗಿ ಹೇಳಲು ಕಾರಣವೇನು?

ಈ ಕೆಳಗಿನ ಅಂಶಗಳನ್ನು ಗಮನಿಸಿದರೆ ಆ ಪ್ರಶ್ನೆಗಳಿಗೆ ಸಮಾಧಾನ ದೊರಕುತ್ತದೆ.

1) ದಿವ್ಯಪಾಯಸವು ದಶರಥನ ಪತ್ನಿಯರ ದೇಹವನ್ನು ಪ್ರವೇಶಿಸಿ ಅಲ್ಲಿ ಮಹೌಷಧಿಯಂತೆ ಕೆಲಸಮಾಡಿತು. ಗರ್ಭಧಾರಣೆಗೆ ಇರುವ ಪ್ರತಿಬಂಧಕಗಳನ್ನು ಹೋಗಲಾಡಿಸಿತು. ಪ್ರತಿಬಂಧಕನಿವಾರಣೆಯೂ ಕೂಡ ಕಾರ್ಯಸಾಮಾನ್ಯಕ್ಕೆ ಒಂದು ಕಾರಣವೇ ಆಗಿದೆ. ಈ ಅರ್ಥದಲ್ಲಿ ಪಾಯಸವನ್ನು ಶ್ರೀರಾಮಾದಿಗಳ ಜನನಕ್ಕೆ ಕಾರಣ ಎನ್ನಬಹುದು.

2) ಗರ್ಭಕೋಶವನ್ನು ಭಗವಂತನ ಅವತಾರಕ್ಕೆ ಅನುಗುಣವಾಗಿ ಸಂಸ್ಕರಿಸುವ ಸಾಮಗ್ರಿಯಾಗಿಯೂ ಅದು ಉಪಯೋಗಕ್ಕೆ ಬಂದಿದೆ–ಈ ರೀತಿ ಗರ್ಭಶುದ್ಧಿಗಾಗಿ ಮತ್ತು ದಿವ್ಯಶಕ್ತಿಸಂಪನ್ನತೆಗಾಗಿ ಮಂತ್ರಪೂತವಾದ ಪಾಯಸವನ್ನು ಸ್ತ್ರೀಯರು ಸ್ವೀಕರಿಸಬೇಕೆಂಬ ಪದ್ಧತಿಯು ವೈಖಾನಸಾದಿ ಆಗಮಶಾಸ್ತ್ರದಲ್ಲಿಯೂ ಕಂಡುಬರುತ್ತದೆ.

3) ವೈಷ್ಣವಗುಣಸಂಪತ್ತು ಪಾಯಸದ ಮೂಲಕವೂ ಕೂಡ ಕೌಸಲ್ಯಾದಿಗಳ ಗರ್ಭವನ್ನು ಪ್ರವೇಶಿಸಿದೆ. ಈ ಅರ್ಥದಲ್ಲಿ ಅದು ಭಗವಂತನ ಅವತಾರಕ್ಕೆ ಒಂದು ಪ್ರಮಾಣದಲ್ಲಿ ಉಪಾದಾನಕಾರಣವೂ ಆಗುತ್ತದೆ.

ಆದುದರಿಂದ ದಿವ್ಯಪಾಯಸವು ಶ್ರೀರಾಮಾದಿಗಳ ಅವತಾರಕ್ಕೆ ಸಂಬಂಧಿಸಿದಂತೆ ಸಹಕಾರಿಕಾರಣ ಮತ್ತು ಉಪಾದಾನಕಾರಣ–ಎರಡೂ ಆಗುತ್ತದೆ. ಭಗವಂತನು ದಿವ್ಯಪಾಯಸವೆಂಬ ಕಾರಣದ ಮೂಲಕವೂ ಕೂಡ ಶ್ರೀರಾಮಾದಿರೂಪವನ್ನು ತಳೆಯುತ್ತಾನೆ ಎಂದು ಹೇಳುವುದು ಉಚಿತ. ದಿವ್ಯಪಾಯಸದಲ್ಲಿ ಭಗವಂತನ ಆವಿರ್ಭಾವಕ್ಕೆ ಬೇಕಾದ ನಾನಾಶಕ್ತಿಗಳು ಇದ್ದುವೆಂಬುದನ್ನು ಪ್ರಾಜಾಪತ್ಯಪುರುಷನು ಹೇಳುವ ಈ ಕೆಳಗಿನ ಮಾತು ಸ್ಪಷ್ಟಪಡಿಸುತ್ತದೆ.

‘ಪ್ರಜಾಕರಂ ಗೃಹಾಣ ತ್ವಂ ಧನ್ಯಮಾರೋಗ್ಯವರ್ಧನಮ್ ।
ಭಾರ್ಯಾಣಾಮನುರೂಪಾಣಾಂ ಅಶ್ನೀತೇತಿ ಪ್ರಯಚ್ಛ ವೈ ॥
ತಾಸು ತ್ವಂ ಪ್ರಾಪ್ಸ್ಯಸೇ ಪುತ್ರಾನ್ ಯದರ್ಥಂ ಯಜಸೇ ನೃಪ ॥

ಬಾಲಕಾಂಡ

“ರಾಜನೇ! ದೇವನಿರ್ಮಿತವಾದ ಈ ಪಾಯಸವನ್ನು ತೆಗೆದುಕೊ. ಇದು ಪ್ರಜಾಕರವಾದುದು. ಆರೋಗ್ಯವನ್ನು ವೃದ್ಧಿಪಡಿಸುವುದು. ಅನುರೂಪರಾದ ನಿನ್ನ ಭಾರ್ಯೆಯರಿಗೆ ಇದನ್ನು ಸೇವಿಸಲು ಕೊಡು. ನಿನ್ನ ಯಜ್ಞದ ಕಾಮನೆಗೆ ಅನುಗುಣವಾಗಿ ನೀನು ಅವರಲ್ಲಿ ಪುತ್ರರನ್ನು ಪಡೆಯುವೆ.”

ಶ್ರೀರಾಮಾದಿಗಳ ಅವತಾರಕ್ಕೆ ದಿವ್ಯಪಾಯಸ, ದಶರಥಮಹಾರಾಜ ಮತ್ತು ರಾಜಪತ್ನಿಯರು–ಎಲ್ಲರೂ ಕಾರಣರಾಗುತ್ತಾರೆ. ಈ ಎಲ್ಲ ಕಾರಣ ಸಾಮಗ್ರಿಗಳನ್ನೂ ಉಪಯೋಗಿಸಿಕೊಂಡು ಜಗತ್ಕಾರಣನಾದ ಭಗವಂತನು ತನ್ನನ್ನು ಲೋಕದಲ್ಲಿ ಪ್ರಕಾಶಪಡಿಸಿಕೊಂಡಿದ್ದಾನೆ.

ಪಾಯಸದ ವಿಭಾಗ

ಕೌಸಲ್ಯಾಯೈ ನರಪತಿಃ ಪಾಯಸಾರ್ಧಂ ದದೌ ತದಾ ।
ಅರ್ಧಾದರ್ಧಂ ದದೌ ಚಾಪಿ ಸುಮಿತ್ರಾಯೈ ನರಾಧಿಪಃ ॥೨೭॥

ಕೈಕೇಯ್ಯೈ ಚಾವಶಿಷ್ಟಾರ್ಧಂ ದದೌ ಪುತ್ರಾರ್ಥಕಾರಣಾತ್ ।
ಪ್ರದದೌ ಚಾವಶಿಷ್ಟಾರ್ಧಂ ಪಾಯಸಸ್ಯಾಮೃತೋಪಮಮ್ ॥೨೮॥

ಅನುಚಿನ್ತ್ಯ ಸುಮಿತ್ರಾಯೈ ಪುನರೇವ ಮಹೀಪತಿಃ ।
ಏವಂ ತಾಸಾಂ ದದೌ ರಾಜಾ ಭಾರ್ಯಾಣಾಂ ಪಾಯಸಂ ಪೃಥಕ್ ॥

ಈ ಶ್ಲೋಕದಲ್ಲಿ ಹೇಳಿರುವಂತೆ ಪಾಯಸವಿಭಾಗ ಈ ರೀತಿ ಯಾಗಿದೆ : ಭಾಗ ಕೌಸಲ್ಯೆಗೆ, 3/8 ಭಾಗ ಸುಮಿತ್ರದೇವಿಗೆ ಮತ್ತು 1/8 ಭಾಗ ಕೈಕೇಯಿಗೆ ಇದು ಶ್ಲೋಕದಲ್ಲಿ ನಾವು ತಿಳಿಯಬಹುದಾದ, ಸ್ವಾಭಾವಿಕವಾದ ಅರ್ಥವಾಗಿದೆ. ಆದರೆ ಈ ವಿಭಾಗವನ್ನು, ಇದೇ ಕಾಂಡದಲ್ಲಿ ಹದಿನೆಂಟನೆಯ ಸರ್ಗದಲ್ಲಿ ಹೇಳಿರುವ ಶ್ಲೋಕದೊಡನೆ ಹೋಲಿಸಿದರೆ ಒಂದು ವಿಷಯದಲ್ಲಿ ಸಮನ್ವಯಮಾಡಲಾಗುವುದಿಲ್ಲ.

ಕೌಸಲ್ಯಾಜನಯದ್ರಾಮಂ ದಿವ್ಯಲಕ್ಷಣಸಂಯುತಮ್ ।
ವಿಷ್ಣೋರರ್ಧಂ ಮಹಾಭಾಗಂ ಪುತ್ರಮಿಕ್ಷ್ವಾಕುನನ್ದನಮ್ ॥೧೦॥

ಭರತೋ ನಾಮ ಕೈಕೇಯ್ಯಾಂ ಜಜ್ಞೇ ಸತ್ಯಪರಾಕ್ರಮಃ ।
ಸಾಕ್ಷಾದ್ವಿಷ್ಣೋಶ್ಚತುರ್ಭಾಗಃ ಸರ್ವೈಃ ಸಮುದಿತೋ ಗುಣೈಃ ॥೧೧॥

ಅಥ ಲಕ್ಷ್ಮಣಶತ್ರುಘ್ನೌ ಸುಮಿತ್ರಾಜನಯತ್ಸುತೌ ।
ವೀರೌ ಸರ್ವಾಸ್ತ್ರಕುಶಲೌ ವಿಷ್ಣೋರರ್ಧಸಮನ್ವಿತೌ ॥೧೨॥

ಶ್ರೀರಾಮನು ವಿಷ್ಣುವಿನ ಅರ್ಧಾಂಶನೆಂದು ಹೇಳುವುದರಿಂದ ಪಾಯಸದ ವಿಭಾಗಕ್ಕೆ ಈ ಶ್ಲೋಕವು ಅನುರೂಪವಾಗಿಯೇ ಇದೆ. ಈ ಶ್ಲೋಕದಲ್ಲಿ ಭರತನು ವಿಷ್ಣುವಿನ ಚತುರ್ಥಾಂಶವೆಂಬುದಾಗಿ ಹೇಳಿದ್ದಾರೆ. ವಿಷ್ಣುವೇ ರಾಮನಾಗಿರುವುದರಿಂದ ರಾಮನ ಚತುರ್ಥಾಂಶವೆಂದೂ ಹೇಳಬಹುದು. ಅರ್ಧದ ಚತುರ್ಥಾಂಶವೆಂದರೆ ಪೂರ್ಣದ 1/8 ಭಾಗವೇ ಆಗುವುದರಿಂದ ಭರತನ ವಿಷಯದಲ್ಲಿಯೂ ಈ ಶ್ಲೋಕವು ಸಮನ್ವಯವಾಗುತ್ತದೆ. ಲಕ್ಷ್ಮಣ-ಶತ್ರುಘ್ನರ ವಿಷಯದಲ್ಲಿ ವಿಷ್ಣೋರರ್ಧಸಮನ್ವಿತೌ ಎಂದು ಉಕ್ತವಾಗಿದೆ. ಲಕ್ಷ್ಮಣ-ಶತ್ರುಘ್ನರು ಶ್ರೀರಾಮಚಂದ್ರನ ಅರ್ಧಾಂಶರಾಗಲಾರರು. ಏಕೆಂದರೆ : ದ ಅರ್ಧಾಂಶವೆಂದರೆ ಅಂಶ. ಪಾಯಸವಿಭಾಗದಲ್ಲಿ ಹೇಳಿರುವಂತೆ ಲಕ್ಷ್ಮಣ-ಶತ್ರುಘ್ನರು 3/8 ಭಾಗದಿಂದ ಹುಟ್ಟಿರುತ್ತಾರೆ. ಇದರಿಂದಾಗಿ ಈ

ಶ್ಲೋಕಕ್ಕೂ, ಪಾಯಸವಿಭಾಗದ ಶ್ಲೋಕಕ್ಕೂ ಈ ಒಂದು ವಿಷಯದಲ್ಲಿ ಸಮನ್ವಯವಾಗುವುದಿಲ್ಲ.

ಒಬ್ಬ ವ್ಯಾಖ್ಯಾನಕಾರರು ವಿಷ್ಣೋರರ್ಧಸಮನ್ವಿತೌ ಎಂದರೆ ಸಮಾರ್ಧವೆಂದು ಭಾವಿಸಕೂಡದೆಂದೂ, ಅರ್ಧಕ್ಕೆ ಸಮನಾದ ಭಾಗ $^{1}/_{8}$ ಎಂದು ಅರ್ಥಮಾಡಬೇಕೆಂದೂ ಹೇಳಿರುತ್ತಾರೆ.

ಈ ಶ್ಲೋಕಗಳಲ್ಲಿ ಪರ್ಯಾಯಗಳಲ್ಲಿ ವಿಷ್ಣುಶಬ್ದವನ್ನೇ ಉಪಯೋಗಿಸಿರುವುದರಿಂದ ಒಂದು ಪರ್ಯಾಯದಲ್ಲಿ ಮಾತ್ರವೇ ವಿಷ್ಣುಶಬ್ದವನ್ನು ತೆಗೆದುಕೊಂಡು ಉಳಿದೆರಡು ಪರ್ಯಾಯಗಳಲ್ಲಿ ರಾಮನ ಚತುರ್ಥಾಂಶ ಅಥವಾ ರಾಮನ ಅರ್ಧಾಂಶ ಎಂದು ಅರ್ಥಮಾಡಬೇಕಾಗುತ್ತದೆ. ಈ ಶ್ಲೋಕಗಳಲ್ಲಿರುವಂತೆ ಯಥಾವತ್ತಾಗಿ ವಿಷ್ಣುಶಬ್ದವನ್ನೇ ತೆಗೆದುಕೊಂಡರೆ ವಿಷ್ಣುವಿನ ಅರ್ಧ ರಾಮ. ವಿಷ್ಣುವಿನ ನಾಲ್ಕನೆಯ ಒಂದಂಶ ಭರತ ಮತ್ತು ಲಕ್ಷ್ಮಣ-ಶತ್ರುಘ್ನರು ವಿಷ್ಣುವಿನ ಅರ್ಧಾಂಶ. ಒಟ್ಟು ಒಂದು ಮತ್ತು ನಾಲ್ಕನೆಯ ಒಂದಂಶದ ವಿಭಜನೆಯಾದಂತಾಗುತ್ತದೆ. ಪುರಾಣಾಂತರಗಳಲ್ಲಿ ಪಾಯಸದ ವಿಭಾಗವು ಬೇರೆಯ ರೀತಿಯಲ್ಲಿ ಹೇಳಲ್ಪಟ್ಟಿದೆ ಅಥವಾ ಇದಕ್ಕೆ ವಿರುದ್ಧವಾಗಿಯೇ ಇದೆಯೆನ್ನಬಹುದು.

(ಅಧ್ಯಾತ್ಮರಾಮಾಯಣ, ಬಾಲಕಾಂಡ ಸರ್ಗ-೩) ಉಮೆಗೆ ಮಹೇಶ್ವರನು ಪಾಯಸವಿಭಾಗದ ವಿಷಯವಾಗಿಯೇ ಹೇಳುತ್ತಾನೆ.

ಋಷ್ಯಶೃಙ್ಗವಸಿಷ್ಠಾಭ್ಯಾಮನುಜ್ಞಾತೋ ದದೌ ಹವಿಃ ।
ಕೌಸಲ್ಯಾಯೈ ಸ ಕೈಕೇಯ್ಯೈ ಚಾರ್ಧಮರ್ಧಂ ಪ್ರಯತ್ನತಃ ॥

ತತಃ ಸುಮಿತ್ರಾ ಸಂಪ್ರಾಪ್ತಾ ಜಿಗೃಧ್ನುಃ ಪೌತ್ರಿಕಂ ಚರುಮ್ ।
ಕೌಸಲ್ಯಾ ತು ಸ್ವಭಾಗಾರ್ಧಂ ದದೌ ತಸ್ಯೈ ಮುದಾನ್ವಿತಾ ॥

ಕೈಕೇಯೀ ಚ ಸ್ವಭಾಗಾರ್ಧಂ ದದೌ ಪ್ರೀತಿಸಮನ್ವಿತಾ ।
ಉಪಭುಜ್ಯ ಚರುಂ ಸರ್ವಾಃ ಸ್ತ್ರಿಯೋ ಗರ್ಭಸಮನ್ವಿತಾಃ ॥

"ಋಷ್ಯಶೃಂಗರ ಮತ್ತು ವಸಿಷ್ಠರ ಅನುಮತಿಯನ್ನು ಪಡೆದು ದಶರಥರಾಜನು ಚರುವನ್ನು ಎರಡು ವಿಭಾಗಮಾಡಿ ಕೌಸಲ್ಯಾದೇವಿಗೂ, ಕೈಕೇಯಿಗೂ ಕೊಟ್ಟನು. ಆ ವೇಳೆಗೆ ಸರಿಯಾಗಿ ಪುತ್ರೋತ್ಪಾದಕವಾದ ಚರುವನ್ನು ಉಪಭುಂಜಿಸಲು ಸುಮಿತ್ರಾದೇವಿಯು ಅಲ್ಲಿಗೆ ಬಂದಳು.

ಅವಳೂ ಬಂದಿದ್ದನ್ನು ಕಂಡು ಕೌಸಲ್ಯಾದೇವಿಯು ತನಗೆ ಕೊಟ್ಟಿದ್ದ ಚರುವಿ ನಲ್ಲಿ ಅರ್ಧಭಾಗವನ್ನು ಸುಮಿತ್ರಾದೇವಿಗೆ ಕೊಟ್ಟಳು. ಕೈಕೇಯಿಯೂ ಹಾಗೆಯೇ ಮಾಡಿದಳು. ಇದರಿಂದಾಗಿ ಚರುವಿನ ನಾಲ್ಕನೆಯ ಒಂದಂಶ ಕೌಸಲ್ಯೆಗೂ, ನಾಲ್ಕನೆಯ ಒಂದಂಶ ಕೈಕೇಯಿಗೂ, ನಾಲ್ಕನೆಯ ಎರಡಂಶ ಸುಮಿತ್ರಾದೇವಿಗೂ ಸೇರಿದಂತಾಯಿತು."

ಅಧ್ಯಾತ್ಮರಾಮಾಯಣದ ಎರಡನೆಯ ಸರ್ಗದಲ್ಲಿ ನಾರಾಯಣನು ಹೇಳುತ್ತಾನೆ :

ಕಶ್ಯಪಸ್ಯ ವರೋ ದತ್ತಸ್ತಪಸಾ ತೋಷಿತೇನ ಮೇ ।
ಯಾಚತಃ ಪುತ್ರಲಾಭಾಯ ತಥೇತ್ಯಙ್ಗೀಕೃತಂ ಮಯಾ ॥

ಸ ಇದಾನೀಂ ದಶರಥೋ ಭೂತ್ವಾ ತಿಷ್ಠತಿ ಭೂತಲೇ ।
ತಸ್ಯಾಹಂ ಪುತ್ರತಾಮೇತ್ಯ ಕೌಸಲ್ಯಾಯಾಂ ಶುಭೋದಯೇ ।
ಚತುರ್ಧಾತ್ಮಾನಮೇವಾಹಂ ಸೃಜಾಮೀತರಯೋಃ ಪೃಥಕ್ ॥

"ಕಶ್ಯಪಮಹರ್ಷಿಯು ನನ್ನನ್ನು ತನ್ನ ಪುತ್ರನಾಗಬೇಕೆಂದು ವರ ಕೇಳಿದನು. ನಾನು ಹಾಗೆಯೇ ಆಗಲೆಂದೆನು. ಈಗವನು ದಶರಥನಾಗಿ ಹುಟ್ಟಿದ್ದಾನೆ. ನನ್ನ ಶರೀರವನ್ನು ನಾಲ್ಕು ಪ್ರಕಾರವಾಗಿ ವಿಭಾಗಿಸಿಕೊಂಡು ದಶರಥನ ಭಾರ್ಯೆಯರಲ್ಲಿ ನಾನು ಹುಟ್ಟುವೆನು." ಇಲ್ಲಿ ನಾಲ್ಕು ವಿಭಾಗ ವಾಗಿ ವಿಂಗಡಿಸಿ ಹುಟ್ಟುವೆನೆಂದು ಹೇಳಿದಂತಾಯಿತೇ ಹೊರತು ಎಷ್ಟೆಷ್ಟು ಅಂಶಗಳೆಂಬುದು ಸ್ಪಷ್ಟವಾಗಿಲ್ಲ.

ವಾಲ್ಮೀಕಿರಾಮಾಯಣದಲ್ಲಿಯೂ ವಿಷ್ಣುವು ತನ್ನನ್ನು ನಾಲ್ಕು ಪ್ರಕಾರವಾಗಿ ವಿಭಾಗಿಸಿಕೊಂಡು ಅವತಾರಮಾಡಿದುದಕ್ಕೆ ಸಾಧನಭೂತವಾದ ಶ್ಲೋಕಗಳಿವೆ. (೧೫ನೆಯ ಅಧ್ಯಾಯ-ಶ್ಲೋ. ೨೦ ಮತ್ತು ೩೦.)

ಸಂಗ್ರಹರಾಮಾಯಣ ಬಾಲಕಾಂಡದಲ್ಲಿ–

ಇದಂ ತು ಪಾಯಸಂ ದೇಹಿ ಪತ್ನೀಭ್ಯಸ್ತವ ಪಾರ್ಥಿವ ।
ತಸ್ಮಾತ್ತವ ಜನಿಷ್ಯೇಽಹಂ ಮಾಂ ವಿಭಜ್ಯ ಚತುರ್ವಿಧಮ್ ॥

ಸ್ಕಾಂದಪುರಾಣದಲ್ಲಿ ಅಂಶಗಳು ಸ್ಪಷ್ಟವಾಗಿ ಹೇಳಲ್ಪಟ್ಟಿವೆ. ವಿಷ್ಣುವು ಹೇಳುತ್ತಾನೆ :

ಆತ್ಮಾನಂ ಚತುರೋ ಭಾಗಾಂಸ್ತುಲ್ಯರೂಪಾನ್ಮಹಾಬಲಾನ್ ।
ರಾಮರೂಪಮಹಂ ಯಾಮಿ ಲಕ್ಷ್ಮಣಶ್ಚ ಮಮಾನುಜಃ ।
ಭರತೋ ನಾಮ ಧರ್ಮಾತ್ಮಾ ಶತ್ರುಘ್ನಸ್ತದನನ್ತರಮ್ ॥

ಅಗಸ್ತ್ಯರಾಮಾಯಣದಲ್ಲಿ ರಾಮನು ವಿಷ್ಣುವಿನ ಚತುರ್ಥಾಂಶ ವೆಂಬುದನ್ನು ಸ್ಪಷ್ಟವಾಗಿ ಹೇಳಿದೆ :

ಚತುರ್ಥೋಽಂಶಸ್ತು ರಾಮಃ ಸ್ಯಾದ್ವಿಷ್ಣೋಸ್ತಲ್ಪಂ ತು ಲಕ್ಷ್ಮಣಃ ।
ಶಙ್ಖಸ್ತು ಭರತೋ ನಾಮ ಚಕ್ರಂ ಶತ್ರುಘ್ನ ಈರಿತಃ ॥

ಆನಂದರಾಮಾಯಣದಲ್ಲಿ ಪಾಯಸದ ಹಂಚಿಕೆಯ ಮತ್ತೊಂದು ರೀತಿಯಾಗಿದೆ :

ಆವಿರ್ಭೂತ್ವಾ ಸ್ವಯಂ ವಹ್ನಿರ್ದದೌ ರಾಜ್ಞೇ ಸುಪಾಯಸಮ್ ।
ರಾಜ್ಞಾ ವಿಭಕ್ತಂ ಸ್ತ್ರೀಭ್ಯಸ್ತತ್ಕೈಕೇಯ್ಯಾ ದುಷ್ಟಭಾವತಃ ॥೧೦೩॥

ಅದದತ್ಪಾಯಸಂ ಹಸ್ತಾತ್ ಗೃಧ್ರೀಶಾಪವಿಮೋಚಕಮ್ ।
ಸುವರ್ಚಲಾಪ್ಸರೋಮುಖ್ಯಾ ನೃತ್ಯಭಂಗಾತ್ಸ್ವಯಂಭುವಾ ॥

ಶಪ್ತಾ ಜಾತಾ ತು ಸಾ ಗೃಧ್ರೀ ತಯಾ ವೇಧಾಸ್ಸುತೋಷಿತಃ ।
ತಸ್ಯೈ ತುಷ್ಟೋ ವಿಧಿಃ ಪ್ರಾಹ ಕೈಕೇಯೀಪಾಯಸಂ ಯದಾ ॥

ಪ್ರಾಕ್ಷೇಪ್ಸ್ಯಸ್ಯಞ್ಜನಗಿರೌ ತದಾ ತೇ ಭವಿತಾ ಗತಿಃ ।
ಅಪ್ಸರಾ ತ್ವಂ ಪೂರ್ವವಚ್ಚ ಭವಿಷ್ಯಸಿ ನ ಸಂಶಯಃ ॥೧೦೬॥

ತಸ್ಮಾತ್ತ್ವಾ ಪಾಯಸಂ ನೀತಾಽಕ್ಷಿಪದಂಜನಪರ್ವತೇ ।
ನಿಜಂ ಸ್ವರೂಪಂ ಸಾ ಲಬ್ಧ್ವಾ ಜಗಾಮ ಸುರಮನ್ದಿರಮ್ ॥೧೦೭॥

ತತಸ್ತಾಭ್ಯಾಂ ತು ಕೈಕೇಯ್ಯೈ ದತ್ತಂ ಕಿಂಚಿತ್ತು ಪಾಯಸಮ್ ।
ಅಥ ತಾ ಭಕ್ಷಯಾಮಾಸುರನ್ತಗರ್ಭಾಸ್ತದಾಭವನ್ ॥೧೦೮॥

ಸಾರಕಾಂಡ ಸರ್ಗ-೧

ಋಷ್ಯಶೃಂಗನು ಮಾಡಿಸಿದ ಪುತ್ರಕಾಮೇಷ್ಟಿಯಾಗದಿಂದ ಪ್ರಸನ್ನನಾದ ಯಜ್ಞೇಶ್ವರನು ದಶರಥನಿಗೆ ಪಾಯಸವನ್ನು ತಂದುಕೊಟ್ಟನು. ರಾಜನು ಅದನ್ನು ಮೂರು ಪಾಲು ಮಾಡಿ ಕೌಸಲ್ಯೆ-ಸುಮಿತ್ರೆ-ಕೈಕೇಯಿಯರಿಗೆ ಕೊಟ್ಟನು. ಸುವರ್ಚಲೆಯೆಂಬ ಒಬ್ಬ ಅಪ್ಸರೆಯು ಬ್ರಹ್ಮನ ಸಭೆಯಲ್ಲಿ

ನರ್ತನಮಾಡುತ್ತಿದ್ದಾಗ ತಾಳತಪ್ಪಿದಳು. ಅದರಿಂದ ಬ್ರಹ್ಮನಿಗೆ ಕೋಪ ಬಂದು ಹದ್ದಾಗಿ ಹುಟ್ಟುವಂತೆ ಆಕೆಗೆ ಶಾಪಕೊಟ್ಟನು. ಅವಳು ಬಹು ವಿಧವಾಗಿ ಕೇಳಿಕೊಳ್ಳಲು ಬ್ರಹ್ಮನು–ಕೈಕೇಯಿಯ ಪಾಯಸವನ್ನು ಅಂಜನ ಗಿರಿಯಲ್ಲಿ ಎಸೆದಾಗ ಶಾಪವಿಮೋಚನೆಯಾಗುವುದೆಂದು ಹೇಳಿದನು. ಅದನ್ನೇ ನಿರೀಕ್ಷಿಸುತ್ತಿದ್ದ ಹದ್ದಿನ ರೂಪದಲ್ಲಿದ್ದ ಅಪ್ಸರೆಯು ದಶರಥನು ಕೈಕೇಯಿಗೆ ಪಾಯಸದ ಭಾಗವನ್ನು ಕೊಟ್ಟೊಡನೆಯೇ ಕದ್ದುಕೊಂಡು ಹೋಗಿ ಅದನ್ನು ಅಂಜನಗಿರಿಯಲ್ಲಿ ಹಾಕಿ ಶಾಪದಿಂದ ಮುಕ್ತಳಾದಳು. ಇತ್ತಲಾಗಿ ಕೈಕೇಯಿಯು ಪಾಯಸವನ್ನು ಕಳೆದುಕೊಂಡುದನ್ನು ನೋಡಿ ಕೌಸಲ್ಯಾ-ಸುಮಿತ್ರೆಯರು ತಮ್ಮ ತಮ್ಮ ಭಾಗಗಳಿಂದ ಅರ್ಧಭಾಗವನ್ನು ತೆಗೆದು ಕೈಕೇಯಿಗೆ ಕೊಟ್ಟರು. ಇದಕ್ಕೆ ಅನುಸಾರವಾಗಿ ಕೌಸಲ್ಯೆಯಲ್ಲಿ ಶ್ರೀರಾಮನೂ, ಸುಮಿತ್ರೆಯಲ್ಲಿ ಲಕ್ಷ್ಮಣನೂ ಕೈಕೇಯಿಯಲ್ಲಿ ಶಂಖ-ಚಕ್ರ ರೂಪರಾದ ಭರತ-ಶತ್ರುಘ್ನರೂ ಹುಟ್ಟಿದರು.

ಆವಿರ್ಭೂತೌ ದ್ವೌ ಯಮಲೌ ಕೈಕೇಯ್ಯಾಃ ಶಂಖಚಕ್ರಕೇ ॥

ರಾಮಚರಿತಮಾನಸದಲ್ಲಿ ಪಾಯಸವಿಭಾಗವನ್ನು ಹೀಗೆ ಹೇಳಿದ್ದಾರೆ.

ಅರ್ಧಭಾಗ ಕೌಸಲ್ಯ ಹಿ ದೀಹ್ನಾ। ಉಭಯ ಭಾಗ ಅಧೇ ಕರ ಕೀಹ್ನಾ॥ ಕೈಕೇಈ ಕಹ ನೃಪ ಸೋ ದಯಾಲೂ । ರಹೋ ಸೋ ಉಭಯಭಾಗಾ ಪುನಿ ಉಭಲೂ ॥

ಕೌಸಲ್ಯಾ ಕೈಕೇಈ ಹಾಥಧರಿ । ದೀಹ್ನ ಸುಮಿತ್ರ ಹಿ ಮನ ಪ್ರಸನ್ನ ಕರಿ ॥೨॥

ದಶರಥನು ಅರ್ಧಭಾಗ ಪಾಯಸವನ್ನು ಕೌಸಲ್ಯೆಗೆ ಕೊಟ್ಟನು. ಉಳಿದ ಅರ್ಧವನ್ನು ಎರಡು ಭಾಗಮಾಡಿ ಅದರಲ್ಲಿ ಒಂದು ಭಾಗವನ್ನು ಕೈಕೇಯಿಗೆ ಕೊಟ್ಟನು. ಉಳಿದುದನ್ನು ಪುನಃ ಎರಡು ಭಾಗಗಳನ್ನಾಗಿ ಮಾಡಿ ಕೌಸಲ್ಯಾ-ಕೈಕೇಯಿಯರ ಕೈಯಲ್ಲಿಟ್ಟನು. ಅವರು ಆ ಎರಡು ಭಾಗಗಳನ್ನೂ ಸುಮಿತ್ರೆಗೆ ಕೊಟ್ಟು ಅವಳಿಗೂ ಸಂತೋಷವನ್ನುಂಟುಮಾಡಿದರು.

ಈ ಪುರಾಣಗ್ರಂಥಗಳನ್ನೂ, ವಾಲ್ಮೀಕಿರಾಮಾಯಣವನ್ನೂ ಅನುಸರಿಸಿ ಕಾವ್ಯಚಂಪೂಗಳನ್ನು ಬರೆದಿರುವ ಕವಿಗಳು ಈ ವಿಷಯದಲ್ಲಿ ಒಂದು ನಿರ್ಧಾರಕ್ಕೆ ಬಂದಿರುವಂತೆ ಕಾಣುತ್ತದೆ.

ವಿದರ್ಭರಾಜಕೃತ ಚಂಪೂರಾಮಾಯಣದಲ್ಲಿ :

ಕೌಸಲ್ಯಾಯೈ ಪ್ರಥಮಮದಿಶದ್ಭೂಪತಿಃ ಪಾಯಸಾರ್ಧಂ
ಪ್ರಾದಾದರ್ಧಂ ಪ್ರಣಯಮಧುರಂ ಕೇಕಯೇನ್ದ್ರಸ್ಯ ಪುತ್ರ್ಯೈ ।
ಏತೇ ದೇವ್ಯೌ ತರಳಮನಸಃ ಪತ್ಯುರಾಲೋಚ್ಯ ಭಾವಂ
ಸ್ವಾರ್ಧಾಂಶಾಭ್ಯಾಂ ಸ್ವಯಮಕುರುತಾಂ ಪೂರ್ಣಕಾಮಾಂ
ಸುಮಿತ್ರಾಮ್ ॥

ಕಾಳಿದಾಸನ ರಘುವಂಶದಲ್ಲಿ :

ತೇ ಬಹುಜ್ಞಸ್ಯ ಚಿತಜ್ಞೇ ಪತ್ನ್ಯೌ ಪತ್ಯುರ್ಮಹೀಕ್ಷಿತಃ ।
ಚರೋರರ್ಧಾರ್ಧಭಾಗಾಭ್ಯಾಂ ತಾಮಯೋಜಯತಾಮುಭೇ ॥

ಈ ಮಹಾಕವಿಗಳಿಬ್ಬರ ಅಭಿಪ್ರಾಯಗಳೂ ಅಧ್ಯಾತ್ಮರಾಮಾಯಣ ದಲ್ಲಿ ಹೇಳಿರುವಂತೆಯೇ ಇದೆ.

ಈ ಪುರಾಣಾಂತರದ ಅಭಿಪ್ರಾಯದೊಡನೆ ವಾಲ್ಮೀಕಿರಾಮಾಯಣ ದಲ್ಲಿ ಉಕ್ತವಾಗಿರುವ ಅಭಿಪ್ರಾಯವನ್ನೂ ಸಮನ್ವಯಗೊಳಿಸಲು ಒಬ್ಬ ವಿದ್ವಾಂಸರು ಶ್ಲೋಕದ ವ್ಯಾಖ್ಯಾನವನ್ನು ಈ ರೀತಿಯಾಗಿ ಮಾಡಿರುತ್ತಾರೆ.

ನರಪತಿಃ=ದಶರಥನು, **ಪಾಯಸಾರ್ಧಂ** =ಪ್ರಾಜಾಪತ್ಯಪುರುಷನಿಂದ ಉಪಲಬ್ಧವಾದ ಪಾಯಸದ ಅರ್ಧಾಂಶವನ್ನು, **ಕೌಸಲ್ಯಾಯೈ** = ಕೌಸಲ್ಯೆಗೆ ಕೊಡುವ ಕಾರಣದಿಂದ, **ದದೌ** = ವಿಭಾಗಿಸಿದನು, (ಇಲ್ಲಿ **ದದೌ** ಶಬ್ದವು **ದೋ–ಅವಖಂಡನೇ** ಎಂಬ ಧಾತುವಿನ ಲಿಟ್ ರೂಪದಲ್ಲಿರುತ್ತದೆ.) ಪಾಯಸದ ಅರ್ಧಭಾಗ ಕೌಸಲ್ಯೆಗೆ ಕೊಡುವ ಉದ್ದೇಶದಿಂದ ಮಾಡಿದ್ದೆಂದು ಅರ್ಥಮಾಡಬಹುದಾಗಿದೆ. ಕೌಸಲ್ಯೆಗೆ ಕೊಡುವ ಉದ್ದೇಶದಿಂದ ವಿಭಾಗಿಸಿದ ಪಾಯಸದ ಸಮಾರ್ಧದಲ್ಲಿ ಅರ್ಧವನ್ನು ಕೌಸಲ್ಯೆಗೆ ಕೊಟ್ಟನು. ಉಳಿದರ್ಧ ವನ್ನು ಸುಮಿತ್ರೆಗೆ ಕೊಟ್ಟನು. **ಅವಶಿಷ್ಟಾರ್ಧಂ (ಅವಶಿಷ್ಟಸ್ಯ ಅರ್ಧಸ್ಯ ಅರ್ಧಂ = ಅರ್ಥಾತ್ ಚತುರ್ಥಭಾಗಂ)** =ಉಳಿದ ಅರ್ಧದ ಅರ್ಧಭಾಗ ವನ್ನು ಎಂದರೆ ನಾಲ್ಕನೆಯ ಒಂದಂಶವನ್ನು **ಪುತ್ರಾರ್ಥಕಾರಣಾತ್** = ಪುತ್ರಪ್ರಾಪ್ತಿಗಾಗಿ **ಕೈಕೇಯ್ಯೈ ಚ**= ಕೈಕೇಯಿಗೂ **ದದೌ** = ಕೊಟ್ಟನು. **ಅಮೃತೋಪಮಂ** = ಅಮೃತಸ್ವರೂಪವಾದ, **ಅವಶಿಷ್ಟಾರ್ಧಂ** = **ಅವ ಶಿಷ್ಟಂ= ಅರ್ಧಂ=ಯಸ್ಯ ತತ್ ಚತುರ್ಥಾಂಶಂ** ಕೈಕೇಯಿಗೆ ಕೊಟ್ಟನಂತರ

ಉಳಿದ ಅರ್ಧಭಾಗವನ್ನು ಎಂದರೆ ಚತುರ್ಥಾಂಶವನ್ನು, **ಅನುಚಿಂತ್ಯ** = ಆಲೋಚಿಸಿ, **ಸುಮಿತ್ರಾಯೈ** = ಸುಮಿತ್ರಾದೇವಿಗೆ **ಪುನಃ ದತ್ತವಾನ್** = ಪುನಃ ಕೊಟ್ಟನು.

ಈ ರೀತಿಯಾಗಿ ವ್ಯಾಖ್ಯಾನಮಾಡಿದಲ್ಲಿ ವಾಲ್ಮೀಕಿರಾಮಾಯಣಕ್ಕೂ ಪುರಾಣಾಂತರಗಳಿಗೂ ವಿರೋಧವುಂಟಾಗುವುದಿಲ್ಲವೆಂದು ಇವರ ಅಭಿ ಪ್ರಾಯವಾಗಿದೆ. ಹದಿನೆಂಟನೆಯ ಸರ್ಗದಲ್ಲಿ ಹತ್ತನೆಯ ಶ್ಲೋಕದಲ್ಲಿ ಹೇಳಿರುವ ಮತ್ತು ಇದೇ ಪ್ರಕರಣದಲ್ಲಿಯೇ ಪ್ರಸ್ತಾಪಿಸಿರುವ **ವಿಷ್ಣೋರರ್ಧಂ ಮಹಾಭಾಗಂ** ಎಂಬ ಶ್ಲೋಕದ ವಿಷಯವಾಗಿ ಈ ವಿದ್ವಾಂಸರು ಸಮಾಧಾನವನ್ನು ಹೀಗೆ ಹೇಳಿರುತ್ತಾರೆ :

"**ಪುಂಸ್ಯರ್ಧೋಽರ್ಧಂ ಸಮೇಽಂಶಕೇ** ಎಂದು ಅಮರಕೋಶ ದಲ್ಲಿರುವಂತೆ ವಿಷ್ಣೋರರ್ಧಂ ಎಂದರೆ ವಿಷ್ಣುವಿನ ಅರ್ಧಾಂಶವೆಂದು ಹೇಳ ಬಹುದಾದರೂ ಅಮರಸಿಂಹನೇ ಹೇಳಿರುವ **ಅರ್ಧಸ್ತುರೀಯಭಾಗೇಸ್ಯಾತ್** ಎಂಬ ಕೋಶದ ಪ್ರಕಾರ ವಿಷ್ಣುವಿನ ಚತುರ್ಥಾಂಶನಾದ ಶ್ರೀರಾಮ ಎಂದು ಅರ್ಥಮಾಡುವುದು ಈ ಸಂದರ್ಭದಲ್ಲಿ ಸೂಕ್ತವಾಗಿದೆ. ಮುಂದಿನ ಶ್ಲೋಕ ದಲ್ಲಿಯೇ **ವಿಷ್ಣೋರರ್ಧಸಮನ್ವಿತೌ (ವಿಷ್ಣೋಃ ತುರೀಯಭಾಗ ಸಮನ್ವಿತೌ ಚತುರ್ಥಾಂಶಸಮನ್ವಿತೌ ಲಕ್ಷ್ಮಣ-ಶತ್ರುಘ್ನೌ)** ಲಕ್ಷ್ಮಣ-ಶತ್ರುಘ್ನರಿಬ್ಬರೂ ವಿಷ್ಣುವಿನ ಚತುರ್ಥಾಂಶವನ್ನು ಹೊಂದಿದವರಾಗಿದ್ದರು—ಎಂದೂ ಸಮನ್ವಯಮಾಡಬಹುದಾಗಿದೆ. ಹೀಗೆ ಅರ್ಥಮಾಡುವುದರಿಂದ ಹಿಂದೆ ಇದೇ ಪ್ರಕರಣದಲ್ಲಿ ಇದೇ ಶ್ಲೋಕದ ವಿಷಯವಾಗಿ ಹೇಳಿರುವ ಅನನ್ವಯವು ಸಮನ್ವಯವಾದಂತಾಗುವುದು"—ಎಂಬುದು ಇವರ ಅಭಿಪ್ರಾಯವಾಗಿದೆ.

ಹೀಗೆ ಅರ್ಥಮಾಡಿದರೆ ರಾಮ-ಲಕ್ಷ್ಮಣ-ಭರತ-ಶತ್ರುಘ್ನರು ವಿಷ್ಣು ವಿನ ನಾಲ್ಕು ಸಮಭಾಗಗಳಾಗಿ ಅವತರಿಸಿದರೆಂದು ಅರ್ಥಮಾಡ ಬೇಕಾಗುತ್ತದೆ. ಶ್ರೀರಾಮನು ಅರ್ಧ ಎಂದರೆ ತುರೀಯಭಾಗ ಅರ್ಥಾತ್ ನಾಲ್ಕನೇ ಒಂದು ಭಾಗ. ಭರತನು ಸ್ಪಷ್ಟವಾಗಿಯೇ ಹೇಳಿರುವಂತೆ ವಿಷ್ಣುವಿನ ನಾಲ್ಕನೇ ಒಂದು ಭಾಗ. ಲಕ್ಷ್ಮಣ-ಶತ್ರುಘ್ನರು ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿರುವಂತೆ ವಿಷ್ಣುವಿನ ಅರ್ಧಭಾಗ + .

ಈ ಎಲ್ಲವನ್ನೂ ಕ್ರೋಡೀಕರಿಸಿ ನಮ್ಮ ಅಭಿಪ್ರಾಯವನ್ನು ಮಂಡಿಸುತ್ತೇವೆ :

1) **ದದೌ**–ಎಂಬ ಪದಕ್ಕೆ ಒಂದು ಬಾರಿ ವಿಭಾಗಮಾಡಿದನು ಎಂದು ಅರ್ಥೈಸುವುದೂ ಮತ್ತು ಅದೇ ಪರಂಪರೆಯಲ್ಲಿಯೇ ಉಳಿದ ಕಡೆಗಳಲ್ಲಿ 'ಕೊಟ್ಟನು' ಎಂದು ಅರ್ಥಮಾಡುವುದೂ ಸರಿಯಲ್ಲ. ಇಲ್ಲಿ ಪಕ್ಷಸಮರ್ಥನೆಗಳಿಗೆ ಬಲಾತ್ಕಾರದಿಂದ ಅರ್ಥಗಳನ್ನು ತೆಗೆದಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

2) ವಾಲ್ಮೀಕಿರಾಮಾಯಣದ ಅನಂತರ ಬಂದ ಗ್ರಂಥಗಳನ್ನು ಅವಲಂಬಿಸಿ ಅರ್ಥ-ತಾತ್ಪರ್ಯಗಳನ್ನು ಹೇಳುವುದಕ್ಕಿಂತಲೂ ವಾಲ್ಮೀಕಿ ರಾಮಾಯಣವೇ ನೇರವಾಗಿ ಹೇಳುವ ಅರ್ಥ-ತಾತ್ಪರ್ಯಗಳನ್ನು ಗ್ರಹಿಸುವುದೇ ಉತ್ತಮಕಲ್ಪ.

3) ಪರಮಾತ್ಮನು ಪರಿಪೂರ್ಣ. ಆ ಅಖಂಡಪರಬ್ರಹ್ಮದಲ್ಲಿ ಅರ್ಧ, ಕಾಲು, ಮುಕ್ಕಾಲು ಇತ್ಯಾದಿ ವಿಭಾಗವೇ ತಾತ್ತ್ವಿಕವಾಗಿ ಸರಿಯಲ್ಲ. ಆದರೆ ವ್ಯಾವಹಾರಿಕವಾಗಿ ಭಗವಂತನ ಅವತಾರವಿಶಿಷ್ಟತೆಗಳನ್ನು ಹೇಳುವಾಗ ಆಯಾ ಅವತಾರದ ನಿರ್ದಿಷ್ಟವಾದ ಗುಣ ಮತ್ತು ಕಾರ್ಯಗಳಿಗೆ ಅನುಗುಣ ವಾಗಿ ಅರ್ಧ, ಕಾಲು, ಇತ್ಯಾದಿ ವಿಭಾಗಗಳನ್ನು ನಮ್ಮ ಮನಸ್ಸಿನ ಸಂಸ್ಕಾರ ಕ್ಕೋಸ್ಕರ ಮಹರ್ಷಿಗಳು ಹೇಳುವುದುಂಟು. ಇದರ ಪ್ರಕಾರ ಶ್ರೀರಾಮನು ಲಕ್ಷ್ಮಣಾದಿಗಳಿಗಿಂತಲೂ ಗುಣಗಳಲ್ಲೂ ದೊಡ್ಡವನು ಮತ್ತು ಕಾರ್ಯ ಸಾಧನೆಯಲ್ಲಿಯೂ ದೊಡ್ಡವನು ಆಗಿರುವುದರಿಂದ ಅವನನ್ನು ಇತರರಂತೆ ಪಾಯಸದ ಕಾಲುಭಾಗ ಎನ್ನುವುದಕ್ಕಿಂತಲೂ ಅರ್ಧಭಾಗ ಎಂದು ಹೇಳುವುದೇ ಯುಕ್ತವಾಗಿದೆ. "ನಾಲ್ವರು ಪುತ್ರರೂ ಮಹಾವಿಷ್ಣುವಿನ ಅಂಶವಾಗಿ ಮಹಾತ್ಮರಾಗಿದ್ದರೂ ಶ್ರೀರಾಮನ ವಿಶಿಷ್ಟತೆಗಾಗಿ ಅವನನ್ನು ಮಾತ್ರ ವಿಷ್ಣುವಿನ ಅರ್ಧಭಾಗ"–ಎಂದು ಹೇಳಿದೆ. ಹಾಗೆಯೇ ಉಳಿದ ಮೂವರಲ್ಲಿಯೂ ಲಕ್ಷ್ಮಣನಿಗೆ ಸ್ವಲ್ಪ ಶ್ರೇಷ್ಠತೆಯನ್ನು ಹೇಳಬೇಕು. ಏಕೆಂದರೆ : ಭರತ-ಶತ್ರುಘ್ನರು ಬುದ್ಧಿತತ್ತ್ವ ಮತ್ತು ಮನಸ್ತತ್ತ್ವಗಳ ಅವತಾರ. ಲಕ್ಷ್ಮಣನು ಆ ತತ್ತ್ವಗಳಿಗಿಂತಲೂ ಶ್ರೇಷ್ಠವಾಗಿರುವ ಕುಂಡಲಿನೀತತ್ತ್ವ (ಆದಿಶೇಷ) ಎಂಬುದರ ಅವತಾರ. ವ್ಯಾವಹಾರಿಕವಾಗಿಯೂ ಅವನು ಇತರರಿಗೆ ಅಸಾಧ್ಯ

ವಾಗಿದ್ದ ಇಂದ್ರಜಿತುವಿನ ಸಂಹಾರವೆಂಬ ಅದ್ಭುತಕಾರ್ಯವನ್ನು ಮಾಡುವುದಕ್ಕಾಗಿ ಹುಟ್ಟಿ ಅದನ್ನು ಸಾಧಿಸಿದವನು. ಈ ಕಾರಣದಿಂದ ಅವನನ್ನು ವಿಷ್ಣುವಿನ ನಾಲ್ಕನೆಯ ಒಂದು ಭಾಗ ಎಂಬುದಾಗಿಯೂ, ಭರತ-ಶತ್ರುಘ್ನರನ್ನು ಎಂಟನೆಯ ಒಂದು ಭಾಗ ಎಂಬುದಾಗಿಯೂ ಭಾವಿಸಿರುವುದು ಸಹಜವಾಗಿದೆ”–ಎಂದು ಶ್ರೀರಂಗಮಹಾಗುರುಗಳು ಅಪ್ಪಣೆಕೊಡಿಸುತ್ತಿದ್ದರು. ವಾಲ್ಮೀಕಿರಾಮಾಯಣದ ಶ್ಲೋಕಗಳಲ್ಲಿಯೂ ಇದೇ ಅರ್ಥವೇ ಸಹಜವಾಗಿ ಕಂಡುಬರುತ್ತದೆ.

ಈ ವಿವರಣೆಯ ಮೇಲಿರುವ ಆಕ್ಷೇಪವು ಒಂದೇ. ಅದೇನೆಂದರೆ : ಬಾಲಕಾಂಡದ 28ನೆಯ ಸರ್ಗದಲ್ಲಿ ಭರತನನ್ನು ಸಾಕ್ಷಾತ್ ವಿಷ್ಣುವಿನ ಚತುರ್ಥಾಂಶ (ಭಾಗ) ಮತ್ತು ಲಕ್ಷ್ಮಣ-ಶತ್ರುಘ್ನರು ವಿಷ್ಣುವಿನ ಅರ್ಧ ದಿಂದ ಕೂಡಿದ್ದವರು ಎಂದು ಹೇಳಿರುವುದು. ಇವುಗಳಲ್ಲಿ ಭರತನು ಚತುರ್ಥಾಂಶ ಎನ್ನುವುದಕ್ಕೆ ನಾಲ್ಕನೆಯ ಒಂದು ಭಾಗ (ಚತುರ್ಥಃ ಅಂಶಃ– ಕರ್ಮಧಾರಯಸಮಾಸ) ಎನ್ನುವುದರ ಬದಲು ನಾಲ್ಕನೆಯ ಭಾಗದ ಒಂದು ಅಂಶ ಅಂದರೆ, $^1/8$ ಭಾಗ (ಚತುರ್ಥಸ್ಯ ಅಂಶಃ, ತತ್ಪುರುಷಸಮಾಸ) ಎಂದು ಅರ್ಥಮಾಡುವುದು ಅಸಹಜವಾಗುವುದಿಲ್ಲ. ಪ್ರಸಿದ್ಧವಾದ ಅರ್ಥಕ್ರಮವೇ ಅದಾಗಿದೆ. ಎರಡನೆಯದಾಗಿ ಲಕ್ಷ್ಮಣ-ಶತ್ರುಘ್ನರು ವಿಷ್ಣುವಿನ ಅರ್ಧಭಾಗ ಎಂಬಲ್ಲಿ, ಅರ್ಧಶಬ್ದವು ಪುಲ್ಲಿಂಗ. ಅದಕ್ಕೆ ಅಂಶ ಅಥವಾ ಭಾಗ ಎಂಬ ಅರ್ಥವನ್ನು ತೆಗೆದುಕೊಳ್ಳುವುದು ಸಂದರ್ಭಕ್ಕೆ ಉಚಿತವಾಗಿದೆ. ಆ ಅರ್ಥದಲ್ಲಿ ಅದು ಪ್ರಸಿದ್ಧವೂ ಆಗಿದೆ. ಉದಾ : **‘ಪಶ್ಚಾರ್ಧೇನ ಪ್ರವಿಷ್ಟಃ ಶರಪತನಭಯಾತ್ ಭೂಯಸಾ ಪೂರ್ವಕಾಯಮ್’**–ಎಂಬ ಶಾಕುಂತಲದ ವಾಕ್ಯವನ್ನು ಗಮನಿಸಬಹುದು. ‘ಭಿತ್ತಂ ಶಕಲಖಂಡೇ ವಾ ಪುಂಸ್ಯರ್ಧಃ’-(ಅಮರಕೋಶ-1-3-100) ಎಂಬ ಕೋಶಕ್ಕೂ ಇದು ಅನುಗುಣವಾಗಿದೆ. ಲಕ್ಷ್ಮಣ-ಶತ್ರುಘ್ನರಿಬ್ಬರೂ ಶೇಷ ಮತ್ತು ಸುದರ್ಶನರ ಅವತಾರವಾಗಿದ್ದಂತೆಯೇ ಮಹಾವಿಷ್ಣುವಿನ ಅಂಶಗಳೂ ಆಗಿದ್ದರು ಎಂಬುದರಲ್ಲಿ ಯಾವ ವಿರೋಧವೂ ಇಲ್ಲ. ಇದಲ್ಲದೇ ಭರತ-ಶತ್ರುಘ್ನರು ಬುದ್ಧಿ ಮತ್ತು ಮನಸ್ಸು ಎಂಬ ಅಂತಃಕರಣಗಳ ಅವತಾರ

ವಾಗಿರುವುದರಿಂದ ಅವರಿಬ್ಬರೂ ಒಟ್ಟಿಗೆ ಇರುತ್ತಿದ್ದರು ಮತ್ತು ಇಬ್ಬರೂ ವಿಷ್ಣುವಿನ ಅಷ್ಟಮಾಂಶಗಳಾಗಿದ್ದರು.

ಒಟ್ಟಿನಲ್ಲಿ ವಾಲ್ಮೀಕಿರಾಮಾಯಣ ಮತ್ತು ಇತರ ಶಾಸ್ತ್ರವಾಕ್ಯಗಳು, ಉಪಪತ್ತಿಗಳು ಮತ್ತು ಜ್ಞಾನಿಶ್ರೇಷ್ಠರಾದ ಮಹಾಗುರುಗಳ ವಿವರಣೆ–ಇವುಗಳನ್ನನುಸರಿಸಿ ಶ್ರೀರಾಮನು ವಿಷ್ಣುವಿನ ಅರ್ಧಭಾಗ, ಲಕ್ಷ್ಮಣನು ಅಂಶ, ಭರತನು ಚತುರ್ಥ ಅಂಶ ($^1/_8$ ಭಾಗ) ಮತ್ತು ಶತ್ರುಘ್ನನೂ ಕೂಡ ಅವನಂತೆಯೇ $^1/_8$ ಅಂಶ ಎಂಬ ತಾತ್ಪರ್ಯವನ್ನು ಗ್ರಹಿಸುವುದು ಸರ್ವಾಂಶಗಳಲ್ಲಿಯೂ ಉಚಿತವಾಗಿದೆ–ಎಂಬ ಸಿದ್ಧಾಂತವನ್ನು ನಾವು ಈ ಪ್ರಕರಣದಲ್ಲಿ ಮಂಡಿಸುತ್ತೇವೆ.

ಶ್ರೀರಾಮನ ಜಾತಕ

ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ
ನಕ್ಷತ್ರೇಽದಿತಿದೈವತ್ಯೇ ಸ್ವೋಚ್ಚಸಂಸ್ಥೇಷು ಪಞ್ಚಸು ।
ಗ್ರಹೇಷು ಕರ್ಕಟೇ ಲಗ್ನೇ ವಾಕ್ಪತಾವಿನ್ದುನಾ ಸಹ ॥೯॥

ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕನಮಸ್ಕೃತಮ್ ।
ಕೌಸಲ್ಯಾಜನಯದ್ರಾಮಂ ದಿವ್ಯಲಕ್ಷಣಸಂಯುತಮ್ ॥೧೦॥

ಬಾಲಕಾಂಡದ ೧೮ನೆಯ ಸರ್ಗದಲ್ಲಿ ಬರುವ ಈ ಶ್ಲೋಕಗಳು ಶ್ರೀರಾಮನ ಜನ್ಮದಿನವನ್ನು ಹೇಳುವ ಶ್ಲೋಕಗಳಾಗಿವೆ.

ಮೊದಲನೆಯದಾಗಿ : **ತತಶ್ಚ ದ್ವಾದಶೇ ಮಾಸೇ**–ಪುತ್ರಕಾಮೇಷ್ಟಿ ಯಾಗವು ಮುಗಿದ ಹನ್ನೆರಡು ಮಾಸಗಳು ಕಳೆದನಂತರ.

ಇಲ್ಲಿಯ ಪ್ರಶ್ನೆಯೇನೆಂದರೆ ಕೌಸಲ್ಯಾ-ಕೈಕೇಯಿ-ಸುಮಿತ್ರೆಯರು ಹನ್ನೆರಡು ಮಾಸಗಳು ಗರ್ಭಧಾರಣೆಮಾಡಿದರೆ? **ದಶಮೇ ಮಾಸೇ ಸೂತವೇ** ಎಂಬ ಶ್ರುತಿಯಂತೆ ಮತ್ತು ಲೋಕರೂಢಿಯಂತೆ ಒಂಬತ್ತು ತುಂಬಿ ಹತ್ತನೆಯ ಮಾಸದಲ್ಲಿ ಪ್ರಸವವಾಗಬೇಕಾಗಿತ್ತಲ್ಲವೇ?

ಅಧ್ಯಾತ್ಮರಾಮಾಯಣದಲ್ಲಿ : **ದಶಮೇ ಮಾಸಿ ಕೌಸಲ್ಯಾ ಸುಷುವೇ ಪುತ್ರಮದ್ಭುತಮ್** ಎಂಬುದಾಗಿಯೇ ಇದೆ.

ತತ್ತ್ವಸಂಗ್ರಹರಾಮಾಯಣದಲ್ಲಿ : **ತತಶ್ಚ ದ್ವಾದಶೇ ಮಾಸೇ ವಸನ್ತರ್ತೌ ಮನೋರಮೇ** ಎಂಬುದಾಗಿ ಹೇಳಿದೆ.

ಪದ್ಮಪುರಾಣದಲ್ಲಿ **ಅಥ ಕಾಲೇ ಮನೋರಮ್ಯೇ** ಎಂದು ಇಷ್ಟು ಮಾತ್ರ ಹೇಳಿರುವರೇ ಹೊರತು–'ಇಂತಹುದೇ ಮಾಸದಲ್ಲಿ'–ಎಂಬುದನ್ನು ಸ್ಪಷ್ಟಪಡಿಸಿಲ್ಲ. ಅಧ್ಯಾತ್ಮರಾಮಾಯಣದಂತೆ ಹತ್ತನೆಯ ತಿಂಗಳಲ್ಲಿ ಕೌಸಲ್ಯೆಯು ಶ್ರೀರಾಮನನ್ನು ಹಡೆದಳು ಎಂದರೆ-ಗರ್ಭಧಾರಣೆಯಾದ ಹತ್ತನೆಯ ತಿಂಗಳು ಎಂದು ಅರ್ಥಮಾಡಬೇಕೇ ಹೊರತು ಪುತ್ರಕಾಮೇಷ್ಟಿ ಯಾಗವು ಮುಗಿದು ಹತ್ತನೆಯ ತಿಂಗಳು–ಎಂದು ಅರ್ಥಮಾಡಲು ಸಾಧ್ಯವಾಗುವುದಿಲ್ಲ. ವಾಲ್ಮೀಕಿರಾಮಾಯಣದಲ್ಲಿ ಇದನ್ನು ಸ್ಪಷ್ಟವಾಗಿಯೇ ಹೇಳಿದ್ದಾರೆ. '**ತತೋ ಯಜ್ಞೇ ಸಮಾಪ್ತೇ ತು ಋತೂನಾಂ ಷಟ್ ಸಮತ್ಯಯುಃ । ತತಶ್ಚ ದ್ವಾದಶೇ ಮಾಸೇ**'–'ಯಜ್ಞವು ಮುಗಿದು ಆರು ಋತುಗಳು ಕಳೆದನಂತರ ಹನ್ನೆರಡನೆಯ ಮಾಸದಲ್ಲಿ'–ಇದು ಬಹಳ ಸ್ಪಷ್ಟವಾಗಿದೆ. ಇದಕ್ಕೆ ಎರಡು ಬಗೆಯಲ್ಲಿ ಸಮಾಧಾನಹೇಳಬಹುದು. ಯಜ್ಞಮುಗಿದ ಹನ್ನೆರಡನೆಯ ತಿಂಗಳಲ್ಲಿ ಶ್ರೀರಾಮನು ಹುಟ್ಟಿದನೆಂಬುದು ನಿರ್ವಿವಾದ. ಪಾಯಸವಿಭಾಗದ ಪ್ರಕರಣದಲ್ಲಿ ವಿಶ್ಲೇಷಿಸುವಾಗ ಗರ್ಭಶುದ್ಧಿಗಾಗಿ ಪಾಯಸಪ್ರಾಶನ–ಎಂಬ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಹಾಗೆ ಪಾಯಸಪ್ರಾಶನದ ನಂತರ ಮೂವರು ರಾಣಿಯರ ಗರ್ಭವೂ ಶುದ್ಧಿಯಾಗಿ ಮೂರನೆಯ ತಿಂಗಳು ಗರ್ಭವನ್ನು ಧರಿಸಿ ಯಜ್ಞವು ಮುಗಿದ ಹನ್ನೆರಡನೆಯ ತಿಂಗಳಲ್ಲಿ ಪ್ರಸವಿಸಿರಬಹುದು. ಮತ್ತೊಬ್ಬ ವಿಚಾರವಂತರ ಅಭಿಪ್ರಾಯದಂತೆ ಯಾವ ಶಿಶುವು ಹುಟ್ಟಬೇಕಾದರೂ ಮೊದಲು ತಂದೆಯ ಗರ್ಭದಲ್ಲಿ ಮೂರು ಮಾಸಗಳು ಇರಬೇಕಾಗುತ್ತದೆ. ಅನಂತರ ತಾಯಿಯ ಗರ್ಭಕ್ಕೆ ಸೇರಿ ಒಂಬತ್ತು ತಿಂಗಳ ಪರ್ಯಂತವಾಗಿ ಬೆಳೆದು ಹತ್ತನೆಯ ತಿಂಗಳಿನಲ್ಲಿ ಮಗುವು ಹುಟ್ಟುತ್ತದೆ. ಪ್ರಸಕ್ತಪ್ರಕರಣದಲ್ಲಿ ತಂದೆಯ ಹೊಟ್ಟೆಯಲ್ಲಿ ಶಿಶುವು ಇರದೇ ಪಾಯಸಪ್ರಾಶನದಿಂದಲೇ ರಾಣಿಯರು ಗರ್ಭವತಿಯ ರಾದುದರಿಂದ ಪುರುಷನ ಹೊಟ್ಟೆಯಲ್ಲಿರಬೇಕಾದ ಮೂರು ಮಾಸವೂ ಸೇರಬೇಕಾಗಿ ಬಂದು ಹನ್ನೆರಡನೆಯ ತಿಂಗಳಲ್ಲಿ ದಶರಥನ ಭಾರ್ಯೆಯರು ಪ್ರಸವಿಸಿದರು. ಈ ಎರಡರಲ್ಲಿ ಯಾವುದಾದರೂ ಒಂದನ್ನು ಮಾನ್ಯಮಾಡಬಹುದಾಗಿದೆ.

ಶ್ರೀರಾಮನು ಯಾವಾಗ ಹುಟ್ಟಿದನೆಂಬ ಬಗೆಗೆ ವಾಲ್ಮೀಕಿಗಳು ಕೆಲವು ಅಂಶಗಳನ್ನು ಸ್ಪಷ್ಟವಾಗಿಯೂ ಮತ್ತೆ ಕೆಲವು ಅಂಶಗಳನ್ನು ಅಸ್ಪಷ್ಟವಾಗಿಯೂ ಹೇಳಿದ್ದಾರೆ.

ಸ್ಪಷ್ಟವಾಗಿರುವ ಅಂಶಗಳು :

ಚೈತ್ರೇ ನಾವಮಿಕೇ ತಿಥೌ ।
ನಕ್ಷತ್ರೇಽದಿತಿದೈವತ್ಯೇ ಸ್ವೋಚ್ಚಸಂಸ್ಥೇಷು ಪಞ್ಚಸು ।
ಗ್ರಹೇಷು ಕರ್ಕಟೇ ಲಗ್ನೇ ವಾಕ್ಪತಾವಿನ್ದುನಾ ಸಹ ॥೧॥

ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕನಮಸ್ಕೃತಮ್ ॥
ಕೌಸಲ್ಯಾಜನಯದ್ರಾಮಂ ॥ ಪುನರ್ವಸೂನಕ್ಷತ್ರಮದಿತಿರ್ದೇವತಾ ಎಂಬ ಶ್ರುತಿವಾಕ್ಯದಂತೆ ಅದಿತಿದೇವತಾತ್ಮಕವಾದ ನಕ್ಷತ್ರವೆಂದರೆ ಪುನರ್ವಸೂ ನಕ್ಷತ್ರ. ಇದರಲ್ಲಿ ಸಂದೇಹವಿಲ್ಲ.

ಐದು ಗ್ರಹಗಳು ಯಾವುವು? ಎಂಬುದು ಸ್ಪಷ್ಟವಾಗಿಲ್ಲ. ಸ್ಥೂಲವಾಗಿ ವಿಮರ್ಶಿಸಿದಲ್ಲಿ–**ಕರ್ಕಟೇ ಲಗ್ನೇ ವಾಕ್ಪತಾವಿನ್ದುನಾ ಸಹ**–ಎಂದು ಹೇಳಿರುವುದರಿಂದ ಚಂದ್ರನು ಕರ್ಕಾಟಕದಲ್ಲಿದ್ದಾನೆ–ಎಂಬುದು ಸ್ಪಷ್ಟ. ಚಂದ್ರನಿಗೆ ಕರ್ಕಾಟಕವು ಸ್ವಸ್ಥಾನವೇ ಹೊರತು ಉಚ್ಚಸ್ಥಾನವಲ್ಲ. ಕರ್ಕಾಟಕವು ಬೃಹಸ್ಪತಿಗೆ ಉಚ್ಚಸ್ಥಾನ. ಚೈತ್ರಮಾಸವಾದುದರಿಂದ ಮೇಷದಲ್ಲಿ ರವಿಯಿರಲು ಸಾಧ್ಯ. ಆದುದರಿಂದ ರವಿಯೂ ಉಚ್ಚಸ್ಥಾನದಲ್ಲಿರುವನೆಂದು ನಿರ್ಧರಿಸಬಹುದು. ಬುಧನು ಯಾವಾಗಲೂ ಸೂರ್ಯನ ಹಿಂದೆ ಮತ್ತು ಮುಂದೆ (ಮೀನ ಅಥವಾ ವೃಷಭದಲ್ಲಿ) ಇರುವವನಾದುದರಿಂದ ಬುಧನು ಉಚ್ಚನಾಗಿರುವ ಸಾಧ್ಯತೆಯಿಲ್ಲ. ಬುಧನು ಕನ್ಯೆಯಲ್ಲಿ ಉಚ್ಚನು. ಉಳಿದಂತೆ ಶುಕ್ರನು ಮೀನದಲ್ಲಿಯೂ, ಶನಿಯು ತುಲಾದಲ್ಲಿಯೂ, ಕುಜನು ಮಕರದಲ್ಲಿಯೂ ಇದ್ದು ಈ ಮೂವರು ಉಚ್ಚಸ್ಥಾನದಲ್ಲಿದ್ದರೆಂದು ಹೇಳ ಬಹುದು. ರಾಹು-ಕೇತುಗಳ ಸ್ಥಾನಗಳನ್ನು ಇಲ್ಲಿ ಹೇಳದಿದ್ದರೂ ಕೆಲವರು ಕನ್ಯಾ ಮತ್ತು ಮೀನರಾಶಿಗಳಲ್ಲಿದ್ದರೆಂದೂ, ಕೆಲವರು ಧನುಸ್ಸು ಮತ್ತು ಮಿಥುನರಾಶಿಗಳಲ್ಲಿದ್ದರೆಂದೂ ಹೇಳಿದ್ದಾರೆ.

ವಾಲ್ಮೀಕಿಗಳು ಹೇಳದಿದ್ದರೂ ಊಹೆಮಾಡಿ ನಾವು ಗ್ರಹಗಳನ್ನು

ಹೀಗೆ ಎಣಿಸಬಹುದಾಗಿದೆ. ಮೇಷದಲ್ಲಿ ರವಿ (ಉಚ್ಚ), ವೃಷಭದಲ್ಲಿ ಬುಧ, ಮಿಥುನದಲ್ಲಿ ಕೇತು, ಕರ್ಕಾಟಕದಲ್ಲಿ (ಲಗ್ನದಲ್ಲಿ) ಚಂದ್ರ ಮತ್ತು ಗುರು (ಉಚ್ಚ), ತುಲಾದಲ್ಲಿ ಶನಿ (ಉಚ್ಚ), ಧನುಸ್ಸಿನಲ್ಲಿ ರಾಹು, ಮಕರದಲ್ಲಿ ಕುಜ (ಉಚ್ಚ), ಮೀನದಲ್ಲಿ ಶುಕ್ರ (ಉಚ್ಚ).

ಸಾಮಾನ್ಯವಾಗಿ ಎಲ್ಲ ವಿದ್ವಾಂಸರೂ ಇದನ್ನು ಅನುಮೋದಿಸಿ ವ್ಯಾಖ್ಯಾನಮಾಡಿರುತ್ತಾರೆ. ಹಾಗೆ ವ್ಯಾಖ್ಯಾನಮಾಡುವಾಗ ಒಂದೊಂದು ಗ್ರಹವೂ ಆ ಸ್ಥಾನದಲ್ಲಿದ್ದರೆ ಎಂತಹ ಫಲವೆಂಬುದನ್ನು ಶಾಸ್ತ್ರಾಧಾರಗಳಿಂದ ವಿವರಿಸಿದ್ದಾರೆ. ಮಹಾಪುರುಷನ ಜಾತಕ ಎಂಬುದನ್ನು ಎಲ್ಲರೂ ಪ್ರತಿಪಾದಿಸಿದ್ದಾರೆ. ಆದರೆ ಹೀಗೆ ಜಾತಕವಿರಲು ಸಾಧ್ಯವೇ?–ಎಂಬುದನ್ನು ಯಾರೂ ವಿವೇಚಿಸಿದಂತೆ ಕಾಣುವುದಿಲ್ಲ. ಅಂತಹ ಸ್ವಭಾವವೂ ನಮ್ಮದಲ್ಲ. ಋಷಿಪ್ರಣೀತವಾದ ಗ್ರಂಥದಲ್ಲಿ ದೋಷಗಳಿರುವುದಿಲ್ಲವೆಂಬುದೇ ನಮ್ಮ ಸಿದ್ಧಾಂತವಾಗಿದೆ. ಆದರೆ ನಮ್ಮ ಗ್ರಂಥಗಳನ್ನು ಹಳಿಯುವುದಕ್ಕಾಗಿಯೇ ಹುಟ್ಟಿರುವ ಆಂಗ್ಲರ ಅಥವಾ ಆಂಗ್ಲಸಂಪ್ರದಾಯದವರ ರೀತಿ-ನೀತಿಗಳು ಹಾಗಲ್ಲ. ಅವರು ನಮ್ಮ ಗ್ರಂಥಗಳಲ್ಲಿ ಯಾವುದಾದರೂ ದೋಷವನ್ನು ಹುಡುಕಲು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಲೇ ಇರುತ್ತಾರೆ. ಈ ಪ್ರಸಂಗವು ಅವರಿಗೆ ಒಂದು ರಸಕವಳದಂತೆ ಸಿಕ್ಕಿದೆ. ಈ ದೋಷವನ್ನು ಪ್ರಸ್ತಾಪಿಸುವ ಮೊದಲು ನಮ್ಮ ಇತರ ಗ್ರಂಥಗಳಲ್ಲಿ ಈ ವಿಷಯವು ಹೇಗೆ ಪ್ರಸ್ತಾಪಿತ ವಾಗಿರುವುದೆಂಬುದನ್ನು ನೋಡೋಣ.

ಅಧ್ಯಾತ್ಮರಾಮಾಯಣದಲ್ಲಿ :

ಮಧುಮಾಸೇ ಸಿತೇ ಪಕ್ಷೇ ನವಮ್ಯಾಂ ಕರ್ಕಟಕೇ ಶುಭೇ ।
ಪುನರ್ವಸ್ವೃಕ್ಷಸಹಿತೇ ಉಚ್ಚಸ್ಥೇ ಗ್ರಹಪಞ್ಚಕೇ ॥೧೪॥

ಮೇಷಂ ಪೂಷಣಿ ಸಂಪ್ರಾಪ್ತೇ ಪುಷ್ಪವೃಷ್ಟಿಸಮಾಕುಲೇ
ಆವಿರಾಸೀತ್ ಜಗನ್ನಾಥಃ ಬಾಲಕಾಂಡ ಸರ್ಗ-೩

ಇಲ್ಲಿ ಮುಖ್ಯವಾಗಿ ಸೂರ್ಯನು ಮೇಷದಲ್ಲಿದ್ದನೆಂಬ ವಿಷಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ ಮತ್ತು ಐದು ಗ್ರಹಗಳೂ ಉಚ್ಚದಲ್ಲಿದ್ದುವೆಂಬುದನ್ನೂ ಸ್ಪಷ್ಟವಾಗಿ ಹೇಳಿದ್ದಾರೆ.

ತತ್ತ್ವಸಂಗ್ರಹರಾಮಾಯಣದಲ್ಲಿ :

ಚೈತ್ರಶುಕ್ಲನವಮ್ಯಾಂ ತು ನಕ್ಷತ್ರೇಽದಿತಿದೈವತೇ ।
ಮಧ್ಯಾಹ್ನೇ ಕರ್ಕಟೇ ಲಗ್ನೇ ಉಚ್ಚಸ್ಥೇ ಗ್ರಹಪಞ್ಚಕೇ ।
ಮೇಷಂ ಪೂಷಣಿ ಸಂಪ್ರಾಪ್ತೇ ವಾಕ್ಪತಾವಿನ್ದುನಾ ಸಹ ॥೮॥

ಇಲ್ಲಿಯೂ ಸೂರ್ಯನು ಮೇಷರಾಶಿಯಲ್ಲಿದ್ದನೆಂಬುದನ್ನೂ, ಐದು ಗ್ರಹಗಳು ಉಚ್ಚವಾಗಿದ್ದುವೆಂಬುದನ್ನೂ ಸ್ಪಷ್ಟವಾಗಿ ಹೇಳಿದ್ದಾರೆ.

ಪದ್ಮಪುರಾಣದಲ್ಲಿ :

ಶುಕ್ಲೇ ನವಮ್ಯಾಂ ವಿಮಲೇ ನಕ್ಷತ್ರೇಽದಿತಿದೈವತೇ ।
ಮಧ್ಯಾಹ್ನಸಮಯೇ ಲಗ್ನೇ ಸರ್ವಗ್ರಹಶುಭಾನ್ವಿತೇ ॥
ಕೌಸಲ್ಯಾ ಜನಯಾಮಾಸ

ಇಲ್ಲಿ ವಿವರಗಳು ಹೆಚ್ಚಿಲ್ಲದಿದ್ದರೂ ಉಳಿದ ಗ್ರಂಥಗಳಲ್ಲಿ ಹೇಳಿರುವಂತೆಯೇ ಇಲ್ಲಿಯೂ ಹೇಳಿದ್ದಾರೆ. ಆದರೆ ಮುದ್ರಣದೋಷವೋ ಅಥವಾ ಹಾಗೂ ಇದ್ದೀತೋ ತಿಳಿಯದು. **ನಕ್ಷತ್ರೇಽದಿತಿದೈವತೇ**–ಎಂಬುದನ್ನು **ನಕ್ಷತ್ರೇ ದಿತಿದೇವತೇ** ಎಂಬುದಾಗಿ ಮುದ್ರಿಸಿದ್ದಾರೆ. ಅರ್ಥ ಬರೆಯುವಾಗ ಚೈತ್ರಮಾಸದ ಶುದ್ಧ ನವಮಿಯ ಪುಷ್ಯನಕ್ಷತ್ರದಲ್ಲಿ (ಪದ್ಮಪುರಾಣ-ಅಧ್ಯಾಯ ೨೬೯ ಪುಟ ೧೪ ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆ ಸಂಖ್ಯೆ-೧೬) ಎಂದು ಅರ್ಥವನ್ನು ಬರೆದಿರುತ್ತಾರೆ. ಪ್ರಸಿದ್ಧಾರ್ಥವನ್ನು ಬಿಟ್ಟು ಇವರು ಹೀಗೇಕೆ ಅರ್ಥಮಾಡಿದರೋ ತಿಳಿಯದು. ಅದಿತಿದೇವತಾಕವಾದುದು ಪುನರ್ವಸೂನಕ್ಷತ್ರವೇ ಹೊರತು ಪುಷ್ಯನಕ್ಷತ್ರವಾಗುವುದಿಲ್ಲ. ಪದವನ್ನು ಬಿಡಿಸಿ **ದಿತಿದೈವತೇ** ಎಂದೇ ಇಟ್ಟುಕೊಂಡರೂ ಪುಷ್ಯನಕ್ಷತ್ರವು ದಿತಿದೈವತಾಕವಾದುದಲ್ಲ. ಬೃಹಸ್ಪತಿದೇವತಾಕವಾದುದು. ಆದುದರಿಂದ ಪುಷ್ಯನಕ್ಷತ್ರ ಎಂಬ ಅರ್ಥವು ವಿಮರ್ಶಕರ ದೃಷ್ಟಿಯಿಂದ ಸಾಧುವಾಗಿ ಕಂಡರೂ ತಾತ್ತ್ವಿಕವಾಗಿ 'ಪುಷ್ಯನಕ್ಷತ್ರ' ಎಂಬ ಅರ್ಥವು ಈ ಪ್ರಕರಣದಲ್ಲಿ ಸರಿಹೊಂದುವುದಿಲ್ಲ.

ಭೋಜರಾಜವಿರಚಿತ ಚಂಪೂರಾಮಾಯಣದಲ್ಲಿ :

ಉಚ್ಚಸ್ಥೇ ಗ್ರಹಪಂಚಕೇ ಸುರಗುರೌ ಸೇನ್ದೌ ನವಮ್ಯಾಂ ತಿಥೌ ।
ಲಗ್ನೇ ಕರ್ಕಟಕೇ ಪುನರ್ವಸುಯುತೇ ಮೇಷಂ ಗತೇ ಪೂಷಣಿ ॥

ಎಂದು ಹೇಳಿ ಐದು ಗ್ರಹಗಳೂ ಉಚ್ಚವಾಗಿದ್ದುವೆಂಬುದನ್ನೂ– ಸೂರ್ಯನು ಮೇಷರಾಶಿಯಲ್ಲಿದ್ದನೆಂಬುದನ್ನೂ ಸ್ಪಷ್ಟವಾಗಿ ಹೇಳಿದ್ದಾರೆ.

ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ ಇವರು ಛಾಪಿಸಿರುವ ಪರಿಷ್ಕೃತಪ್ರತಿಯಲ್ಲಿ ಈ ಶ್ಲೋಕಗಳನ್ನೂ ಇದಕ್ಕೆ ಪೂರಕವಾಗಿರುವ **ಲಗ್ನೇ ಕರ್ಕಟಕೇ ಪ್ರಾಪ್ತೇ ಜನ್ಮ ರಾಮಸ್ಯ ಚ ಸ್ಥಿತೇ** ಎಂಬ ಅಯೋಧ್ಯಾಕಾಂಡದ ೧೫ನೆಯ ಸರ್ಗದ ಮೂರನೆಯ ಶ್ಲೋಕದ ಉತ್ತರಾರ್ಧವನ್ನೂ ಪ್ರಕ್ಷಿಪ್ತವೆಂದು ಬಿಟ್ಟಿರುತ್ತಾರೆ.

ಸಂಪಾದಕರು ಕೊಟ್ಟಿರುವ ಟಿಪ್ಪಣಿಯಲ್ಲಿ ಹೀಗೆ ಹೇಳಿದ್ದಾರೆ :

17th-After St. 5 The S. MSS give the horoscope of Rama with five planets in the ascendent position (Sun, Mars, Saturn, Jupiter and Venus) with Moon and Jupiter in the Karkataka Rasi in the Lagna. The Nakshatra is Punarvasu presided over by Aditi. This ideal horoscope appears to be a later addition.

ಆಧುನಿಕವಿಮರ್ಶಕರದ್ದೂ ಇದೇ ಅಭಿಪ್ರಾಯವಾಗಿದೆ. ಒಂದು ವಿಷಯವನ್ನು ಇವರಾರೂ ಗಮನಿಸಿದಂತಿಲ್ಲ. ಪ್ರಾಚೀನಗ್ರಂಥಗಳಿಗೆ ತಮ್ಮ ಅಭಿಪ್ರಾಯವನ್ನು ಸೇರಿಸಹೋಗುವವರು ಶುದ್ಧವಾಗಿ, ಸ್ಪಷ್ಟವಾಗಿ, ದೋಷರಹಿತವಾಗಿ ಸೇರಿಸುವರೇ ಹೊರತು ಅಸ್ಪಷ್ಟವಾಗಿ ಯಾರೂ ಸೇರಿಸ ಹೋಗುವುದಿಲ್ಲ. ಶ್ರೀರಾಮನ ಜಾತಕವನ್ನು ಬೇರೆಯವರೇ ಸೇರಿಸಿದ್ದಿದ್ದರೆ ಎಲ್ಲ ಗ್ರಹಗಳನ್ನೂ ಸ್ಪಷ್ಟವಾಗಿ ವಿವರಿಸಿ ಬರೆದು ಸೇರಿಸುತ್ತಿದ್ದರು. ಆದುದರಿಂದ ಈ ಪ್ರಕರಣವು ಪ್ರಕ್ಷಿಪ್ತವಲ್ಲ.

ಜಾತಕದಲ್ಲಿಯ ದೋಷವೇನು?

ಸೂರ್ಯನು ಮೇಷರಾಶಿಯಲ್ಲಿರುವಾಗ ನವಮಿಯ ದಿವಸ ಪುನರ್ವಸೂ ನಕ್ಷತ್ರವು ಬರುವುದಿಲ್ಲ. ಬರಲೂ ಸಾಧ್ಯವಿಲ್ಲ. ನಮ್ಮ ವಿದ್ವಾಂಸರನೇಕರು ಈ ವಿಷಯದಲ್ಲಿ ಕವಿವಾಕ್ಯವನ್ನು ಸಮರ್ಥಿಸಲು ಪ್ರಯತ್ನಿಸಿದ್ದಾರೆ. ಅದರಲ್ಲಿ ನಮಗೆ ತಿಳಿದಿರುವಂತೆ ಮೊದಲಿಗರೆಂದರೆ : ಶ್ರೀ ಚಾಮರಾಜೇಶ್ವರ ಸಂಸ್ಕೃತ ಪಾಠಶಾಲಾಧ್ಯಕ್ಷರಾಗಿದ್ದ ಸಿದ್ಧಾಂತಿ ಶ್ರೀ ತಮ್ಮಯ್ಯಶಾಸ್ತ್ರಿಗಳು.

1925ನೇ ಇಸವಿಯಲ್ಲಿಯೇ 'ಶ್ರೀರಾಮಾವತಾರಕಾಲಪ್ರಕಾಶಿಕಾ' ಎಂಬ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಅವರು ಪೂರ್ವಪಕ್ಷವನ್ನು ಮಂಡಿಸುವಾಗ ಹೀಗೆ ವಿವರಿಸುತ್ತಾರೆ :

ಪೂರ್ವಪಕ್ಷ

"ಚೈತ್ರಮಾಸ, ಶುಕ್ಲಪಕ್ಷ, ನವಮೀ, ಪುನರ್ವಸೂನಕ್ಷತ್ರ, ಮಧ್ಯಾಹ್ನ ಕರ್ಕಾಟಕಲಗ್ನದಲ್ಲಿ ಐದು ಗ್ರಹಗಳು ಸ್ವೋಚ್ಚಸ್ಥಾನದಲ್ಲಿರುತ್ತಿರಲಾಗಿ ಶ್ರೀರಾಮಾವತಾರವಾಯಿತೆಂದು ವಾಲ್ಮೀಕಿಮಹರ್ಷಿಗಳು ಹೇಳಿದ್ದಾರೆ. ಐದು ಗ್ರಹಗಳಿಗೆ ಉಚ್ಚತ್ವಕಲ್ಪನೆಯನ್ನು ಮಾಡಬೇಕಾದರೆ–ರವಿ, ಕುಜ, ಗುರು, ಶುಕ್ರ, ಶನಿ–ಇವರುಗಳಿಗೆ ತಾನೇ ಮಾಡಬೇಕು. ಚಂದ್ರನು ಗುರುವಿನಿಂದ ಕೂಡಿ ಕರ್ಕಾಟಕರಾಶಿಯಲ್ಲಿರುವುದರಿಂದ ಚಂದ್ರನು ಉಚ್ಚನಲ್ಲವು. ಬುಧನು ಯಾವಾಗಲೂ ಸೂರ್ಯನಿಗೆ ಪೂರ್ವ-ಪಶ್ಚಿಮದಿಕ್ಕುಗಳಲ್ಲಿ ಮೂರು ರಾಶಿಗಳಿಗಿಂತ ಹೆಚ್ಚು ದೂರದಲ್ಲಿರತಕ್ಕವನಲ್ಲವಾದುದರಿಂದ, ಚೈತ್ರಮಾಸ ದಲ್ಲಿ ಬುಧನು ಕನ್ಯಾರಾಶಿಗೆ ಬರುವುದಿಲ್ಲವಾದುದರಿಂದ ಅವನಿಗೂ ಉಚ್ಚತ್ವವಿಲ್ಲವು. ರಾಹು-ಕೇತುಗಳು ಛಾಯಾಗ್ರಹಗಳಾದುದರಿಂದ ಗರ್ಗ- ವರಾಹಮಿಹಿರಾದಿ ಬಹುಪ್ರಾಚೀನಾಚಾರ್ಯರು ರಾಹು-ಕೇತುಗಳಿಗೆ ಉಚ್ಚ- ನೀಚತ್ವವನ್ನು ಅಂಗೀಕರಿಸುವುದಿಲ್ಲ. ಅಥವಾ ಶ್ಲೋ॥ **ರಾಹೋಸ್ತು ವೃಷಭಂ ಕೇತೋಃ ವೃಶ್ಚಿಕಂ ತುಂಗಸಂಜ್ಞಿಕಮ್ ॥** ಎಂಬುದಾಗಿ ಒಂದೇ ಮತವನ್ನು ಅವಲಂಬಿಸಿದ್ದಾಗ್ಯೂ ರಾಹುವಿಗೆ ಉಚ್ಚತ್ವ ಬಂದಾಗ ಕೇತುವಿಗೂ ಸಹ ಏಕ ಕಾಲದಲ್ಲಿ ಉಚ್ಚತ್ವವನ್ನಂಗೀಕರಿಸಬೇಕಾಗುತ್ತದೆ. ಹಾಗಾಗುವ ಪಕ್ಷದಲ್ಲಿ ೬-೭ ಗ್ರಹಗಳಿಗೆ ಉಚ್ಚತ್ವವನ್ನು ಹೇಳಬೇಕಾದೀತು. ಶ್ಲೋ॥ **ತ್ರಿಗ್ರಹೋಚ್ಚೇ ತು ಸಾಮಂತಃ ಪಂಚೋಚ್ಚೇಲ್ಲೋಕನಾಯಕಃ ॥** ಎಂಬುದಾಗಿ ದೇವರ ಅವತಾರಕಾಲದಲ್ಲೇ ಐದು ಗ್ರಹಗಳಿಗೆ ಉಚ್ಚತ್ವವನ್ನು ಹೇಳುತ್ತಾರೆಯೇ ಹೊರತು ೬-೭ ಗ್ರಹಗಳಿಗೆ ಉಚ್ಚತ್ವವನ್ನು ಯಾವ ಶಾಸ್ತ್ರಜ್ಞರೂ ಹೇಳುವುದಿಲ್ಲ. ದೇವರಿಗಿಂತ ದೊಡ್ಡ ವಸ್ತುವಿಲ್ಲವಾದುದರಿಂದ, ೫ ಗ್ರಹಗಳಿಗಿಂತ ಹೆಚ್ಚಾಗಿ ಉಚ್ಚತ್ವಕಲ್ಪನೆಗೆ ಫಲವನ್ನು ಯಾವ ಶಾಸ್ತ್ರದಲ್ಲೂ ಯಾವ ಋಷಿಗಳೂ ಹೇಳಿಲ್ಲವಾದ್ದರಿಂದ, ರಾಹು-ಕೇತುಗಳಿಗೆ ಉಚ್ಚತ್ವವನ್ನಂಗೀಕರಿಸತಕ್ಕುದ್ದಲ್ಲವು. ಮೇಲೆ ಹೇಳಿದ ಪ್ರಕಾರ ಚಂದ್ರ-ಬುಧರನ್ನೂ, ರಾಹು-ಕೇತುಗಳನ್ನೂ ಬಿಟ್ಟು ಮಿಕ್ಕ ೫ ಗ್ರಹಗಳಿಗೆ

ಉಚ್ಚತ್ವಾಂಗೀಕಾರಮಾಡಬೇಕಾದ ಪಕ್ಷದಲ್ಲಿ-ಸೂರ್ಯ, ಕುಜ, ಗುರು, ಶುಕ್ರ, ಶನಿ–ಈ ೫ ಗ್ರಹಗಳನ್ನೇ ತೆಗೆದುಕೊಳ್ಳಬೇಕು. ಆ ರೀತಿ ಸೂರ್ಯಾದಿ ಗಳಿಗೆ ಸ್ಫುಟಕಲ್ಪನೆಮಾಡಿದ ಪಕ್ಷದಲ್ಲಿ ಸೂರ್ಯನಿಗೆ ಮೇಷರಾಶಿಸ್ಥಿತಿ ಯನ್ನಂಗೀಕರಿಸಬೇಕು. ಸ್ಫುಟಸೂರ್ಯನ ರಾಶಿ, ಭಾಗ, ಕಲೆ, ವಿಕಲೆಗಳು (೦ ।೦ ।೦ ।೫). ರಾಮಜನನಕಾಲಕ್ಕೆ ೫ ವಿನಾಡಿಗೆ ಮೊದಲು ಸೂರ್ಯನು ಮೇಷರಾಶಿಗೆ ಬಂದನು. ಸ್ಫುಟಚಂದ್ರನು ರಾಶ್ಯಾದಿ (೩ ।೩ ।೧೯ ।೫೫). ಈ ರೀತಿ ರವಿ-ಚಂದ್ರರ ಸ್ಫುಟವನ್ನು ಕಲ್ಪಿಸಬೇಕು. ಈ ರವಿ-ಚಂದ್ರರ ಸ್ಫುಟ ದಿಂದ ತಿಥ್ಯಾಯನಮಾಡಿದರೆ ಶ್ರೀರಾಮಜನನಕಾಲಕ್ಕೆ ಅಷ್ಟಮೀತಿಥಿಯೇ ಇರುತ್ತದೆಯೇ ಹೊರತು ನವಮೀತಿಥಿಯು ಬರುವುದಿಲ್ಲ. ನವಮೀ ತಿಥಿಯು ಬರಬೇಕಾದರೆ ೨ ಭಾಗ, ೪೦ ಕಲೆ, ೫ ವಿಕಲೆಗಳು ಸೂರ್ಯ ಸ್ಫುಟದಲ್ಲಿ ಕಡಿಮೆಯಾಗಬೇಕು ಅಥವಾ ಚಂದ್ರಸ್ಫುಟದಲ್ಲಿ ಹೆಚ್ಚಾಗಬೇಕು. ರವಿಸ್ಫುಟದಲ್ಲಿ ೫ ವಿಕಲೆಯನ್ನು ಕಡಿಮೆಮಾಡಿದರೆ–ರವಿಯು ಮೀನರಾಶಿಗೆ ಬರುತ್ತಾನೆ. ರವಿಗೆ ಉಚ್ಚಸ್ಥಾನಸ್ಥಿತಿಯು ಬರುವುದಿಲ್ಲ. ಚಂದ್ರಸ್ಫುಟದಲ್ಲಿ ೫ ವಿಕಲೆಯನ್ನು ಹೆಚ್ಚಿಸಿದರೆ–ಪುನರ್ವಸೂನಕ್ಷತ್ರವು ಕಳೆದುಹೋಗುತ್ತದೆ. ಆದ್ದರಿಂದ ಗ್ರಹಸ್ಫುಟಗಳನ್ನು ಹೆಚ್ಚು-ಕಡಿಮೆ ಮಾಡಲು ಸಾಧ್ಯವಿಲ್ಲ. ಮೇಷದಲ್ಲಿ ರವಿಯೂ, ನವಮೀತಿಥಿಯೂ, ಪುನರ್ವಸೂನಕ್ಷತ್ರವೂ–ಈ ಮೂರೂ ರಾಮಜನನಕಾಲಕ್ಕೆ ಗಣಿತಶಾಸ್ತ್ರರೀತ್ಯಾ ಸಂಭವಿಸುವುದೇ ಇಲ್ಲ. ಆದುದರಿಂದ **'ಸ್ವೋಚ್ಚಸ್ಥಾನೇಷುಪಞ್ಚಸು'**–ಎಂದರೆ ಐದು ಗ್ರಹಗಳು ಸ್ವಸ್ಥಾನ ಮತ್ತು ಉಚ್ಚಸ್ಥಾನದಲ್ಲಿರಲಾಗಿ–ಎಂದು ಅರ್ಥಮಾಡಬೇಕು. (ಚಂದ್ರ-ಸ್ವಸ್ಥಾನದಲ್ಲಿ, ಕುಜ-ಗುರು-ಶುಕ್ರ-ಶನಿ ಉಚ್ಚಸ್ಥಾನಗಳಲ್ಲಿ)–ಎಂದು ಹೇಳಿದ್ದಾರೆ."

ಶ್ರೀರಾಮನು ಹುಟ್ಟಿ ಇಂದಿಗೆ ೧೩,೦೧,೦೨೭ (ಹದಿಮೂರು ಲಕ್ಷದ ಒಂದು ಸಾವಿರದ ಇಪ್ಪತ್ತೇಳು) ವರ್ಷಗಳಾದುವೆಂದು ವೇ॥ ಬ್ರ॥ ಶ್ರೀ ತಮ್ಮಯ್ಯಶಾಸ್ತ್ರಿಗಳು ತಮ್ಮ ಗ್ರಂಥದಲ್ಲಿ ಹೇಳಿರುತ್ತಾರೆ. ಋಷಿವಾಕ್ಯಕ್ಕೆ ಶ್ಲೇಷಾರ್ಥವನ್ನು ಹೇಳಿ ಸಮರ್ಥಿಸುವುದು, (ಸ್ವೋಚ್ಚಸಂಸ್ಥೇಷು ಪಂಚಸು ಎನ್ನುವುದಕ್ಕೆ ತಮ್ಮ-ತಮ್ಮ ಉಚ್ಚಸ್ಥಾನಗಳಲ್ಲಿ ಎಂಬುದಕ್ಕೆ ಬದಲಾಗಿ ಸ್ವಸ್ಥಾನ- ಉಚ್ಚಸ್ಥಾನಗಳಲ್ಲಿ ಐದು ಗ್ರಹಗಳು ಇರಲಾಗಿ)–ಎಂದು

ಅರ್ಥಮಾಡುವುದು ಸರಿಯಲ್ಲ. ಅಧ್ಯಾತ್ಮರಾಮಾಯಣ, ಚಂಪೂರಾಮಾಯಣ, ಅಗಸ್ತ್ಯರಾಮಾಯಣದಲ್ಲಿರುವ ಸ್ಪಷ್ಟೋಕ್ತಿಗಳನ್ನು ಅಸಂಗತವಚನಗಳೆಂದು ಹೇಳುವುದೂ ಮಹಾಪರಾಧ. ವ್ಯಾಸ-ವಸಿಷ್ಠರೇ ಹೇಳಿರುವುದು ಸುಳ್ಳು ಎನ್ನುವುದಾದರೆ ಮುಂದೆ ನಾವು ಯಾರ ಮಾತನ್ನು ನಂಬಬೇಕು? ಆದುದರಿಂದ ಅಧ್ಯಾತ್ಮರಾಮಾಯಣದಲ್ಲಿರುವುದಾಗಲೀ ವಾಸಿಷ್ಠರಾಮಾಯಣದಲ್ಲಿರುವುದಾಗಲೀ–ಇರುವುದು ಅಸಂಗತವೂ ಅಲ್ಲ ; ಸುಳ್ಳೂ ಅಲ್ಲ. ನಮ್ಮ ಸೀಮಿತ ತಿಳಿವಳಿಕೆಗೆ ಅದು ತಿಳಿದುಬಂದಿಲ್ಲ. ಆದುದರಿಂದ ನಮ್ಮ ಘನವಿದ್ವಾಂಸರು ಇದನ್ನು ಸಮರ್ಥಿಸಬೇಕು. ಅದು ಅವರ ಕರ್ತವ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಸ್ವಲ್ಪಮಟ್ಟಿಗೆ ಕೃಷಿಮಾಡಿ ಲೇಖನವನ್ನು ಸಿದ್ಧಗೊಳಿಸಿಕೊಟ್ಟಿರುವ ನಮ್ಮ ಮಿತ್ರರಾದ ದಿವಂಗತ ವೇ|| ಬ್ರಂ|| ಶ್ರೀ ರಾಮದಾಸಶಾಸ್ತ್ರಿಗಳ ಮೊಮ್ಮಕ್ಕಳಾದ, ಟೆಲಿಫೋನ್ ಕಾರ್ಖಾನೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಮತ್ತು ರಿಸರ್ಚ್ ಅಸ್ಟ್ರಾನಮರ್ ಮತ್ತು ಅಸ್ಟ್ರಾಲಜರ್ ಆಗಿರುವ ಶ್ರೀ ಶಿವಕುಮಾರ್‌ರವರ ಲೇಖನವನ್ನು ಇಲ್ಲಿ ಕೊಡಲಾಗಿದೆ. ಮುಂದಿನ ಸಂಪುಟದ ವೇಳೆಗೆ ಇನ್ನೂ ಹಲವಾರು ವಿದ್ವಾಂಸರ ಲೇಖನಗಳನ್ನು ನಾವು ನಿರೀಕ್ಷಿಸುತ್ತೇವೆ.

ಋಷಿವಾಕ್ಯಸಮರ್ಥನೆ

ಭಗವಾನ್ ಶ್ರೀರಾಮನ ಜಾತಕದ ಮೇಲೆ ಅನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಲೇಖನಗಳನ್ನು ಬರೆದಿದ್ದಾರೆ. ರಾಮಾಯಣ ವನ್ನು ಓದುವವರಿಗೆಲ್ಲಾ–ಅದರಲ್ಲೂ ಜ್ಯೋತಿಷ್ಯಶಾಸ್ತ್ರವನ್ನು ತಿಳಿದವರಿಗೆ ಇಂತಹ ಅದ್ಭುತಕಲ್ಯಾಣಗುಣಗಳನ್ನು ಹೊಂದಿದ ಒಬ್ಬ ಆದರ್ಶವ್ಯಕ್ತಿ ಹುಟ್ಟಬೇಕಾದರೆ ಅವನು ಯಾವ ಗ್ರಹಸ್ಥಿತಿಗಳಿಂದ ಕೂಡಿದ ಜಾತಕನಾಗಿರ ಬೇಕು ಎನ್ನುವ ಒಂದು ಸಹಜವಾದ ಕುತೂಹಲ ಕೆರಳುತ್ತದೆ.

ಇಂದಿನ ಖಗೋಳವಿಜ್ಞಾನಕ್ಕಾದರೋ ಈ ಜ್ಯೋತಿಷ್ಯಶಾಸ್ತ್ರಜ್ಞರು ಹೇಳುವ ಗ್ರಹಸ್ಥಿತಿಯ ಜಾತಕವು ಖಗೋಳಶಾಸ್ತ್ರದ ಗಣಿತಕ್ಕೆ ನಿಲುಕುವಂತಹುದೇ ಅಥವಾ ಅಸಂಬದ್ಧ ನಂಬಿಕೆಗಳಿಂದ ಕೂಡಿದ ಒಂದು ಗ್ರಹಗಳ ಸ್ಥಿತಿಯ ಜಾತಕಚಕ್ರವೇ?–ಎನ್ನುವ ವಿಮರ್ಶಾತ್ಮಕಚರ್ಚೆಗೆ ಎಡೆಮಾಡಿಕೊಟ್ಟಿದೆ.

ಜ್ಯೋತಿಷ್ಯಶಾಸ್ತ್ರವು ಖಗೋಳಶಾಸ್ತ್ರದ ಅಡಿಪಾಯದ ಮೇಲೆ ನಿಂತಿದ್ದರೂ ಫಲಭಾಗದ ವಿಷಯದಲ್ಲಿ ತನ್ನದೇ ಆದ ವಿಶಿಷ್ಟವಾದ ನೀತಿಯನ್ನು ಪಾಲಿಸಿಕೊಂಡು ಹೋಗುತ್ತದೆ. ಫಲಭಾಗಕ್ಕೂ ಖಗೋಳಶಾಸ್ತ್ರಕ್ಕೂ ಈ ವಿಷಯದಲ್ಲಿ ಯಾವ ಸಾಮರಸ್ಯಗಳೂ ಕಂಡುಬರುವುದಿಲ್ಲ. ಖಗೋಳಗಣಿತದ ವಿಷಯದಲ್ಲಿ ಜ್ಯೋತಿಷ್ಯಶಾಸ್ತ್ರವು ಖಗೋಳಶಾಸ್ತ್ರಕ್ಕೆ ಶರಣುಹೋಗಬೇಕಾಗುತ್ತದೆ.

ಜಾತಕದ ಗ್ರಹಸ್ಥಿತಿಗಳನ್ನು ಹೇಳುವಾಗ ಅದು ಯಾವುದಾದರೂ ಒಂದು ಸಂಪ್ರದಾಯದ ಖಗೋಳಶಾಸ್ತ್ರದ ನಿಬಂಧನೆಗಳಿಗೆ ಖಂಡಿತ ವಾಗಿಯೂ ಒಳಪಟ್ಟಿರಬೇಕಾಗುತ್ತದೆ. ಈ ನಿಬಂಧನೆಗಳಿಗೆ ಒಳಪಡದಿದ್ದಾಗ ಅದನ್ನೇ ಆಧಾರವಾಗಿ ತೆಗೆದುಕೊಂಡು ಹೇಳುವ ಫಲಗಳೆಲ್ಲವೂ ತಪ್ಪಾಗಿ ಕೊನೆಗೆ ಆ ಶಾಸ್ತ್ರವೇ ಅವೈಜ್ಞಾನಿಕ ಮತ್ತು ಒಂದು ಗುಂಪಿನ ಜನರ ಮೂಢನಂಬಿಕೆಗಳ ಪ್ರತೀಕಗಳು–ಎಂದು ಎಲ್ಲರಿಂದಲೂ ಟೀಕೆಗೆ ಒಳಗಾಗ ಬೇಕಾಗುತ್ತದೆ.

ಇಂತಹ ಖಗೋಳಶಾಸ್ತ್ರದ ಟೀಕೆಗೆ ಒಳಗಾಗಿರುವ ಜಾತಕವೆಂದರೆ ರಾಮಾಯಣದಲ್ಲಿ ಬರುವ ಶ್ರೀರಾಮನ ಜಾತಕವೇ ಆಗಿದೆ. ಶ್ರೀರಾಮನ ಜಾತಕವನ್ನು ಕುರಿತು ವಿಮರ್ಶಾತ್ಮಕಲೇಖನವನ್ನು ಖಗೋಳಶಾಸ್ತ್ರರೀತಿಯಾಗಿ ಖಂಡನೆಗೆ ಒಳಪಡಿಸಿರುವ ಶ್ರೀ ರಾವ್‌ಬಹದ್ದೂರ್ ಸ್ವಾಮಿಕಣ್ಣು ಪಿಳ್ಳೆಯವರ ತರ್ಕ ಈ ಖಗೋಳವಿಜ್ಞಾನದ ಅಂಶಗಳನ್ನು ಒಳಗೊಂಡಿದೆ.

Ref : INDIAN EPHEMERIS A.D. 700 to A.D. 1799
V-I Part 1 GENERAL PRINCIPLES AND TABLES
APPENDIX (VII) PAGE 492 1 and 2.

The most interesting and the same time and the most complicated problems in chronological investigation may arise when we wish to ascertain the exact position of SUN or MOON or one or more of the planets on an ancient date or to verify an alleged ancient eclipse. The problem which confornts the chronologist in practice is

usually the converse of this. That is he may have come across an ancient record indicating that the SUN or MOON or one or more planets stood in a particular position or that there was a solar or lunar elcipse and he may wish to make use of these Astronomical facts to discover, establish or verify an ancient date.

2. The following are instances of such problems :

1) Valmiki Ramayana states that Rama was born on the 9th tithi of the Lunar month Chaitra, when five planets were in exaltation, and these planets are assumed to be the SUN, MARS, JUPITER, VENUS & SATURN. The Houses of exaltation of these five planets are Mesha (or Aries), Makara (or Capricorn), Karkataka (or Cancer), Meena (or Pisces) and Tula (or Libra). The chronologist may put himself the question, were these planets at any time in the positions named, on the 9th tithi of Chaitra and if so when? Whether the casting of such a horoscope was possible at any date which might be assigned on general consideration to Rama's birth, is a distinct question which the chronologist may have to answer by way of supplementing his answer to the first question

(INDIAN CHRONOLOGY SECOND EDITION PAGES 102-122) PAGE 112, CHAPTER 5 PLANTES SECTION III RAMA'S HOROSCOPE PARAS 278-282.

We may consider another example that of RAMA'S horoscope, along with which may treat Shankara's horoscope as given in Madhavacharya's Shankara Vijayam. We are told in Valmiki's Ramayana that Rama was born ``in the twelth month Chaitra (this is the Southern version) on the 9th tithi on a day of Nakshatra Punarvasu, when five planets were in their houses of exaltation and when Jupiter was in Karkataka as lagna along wiht the Moon." Mr. M.N. Datt's translation of the Ramayana, which presumably follows some northern version has-``and then, when the six seasons rolled away after the completion of the sacrifice, in the twelth month, on the ninth Lunar day, under the influence of Punarvasu asterism, when the Sun, the Moon, Saturn, Jupiter and Venus were at Aries, Capricorn, Libra, Cancer and Pisces and when Jupiter had arisen with the Moon at Cancer Kausalya gave birth to the lord of the Universe."

278. We may follow the southern version as being self-consistant, while Mr. M.N. Datt's

version places the Moon simultaneously in its house of exaltation (Rishabha) and in the lagna (Karkataka) which is impossible. The first Moon in Mr. M.N. Datt's version is probably a printer's error for Mars because Capricorn or Makara is Mars's house for Exaltation, not the Moon's. The reader unaquainted whith Astrology may have to be told that a planet's own house (vide paragraph 268) is different from the house of exltation now in question.

279. We may take it then that the five planets in exaltation in Rama's Horoscope were the Sun in Mesha (0° to 29°) the Venus in Meena (330°-359°) Mars in Makara (270°-299°) Jupiter in Karkataka (90°-119°) and Saturn in Tula (180°-209°).

280. We note that the month, solar or lunar in which Rama was born is described as the twelth month. Chaitra month is mentioned in the southern version and Chaitra can be described as the twelth month only with reference to the solar year. (Paragraph 152 subpara) when the Ramayana was first composed i.e. some few centuries before the christian era, we may be certain that the practice of casting horoscope at the birth

of a child however Royal or Divine was entirely unknown and it is very doubtful if the Hindus of that time were acquainted with the names, much less the movements, of any planets other than the Son and Moon. As already summarised, (Paragraph 245) the practice of casting horoscopes must have come into vogue about the time of Varaha Mihira (sixth century A.D.) and the casting of Rama's horoscope, whether it was deliberately cast with reference to a particular date, or merely imagined with reference to the supposed super excellence of the planets presiding over his birth, may be ascribed to the fifth or sixth century A.D. (Bentley in his Historical view of Hindu Astronomy vide page 115 below-ascribed it to the second or third century A.D.) There is good reason to suppose that the second of the motives here suggested really dictated the terms of this famous horoscope, the more so we find exactly the same attempt made and with the same planets, except Venus in the case of Shankara's horoscope. Omitting Venus, we shall find that the same investigation, following the method indicated, in this and the previous sections of this chapter, will do for both Rama's and Shankara's horoscopes,

supposing we decide to treat them as genuine horoscope.

281. The mention of the Month Chaitra as the twelth month of the lunisolar year in the case of Rama's horoscope is perfectly consistant with the solar month having been the first of the solar year, because we are given to understand, at any rate by a probable inference in the case of Rama's horoscope, that the Sun was in Mesha. (The well known inconsistancy in Rama's horoscope viz., that between the 9th tithi when the Moon must have had a longitude of at least 96° and Punarvasu nakshatra which by all systems cannot extend beyond $931/3^o$ of lognitude may be mentioned parenthetically, but we do not propose to notice it further on this occasion.) In Shankara's horoscope, according to Madhavacharya's Shankara Vijayam the Sun, Mars, Jupiter and Saturn were occupying exalted positions. That the Moon at the Shankara's birth was in Nakshatra Ardra and in the fifth Shukla tithi is the common tradition and we may accept these details, at any rate, as a working hypothesis.

295. The two tables set out above contain the results of an exhaustive search for Rama's horoscope, extending over a period of 4,000 years

from 3,102 B.C. to year of Kaliyuga to A.D. 900. Apart from the opportunity which they afford us of substantiating the claim advanced in Paragraph 257 Suprada viz., that by means of Table V-A and V-B it is possible to review the geocentric places of 5 planets during a period of 4,000 years, our present investigation table may be made to serve a Quasihistoric purpose ; 1) The framer of Rama's horoscope may have had in view not an actual year or an actual horoscope, but only an ideal horoscope in which five planets occupied exalted positions. If so the search for a year in which the five planets actually occupied such positions ranks no higher than as on astronomical pastime and is in no sense an historical problem. 2) For the reasons stated in Paragraphs 245 and 280 Supra we must as serious critics, dismiss the supposition that Rama's horoscope was actually calculated at the time of birth and that, in the absence of writing the details of that horoscope were preserved by tradition from Rama's epoch down to the time when the horoscope was inserted in Valmiki Ramayana. 3) It remains to consider a third alternative viz., that somebody, during the period when a study of planetary astrology

was possible in India viz., the period since about A.D. 300 actually noticed a year when five planets occupied exalted positions and framed Rama's horoscope in imitation of that actual horoscope. If the year or one of the years when the five planets occupied exalted positions was comprised in what we may designate the Astrological period i.e., the period since A.D. 300 and if it also was year in which it was possible for Rama's horoscope to be interpolated or inserted in the Ramayana, then the investigation will have served the Quasi-historical purpose of indicating the probable time when this insertion interpolation in the text of the Ramayana was carried out.

300. To enable the eye to take in rapidly the results of each year investigated on pages 118, 119 the position of nay planet suitable for Rama's horoscope is indicated in heavy arabic numerals and the reverse in italic numerals. Reviewing the fifteen years tabulated results as a whole we find that by Surya Siddhantha the conditions of Rama's horoscope would have been fully satisfied in two years, 2055 B.C. and 287 B.C. The positions were by Surya Siddhantha.

	Sun	Mars	Jupiter	Venus	Saturn
2055 B.C.	7°	279°	93°	358°	194°
287 B.C.	5°	270°	114°	or some what less in Meena 356°	184°
Rasi and House for Exaltation for each planet	Mesha	Makara	Karka-taka	Meena	Tula

To what extent historical literary criticism will be able to turn to account these two dates for Rama's horoscope is a speculation on which it would be foreign to our purpose to enter at present. We set out in paragraph 294 with the single preposition ; viz., to try and discover the year or years between 3102 B.C. and A.D. 900, which would satisfy Rama's horoscope and we have reached two astronomically correct solutions of this problems, understanding of course, by Astronomy the Indian science, and more particularly, the system of the Surya Siddhantha without Bija. 2055 B.C. was about the epoch when the Ramayana Epic was in process of evolution and construction, but Data are as yet wanting to enable us to affirm that Indian Astronomers of that time had the knowledge requisite for the construction of a horoscope like Rama's.

ಮೇಲಿನ ಬರವಣಿಗೆಯನ್ನು ಅವಲೋಕಿಸಿದರೆ ಶ್ರೀ ಸ್ವಾಮಿ ಕಣ್ಣು ಪಿಳ್ಳೆಯವರ ದೃಷ್ಟಿಯಲ್ಲಿ ಶ್ರೀರಾಮನ ಜಾತಕವನ್ನು ವಾಲ್ಮೀಕಿಮುನಿಗಳು ರಾಮಾಯಣದಲ್ಲಿ ಸೇರಿಸಲೇ ಇಲ್ಲ. ಹಿಂದೂಗಳಿಗೆ ಜ್ಯೋತಿಷ್ಯಶಾಸ್ತ್ರಜ್ಞಾನ ಕ್ರಿ.ಶ. 2ನೇ ಶತಮಾನದಲ್ಲಿ ಗ್ರೀಕರಿಂದ ತಿಳಿದುಬಂದು ಕ್ರಿ.ಶ. 5ನೇ ಶತಮಾನದಲ್ಲಿ ಅಂದರೆ ವರಾಹಮಿಹಿರರ ಕಾಲಕ್ಕೆ ಪ್ರಬುದ್ಧಾವಸ್ಥೆಗೆ ಬಂದಿದ್ದಾಗ, ಆ ಸಮಕಾಲೀನಜ್ಯೋತಿಷ್ಯರುಗಳಿಂದ ನಿರ್ಣಯಿಸಲ್ಪಟ್ಟು ಹಿಂದಿನಿಂದಲೂ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತಿದ್ದ ಶ್ರೀರಾಮನ ಕಾವ್ಯವಾದ ರಾಮಾಯಣದಲ್ಲಿ ವಾಲ್ಮೀಕಿಮುನಿಗಳಿಂದಲೇ ಬರೆದಿಡಲ್ಪಟ್ಟದ್ದು ಎಂದು ಸೇರಿಸಲ್ಪಟ್ಟ ಜಾತಕವಾಗಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರೊಂದಿಗೆ ಅದೇ ಗ್ರಹಸ್ಥಿತಿಗಳನ್ನು ಸಂಭವಿಸಿರಬಹುದಾದ ಹಿಂದಿನ ವರ್ಷಗಳಿಗೆ ಸರಿಹೊಂದುವ ವರ್ಷಗಳನ್ನು ಖಗೋಳಗಣಿತದ ಮೂಲಕ ನಿರೂಪಿಸಿಕೊಂಡು ಹೋಗಿ ಈ ಸಂಭವ ಹಾಗೂ ನಡೆದಿದ್ದರೆ ಕ್ರಿ.ಪೂ. 287 ಇಲ್ಲವೇ ಕ್ರಿ.ಪೂ. 2055ರಲ್ಲಿ ನಡೆದಿರಬಹುದು ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ. ಅವರ ಲೇಖನದಿಂದ ಈ ಪ್ರಶ್ನೆಗಳು ಸಹಜವಾಗಿ ಉದ್ಭವವಾಗುತ್ತವೆ.

ಉತ್ತರಭಾರತದಲ್ಲಿ ಪ್ರಸಿದ್ಧವಾಗಿರುವ ರಾಮಾಯಣದಲ್ಲಿ ರಾಮನು ಹುಟ್ಟಿದ ಮಾಸವನ್ನು ಕುರಿತು ಉಲ್ಲೇಖವಿಲ್ಲ. ದಕ್ಷಿಣಭಾರತದಲ್ಲಿ ಪ್ರಸಿದ್ಧ ವಾಗಿರುವ ರಾಮಾಯಣದಲ್ಲಿ ಮಾತ್ರವೇ ಚೈತ್ರಮಾಸದ ಉಲ್ಲೇಖವಿದೆ ಎಂದು ಹೇಳಲಾಗಿದೆ.

ಉಚ್ಚಗ್ರಹಗಳು ಐದು ಯಾವುವೆಂಬುದನ್ನು ಕವಿ ನಿರ್ದಿಷ್ಟವಾಗಿ ಹೇಳಿಲ್ಲ.

ಮೇಷರಾಶಿಯಲ್ಲಿ ರವಿ ಇದ್ದು ಚಂದ್ರನು ಪುನರ್ವಸು 4ನೇ ಪಾದವಾದ ಕಟಕರಾಶಿಯಲ್ಲಿದ್ದರೆ ಕಾವ್ಯದಲ್ಲಿ ಹೇಳಿರುವಂತೆ ನವಮೀತಿಥಿ ಏರ್ಪಡುವುದಿಲ್ಲ. ಇದು ಇಂದಿನ ಖಗೋಳಗಣಿತದ ನಿರೂಪಣೆಗೆ ಒಂದಿಷ್ಟೂ ಒಳಪಡದ ಬಹುಮುಖ್ಯವಾದ ಅಂಶ.

ಶ್ರೀರಾಮನ ಜಾತಕವನ್ನು ಕುರಿತು ಹೇಳುವಾಗ ಬುಧಗ್ರಹದ ಸ್ಥಾನ ಹನ್ನೆರಡು ರಾಶಿಗಳಲ್ಲಿ ಎಲ್ಲಿ ಎನ್ನುವುದನ್ನು ಕವಿಯು ಶಾಸ್ತ್ರಜ್ಞರ ಊಹೆಗೆ

ಬಿಟ್ಟಿದ್ದಾರೆಯೇ ಅಥವಾ ಶ್ಲೋಕದಲ್ಲಿಯೇ ಅದರ ರಾಶಿಸ್ಥಿತಿಯ ಅರ್ಥ ಹೊರಹೊಮ್ಮುತ್ತದೆಯೇ? ನಿರ್ದಿಷ್ಟವಾಗಿ ಬುಧನ ಸ್ಥಾನ ಹೇಳಿದ್ದರೂ ಇಂದಿನ ಗ್ರಹಗಣಿತದ ವ್ಯಾಪ್ತಿಗೆ ಅದು ಸರಿಹೊಂದಿಬರದಿದ್ದರೆ ಅದಕ್ಕೆ ಬೇರಿನ್ನಾವುದಾದರೂ ವೈಜ್ಞಾನಿಕವಾಗಿ ಖಗೋಳಶಾಸ್ತ್ರದ ಕಾರಣಗಳು ಇರಬಹುದೇ?

ಅವರ ಖಗೋಳಗಣಿತದ ನಿರೂಪಣೆಗಳ ಪ್ರಕಾರ ರಾಮಾಯಣವು ಭಾರತೀಯರು ಹೇಳುವಂತೆ ಯುಗ-ಯುಗಾಂತರಗಳ ಇತಿಹಾಸದಿಂದ ಕೂಡಿದ ಪ್ರಾಚೀನಕಾವ್ಯವಲ್ಲ. ಅದು ಕೇವಲ ಹೆಚ್ಚೆಂದರೆ ಇಂದಿಗೆ ಸುಮಾರು 4,000 ವರ್ಷಗಳ ಇತಿಹಾಸದ ಕಾವ್ಯ ಎನ್ನುವ ಅಂಶ.

ಅವರ ಖಗೋಳಗಣಿತದ ನಿರೂಪಣೆಗಳನ್ನು, ಇಂದಿನ ಖಗೋಳ ಶಾಸ್ತ್ರದ ಬೆಳಕಿನಲ್ಲಿ, ತರ್ಕದ ನಿರೂಪಣೆಗಳಿಗೆ ಒಳಪಡಿಸಿ ಮೇಲ್ಕಂಡ ಪ್ರಶ್ನೆ ಗಳಿಗೆ ಸಮಂಜಸವಾದ ಉತ್ತರಗಳನ್ನು ಹುಡುಕಲು ಸಾಧ್ಯವೇ ಎನ್ನುವುದನ್ನು ನೋಡೋಣ.

ರಾಮಾಯಣದಲ್ಲಿ ಶ್ರೀರಾಮನ ಜಾತಕದ ಶ್ಲೋಕ ಈ ರೀತಿ ಇದೆ :

ತತೋ ಯಜ್ಞೇ ಸಮಾಪ್ತೇ ತು ಋತೂನಾಂ ಷಟ್ ಸಮತ್ಯಯುಃ ।
ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ ॥
ನಕ್ಷತ್ರೇऽದಿತಿದೈವತ್ಯೇ ಸ್ವೋಚ್ಚಸಂಸ್ಥೇಷು ಪಞ್ಚಸು ।
ಗ್ರಹೇಷು ಕರ್ಕಟೇ ಲಗ್ನೇ ವಾಕ್ಪತಾವಿನ್ದುನಾ ಸಹ ॥

ಪ್ರೋದ್ಯಮಾನೇ ಜಗನ್ನಾಥಂ ಸರ್ವಲೋಕನಮಸ್ಕೃತಮ್ ।
ಕೌಸಲ್ಯಾಜನಯದ್ರಾಮಂ ಸರ್ವಲಕ್ಷಣಸಂಯುತಮ್ ।
ವಿಷ್ಣೋರರ್ಧಂ ಮಹಾಭಾಗಂ ಪುತ್ರಮಿಕ್ಷ್ವಾಕುವರ್ಧನಮ್ ॥

ಅಶ್ವಮೇಧಯಾಗ ಮೊದಲುಗೊಂಡು ಹನ್ನೆರಡು ಮಾಸಗಳು ಕಳೆದ ನಂತರ ಚೈತ್ರನವಮಿಯ ದಿನ ಅದಿತಿದೇವತಾಕವಾದ ಪುನರ್ವಸುನಕ್ಷತ್ರದಲ್ಲಿ ಚಂದ್ರಸಮೇತನಾದ ಗುರುವು ಕರ್ಕಾಟಕ ಲಗ್ನದೊಂದಿಗೆ ಕೂಡಿದವ ನಾಗಿದ್ದು, ಐದು ಗ್ರಹಗಳೂ ಉಚ್ಚರಾಶಿಸ್ಥಿತರಾಗಿರುವಾಗ ಸರ್ವಲೋಕನಮ ಸ್ಕೃತನಾದ, ಇಕ್ಷ್ವಾಕುಕುಲವರ್ಧನನಾದ, ವಿಷ್ಣುವಿನ ಅರ್ಧಾಂಶದಿಂದ

ಅಥವಾ ತುರೀಯಾಂಶದಿಂದ ಕೂಡಿರುವ, ಮಹಾಭಾಗನಾದ, ಶ್ಯಾಮಲ ವರ್ಣನಾದ ಮಹಾಪುರುಷನನ್ನು ಕೌಸಲ್ಯಾದೇವಿಯು ಪ್ರಸವಿಸಿದಳು.

(ಬಾಲಕಾಂಡ, ಸರ್ಗ ೧೮, ಶ್ಲೋಕ-೮-೧೧)

ಈ ಮೇಲಿನ ಶ್ಲೋಕದ ಅರ್ಥದಂತೆ ಕುಂಡಲಿಯನ್ನು ರಚಿಸಿ ಗ್ರಹಗಳನ್ನು ಶ್ಲೋಕವು ಹೇಳಿದ ರೀತಿಯಲ್ಲೇ ಆಯಾ ರಾಶಿಗಳಲ್ಲಿ ಬರೆದು ನೋಡುವಾಗ ಕುಂಡಲಿಯು ಹೇಗೆ ಮೂಡಿಬರುತ್ತದೆ–ಎನ್ನುವುದನ್ನು ನೋಡೋಣ. ಜ್ಯೋತಿಷ್ಕನಿಗೆ ಕುಂಡಲಿ ರಚಿಸಲು ಬೇಕಾದ ಗ್ರಹಗಳು ರವಿ, ಚಂದ್ರ, ಕುಜ, ಬುಧ, ಗುರು, ಶುಕ್ರ, ಶನಿ ಮತ್ತು ಲಗ್ನಗಳೇ ಆಗಿವೆ. ಆಗ ರಾಹು ಮತ್ತು ಕೇತುಗಳನ್ನು ಜಾತಕದ ಫಲಭಾಗಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ.

ಶ್ಲೋಕದಲ್ಲಿ ಲಗ್ನ, ಚಂದ್ರ ಮತ್ತು ಗುರುವಿನ ರಾಶಿಸ್ಥಿತಿಗಳನ್ನು ಹೇಳಿ ಐದು ಗ್ರಹಗಳು ಉಚ್ಚವೆನ್ನಲಾಗಿದೆ. ಗುರು-ಚಂದ್ರರನ್ನು ಲಗ್ನದೊಂದಿಗೆ ಕಟಕರಾಶಿಯಲ್ಲಿರಿಸಿದಾಗ ಬಾಕಿ ಉಳಿಯುವ ಐದು ಗ್ರಹಗಳೆಂದರೆ ರವಿ, ಶುಕ್ರ, ಕುಜ, ಶನಿ, ಬುಧರೇ ಆಗುತ್ತಾರೆ. ಅಂದರೆ ಈ ಗುರು-ಚಂದ್ರರನ್ನು ಬಿಟ್ಟು ಉಳಿದ ಐದುಗ್ರಹಗಳೂ ಉಚ್ಚರಾಶಿಯಲ್ಲಿದ್ದಾರೆಂದಾಯಿತು. ಅಂದರೆ ಗುರು ಉಚ್ಚನಾಗಿ ಕಟಕರಾಶಿಯಲ್ಲಿದ್ದಾನೆಂದು ಅರ್ಥಮಾಡಿಕೊಂಡರೆ ಗುರು ವನ್ನೂ ಸೇರಿಸಿ 6 ಗ್ರಹಗಳು ಉಚ್ಚವೆಂದ ಹಾಗಾಯಿತು. ಗುರುವು ಕಟಕ ರಾಶಿಯಲ್ಲಿದ್ದರೂ ತನ್ನ ಪರಮೋಚ್ಚದ ಭಾಗವನ್ನು ಬಿಟ್ಟು ಮುಂದೆ ಹೋಗಿ ರುವ ಕಟಕರಾಶಿಸ್ಥಿತನಾದ ಗ್ರಹವಾಗಿದ್ದಾನೆ ಎನ್ನುವ ಅರ್ಥವೇ ಹೊರತು ಗುರು ಪರಮೋಚ್ಚಬಲದಿಂದ ಕೂಡಿದವನೆಂದಲ್ಲ. ಅವನು ಪರಮೋಚ್ಚನಲ್ಲದ ಕಟಕರಾಶಿಸ್ಥಿತನಾದ ಅವರೋಹಿಗುರುವು ಕೊಡುವ ಫಲವನ್ನು ಕೊಡುವನೆಂದು ಮಾತ್ರ ಅರ್ಥ. ಉಳಿದ ಐದು ಗ್ರಹಗಳು ಉಚ್ಚವೆಂದರೆ ತಮ್ಮ ಉಚ್ಚರಾಶಿಗಳಲ್ಲಿದ್ದ, ತಮ್ಮ-ತಮ್ಮ ಪರಮ ಉಚ್ಚದ ಕಲೆ (ಡಿಗ್ರಿ)ಗಳ ಒಳಗಿರುವ ಗ್ರಹಗಳಾಗಿದ್ದಾರೆ ಎನ್ನುವ ಅರ್ಥ ಜ್ಯೋತಿಷ್ಯಶಾಸ್ತ್ರದ ರೀತಿ ಯಿಂದ ಸಮ್ಮತವಾಗಿರುತ್ತದೆ. ಈ ಮೇಲಿನ ತರ್ಕದ ನಿಲುವಿಗೆ ತಕ್ಕಂತೆ ಕುಂಡಲಿಯನ್ನು ರಚಿಸಿನೋಡುವಾಗ ಶ್ರೀರಾಮನ ಜಾತಕದ ಗ್ರಹಸ್ಥಿತಿ ಈ ರೀತಿ ಮೂಡಿಬರುತ್ತದೆ. ಲಗ್ನ ಕಟಕ. ಅಲ್ಲಿಯೇ ಚಂದ್ರ-ಗುರುಗಳು. ಇನ್ನು

ಳಿದ ರವಿ, ಬುಧ, ಶನಿ, ಕುಜ, ಶುಕ್ರರು ತಮ್ಮ ಉಚ್ಚಸ್ಥಾನಗಳಾದ ಮೇಷ, ಕನ್ಯಾ, ತುಲಾ, ಮಕರ, ಮೀನಗಳಲ್ಲಿರುವಂತೆ ಕುಂಡಲಿಯು ಹೀಗಿರುತ್ತದೆ :

ಶುಕ್ರ	ರವಿ		
	ಶ್ರೀರಾಮನ		ಲಗ್ನ ಗುರು ಚಂದ್ರ
ಕುಜ	ರಾಶಿಕುಂಡಲಿ		
		ಶನಿ	ಬುಧ

ಜಾತಕದ ಗ್ರಹಸ್ಥಿತಿಗಳು ಈ ರೀತಿ ಮೂಡಿಬಂದ ಮೇಲೆ ಅವುಗಳಿಂದ ಉದ್ಭವಿಸುವ ಖಗೋಳಗಣಿತದ ಸಮಸ್ಯೆಗಳನ್ನು ಕುರಿತು ಚರ್ಚಿಸೋಣ.

ಮೊದಲನೆಯದಾಗಿ ಮಾಸದ ಪ್ರಶ್ನೆಗೆ ಉತ್ತರವನ್ನು ಹುಡುಕಿ ನೋಡೋಣ.

ಉತ್ತರಭಾರತದ ರಾಮಾಯಣದಲ್ಲಿ ಚೈತ್ರಮಾಸದ ಉಲ್ಲೇಖವಿಲ್ಲ. ದಕ್ಷಿಣ ಭಾರತದ ರಾಮಾಯಣದಲ್ಲಿ ಮಾತ್ರವೇ ಸೇರಿಸಲ್ಪಟ್ಟಿದೆ–ಎಂದು ಶ್ರೀಸ್ವಾಮಿ ಕಣ್ಣುಪಿಳ್ಳೆಯವರು ತಮ್ಮ ಗ್ರಂಥದಲ್ಲಿ ಹೇಳುತ್ತಾರೆ. ಖಗೋಳ ಗಣಿತದ ತರ್ಕದಿಂದ ಈ ವಿಷಯವನ್ನು ನಿರ್ಣಯಮಾಡಲು ಸಾಧ್ಯ ವಾಗುತ್ತದೆಯೆ?–ಎನ್ನುವುದನ್ನು ಪರಿಶೀಲಿಸೋಣ. ಕಟಕಲಗ್ನದೊಂದಿಗೆ ಗುರು-ಚಂದ್ರರು ಸೇರಿ ಐದು ಗ್ರಹಗಳು ಉಚ್ಚವೆಂದು ಹೇಳಿರುವಾಗ ಸಹಜ ವಾಗಿ ರವಿಯು ಮೇಷರಾಶಿಸ್ಥಿತನಾಗಿರಲೇಬೇಕು.

ಇಂದಿನ ಗ್ರಹಗಣಿತದ ಪ್ರಕಾರ ಚಂದ್ರನು ಪುನರ್ವಸು 4ನೇ ಪಾದ ದಲ್ಲಿದ್ದು ನವಮೀತಿಥಿಯಾಬೇಕಾಗಿದ್ದರೆ ತಿಥಿಯ ಕೋನಾಂತರ ಅಂದರೆ ಸೂರ್ಯ-ಚಂದ್ರರ ಕೋನ 96 ಡಿಗ್ರಿಗಳ ಮೇಲಾಗಬೇಕು. ಇಂದಿನ ಚಾಂದ್ರ (Synodic) ಮಾಸದ ಪ್ರಕಾರ ಒಂದು ತಿಥಿಯ ಗತಿ ಈಗಿನ ಲೆಕ್ಕದ ಪ್ರಕಾರ 12 ಡಿಗ್ರಿಗಳಾಗುತ್ತವೆ. ಅಂದರೆ ಜಾತಕದಲ್ಲಿ ಚಂದ್ರನ ಸ್ಥಾನ ನಿಖರವಾಗಿ ಹೇಳಿ ಐದು ಗ್ರಹಗಳು ಉಚ್ಚವೆನ್ನಲಾಗಿದೆ. ಐದು ಉಚ್ಚಗ್ರಹಗಳಲ್ಲಿ ರವಿಯೂ ಒಬ್ಬನಾಗಿರುವುದರಿಂದ ರವಿಯು ತನ್ನ ಉಚ್ಚರಾಶಿಯಾದ

ಮೇಷದಲ್ಲೇ ಇರಬೇಕಾಗುತ್ತದೆ. ರವಿಯು ಮೇಷದಲ್ಲಿದ್ದಾನೆಂದರೆ ಅದು ಚೈತ್ರಮಾಸವೇ ಆಗಬೇಕಾಗುತ್ತದೆ. ಆದುದರಿಂದ ದಕ್ಷಿಣದೇಶದ ರಾಮಾಯಣಗಳಲ್ಲಿ ಚೈತ್ರಮಾಸವೆಂದು ಹೇಳಿರುವುದು ಮೂಲಕರ್ತೃವಿನ ವಾಕ್ಯವೇ ಆಗಿರಬೇಕು. ಆದರೆ ಇದರಲ್ಲಿ ಒಂದು ತೊಡಕು ಇಂದಿನ ಖಗೋಳ ಗಣಿತಶಾಸ್ತ್ರದ ಪ್ರಕಾರ ಏರ್ಪಡುತ್ತದೆ. ಚಂದ್ರನು ಪುನರ್ವಸು ನಾಲ್ಕನೇ ಪಾದದಲ್ಲಿದ್ದು ರವಿಯು ಮೇಷರಾಶಿಯಲ್ಲಿದ್ದರೆ ನವಮಿತಿಥಿಗೆ ಬೇಕಾದ 96 ಡಿಗ್ರಿಗಳ ಕೋನ ಇಂದಿನ ಗ್ರಹಗಣಿತದ ಪ್ರಕಾರ ಏರ್ಪಡುವುದಿಲ್ಲ. ಇದನ್ನೇ ಒಂದು ಮುಖ್ಯಕಾರಣವಾಗಿ ತೆಗೆದುಕೊಂಡು ರಾಮಾಯಣದಲ್ಲಿ ಬರುವ ಶ್ರೀರಾಮನ ಜಾತಕವು ಗ್ರಹಗಣಿತದ ಹಿಡಿತಕ್ಕೆ ಒಳಪಡದ ಒಂದು ಊಹೆಯ ಜಾತಕ ಎನ್ನುವ ವಾದವನ್ನು ಮಂಡಿಸುತ್ತಾರೆ. ಇದು ವೈಜ್ಞಾನಿಕ ತರ್ಕವೇ? ಎನ್ನುವುದನ್ನು ನೋಡೋಣ. ಈ ತಿಥಿಯ ಕೋನದಲ್ಲೇ ರಾಮಾಯಣವು ನಡೆದಿರಬಹುದಾದ ಕಾಲದ ನಿಗೂಢಸತ್ಯ ಅಡಗಿರುವುದು. ನಮ್ಮ ಜ್ಯೋತಿಷ್ಯಶಾಸ್ತ್ರಜ್ಞರೆಲ್ಲರೂ ರಾಮಾಯಣದ ಕಾಲವನ್ನು ಸುಮಾರು ಇಂದಿಗೆ 4,000 ವರ್ಷಗಳ ಹಿಂದಿನ ಘಟನೆ ಇರಬಹುದೆಂದು ಪಾಶ್ಚಾತ್ಯ ವಿಜ್ಞಾನಿಗಳು ಮತ್ತು ಚರಿತ್ರಕಾರರು ಹೇಳುವುದನ್ನೇ ಆಧಾರವಾಗಿಟ್ಟು ಕೊಂಡು ಹೇಳುವ ದೃಷ್ಟಿಕೋನಕ್ಕೆ ಸಂಬಂಧಪಟ್ಟ ಸಮರ್ಥನೆಗಳೇ ಆಗಿವೆ. ಈ ಜಾತಕವನ್ನೇ ತಪ್ಪು ಎಂದು ವಾದಿಸುತ್ತಿರುವುದಕ್ಕೆ ಕಾರಣ : 4,000 ವರ್ಷಗಳ ಹಿಂದಿನ ಗ್ರಹಗಣಿತದ ಪ್ರಕಾರ ರವಿಯು ಮೇಷದಲ್ಲಿದ್ದು ಚಂದ್ರನು ಪುನರ್ವಸು 4ನೇ ಪಾದದಲ್ಲಿರುವಾಗ ನವಮೀತಿಥಿ ಏರ್ಪಡಲು ಯಾವ ಖಗೋಳಗಣಿತಶಾಸ್ತ್ರ ರೀತಿಯಾಗಿಯೂ ಸಾಧ್ಯತೆಗಳು ಕಂಡುಬರದೇ ಇರುವುದೇ ಮುಖ್ಯ ಕಾರಣವೂ ಆವಾಗಿರುವುದರಿಂದ.

ರಾಮಾಯಣವು ನಡೆದಿರಬಹುದಾದ ಕಾಲದಲ್ಲಿ ತಿಥಿಗಳ ಕೋನಾಂತರ 10 ಡಿಗ್ರಿಗಳಾಗಿರಬಹುದು. ಒಂದು ಚಾಂದ್ರಮಾಸ 36 ಅಥವಾ 34 ದಿವಸಗಳಿಂದಲೇ ಕೂಡಿದ ಮಾಸವಾಗಿದ್ದಿರಬೇಕು. (ಅಂದಿನ ಲೆಕ್ಕದ ಪ್ರಕಾರ ಭೂಮಿಯು ಒಂದು ದಿನದ ಎಂದರೆ ತನ್ನ ಅಕ್ಷದ ಮೇಲೆ ಸುತ್ತಿಕೊಳ್ಳುವುದಕ್ಕೆ ತೆಗೆದುಕೊಳ್ಳುತ್ತಿದ್ದ ಅಂದಿನ ಕಾಲದ ಪ್ರಕಾರ) ಭೂಮಿಗೆ ಇಂತಹ ಖಗೋಳದ ಚಾಂದ್ರಮಾಸ ಎಷ್ಟು ಕೋಟಿ ವರ್ಷಗಳ ಹಿಂದೆ

ಸಮನ್ವಯವಾಗುತ್ತದೆಯೋ ರಾಮಾಯಣವು ಅಷ್ಟು ಕೋಟಿ ವರ್ಷಗಳ ಹಿಂದಿನ ಹಳೆಯ ಘಟನೆ ಎನ್ನುವ ತೀರ್ಮಾನಕ್ಕೆ ಬರಬಹುದು. ಈ ಸಂಭವ ಎಷ್ಟು ಕೋಟಿ ವರ್ಷಗಳ ಹಿಂದಿನ ಅದ್ಭುತ ಘಟನೆ ಎನ್ನುವುದು ವೈಜ್ಞಾನಿಕ ಸತ್ಯವಾಗಿದೆ.

ಈ ಭೂಮಿಗೆ ಹಿಂದಿದ್ದಿರಬಹುದಾದ ಕಾಲಮಾನಗಳಾದ ದಿನ, ಚಾಂದ್ರಮಾಸ ಮತ್ತು ವರ್ಷಗಳಿಗೆ ಸಂಬಧಪಟ್ಟ ಸಂಶೋಧನೆಗಳು ರಷ್ಯ ಮತ್ತು ಅಮೇರಿಕಾ ದೇಶಗಳಲ್ಲಿ ವಿಪುಲವಾಗಿ ನಡೆದಿವೆ.

ದಿನದ ಬೆಳಕು ಮತ್ತು ಕತ್ತಲೆಯ ಕಾಲದ ಅವಧಿಯ ಶಾಖವನ್ನು ಅನುಸರಿಸಿಕೊಂಡು ಸಮುದ್ರದ ಹವಳಗಳು ತಮ್ಮದೇ ಆದ ದೈನಂದಿನ ಪೊರೆಗಳನ್ನು ನಿರ್ಮಿಸಿಕೊಳ್ಳುವುದನ್ನು ವಿಜ್ಞಾನಿಗಳು ಗಮನಿಸಿದ್ದಾರೆ.

ಈ ಹವಳಗಳ ದಿನ-ದಿನದ ಬೆಳವಣಿಗೆಗಳನ್ನು ಆಧಾರವಾಗಿ ತೆಗೆದು ಕೊಂಡು ವೈಜ್ಞಾನಿಕ ಸಂಶೋಧನೆಗೆ ಒಳಪಡಿಸಿದಾಗ ಈ ಭೂಮಿಯ ಹಿಂದೆ ಹತ್ತು ಗಂಟೆಗಳಿಗೆ ಒಂದು ಬಾರಿ ತನ್ನ ಅಕ್ಷದ ಮೇಲೆ ಸುತ್ತಿಕೊಂಡು ಹಗಲು -ರಾತ್ರಿಗಳನ್ನು ಏರ್ಪಡಿಸಿಕೊಳ್ಳುತ್ತಿತ್ತು–ಎನ್ನುವ ಅಚ್ಚರಿಯಾದ ರಹಸ್ಯ ವಿಜ್ಞಾನಿಗಳಿಗೆ ತಿಳಿದುಬಂತು. ಅದೇ ರೀತಿಯಲ್ಲಿ ಅದು ವ್ಯತ್ಯಾಸಗಳನ್ನು ಹೊಂದುತ್ತಾ ಬಂದು 10 ಗಂಟೆಗಳಿಂದ ಈಗಿನ 24 ಗಂಟೆಗಳವರೆವಿಗೆ ಬದಲಾವಣೆಯಾಗಲು ಎಷ್ಟು ಕೋಟಿ ವರ್ಷಗಳಾಗಿರಬಹುದು ಎನ್ನುವು ದನ್ನು ನಿರ್ಧರಿಸಿದ್ದಾರೆ. ಇದರಲ್ಲಿ ರಷ್ಯಾ ಮತ್ತು ಅಮೆರಿಕದ ವಿಜ್ಞಾನಿಗಳಲ್ಲಿ ಕಾಲವನ್ನು ನಿರ್ಣಯಮಾಡುವುದರಲ್ಲಿ ಅಭಿಪ್ರಾಯವ್ಯತ್ಯಾಸವು ಕಂಡು ಬಂದಿದೆ. ಅಂದರೆ ಇದರಿಂದ ಒಂದು ಗಹನವಾದ ಸತ್ಯ ತಿಳಿದುಬರುತ್ತದೆ. ಅದೆಂದರೆ ಈಗಿನ ಚಾಂದ್ರಮಾಸ 29.5 ದಿನಗಳಿಂದ ಕೂಡಿರುವಂತೆ ಕೋಟ್ಯಂತರ ವರ್ಷಗಳ ಹಿಂದೆ ಈ ಚಾಂದ್ರಮಾಸ ಇದೇ ಕಾಲಮಾನಗಳಿಂದ ಕೂಡಿರಲಿಲ್ಲವೆಂದು. ಅದೇ ರೀತಿಯಲ್ಲಿ ಆಗಿನ ಚಾಂದ್ರಮಾಸ ಈಗಿನ ಚಾಂದ್ರಮಾಸಕ್ಕಿಂತಲೂ ಅಂದಿನ ದಿನದ ಕಾಲಮಾನದ ಪ್ರಕಾರ ಹೆಚ್ಚಿತ್ತು ಎಂದೂ ತಿಳಿದುಬರುತ್ತದೆ. ಆದುದರಿಂದ ಜಾತಕದಲ್ಲಿ ಹೇಳಿರುವ ತಿಥಿಯ ಕೋನಾಂತರವನ್ನು ಅಂದಿನ ಚಾಂದ್ರಮಾನರೀತಿಯಲ್ಲಿ ಲೆಕ್ಕದಿಂದ ಗುಣಿಸಿ

ನೋಡುವಾಗ ವಾಲ್ಮೀಕಿಮುನಿಗಳು ಹೇಳಿರುವಂತೆ ಅಂದಿನ ಸ್ಥಿತಿಗೆ ನವಮೀ ತಿಥಿಯ ಗಣಿಕೆ ಸರಿಯಾಗಿದೆ. ಸೂರ್ಯನು ಮೇಷದಲ್ಲಿ 8° ಯಲ್ಲಿದ್ದು ಚಂದ್ರನು ಕಟಕದಲ್ಲಿ 0.1 ನಿಮಿಷದಲ್ಲಿದ್ದಾನೆ ಎಂದು ತೆಗೆದುಕೊಂಡರೆ ಕೋನಾಂತರ $82^{\circ}.1$ ನಿಮಿಷಗಳಾಗುತ್ತದೆ. $82^{\circ}.1$ ನಿಮಿಷಗಳನ್ನು ಒಂದು ತಿಥಿಯ ಕೋನದ ವ್ಯಾಪ್ತಿಯಾದ 10° ಗಳಿಂದ ಭಾಗಿಸಿದರೆ 8 ಆವರ್ತಿ ಭಾಗಿಸಲ್ಪಟ್ಟು ಶೇಷ $2^{\circ}1$ ನಿಮಿಷ ಉಳಿಯುತ್ತದೆ. ಅಂದರೆ ಅಂದಿನ ತಿಥಿಯ ಲೆಕ್ಕದ ಪ್ರಕಾರ ಅಷ್ಟಮಿಯು ಕಳೆದು ನವಮಿಯು ಬಂದಿರುತ್ತದೆ. ಆದುದರಿಂದ ನವಮೀತಿಥಿ ಎಂದು ಹೇಳಿರುವುದು ಕಾವ್ಯವನ್ನು ಬರೆದ ಕಾಲದ ಸ್ಥಿತಿಗತಿಗಳಿಗೆ ಸರಿಯಾಗಿದೆ. ರಾಮಾಯಣಕಾವ್ಯದಲ್ಲಿ ತಿಥಿಯನ್ನು ಹೇಳಲಾಗಿದೆಯೇ ಹೊರತು ಮಾಸಕ್ಕಾಗಲೀ, ಪಕ್ಷಕ್ಕಾಗಲೀ ಎಷ್ಟು ತಿಥಿ ಗಳೆಂದು ಎಲ್ಲೂ ಹೇಳಿಲ್ಲ. ಇದೊಂದು ಗಮನಿಸಬೇಕಾದ ವಿಷಯವಾಗಿದೆ. ಮತ್ತೆ ರಾಮಾಯಣದಲ್ಲಿ ಕಾಷ್ಠ[1] ಎನ್ನುವ ಒಂದು ಕಾಲವನ್ನು ನಿರ್ದೇಶಿಸುವ ಪದವನ್ನು ಬಳಸಲಾಗಿದೆ. ಕಾಷ್ಠ ಎನ್ನುವ ಪದದ ಬಳಕೆ ಪುರಾಣ ಮತ್ತು ವೇದದಕಾಲದ್ದು. ಘಳಿಗೆ-ವಿಘಳಿಗೆ ಎನ್ನುವ ಬಳಕೆ ಸಿದ್ಧಾಂತಕಾಲದ್ದು. ಸೂರ್ಯಸಿದ್ಧಾಂತದ ಕಾಲಕ್ಕೆ ಉಚ್ಛ್ವಾಸ-ನಿಃಶ್ವಾಸಗಳ ಕಾಲಮಾನವನ್ನು ಒಂದು ಅಳತೆಗೋಲಾಗಿ ತೆಗೆದುಕೊಂಡು ದಿನದ ಮೊತ್ತದ ಕಾಲಮಾನ ವನ್ನು ನಿಗದಿಪಡಿಸುತ್ತಿದ್ದುದು ಆ ಸಿದ್ಧಾಂತಗ್ರಂಥವನ್ನು ಅವಲೋಕಿಸಿದಾಗ ತಿಳಿದುಬರುತ್ತದೆ. ನಿಮೇಷ (ಕಣ್ಣುರೆಪ್ಪೆ ಹೊಡೆಯುವ ಕಾಲ) ದ ಕಾಲವನ್ನು ಸಿದ್ಧಾಂತದ ಕಾಲಕ್ಕೂ ಹಿಂದೆ ಅಳತೆಗೋಲಾಗಿ ತೆಗೆದುಕೊಂಡು ಉಪಯೋಗಿಸುತ್ತಿದ್ದರು ಎಂದು ತಿಳಿದುಬರುತ್ತದೆ. ರಾಮಾಯಣದಲ್ಲಿ ಕಾಷ್ಠ ಎನ್ನುವ ಪದವನ್ನು ಉಪಯೋಗಿಸಿ ಘಳಿಗೆಗೆ ಸಂಬಂಧಪಟ್ಟ ಪದಗಳನ್ನು ಉಪಯೋಗಿಸದೇ ಇರುವುದರಿಂದ ರಾಮಾಯಣವು–ಸೂರ್ಯಸಿದ್ಧಾಂತ ಕಾಲಕ್ಕೂ ಹಿಂದಿನ ಕಾಲದ ರಚನೆಯ ಕಾವ್ಯವಾಗಿರಬೇಕು ಎಂದು ಮೊದಲನೆಯ ಘಟ್ಟವಾಗಿ ತೀರ್ಮಾನವನ್ನು ತೆಗೆದುಕೊಳ್ಳಬಹುದು. ಸೂರ್ಯಸಿದ್ಧಾಂತ ರಚನೆಯ ಕಾಲ ಅದರಲ್ಲಿ ಕೊಟ್ಟಿರುವಂತೆ ಇಂದಿಗೆ

---

1 ಕಾಲಾಶ್ಚ ಕಾಷ್ಠಾಶ್ಚ ತಥಾ ತವ ಶರ್ಮ ದಿಶಂತು ತೇ । ಮಹಾವನೇ ವಿಚರತೋ ಮುನಿವೇಷಸ್ಯ ಧೀಮತಃ ॥ ಅಯೋಧ್ಯಾಕಾಂಡ ಸರ್ಗ-೨೫ ಶ್ಲೋಕ ೧೫

ಸುಮಾರು 21 ಲಕ್ಷ ವರ್ಷಗಳಾಗುತ್ತವೆ.[2] (ಇದನ್ನು ಪಾಶ್ಚಾತ್ಯವಿದ್ವಾಂಸರು ಒಪ್ಪುವುದಿಲ್ಲ.) ಸೂರ್ಯಸಿದ್ಧಾಂತ ಭಾಷ್ಯಕಾರರಾದ ರೆವರೆಂಡ್ ಬರ್ಗೆಸ್ ಅವರು ಈ ಕಾಷ್ಠ ಎನ್ನುವ ಪದವನ್ನು ಕುರಿತು ಏನು ಬರೆದಿದ್ದಾರೆ?– ಎನ್ನುವುದನ್ನು ಕೆಳಗೆ ಕೊಟ್ಟಿದ್ದೇವೆ.

11. That which begins with respirations (Prana) is called real. That which begins with atoms (Truti) is called unreal. Six respirations make a vinadi. Sixty of these a Nadi.

12. Sixty Nadis make a Siderial day and Night.

The manuscripts without commentary insert, as the first half on V.II. the usual definition of the length of a respiration. The time occupied in pronouncing ten long syllables if called a respiration The table of the division of Siderial time is then as follows :

10 long Syllables (Gurvakshara)	=	1 Respiration Prana period of 4 seconds
6 Respirations	=	1 Vinadi (period of 24 seconds)
60 Vinadis	=	1 Nadi (period of twenty four minutes)
60 Nadis	=	1 Day

This is the method of division usually adopted in the Astronomical text books. It

2 ಆಧಾರ : ಸೂರ್ಯಸಿದ್ಧಾಂತ–ಶ್ರೀ ಬರ್ಗೆಸ್ । ಚಾಪ್ಟರ್ ೧. ಪುಟ ೨. ೨೧,೬೪,೯೬೦ ವರ್ಷಗಳಾಗಿವೆ ಈ ಗ್ರಂಥ ಪ್ರಕಟವಾದ ವರ್ಷಕ್ಕೆ.

possesses the convient property that its lowest sub-division the respiration, is some part of the day as the minute is of the circle so that a respiration of time is equivalent to a minute of revolution of the heavenly bodies about the Earth. The respiration is much more frequently called asu, in the text both of this and of the other Siddhantas. The Vinadi is practically of small consequence and is only two or three times made use of in the treatise. Its usual modern name is Pala, but as this term now here occurs in our text, we have not felt justified in substituting it for Vinadi. For Nadi also the more common name is DANDA. But htis too, the Surya Siddhanta, now here employs, although it uses instead of NADI and translation of the terms presented above, since there are no English equivalents which admit of being substituted for them. The ordinary puranic division of the day is slightly different from the Astronomical Viz.

15	Twinklings	=	1	Bit (KASHTHA)
30	BITS	=	1	MINUTE (KALA)
30	MINUTES	=	1	HOUR (MUHURTA)
30	HOURS	=	1	DAY

Manu (1,64) gives the same excepting that the makes BIT to consists of 18 twinklings. Other authorities assign different values to the lesser measures of time. But all agree in the main

fact of the division of the day into thirty hours which, being perhaps an imitation of the division of the month into thirty days, is **Unquestionable the ancient and original Hindu method of reckoning time.**

The Surya Siddhanta with commendable moderation refrains, from giving the imaginary sub-division of the respiration which makes u[``Unreal time, they are thus stated in Bhaskaras Siddhanta Shiromani (1, 19, 20) along with the other, the Astronomical Table.

100 ATOMS (TRUTI)	= 1	SPECK (TATPARA)
30 SPECKS	= 1	TWINKLING (NIMESHA)
18 TWINKLINGS	= 1	BIT (KASHTHA)
30 BITS	= 1	MINUTE (KALA)
30 MINUTES	= 1	HALF HOUR (GHATIKA)
2 HALF HOUR	= 1	HOUR
30 HOURS	= 1	DAY

This is makes the Atom equal to $\frac{1}{2,91,60,00,000}$ th of a day, or $\frac{1}{33,750}$th of a second. Some of these puranas (see wilson's Vishnu Purana P.22) give a different division, which makes the atom about $\frac{1}{2110}$ th of a second, but they carry the division, three steps further, to the subtilisima (Paramanu) which equals $\frac{1}{3,280,500,000}$th of a day are very nearly $\frac{1}{33,800}$th of a second.

We have introduced here a statement of these minute subdivisions, because they form a natural counterpart to the immense periods which we should soon have to consider and are with the latter curiously illustrative of a fundamental trait of Hindu character, a fantastic imaginativeness which delights itself with arbitrary theorzings and is unrestrained by and careless of actual realities, thus having no instruments, by which they could measure even seconds with any tolerable pre-requisition, they vied with one another to dividing the second down to the farthest conceivable limit of minutenses, thus seeking infinity in the other direction also, while they were almost destitute of a chronology or a history and could hardly fix with accuracy the date of any event beyond the memory of the living generations, they devised and put forth as actual, a frame work of chronology reaching for millions of millions of years back into the past and forward into the future.

(ಶ್ರೀ ಬರ್ಗೆಸ್ ಅವರ ಈ ಹೇಳಿಕೆಗಳು ಇಂದಿನ ವಿಜ್ಞಾನದ ಸಂಶೋಧನೆಗಳ ಮುನ್ನಡೆ ಮತ್ತು ನಿರೂಪಣೆಗಳನ್ನು ಎದುರು ನೋಡಿರಲಿಲ್ಲವೆನಿಸುತ್ತದೆ. ಲೇಖಕನ ಮಾತು.)

ಈ ಮೇಲಿನ ದಿನದ ಕಾಲಪ್ರಮಾಣವನ್ನು ಕುರಿತು ಹೇಳಿರುವ

ಪುರಾಣ, ಮನು ಮತ್ತು ಸಿದ್ಧಾಂತಶಿರೋಮಣಿಯ ಅಭಿಪ್ರಾಯಗಳನ್ನು ಪರಿಶೀಲಿಸಿದರೆ ಒಂದು ಅತಿಮುಖ್ಯವಾದ ವಿಷಯ ತಿಳಿದುಬರುತ್ತದೆ. ಅದುವೆ ಭೂಮಿಯ ಹಿಂದಿದ್ದಿರಬಹುದಾದ ಹಗಲು-ರಾತ್ರಿಗಳ ಕಾಲ ಪ್ರಮಾಣವು ಕಾಲ-ಕಾಲಕ್ಕೆ ಹೇಗೆ ವ್ಯತ್ಯಾಸವಾಯಿತೆನ್ನುವ ವಿಷಯವಾಗಿರು ತ್ತದೆ.

ಈ ಭೂಮಿಯ ಹಗಲು-ರಾತ್ರಿಗಳ ಕಾಲಪ್ರಮಾಣವು ಮೊದಲು 10 ಗಂಟೆಗಳಿಂದ ಕೂಡಿತೆನ್ನುವುದನ್ನು ವಿಜ್ಞಾನಿಗಳು ಹವಳದ ಪದರಗಳ ಸಂಶೋಧನೆಗಳಿಂದ ತೀರ್ಮಾನಕ್ಕೆ ಬಂದಿದ್ದಾರೆ. ಕಾಲಾಂತರದಲ್ಲಿ ಆದ ವ್ಯತ್ಯಾಸಗಳನ್ನೂ ಮತ್ತು ಅದು ಈಗಿನ 24 ಗಂಟೆಗಳಾಗಿ ಪರಿವರ್ತನೆ ಹೊಂದಿರುವುದನ್ನೂ ಅದೇ ಸಂಶೋಧನೆಗಳಿಂದ ಸಮರ್ಥಿಸಿದ್ದಾರೆ.

Ref:- SCIENCE TODAY
October 1981 Page 69

In fact it is believed that the Moon was very close to Earth some Billions of years ago when the day on the Earth was about 10 hours instead of the present 24 hours. The study of the ancient Corals also point to the fact that the days in the past were shorter leading to more number of days per year. This fact was found from counting the number of fine Rings that are formed in the coral in its annual growth. These fine rings appear once a day due to temperature variations (during day and night) durring the growth of the corals.

Ref:- DECCAN HERALD 19th April 1982
EARTH ROTATION

Soviet scientists have found evidences that

the Earth's rotation around its axis is slowing down, basing their theories on the daily growth lines on the walls of fossil coral polyps, researches at the USSR Academy of Science conclude that 360 million years ago there were 480 days in a year. The ancient corals show 480 lines on an annual ring compared with the 365 lines recorded in a year on Modern Corals. These growth lines correspond to the number of days in a year. -TASS

Ref :-SCIENTIFIC AMERICAN October 1966
Pages 26 to 33

CORALS AS PALEONTOLOGICAL CLOCKS BY GEORGE A. HOFFMAN. Daily Growth Rings in fossil corals reveal changes in the length of the year.

ಈ ವಿಷಯಗಳಿಗೆ ಸಂಬಂಧಪಟ್ಟ ಮೇಲಿನ ಲೇಖನಗಳನ್ನು ವಾಚಕರು ಓದಬಹುದು. ರಷ್ಯಾದ ವಿಜ್ಞಾನಿಗಳು 36 ಕೋಟಿ ವರ್ಷಗಳ ಹಿಂದೆ ಈ ಭೂಮಿಯು 18 ಗಂಟೆಗಳನ್ನು ಒಳಗೊಂಡ ದಿನವನ್ನು ಹೊಂದಿತ್ತು–ಎನ್ನುವುದನ್ನು ನಿರ್ಧರಿಸಿದ್ದಾರೆ. ಅದಕ್ಕೆ ತಕ್ಕಂತೆ ವರ್ಷದ ದಿನಗಳೂ ಇಂದಿನ 365 ದಿನಗಳಾಗಿರದೆ ಅದು ಹಿಂದೆ 480 ದಿನಗಳಿಂದ ಕೂಡಿತ್ತು ಎನ್ನುವುದನ್ನೂ ನಿರ್ಧರಿಸಿದ್ದಾರೆ. ಶ್ರೀ ಬರ್ಗೆಸ್ ಅವರಿಗೆ, ಇಷ್ಟು ಕಡಿಮೆ ಕಾಲ ಪ್ರಮಾಣದಿಂದ ಕೂಡಿದ ದಿನ ಮತ್ತು ಅವುಗಳ ವಿಭಜನೆಯನ್ನು ಹಿಂದೂಗಳು ಪುರಾಣೇತಿಹಾಸಗಳಲ್ಲಿ ಸೇರಿಸಿರುವುದು ಆ ಸಮಯಕ್ಕೆ ಉಪಲಬ್ಧವಿದ್ದ ವೈಜ್ಞಾನಿಕ ಆಧಾರಾಂಶಗಳಿಂದ ವಿವರಿಸಲು ಸಾಧ್ಯವಾಗದೇ ಹೋದುದಕ್ಕಾಗಿ ಅವೆಲ್ಲವನ್ನೂ ಅಜ್ಞಾನದಿಂದ ಕೂಡಿದ ಮತ್ತು ನಿರೂಪಿಸಲು ಸಾಧ್ಯವಿಲ್ಲದ ಕಾಲ್ಪನಿಕವಾದ ಕಾಲಪ್ರಮಾಣಗಳೆಂದು ಅಲ್ಲಗಳೆದಿದ್ದಾರೆ.

ಪುರಾಣ, ಮನು, ಸಿದ್ಧಾಂತಶಿರೋಮಣಿ–ಇವುಗಳಲ್ಲಿ ಕೊಟ್ಟಿರುವ ಒಂದು ದಿನದ ಮೊತ್ತದ ನಿಮೇಷಗಳನ್ನು ಅವರು ಹೇಳಿರುವ ಸೂತ್ರದಂತೆಯೇ ಲೆಕ್ಕ ಹಾಕಿ ನೋಡೋಣ. ಸಿದ್ಧಾಂತಶಿರೋಮಣಿಯ ಗ್ರಂಥಕರ್ತರಾದ ಭಾಸ್ಕರಾಚಾರ್ಯರು ಈಚಿನವರು. ಆಗ ಭೂಮಿಯ ಹಗಲು-ರಾತ್ರಿಗಳ ಕಾಲ ಪ್ರಮಾಣ 24 ಗಂಟೆಗಳೇ ಆಗಿತ್ತು. ಅದಕ್ಕೆ ಹಿಂದಿನಿಂದಲೂ ಉಪಲಬ್ಧವಿದ್ದ ಹಳೆಯ ಸೂತ್ರಗಳನ್ನೇ ತಿದ್ದುಪಡಿಮಾಡಿ ಹೊಂದಿಸಿಕೊಟ್ಟಿರುವುದನ್ನು ಆಧಾರವಾಗಿ ತೆಗೆದುಕೊಂಡು ತಾಳೆಹಾಕಿ ವ್ಯತ್ಯಾಸಗಳನ್ನು ನಿರ್ಧರಿಸೋಣ.

ಪುರಾಣಕಾಲದ ನಿಮೇಷಗಳ ಒಂದು ದಿನದ ಮೊತ್ತ

15 x 30 x 30 x 30 = 4,05,000 ನಿಮೇಷಗಳು.

ಮನುವಿನ ಕಾಲದ ನಿಮೇಷಗಳ ಒಂದು ದಿನದ ಮೊತ್ತ

18 x 30 x 30 x 30 = 4,86,000 ನಿಮೇಷಗಳು

ಸಿದ್ಧಾಂತಶಿರೋಮಣಿಯ ಕಾಲದ ನಿಮೇಷಗಳ ಒಂದು ದಿನದ ಮೊತ್ತ

18 x 30 x 30 x 2 x 30 = 9,72,000 ನಿಮೇಷಗಳು.

ಸಿದ್ಧಾಂತಶಿರೋಮಣಿ ಇಂದಿನ ಕಾಲಪ್ರಮಾಣವನ್ನು ತೆಗೆದುಕೊಂಡು ಬದಲಿಸಿಕೊಟ್ಟಿರುವ ಸೂತ್ರವಾಗಿದೆ. ಸಿದ್ಧಾಂತಶಿರೋಮಣಿಯ ನಿಮೇಷಗಳ ಮೊತ್ತವನ್ನು ಪುರಾಣದ ಮತ್ತು ಮನುವಿನ ಕಾಲದ ನಿಮೇಷಗಳ ಮೊತ್ತಗಳೊಂದಿಗೆ ತ್ರೈರಾಶಿಮಾಡಿ ನೋಡುವಾಗ ಪುರಾಣದ ಕಾಲ 10 ಗಂಟೆಗಳ ಕಾಲಪ್ರಮಾಣದಿಂದಲೂ ಮನುವಿನ ಕಾಲ 12 ಗಂಟೆಗಳ ಕಾಲ ಪ್ರಮಾಣದಿಂದಲೂ ಕೂಡಿರುವುದೂ ಕಂಡುಬರುತ್ತದೆ.

ಸಿದ್ಧಾಂತಶಿರೋಮಣಿಯ ಪ್ರಕಾರ :

	9,72,000 ನಿಮೇಷಗಳಿಗೆ = 24 ಗಂಟೆಗಳಾದರೆ
ಮನುವಿನ ಕಾಲದ	4,86,000 ನಿಮೇಷಗಳಿಗೆ = ಎಷ್ಟು ಗಂಟೆಗಳು ?
ಪುರಾಣದ ಕಾಲದ	4,05,000 ನಿಮೇಷಗಳಿಗೆ = ಎಷ್ಟು ಗಂಟೆಗಳು ?

ಎಂದು ಲೆಕ್ಕ ಮಾಡುವುದರ ಮೂಲಕ ತೀರ್ಮಾನಿಸಬಹುದು.

ಅಂದರೆ ಒಂದು ನಿಮೇಷದ ಕಾಲಪ್ರಮಾಣ ಇಂದಿನ ದಿನದ ಕಾಲ ಪ್ರಮಾಣದಲ್ಲಿ $\frac{89}{1000}$ ನೆಯ ಸೆಕೆಂಡುಗಳಾಗುತ್ತದೆ. ಆದುದರಿಂದ ಕಾಷ್ಠಾ ಎನ್ನುವ ಕಾಲಕ್ಕೆ ಸಂಬಂಧಿಸಿದ ಪದವನ್ನು ಉಪಯೋಗಿಸಿರದ ಮಾತ್ರಕ್ಕೆ

ನಮಗೆ ರಾಮಾಯಣದ ಕಾಲವನ್ನು ನಿರ್ಧರಿಸುವುದಕ್ಕೆ ಆ ಅಂಶ ಸಹಾಯಕವಾಗುವುದಿಲ್ಲ. ಏಕೆಂದರೆ : ಅಂದಿನ ನಿಮೇಷಗಳ ಮೊತ್ತ ಒಂದು ಕಾಷ್ಠಕ್ಕೆ ಎಷ್ಟು ಎಂದು ಅದರಲ್ಲಿ ಕಂಡುಬರದೇ ಇರುವುದರಿಂದ ಇದರಿಂದ ಸಮಸ್ಯೆಯನ್ನು ಬಿಡಿಸುವುದಕ್ಕೆ ಆಗದೇ ಇರುವುದರಿಂದ ನಾವು ಖಗೋಳ ಶಾಸ್ತ್ರಕ್ಕೇ ಶರಣುಹೋಗಬೇಕಾಗುತ್ತದೆ. ನಿಮೇಷಗಳ ಮೊತ್ತ ಬದಲಾಗಿರುವಂತೆ ತಿಥಿಗಳ ವೃದ್ಧಿ-ಕ್ಷಯಗಳ ಕಾಲಪ್ರಮಾಣವೂ ವ್ಯತ್ಯಾಸವಾಗಿದೆ ಎಂದು ಇಂದಿನ ವಿಜ್ಞಾನಪ್ರಪಂಚ ಒಪ್ಪುತ್ತದೆ. ರಾಮಾಯಣಕಾಲದ ಸೂರ್ಯ-ಚಂದ್ರರ ತಿಥ್ಯಂತರದ ಕೋನಗಳನ್ನು ತೆಗೆದುಕೊಂಡು ವಿಮರ್ಶೆಮಾಡಿ ನೋಡುವಾಗ ಅದು ಕೋಟ್ಯಂತರ ವರ್ಷಗಳ ಹಿಂದಿನ ಘಟನೆ ಎಂದು ನಿರ್ದಿಷ್ಟವಾಗಿಯೂ ಮತ್ತು ವೈಜ್ಞಾನಿಕವಾಗಿಯೂ ನಿರೂಪಿಸಬಹುದು. ಈ ಚಂದ್ರನು ಭೂಮಿಯನ್ನು ಸುತ್ತುತ್ತಿದ್ದ ಕಾಲ ಮತ್ತು ಭೂಮಿಯು ತನ್ನ ಅಕ್ಷದ ಮೇಲೆ ತಿರುಗಲು ತೆಗೆದುಕೊಳ್ಳುತ್ತಿದ್ದ ಕಾಲ ಮತ್ತು ಒಂದು ದಿನಕ್ಕೆ ಗ್ರಹಗಣಿತದ ಪ್ರಕಾರ ಸೂರ್ಯ-ಚಂದ್ರರ ವೃದ್ಧಿ-ಕ್ಷಯಗಳ ತಿಥಿಯ ಕೋನಾಂತರ 10 ಡಿಗ್ರಿಗಳ ಮುಂದುವರಿಕೆಯಿಂದ ಏರ್ಪಡಿಸಿಕೊಳ್ಳುತ್ತಿದ್ದ ತಿಥಿಯ ಮಾನಾಂತರದ ಕಾಲದಿಂದಲೇ ರಾಮಾಯಣವು ನಡೆಯಿತೆಂದು ಖಗೋಳಶಾಸ್ತ್ರದ ರೀತ್ಯಾ ನಿರ್ಧರಿಸಬಹುದು. ಮತ್ತಷ್ಟು ನಿರ್ದಿಷ್ಟವಾಗಿ ಹೇಳಬಹುದಾದರೆ ರಾಮಾಯಣದಲ್ಲಿ ಹಿಮಾಲಯದ ಪರ್ವತಪಂಕ್ತಿಗಳ ವರ್ಣನೆ ಬಂದಿದೆ. ಹಿಮಾಲಯದ ಪರ್ವತಪಂಕ್ತಿಗಳು ಹುಟ್ಟಿ Continents Drifting ಪ್ರಕಾರ 14 ಕೋಟಿ ವರ್ಷಗಳಾಗಿವೆ ಎಂದು ವಿಜ್ಞಾನಪ್ರಪಂಚ ನಿರ್ಧರಿಸಿದೆ. ಆದುದರಿಂದ ರಾಮಾಯಣದ ಘಟನೆ ಸುಮಾರು 12 ರಿಂದ 14 ಕೋಟಿ ವರ್ಷಗಳ ಒಳಗೆ ನಡೆದ ಒಂದು ಅದ್ಭುತ ಪ್ರಾಚೀನಸಂಭವವೆಂದು ಖಗೋಳಶಾಸ್ತ್ರರೀತಿಯಲ್ಲಿ ದ್ವಿತೀಯಹಂತವಾಗಿ ನಿರ್ಧರಿಸಬಹುದು.

ಇನ್ನು ಬುಧನ ರಾಶಿಸ್ಥಿತಿಯನ್ನು ಕುರಿತು ರಾಮಾಯಣದಲ್ಲಿ ಹೇಳಲಾಗಿದೆಯೇ ಅಥವಾ ಇಲ್ಲವೇ? ಅದನ್ನು ಜ್ಯೋತಿಷ್ಕರ ಊಹೆಗೆ ಬಿಟ್ಟಿದ್ದಾರೆಯೇ? ಅಥವಾ ಬುಧಗ್ರಹದ ಬಗೆಗೆ ವಾಲ್ಮೀಕಿಮುನಿಗಳಿಗೆ ಜ್ಯೋತಿಷ್ಯ ಶಾಸ್ತ್ರದ ಯಾವ ಅಂಶಗಳೂ ತಿಳಿದಿರಲಿಲ್ಲವೇ? ಅಥವಾ ರಾಮನ ಜಾತಕ

ದಲ್ಲಿ ಬುಧನ ಸ್ಥಾನಸ್ಥಿತಿಯನ್ನು ಹೇಳಲೇ ಇಲ್ಲವೇ? ಹಾಗೆ ಹೇಳಿದ್ದ ಪಕ್ಷಕ್ಕೆ ಶ್ರೀರಾಮನ ಜಾತಕದಲ್ಲಿ ಬುಧನ ರಾಶಿಸ್ಥಿತಿಯನ್ನು ನಿರ್ಧರಿಸುವುದರ ಬಗೆಗೆ ಜ್ಯೋತಿಷ್ಕರಲ್ಲೂ, ಖಗೋಳವಿಜ್ಞಾನಿಗಳಲ್ಲೂ ಏಕಿಷ್ಟು ಗೊಂದಲ?– ಎನ್ನುವುದನ್ನು ವಿಮರ್ಶೆಮಾಡೋಣ.

ಜ್ಯೋತಿಷ್ಯಶಾಸ್ತ್ರಜ್ಞರಿಗೂ ಮತ್ತು ಖಗೋಳವಿಜ್ಞಾನಿಗಳಿಗೂ ರಾಮನ ಜಾತಕದಲ್ಲಿ ಬುಧನ ಸ್ಥಾನವನ್ನು ನಿರ್ಧರಿಸಿ ಹೇಳುವುದು ಒಂದು ದೊಡ್ಡ ಸಮಸ್ಯೆಯೂ ಅಲ್ಲದೇ ಮತ್ತೆ ಈ ಎರಡು ಶಾಸ್ತ್ರಗಳಿಗೆ ಒಂದು ದೊಡ್ಡ ಪ್ರಶ್ನೆಯೂ ಆಗಿದೆ. ಏಕೆಂದರೆ : ಐದು ಗ್ರಹಗಳು ಉಚ್ಚವೆಂದು ಗುರುವನ್ನು ಸೇರಿಸಿಕೊಂಡು ಜಾತಕವನ್ನು ರಚಿಸಿದಾಗ ಇಂದಿನ ಸೌರವ್ಯೂಹದಲ್ಲಿ ಗ್ರಹಗಳು ರಚಿಸಿಕೊಳ್ಳುವ ಕೋನಾಂತರಗಳು ಇಂದಿನ ಖಗೋಳಗಣಿತದ ರೀತಿ ಸರಿಬರುತ್ತದೆ.

ಗುರುವಿನ ಸ್ಥಾನವನ್ನು ವಾಲ್ಮೀಕಿಮುನಿಗಳು ಹೇಳಿಬಿಟ್ಟಿರುವುದರಿಂದ ಬುಧನನ್ನು ಸೇರಿಸಿ ಐದು ಗ್ರಹಗಳು ಉಚ್ಚವೆಂದು ತೆಗೆದುಕೊಂಡರೆ– ಸೂರ್ಯನಿಂದ ಬುಧನ ಕೋನಾಂತರ 151 ಡಿಗ್ರಿಗಳ ಮೇಲಾಗುತ್ತದೆ. ಮತ್ತೆ ಶುಕ್ರ-ಬುಧರ ಕೋನಾಂತರ 180 ಡಿಗ್ರಿಗಳಾಗುತ್ತದೆ. ಮೇಲೆ ಹೇಳಿದ ಈ ಮೂರು ಗ್ರಹಗಳ ಈ ರೀತಿಯ ಕೋನಾಂತರಗಳು ಇಂದಿನ ಸೌರವ್ಯೂಹದಲ್ಲಿ ರವಿ, ಬುಧ, ಶುಕ್ರರ ಇಂದಿನ ಚಲನವಲನಗಳಿಂದ ಏರ್ಪಡಲು ಸಾಧ್ಯವೇ ಇಲ್ಲ. ಇದೊಂದು ಇಂದಿನವರೆಗೂ ಬಿಡಿಸಲಾಗದ ಖಗೋಳಸಮಸ್ಯೆಯಾಗಿದೆ. ಆದುದರಿಂದ ಇಂದಿನ ಖಗೋಳಶಾಸ್ತ್ರದ ಗಣಿತಕ್ಕೆ ನಿಲುಕದ ಸಮಸ್ಯೆ ಇದಾಗಿರುವುದರಿಂದ ಬುಧನು ರಾಮನ ಜಾತಕದಲ್ಲಿ ಕನ್ಯಾರಾಶಿಯಲ್ಲಿ ಉಚ್ಚಸ್ಥಿತನಾಗಿಲ್ಲ. ಅವನು ಮೇಷದಲ್ಲೋ, ಮೀನದಲ್ಲೋ ಅಥವಾ ವೃಷಭರಾಶಿಯಲ್ಲೋ ಇರಬಹುದು–ಎಂದು ಒಬ್ಬೊಬ್ಬ ಶಾಸ್ತ್ರಜ್ಞರು ಒಂದೊಂದು ರೀತಿ ಊಹೆಮಾಡಿ ಇಂದಿನ ಸೌರ ವ್ಯೂಹದ ಚಲನೆಗೆ ಸರಿಹೊಂದಿಸಿ ಹೇಳಿ ಮೂಲಕಾವ್ಯದ ಕರ್ತೃವಿನ ಭಾವಕ್ಕೇ ವಿರುದ್ಧವಾದ ನಿಲುವನ್ನು ಪ್ರತಿಪಾದಿಸುತ್ತಿದ್ದಾರೆ. ವರಾಹಮಿಹಿರಾಚಾರ್ಯರ ಗ್ರಂಥಗಳು ಆಳವಾಗಿ ಅಧ್ಯಯನಮಾಡಿದ ವಿದ್ವಾಂಸರೂ ಕೂಡ ಇದನ್ನು ಗಮನಕ್ಕೆ ತೆಗೆದುಕೊಂಡು ಪರಿಹಾರವನ್ನು ಹುಡುಕಿಲ್ಲ. ವರಾಹ

ಮಿಹಿರಾಚಾರ್ಯರು ತಮ್ಮ ಬೃಹತ್‌ಜಾತಕದ ರಾಜಯೋಗಾಧ್ಯಾಯದಲ್ಲಿ ಈ ಸೌರವ್ಯೂಹದಲ್ಲಿ ಏರ್ಪಡುವುದಕ್ಕೆ ಸಾಧ್ಯವಿಲ್ಲದ ಅನೇಕ ಯೋಗಗಳನ್ನು ಸೇರಿಸಿ, ಇದು ಹಿಂದಿನವರು ಹೇಳಿದ್ದೆಂದು ಹೇಳಿ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಇಂದಿನ ಗ್ರಹಗತಿಯ ಪ್ರಕಾರ ಇದು ಏರ್ಪಡುವುದಕ್ಕೆ ಸಾಧ್ಯತೆಗಳಿಲ್ಲವೆಂದು ಹೇಳಿ ಮುಗಿಸಿ ಸಮಸ್ಯೆಯನ್ನು ಅವರೂ ಹಾಗೆಯೇ ಬಿಟ್ಟಿದ್ದಾರೆ. ಈಗ ಏರ್ಪಡುವುದಕ್ಕೆ ಸಾಧ್ಯತೆಗಳಿಲ್ಲ ಎನ್ನುವ ಕೋನಾಂತರದ ಯೋಗಗಳು ರವಿ, ಬುಧ ಮತ್ತು ಶುಕ್ರಗ್ರಹಗಳಿಗೆ ಸಂಬಂಧಪಟ್ಟುವುಗಳೇ ಆಗಿವೆ. ಅವರು ವಜ್ರ ಮತ್ತು ಯವಯೋಗಗಳನ್ನು ಕುರಿತು ಹೇಳುವಾಗ ಈ ಪ್ರಶ್ನೆಯನ್ನು ಓದುಗನಿಗೇ ಹಾಕಿ ಶ್ಲೋಕವನ್ನು ಮುಗಿಸುತ್ತಾರೆ.

ಪೂರ್ವಶಾಸ್ತ್ರಾನುಸಾರೇಣ ಮಯಾ ವಜ್ರಾದಯಃ ಕೃತಾಃ ।
ಚತುರ್ಥಭವನೇ ಸೂರ್ಯಜ್ಞಶುಕ್ರಾ ಭವತಃ ಕಥಮ್ ॥

'ಮಯ, ಯವನ, ಪರಾಶರಾದ್ಯುಕ್ತ ಪೂರ್ವಶಾಸ್ತ್ರಾನುಸಾರವಾಗಿ ನನ್ನಿಂದ ವಜ್ರ-ಯವಾದಿ ಯೋಗಗಳು ರಚಿಸಲ್ಪಟ್ಟಿತು. ಸೂರ್ಯನಿಗೆ ೪ನೇ ರಾಶಿಯಲ್ಲಿ ಬುಧ-ಶುಕ್ರರು (ಹೇಗೆ) ಯಾವಾಗ ಇದ್ದಾರು?'

ಇದಕ್ಕೆ ವ್ಯಾಖ್ಯಾನಕಾರರು ಕೊಡುವ ವಿವರಣೆಯು ಹೀಗಿದೆ : 'ವಜ್ರಯೋಗದಲ್ಲಿ ಶುಭಗ್ರಹಕ್ಕೂ ಪಾಪಗ್ರಹಕ್ಕೂ ಪರಸ್ಪರ ಚತುರ್ಥಸ್ಥಾನ ಹೇಳಲ್ಪಟ್ಟಿದೆ. ಆದ್ದರಿಂದ ಸೂರ್ಯನಿಗೆ ಚತುರ್ಥಸ್ಥಾನದಲ್ಲಿ ಬುಧ-ಶುಕ್ರರಿದ್ದಲ್ಲಿ ಮಾತ್ರ ಇದು ಸಂಭವಿಸುವುದು. ಬುಧ-ಶುಕ್ರರು ಉದಯಾಸ್ತಮಯದಲ್ಲಿ ಸೇರುವುದರಿಂದ ಸೂರ್ಯನಿಗೆ ಚತುರ್ಥಸ್ಥಾನದಲ್ಲಿ ಬುಧ-ಶುಕ್ರರಲ್ಲಿ ಒಂದು ಗ್ರಹವಿರಬಹುದು. ಆದ್ದರಿಂದ ಈ ವಜ್ರಯೋಗ ಸಂಭವಿಸಲಾರದು. ಆದರೆ ಈ ಯೋಗಗಳು ಇತರ ಮನ್ವಂತರಗಳಲ್ಲಿ ಸಂಭವಿಸುತ್ತಿದ್ದುದರಿಂದ ಪೂರ್ವಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ ಎಂದು ತಿಳಿಯತಕ್ಕದ್ದು'–ಎಂದು ಹೇಳಿ ಮುಗಿಸುತ್ತಾರೆ. ಇಂದಿನವರೆಗೂ ಜ್ಯೋತಿಷ್ಕರಾಗಲೀ, ಖಗೋಳಶಾಸ್ತ್ರಜ್ಞರಾಗಲೀ ಈ ಯೋಗಗಳು ಏರ್ಪಡುತ್ತಿದ್ದಾಗ ಸೌರವ್ಯೂಹದ ಗ್ರಹಸ್ಥಿತಿಗಳು ಹೇಗಿದ್ದಿರಬಹುದು ಎನ್ನುವ ಪ್ರಶ್ನೆಯನ್ನು ಹಾಕಿಕೊಂಡು ಅದಕ್ಕೆ ವರಾಹಮಿಹಿರಾದಿಗಳಿಂದ ಹಿಡಿದು ಇಂದಿನ ಖಗೋಳವಿಜ್ಞಾನಿಗಳವರೆಗೂ ಖಗೋಳಶಾಸ್ತ್ರರೀತ್ಯಾ ಉತ್ತರಗಳನ್ನೇ ಕಂಡುಹಿಡಿದಿಲ್ಲ.

ಇಂದಿನ ಸೌರವ್ಯೂಹವ್ಯವಸ್ಥೆಯಲ್ಲಿ ಸೂರ್ಯನಿಂದ ಬುಧನ ಅತ್ಯಧಿಕ ಕೋನ ಸುಮಾರು 28 ಡಿಗ್ರಿಗಳಾಗುತ್ತವೆ. ಶುಕ್ರನ ಅತ್ಯಧಿಕಕೋನ ಸುಮಾರು 48 ಡಿಗ್ರಿಗಳಾಗುತ್ತದೆ. ಇವರಿಬ್ಬರ ಅತ್ಯಧಿಕ ಕೋನಾಂತರದ ಯೋಗ 76 ಡಿಗ್ರಿಗಳನ್ನು ಮೀರುವುದೇ ಇಲ್ಲ. ಆದುದರಿಂದಲೇ ಇಂದಿನ ಜ್ಯೋತಿಷ್ಕರುಗಳು ರಾಮನ ಜಾತಕವನ್ನು ಹೇಳುವಾಗ ರವಿಯನ್ನು ಮೇಷ ದಲ್ಲಿ ಹೇಳಿ, ಶುಕ್ರನನ್ನು ಮೀನದಲ್ಲಿ ಹೇಳಿ, ಬುಧನನ್ನು 28 ಡಿಗ್ರಿಗಳ ಮೇಲೆ ಹೋಗಲು ಸಾಧ್ಯವಿಲ್ಲವೆಂದು ಮಾನದಲ್ಲೋ ಅಥವಾ ಸೂರ್ಯನ ಜೊತೆಯಲ್ಲೋ ಅಥವಾ ವೃಷಭರಾಶಿಯಲ್ಲೋ ಹಾಕಿ, ಗುರುವನ್ನೂ ಸೇರಿಸಿ ಐದು ಗ್ರಹಗಳು ಉಚ್ಚವೆಂದು ನಿರ್ಣಯಮಾಡಿಕೊಂಡು ಹೋಗಿ ಕಾವ್ಯದ ಕಾಲ ವನ್ನು ನಿರ್ಣಯಮಾಡುವುದಕ್ಕೆ ಸಾಧ್ಯವಿಲ್ಲದಂತೆ ಮಾಡಿದ್ದಾರೆ. ಈ ಸೌರ ವ್ಯೂಹವ್ಯವಸ್ಥೆಯಲ್ಲಿ ಬುಧಗ್ರಹದ ಹಿಂದಿದ್ದಿರಬಹುದಾದ ಕಕ್ಷಾಪಥದ ಪಾತ್ರ ವನ್ನು ಕುರಿತು ಅಮೇರಿಕದ ಇಬ್ಬರು ಖಗೋಳವಿಜ್ಞಾನಿಗಳಾದ ALLEN FRANDREN ಮತ್ತು ROBERT HARRINGTON ಎನ್ನುವವರು ಮೆರಿನರ್ 10 ರಿಂದ ಬಂದ ಬುಧಗ್ರಹದ ವೈಜ್ಞಾನಿಕ ವರದಿಗಳನ್ನು ವಿಶ್ಲೇಷಿಸಿ ಒಂದು ಹೊಸ ಸಿದ್ಧಾಂತವನ್ನು ಮಂಡಿಸಿದ್ದಾರೆ. ಅದೇನೆಂದರೆ : ಹಿಂದಿನ ಸೌರವ್ಯೂಹವ್ಯವಸ್ಥೆಯಲ್ಲಿ ಈ ಬುಧಗ್ರಹವು ಒಂದು ಉಪಗ್ರಹವಾಗಿದ್ದಿತು ಎಂದು. (ಚಂದ್ರನಾಗಿತ್ತು.) ಅದು ಇಂದಿನಂತೆ ಸ್ವತಂತ್ರಗ್ರಹವಾಗಿ ಸೂರ್ಯನನ್ನು ಸುತ್ತದೇ ಅದೊಂದು ಉಪಗ್ರಹವಾಗಿ ಶುಕ್ರನನ್ನು ಸುತ್ತುತ್ತಿದ್ದ ಚಂದ್ರನಾಗಿದ್ದ ಎಂದು ಹೇಳಿದ್ದಾರೆ. ಕಾಲಾಂತರದಲ್ಲಿ ಶುಕ್ರನ ಕಕ್ಷಾ ಪಥದಿಂದ ಸಿಡಿದು ಸೂರ್ಯನನ್ನು ಸೌರವ್ಯೂಹದಲ್ಲಿ ಮೊದಲನೆಯ ಕಕ್ಷಾ ಪಥದಲ್ಲಿ ಸುತ್ತುಹಾಕತೊಡಗಿದ ಗ್ರಹವಾಯಿತು– ಎಂದು ಹೇಳುತ್ತಾರೆ.

ಆದರೆ ನಮ್ಮ ಪ್ರಾಚೀನಗ್ರಂಥಗಳನ್ನೂ, ವರಾಹಮಿಹಿರಾಚಾರ್ಯ ರಿಂದ ಹೇಳಲ್ಪಟ್ಟಿರುವ ಇಂದಿನ ಸೌರವ್ಯೂಹದಲ್ಲಿ ಏರ್ಪಡಲು ಸಾಧ್ಯವಿಲ್ಲ ವೆಂದು ಹೇಳಿರುವ ಯೋಗಗಳನ್ನೂ, ರಾಮಾಯಣಕಾವ್ಯವನ್ನೂ, ಸೂರ್ಯ ಸಿದ್ಧಾಂತದ ಸೌರವ್ಯೂಹವ್ಯವಸ್ಥೆಯ ಶ್ಲೋಕವನ್ನೂ, ಗರ್ಗಸಂಹಿತೆಯ ವಾರ ಗಳನ್ನು ನಿರ್ಣಯಿಸುವ ಗರ್ಗಹೋರಾಸೂತ್ರವನ್ನೂ ಆಳವಾಗಿ ಅಧ್ಯಯನ ಮಾಡಿ ನೋಡಿದಾಗ–ಈ ಬುಧಗ್ರಹವು ಹಿಂದಿನ ಸೌರವ್ಯೂಹವ್ಯವಸ್ಥೆಯಲ್ಲಿ

ಭೂಮಿಯ ಮತ್ತೊಬ್ಬ ಚಂದ್ರನಾಗಿದ್ದ ಎಂದು ಖಚಿತವಾಗಿ ತಿಳಿದುಬರು ತ್ತದೆ. ಆದುದರಿಂದಲೇ ನಮ್ಮ ಋಷಿಗಳು ಬುಧನನ್ನು ಇಂದುಜ ಅಥವಾ ಚಂದ್ರನ ಮಗನೆಂದು ಹೇಳಿ ಕರೆದಿರುವುದು. ಇದಕ್ಕೆ ಸಂಬಂಧಪಟ್ಟಂತೆ ಈ ಲೇಖಕನ ಸಂಶೋಧನಾತ್ಮಕಲೇಖನಗಳಾದ (೧) 'ಹಿಂದೆ ಬುಧನು ಭೂಮಿಯ ಮತ್ತೊಬ್ಬ ಚಂದ್ರನಾಗಿದ್ದನೇ?' (೨) 'ಇಂದಿನ ಸೌರವ್ಯೂಹ ವ್ಯವಸ್ಥೆಯಲ್ಲಿ ಮಂಗಳವಾರವಾದ ಮೇಲೆ ಶುಕ್ರವಾರವೂ ಗುರುವಾರವಾದ ಮೇಲೆ ಬುಧವಾರವೂ ಅನುಕ್ರಮವಾಗಿ ಬರುತ್ತದೆ'–ಎನ್ನುವ ಲೇಖನಗಳನ್ನು ನಾಸ, ರಷ್ಯನ್ ಅಸ್ಟ್ರನಾಮಿಕಲ್ ಕೌನ್ಸಿಲ್, ರಾಯಲ್ ಅಸ್ಟ್ರನಾಮಿಕಲ್ ಸೊಸೈಟಿ, ಜರ್ಮನ್ ಅಸ್ಟ್ರನಾಮಿಕಲ್ ಸೊಸೈಟಿ, ಫ್ರೆಂಚ್ ಅಸ್ಟ್ರನಾಮಿಕಲ್ ಸೊಸೈಟಿ, ಜಪಾನ್ ಅಸ್ಟ್ರನಾಮಿಕಲ್ ಸೊಸೈಟಿ, ಭಾರತದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಟೆಕ್ನಾಲಜಿ ಅಂಡ್ ದಿ ಡೆವಲಪ್‌ಮೆಂಟ್ ಸ್ಟಡೀಸ್, ಭಾರತೀಯ ವಿದ್ಯಾಭವನ, ಬಾಂಬೆ–ಇವರುಗಳಿಗೆ ಕಳುಹಿಸ ಲಾಗಿದೆ. ಇದೇ ವಿಷಯವನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಹೇಳುವು ದಾದರೆ ಈಗಿರುವ ಈ ಚಂದ್ರನು ನಮ್ಮ ಸೌರವ್ಯೂಹದ ಅಂತರ್ವಲಯ ಮತ್ತು ಬಹಿರ್ವಲಯ ಗ್ರಹಗಳೆಲ್ಲದರೊಂದಿಗೂ ಎಲ್ಲ ಕೋನಾಂತರದ ಯೋಗಗಳನ್ನು ಏರ್ಪಡಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಅದೇ ರೀತಿಯಲ್ಲಿ ಬುಧನು ಮತ್ತೊಬ್ಬ ಚಂದ್ರನಾಗಿದ್ದರೆ ಮಾತ್ರವೇ ಇಂತಹ ಕೋನಾಂತರಗಳನ್ನು ಏರ್ಪಡಿಸಿಕೊಳ್ಳಲು ಸಾಧ್ಯವಾಗುತ್ತಿತ್ತೇ ಹೊರತು ಮತ್ತಿನ್ನಾವ ರೀತಿ ಯಿಂದಲೂ ಅದು (ಅಂತರ್‌ವಲಯ ಗ್ರಹವಾಗಿರುವುದರಿಂದ) ಸಾಧ್ಯವಾಗು ತ್ತಿರಲಿಲ್ಲ. ಬುಧನು ಭೂಮಿಯ ಮತ್ತೊಬ್ಬ ಚಂದ್ರನಾಗಿದ್ದಾಗ ರಾಮಾ ಯಣವು ನಡೆದಿದೆಯೆಂದು ಮತ್ತೊಂದು ರೀತಿ ರಾಮಾಯಣದ ಕಾಲವನ್ನು ನಿರ್ಣಯಿಸುವಾಗ ಮುಖ್ಯವಾದ ಅಂಶವಾಗಿ ಮೂರನೆಯ ಹಂತವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇಂದಿನ ವಿಜ್ಞಾನಪ್ರಪಂಚವು ಈ ಬದಲಾವಣೆ ಬಂದು ಎಷ್ಟು ವರ್ಷಗಳಾಗಿರಬಹುದು ಎನ್ನುವುದನ್ನು ಮೊದಲು ನಿರ್ಧರಿಸ ಬೇಕು. ಆಮೇಲೆ ಚಾಂದ್ರಮಾಸ ಭೂಮಿಯ ಅಂದಿನ ದಿನಮಾನದ ಪ್ರಕಾರ ಎಂದು 34 ದಿನಗಳವರೆಗೆ ಕೂಡಿತ್ತು–ಎನ್ನುವುದನ್ನು ಸಂಶೋಧಿಸಿ ನಿರ್ಧರಿ ಸಿದ ಮೇಲೆ ರಾಮಾಯಣದ ಕಾಲವನ್ನು ಆ ರೀತಿಯ ಗ್ರಹಗಣಿತಗಳಿಂದ

ನಿರ್ಣಯಿಸುವುದರಿಂದ ಮಾತ್ರವೇ ನಿರ್ದಿಷ್ಟವಾದ ವರ್ಷ, ದಿನ ಮತ್ತು ಸ್ಫುಟ ತಿಳಿದುಬರುತ್ತದೆಯೇ ಹೊರತು, ಇಂದಿನ ಖಗೋಳಗಣಿತದಿಂದ ಮೇಲೆ ಹೇಳಿದ ಪರಿಹಾರಗಳನ್ನು ಹುಡುಕುವುದು ನಮ್ಮ ಸಂಸ್ಕೃತಿಯ ಕಾಲಮಾನದ ವಿಡಂಬನೆಯನ್ನು ಬರ್ಗೆಸ್ ಮತ್ತು ಶ್ರೀಸ್ವಾಮಿಕಣ್ಣುಪಿಳ್ಳೆಯವರು ಮಾಡಿರುವಂತೆಯೇ ಆಗುತ್ತದೆ.

ಮತ್ತೆ ವಾಲ್ಮೀಕಿಮುನಿಗಳಿಗೆ ಬುಧಗ್ರಹವನ್ನು ಕುರಿತ ಜ್ಯೋತಿಷ್ಯದ ಎಲ್ಲ ಅಂಶಗಳೂ ನಿರ್ದಿಷ್ಟವಾಗಿ ತಿಳಿದಿದ್ದಿತು ಎನ್ನುವುದಕ್ಕೆ ಉದಾಹರಣೆಗಾಗಿ ರಾಮಾಯಣದಿಂದ ಆಯ್ದ ಈ ಶ್ಲೋಕವನ್ನು ವಾಚಕರ ಗಮನಕ್ಕೆ ತರುತ್ತಿದ್ದೇನೆ.

ರಾಮಚಂದ್ರಮಸಂ ದೃಷ್ಟ್ವಾ ಗ್ರಸ್ತಂ ರಾವಣರಾಹುಣಾ ।
ಪ್ರಾಜಾಪತ್ಯಂ ಚ ನಕ್ಷತ್ರಂ ರೋಹಿಣೀಂ ಶಶಿನಃ ಪ್ರಿಯಾಮ್ ।
ಸಮಾಕ್ರಮ್ಯ ಬುಧಸ್ತಸ್ಥೌ ಪ್ರಜಾನಾಮಶುಭಾವಹಃ ॥

ಯುದ್ಧಕಾಂಡ ಸರ್ಗ - ೧೦೩ ಶ್ಲೋಕ ೩೦

ಶ್ರೀರಾಮನೆಂಬ ಚಂದ್ರನನ್ನು ರಾವಣನೆಂಬ ರಾಹುವು ಆಕ್ರಮಿಸಲಾಗಿ, ಪ್ರಜಾದೇವತಾಕವಾದ ರೋಹಿಣೀನಕ್ಷತ್ರವನ್ನು ಬುಧನು ಆಕ್ರಮಿಸಿದನು. ರೋಹಿಣೀನಕ್ಷತ್ರದಲ್ಲಿ ಬುಧನಿದ್ದರೆ ಪ್ರಜೆಗಳಿಗೆ ಅಶುಭದಾಯಕನಾಗುವನು.

ಇದೇ ರೀತಿ ಬುಧನಿಗೆ ಸಂಬಂಧಪಟ್ಟ ಉಪಮಾನ-ಉಪಮೇಯ ಗಳಿಂದ ಕೂಡಿದ ಹೇಳಿಕೆಗಳು ಇತರ ಸರ್ಗಗಳಲ್ಲೂ ಬಂದಿವೆ. ಎಲ್ಲ ಗ್ರಹ ಗಳಿಗೂ ಅವರವರ ಗುಣಗಳನ್ನು ಜ್ಯೋತಿಷ್ಯಶಾಸ್ತ್ರ ನಿಗದಿಪಡಿಸಿರುವಂತೆ ಸಂದರ್ಭಾನುಸಾರ ಉಪಯೋಗಿಸಿಕೊಂಡು ಹೇಳಿರುವ ಪ್ರಮೇಯಗಳು ವಿಪುಲವಾಗಿ ರಾಮಾಯಣದಲ್ಲಿ ಕಂಡುಬರುತ್ತದೆ. ಅದೇ ರೀತಿಯಲ್ಲಿ ಕಾಲದ ನಿರ್ದಿಷ್ಟವಾದ ಅಳತೆಗೋಲಾದ ಮುಹೂರ್ತ ಮುಂತಾದ ಪದಗಳನ್ನು ಕಾವ್ಯದಲ್ಲಿ ಬಾರಿ-ಬಾರಿಗೂ ಉಪಯೋಗಿಸಿರುವುದರಿಂದ ಕವಿಗೆ ಕಾಲದ ಬಗೆಗೆ ನಿಖರವಾದ ತಿಳಿವಳಿಕೆ ಇದ್ದಿತು ಎಂದು ಕಂಡುಬರುತ್ತದೆ. ಆದುದ ರಿಂದ ರಾಮಾಯಣಕ್ಕೆ ಸಂಬಂಧಪಟ್ಟ ಕಾಲಮಾನಗಳೆಲ್ಲವನ್ನೂ ಅಂದಿನ ವಸ್ತುಸ್ಥಿತಿಯ ಕಾಲಮಾನದಿಂದಲೇ ನಿರ್ಧರಿಸಬೇಕೇ ಹೊರತು ಇಂದಿನ

ವಸ್ತುಸ್ಥಿತಿಯ ಕಾಲಮಾನದಿಂದಲ್ಲ. ಅದೇ ರೀತಿಯಲ್ಲಿ ರೆವರೆಂಡ್ ಬರ್ಗೆಸ್ ಅವರು ಬುಧಗ್ರಹವನ್ನು ಕುರಿತು ಹೇಳುವಾಗ ಭಾರತದ ಜ್ಯೋತಿಷ್ಯಶಾಸ್ತ್ರ ಮತ್ತು ಖಗೋಳಶಾಸ್ತ್ರವನ್ನು ಕುರಿತು ಟೀಕೆಮಾಡಿ ಹೇಳಿರುವುದನ್ನು ನೋಡಿ:

We cannot but regard with the highest admiration the accuteness and industry, the Power of observation, Analysis and Deduction of Greeks that hampered by false assumptions, and imperfectly provided with instruments, they were able to construct a Science containing so much of truth and serving as a secure basis for the improvements of after time ; whether we pay the same tributes to the genius of the Hindus will depend upon whether we consider him also, like all the rest of the world to have been the pupil of the Greek in Astronomical Science or whether we shall believe him to have arrived independently at a system so clearly the counterpart of that of the West.

The differences between the two systems are much less fundamental and important. The assumption of a centre of equal distance different from that of equal angular motion and in the **Case of Mercury** itself also moveable - is unknown to the Hindus ; this however, appears to be an innovation introduced into the Greek system by Ptolemy and unknown before his time ; it was adopted by him, inspite of its seeming arbitrariness, because

it gave him results according more nearly with his observation. The Moon's eviction, the discovery of Ptolemy is equally wanting in the Hindu Astronomy.

ಸೂರ್ಯಸಿದ್ಧಾಂತದ ವ್ಯಾಖ್ಯಾನಕಾರರಾದ ಶ್ರೀ ಬರ್ಗೆಸ್ ಅವರು ಬುಧಗ್ರಹದ ಬಗೆಗೆ ಹಿಂದೂ ಖಗೋಳವಿಜ್ಞಾನಿಗಳಿಗೆ ಇದ್ದ ಅಜ್ಞಾನ ಮತ್ತು ಅದರ ಆವಶ್ಯಕತೆಯನ್ನು ಕುರಿತು ಹೇಳಿರುವುದನ್ನು ರಾಮಾಯಣ ಕಾವ್ಯದಲ್ಲಿ ಬುಧನ ಬಗೆಗೆ ಬಂದಿರುವ ವಿವರಗಳೊಂದಿಗೆ ತಾಳೆಹಾಕಿ ನೋಡುವಾಗ ಅವರ ಹೇಳಿಕೆಯು ಹಾಸ್ಯಾಸ್ಪದವಾಗಿ ಕಂಡುಬರುತ್ತದೆ. ಬುಧನ ಹಿಂದಿದ್ದಿರಬಹುದಾದ ಕಕ್ಷಾಪಥದಿಂದ ಏರ್ಪಡುತ್ತಿದ್ದ ಗ್ರಹ ಸಂಯೋಗದ ಯೋಗಗಳನ್ನು ಗುರುತಿಸಿ ಹೇಳಿ ಫಲಭಾಗದಲ್ಲಿ ನಿರ್ದಿಷ್ಟವಾದ ಸೂತ್ರಗಳ ರೂಪದಲ್ಲಿ ಸೇರಿಸಿ ಅದರದೇ ಆದ ಜೋತಿಷ್ಯಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿರುವ ಭಾರತದ ಜ್ಯೋತಿಷ್ಯ ಮತ್ತು ಖಗೋಳ ವಿಜ್ಞಾನಿಗಳಿಗೆ ಬುಧಗ್ರಹದ ಚಲನವಲನಗಳನ್ನು ಕುರಿತ ತಿಳಿವಳಿಕೆಯೇ ಇರಲಿಲ್ಲ–ಎನ್ನುವ ತಪ್ಪು ಅಭಿಪ್ರಾಯವನ್ನು ಇತರ ದೇಶದ ವಿಜ್ಞಾನಿಗಳು ತಳೆದಿದ್ದಾರೆ. ಇಂತಹ ಎಲ್ಲ ಹೇಳಿಕೆಗಳಿಗೂ ರಾಮಾಯಣದ ಸಮಸ್ಯಾತ್ಮಕ ಗ್ರಹಗಣಿತ ಒಂದು ಉತ್ಕೃಷ್ಟವಾದ ಉತ್ತರರೂಪದ ಸಮಸ್ಯಾತ್ಮಕ ಕಾವ್ಯವಾಗಿದೆ.

ವಾಲ್ಮೀಕಿಮುನಿಗಳಿಗೆ ಸೂಕ್ಷ್ಮಾತಿಸೂಕ್ಷ್ಮ ಜ್ಯೋತಿಷ್ಯಶಾಸ್ತ್ರದ ಜ್ಞಾನ ವಿದ್ದುದರ ದ್ಯೋತಕವಾಗಿ ರಾಮಾಯಣದ ಆದಿಯಿಂದ ಅಂತ್ಯದವರೆಗೂ ತಿಥಿಗಳ, ಗ್ರಹಗಳ, ನಕ್ಷತ್ರಗಳ ಮುಹೂರ್ತಗಳ ಗುಣಗಳನ್ನು ಅನುಸರಿಸಿ ಕೊಂಡು ಅವುಗಳ ಉಪಮಾನ-ಉಪಮೇಯಗಳನ್ನು ವಿಪುಲವಾಗಿ ಉಪ ಯೋಗಿಸಿಕೊಂಡಿದ್ದಾರೆ. ಜ್ಯೋತಿಷ್ಯಶಾಸ್ತ್ರದ ಇಷ್ಟು ನಿಬಂಧನೆಗಳ ಪರಿಚಯ ವಿದ್ದವರಿಗೆ ಶ್ರೀರಾಮನ ಜಾತಕದ ಗ್ರಹಸ್ಥಿತಿಗಳನ್ನು ಮತ್ತು ತಿಥಿಯನ್ನು ಜ್ಯೋತಿಷ ಮತ್ತು ಖಗೋಳಶಾಸ್ತ್ರಗಳ ರೀತಿಯಿಂದ ನಿರ್ದಿಷ್ಟವಾಗಿ ಹೇಳಲು ಬರಲಿಲ್ಲ ಎಂದು ತಪ್ಪಾಗಿ ಊಹೆಮಾಡಿಕೊಂಡು, ತಾರ್ಕಿಕವಾದ ದೃಷ್ಟಿಯಿಂದ ಎಲ್ಲವನ್ನೂ ನೋಡಬೇಕೆಂದು ಇಂದಿನ ಗ್ರಹಗಣಿತಗಳಿಂದ

ಅವುಗಳನ್ನು ತುಲನೆಮಾಡಿ, ಅದರ ಒಗಟನ್ನು ಬಿಡಿಸಲಿಕ್ಕಾಗದೆ ತಪ್ಪಾದ ತೀರ್ಮಾನಗಳಿಗೆ ಬಂದು–ಆದಿಕವಿಗಳಾದ ವಾಲ್ಮೀಕಿಗಳಿಗೂ, ಈ ಕಾವ್ಯದ ಉದ್ದಕ್ಕೂ ಬರುವ ಪ್ರಾಚೀನ ಜ್ಯೋತಿಷ್ಯಶಾಸ್ತ್ರದ ನಿರೂಪಣೆಗಳಿಗೂ ಮಸಿಬಳಿದಿದ್ದಾರೆ.

ಇಂತಹ ಅಮೋಘಕಲ್ಯಾಣಗುಣಗಳಿಂದ ಕೂಡಿದ ಶ್ರೀವಾಲ್ಮೀಕಿ ಮುನಿವಿರಚಿತ ಶ್ರೀಮದ್ರಾಮಾಯಣದ ನಾಯಕನಾದ, ಸಕಲಕಲ್ಯಾಣಗುಣ ಸಂಪನ್ನನಾದ ಶ್ರೀರಾಮಚಂದ್ರನ ಜಾತಕವನ್ನು ವಿಮರ್ಶಿಸಿ ಬರೆದುಕೊಡು ವಂತೆ ಪ್ರೋತ್ಸಾಹಕೊಟ್ಟ ಭಾರತ ದರ್ಶನ ಪ್ರಕಾಶನದವರಿಗೆ ನನ್ನ ಕೃತಜ್ಞತಾಪೂರ್ವಕವಾದ ನಮಸ್ಕಾರಗಳು. ಶ್ರೀರಾಮಚಂದ್ರನ ಜಾತಕದ ವಿವರಣೆಯನ್ನು ಬರೆದು ನನ್ನ ಜನ್ಮವೂ ಪುನೀತವಾಯಿತು ಎನ್ನುವ ಸಂತೋಷದಿಂದ ಈ ನನ್ನ ಲೇಖನವನ್ನು ಮುಗಿಸುತ್ತಿದ್ದೇನೆ.

ಶ್ರೀ ಸೀತಾ–ಲಕ್ಷ್ಮಣ–ಭರತ–ಶತ್ರುಘ್ನ–ಹನುಮತ್ಸಮೇತ

ಶ್ರೀರಾಮಚಂದ್ರಪ್ರಸಾದಸಿದ್ಧಿರಸ್ತು ಶ್ರೀರಾಮಚನ್ದ್ರಾರ್ಪಣಮಸ್ತು

ನಂ.12, ಸೋಮೇಶ್ವರಗುಡಿ ಬೀದಿ,
ಅಲಸೂರು, ಬೆಂಗಳೂರು-560 008. ಎಸ್. ಶಿವಕುಮಾರ್.

ಕಾಂಡಪಾರಾಯಣ ಕ್ರಮ

(ಒಂದನೆಯ ಸಂಪುಟದಿಂದ ಮುಂದುವರಿದಿದೆ.)

ಕಿಷ್ಕಿಂಧಾಕಾಂಡ

ಅಸ್ಯ ಶ್ರೀಕಿಷ್ಕಿಂಧಾಕಾಂಡಮಹಾಮಂತ್ರಸ್ಯ ಭಗವಾನ್ ಋಷಿಃ । ಅನುಷ್ಟುಪ್ ಛನ್ದಃ । ಸುಗ್ರೀವೋ ದೇವತಾ । ಸುಂ ಬೀಜಂ । ನಮಃ ಶಕ್ತಿಃ । ಸುಗ್ರೀವೇತಿ ಕೀಲಕಮ್ । ಮಮ ಸುಗ್ರೀವಪ್ರಸಾದಸಿದ್ಧ್ಯರ್ಥೇ ಕಿಷ್ಕಿಂಧಾ ಕಾಂಡಪಾರಾಯಣೇ ವಿನಿಯೋಗಃ । ಭಗವದೃಷಯೇ ನಮಃ-ಶಿರಸಿ । ಅನು ಷ್ಟುಪ್ ಛನ್ದಸೇ ನಮಃ - ಮುಖೇ । ಸುಗ್ರೀವದೇವತಾಯೈ ನಮಃ - ಹೃದಿ । ಸುಂ ಬೀಜಾಯ ನಮಃ -ಗುಹ್ಯೇ । ನಮಃ ಶಕ್ತಯೇ ನಮಃ - ಪಾದಯೋಃ । ಸುಗ್ರೀವಕೀಲಕಾಯ ನಮಃ - ಸ್ವಾಙ್ಗೇ ॥

ಸುಗ್ರೀವಾಯ ಅಙ್ಗುಷ್ಠಾಭ್ಯಾಂ ನಮಃ। ಸೂರ್ಯತನಯಾಯ ತರ್ಜನೀಭ್ಯಾಂ ನಮಃ। ಸರ್ವವಾನರಪುಙ್ಗವಾಯ ಮಧ್ಯಮಾಭ್ಯಾಂ

ನಮಃ । ಬಲವತೇ ಅನಾಮಿಕಾಭ್ಯಾಂ ನಮಃ ।ರಾಘವಸಖಾಯ ಕನಿ ಷ್ಠಿಕಾಭ್ಯಾಂ ನಮಃ । ವಶೀ ರಾಜ್ಯ ಪ್ರಯಚ್ಛತ್ವಿತಿ ಕರತಲಕರಪೃಷ್ಠಾಭ್ಯಾಂ ನಮಃ। ಸುಗ್ರೀವಾಯ ಹೃದಯಾಯ ನಮಃ । ಸೂರ್ಯತನಯಾಯ ಶಿರಸೇ ಸ್ವಾಹಾ। ಸರ್ವವಾನರಪುಜವಾಯ ಶಿಖಾಯೈ ವಷಟ್ । ಬಲವತೇ ಕವಚಾಯ ಹುಂ। ರಾಘವಸಖಾಯ ನೇತ್ರತ್ರಯಾಯೈ ವೌಷಟ್ । ವಶೀರಾಜ್ಯಂ ಪ್ರಯಚ್ಛತ್ವಿತಿ ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋ ಮಿತಿದಿಗ್ಬನ್ಧಃ ।

ಧ್ಯಾನಮ್ :–

ಸುಗ್ರೀವಮರ್ಕತನಯಂ ಕಪಿವರ್ಯವಂದ್ಯ –
ಮಾರೋಪಿತಾಚ್ಯುತಪದಾಮ್ಬುಜಮಾದರೇಣ ।
ಪಾಣಿಪ್ರಹಾರಕುಶಲಂ ಬಲಪೌರುಷಾಢ್ಯ –
ಮಾಶಾಸ್ಯದಾಸ್ಯನಿಪುಣಂ ಹೃದಿ ಭಾವಯಾಮಿ ॥

ಈ ಕೆಳಕಂಡ ಮಂತ್ರದಿಂದ ಮತ್ತು ಸುಂ ಸುಗ್ರೀವಾಯ ನಮಃ ಎಂಬ ಮಂತ್ರದಿಂದ ಸಂಪುಟೀಕರಣಮಾಡಿ ಕಿಷ್ಕಿಂಧಾಕಾಂಡವನ್ನು ಪಠಿಸಬೇಕು.

ಸುಗ್ರೀವಃ ಸೂರ್ಯತನಯಃ ಸರ್ವವಾನರಪುಙ್ಗವಃ ।
ಬಲವಾನ್ ರಾಘವಸಖಾ ವಶೀ ರಾಜ್ಯಂ ಪ್ರಯಚ್ಛತು ॥

ಫಲ :- ಮಿತ್ರಲಾಭ.

ಸುಂದರಕಾಂಡ

ಅಸ್ಯ ಶ್ರೀಸುಂದರಕಾಂಡಮಹಾಮಂತ್ರಸ್ಯ ಭಗವಾನ್ ಹನುಮಾನ್ ಋಷಿಃ। ಅನುಷ್ಟುಪ್ ಛನ್ದಃ। ಶ್ರೀ ಜಗನ್ಮಾತಾ ಸೀತಾ ದೇವತಾ ।ಶ್ರೀಂ ಬೀಜಂ। ಸ್ವಾಹಾ ಶಕ್ತಿಃ । ಸೀತಾಯೈ ಕೀಲಕಮ್ । ಶ್ರೀಸೀತಾಪ್ರಸಾದ ಸಿದ್ಧ್ಯರ್ಥಂ ಸುಂದರಕಾಂಡಪಾರಾಯಣೇ ವಿನಿಯೋಗಃ । ಭಗವದ್ಧನುಮ ಋಷಯೇ ನಮಃ - ಶಿರಸಿ । ಅನುಷ್ಟುಪ್ ಛನ್ದಸೇ ನಮಃ - ಮುಖೇ । ಶ್ರೀ ಜಗನ್ಮಾತೃಸೀತಾದೇವತಾಯೈ ನಮಃ - ಹೃದಿ ।ಶ್ರೀಂ ಬೀಜಾಯ ನಮಃ - ಗುಹ್ಯೇ। ಸ್ವಾಹಾ ಶಕ್ತಯೇ ನಮಃ - ಪಾದಯೋಃ । ಸೀತಾಯೈ ಕೀಲಕಾಯ ನಮಃ - ಸರ್ವಾಙ್ಗೇ ॥

ಸೀತಾಯೈ ಅಂಗುಷ್ಠಾಭ್ಯಾಂ ನಮಃ । ವಿದೇಹರಾಜಸುತಾಯೈ ತರ್ಜನೀ ಭ್ಯಾಂ ನಮಃ । ರಾಮಸುಂದರ್ಯೈ ಮಧ್ಯಮಾಭ್ಯಾಂ ನಮಃ । ಹನುಮತಾ

ಸಮಾಶ್ರಿತಾಯೈ ಅನಾಮಿಕಾಭ್ಯಾಂ ನಮಃ । ಭೂಮಿಸುತಾಯೈ ಕನಿಷ್ಠಿಕಾಭ್ಯಾಂ ನಮಃ। ಶರಣಂ ಭಜೇ ಕರತಲಕರಪೃಷ್ಠಾಭ್ಯಾಂ ನಮಃ । ಸೀತಾಯೈ ಹೃದಯಾಯ ನಮಃ। ವಿದೇಹರಾಜಸುತಾಯೈ ಶಿರಸೇ ಸ್ವಾಹಾ । ರಾಮಸುಂದರ್ಯೈ ಶಿಖಾಯೈ ವೌಷಟ್ । ಹನುಮತಾ ಸಮಾಶ್ರಿತಾಯೈ ಕವಚಾಯ ಹುಂ । ಭೂಮಿಸುತಾಯೈ ನೇತ್ರತ್ರಯಾಯ ವೌಷಟ್ । ಶರಣಂ ಭಜೇ ಇತ್ಯಸ್ತ್ರಾಯ ಫಟ್ । ಭೂರ್ಭುವಸ್ಸುವರೋ ಇತಿ ದಿಗ್ಬನ್ಧಃ

ಧ್ಯಾನಮ್ :-

ಸೀತಾಮುದಾರಚರಿತಾಂ ವಿಧಿಸಾಂಬವಿಷ್ಣು-
ವನ್ದ್ಯಾಂ ತ್ರಿಲೋಕಜನನೀಂ ಶ್ರಿತಕಲ್ಪವಲ್ಲೀಮ್ ।
ಹೈಮೈರನೇಕಮಣಿರಂಜಿತಕೋಟಿಭಾಗೈ -
ರ್ಭೂಷಾಚಯೈರನುದಿನಂ ಸಹಿತಾಂ ನಮಾಮಿ ॥

ಸುಂದರಕಾಂಡಪಾರಾಯಣದ ವಿಶೇಷವಿಧಿ ಈ ರೀತಿ ಇದೆ. ಪ್ರತಿ ದಿವಸವೂ ಏಕೋತ್ತರವೃದ್ಧಿಯಂತೆ ಕ್ರಮವಾಗಿ ಒಂದೊಂದು ಸರ್ಗವನ್ನು ಹೆಚ್ಚಿಸಿಕೊಂಡು ಪಾರಾಯಣಮಾಡುತ್ತಾ ಹನ್ನೊಂದನೆಯ ದಿನ ಪಾರಾಯಣವನ್ನು ಮುಗಿಸಬೇಕು. ಹನ್ನೆರಡನೆಯ ದಿನ ಮಿಕ್ಕ ಎರಡು ಸರ್ಗಗಳ ಜೊತೆಗೆ ಆರಂಭದ ಹತ್ತು ಸರ್ಗಗಳನ್ನು ಪಠಿಸಬೇಕು. ಹದಿಮೂರನೆಯ ದಿನ ಹನ್ನೊಂದರಿಂದ ಇಪ್ಪತ್ತುಮೂರರ ತನಕ–ಈ ರೀತಿ ಮೂರು ಆವೃತ್ತಿಗಳಲ್ಲಿ ಪಠಿಸುವುದರಿಂದ ಸರ್ವಕಾರ್ಯಸಿದ್ಧಿಯಾಗುತ್ತದೆ. ಎರಡನೆಯ ಕ್ರಮ : ಪ್ರತಿದಿನ ಐದು ಸರ್ಗಗಳಂತೆ ಪಠಿಸುವುದು. ಹಿಂದಿನಂತೆಯೇ ಹದಿನಾಲ್ಕನೆಯ ದಿನ ಕಡೆಯ ಮೂರು ಮತ್ತು ಪ್ರಾರಂಭದ ಎರಡು ಸರ್ಗಗಳನ್ನು ಪಾರಾಯಣಮಾಡುವುದು. ಸಂಪುಟೀಕರಣಮಂತ್ರ ॥ ಶ್ರೀಂ ಸೀತಾಯೈ ನಮಃ॥

ಈ ಕೆಳಕಂಡ ಮಂತ್ರದಿಂದಲೂ ಸಂಪುಟೀಕರಣಮಾಡಿ ಪಾರಾಯಣ ಮಾಡಬಹುದು.

ರಾಮಭದ್ರ ಮಹೇಷ್ವಾಸ ರಘುವೀರ ನೃಪೋತ್ತಮ ।
ಭೋ ದಶಾಸ್ಯಾನ್ತಕಾಸ್ಮಾಕಂ ರಕ್ಷಾಂ ದೇಹಿ ಶ್ರಿಯಂ ಚ ಮೇ ॥

ಲಂಕಾ ಅಥವಾ ಯುದ್ಧಕಾಂಡ

ಅಸ್ಯ ಶ್ರೀಯುದ್ಧಕಾಂಡಮಹಾಮಂತ್ರಸ್ಯ ವಿಭೀಷಣ ಋಷಿಃ ।

ಅನುಷ್ಟುಪ್ ಛನ್ದಃ । ವಿಧಾತಾ ದೇವತಾ । ಬಂ ಬೀಜಂ । ನಮಃ ಶಕ್ತಿ ವಿಧಾತೇತಿ ಕೀಲಕಮ್ । ಶ್ರೀಧಾತೃಪ್ರಸಾದಸಿದ್ಧ್ಯರ್ಥೇ ಯುದ್ಧಕಾಂಡ ಪಾರಾಯಣೇ ವಿನಿಯೋಗಃ । ವಿಭೀಷಣಋಷಯೇ ನಮಃ - ಶಿರಸಿ । ಅನುಷ್ಟುಪ್ ಛನ್ದಸೇ ನಮಃ - ಮುಖೇ । ವಿಧಾತೃದೇವತಾಯೈ ನಮಃ - ಹೃದಿ । ಬಂ ಬೀಜಾಯ ನಮಃ - ಗುಹ್ಯೇ । ನಮಃ ಶಕ್ತಯೇ ನಮಃ - ಪಾದಯೋಃ । ವಿಧಾತೇತಿ ಕೀಲಕಾಯ ನಮಃ - ಸರ್ವಾಙ್ಗೇ ॥

ವಿಧಾತ್ರೇ ಅಙ್ಗುಷ್ಠಾಭ್ಯಾಂ ನಮಃ । ಮಹಾದೇವಾಯ ತರ್ಜನೀಭ್ಯಾಂ ನಮಃ । ಭಕ್ತಾನಾಮಭಯಪ್ರದಾಯ ಮಧ್ಯಮಾಭ್ಯಾಂ ನಮಃ । ಸರ್ವದೇವಪ್ರೀತಿಕರಾಯ ಅನಾಮಿಕಾಭ್ಯಾಂ ನಮಃ । ಭಗವತ್ಪ್ರಿಯಾಯ ಕನಿಷ್ಠಕಾಭ್ಯಾಂ ನಮಃ । ಈಶ್ವರಾಯ ಕರತಲಕರಪೃಷ್ಠಾಭ್ಯಾಂ ನಮಃ । ವಿಧಾತ್ರೇ ಹೃದಯಾಯ ನಮಃ । ಮಹಾದೇವಾಯ ಶಿರಸೇ ಸ್ವಾಹಾ । ಭಕ್ತನಾಮಭಯಪ್ರದಾಯ ಶಿಖಾಯೈ ವಷಟ್ । ಸರ್ವದೇವಪ್ರೀತಿಕರಾಯ ಕವಚಾಯ ಹುಂ । ಭಗವತ್ಪ್ರಿಯಾಯ ನೇತ್ರತ್ರಯಾಯ ವೌಷಟ್ । ಈಶ್ವರಾಯ ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬನ್ಧಃ ।

ಧ್ಯಾನಮ್ :–

ದೇವಂ ವಿಧಾತಾರಮನನ್ತವೀರ್ಯಂ
ಭಕ್ತಾಭಯಂ ಶ್ರೀಪರಮಾದಿದೇವಮ್ ।
ಸರ್ವಾಮರಪ್ರೀತಿಕರಂ ಪ್ರಶಾನ್ತಂ
ವನ್ದೇ ಸದಾ ಭೂಮಿಪತಿಂ ಸುಭೂತಿಮ್ ॥

ಈ ಕೆಳಗಿನ ಮಂತ್ರದಿಂದ ಪಂಚೋಪಚಾರಪೂಜೆಯನ್ನು ಮಾಡಿ ಇದೇ ಮಂತ್ರದಿಂದ ಸಂಪುಟೀಕರಣಮಾಡಿ ಪಾರಾಯಣಮಾಡುವುದು.

ವಿಧಾತಾರಂ ಮಹಾದೇವಂ ಭಕ್ತಾನಾಮಭಯಪ್ರದಮ್ ।
ಸರ್ವದೇವಪ್ರೀತಿಕರಂ ಭಗವತ್ಪ್ರಿಯಮೀಶ್ವರಮ್ ॥

ಫಲ : ಶತ್ರುವಿಜಯ ಮತ್ತು ಅಪ್ರತಿಷ್ಠೆಯ ನಷ್ಟ.

ಶ್ರೀಸೀತಾ–ಲಕ್ಷ್ಮಣ–ಭರತ–ಶತ್ರುಘ್ನ–ಹನುಮತ್ಸಮೇತ
ಶ್ರೀರಾಮಚಂದ್ರಾರ್ಪಣಮಸ್ತು ಶ್ರೀರಾಮಚಂದ್ರಪ್ರಸಾದಸಿದ್ಧಿರಸ್ತು
ವಾಲ್ಮೀಕಿರಾಮಾಯಣದ ಪಾರಾಯಣಕ್ರಮವು ಮುಗಿಯಿತು.

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.